ಕರ್ನಾಟಕ ಸರ್ಕಾರ

ವಿಜಯನಗರ ಅಧ್ಯಯನ

ಸಂಪುಟ - ೮



ವಿಜಯನಗರ ವಿಚಾರ ಸಂಕಿರಣ ೨೦೦೩ ರಲ್ಲಿ
ಮಂಡಿಸಿದ ಪ್ರಬಂಧಗಳು

ಸಂಪಾದಕರು
ಕೆ.ಆರ್. ರಾಮಕೃಷ್ಣ
ಡಾ. ಆರ್. ಗೋಪಾಲ್
ಟಿ.ಎಸ್. ಗಂಗಾಧರ

ವಿಜಯನಗರ ಅಧ್ಯಯನ

ಸಂಪುಟ - ೮

ಹಂಪಿ ಉತ್ಸವ ೨೦೦೩ರಲ್ಲಿ ಮಂಡಿಸಿದ ಪ್ರಬಂಧಗಳು

ಸಂಪಾದಕರು

ಕೆ.ಆರ್.ರಾಮಕೃಷ್ಣ

ಡಾ.ಆರ್. ಗೋಪಾಲ್

ಟಿ.ಎಸ್.ಗಂಗಾಧರ

ಸಹಾಯ

ಟಿ.ಎಂ.ಮಂಜುನಾಥಯ್ಯ

ಕರ್ನಾಟಕ ಸರ್ಕಾರ

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಹೊಸಪೇಟೆ

VIJAYANAGARA ADHYAYANA
Vol - 8

Publisher
Director
Directorate of Archaeology and Museums
Hospet - 583 201
Ph: 08394 - 430163

First Print : 2003
Pages : viii + 240

Price: Rs.99-00

DTP
Rachana Graphics, Hospet
Cell: 9448165160, 9448217600

Printed at
Ramesh Printers
Bangalore - 560 023

ವಿಜಯನಗರ ಅಧ್ಯಯನ
ಸಂಪುಟ - ೮

ಪ್ರಕಾಶಕರು
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ
ಹೊಸಪೇಟೆ - ೫೮೩ ೨೦೧
ದೂರವಾಣಿ : ೦೮೩೯೪ - ೪೩೦೧೬೩

ಮೊದಲ ಮುದ್ರಣ : ೨೦೦೩
ಪುಟಗಳು : ೮ + ೨೪೦

ಬೆಲೆ : ರೂ. ೯೯-೦೦

ಅಕ್ಷರ ಜೋಡಣೆ
ರಚನಾ ಗ್ರಾಫಿಕ್ಸ್, ಹೊಸಪೇಟೆ
ಸೆಲ್ : ೯೪೪೮೧೬೫೧೬೦, ೯೪೪೮೨೧೭೬೦೦

ಮುದ್ರಣ
ರಮೇಶ್ ಪ್ರಿಂಟರ್ಸ್
ಬೆಂಗಳೂರು - ೫೬೦ ೦೨೩

ರಾಣಿ ಸತೀಶ್
ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು

ವಿಧಾನಸೌಧ
ಬೆಂಗಳೂರು ೫೬೦ ೦೦೧

ಮೊದಲ ಮಾತು

ಐತಿಹಾಸಿಕ ವಿಜಯನಗರ ಸಾಮ್ರಾಜ್ಯದ ಗತ ವೈಭವ ಹಾಗೂ ವಿಜಯನಗರದ ಅರಸರು ಆಚರಿಸುತ್ತಿದ್ದ ದಸರಾ ಉತ್ಸವವನ್ನು ನೆನಪಿಗೆ ತರುವ ದೃಷ್ಟಿಯಿಂದ ನಮ್ಮ ಕರ್ನಾಟಕ ಸರ್ಕಾರವು 1987 ರಿಂದಲೂ'ಹಂಪಿ ಉತ್ಸವ' ವನ್ನು ನಡೆಸಿಕೊಂಡು ಬರುತ್ತಿದೆ. ಈ ಸಂದರ್ಭದಲ್ಲಿ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ವತಿಯಿಂದ ವಿಜಯನಗರದ ಇತಿಹಾಸ, ಕಲೆ, ಸಂಸ್ಕೃತಿ ಇತ್ಯಾದಿಗಳನ್ನು ಕುರಿತಂತೆ ವಿಚಾರ ಸಂಕಿರಣವನ್ನು ನಡೆಸಲಾಗುತ್ತಿದ್ದು, ನಾಡಿನ ವಿದ್ವಾಂಸರು ಹಾಗೂ ಸಂಶೋಧಕರು ಪಾಲ್ಗೊಳ್ಳುವ ಈ ವಿಚಾರ ಸಂಕಿರಣದಲ್ಲಿ ಮಂಡಿಸುವ ಪ್ರಬಂಧಗಳನ್ನು "ವಿಜಯನಗರ ಅಧ್ಯಯನ" ಎಂಬ ಶೀರ್ಷಿಕೆಯಡಿಯಲ್ಲಿ ಗ್ರಂಥ ರೂಪದಲ್ಲಿ ಪ್ರಕಟಿಸಲಾಗುತ್ತಿದೆ.

2003ರ ಫೆಬ್ರವರಿ ಮಾಹೆಯ 22ರಂದು ಏರ್ಪಡಿಸಲಾಗಿದ್ದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ವಿಜನಯಗರ ಅಧ್ಯಯನ ಸಂಪುಟ 8 ರಲ್ಲಿ ಹೊರ ತರಲಾಗುತ್ತಿದೆ. ಇಲಾಖೆಯು ಈ ಪರಂಪರೆಯನ್ನು ಫಲಪ್ರದವಾಗಿ ಮುಂದುವರೆಸಿ ತನ್ಮೂಲಕ ಇತಿಹಾಸ ಪ್ರಿಯರಿಗೆ ಹಾಗೂ ಜನ ಸಾಮಾನ್ಯರಿಗೆ ಉಪಯುಕ್ತವಾಗುವ ರೀತಿಯಲ್ಲಿ ಅವಕಾಶ ಕಲ್ಪಿಸಲಿ ಎಂಬುದಾಗಿ ಹಾರೈಸುತ್ತೇನೆ. ಇಂತಹ ಕಾರ್ಯವನ್ನು ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಇಲಾಖೆಯ ಎಲ್ಲಾ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ನನ್ನ ಹಾರ್ದಿಕ ಅಭಿನಂದನೆಗಳು.

ರಾಣಿ ಸತೀಶ್

೨೫.೧೦.೨೦೦೩

ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು

ಪ್ರಸ್ತಾವನೆ

ಹಂಪಿ ಪುನರುತ್ಥಾನ ಯೋಜನೆಯಡಿಯಲ್ಲಿ ರಾಜ್ಯದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಕಳೆದ ಸುಮಾರು ಎರಡೂವರೆ ದಶಕಗಳಿಂದ ಇತಿಹಾಸ ಪ್ರಸಿದ್ಧ ಹಂಪಿಯಲ್ಲಿ ಸಂಶೋಧನಾ ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿದೆ. ಹಾಳು ಹಂಪೆ ಎಂಬುದಾಗಿ ಗುರುತಿಸಲ್ಪಟ್ಟ ವಿಜಯನಗರ ಸಾಮ್ರಾಜ್ಯದ ಗತವೈಭವವನ್ನು ಅಲ್ಪಮಟ್ಟಿಗಾದರೂ ಬಿಂಬಿಸುವ ಸಲುವಾಗಿ ಕರ್ನಾಟಕ ಸರ್ಕಾರವು 1987 ರಿಂದ ಹಂಪಿ ಉತ್ಸವವನ್ನು ಆಚರಿಸಿಕೊಂಡು ಬರುತ್ತಿದ್ದು, ಈ ಸಂದರ್ಭದಲ್ಲಿ ಇಲಾಖೆಯು ವಿಜಯ ನಗರದ ಇತಿಹಾಸ ಕುರಿತ ವಿಚಾರ ಸಂಕಿರಣವನ್ನು ನಡೆಸಿಕೊಂಡು ಬರುತ್ತಿದೆ. ಇದರಲ್ಲಿ ಮಂಡಿಸಲಾಗುವ ಪ್ರಬಂಧಗಳನ್ನು ವಿಜಯನಗರ ಅಧ್ಯಯನ ಎಂಬ ಶೀರ್ಷಿಕೆಯಡಿಯ ಗ್ರಂಥದಲ್ಲಿ ಪ್ರಕಟಿಸಲಾಗುತ್ತಿದೆ.

ಪ್ರಸ್ತುತ 2003ರ ಫೆಬ್ರವರಿ ಮಾಹೆಯ ದಿನಾಂಕ 22 ರಂದು ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳನ್ನು ಇದೀಗ ಪ್ರಕಟಿಸಲಾಗುತ್ತಿದೆ. ಈ ಕಾರ್ಯವನ್ನು ಯಶಸ್ವಿಯಾಗಿ ಮಾಡಲು ಪ್ರೋತ್ಸಾಹ ನೀಡಿದ ನಮ್ಮ ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗೌರವಾನ್ವಿತ ಸಚಿವೆಯವರಾದ ಶ್ರೀಮತಿ ರಾಣಿ ಸತೀಶ್‌ರವರಿಗೂ ಮತ್ತು ಕಾರ್ಯದರ್ಶಿಯವರಾದ ಶ್ರೀ ಸಿ. ಎಸ್. ಕೇದಾರ್ ಅವರಿಗೆ ನನ್ನ ತುಂಬು ಹೃದಯದ ಕೃತಜ್ಞತೆಗಳನ್ನು ಸಮರ್ಪಿಸಲಿಚ್ಛಿಸುತ್ತೇನೆ. ಈ ವಿಚಾರ ಸಂಕಿರಣ ವನ್ನು ಏರ್ಪಡಿಸುವಲ್ಲಿ ಶ್ರಮಿಸಿದ ಇಲಾಖೆಯ ಎಲ್ಲಾ ಅಧಿಕಾರಿ ಹಾಗೂ ಸಿಬ್ಬಂದಿ ವರ್ಗ ದವರಿಗೆ ನನ್ನ ಹಾರ್ದಿಕ ಅಭಿನಂದನೆಗಳು. ರಮೇಶ್ ಪ್ರಿಂಟರ್ಸ್, ಬೆಂಗಳೂರು ಇವರು ಅಲ್ಪಕಾಲದಲ್ಲಿ ಈ ಪುಸ್ತಕವನ್ನು ಅಂದವಾಗಿ ಮುದ್ರಿಸುವುದರಲ್ಲಿ ಸಹಕರಿಸಿರುತ್ತಾರೆ. ಪ್ರಸ್ತುತ ಸಂಪುಟವು ಜನ ಸಾಮಾನ್ಯರು ಸೇರಿದಂತೆ ಎಲ್ಲಾ ಇತಿಹಾಸ ಪ್ರಿಯರಿಗೆ ಉಪಯುಕ್ತ ವಾಗಲೆಂಬುದಾಗಿ ಆಶಿಸುತ್ತೇನೆ.

ಕೆ. ಆರ್. ರಾಮಕೃಷ್ಣ
ನಿರ್ದೇಶಕರು
ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಹೊಸಪೇಟೆ
೨೫.೧೦.೨೦೦೩

ಸಂಕ್ಷೇಪಗಳು

ಅರಿಇಂಎ	:	ಅನುವಲ್ ರಿಪೋರ್ಟ್ ಆನ್ ಇಂಡಿಯನ್ ಎಪಿಗ್ರಾಫಿ
ಇಂಎಂ	:	ಇಂಡಿಯನ್ ಎಂಟಿಕ್ವೇರಿ
ಎಕ	:	ಎಪಿಗ್ರಾಫಿಯ ಕರ್ನಾಟಕ
ಜಓರಿ	:	ಜರ್ನಲ್ ಆಫ್ ಓರಿಯಂಟಲ್ ರೀಸರ್ಚ್
ಸೌಇಂಇ	:	ಸೌತ್ ಇಂಡಿಯನ್ ಇನ್ಸ್‌ಕ್ರಿಪ್ಶನ್ಸ್
ARIE	:	Annual Report on Indian Epigraphy
ARSIE	:	Annual Report on South Indian Epigraphy
EC	:	Epigraphia Carnatica
Ep. Car.	:	Epigraphia Carnatica
EI	:	Epigraphia Indica
MAR	:	Annual Report of the Mysore Archaeological Department
QJMS	:	Quarterly Journal of the Mythic Society
SII	:	South Indian Inscriptions
VI	:	Vijayanagara Inscriptions

ಪರಿವಿಡಿ

೧

ಶ್ರೀರಂಗರಾಯನ ರೊಳ್ಳದ ಜಯರೇಖೆ ಶಾಸನ

ಡಾ. ದೇವರಕೊಂಡಾರೆಡ್ಡಿ

ಪ್ರಸ್ತುತ ತಾಮ್ರಶಾಸನವು ಮೂರು ವರ್ಷಗಳ ಹಿಂದೆ ಡಾ. ಸೂರ್ಯನಾಥ ಯು.ಕಾಮತ್ ಅವರ ಕಡೆಯಿಂದ ಪಡೆಯಲಾಯಿತು. ಅವರ ಬಳಿಗೆ ಶ್ರೀ ಕೆಂಪಯ್ಯ (ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು, ಬೆಳ್ಳಾವೆ) ಎಂಬುವವರು ಮಾಹಿತಿ ಪಡೆಯಲು ತಂದಿದ್ದರು. ಈ ಶಾಸನದ ನೆರಳಚ್ಚು (ಜೆರಾಕ್ಸ್) ಪ್ರತಿಯನ್ನು ಪಡೆದೆ. ಈ ಶಾಸನಗಳನ್ನು ಶ್ರೀ ಕೆಂಪಯ್ಯನವರಿಗೇ ವಾಪಸ್ಸು ನೀಡಲಾಯಿತು.

ಶಾಸನವು ತಾಮ್ರದ್ದಾಗಿದ್ದು ೧೫ ಸೆಂ.ಮೀ. ಉದ್ದ ಹಾಗೂ ಅಗಲ ೩.೭ ಸೆಂ.ಮೀ.ಇದೆ. ಎರಡನೆಯ ಹಲಗೆಯೂ ಇದೇ ಅಳತೆಯಲ್ಲಿದೆ. ಶಾಸನಕ್ಕೆ ಉಂಗುರವಿದ್ದ ಗುರುತಾಗಿ ಶಾಸನದ ಹಲಗೆಗಳ ಮಧ್ಯಭಾಗದಲ್ಲಿ ಸಣ್ಣ ರಂಧ್ರವನ್ನು ಕೊರೆಯಲಾಗಿದೆ. ಈಗ ಉಂಗುರವಾಗಲೀ ಮುದ್ರೆಯಾಗಲೀ ಇಲ್ಲ. ಶಾಸನದ ಎರಡೂ ಹಲಗೆಗಳ ಎರಡೂ ಮಗ್ಗುಲಲ್ಲಿ ಬರವಣಿಗೆಯಿಂದ್ದು ಪ್ರತಿ ಮಗ್ಗುಲಲ್ಲಿ ೫ ಸಾಲುಗಳನ್ನು ಹೊಂದಿದೆ. ಒಟ್ಟು ೨೦ ಸಾಲುಗಳಿವೆ. ಮೊದಲ ಮತ್ತು ಎರಡನೆಯ ಹಲಗೆಗಳ ಮುಂಭಾಗದಲ್ಲಿ ಸಂಖ್ಯೆಗಳನ್ನು ನಮೂದಿಸಿದೆ.

ಶಾಸನದ ಮೊದಲ ಹಲಗೆಯ ಮೊದಲ ಭಾಗದಲ್ಲಿ ಶಾಸನದ ಅಕ್ಷರಗಳನ್ನು ದೊಡ್ಡದಾಗಿ ಬರೆಯಲಾಗಿದೆ. ಅದರ ಹಿಂಬದಿಯಲ್ಲಿ ಮೊದಲ ಸಾಲನ್ನು ದೊಡ್ಡದಾಗಿ ಬರೆದು


ನಂತರದ ನಾಲ್ಕು ಸಾಲುಗಳನ್ನು ಚಿಕ್ಕದಾಗಿ ಬರೆಯಲಾಗಿದೆ. ಮೂರನೆಯ ಹಲಗೆಯಲ್ಲಿ ಚಿಕ್ಕ ಅಕ್ಷರಗಳಿವೆ. ನಾಲ್ಕನೆಯ ಹಲಗೆಯಲ್ಲಿ ಕೊನೆಯ ಎರಡು ಸಾಲುಗಳು ದೊಡ್ಡವಾಗಿವೆ.


ಶಾಸನದಲ್ಲಿ ಜಕಾರ ಅಕ್ಷರವನ್ನು ಎರಡು ರೀತಿಯಲ್ಲಿ ಬರೆಯಲಾಗಿದೆ. ಸಾಲು ೧,೩,೬,೧೧ರಲ್ಲಿ ಇಂದಿನ ಜಕಾರದ ರೀತಿಯನ್ನು, ಸಾಲು ೪,೭,೯,೧೬,೨೦ರಲ್ಲಿ ಜಕಾರವನ್ನು ಚಕಾರದ ರೀತಿಯಲ್ಲಿ ಬರೆಯಲಾಗಿದೆ. ಹಾಗೆಯೇ ಹಕಾರವನ್ನು ಸಾಲು ೬,೧೦,೧೧,೧೩, ೧೪,೨೦ ರಲ್ಲಿ ಇಂದಿನ ಮುದ್ರಣ ರೀತಿಯ ಹಕಾರವನ್ನು ಬರೆದಿದ್ದಾರೆ. ಇದೇ ಶಾಸನದ ೫ನೆಯ ಸಾಲಿನಲ್ಲಿ ಬೇರೆ ರೀತಿಯಲ್ಲಿ ಬರೆಯಲಾಗಿದೆ. ಒ ಕಾರದ ಗುಣಿತವನ್ನು ಸಾಲು ೮,೧೪,೧೫,೧೯ರಲ್ಲಿ ಬರುವ 'ಕೊ' ಎಂಬುದನ್ನು ಹಾಗೂ ಸಾಲು ೭ ಮತ್ತು ೧೮ರಲ್ಲಿನ 'ರೊ' ಎಂಬ ಅಕ್ಷರವನ್ನು ಹಳೆಯ ಪದ್ಧತಿಯಂತೆ ಬರೆದಿದ್ದರೆ ಅದೇ ಸಾಲು ೭ರಲ್ಲಿ ಕೊ ಎಂಬ ಅಕ್ಷರವನ್ನು ಇಂದಿನ ರೀತಿಯಂತೆ ಬರೆಯಲಾಗಿದೆ. 'ಸೊ', 'ಮೊ' ಗಳನ್ನೂ ಸಹ ಇಂದಿನಂತೆ ಕಾಗುಣಿತ ಬರೆಯಲಾಗಿದೆ. 'ಐ' ಕಾರದ ಗುಣಿತ ಮತ್ತು ಯಕಾರದ ಒತ್ತಕ್ಷರ ಇವೆರಡರ ನಡುವೆ ವ್ಯತ್ಯಾಸ ಕಡಿಮೆ.


ಅಕ್ಷರ ಲಕ್ಷಣಗಳಲ್ಲಿ 'ಶ್ರೀ' ಎಂಬ ಅಕ್ಷರದಲ್ಲಿ ವಿಜಯನಗರೋತ್ತರ ಬೆಳವಣಿಗೆ ಇದ್ದು ಶಕಾರಕ್ಕೆ ನೀಡಿರುವ 'ರ' ಕಾರದ ಒತ್ತಕ್ಷರವು ಮೂಲ 'ಶ' ಅಕ್ಷರವನ್ನು ಒಂದು ಸುತ್ತು ಬಂದು ಬಲಕ್ಕೆ ಸಾಗಿ ಮತ್ತೆ ಒಂದು ಸುತ್ತು ಬಂದಿದೆ. ತಲೆಕಟ್ಟುಗಳು ಸಮಾನಾಂತರವಾಗಿ ಆರಂಭವಾಗಿ ವಕ್ರವಾಗಿ ಮೇಲಕ್ಕೆ ಎದ್ದಿವೆ. ಅಕ್ಷರಗಳ ಮೇಲೆ ತೆಲುಗು ಅಕ್ಷರಗಳ ಪ್ರಭಾವವಿಲ್ಲ.


ಶಾಸನದಲ್ಲಿ ಕಾಲವನ್ನು ಶಾಲಿವಾಹನ ಶಕವರುಷ ೧೫೭೮ನೆಯ ವಿಳಂಬಿ, ಮಾಗ ಶು ೧೫ ಎಂದಿದ್ದು ವಾರದ ಉಲ್ಲೇಖವಿಲ್ಲ. ಶಕ ವರ್ಷ ೧೫೭೮ರಲ್ಲಿ ವಿಳಂಬಿ ಸಂವತ್ಸರವು ದುರ್ಮುಖಿ ಬಂದಿರುತ್ತದೆ. ವಿಳಂಬಿ ಸಂವತ್ಸರವು ಶಕ ವರ್ಷ ೧೫೮೦ರಲ್ಲಿ ಬಂದಿರುತ್ತದೆ. ಹೀಗಾಗಿ ಇದರ ಕಾಲವನ್ನು ಶಕ ವರ್ಷ ೧೫೭೮ ಎಂದಿಟ್ಟುಕೊಂಡಲ್ಲಿ ೧೯.೧.೧೬೫೭ ಸೋಮವಾರವಾಗುತ್ತದೆ. ಶಕ ೧೫೮೦ರ ವಿಳಂಬಿ ಸಂವತ್ಸರವೆಂದಿಟ್ಟುಕೊಂಡಲ್ಲಿ ೨೮.೧.೧೬೫೯ ಶುಕ್ರವಾರವಾಗುತ್ತದೆ. ಇದು ಶ್ರೀರಂಗರಾಯನ ಇತರೆಡೆಯ ಶಾಸನಗಳನ್ನು ಯಥಾರ್ಥವಾಗಿ ಹೋಲುವುದರಿಂದ ಇದೊಂದು ನೈಜ ಶಾಸನವಾಗಿದೆ. ಶಾಸನದಲ್ಲಿ ಇದನ್ನು ಜಯರೇಖೆಯೆಂದು ಕರೆಯಲಾಗಿದೆ. ಭಾಷೆಯು ಆಗಿನ ಆಡು ಭಾಷೆಯನ್ನೇ ಇದರಲ್ಲಿ ಬಳಸಿರುವುದರಿಂದ ಗ್ರಂಥಸ್ಥ ಭಾಷೆಗೆ ಹೋಲಿಸಿದಲ್ಲಿ ಅನೇಕ ಸ್ಖಾಲಿತ್ಯಗಳು ಕಾಣಬರುತ್ತವೆ. ಶಾಸನದಲ್ಲಿ ಶ್ರೀರಂಗದೇವರಾಯ ಮಹಾರಾಯನ ಆಳ್ವಿಕೆಯಲ್ಲಿ ಹರತಿಯ ಸರ್ಜಾ ರಾಯಪ್ಪರಾಜನು ರೊಳ್ಳೆಯ ಉಪ್ಪಿನ ಕೊಳಗದ ಮಸ್ತಿ ಮುದ್ದಯ್ಯನ ಮೊಂಮೊಗ ಚಿಗಮುದ್ದಯ್ಯಯೆಂಬುವವನಿಗೆ ರೊಳೆ ಗ್ರಾಮದ ಗೌಡಿಕೆಯನ್ನು ನೀಡಿ ಜಯರೇಖೆ ನೀಡಿದ್ದಂತೆ ಉಲ್ಲೇಖವಿದೆ.

ಶಾಸನದಲ್ಲಿ ಬಂದಿರುವ ಉಪ್ಪಿನ ಕೊಳಗ ಎಂಬ ಪದವು ಒಂದು ಗುಂಪನ್ನು ಅಥವಾ ವೃತ್ತಿಯನ್ನು ಸೂಚಿಸುತ್ತಿದ್ದು ಒಕ್ಕಲಿಗರ ಒಂದು ಒಳಪಂಗಡವನ್ನೂ ಸೂಚಿಸುತ್ತದೆ. ಇದೇ ಶಾಸನದ ಜೊತೆಯಲ್ಲಿ ದೊರೆತ ಇನ್ನೊಂದು ಶಾಸನವು (ಶಾಸನ ಅಧ್ಯಯನ I ಸಂ.೧) ಇದೇ ಗುಂಪನ್ನು ಹೆಸರಿಸುತ್ತದೆ. ಶಾಸನವು ಜಯರೇಖೆ ಎಂದು ಗುರುತಿಸಿಕೊಂಡಿರುವುದರಿಂದ ಸ್ಪಷ್ಟವಾಗಿ ಜಾತಿಗೆ ಸಂಬಂಧಿಸಿದ ಶಾಸನ ಇದಾಗಿದೆ. ರೊಳ್ಳೆಯ ಗೌಡಿಕೆಯನ್ನು ಅನ್ನದಾನಿ ಗವುಡ ಎಂಬುವವನು ಈ ಬಗ್ಗೆ ಜಗಳ ತೆಗೆದದ್ದರಿಂದ ಹನ್ನೆರಡು ಆಯಗಾರರು ಮತ್ತು ರೊಳ್ಳೆಯ ಸ್ಥಳದ ಯಜಮಾನರು ಸೇರಿ ಗೌಡಿಕೆಯ ಬಗ್ಗೆ ತೀರ್ಮಾನ ತೆಗೆದುಕೊಂಡಂತೆ ಹೇಳಿದೆ. ಈ ಶಾಸನ ಜಯರೇಖೆಯಾದರೂ ಶಾಸನಲಿಪಿ, ಉಲ್ಲೇಖಿತ ರಾಜ ಮತ್ತು ಪ್ರಯೋಗವಾಗಿರುವ ಭಾಷೆಯ ಆಧಾರದಿಂದ ನೈಜ ಶಾಸನವಾಗಿದೆ. ಬಹುಶಃ ಶಾಸನದಲ್ಲಿ ಬರುವ ಅನ್ನದಾನಿಗೌಡ ಮತ್ತು ಚಿಗಮುದ್ದಯ್ಯ ದಾಯಾದಿಗಳಿದ್ದು ಗೌಡಿಕೆಗ್ಾಗಿ ಕಿತ್ತಾಡಿರಬಹುದು.









ಶ್ರೀರಂಗರಾಯನ ರೊಳ್ಳದ ಜಯರೇಖೆ ಶಾಸನ

ಎರಡು ಹಲಗೆಗಳು, ಮುದ್ರೆಯಿಲ್ಲ

ಶಾಸನಪಾಠ :

ಮೊದಲ ಹಲಗೆ ಮುಂಬದಿ

೧ ಶ್ರೀರಾಮಃ ∴ ಶ್ರೀಃ -‖ ಶುಭಮಸ್ತು । ಸ್ವಸ್ತಿ ಶ್ರೀ ಜ
೧ ೨ ಯಾದ್ಭುದಯ ಶಾಲ್ಲಿವಾಹನ ಶಕವರುಷಂಗಳು ೧೫೭೮
೩ ನೆಯ ವಿಳಂಬಿ ನಾಮ ಸಂವತ್ಸರದ ಮಾಗ ಶು ೧೫ ಲು ಶ್ರೀ
೪ ಮದ್ರಜಾಧಿರಾಜ ರಾ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ
೫ ವೀರ ಶ್ರೀರಂಗರಾಯದೇವ ಮಹಾರಾಯ ರೈಯನವರು ಪೃಥ್ವಿ

ಮೊದಲ ಹಲಗೆ ಹಿಂಬದಿ

೬ ಸಾಂಬ್ರಾಜ್ಯಂಗ್ಯೆಯಿ ಉತ್ತಿರಲು ಶ್ರೀಮತು ಹರತಿ
೭ ಸರಜ ರಾಯಪ್ಪ ರಾಜರವರು । ರೊಳೆ ಗ್ರಾಮದ ಉಪ್ಪಿನ ಕೊಳಗ
೮ ದಮಸ್ತಿ ಮುದ್ಯೆಯನ ಮೊಂಮಗ ಚಿಗಮುದಯಗು ಕೊಟ್ಟ ಗ
೯ ಉಡಿಕೆ ಜಯರೇಖೆ ಕ್ರಾಮವೆಂತೆಂದರೆ ಅಂನದಾನಿ ಗೌಡಗು ನಿನಗು
೧೦ ವ್ಯವಹಾರವಾಗಿ । ಯಿರಲಾಗಿ । ಸೋಲುಗೆಲುವು ನಿಧಾನಿಸಿ ।

ಎರಡನೆಯ ಹಲಗೆ ಮುಂಬದಿ

೧೧ ರೊಳು ಸ್ಥಾಳದ ಯಜಮಾನರು । ನಾರಸಿಂಹಾಭಟರು । ತಿಂಮ ಪ ।
೧೨ ನರಸಪ್ಪ । ಪುಟಯ । ಸ್ಥಾಳದ ಶಾನುಬಾಗ ವೆಂಕಪ್ಪ । ತಳವಾರ ತಂಮ ।
೨ ೧೩ ಅಸಗರ ಚಿಕ । ಕಂಮಾರ ಮುದ್ಯೆಯ ಮೊದಲಾದ ಹಂನೆರಡು ಅಯಗಾ
೧೪ ರರು ಸಹಾ । ಸಮಂದಿಸಿಕೊಂಡು ದಮ್ಮ್ರಾಸನದಲು । ಅಂನ್ನದಾನಿಗೌ
೧೫ ಡಮರು । ಸೋಲು ಮಾಡಿ । ಉಪ್ಪಿನ ಕೊಳಗದ ಮುಧ್ಯೆಯನ ಮಗಮು

ಎರಡನೆಯ ಹಲಗೆ ಹಿಂಬದಿ

೧೬ ದ್ಯೆಯಗೆ ಗೌಡಿಕೆ ಉಂಟು ಎಂದು ಧಮ್ಮ್ರಾನಿನದಲು ನಿಧಾನಿಸಿ ಜಯ
೧೭ ರೇಖೆ ಕೊಟ ಉ ಎಂದು ನಮಗೆ ತಿಳುಹಲಾಗಿ ಅದೇ ಮರ್ರಿಯಾದೆಯ
೧೮ ಲ್ಲಿ ನೀನು ರೊಳೆ ಗ್ರಾಮದ ಗೌಡಿಕೆಯನು ನಿನ್ನ ಪುತ್ರ ಪೌತ್ರ ಪಾರಂ
೧೯ ಪರ್ಯ್ಯ ಉ ಆಚೆಂದ್ರಾರ್ಕ್ಕ ಸ್ಥಾಯಿಯಾ । ಅನುಭವಿಸಿಕೊಂಡು
೨೦ ಸುಖದಲ್ಲಿ ಯೀಹದು ಎಂದು ಕೊಟ ಜಯರೇಖೆಪತ್ರಿಕೆ ‖ = ‖ ಶ್ರೀರಾಮ

❖ ❖

೨

ಹಂಪಿ ಕುರಿತು ಮೂರು ಅಷ್ಟಕಗಳು

ಡಾ. ಎಫ್.ಟಿ.ಹಳ್ಳಿಕೇರಿ

ಕರ್ನಾಟಕದ ಸಾಂಸ್ಕೃತಿಕ ಕೇಂದ್ರಗಳಲ್ಲಿ ಒಂದಾದ ಹಂಪೆಗೆ ಸಾವಿರಾರು ವರ್ಷಗಳ ಇತಿಹಾಸವಿದೆ. ರಾಜಕೀಯ, ಧಾರ್ಮಿಕ, ಶಿಲ್ಪಕಲೆ ಮತ್ತು ಸಾಹಿತ್ಯ ಕ್ಷೇತ್ರಕ್ಕೆ ಇದರ ಕೊಡುಗೆ ಅಗಾಧವಾದುದು, ಅನನ್ಯವಾದುದಾಗಿದೆ. ಹರಿಹರ ರಾಘವಾಂಕರಂತಹ ಕವಿಗಳು, ಕಲ್ಲುಮಠದ ಪ್ರಭುದೇವ, ಸಪ್ತಕಾವ್ಯದ ಗುರುಬಸವರಂತಹ ನೂರೊಂದು ವಿರಕ್ತರು ಸಾಹಿತ್ಯ ಕೃಷಿಗೈದ ತಾಣವಿದು. ಡಾ. ಎಂ. ಎಂ. ಕಲಬುರ್ಗಿ ಅವರು ಹೇಳುವಂತೆ "ಅರಸರ ಆಸ್ಥಾನದಲ್ಲಿ ಹಳಗನ್ನಡ ಸಾಹಿತ್ಯ ವಿಜೃಂಭಿಸುತ್ತಿರುವಾಗ, ವಿರೂಪಾಕ್ಷನ ದೇವಸ್ಥಾನದಲ್ಲಿ ನಡುಗನ್ನಡ ಸಾಹಿತ್ಯಕ್ಕೆ ಪ್ರಾಣ ತುಂಬಿದವನು ಹರಿಹರ. ಭಕ್ತಿಭಾವ ನಡುಗನ್ನಡ ಭಾಷೆಗಳ ದಾಂಪತ್ಯದಲ್ಲಿ ಆಕಾರ ಪಡೆದ ಇವನ ದಾರಿಯಲ್ಲಿ ಹೆಜ್ಜೆಹಾಕಿದ ರಾಘವಾಂಕ, ಚಾಮರಸ, ಕುಮಾರವ್ಯಾಸ ಮೊದಲಾದವರೆಲ್ಲ ಒಂದಲ್ಲ ಒಂದು ರೀತಿ ಹಂಪೆಗೆ ಸಂಬಂಧಿಸಿದವರು. ಹೀಗಾಗಿ ನಡುಗನ್ನಡ ಸಾಹಿತ್ಯ ಚರಿತ್ರೆಯೆಂದರೆ ಹಂಪೆ ಪರಿಸರದ ಸಾಹಿತ್ಯ ಚರಿತ್ರೆಯೇ ಆಗಿದೆ."[೧] ಈ ಹಂಪೆಯ ಸ್ಥಳ ವೈಶಿಷ್ಟ್ಯ,ಅಧಿದೈವ ವಿರೂಪಾಕ್ಷನ ಮಹಿಮೆಯನ್ನು ಚಂಪೂ, ಷಟ್ಪದಿ, ಸಾಂಗತ್ಯ ರೂಪದ ಪ್ರಧಾನ ಕೃತಿಗಳಲ್ಲದೇ ರಗಳೆ, ಶತಕ, ದಂಡಕ, ತಾರಾವಳಿ, ಕಾಲಜ್ಞಾನ, ಅಷ್ಟಕ ಇತ್ಯಾದಿ ಲಘು (ಚಿಕ್ಕ) ಪ್ರಕಾರದ ಕೃತಿಗಳಲ್ಲಿಯೂ ವೈವಿಧ್ಯಮಯವಾಗಿ ವರ್ಣಿಸಲಾಗಿದೆ.

ಸಾಮಾನ್ಯವಾಗಿ ಅಷ್ಟಕವೆಂದರೆ ಎಂಟು ಪದ್ಯಗಳ ಸಮೂಹ. ಕೆಲವು ಸಂದರ್ಭಗಳಲ್ಲಿ ಒಂಭತ್ತು, ಹತ್ತು, ಹನ್ನೊಂದು ಪದ್ಯಗಳೂ ಇರುವುದುಂಟು. ಇಷ್ಟದೇವತಾ ಸ್ತುತಿ, ಸ್ಥಳಮಹಿಮೆ, ತತ್ವಾಚರಣೆ ಮುಂತಾದ ಸಂಗತಿಗಳನ್ನು ತಿಳಿಸುವುದು ಇದರ ಪ್ರಮುಖ ಲಕ್ಷಣ. ಪ್ರತಿ ಪದ್ಯದ ಅಂತ್ಯದಲ್ಲಿ ಒಂದೇ ರೀತಿಯ ಪದಸಮೂಹದಿಂದ ಮುಕ್ತಾಯವಾಗುವುದನ್ನು ಕಾಣಬಹುದು. ಸ್ತೋತ್ರರೂಪದಲ್ಲಿದ್ದು, ಭಕ್ತಿ ಪ್ರತಿಪಾದನೆಗೆ ಅನುಕೂಲಕರವಾಗಿದೆ. "ವಚನ, ಕೀರ್ತನೆ, ಸುಳಾದಿ, ಉಗಾಭೋಗ, ಶತಕಗಳಲ್ಲಿ ಕಂಡುಬರುವ ವೈವಿಧ್ಯ, ಭಾವಸಂಪತ್ತಿ, ಕಲ್ಪನಾಚಾತುರ್ಯಗಳು ಎದ್ದುಕಾಣದಿದ್ದರೂ, ಅಷ್ಟಕಗಳು ಮನ, ಹೃದಯಗಳೆರಡನ್ನೂ ತಣಿಸುವ ಭಕ್ತಿಭಾವವನ್ನು ಒಳಗೊಂಡಿರುತ್ತವೆ. ಚಿಕ್ಕದರಲ್ಲಿ ಚೊಕ್ಕವಾಗಿ ಆರಾಧ್ಯ ವಸ್ತುವಿನ, ವ್ಯಕ್ತಿಯ, ಸ್ಥಳಗಳ ಗುಣಗಾನ ಕುರಿತು ಭಕ್ತಿಪೂರ್ವಕವಾಗಿ ಸ್ತುತಿಸುವಲ್ಲಿ, ವಿಶಾಲವಾದ ಭಾವನೆಗಳನ್ನು ಸಂಗ್ರಹಿಸಿ, ಸಂಕ್ಷೇಪದಲ್ಲಿ ನಿರೂಪಿಸಿ ನೆನಪಿನಲ್ಲಿಡಲು ಅನುಕೂಲವಾಗುವಂತೆ ಈ ಅಷ್ಟಕಗಳು ರಚನೆಯಾಗಿರಬೇಕೆನಿಸುತ್ತದೆ. ನಿತ್ಯ ಪಾರಾಯಣೆಯಲ್ಲಿ ಸಮಯಾಕಾಶ ಇಲ್ಲದವರಿಗೆ ಇವು ಹೆಚ್ಚು ಅನುಕೂಲಕರವಾಗಿವೆ. ದೇವರನಾಮ, ವ್ಯಕ್ತಿನಾಮ, ಸ್ಥಳನಾಮಗಳನ್ನು ಸ್ತೋತ್ರರೂಪವಾಗಿ, ಸಂಖ್ಯೆಗನುಗುಣವಾಗಿ ನೆನೆಯುತ್ತ ಹೋದರೆ ಶುಭವಾಗುವ ಮತ್ತು ಒಳ್ಳೆಯ ಫಲಪ್ರಾಪ್ತಿ ದೊರೆಯುವ ಬಲವಾದ ನಂಬಿಕೆ ಇದೆ. ಈ ಅಷ್ಟಕಗಳು ಇಂದಿಗೂ ನಿತ್ಯ ಪಾರಾಯಣದಲ್ಲಿ ಬಳಕೆಯಾಗುತ್ತಿವೆ. ಅಷ್ಟಕಗಳನ್ನು ಪಠಿಸುವುದರಿಂದ, ಕೇಳುವುದರಿಂದ ಭಕ್ತಿ ವಿರಕ್ತಿ ಸಿದ್ಧಿ ಲಭಿಸುವುದೆಂಬ ನಂಬಿಕೆಯೂ ಇದೆ."[೨]

ಈ ಸಾಹಿತ್ಯವು ಮೊದಲು ರಚನೆಗೊಂಡಿರುವುದು ಸಂಸ್ಕೃತದಲ್ಲಿ. ವಾಲ್ಮೀಕಿಯಿಂದ ಗಂಗಾಷ್ಟಕ, ಪ್ರಹ್ಲಾದನಿಂದ ಶ್ರೀಹರ್ಯಷ್ಟಕ, ಶಂಕರಾಚಾರ್ಯರಿಂದ ವಿವಿಧ ಅಷ್ಟಕಗಳು ರಚನೆಗೊಂಡಿರುವುದು ಆ ಸಾಹಿತ್ಯ ಚರಿತ್ರೆಯಿಂದ ತಿಳಿದು ಬರುತ್ತದೆ. ಕನ್ನಡದಲ್ಲಿ ಅಷ್ಟಕ ರಚನೆಯಾದ ಬಗ್ಗೆ ಕ್ರಿ. ಶ. ೮೦೦ರ ಹುಮ್ಮಚ ಶಾಸನವೊಂದರಲ್ಲಿ ಸೈಗೊಟ್ಟ ಶಿವಮಾರನೆಂಬುವವನು ಶಿವಮಾರಮತ ಎಂಬ ಗಜಾಷ್ಟಕವನ್ನು ರಚನೆ ಮಾಡಿದ ಬಗೆಗೆ ಉಲ್ಲೇಖವಿದೆ.[೩] ಬಹುಶಃ ಇದೇ ಕನ್ನಡದ ಮೊದಲ ಅಷ್ಟಕ. ಆದರೆ ಕ್ರಿ. ಶ. ೧೧೭೫ರಲ್ಲಿದ್ದ ಮೌಕ್ತಿಕ ಜೈನಕವಿಯ ಚಂದ್ರಾಷ್ಟಕ ಈಗ ಉಪಲಬ್ಧವಿರುವ ಮೊದಲನೆಯ ಅಷ್ಟಕವಾಗಿದೆ. ನಂತರದಲ್ಲಿ ಮುಡಿಗೆಯ ಅಷ್ಟಕ (ಹರಿಹರ), ಚಂದ್ರನಾಥಾಷ್ಟಕ (ಎರಡನೆಯ ಗುಣವರ್ಮ), ಜಿನೇಶ್ವರಾಷ್ಟಕ, ಶಾಂತಿಜಿನಾಷ್ಟಕ, ಪಾರ್ಶ್ವನಾಥಾಷ್ಟಕ, ಕೃಷ್ಣದೇವರಾಷ್ಟಕ, ಜಾತಿವರ್ಣದ ಅಷ್ಟಕ ಇತ್ಯಾದಿಯಾಗಿ ನೂರಾರು ಕೃತಿಗಳು ರಚನೆಗೊಂಡು ಅಷ್ಟಕಗಳ ಪರಂಪರೆಯೇ ಬೆಳೆದು ಬಂದಿರುವುದನ್ನು ಗುರುತಿಸಬಹುದು. ಇವುಗಳ ಪ್ರಕಟನೆಗೆ ಕೇವಲ ಮೂವತ್ತು ವರ್ಷಗಳ ಇತಿಹಾಸವಿದೆ. ೧೯೭೪ರಲ್ಲಿ ಡಾ. ಭೋಜರಾಜ ಪಾಟೀಲ ಅವರು ಅಷ್ಟಕಗಳು ಎಂಬ ಸಂಪುಟವೊಂದನ್ನು ಪ್ರಕಟಿಸಿದ್ದಾರೆ. ಇದು ಅಷ್ಟಕಗಳ ಮೊದಲ ಸಂಪುಟವೆಂದು ಹೇಳಬಹುದು. ತದನಂತರದಲ್ಲಿ ಎಸ್. ಶಿವಣ್ಣ, ಡಾ. ವೀರಣ್ಣ ರಾಜೂರ, ಡಾ. ಬಿ.ಬಿ.

ಬಿರಾದಾರ, ಡಾ. ಬಿ.ವಿ.ಯಕ್ಕುಂಡಿಮಠ ಮುಂತಾದ ವಿದ್ವಾಂಸರು ಮಾತ್ರ ಹೆಚ್ಚು ಆಸಕ್ತಿ ತಳೆದ ಕಾರಣ ಹಸ್ತಪ್ರತಿಗಳ ಒಡಲಿನಲ್ಲಿದ್ದ ಈ ಸಾಹಿತ್ಯವು ಪರಿಷ್ಕಾರಗೊಂಡು ಪ್ರಕಟಗೊಳ್ಳಲು ಪ್ರಾರಂಭವಾಯಿತು. ಈ ಕಾರಣವಾಗಿ ವೀರಶೈವ ಅಷ್ಟಕ ಸಂಪುಟ ಎಂಬ ಕೃತಿಯು ೧೯೯೭ ರಲ್ಲಿ ಬೆಳಕಿಗೆ ಬಂದಿತು. ಡಾ. ಬಿ.ಬಿ.ಬಿರಾದಾರ ಮತ್ತು ಡಾ. ಬಿ.ವಿ. ಯಕ್ಕುಂಡಿಮಠ ಅವರು ತುಂಬ ಶ್ರಮವಹಿಸಿ ಈ ಕೃತಿಯನ್ನು ಪರಿಷ್ಕರಿಸಿದ್ದಾರೆ. ಇದರಲ್ಲಿ ೧೦೩ ವೀರಶೈವ ಅಷ್ಟಕಗಳಿವೆ. ಪ್ರಸ್ತುತ ಸಂಪ್ರಬಂಧದಲ್ಲಿ ಹಂಪಿಶೃಂಗಾರಾಷ್ಟಕ[೪], ತುಂಗಭದ್ರಾಷ್ಟಕ ಮತ್ತು ಶ್ರೀ ವಿರೂಪಾಕ್ಷ ಅಷ್ಟಕಗಳ ವಸ್ತು, ವಿಷಯ ವೈವಿಧ್ಯವನ್ನು ಕುರಿತು ವಿವೇಚಿಸಲಾಗಿದೆ.

ಹಸ್ತಪ್ರತಿ ವಿವರ

ಕನ್ನಡ ವಿಶ್ವವಿದ್ಯಾಲಯ ಹಸ್ತಪ್ರತಿ ಭಂಡಾರದ ಏಕೈಕ ಕಾಗದ ಪ್ರತಿ (ಕ್ರಮಸಂಖ್ಯೆ ೮೫೫) ಯಿಂದ ಈ ಮೂರು ಅಷ್ಟಕಗಳನ್ನು ಪರಿಷ್ಕರಿಸಲಾಗಿದೆ. ಮೂಲತಃ ಇದು ಕೊಪ್ಪಳ ಜಿಲ್ಲೆ ಮುದ್ದಾಬಳ್ಳಿ ಗ್ರಾಮದ ಶ್ರೀ ಗುರುನಾಥ ಸ್ವಾಮಿಯವರಿಗೆ ಸೇರಿದ್ದು. ಇವರು ಈ ಹಸ್ತಪ್ರತಿಯ ಲಿಪಿಕಾರರರೂ, ಹಂಪಿ ಶೃಂಗಾರಾಷ್ಟಕ ಕೃತಿಯ ಕರ್ತೃಗಳೂ ಆದ ಶೇಷೇಂದ್ರಾಚಾರ್ಯರ ಮೊಮ್ಮಗ. ಹೀಗಾಗಿ ಕರ್ತೃಗಳ ಮನೆಯಲ್ಲಿಯೇ ಈ ಪ್ರತಿ ದೊರೆತಿರುವುದು ವಿಶೇಷವಾಗಿದೆ. ೨೦ನೆಯ ಶತಮಾನದ ಆದಿಭಾಗದಲ್ಲಿದ್ದ ಯಾತಗಿರಿ ಮಠದ ಶ್ರೀ ಶೇಷೇಂದ್ರಾಚಾರ್ಯರು ಆನೆಗೊಂದಿ ಸಂಸ್ಥಾನದ ಪಾಂಚಾಳಗುರುಗಳು. ಪ್ರಕಾಂಡ ಪಾಂಡಿತ್ಯವನ್ನು ಹೊಂದಿದ ಇವರು ಹಸ್ತಪ್ರತಿ ಲಿಪಿಕಾರರಾಗಿಯೂ ಪ್ರಸಿದ್ಧರಾಗಿದ್ದರು. ಹಯರತ್ನಶ್ರೇಣಿ,[೫] ಮೋನಪ್ಪಯ್ಯನ ಚರಿತ್ರೆ,[೬] ವೈದ್ಯಗ್ರಂಥ ಮೊದಲಾದ ಹತ್ತಾರು ಕೃತಿಗಳನ್ನು ಲಿಪಿಗೊಳಿಸುವುದರ ಮುಖಾಂತರ ಅವುಗಳನ್ನು ಸಂರಕ್ಷಿಸಿದ ಕೀರ್ತಿಗೆ ಭಾಜನರಾಗಿದ್ದಾರೆ.

ಹಂಪಿ ಶೃಂಗಾರಾಷ್ಟಕ

ತುಂಗಭದ್ರಾ ತೀರದಲ್ಲಿ ಶೋಭಾಯಮಾನವಾಗಿರುವ ಹಂಪೆಯ ವರ್ಣನೆಯು ಈ ಅಷ್ಟಕದ ಮುಖ್ಯವಸ್ತು. ಪ್ರತಿಯೊಂದು ಪದ್ಯದ ಕೊನೆಯ ಸಾಲಿನಲ್ಲಿ ವಿರೂಪಾಕ್ಷಲಿಂಗ ದಯಾನಿಧೆ ಮಮಪಾಲಯಾ ಎಂದು ಸ್ತುತಿಗೈಯಲಾಗಿದೆ. ಅಲ್ಲದೇ ಸ್ವಾಮಿ, ಧೀರ, ಸಂಘಶ್ರೀ, ಪರಮಶ್ರೀ, ಚನ್ನಶ್ರೀ, ಧನ್ಯಶ್ರೀ, ತೋಷಶ್ರೀ ಹೀಗೆ ನಾನಾ ಬಗೆಯಾಗಿ ವಿರೂಪಾಕ್ಷನನ್ನು ಕೊಂಡಾಡಲಾಗಿದೆ. ಹೇಮಕೂಟ ತ್ರಿಕೂಟಗಳ ಮಧ್ಯದಲ್ಲಿರುವ ಬಿಷ್ಟಪ್ಪಯ್ಯನ ಗೋಪುರ, ಉದ್ದಾನ ವೀರಭದ್ರೇಶ್ವರ, ಮುದ್ದು (ಉಗ್ರ) ನಾರಸಿಂಹ, ಬಡವಿಲಿಂಗ, ಕಿನ್ನರೇಶ್ವರ, ಜಂಬುಕೇಶ್ವರ, ಮಾಲ್ಯವಂತ, ಕಾಶಿವಿಶ್ವನಾಥ, ವೃಷಭೇಶ ಮಂಟಪ, ಶೃಂಗೇರಿಮಠ ಇತ್ಯಾದಿ ಹಂಪಿ ಪರಿಸರದ ವಿವಿಧ ದೇವಾಲಯಗಳ ಹೆಸರುಗಳನ್ನು ಉಲ್ಲೇಖಿಸಿರುವುದು ಈ ಅಷ್ಟಕದ ಮತ್ತೊಂದು ವಿಶೇಷತೆಯಾಗಿದೆ. ತೆಂಗು, ದ್ರಾಕ್ಷಿ,

ಮರುಗ ಮಲ್ಲಿಗೆ, ಪುಷ್ಪ, ಕಮಲ, ಕಾರಂಜಿಗಳಿಂದ ಸುಂದರ ಮನಮೋಹಕವಾಗಿ ಹಂಪೆಯು ಕಂಗೊಳಿಸುತ್ತಿತ್ತೆಂದು ಕವಿ ಚಿತ್ರಿಸಿದ್ದಾನೆ. ಈ ಕೃತಿಯ ಪೂರ್ಣ ಪಾಠ ಹೀಗಿದೆ.

ಪಂಪಾದೇವಿ ಹೃದಾಂಬುಜಾತಮರಾಳ ಮಂಗಳ ಮೂರುತಿ
ಸಂಪದಾಧಿಪತಾದಿ ದಿಕ್ಪತಿ ಪೂಜಿತಾ ತ್ರಿಜಗತ್ಪತಿ
ಇಂಪಿನಿಂ ತುಂಗಭದ್ರ ತೀರ ತಟಾಗ್ರದೊಳ್ ಶೋಭಿಸುತ
ಹಂಪಿ ಶ್ರೀ ವಿರೂಪಾಕ್ಷ ಲಿಂಗದಯಾನಿಧೆ ಮಮಪಾಲಯಾ || ೧ ||

ಹೇಮಕೂಟ ತ್ರಿಕೂಟ ಮಧ್ಯದೀ ಬಿಷ್ಟಪ್ಪಯ್ಯನ ಗೋಪುರ
ಕಾಮಕುಂಡಸುಲೋರ್ಕ ಪಾವನ ವಿದ್ಯಾರಣ್ಯ ಮುನೀಶ್ವರ
ರಾಮಲಕ್ಷ್ಮಣ ಸೀತೆ ಹನುಮ ಸಹಿತ ವೃಂದ ಶುಭಕರಾ
ಸ್ವಾಮಿ ಶ್ರೀ ವಿರೂಪಾಕ್ಷಲಿಂಗ ದಯಾನಿಧೆ ಮಮಪಾಲಯಾ ||೨ ||

ದ್ವಾರದೊಳ್ ವೃಷಭೇಶ ಮಂಟಪ ಕನಕಗಿರಿ ಶಿಖರಾಂಕಿತ
ಸಾರಕರ್ಬುರ ಪಂಚಕಲಶ ಸಯುತ ಗೋಪುರ ಶೋಭಿತ
ಚಾರುಭುವನೇಶ್ವರಿ ಸಮೀಪದಿ ಗುಂಜಿ ಮಾಧವ ಗಣ್ಯತಾ
ಧೀರ ಶ್ರೀ ವಿರೂಪಾಕ್ಷ ಲಿಂಗದಯಾನಿಧೆ ಮಮಪಾಲಯಾ || ೩ ||

ಶೃಂಗೇರಿ ಮಠ ರಂಗಮಂಟಪ ಮಂಗಳಕರ ಬನದೀ
ತೆಂಗುದ್ರಾಕ್ಷಿ ಜಂಬೀರ ವಸನ ಮರುಗ ಮಲ್ಲಿಕ ಪುಷ್ಪದೀ
ಕಂಗೊಳಿಸುವ ಕಾರಂಜಿ ಕಮಲಗಳ್ ಶಾಕಮೃಗ ಖಗವೃಂದದೀ
ಸಂಘುಶ್ರೀ ವಿರೂಪಾಕ್ಷ ಲಿಂಗದಯಾನಿಧಿ ಮಮಪಾಲಯಾ || ೪ ||

ಸಿದ್ಧಗಣಪತಿ ಬಡವಿಲಿಂಗ ಉದ್ದಾನ ವೀರಭದ್ರೇಶನೂ
ಮುದ್ದುನಾರಸಿಂಹಾಂಜನೇಯ ಪ್ರವೃದ್ಧ ವಿರೂಪಾಕ್ಷೇಶನೂ
ಸಿದ್ಧನುತ ಕಾಶಿವಿಶ್ವನಾಥ ಪ್ರಸಿದ್ಧ ಪಾತಾಳಲಿಂಗನೂ
ಸಾಧ್ಯ ಶ್ರೀ ವಿರೂಪಾಕ್ಷಲಿಂಗ ದಯಾನಿಧಿ ಮಮಪಾಲಯಾ || ೫ ||

ನಿರುತ ಪರಿಯುವ ಚಕ್ರತೀರ್ಥದಂಗಿರಿಯೊಳೆ ಶ್ರೋದ್ಧಾರಕಾ
ಹರಿಹರೇಶ್ವರ ಕೋಟಿಲಿಂಗ ಮಾತಂಗ ವೀರಭದ್ರಮುಖಾ
ಕರುಣಸಾಗರ ಕಾಲಭೈರವ ಮಂತ್ರ ಮಾರುತಿ ಪೋಷಕ
ಪರಮಶ್ರೀ ವಿರೂಪಾಕ್ಷಲಿಂಗ ದಯಾನಿಧಿ ಮಮಪಾಲಯಾ || ೬ ||

ಕಿನ್ನರೇಶ್ವರ ಜಂಬುಕೇಶ್ವರ ಸೋಮಲಿಂಗದಯಾಕರಾ
ಧನ್ಯವಾಣಿ ಭದ್ರೇಶ ಚತ್ವರ ಮಧ್ಯವಾಶಿಪ ಶಂಕರಾ
ಸನ್ನತಾಮರ ಮಾಲ್ಯವಂತ ನಿವಾಸ ರಘುಪತಿ ಸುಂದರಾ
ಚನ್ನಶ್ರೀ ವಿರೂಪಾಕ್ಷಲಿಂಗ ದಯಾನಿಧೆ ಮಮಪಾಲಯಾ || ೭ ||

ಸಾಲುಗೋಪುರ ರಾಜಬೀದಿಯ ಬಲದೀ ಕಾಳಿಕಾದೇವಿಯಾ
ಸಾಲುಮಂಟಪ ಸಾಲು ಅಂಗಡಿ ಸಾಲು ಶ್ರೀ ರಂಗ ಲಕ್ಷ್ಮಿಯಾ
ಲೀಲೆಯಿಂ ಶೋಭಿಸುವರಾನಿಗೊಂದಿ ರಾಜರ
ಪಾಲಯ ಶೀಲ ಶ್ರೀ ವಿರೂಪಾಕ್ಷಲಿಂಗದಯಾನಿಧೆ ಮಮಪಾಲಯಾ || ೮ ||

ಬಣ್ಣಿಸಲ್ಕಿದು ಬಾರದಲ್ಪನ ಭಾವನಾಗೋಚರವಿದೂ
ಪುಣ್ಯರಾಶಿಗಣಾಗ್ರಮಣಿ ದಕ್ಷಿಣ ಕಾಶಿಯು ಮೆರೆವುದೂ
ಎನ್ನ ಸರ್ವಾಪರಾಧ ಕ್ಷಮಿಸಿ ಪೊರೆದು ಪುಣ್ಯವನೀವುದೂ
ಧನ್ಯಶ್ರೀ ವಿರೂಪಾಕ್ಷ ಲಿಂಗದಯಾನಿಧೆ ಮಮಪಾಲಯಾ || ೯ ||

ಈ ಶುಭಾಷ್ಟಕ ವಿಶ್ವಕರ್ಮ ಕುಲಜ ಶೇಷೇಂದ್ರಾಚಾರ್ಯನೂ
ಪೋಷಿಸೆಂದು ತನ್ನಿಷ್ಟ ದೈವತ ಭಕ್ತಿಯಿಂ ಕೊಂಡಾಡ್ವನೂ
ದೇಶಕರ ಭವಪಾಶ ಲೋಚನ ಮಾಡ್ವ ತ್ರೈಜಗದೀಶನೂ
ತೋಷಶ್ರೀ ವಿರೂಪಾಕ್ಷಲಿಂಗ ನಮಸ್ತುನತ ಮಂದಾರನೋ || ೧೦ ||

ಇತಿಶ್ರೀ ಮದ್ವಿಶ್ವಕರ್ಮ ಕುಲೋತ್ಪನ್ನಯ ಯಾತಗಿರಿ ಮಠೋಪನಾಮಕ
ಶ್ರೀ ಶೇಷೇಂದ್ರಾಚಾರ್ಯ ವಿರಚಿತಯಾಂ
ಶ್ರೀ ಹಂಪಿ ಶೃಂಗಾರಾಷ್ಟಕ ಪರಿಸಮಾಪ್ತ ಮಂಗಳ ಮಹಾಶ್ರೀ

೨. ತುಂಗಭದ್ರ ಅಷ್ಟಕ

ಕರ್ನಾಟಕದ ಪ್ರಮುಖ ನದಿಗಳಲ್ಲಿ ಒಂದಾದ ತುಂಗಭದ್ರೆ ಹಂಪೆಯ ಸಮೀಪವೇ ಹರಿದಿದೆ. ಕುಡಿಯಲಿಕ್ಕೆ, ಭೂಮಿಯನ್ನು ಕೃಷಿಗೈಯಲಿಕ್ಕೆ ನೀರು ಕೊಡುವ ಈ ನದಿಯ ವಿಶೇಷತೆಯನ್ನು ಇಲ್ಲಿ ವರ್ಣಿಸಲಾಗಿದೆ. ಸಂಪದ ಕಾಯ್ವಳೆ, ಮುಕ್ತಿದಾಯಕಿ, ಬಡವರಾಧಾರಿ, ಪರಮಪಾವನೆ,ಭಾಗ್ಯನಿಧಿಯಳೆ ಎಂದು ನಾನಾ ರೀತಿಯಲ್ಲಿ ಗುಣಗಾನ ಮಾಡಲಾಗಿದೆ. ನಿರ್ಭರದಿ ಬೋರಿಡುತ ತೆರೆನೊರೆಯುಬ್ಬಿ ಕುಣಿಕುಣಿದಾಡುತ, ಆರ್ಭಟದಿ ದನಿಮಾಡುತ ಬರುವ ತುಂಗಭದ್ರೆಯ ರುದ್ರರಮಣೀಯ ಗಾಂಭಿರ್ಯವನ್ನು ಕವಿ ಮನದುಂಬಿ ಹಾಡಿದ್ದಾನೆ. ಪ್ರತಿ ಪದ್ಯದ ಕೊನೆಯಲ್ಲಿ ತುಂಗಭದ್ರೆ ನಮೋಸ್ತುತೆ ಎಂದು ಸ್ತುತಿಗೈಯಲಾಗಿದೆ. ಈ ಕೃತಿಯ ಪೂರ್ಣ ಪಾಠ ಕೆಳಗಿನಂತಿದೆ.[೨]

ನೀಲವರ್ಣಳೆ ನಿಗಮ ಶೃತಿಯುತೆ ಲೋಲ ತ್ರಿಭುವನ ವಂದಿತೇ
ಬಾಲರವಿ ಶಶಿಧರನ ಮಕುಟದ ಮೇಲೆ ಸ್ವಸ್ಥಿರವಸ್ತಿತೇ
ಸಾಲುಗೋಪುರ ಹರಿಹರಾ ದೇವಾಲ್ಯ ತೀರದಿ ಶೋಭಿತೇ
ಪಾಲಿಪುದು ಪರತತ್ವಮುಕ್ತಿಯ ತುಂಗಭದ್ರೆ ನಮೋಸ್ತುತೇ || ೧ ||

ದೃಷ್ಟಿ ಮಾತ್ರದಿ ನೋಡೆ ಪಾಪವು ನಷ್ಟವಾಗುವದು ಬೇಗದೀ
ದೃಷ್ಟಿಯಲಿ ಪಾವನವ ಮಾಡಲು ಕಷ್ಟಕರ್ಮವು ಶೀಘ್ರದೀ
ಮುಟ್ಟಿಸ್ನಾನವ ಮಾಡೆ ಪದವಿಯ ಕೊಟ್ಟು ಕಾಯ್ವಳು ಬೇಗದೀ
ಸೃಷ್ಟಿಗೀಶ್ವರಿ ಮುಕ್ತಿದಾಯಕಿ ತುಂಗಭದ್ರೆ ನಮೋಸ್ತುತೇ || ೨ ||

ಧರೆಯ ಜೀವನ ಭವದ ರಾಶಿಯ ಪರಿವಳಂದುಭೆ ಪಾಲದೀ
ಗಿರಿತುರಾವಣಗಟ್ಟಿ ಬಿಟ್ಟವು ಕೊರತೆಕೋಪ ವಿಶೇಷದೀ
ಸರಸಿಜೋದ್ಭವ ಮುಖ್ಯದಿವಿಜರ ಪಾರಿಯ ಬೇಕೆಂಬತೌಷದೀ
ಪರಮ ಪಾವನ್ನೆ ಚೆಲುವೆ ಮೋಹನ್ನೆ ತುಂಗಭದ್ರೆ ನಮೋಸ್ತುತೇ || ೩ ||

ತುಂಬಿಬಂದಳು ಗಂಗೆಯೆನುತಲಿ ಕುಂಭಿನಿಂತು ಜನನೋಡುತಾ
ಅಂಬಿಗರು ಹರಗೋಲ ಹುಟ್ಟನು ಸಂಭ್ರಮದಿ ಪೂಜೆಮಾಡುತಾ
ಜಂಬುದ್ವೀಪದ ಶ್ರೇಷ್ಠಸುಜನರು ಅಂಬಿಕೆಯೆಂದು ಪಾಡುತಾ
ಅಂಬಿಕೆ ಕಡಿಹಾಯಿಸಿ ಉಳುಹಿಸೆ ತುಂಗಭದ್ರೆ ನಮೋಸ್ತುತೇ || ೪ ||

ಕಡಗ ಕಂಕಣ ತೊಡರು ಭಾಪುರೆ ನಡುವಿನೊಡ್ಯಾಣರಮ್ಯದಾ
ಝುಡಿತದೋಲೆಯು ಪದಕ ಮೂಗುತಿ ಹೆಡೆಯ ಚಿಂತ್ತಕಬೆನ್ನದಾ
ಮುಡಿಗೆ ಮುತ್ತಿನ ಸೂಸಕವು ಬಹು ಒಡವೆನಿಡುವೆನು ಪೂರ್ವದಾ
ಒಡವರಾಧಾರಿ ಭಾಗ್ಯನಿಧಿಯಳೆ ತುಂಗಭದ್ರೆ ನಮೋಸ್ತುತೇ || ೫ ||

ನಿಬ್ಬರದಿ ಭೋರಿಡುತ ತೆರೆನೊರೆದುಬ್ಬಿ ಕುಣಿಕುಣಿದಾಡುತ
ಗರ್ಭಿಣಿಯು ತುಂತುರದ ರಭಸದಿ ಆರ್ಭಟ ಧ್ವನಿ ಮಾಡುತ
ಶುಭ್ರಸುಲಿಪಲ್ಲು ಮಳಲ ರಾಶಿಯು ಹಬ್ಬಿಹರುಷದಿ ನೋಡುತ
ವಿಬ್ಬರೊಂದಾಗಿ ನಡದುಬರುತಿರೆ ತುಂಗಭದ್ರೆ ನಮೋಸ್ತುತೇ || ೬ ||

ಚಂಪಕವು ನಾಶಿಕದಿ ದೊರಲು ಗುಂಪುಗುರುಳಿನದೇವಿಯಾ
ಕೆಂಪು ರದನದ ದಿವ್ಯರೂಪಳೆ ಕೆಂಪುವಡೆದ ಸಂಜೀವಳೇ
ಕೆಂಪುನಯ ದಯದಿಂದ ಭಕ್ತರ ಸಂಪದವನಿತ್ತು ಕಾಯ್ವಳೇ
ಹಂಪಿಕ್ಷೇತ್ರದಿ ನೆಲೆಗೆ ನಿಂತಳೆ ತುಂಗಭದ್ರೆ ನಮೋಸ್ತುತೇ || ೭ ||

ಅರ್ಥಿಯಲಿ ನಸುನಗುತೆ ಪಾತ್ರವ ಆಚೆ ಮೇರೆಯ ಮೀರಿದೆ
ಒತ್ತುಗಳು ಕಡಲಂತೆ ಸೂಸಿದೆ ಉದ್ಧರಿಸಿ ಪ್ರಭೆದೋರಿದೆ
ಮುತ್ತಿನಾರತಿಯ ಕಲಶವಾದ್ಯವ ಸುತ್ತ ಜಾತ್ರಿಯ ನೆರಹಿದೇ
ಸತ್ಯವಂತಳೆ ನೆಲೆಗೆ ನಿಂತಳೆ ತುಂಗಭದ್ರೆ ನಮೋಸ್ತುತೇ || ೮ ||

ಇತಿಶ್ರೀ ತುಂಗಭದ್ರೆ ಅಷ್ಟಕ ಪರಿಸಮಾಪ್ತಿ ಮಂಗಳ
ಮಹಾ ಶ್ರೀಶ್ರೀಶ್ರೀ

೩. ಶ್ರೀ ವಿರೂಪಾಕ್ಷ ಅಷ್ಟಕ

ಈ ಕೃತಿಯು ಹಂಪೆಯ ಅಧಿದೈವ ವಿರೂಪಾಕ್ಷನನ್ನು ಭಕ್ತಿ ಭಾವಗಳಿಂದ ಸ್ತುತಿಸುವುದಕ್ಕೆ ಮೀಸಲಾಗಿದೆ. ಅಂಧಕಾಸುರನ ಎದೆಯ ತುಳಿದವನು, ಕಂಜನಾಭನ ಸುತನ ಸುಟ್ಟವನು, ಹರಿಗೆ ಚಕ್ರವನಿಟ್ಟವನು, ಮರುಳು ವೇಷವ ತಾಳ್ದವನು, ಉರಗಾಭರಣ, ನಂಜುಗೊರಳ, ಭಾನುಕೋಟಿ ಪ್ರಕಾಶನ ಎಂದು ವೈವಿಧ್ಯಮಯವಾಗಿ ವಿರೂಪಾಕ್ಷನನ್ನು ವರ್ಣಿಸಲಾಗಿದೆ.ಕವಿಯು ಪ್ರತಿ ಪದ್ಯದ ಕೊನೆಗೆ ತಂದು ತೋರಮ್ಮ ದೇವ ಶ್ರೀ ವಿರೂಪಾಕ್ಷನಾ ಎಂದು ಭಾವುಕವಾಗಿ ಪ್ರಾರ್ಥಿಸಿರುವುದು ಭಕ್ತಿಯ ಮಹೋನ್ನತಿಗೆ ನಿದರ್ಶನವಾಗಿದೆ. ಈ ಅಷ್ಟಕದ ಪೂರ್ಣ ಪಾಠ ಹೀಗಿದೆ. [೮]

ಕರಿಮುಖನ ಪಿತನ ಜಗಧಿ ಪೂಜಿಪ
ಉರಗಭರಣ ತ್ರಿನೇತ್ರನಾ
ಸರಸಿಜಮುಖಿ ತಂದು ತೋರಮ್ಮ ದೇವ ಶ್ರೀ ವಿರೂಪಾಕ್ಷನಾ || ೧ ||

ಪುರಲಿ ಮರ್ದನ ಸುಕರ ದೇವನ
ಮರುಳು ವೇಷವ ತಾಳ್ದನಾ
ಹರುಷದಿಂದಲಿ ತಂದು ತೋರಮ್ಮ ದೇವ ಶ್ರೀ ವಿರೂಪಾಕ್ಷನಾ || ೨ ||

ಶರಧಿನೀರೊಳು ಉದಿಸಿದಾತನ
ಹರಿಗೆಚಕ್ರಮನಿತ್ತನಾ
ಹರುಷದಿಂದಲಿ ತಂದು ತೋರಮ್ಮ ದೇವ ಶ್ರೀ ವಿರೂಪಾಕ್ಷನಾ || ೩ ||

ಅಂಧಕಾಸುರನೆದೆಯ ತುಳಿದನ
ಕಂದುಗೊರಳ ಮಹಾತ್ಮನಾ
ಇಂದುಮುಖಿ ನೀ ತಂದು ತೋರಮ್ಮದೇವ ಶ್ರೀ ವಿರೂಪಾಕ್ಷನಾ || ೪ ||

ರಜತಪರ್ವತ ನಿಲಯನಾದಕ
ಅಜನ ಶಿರಕರಪಾತ್ರನಾ
ತ್ರಿಜಗದೊಡೆಯನ ತಂದು ತೋರಮ್ಮ ದೇವ ನೀ ವಿರೂಪಾಕ್ಷನಾ || ೫ ||

ಕಂಜನಾಭನ ಸುತನ ಸುಟ್ಟನ
ನಂಜುಗೊರಳ ಮಹಾತ್ಮನಾ
ಕಂಜದಾಮುಖಿ ತಂದು ತೋರಮ್ಮ ದೇವ ಶ್ರೀ ವಿರೂಪಾಕ್ಷನಾ || ೬ ||

ತಾನು ತಾನಾಗಿರ್ದ ದೇವನ
ಭಾನುಕೋಟಿ ಪ್ರಕಾಶನ
ಮಾನನಿಧಿ ನೀ ತಂದು ತೋರಮ್ಮದೇವ ಶ್ರೀ ವಿರೂಪಾಕ್ಷನಾ || ೭ ||

ನಂದಿವಾಹನನೇರಿ ಬಾಹನ
ಇಂದುಪಾರ್ವತಿಯರಸನಾ
ತಂದು ನೆಲಸಿರ್ದ ಹಂಪಿಯಾಳ್ದನ ದೇವ ಶ್ರೀ ವಿರೂಪಾಕ್ಷನಾ || ೮ ||

ಇತಿಶ್ರೀ ವಿರೂಪಾಕ್ಷ ಅಷ್ಟಕ ಪರಿಸಮಾಪ್ತಿ
ಮಹಾ ಶ್ರೀಶ್ರೀಶ್ರೀ ||

ಅಡಿಟಿಪ್ಪಣಿ

೧. ಎಂ. ಎಂ. ಕಲಬುರ್ಗಿ (ಸಂ) ಹರಿಹರನ ರಗಳೆಗಳು, ಪ್ರಸ್ತಾವನೆ ಪುಟ. ೬

೨. ಬಿ. ಬಿ. ಬಿರಾದಾರ ಮತ್ತು ಬಿ.ವಿ.ಯಕ್ಕುಂಡಿಮಠ (ಸಂ) ವೀರಶೈವ ಅಷ್ಟಕ ಸಂಪುಟ, ಪ್ರಸ್ತಾವನೆ ಪುಟ. ೧೦

೩. ಎಪಿಗ್ರಾಫಿಯಾ ಕರ್ನಾಟಿಕಾ ಸಂಪುಟ. ೮

೪. ಅಪ್ರಕಟಿತ ಕೃತಿಯಾಗಿದ್ದು, ಮೊದಲ ಬಾರಿಗೆ ಪರಿಷ್ಕರಣಗೊಂಡು ಇಲ್ಲಿ ಪ್ರಕಟಗೊಳ್ಳುತ್ತಿದೆ.

೫. ಶೇಷೇಂದ್ರಾಚಾರ್ಯರು ಈ ಕೃತಿಯನ್ನು ಕ್ರಿ. ಶ. ೧೯೨೧ರಲ್ಲಿ ಲಿಪಿಗೊಳಿಸಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ನೋಡಿ. ಹಿರಿಯಣ್ಣ ಕವಿಯ ಹಯರತ್ನಶ್ರೇಣಿ (ಸಂ. ಡಾ. ಎಫ್. ಟಿ. ಹಳ್ಳಿಕೇರಿ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೩

೬. ಕೋಳೂರು ಶಂಕರಕವಿಯ ಅಪ್ರಕಟಿತ ಕೃತಿಯಾಗಿದ್ದು, ಕರ್ನಾಟಕ ವಿ. ವಿ. ಮತ್ತು ಕನ್ನಡ ವಿ. ವಿ. ಹಸ್ತಪ್ರತಿ ಭಂಡಾರದಲ್ಲಿ ಈ ಕೃತಿಯ ಹಸ್ತಪ್ರತಿಗಳಿವೆ.

೭. ವೀರಶೈವ ಅಷ್ಟಕ ಸಂಪುಟದಲ್ಲಿ ತುಂಗಭದ್ರ ಅಷ್ಟಕ ಪ್ರಕಟವಾಗಿವೆ. ನೋಡಿ. ಪುಟ. ೧೬೭

೮. ಅದೇ. ವಿರೂಪಾಕ್ಷ ಅಷ್ಟಕ ಪುಟ. ೩೭

❖ ❖

೩

ಕರ್ನಾಟ ರಾಜ್ಯ ವೃತ್ತಾಂತ

(ಉತ್ತರ ಭಾಗ)

ಡಾ. ಕೆ.ರವೀಂದ್ರನಾಥ

ವಿಜಯನಗರದ ಅವನತಿಗೆ ಶ್ರೀಕಾರ ಹಾಕಿದ ತಾಳಿಕೋಟೆ (ರಕ್ಕಸ - ತಂಗಡಿಗೆ) ಯುದ್ಧದ ನಂತರದ ರಾಜಕೀಯ ಸ್ಥಿತಿಗತಿಯನ್ನು (ಚರಿತ್ರೆಯನ್ನು) ವಿವರಿಸುವ "ಕರ್ನಾಟ ರಾಜ್ಯ ವೃತ್ತಾಂತಮು" ಎಂಬ ತೆಲುಗು ಭಾಷೆಯ ಕಾಗದ ದಾಖಲೆಯು ಮದನಪಲ್ಲಿ ಗ್ರಾಮದಲ್ಲಿ ದೊರೆತಿದೆ. ೩೯೮೭ಸಂಖ್ಯೆಯಲ್ಲಿ ಆಂಧ್ರಸಾಹಿತ್ಯ ಪರಿಷತ್ತು ಭಂಡಾರದಲ್ಲಿ ಇದನ್ನು ಸಂರಕ್ಷಿಸಲಾಗಿದೆ. ಈಗಾಗಲೇ ಆಂಧ್ರಸಾಹಿತ್ಯ ಪರಿಷತ್ಪತ್ರಿಕೆ ಸಂಪುಟ-೧೦, ಸಂಚಿಕೆ-೪, ಪುಟ ೧೯೩-೨೦೪ರಲ್ಲಿ ಪ್ರಕಟಿಸಿರುವ ಈಗ ದಾಖಲೆಗೆ ಸ್ಥಳೀಯ ಚರಿತ್ರೆಯನ್ನು ಕಟ್ಟಿಕೊಡುವ ಮಹತ್ವ ಸಲ್ಲುತ್ತದೆ. ಐತಿಹ್ಯ, ಪುರಾಣ ಪೂರ್ವಪರ ಸಂಬಂಧಗಳನ್ನು ತನ್ನ ಒಡಲಲ್ಲಿ ಹುದುಗಿಸಿಕೊಂಡು ರಚನೆಯಾದ ಇದು ಉತ್ತರಾರ್ಧವನ್ನೊಳಗೊಂಡ ಅಪೂರ್ಣ ದಾಖಲೆ. ಇದಕ್ಕೆ ಕರ್ನಾಟ ರಾಜ್ಯ ವೃತ್ತಾಂತ ಎಂಬ ಹೆಸರು ಅನ್ವರ್ಥಕವಾಗಿದೆ. ಧರ್ಮ-ಸಾಹಿತ್ಯ-ಸಂಸ್ಕೃತಿಯ ಪುನರುತ್ಥಾನಕ್ಕೆ ಸ್ಥಾಪನೆಯಾದ ವಿಜಯನಗರ ಸಾಮ್ರಾಜ್ಯವನ್ನು ಅದನ್ನಾಳಿದ ಅರಸರನ್ನು ಕರ್ನಾಟಕ (ಕನ್ನಡ) ಸಾಮ್ರಾಜ್ಯ, ಕರ್ನಾಟಕ (ಕನ್ನಡ) ರಾಜ್ಯ ರಮಾರಮಣ ಎಂಬ ಹೆಸರುಗಳಿಂದ ಸಂಬೋಧಿಸುತ್ತಿದ್ದುದನ್ನು ಇಲ್ಲಿ ಅನುಲಕ್ಷಿಸಬಹುದು.[೧]

೧. ದಾಖಲೆಯೋಕ್ತ ಅರಸರುಗಳ ವೃತ್ತಾಂತ

ಪ್ರಸ್ತುತ ದಾಖಲೆ ವೀರವೆಂಕಟನ ಆಳ್ವಿಕೆಯಿಂದ ಪ್ರಾರಂಭವಾಗಿ ಕೆಲವು ಅರಸರುಗಳ ಆಳ್ವಿಕೆ ಹಾಗೂ ವ್ಯಕ್ತಿತ್ವವನ್ನು ಹೀಗೆ ನಿರೂಪಿಸುತ್ತದೆ.

೧. ತೋರಕಂಟಿ ನರಸರಾಜ : ಈತ ತಿಮ್ಮಮ್ಮನೆಂಬವಳನ್ನು ಮದುವೆಯಾಗುತ್ತಾನೆ.

೨. ಶ್ರೀ ರಂಗರಾಜು : ನಂದ್ಯಾಲ ಭಾಗವನ್ನು ಆಳ್ವಿಕೆಮಾಡಿಕೊಂಡಿದ್ದ ಈತನು ತೋರಕಂಟಿನರಸರಾಜರ ಮಗ.

೩. ರಾಮರಾಜ : ನಂದ್ಯಾಲವನ್ನು ರಾಜ್ಯಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಅಂಬಳಾದೇವಿ ಮಗನಾದ ಈತ ಕಂದನೂಲು (ಈಗಿನ ಕರ್ನೂಲು) ರಾಜ್ಯವನ್ನು ಆಳುತ್ತಿದ್ದನು. ಈತನಿಗೆ ತಿಮ್ಮರಾಜು, ಶ್ರೀರಂಗರಾಜು, ರಾಮರಾಜು, ತಿರುಮಲರಾಜು ಹಾಗೂ ವೆಂಕಟಪತಿರಾಜು ಎಂಬ ಐದುಜನ ಮಕ್ಕಳು ಜನಿಸಿದರು. ಇವರಲ್ಲಿ ರಾಮರಾಜು ಕೃಷ್ಣರಾಯರ ಪಟ್ಟಣವನ್ನು, ತಿರುಮಲರಾಜು ಯುವರಾಜ ಪಟ್ಟವನ್ನು ವಹಿಸಿಕೊಂಡು ಆಳಿದರು. ವೆಂಕಟಪತಿ ಕರ್ನೂಲು ರಾಜ್ಯವನ್ನು ತಿಮ್ಮರಾಜ ರಾಯವೇಲೂರನ್ನು, ಶ್ರೀರಂಗರಾಜ ಗುರ್ರಂಕೊಂಡ, ಬೆಲ್ಲಂಕೊಂಡ, ಕಂಭಂ, ಕಾಕರ್ಲ ಹಾಗೂ ಪೆನುಗೊಂಡವನ್ನು ಆಳುತ್ತಿದ್ದರು.

೪. ನಾರಸಿಂಹರಾಯ : ಕುತುಬ್‌ಶಾಹಿ ಗಜಪತಿಯರ ಮೇಲೆರಗಿದ ಈತ ತೋರಕಂಟಿ ನರಸರಾಜರ ಮೂರನೆಯ ಮಗನಾಗಿರಬೇಕು. (ಅಂದರೆ ಚೆಲ್ಲಾದೇವಿಯ ಮಗ) ಹೀಗಾಗಿ ತೋರಕಂಟಿ ನರಸರಾಜರು ತಿಮ್ಮಮ್ಮ ಅಂಬಳಾದೇವಿ ಹಾಗೂ ಚೆಲ್ಲಾದೇವಿಯರೆಂಬ ಮೂವರನ್ನು ಮದುವೆಯಾಗಿದ್ದಂತೆ ತೋರುತ್ತದೆ.

೫. ಬುಕ್ಕರಾಜ : ಕುತುಬ್ ಶಾಹಿಗಳನ್ನು ಹಿಮ್ಮೆಟ್ಟಿಸುವಲ್ಲಿ ನಾರಸಿಂಹರಾಯರಿಗೆ ಸಹಾಯಕನಾಗಿ ನಿಂತ ಈತನು ನಾರಸಿಂಹರಾಯರಿಂದ "ಲಕ್ಷರಾಜ್ಯವಲ್ಲದೇ | ಅರೆನೀಡು| ಚೆಲುಮನೂರು | ಎನ್ನುವ ಸ್ಥಳಗಳನ್ನು ಎರಡು ಲಕ್ಷಗಳ ರಾಜ್ಯದ ಜಹಗೀರು ಕೊಟ್ಟು" ಅಚ್ಯುತಾರಾಯರು ಪ್ರೌಢದೇವರಾಯರ ಸಮನಾಗಿ ಕೂಡಿಸುವುದಲ್ಲದೆ ವೆಲ್ಗೋಟಿ ಯಾಚಮ ನಾಯಕ, ಪೆನ್ನುಸಾನಿ ತಿಮ್ಮನಾಯಕ ವಿಶೇಷವಾಗಿ ಹಂಡೆ ಹಿರೇಬಸಪ್ಪ ನಾಯಕನ ವಜೀರ್‌ಗಿಂತ ಅತಿಶಯವಾಗಿ ನಡೆಸಿಕೊಂಡು ಸನ್ಮಾನ ಮಾಡಿಸಿಕೊಂಡನು. ಈತನಿಗೆ ದೊಡ್ಡರಾಮಪ್ಪಯ್ಯನೆಂಬ ಮಗನು ಜನಿಸಿದ್ದನು.

ಇವರಲ್ಲಿ ಕೃಷ್ಣರಾಯ ಪಟ್ಟಣವನ್ನು ಆಳುತ್ತಿದ್ದ ರಾಮರಾಜ ೫೬ ವರ್ಷಗಳ ಕಾಲ ರಾಜ್ಯಭಾರ ಮಾಡಿದ ರಾಮರಾಜರು ಅವುಕಿ ವಿಠಲರಾಜ, ಕಂದನೂಲು (ಕರ್ನೂಲು) ತಿಮ್ಮರಾಜ, ಕುಮಾರ ಶ್ರೀರಂಗರಾಜ, ಭೀರವೋಲುರಮಣರಾಜ, ಅಪರಿಚಿಂತಲ ವೆಂಕಟರಮಣ ರಾಜ, ಸಹೋದರರಾದ ಶ್ರೀರಂಗರಾಜ (ಕೋನಮರಾಜ) ತಿರುಮಲರಾಜ ಮತ್ತು ವೆಂಕಟಪತಿರಾಜ, ಮಾಲ್ರಾಜ ಪೆದ್ದ (ದೊಡ್ಡ)ವೋಬರಾಜ, ವೋಚಿರಾಜ,

ವೆಂಗಮರಾಜ, ಗುತ್ತಿ ವೆಂಕಟಪತಿರಾಜ, ಕುರುಚೇಟಿ ಚಿನ್ನ(ಸಣ್ಣ) ಗೋಪಾಲರಾಜ ಇವರೆಲ್ಲರೊಂದಿಗೆ ಋಷ್ಯಮೂಕದ ಹತ್ತಿರ ನದಿದಾಟಿ ಹನುಮನ ಶಲನದಲ್ಲಿ ಇಳಿದು, ಅಂಜನಾದೇವಿ ಪರ್ವತದ ಹತ್ತಿರದ ಅರಣ್ಯ ಬೇಧಿಸಿ ಪುರಪ್ರತಿಷ್ಠೆ ಮಾಡಿಸಿ ಚಿನಮೆಗೋಟಿ (ಸಣ್ಣಕೋಟಿ); ಪೆದಮೆಕೋಟಿ (ದೊಡ್ಡಕೋಟಿ), ಚಂಚಲಕೋಟಿ ಎಂಬ ಕೋಟೆಗಳನ್ನು ನಿರ್ಮಿಸಿ ಮೂರುಸಾವಿರ ಆನೆಗಳೊಂದಿಗೆ ಆ ಪ್ರದೇಶವನ್ನು ಶ್ರೀರಂಗರಾಜನಿಗೆ (ಕೋನವಮರಾಜ) ಅಧೀನ ಮಾಡಿದನು. ಸಂತತಿಯಿಲ್ಲದ ಕಾರಣ ತಮ್ಮನಾದ ತಿರುಮಲರಾಯರಿಗೆ ಪಟ್ಟವನ್ನು ಕಟ್ಟಿದನು. ತಿರುಮಲರಾಯನಿಗೆ ರಘುನಾಥರಾಜ, ಶ್ರೀರಂಗರಾಜ, ವೆಂಕಟಪತಿರಾಜ ಹಾಗೂ ರಾಮರಾಜರೆಂಬ ನಾಲ್ಕುಜನ ಮಕ್ಕಳು ಅವಿಭಕ್ತ ಕುಟುಂಬಿಗಳಾಗಿ ಜೀವಿಸುತ್ತಿದ್ದರು. ಹೀಗೆ ಅರವತ್ತು ವರ್ಷ ಸಕಲ ಕ್ಷೇತ್ರದಲ್ಲಿ ಪರಿಣಿತಿಯನ್ನು ಹೊಂದಿದ್ದ ರಾಮರಾಯ (ಅಳಿಯ ರಾಮರಾಯ ಇಲ್ಲವೇ ರಾಮಪ್ಪಯ್ಯ)ನು ರೋಗ ರುಜಿನಗಳಿಂದ ಮನೆಯಲ್ಲಿ ಸಾಯಬಾರದೆಂದು ಯೋಚಿಸಿ ಕ್ಷತ್ರೀಯನಾಗಿ ರಣರಂಗದಲ್ಲಿ ಹೋರಾಡಿ ಮಡಿಯಲು ಇಚ್ಛಿಸಿದನು.

ಪ್ರಸ್ತುತ ದಾಖಲೆಯ ಪ್ರಕಾರ "ಮಲಕಿ ವಿಭುರಾಮ ಎಂಬುವವನು ಗೋಲ್ಕೊಂಡದ ಕಿಲ್ಲೇದಾರನು ಹಾಡಿನಲ್ಲಿ ಅಸಾಧಾರಣ ಪ್ರಜ್ಞೆಯುಳ್ಳವನು | ಅವನನ್ನು ಕರೆಯಿಸಿ ಎಲವೊ ನಿನ್ನನ್ನು ಬಾಲ್ಯದಿಂದ ಸಾಕಿ ಬೆಳೆಸಿದ್ದೇನೆ. ನಮ್ಮ ಚಿತ್ತಾನುಸಾರ ನಡೆಯಬೇಕೆಲೊ ಎಂದು ಬುದ್ಧಿವಾದ ಹೇಳಲು ಅವನು ಎಂದ ವಿವರ ದೇವರುಗಳ ಆಜ್ಞೆಯಲ್ಲಿ ಗೋಲ್ಕೊಂಡ ರಾಜ್ಯವನ್ನು ವಿಚಾರಮಾಡಿ ನಿಮ್ಮ ಮೇಲೆ ಶಿರಸಾವಹಿಸಿ ಇದ್ದೇನೆ ನನ್ನ ಶರೀರ ನಿಮ್ಮ ಅಧೀನ. ನೀವು ಯಾವ ಹುಕ್ಕುಂ ಹೊರಡಿಸುತ್ತಿರೋ ಆ ದಾರಿಯಲ್ಲಿ ಹಾಜರಾಗುತ್ತೇನೆ. ಆದರೆ ಈಗ ನಮ್ಮ ಶರೀರ ಯುದ್ಧದಲ್ಲಿ ಬಿಡಬೇಕೆಂದು ಹುನ್ನಾರವಿದೆ ಯಾವ ಕಾರಣಕ್ಕೂ ತುರುಕರಿಗೆ ರೋಷಬರುವಂತೆ ಡಿಲ್ಲಿಯಲ್ಲಿ ನಮ್ಮ ಹೆಸರಿನಲ್ಲಿ ಧ್ವಜಸ್ತಂಭವನ್ನು ಹಾಕಿ, ಮಕ್ಕಾದಲ್ಲಿ ಹಂದಿಯನ್ನು ಕೊಯ್ದು ಮೊಗಲರ ಲಷ್ಕರು ತರಬೇಕೆಂದು ಕಳಿಸಲಾಗಿ" ಆ ಪ್ರಕಾರ ಮಲಕಿ ವಿಭುರಾಮ ಮಾಡಲಾಗಿ ರಕ್ಕಸತಂಗಡಿ ಯುದ್ಧಕ್ಕೆ ಆದಿಯಾಯಿತೆಂದು ಇದು ತಿಳಿಸುತ್ತದೆ.

೨. ಯುದ್ಧೋಪಕರಣಗಳು ಹಾಗೂ ಸಿಬ್ಬಂದಿ ವೃತ್ತಾಂತ

ಯುದ್ಧದಲ್ಲಿ ಪಾಲ್ಗೊಳ್ಳಲು ಸರದಾರರು, ದಳವಾಯಿಗಳು, ಮನ್ನೆರಿಗಳು, ನಾಯಕ ವಾಡಿಗಳಲ್ಲದೆ, ಭೋಜರಾಘವರಾಜ, ಗೊಬ್ಬೂರು ಅಚ್ಯುತ ರಾಜ ಆತನ ಮಗ ದಾನವ ರಾಜ, ತರವೇಲ ಸಂಜೀವೆಜನ ತಾಲರಾಜ, ಬಲಗೈ ವಿಜಯನಾರಾಯಣರಾಜ, ಕುಮಾರಿ ಪಟ್ಟಾಭಿರಾಜ, ನಂದ್ಯಾಲಪೆನುಗೊಂಡ ಪತಿ ತಿರ್ನಾತರಾಜ, ಬೀರೋಲುರಾಘುವಾರಾಜ ಔಕು ಗೋಪಲರಾಜ, ದೊಡ್ಡತಿಮ್ಮರಾಜ, ಗುತ್ತಿವಿಠಲರಾಜ ಮುಂತಾದವರೊಂದಿಗೆ ಇಪ್ಪತ್ತುಸಾವಿರ ರಾವಿಲ್ಲ ಬುಚ್ಚಿನಾಯುನಿ ಅವರ ಹತ್ತುಸಾವಿರ ಭರ್ಚಿಯವರು, ಹತ್ತುಸಾವಿರ ತುಪಾಕಿ, ಜಗದೇವಿ ರಾಮಪ್ಪಯ್ಯನಾಯುಡು ಅವರ ಹದಿನೇಳು ಸಾವಿರ, ಎಂಟುಸಾವಿರ

ತುಪಾಕಿ ತುರುಕರು, ಯಾಕೊಬುಸಾಹೇಬ ಎಂಬ ಜಮೇದಾರನು ಎಂಭತ್ತು ಸಾವಿರ ಕುದುರೆ, ಮಹಾರಾಷ್ಟ್ರರ ಬೊಬ್ಬೋಜಿರಾಜ ಅವರ ಕುದುರೆಪೌಜುಗಳಿಂದ ಯುದ್ಧಸನ್ನದರಾದುದನ್ನು ದಾಖಲೆ ತುಂಬಾ ಉತ್ಸಾಹದಿಂದ ವಿವರಿಸುತ್ತದೆ. ವಿಶೇಷವಾಗಿ ಇಪ್ಪತ್ತು ಸಾವಿರ ಆನೆಗಳಲ್ಲಿ ಕೊಂಡಲರಾಯುಡು ಎಂಬ ಆನೆಗಳ ರಾಜ, ಶೇಷಾಚಲ, ಚತುರ್ದಂತಿ ಎಂಬ ಕಾಸಾ ಆನೆಗಳು ಹಾಗೆಯೇ ಪಂಚಕಲ್ಯಾಣಿ, ಅಷ್ಟಮಂಗಳಿ, ಹಗಲುಚುಕ್ಕೆ ಹಾಗೂ ಜಯಲಕ್ಷ್ಮಿ ಎನ್ನುವ ಕಾಸಾ ಕುದುರೆಗಳೊಂದಿಗೆ ರಾಮರಾಯರು ಯುದ್ಧ ಮಾಡಿದ್ದನ್ನು ತಿಳಿಸುತ್ತದೆ.

೩. ಪಾಚ್ಚಾಯಿ (ಮುಸ್ಲಿಂ)ಯವರ ಹೃದಯವಂತಿಕೆಯ ವೃತ್ತಾಂತ

ರಕ್ಕಸತಂಗಡಿ ಯುದ್ಧದ ನಂತರ ಪಾಚ್ಚಾಯಿಯವರು ತಮ್ಮ ಪೌಜಿಗೆ ಹೀಗೆ ತಾಕತ್ತು ಮಾಡುತ್ತಾರೆ "ವಿಜಯನಗರ ಪಟ್ಟಣವನ್ನು ಬೇರ್ಪಡಿಸಬಾರದೆಂಬ ಹದ್ದು ಏರ್ಪಡಿಸಿ ರಾಮರಾಯರ ಮಕ್ಕಳು ಯಾರೇ ಆಗಲಿ ಇದ್ದಾರಾ ಎಂದು ವಿಚಾರಿಸಿದರಾದ್ದರಿಂದ ತಿರುಮಲರಾಯರ ಮಕ್ಕಳು ಬಂಧುಗಳು ಯಾವತ್ತೂ ಜನ ವಿಜಯನಗರ ಪಟ್ಟಣವನ್ನು ಬಿಟ್ಟು ರಾಯವೆಲ್ಲೂರಿಗೆ ಹೋದರು ಎಂದು ಹೇಳಲಾಗಿ ಇಲ್ಲಿ ಆನೆಗುಂದಿಯಲ್ಲಿದ್ದ ರಾಮರಾಯರ ಅಣ್ಣ ಕೋನೇಟಿ ರಾಜ ಅವರಿಗೆ ಆನೆಗುಂದಿಯ ಆವ ಪಂಚಗ್ರಾಮಾದಿಗಳು, ವುಭಯ ಎರಡು ಲಕ್ಷ ವರಹಗಳ ರಾಜ್ಯಕೊಟ್ಟು ಪಾಚ್ಚಾಯಿಯವರು ರಾಯವೆಲ್ಲೂರಿಗೆ ಹೋಗಿ ಸಣ್ಣವೆಂಕಟಪತಿರಾಯರಿಗೆ ಪಟ್ಟಾಭಿಷೇಕ ಮಾಡಿಸಿ ತೆಗೆದುಕೊಂಡ ರಾಜ್ಯವನ್ನು ಮತ್ತೆ ಕೊಟ್ಟು ರಾಯವೆಲ್ಲೂರನ್ನು ರಾಜಧಾನಿಮಾಡಿ ಪಾಚ್ಚಾಯಿಯವರು ತಮ್ಮ ದೇಶಕ್ಕೆ ಪುನರ್ಗನ ಮಾಡಿದರು" ಎಂಬುದಾಗಿ ದಾಖಲೆ ಉಲ್ಲೇಖಿಸುತ್ತದೆ.

೪. ಆನೆಗುಂದಿ ಅರಸರುಗಳ ವೃತ್ತಾಂತ

ವೇಲೂರು ಸಿಂಹಾಸನಕ್ಕೆ ಪ್ರಭುಗಳಿಲ್ಲವಾದ್ದರಿಂದ ಆನೆಗುಂದಿಯ ಕೋನಮರಾಜನನ್ನು ಕಂಡು ಅವರ ಮಕ್ಕಳಾದ ವೆಂಕಟಪತಿರಾಜ, ರಾಯಲಯ್ಯ, ಶ್ರೀರಂಗರಾಯ ಈ ಮೂವರಲ್ಲಿ ದೊಡ್ಡಮಗ ವೆಂಕಟಪತಿರಾಯ ರಾಯವೇಲೂರಿನ ಸಿಂಹಾಸನಕ್ಕೆ ಹೋಗುತ್ತಾನೆ. ಆದರೆ ಈತ ದಕ್ಷ ಆಡಳಿತಗಾರನಾಗಿರದೆ, ಅವಿವಾಹಿತ ಜೀವನ ನಡೆಸಿ ಅಪಕೀರ್ತಿ ಹೊಂದಿ ೩೦ ವರ್ಷ ಆಳ್ವಿಕೆ ನಡೆಸಿ ತೀರಿಕೊಂಡನು. ಈತನ ತರುವಾಯ ಶ್ರೀರಂಗರಾಯರು ರಾಯವೇಲೂರು ಸಿಂಹಾಸನದ ಅಧಿಕಾರ ವಹಿಸಿಕೊಂಡರು. ಅತಿಚಾರನಾದ ಈತನಿಂದ ಅನ್ಯಾಕ್ರಾಂತವಾಗಿ ರಾಜ್ಯ ಬಿದನೂರಿನ ಆಳ್ವಿಕೆಗೆ ಒಳಗಾಗುತ್ತದೆ. ನಂತರದಲ್ಲಿ ರಾಯಲಯ್ಯನವರಿಗೆ ಸಂತತಿಯಿಲ್ಲದ ಕಾರಣ ಪುನ: ಶ್ರೀರಂಗರಾಯರು ಆನೆಗುಂದಿ ಸಿಂಹಾಸನಕ್ಕೆ ಬಂದು ಗಗನಮಹಲು, ಸೀತಾರಾಮನ ಚಾವಡಿ, ಅಲ್ಲದೆ ದೊಡ್ಡನಗರ ಕಟ್ಟಿಸಿಕೊಂಡಿದ್ದರು. ಮಕ್ಕಳಾದ ಚಂಡ್ರಾಜಯ್ಯ ಹಾಗೂ ದೊಡ್ಡ ವೆಂಗಣ್ಣಯ್ಯನವರು ೨೦ ವರ್ಷದ ಪ್ರಾಯದವರಾಗಿದ್ದರು. ಇವರಲ್ಲಿ ಚಂಡ್ರಾಜಯ್ಯನವರಿಗೆ ಪಟ್ಟಾಭಿಷೇಕ ನೆರವೇರಿಸಿ ಶ್ರೀರಂಗರಾಯರು ಸ್ವರ್ಗಸ್ಥರಾದರು.

೫. ಸಣ್ಣಪುಟ್ಟ ಪಾಳೇಗಾರರ ಪಾಲಾದ ಕರ್ನಾಟ (ವಿಜಯನಗರ) ರಾಜ್ಯ ವೃತ್ತಾಂತ

ಬುಕ್ಕರಾಯರ ಕಮ್ಮವೆಲ, ಪೆನುಗೊಂಡದ ಬಂಡ್ರೌತು, ಕನಕಗಿರಿ ದೊಡ್ಡ ಕಡಚಿನಾಯುಡು, ಗುಡೇಕೋಟೆ ಸಣ್ಣ ಜಂಚುನಾಯಕರೆಲ್ಲ ಸೇರಿ ಬುಕ್ಕಸಾಗರದಲ್ಲಿ ಮುಕ್ಕಾಂ ಮಾಡಿ ಅಲ್ಲಿಯ ಜನರಿಗೆ ಉಪದ್ರವ ನೀಡಿದರು. ಇತ್ತ ಶಾಜಿರಾವು ಅವಾಂತರದಿಂದ ದೇಶಾಂತರ ಹೋಗಿ ೨೦ ವರ್ಷ ಕತ್ತೆರಮಲ ಹಾಗೂ ಪೋತುಗಲ್ಲುಗಳಲ್ಲಿ ಕಾಲಕಳೆದ ರಾಮಪ್ಪಯ್ಯ ತಿಮ್ಮಪ್ಪಯ್ಯರು. ಸುಗ್ರೀವರ ಬೀಡಾದ ಹಂಪಿ ಪರಿಸರದವರೆಂದೂ, ನಿಮ್ಮನ್ನು ಆಳಿದವರೆಂದೂ ಪೆಮ್ಮಸಾನಿ ವೆಂಗಟಪತಿನಾಯನಿಗೆ ಆಂಜನೇಯಸ್ವಾಮಿ ಕನಸಿನಲ್ಲಿ ಅನುಗ್ರಹಿಸಲು ಅವರನ್ನು ಕರೆತರುವುದಕ್ಕಾಗಿ ನಾಗನ್ನರು ಚೆಂಚುರಾಮಣ್ಣ, ಉಪ್ಪಿನಕಾಯಿ ತಿಮ್ಮನ್ನ, ವೆಲುಗೋಟಿ ಓಬನ್ನರ ನೇತೃತ್ವದಲ್ಲಿ ತಮ್ಮ ರಂಗಪ್ಪನಾಯಕನೊಂದಿಗೆ ವೆಂಕಟಪತಿನಾಯಿನಿ ೨೦ ಜನರೊಂದಿಗೆ ೪ ಸಾವಿರ ರೂಪಾಯಿ ಖರ್ಚಿಗೆ ತೆಗೆದುಕೊಂಡು ಬಂಡಿಯಲ್ಲಿ ಪೋತುಗಲ್ಲಿಗೆ ಪ್ರಯಾಣಿಸುತ್ತಾರೆ. ಪೋತುಗಲ್ಲಿದ್ದ ರಾಮಪ್ಪಯ್ಯ, ತಿಮ್ಮಪ್ಪಯ್ಯನವರಿಗೆ ವರ್ತಮಾನವನ್ನು ತಿಳಿಸಿ ಬಂದು ಯುದ್ಧ ಸನ್ನದ್ಧರಾದರು. ಹೀಗೆ ರಕ್ಕಸ ತಂಗಡಿಗೆ ಯುದ್ಧದ ನಂತರ ಸ್ಥಳೀಯ ಪಾಳೇಗಾರರ ಆಳ್ವಿಕೆಗೆ ಒಳಪಟ್ಟು ವಿಜಯನಗರದ ಕೊನೆಗಾಲದ ಅವಸ್ಥೆಯನ್ನು ಪ್ರಸ್ತುತ ದಾಖಲೆ ಬಿಚ್ಚಿಡುತ್ತದೆ.

ಅಪೂರ್ಣ ಕೃತಿಯೆನ್ನುವುದನ್ನು ಬಿಟ್ಟರೆ ಸ್ಥಳೀಯ ಅಧಿಕಾರಿವರ್ಗದವರ, ಸೈನಿಕರ ಸಮೂಹದ ಹಾಗೂ ಯುದ್ಧ ಪರಿಕರಗಳಲ್ಲದೆ, ಆನೆ, ಕುದುರೆ, ಕೈಯಾಳುಗಳ ಬಗ್ಗೆ ಯಥಾರೀತಿಯಲ್ಲಿ ವಿವರಿಸುವ ಪ್ರಸ್ತುತ ತೆಲುಗುಭಾಷೆಯ ದಾಖಲೆಯನ್ನು ಇತಿಹಾಸತಜ್ಞರ ಅವಗಾಹನೆಗಾಗಿ ಕನ್ನಡದಲ್ಲಿ ಸಂಪಾದಿಸಿಕೊಡಲಾಗಿದೆ.[೨]

ಶ್ರೀರಸ್ತು

ಶ್ರೀಮದ್ ರಾಜಾಧಿರಾಜ ತೇಜೋನಿಧಿ ರಾಜಕಂದರ್ಪ ರಾಜಕಂಠೀರವ ಅರಿರಾಯರ ಗಂಡಾಂಕ ರಾಜಮನೋ ಭಯಂಕರ | ಶಶಿವಂಶಕುಲಪಾವನಾ | ಧಾಮೊ | ಆತ್ರೇಯಗೋತ್ರ ಆಪಸ್ತಂಭ ಸೂತ್ರ ರಮಣಚರಣಕಮಲ ನಿಕೇತನ ಪೂರ್ವ ಸಿಂಹಾಸನೋದ್ಧಾರಣ ಶ್ರೀರಾಜ ಪರಮೇಶ್ವರ | ಯೇಕಪವಿತ್ರೋದಯ | ಶ್ರೀಮದ್ರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರವೆಂಕಟ | ಪಿನ್ನಮಕಾಕರ್ಲ ರಾಜ್ಯದಲ್ಲಿಯಾಗಲೀ ಗುಂಡಾಂಡವೆಂಬ ಪಟ್ಟಣ ಎಂಬುದು ಲಕ್ಷರಾಜ್ಯವನ್ನು ತನ್ನಲ್ಲಿ ಹಾಕಿಕೊಂಡು ಎಲ್ಲ ಬಾಂಧವರೊಂದಿಗೆ ರಾಜ್ಯಭಾರ ಮಾಡುತ್ತಿರೆಲು ತೊರಕಂಟ್ಟಿ ನರಸರಾಜುರ ತಿಮ್ಮಮ್ಮ ಅವರನ್ನು ವಿವಾಹಮಾಡಿಕೊಂಡು ಯೀ ಅಮ್ಮನವರಿಂದ ಶ್ರೀರಂಗರಾಜು ಎಂಬ ಮಗ ನಂದ್ಯಾಲ ಭಾಗವನ್ನು ಹಾಕಿಕೊಂಡಿದ್ದರು. ಅಂಬಳಾದೇವಿ | ಚೆಲ್ಲಾದೇವಿ | ಆ ನಂದ್ಯಾಲವನ್ನು

ರಾಜಧಾನಿಯಾಗಿ ಮಾಡಿಕೊಂಡು ಆಳುತ್ತಿದ್ದರು। ಅವರ ಮಗ ರಾಮರಾಜು ಎಂಬುವವರು। ಕಂದನೂಲು (ಇಂದಿನ ಕರ್ನೂಲು) ರಾಜ್ಯವನ್ನು ಆಳುತ್ತಿದ್ದನು । ಮೂರನೇಯವನು ನಾರಸಿಂಹರಾಯನು ಕುತುಬ್‌ಶಾಹಿ, ಗಜಪತಿಯವರ ಮೇಲೆರಗಿದನು । ಯೀ ಬುಕ್ಕರಾಜನನ್ನು । ನಾಲ್ಕು ಸಾವಿರ ಮುರಿಕಿನಾಡು ರಾಜರಿಕೆಯನ್ನೂ । ಎರಡು ಸಾವಿರದ ಇನ್ನೂರು ಕ್ರಮದ ಸಂಬಂಧಿಕರನ್ನು । ಅಳಿಯಂದಿರನ್ನೂ । ಮಕ್ಕಳೂ ಸೇರಿ ನಾರಸಿಂಹ ಅವರೊಂದಿಗೆ ಡಿಲ್ಲಿಯವರೆಗೆ ಆಕ್ರಮಿಸಿದರು ।

ಕುತುಬ್‌ಶಾಹಿ ಪಾಚ್ಛಾಯಿ ಅವರ ಬಲಕುಂದಿದಂತೆ ಗಜಪತಿಯವರ ಪೌಜಿಗೆ ಸಹಾಯಕ್ಕೆ ಬಂದು ಯುದ್ಧ ಮಾಡಲಾಗಿ ರಾಯರ ಪೌಜು ವಾಪಸ್ಸು ಬಂದು ನರ್ಮದಾತೀರವನ್ನು ಸೇರುವಾಗ, ಬುಕ್ಕರಾಯರು ಸ್ವಜನ ಪೌಜಿನಿಂದ ಎದುರಿಗೆ ನಿಂತು ಕುತುಬ್ ಶಾ ಅವರನ್ನು ಗರ್ವಭಂಗಮಾಡಿ ಫಲಾಯನ ಮಾಡಿಸಿದ ಇದರಿಂದ ರಾಯರಿಗೆ ಶ್ರೇಯಸ್ಸು ಲಭಿಸಿತು. ಆದ್ದರಿಂದ ನಾರಸಿಂಹರಾಯರು ಮೆಚ್ಚಿ ಇವರಿಗೆ ಲಕ್ಷ ರಾಜ್ಯವಲ್ಲದೇ। ಅರೆವೀಡು । ಚೆಲಮನೂರು । ಎನ್ನುವ ಸ್ಥಳಗಳನ್ನು ಎರಡುಲಕ್ಷಗಳ ರಾಜ್ಯದ ಜಹಗೇರು ಕೊಟ್ಟು ನೀವು ನಮ್ಮ ಸಮ್ಮುಖದಲ್ಲಿ ಮರ್ಯಾದೆ ನೀಡಿ, ನಮ್ಮ ಮಕ್ಕಳಾದ ಅಚ್ಯುತರಾಯರು। ಪ್ರೌಢದೇವರಾಯರು। ಇವರ ಸಮಾನವಾಗಿ ಕೂಡಿಸುವುದಾಗಿ ನಿರ್ಧರಿಸಿ। ನಮ್ಮ ಪೌಜಿಗೆ ಮೊದಲ ಝುಂಡಾ ನಡೆಸುವುದಾಗಿ ನಿರ್ಣಯಿಸಿ ಕಳುಹಿಸಿದ ಬಳಿಕ । ಈ ಎರಡು ಸರ್ಕಾರ ಮಾಡಿಕೊಂಡು ಮಂದೀಲು ಹೋಜರ್ಲಗಳಿಗಿಂತ ಹೆಚ್ಚಾಗಿ ವೆಲ್ಗೋಟಿ ಯಾಚಮನಾಯನ ಅವರು । ಪೆನ್ನುಸಾನಿ ತಿಮ್ಮಾನಾಯನ ಅವರು । ಯೀ ನಾಲ್ಕು ಮಂಡಲಗಳಿಗಿಂತ ಹಂಡೆ ಹಿರೇಬಸಪ್ಪನ ನಾಯಕನ ವಜೀರಿಗಿಂತ ಅತಿಶಯವಾಗಿ । ನಡೆಸುತ್ತಿದ್ದಾರೆ। ಇದರ ನಿಮಿತ್ತವಾಗಿ। ಸ್ವಜನ ಬಂಧು ನಾಲ್ಕುಮಂದಿ ಹಿರಿಯರನ್ನು ಕರೆಯಿಸಿ ಏಕಾಂತವನ್ನು ಮಾಡಿ, ಅವರೊಂದಿಗೆ । ರಾ॥ ಬುಕ್ಕರಾಜರು ಹೇಳಿದ ವಿವರ ।

"ನಾರಸಿಂಹರಾಯರು ಬಹುಮಾನ ಪುರಸ್ಕಾರವಾಗಿ। ನಮಗೆ ಸನ್ಮಾನ ಮಾಡಿದ್ದಾರೆ ಆದ್ದರಿಂದ ನೀವು ನಾಲ್ಕು ಮಂದಿ ದಯಾ ವಿಶೇಷತೆಯೊಂದಿಗೆ ಪ್ರೀತಿಗೆ ಪಾತ್ರರಾಗಿದ್ದೀರಿ । ಅಲ್ಲದೇ ನೀವು ನಮಗೆ ಹಿರಿತನವನ್ನು ಮಾಡಬೇಕೆಂದು ಕೇಳಿದ್ದರಿಂದ ಆ ಬುಕ್ಕರಾಯರೊಂದಿಗೆ ನಾಲ್ವರು ಬಂಧುಗಳು ಹೇಳಿದ ವಿವರವು ನಮ್ಮವರಲ್ಲಿ ನೀವು ಆರವೇಟಿ ಬುಕ್ಕರಾಜ । ದಶವಂತನೂ । ನಿಮಗೆ ನಾವು ಗೌರವ ನೀಡುವವರು ಯಾವತ್ತೂ ಕ್ಷತ್ರಿಯ ಜಾಲವನ್ನು । ಭೇದಿಸಬಲ್ಲೆವು ಎಂದು ಉತ್ತರದಲ್ಲಿ ಬರೆಯುತ್ತಿದ್ದೇವೆ । ನೀವು ನಮ್ಮ ಹೆಸರಿನಲ್ಲಿ ಬರೆದರಾದರೆ ಹರಿಸಿ ಉತ್ತರಿಸಿದರೆ ಪ್ರಯೋಜನ । ಎಂದು ನಿರೂಪ ಬರೆಯಿಸಬೇಕು। " ಎಂದು ನಾಲ್ವರು ಬಂಧುಗಳು ಸಲಹೆ ನೀಡಿದರು।

ಆನಂತರ ಮಹಾರಾಜು ಅವರೂ ರಾಯರ ಮನಸ್ಸನ್ನು ಅರ್ಥೈಸಿಕೊಂಡು। ಸಬಾಂಧವ ಸಪರಿವಾರದೊಡನೆ ರಾಜ್ಯಭಾರ ಮಾಡುತ್ತಿರಲು ಈ ಬುಕ್ಕರಾಜನಿಗೆ ದೊಡ್ಡರಾಮಪ್ಪಯ್ಯನವರು ಜನಿಸಿದರು । ಯೀ ರಾಮರಾಜರು ಕಂದನೂರಿನಲ್ಲಿ (ಕರ್ನೂಲಿನಲ್ಲಿ) ಪ್ರಸಿದ್ಧಿಯಾಗಿ ಆಡಳಿತ ಮಾಡುತ್ತಿದ್ದರು । ಇವರಿಗೆ ತಿಂಮರಾಜು ।

ಶ್ರೀರಂಗರಾಜು । ರಾಮರಾಜು । ತಿರುಮಲರಾಜು । ವೆಂಕಟಪತಿರಾಜು । ಐದುಮಂದಿ ಮಕ್ಕಳಲ್ಲಿ ಕೃಷ್ಣರಾಯರ ಪಟ್ಟವು ಅಳಿಯ ರಾಮಪ್ಪಯ್ಯನಿಗೆ ದೊರಕಿತು । ಯುವರಾಜು ಪಟ್ಟವು ತಿರುಮಲರಾಯರಿಗೆ ಕೊಟ್ಟನು । ಉಳಿದ ಕೊನೆಯ ಮೂವರಲ್ಲಿ ಕಂದುನೂಲು ಅನ್ನೂ ವೆಂಕಟಪತಿರಾಜರಿಗೆ ಕೊಟ್ಟನು । ರಾಯ ವೇಲೂರಿನಲ್ಲಿ ತಿಂಮರಾಜನನ್ನು ಇಟ್ಟನು । ಗುರ್ರಂಕೊಂಡ । ಬೆಲ್ಲಂಕೊಂಡ । ಕಂಭಂ । ಕಾರ್ಕರ್ಲ । ಪೆನುಗೊಂಡ । ಸಹಿತವಾಗಿ ಕೋನೇಟಿರಾಜರಿಗೆ ನೀಡಿದನು । ತಾವು ಯೇಕಪತ್ನಿ ವ್ರತಸ್ಥರಾಗಿ ರಾಜ್ಯವಾಳಿದರು ।

ಇಷ್ಟರಲ್ಲಿ ಇಪ್ಪತ್ತೊಂದು ಬಾರಿ ಕುತುಬ್ ಶಾಹಿ ಎನ್ನುವ ನಿಜಾಮನನ್ನೂ । ಬಾದುಶಾಹಿ ಎಂಬ ನಿಜಾಮನನ್ನು ರಾಜಾ ಎಂಬ ರಜಪೂತ ರಾಜನನ್ನು ಮಹಾರಾಷ್ಟ್ರಗಿರೊಂದಿಗೆ ವಿಮುಖಮಾಡಿ ನರ್ಮದೆಯ ಆಚೆಗೆ ಮೂವ್ವತ್ತೇಳು ಯೋಜನಗಳ ದೂರ ರಾಜ್ಯವನ್ನು ವಿಸ್ತರಿಸಿದರು. ಔರಂಗಾಬಾದು ಪಾಚ್ಛಾಯಿ ಭೇಟಿಯಾಗಿ ಡಿಲ್ಲಿ ಪಟ್ಟಣದಲ್ಲಿ ರಾಯರ ಮುದ್ರೆಯನ್ನು ನಡೆಸಿ ನರ್ಮದೆಯಾಚೆ ಮೂವ್ವತ್ತೇಳು ಯೋಜನದೂರ ರಾಜ್ಯವನ್ನು ವಿಸ್ತರಿಸಿ ಗುರುತು । ಜಯ ಸ್ತಂಭವನ್ನು ನೆಟ್ಟು । ಈ ಅವಧಿಯಲ್ಲಿ ಐವತ್ತಾರು ವರ್ಷಗಳು ರಾಜ್ಯಭಾರಮಾಡಿ ವಂದು ದಿನ ಕಪಿಲಾವತಾರ ಯೋರ್ಮದ್ಯೆ । ವುತ್ತರವಾಹಿನಿಯಾಗಿ । ತುಂಗಭದ್ರೆಯಲ್ಲಿ ಗಂಗೆ ಹರಿಯುತ್ತಿರುವುದು ಇಂದು ಭಾಗೀರಥಿ ಎಂಬ ಪರ್ವದಿನವಾದ್ದರಿಂದ ಸ್ನಾನಕ್ಕೆ । ಹೋಗಬೇಕೆಂದು ಯೋಚಿಸಿ ನಂದ್ಯಾಲ ಕುಮಾರ ನಾರಸಿಂಹ ರಾಜ । ಅವುಕು ವಿಠಲರಾಜ । ಕಂದನೂಲು ತಿಮ್ಮರಾಜ । ಕುಮಾರ ಶ್ರೀರಂಗರಾಜ । ಭೀರವೋಲು ರಮಣರಾಜ । ಅಪರಿಚಿಂತಲ ವೆಂಕಟಪತಿರಾಜ । ಮಾಲ್ರಾಜ ಪೆದ್ದವೋಬರಾಜ ಪೋಚಿರಾಜ। ವೆಂಗಮರಾಜ । ಗುತ್ತಿವೆಂಕಟಪತಿರಾಜ । ಕುರುಚೇಟಿ ಚಿನ್ನ (ಸಣ್ಣ) ಗೋಪಾಲರಾಜ ಇವರೆಲ್ಲರೊಂದಿಗೆ ರುಷ್ಯಮೂಕದ ಹತ್ತಿರ ನದಿಯನ್ನು ದಾಟಿ ಹನುಮನಶಲನದಲ್ಲಿ ಇಳಿದು ಅಂಜನಾದೇವಿ ಪರ್ವತದ ಹತ್ತಿರ ಅರಣ್ಯಕ್ಕೆ ಬಂದು ನಂದನವನಕ್ಕೆ ಹೋಗಿ ಸ್ನಾನ ಸಂಧ್ಯಾ ವಂದನೆಗಳನ್ನು ತೀರಿಸಿ। ಭೂಸುರರಿಗೆ ಗೋ ಹಿರಣ್ಯಭೂಮಿ ಅಗ್ರಹಾರಾದಿಗಳನ್ನು ದಾನಮಾಡಿ ಭೂಸುರರ ಆಶೀರ್ವಾದ ಪಡೆದು ಈ ಅರಣ್ಯವನ್ನು ಭೇದಿಸಿ ಪುರಪ್ರತಿಷ್ಟೆ ಮಾಡಿಸಿದ್ದೇ ಆದರೆ ಗೌಪ್ಯವಾದ ಸ್ಥಳಗಳು, ದುರ್ಗಗಳು ಇವೆ । ಚಿನ್ನ (ಸಣ್ಣ)ಮೆಗೋಟಿ (ದೊಡ್ಡ) ಪೆದಮೆಗೋಟಿ, ಚಂಚಲಕೋಟಿ ಎಂಬ ಹೆಸರಿರುವ ಕೋಟೆಗಳು ಪ್ರತಿಷ್ಟೆಯಾಗಿದ್ದರಿಂದ ನಮ್ಮ ಕೊನಮರಾಜನನ್ನು ಇರಿಸುವುದಾಗಿ ನಿರ್ಧರಿಸಿ ತಿರುಮಲರಾಯನನ್ನು ಕರೆಯಿಸಿ ಮಲಿಕಿವಿಭುರಾಮನನ್ನು ವುಭಯರೂ ಇಲ್ಲಿದ್ದು ಈ ಅರಣ್ಯವನ್ನು ಭೇದಿಸಿ ಪಟ್ಟಣವನ್ನು ನಿರ್ಮಿಸಬೇಕೆಂದು ಹೇಳಲು ಅದೇ ಪ್ರಕಾರವಾಗಿ ಇವರು ನಿಂತು ಪಟ್ಟಣ ಗೋಪುರ ಪ್ರಾಕಾರ ಮುಂತಾದವನ್ನು ನಿರ್ಮಿಸಿ ಮೂರುಸಾವಿರ ಆನೆಗಳನ್ನು ಅಲ್ಲಿ ನಿಲ್ಲಿಸಿ ಕೊನಮರಾಜನ ಅಧೀನಮಾಡಿ ಕೊನಮರಾಜನ ಕೆಳಗೆ ನಡೆದವರಿಗೆ ಆನೆಯನ್ನು ನೋಡಿಕೊಳ್ಳುವವರಿಗೆ ಗ್ರಾಮಾದಿಗಳನ್ನು ಕೊಡಿಸಿ ಯೀ ಪ್ರಕಾರವಾಗಿ ಗೌರವವನ್ನು ನೀಡಿ ಅಲ್ಲಿ ನಿಯಮಿಸಿದರು.

ಇದರಲ್ಲಿ ಒಂದು ವಿಶೇಷ ನಮ್ಮ ದೊಡ್ಡವರು ಮಾಡಿದ ಪುಣ್ಯದ ಫಲವಾಗಿ ನನ್ನೊಂದು

ಪೂರ್ವಜನ್ಮ ಸಂಸ್ಕಾರ ಪೂಜಾಫಲವಾಗಿ ನಾಲ್ವರು ಬಂಧುಗಳ ಆಗ್ರಹದ ಮೇರೆಗೋ ನನಗೆ ರಾಯರಾಜ್ಯಾಭಿಷೇಕ ಪದವಿ ಅನುಭವಿಸುವಂತಾಯಿತು. ಇದು ನರಪತಿ ಸಿಂಹಾಸನ ಪೂರ್ವ ತುಳುವರಾಜರೊಂದಿಗೆ ಮಾಡಿದ ಗೌರವ ನಡತೆಗಳನ್ನು ನಾವು ಉತ್ತಮ ಕ್ಷತ್ರಿಯರಾಗಿ ನಮ್ಮ ತಲೆಮಾರಿನಲ್ಲಿ ಅಂದಿನ ರಾಮರಾಯರು ಈ ಅತಿಶಯವಾದ ನಡತೆ ನಡೆಸಿದರು ಆದ್ದರಿಂದ ನನ್ನ ತಂಮನವರಿಗೆ ಉತ್ತರವನ್ನು ಬರೆದೆನು. ಮೂಲಪುರುಷನಾದ ದೊಡ್ಡರಾಮಪ್ಪಯ್ಯನವರ ಹೆಸರು ಮೊದಲು ಹೇಳಿರಿ. ನಮ್ಮ ಅಳಿಯಂದಿರಿಗೆ ಪತ್ರಗಳನ್ನು ಬರೆದರೂ ಹರಿಸಿಬರೆದ ಪ್ರಯೋಜನ ಎಂದು ಬರೆಯಿರಿ ನೀವು ನಮ್ಮ ಮನೆತನಕ್ಕೆ ನಮ್ಮ ಬುಕ್ಕರಾಯರಿಗೆ ಬಿರುದು ನೀಡಿದ್ದೀರಿ. ಅದೇ ಪ್ರಕಾರವಾಗಿ ನಮ್ಮ ತಮ್ಮಂದಿರಿಗೆ, ನಮ್ಮ ಮಕ್ಕಳಿಗೆ ನಡಿಸಿರಿ ನೀವು ಬರೆದರೆ ಮುಗಿದಿದೆ ಎಂದು ಬರೆಯುತ್ತಾ ಬರೆಯುವುದು ಎಂದು ನಿಷ್ಕರ್ಷೆ ಮಾಡಿ ಅಳಿಯಂದಿರಿಗೆ ಮಕ್ಕಳಿಗೆ ಕೆಲವು ಗಡಿ ಸ್ಥಳಗಳನ್ನು, ಕೋಟೆ ಸ್ಥಳಗಳನ್ನು ಕೊಟ್ಟು ತಾವು ರಾಜ್ಯಭಾರ ಮಾಡುತ್ತಿದ್ದರು.

ರಾಮಪ್ಪಯ್ಯನವರಿಗೆ ನಿಸ್ಸಂತತಿ ಆಗಿದ್ದರಿಂದ ತಮ್ಮನಾದ ತಿರುಮಲರಾಯರಿಗೆ ಪಟ್ಟವನ್ನು ಕಟ್ಟಿದರು । ಇವರಿಗೆ ರಘುನಾಥರಾಜ । ಶ್ರೀರಂಗರಾಜ । ವೆಂಕಟಪತಿರಾಜ ರಾಮರಾಜ ಅವರು ನಾಲ್ಕುಮಂದಿ ಮಕ್ಕಳು ಕಲಿತು ಇದ್ದರು. ಇದುವರೆಗೆ ರಾಮಪ್ಪರಾಯನವರಿಗೆ ಅರವತ್ತು ವರ್ಷಗಳು ಆದರೂ ಇದುವರೆಗೆ ಸಕಲಕ್ಷೇತ್ರದಲ್ಲಿ ಅನುಭವವಾಯಿತು. ಇನ್ನುಮೇಲೆ ಉತ್ತಮ ಕ್ಷತ್ರಿಯರಾಗಿ ರೋಗಗಳಿಂದ ಮನೆಗಳಲ್ಲಿ ಸಾಯಬಾರದು ಯುದ್ಧದಲ್ಲಿನ ಮರಣ ಶ್ರೇಷ್ಠವೆಂದು ಪೂರ್ವದ ರಾಜರು ಭೀಷ್ಮಾದಿ ರಾಜರುಗಳ ಮರಣಗಳನ್ನು ವಿಚಾರಿಸಿ ನಾಲ್ಕುಮಂದಿ ಬಂಧುಗಳನ್ನು ತಮ್ಮಗಳ ಮಕ್ಕಳನ್ನು ಬೀಗರಾದ ರಾಯರ ಅಳಿಯಂದಿರು, ವಜೀರರು, ದಳವಾಯಿ, ಸರಕಾರವನ್ನು ಕರೆಯಿಸಿ ಆಲೋಚಿಸಿ ಅವರು ಮನವಿ ಮಾಡಿಕೊಂಡ ವಿವರ

> ನಮ್ಮ ವಂಶದಲ್ಲಿ ಸಾವಿರದ ಮುನ್ನೂರ ಎಂಭತ್ತರವರೆಗೆ ರಾಜ್ಯಭಾರಮಾಡಿ ತೀರಿಕೊಂಡ ರಾಜರಲ್ಲಿ ಯಾವ ರಾಜರೂ ನಿಮ್ಮಂತೆ ಪ್ರಸಿದ್ಧಿಗೆ ಬಂದಿಲ್ಲ. ಇಂದಿಗೆ ನೀವು ಸಾಕ್ಷಾತ್ತು ರುದ್ರಾಂಶ ಸಂಭವರು ಆದ್ದರಿಂದ ನರಪತಿ ಸಿಂಹಾಸನ ದೊರೆತಿದೆ ಕಾರಣ ನಿಮ್ಮೊಂದಿಗೆ ಈ ಮಹದೈಶ್ವರ್ಯ ಸರಿಯಾಗಬೇಕೆಂಬ ಅಭಿಲಾಷೆಯಿದೆಯಾದರೆ ನಿಮ್ಮ ಮರಣದವರೆಗೆ ಸರಿಬರುವ ದೇವರುಗಳ ಸತ್ಯಸಂಧರ ಅಭಿಜ್ಞರ ನಿಮ್ಮ ಚಿತ್ತಕ್ಕೆ ಬಾರದಿರುವುದು ಏನಿದೆಯೆಂದು ನೀವು ಕೈಗೊಂಡ ಕಾರ್ಯ ಯುಕ್ತವಾಗದೆಂದು ಮನವಿ ಮಾಡಿಕೊಂಡಿದ್ದರಿಂದ ನೀವೆಲ್ಲರೂ ನನಗೆ ಶತ್ರುಗಳು ಇದರಿಂದ ನೀವು ಅಡ್ಡಪಡಿಸುವ ಕೆಲಸವಿಲ್ಲ ಎಂದು ಹೇಳಿದ್ದರಿಂದ ಅವರು ಸುಮ್ಮನಿದ್ದರು । ಆಗ ಮಲಿಕಿವಿಭುರಾಮ ಎಂಬುವವನು ಗೋಲ್ಕೊಂಡದ ಕಿಲ್ಲೇದಾರನು । ರಾಯರ ಮೇಲೆ ಕರುಣೆವುಳ್ಳವನು । ಆ ಬಾಲ್ಯದಿಂದ ಸಾಕಿಸಿದವನು । ಗಂಧರ್ವ ಸಂಭವನು । ಹಾಡಿನಲ್ಲಿ ಅಸಾಧಾರಣ ಪ್ರಜ್ಞೆಯುಳ್ಳವನು । ಅವನ್ನು ಕರೆಯಿಸಿ ಎಲವೊ ನಿನ್ನನ್ನು ಬಾಲ್ಯದಿಂದ ಸಾಕಿ ಬೆಳೆಸಿದ್ದೇನೆ ನಮ್ಮ ಚಿತ್ತಾನುಸಾರ ನಡೆಯಬೇಕೆಲೊ ಎಂದು ಬುದ್ಧಿವಾದ ಹೇಳಲು ಅವನು ಎಂದ ವಿವರ ದೇವರುಗಳ ಆಜ್ಞೆಯಲ್ಲಿ ಗೋಲ್ಕೊಂಡ ರಾಜ್ಯವನ್ನು ವಿಚಾರಮಾಡಿ ನಿಮ್ಮ ಮೇಲೆ ಶಿರಸಾವಹಿಸಿ ಇದ್ದೇನೆ ನನ್ನ ಶರೀರ ನಿಮ್ಮ ಅಧೀನ. ನೀವು ಯಾವ ಹುಕುಂ ಹೊರಡಿಸುತ್ತೀರೋ ಆ ದಾರಿಯಲ್ಲಿ

ಹಾಜರಾಗುತ್ತೇನೆ. ಆದರೆ ಈಗ ನಮ್ಮ ಶರೀರ ಯುದ್ಧದಲ್ಲಿ ಬಿಡಬೇಕೆಂದು ಹುನ್ನಾರವಿದೆ ಯಾವ ಕಾರಣಕ್ಕೂ ತುರುಕರಿಗೆ ರೋಷ ಬರುವಂತೆ ಡಿಲ್ಲಿಯಲ್ಲಿ ನಮ್ಮ ಹೆಸರಿನಲ್ಲಿ ಧ್ವಜಸ್ತಂಭವನ್ನು ಹಾಕಿ ಮಕ್ಕಾದಲ್ಲಿ ಹಂದಿಯನ್ನು ಕೊಯ್ದು ಮೊಗಲರ ಲಷ್ಕರು ತರಬೇಕೆಂದು ಕಳಿಸಲಾಗಿ ಮಲಿಕಿವಿಭುರಾಮ ಡಿಲ್ಲಿಗೆ ಹೋಗಿ ಧ್ವಜ ಸ್ತಂಭವನ್ನು ಹಾಕಿಸಿ ಮಕ್ಕಾದಲ್ಲಿ ಈ ಪ್ರಕಾರ ಅಗತ್ಯವಾಗಿ ಮಾಡುತ್ತೇನೆ.

ನನಗೆ ನಮ್ಮನ್ನು ಆಳಿದ ರಾಮರಾಯರ ಹುಕುಂ ಆಗಿದೆ ನಿಮ್ಮ ಕುಲಭಿಮಾನ ಇದ್ದದ್ದೇ ಆದರೆ ನನ್ನನ್ನು ನೀವು ಹಿಡಿದುಕೊಂಡು ರಾಮರಾಯರ ಮೇಲೆ ಎತ್ತಿಕಟ್ಟಿ ದಂಡು ನಡೆಸಿರೆಂದು ಹೇಳಲು ನಾಲ್ಕುಲಕ್ಷ ಕುದುರೆ ಏಳುಲಕ್ಷ ಕಾಲ್ಬಲವನ್ನು ಕೂಡಿಕೊಂಡು ಪಾಚ್ಛಾಯಿ ಪೌಜಿಗೆ ಬಂದು ರಕ್ಕಸತಂಗಡಿಯ ಹತ್ತಿರ ಹುದುಗಿ ರಾಮರಾಯರಿಗೆ ಗೂಢಾಚಾರರ ಹೆಸರಿನಲ್ಲಿ ಉತ್ತರವನ್ನು ಕಳಿಸಲಾಗಿ ರಾಮರಾಯರು ಆ ಉತ್ತರವನ್ನು ಕಣ್ಣಿಗೆ ಹಿಡಿಯಲು ಬಾದುಶಾಹಿಯನ್ನು ಉದಾಸೀನ ಮಾಡಿ ಅವರಿಂದ ಹಾಕಿಸಿ ಕಳಿಸುವವರೆಗೆ ಬಾದುಶಾಹಿಗೆ ಕೋಪಬಂದು ರಾಮರಾಯರ ತಲೆ ನನ್ನ ಝುಂಡಾಕ್ಕೆ ಕಟ್ಟಿಸುತ್ತೇನೆ ಇಲ್ಲವೇ ಅವರ ಝುಂಡಾಕ್ಕೆ ಕಟ್ಟಿಸಬೇಕೆಂದು ಶಪಥವನ್ನು ಮಾಡಿ ಪಾಚ್ಛಾಯಿಯವರು ತಮ್ಮ ಫೌಜಿಗೆ ಹುಕುಂ ಹೊರಡಿಸಿ ದೇಶವನ್ನು ಲೂಟಿಮಾಡಿರೆಂದು ಆಜ್ಞೆಮಾಡಿ ಅವರ ಫೌಜು ದೇಶದಿಂದ ಹೊರಡಲು ಯಾವತ್ತು ಬಂಧುಗಳು ಬಂದು ಮನಕನಾಡಿನವರಿಗೆ ವಿವಾದ ಬೇಡವೆಂದು ಇದುವರೆಗೆ ದೊಡ್ಡವರು ಯಾವ ಹದ್ದಿನಲ್ಲಿ ನಡೆಸಿದರೋ ಅದೇ ಪ್ರಕಾರವಾಗಿ ನಡೆಸಬೇಕೆಂದು ಇದು ಯುಕ್ತವಾದುದೆಂದು ಮೇಲಿನ ಅವರಿಗೆ ಮನವು ಮಾಡಲು ಆ ಸುದ್ದಿಗಳು ಅಂಗೀಕಾರವಾಗಲಿಲ್ಲವಾದ್ದರಿಂದ ಒತ್ತಡದಿಂದ ಮನವಿ ಮಾಡಿದರೆ ಸ್ವಾಮಿ ದ್ರೋಹ ಘಟಿಸುತ್ತದೆಂದು ಸುಮ್ಮನಿದ್ದರು.

ವಿಜಯನಗರದಲ್ಲಿ ರಾಜಾಧಿರಾಜಶ್ರೀ ರಾಮರಾಯರವರು ಡಿಲ್ಲಿ ಪಾಚ್ಛಾಯಿಯವರ ಮೇಲೆ ದಂಡು ಬಿಡುವಾಗ ಪಟ್ಟಣದಲ್ಲಿ ರಣಭೇರಿ ಹಾಕಿಸಿ ಯುದ್ಧ ನಿಷ್ಕರ್ಷೆ ಮಾಡಿಸಿ ಹೋಗುವಾಗ ಅಣ್ಣನವರಾದ ಕೋನೇಟಿರಾಯರನ್ನು ಕರೆಯಿಸಿ ನಾವು ರಣರಂಗಕ್ಕೆ ಹೋಗುತ್ತಿದ್ದೇವೆ ನೀವು ಇಲ್ಲಿ ಇರಬಾರದು ರಾಯವೇಲೂರಿಗೆ ಹೋಗಿ ಪೂರ್ವ ಸಿಂಹಾಸನವನ್ನು ನೋಡಿಕೊಂಡು ಶ್ರೇಯೋವಂತರಾಗಿ ಮೂರ್ಧಾಭಿಷೇಕರಾಗಿ ಉತ್ತರೋತ್ತರ ಅಭಿವೃದ್ಧಿಯಾಗಿರೆಂದು ಅಪ್ಪಣೆ ನೀಡಿದ ನಂತರ ಬಂಧುಗಳನ್ನು ರಾಚರಿಕವನ್ನು, ಕಮ್ಮವೆಲವಾರರನ್ನು, ಕೌತರನ್ನು ಮರಾಠಿಗರನ್ನು, ಪಾತರಿಕೆಯವರನ್ನು ಸಮಸ್ತ ಪಾಳೆಯಗಾರರನ್ನು ಕರೆಯಿಸಿ ನೀವು ಮನೆಗಳ ಮೇಲೆ ಹೆಂಡತಿ ಮಕ್ಕಳ ಮೇಲೆ ಆಸಕ್ತಿಯಿದ್ದವರಾದಿರಾ ನಿಮ್ಮ ನಿಮ್ಮ ಸಂಬಳ ನಿಮ್ಮ ವಸ್ತುಗಳು ನಿಮ್ಮ ಗ್ರಾಮಗಳನ್ನು ನೀವು ನಡೆಸಿರೆಂದು ನಮ್ಮ ಕೊನಮರಾಜರೊಂದಿಗೆ ಅಪ್ಪಣೆ ಕೊಡಿಸುತ್ತೇವೆ. ಅದೇ ಪ್ರಕಾರ ನೀವಿರುವ ಕೊನಮರಾಜರೊಂದಿಗೆ ಕೂಡ ರಾಯವೇಲೂರಿಗೆ ಹೋಗೆನಲು ಅವರು ಹೇಳಿದ ಉತ್ತರ ಸ್ವಾಮಿ ಕಾರ್ಯಹತಂ ಪ್ರಾಣ ಅಂತ್ಯಂ ದೃಷ್ಟ್ವೋಪಿ ಮಾಧವಃ ಎನ್ನುವ ನ್ಯಾಯ ಇದೆ. ನಾವು ಬಿಟ್ಟು ಹೋಗುವುದು ವೀರಧರ್ಮವೇ ನಿಮ್ಮ ರಕ್ತ ಬಿದ್ದ ಸ್ಥಳದಲ್ಲಿ ನಮ್ಮ

ಶಿರಗಳು ಬೀಳಬೇಕೆಂದು ವಿನಯ ಪೂರ್ವಕವಾಗಿ ಮನವಿ ಮಾಡಿಕೊಂಡರು ಕಾರಣ ಕನಕಭೇರಿ, ನಗಾರಿ ಬಾರಿಸಿ ರಾಯ ಅವರು ಆರು ಮಜಲಗಳ ದೂರದಲ್ಲಿ ರಕ್ಕಸತಂಗಡಿ ಎನ್ನುವ ಪಟ್ಟಣ ಯಮುನಾ ನದಿತೀರದಲ್ಲಿದೆ ಅಲ್ಲಿಗೆ ಸೇರಿ ನಾವು ಆ ಕಡೆ ಗಡ್ಡೆಗೆ ಬರುತ್ತೇವೆ ನೀವು ಈ ಕಡೆ ಗಡ್ಡೆಗೆ ಬರುತ್ತೀರಾ ಎಂದು ಆ ಕಡೆ ಪಾಚ್ಛಾಯಿಯವರ ಗೂಢಾಚಾರರಿಗೆ ಪತ್ರ ಬರೆದುಕೊಡಲು ತುರುಕರು ಗೂಢಾಚಾರರ ಹೆಸರಿನಲ್ಲಿ ನೀವೇ ನದಿದಾಟಿ ಬನ್ನಿರೆಂದು ಉತ್ತರವನ್ನು ಬರೆದುಕೊಂಡರು.

ಆದ್ದರಿಂದ ಇವರು ನದಿಯನ್ನು ದಾಟಿ ಎರಡು ಮೈಲಿ ದೂರ ಸಾಗಿಹೋಗಿ ತಮ್ಮ ಸಾಮಾನುಗಳೊಂದಿಗೆ ಅಲ್ಲಿ ತಂಗಿ ತಿರುಮಲರಾಯರ ಪಕ್ಷ ಕೆಲವರಿಗೆ ಸರದಾರರು ದಳವಾಯಿಗಳು, ಮನ್ನೆರಿಗಳು, ನಾಯಕವಾಡಿಗಳು ಐವತ್ತೇಳು ಸಾವಿರ ನಲವತ್ತೆಂಟು ಸಾವಿರ ವೆಲಮರು, ಹತ್ತುಸಾವಿರ ಭರ್ಚಿಗಳು, ಇಪ್ಪತ್ತೆಂಟು ಸಾವಿರ ಪೆಂಮಸಾನಿ ರಾಮಲಿಂಗಮ ನಾಯುನಿ ಅವರ ಸ್ವಜನ ಬಂಧುವರ್ಗದವರ ಐವತ್ತೈದು ಸಾವಿರ ಭರ್ಚಿಗಳು, ಈಟಿಗಳು ತುಪಾಕಿಪೌಂಜು ಇಪ್ಪತ್ತುಸಾವಿರ ರಾವಿಲ್ಲಬುಚ್ಚಿನಾಯುನಿ ಅವರು ಹತ್ತುಸಾವಿರ ಭರ್ಚಿಯವರು ಹತ್ತುಸಾವಿರ ತುಪಾಕಿ ಜಗದೇವಿ ರಾಮಪ್ಪಯ್ಯನಾಯುಡು ಹದಿನೇಳು ಸಾವಿರ, ಎಂಟುಸಾವಿರ ತುಪಾಕಿ ತುರುಕರು। ಯಾಕೂಬು ಸಾಹೇಬು ಎಂಬ ಜಮೇದಾರನು ಎಂಭತ್ತುಸಾವಿರ ಕುದುರೆ ಮಹಾರಾಷ್ಟ್ರದ ಬೊಬ್ಬೋಜಿರಾಜ ಅವರ ಕುದುರೆಪೌಜು ಎಂಭತ್ತುಸಾವಿರ ಅಭುಸಿಗಳು, ಇಪ್ಪತ್ತು ಸಾವಿರ ಗಾಡಿಗಳು ತೋಪುಗಳು ಫಿರಂಗಿಗಳು ಸಹ ಇಪ್ಪತ್ತು ಸಾವಿರ ಕುದುರೆ ಕಾಸುಕುರಿಕೆ, ಇಪ್ಪತ್ತೇಳು ಸಾವಿರ ಕೈಯಾಳು, ಇಪ್ಪತ್ತು ಸಾವಿರ ನಗರಿಕುಮಾರಿಕ ಎಂಭತ್ತುಸಾವಿರ ಅಳಿಯಂದಿರು ಮಕ್ಕಳ ನರಸಿಂಹರಾಜ ಅವರ ತಮ್ಮ ಭೋಜರಾಘವರಾಜ, ಗೊಬ್ಬೂರು ಅಚ್ಯುತರಾಜ ಆತನ ಮಗ ದಾನವರಾಜ । ತರಮೆಲ ಸಂಬೆಟಜನ ಪಾಲರಾಜ ಬಲಗೈ ವಿಜಯನಾರಾಯಣರಾಜ ಕುಮಾರಿಪಟ್ಟಾಭಿರಾಜು ನಂದ್ಯಾಲಪೆನುಗೊಂಡಪತಿ ತಿರ್ನಾತರಾಜ ಬೀರೋಲು ರಾಘವರಾಜ ಔಕು ಗೋಪಾಲರಾಜ ಆ ದೊಡ್ಡತಿಮ್ಮರಾಜ ಗುತ್ತಿ ವಿಠಲರಾಜ ಇವರು ಸ್ವಜನ ಇವರ ಪೌಜನ್ನು ದಳವಾಯಿ ಲಿಂಗೋಬಾನಿಯೊಂದಿಗೆ ನೀಡಿ ಯುದ್ಧಕ್ಕೆ ಕಳಿಸಿದರು ರಾಯರ ಅಪ್ಪಣೆಯಾದ ಮೇಲೆ ಏಕಾಗ್ರವಾಗಿ ಸಮುದ್ರದಂತೆ ಎರಡೂ ಪೌಜುಗಳು ಯುದ್ಧಮಾಡುವವರೆಗೆ ಸಮುದ್ರ ತಾಕಿವಂತೆ ಯುದ್ಧವನ್ನು ಮಾಡಿದರು ರಾಯರ ಪೌಜು ಎಲ್ಲಾ ಯೇಕಾಯೇಕವಾಗಿ ಹೋಗಿದ್ದರಿಂದ ಎದುರಿನ ವಿಸ್ತಾರ ಕುದುರೆಪೌಜು ಆಗಿದ್ದರಿಂದ ಇವರು ತುಕಡಿಯನ್ನು ಮಾಡಿ ಕಳಿಸಲಾಗಿ ಬಲವು ಇಲ್ಲದೇ ಬಹುಮಂದಿ ನಿಪಾತವಾಗಿ ಬೆಂಕಿಯಲ್ಲಿ ಬಿದ್ದ ಮಿಡತೆಗಳಂತೆ ಹತವಾದರು. ಎರಡನೇ ಬಾರಿ ನಗಾರಿಯನ್ನು ಬಾರಿಸಿ ಕೊಂಚ ಪೌಜನ್ನು ಯುದ್ಧಕ್ಕೆ ಕಳಿಸಿದಂತೆಯೇ ಭಂಗವಾಯಿತು. ಹೀಗೆ ಇಪ್ಪತ್ತೆರಡು ಆವರಿಸಿ ಸರದಾರರನ್ನು ಸೇರಿಸಿ ಪೌಜುಗಳನ್ನು ಸೇರಿಸಿ ಕಳಿಸುವವರೆಗೆ ಯುದ್ಧವನ್ನು ಮಾಡಿ ಎದುರಾಳಿಗಳನ್ನು ಬಹುಮಂದಿಯನ್ನು ಹತಮಾಡಿ ತಾವು ಹತವಾದರು।

ಇಪ್ಪತ್ತು ಮೂರುಬಾರಿ ಶ್ರೀಮದ್ ರಾಜಾಧಿರಾಜ ರಾಜಪರಮೇಶ್ವರ ಶ್ರೀ ವೀರಪ್ರತಾಪರಾದ ರಾಮರಾಯರು ಉಳಿದ ಕೌತರು, ಎಂಭತ್ತುಸಾವಿರ ಮರಾಠರು ಲಕ್ಷ ಕಮರಿಕರು ನಲವತ್ತು ಸಾವಿರ ಯಲಮರಿಕ ಮೂವ್ವತ್ತು ಸಾವಿರ ರಾಚಿರಕ ತೊಂಭತ್ತುಸಾವಿರ ಕಾಸಾಕುಮಾರಿಕ ಎಪ್ಪತ್ತುಸಾವಿರ ಆಪ್ತರು ಎಂಭತ್ತುಸಾವಿರ ಆನೆಗಳು ಇಪ್ಪತ್ತುಸಾವಿರ ಅದರಲ್ಲಿ ಪ್ರಸಿದ್ಧವಾದ ಆನೆಗಳು ಕೊಂಡಲ ರಾಯುಡು ಎನ್ನುವುದು ಆನೆಗಳ ರಾಜ ಶೇಷಾಚಲ ಎಂಬ ಆನೆ, ಚತುರ್ದತಿ ಎಂಬ ಆನೆ ಕಾಸಾ ಆನೆಗಳು ನಾಲ್ಕುಗಂಟೆಗೆ ಕೊಂಬುಕತ್ತಿಯಿರುವ ಅಂಬಾರಿಯೊಂದಿಗೆ ಕುದುರೆಯಲ್ಲಿ ಪಂಚಕಲ್ಯಾಣಿ ಅಷ್ಟಮಂಗಳಿ ಹಗಲುಬುಕ್ಕೆ ಜಯಲಕ್ಷ್ಮಿ ಎನ್ನುವಂಥವು ಕಾಸಾಕುದುರೆಗಳು ನಾಲ್ಕು ಜೀರಾಭಕ್ತರು ತೊಡೆದುಹಾಕಿ ತಂದು ಮುಂದೆ ನಿಲ್ಲಿಸಿದಾಗ ರಾಯರು ಯುದ್ಧಕ್ಕೆ ಪ್ರಯಾಣ ಸಿದ್ಧಮಾಡಿ ರಣಜರ್ಜರಿಕೆ ಎಂಬ ಬೇರಿ ಹೊಡೆಸಿದ್ದರಿಂದ ಅಪಶಬ್ದ ರಣವತ್ತು ಎಂಬ ಅಪಶಬ್ದ ನುಡಿದಿದ್ದರಿಂದ ಸ್ವಕೀಯರು, ಪರಕೀಯರು ಕೇಳಿ ಭ್ರಾಂತರಾಗಿ ರಾಯರಿಗೆ ಭಿನ್ನಯಿಸಿಕೊಂಡರು ನಮ್ಮ ಪೌಜಿಗೆ ಏಕಾಏಕಿ ಯುದ್ಧಕ್ಕೆ ಅಪ್ಪಣೆ ಮಾಡಿದಿರಿ ಸಾಕಷ್ಟು ಹತವಾಯಿತು.

ಈಗ ಸ್ವಂತ ಯುದ್ಧಕ್ಕೆ ಸನ್ನದ್ಧರಾಗಿ ರಣಭೇರಿ ಹೊಡೆಸಲು ಅಪಶಬ್ದವು ನುಡಿಯಿತು. ಕಾರಣ ದೇವರು ಅವರು ಇಲ್ಲಿ ನಿಲ್ಲಿರಿ ನಮಗೆ ವಿಶ್ರಾಂತಿ ನೀಡಿ । ಈ ಬಾರಿಗೆ ತುರುಕರ ಪೌಜನ್ನು ಹತಮಾಡುತ್ತೇವೆ ಎಂದು ಮನವಿ ಮಾಡಿಕೊಂಡಿದ್ದರಿಂದ ರಾಯರು ಶರೀರ ಯುದ್ಧದಲ್ಲಿ ಬಿಡಬೇಕೆಂದು ಅಭಿಲಾಷೆಯಿಂದ ಇವರ ಮನವಿಗೆ ಹಠಮಾಡಿದರು. ಅದಕ್ಕೆ ಇವರು ನಮ್ಮ ಶಾಸಕಾಮಾತ್ಯರು ಸ್ವಾಮಿಕಾರ್ಯ ಹತಂ ಪ್ರಾಣಂ ಎಂಬ ನ್ಯಾಯದೊಂದಿಗೆ ಸುಮ್ಮನಿದ್ದರು ಅಂದಿನಿಂದ ರಾಜಾಧಿರಾಜೇಶ್ರೀ ರಾಯರು ಶಾರ್ಜೋಮಾ ಮಾಡಲು ತಂದ ಜಯಲಕ್ಷ್ಮಿ ಎಂಬ ಕುದುರೆಯನ್ನು ನೋಡಿ ಕಂದ ಅಪ್ಪಳಿಸಿದ್ದರಿಂದ ಅಪಶಕುನವಾಗಿ ಕಣ್ಣುಗಳಲ್ಲಿ ನೀರು ಬಿಂದುಗಳು ಬರುವುದನ್ನು ನೋಡಿ ಜಿತೇನ ಲಭ್ಯತೇ ಲಕ್ಷ್ಮಿ ಮೃತೇನಾಪಿ ಸುರಂಗನಾಂ । ಕ್ಷಣವಿಧ್ವಂಶಿನಿ ಕಾಯೇ ಕಾಶಿತ್ತುಂಮರಣೇರಣೇ ಎಂಬ ಶ್ಲೋಕ ಹೇಳಲು ಸನ್ಮುಖವಾಗಿ ಉತ್ಸಾಹಹೊಂದಿ ಯುದ್ಧಕ್ಕೆ ಸಮ್ಮತವಾಯಿತು. ರಣೋತ್ಪಾತ ಎಂಬ ಚೆತುರ್ದಂತಿ ಎಂಬ ಆನೆಯನ್ನು ಜೀರಾಭಕ್ತರು ಅಂಬಾರಿ ಬತ್ತಿಸ ಆಯುಧಗಳನ್ನು ತೀಡಿಕೊಂಡು ಡೇರೆಯ ಮುಂದೆ ಸಮ್ಮುಖದಲ್ಲಿ ನಿಲ್ಲಿಸಿದರು. ಮನವಿಮಾಡಲು ಅಂಬಾರಿಯನ್ನೇರಿ ಯುದ್ಧಕ್ಕೆ ಹೋಗಿ ಬಹಳ ಯುದ್ಧಮಾಡಿ ಪವುಜು ಹತವಾದ ಮೇಲೆ ಎದುರಿಗೆ ತುರುಕರ ಪೌಜನ್ನು ನಿಪಾತಮಾಡಿ ರಾ॥ ರಾಮರಾಯರು ಶರೀರ ಬಿಡಬೇಕು ಎಂದು ಅಭಿಲಾಷೆಯಿಂದ ರಣರಂಗದಲ್ಲಿ ಶರೀರವನ್ನು ಬಿಟ್ಟರು.

ಆಮೇಲೆ ಪಾಚ್ಛಾಯಿಯವರು ತಮ್ಮ ಪೌಜಿಗೆ ತಾಕತ್ತು ಮಾಡಿದರಲ್ಲಾ । ವಿಜಯನಗರ ಪಟ್ಟಣವನ್ನು ಬೇರ್ಪಡಿಸಬಾರದೆಂಬ ಹದ್ದು ಏರ್ಪಡಿಸಿ ರಾಮರಾಯರ ಮಕ್ಕಳು ಯಾರೇ ಆಗಲಿ ಇದ್ದಾರಾ ಎಂದು ವಿಚಾರಿಸಿದರಾದ್ದರಿಂದ ತಿರುಮಲರಾಯರ ಮಕ್ಕಳು ಬಂಧುಗಳು

ಯಾವತ್ತೂ ಜನ ವಿಜಯನಗರ ಪಟ್ಟಣವನ್ನು ಬಿಟ್ಟು ರಾಯವೆಲ್ಲೂರಿಗೆ ಹೋದರು ಎಂದು ಹೇಳಲಾಗಿ ಇಲ್ಲಿ ಆನೆಗೊಂದಿಯಲ್ಲಿದ್ದ ರಾಮರಾಯರ ಅಣ್ಣ ಕೋನೇಟಿರಾಜು ಅವರಿಗೆ ಆನೆಗೊಂದಿಯ ಆವ ಪಂಚ್ಚಗ್ರಾಮಾದಿಗಳು ಯಾವಲ ಪಂಚ್ಚಗ್ರಾಮಾದಿಗಳು ವುಭಯ ಎರಡು ಲಕ್ಷ ವರಹಗಳ ರಾಜ್ಯ ಕೊಟ್ಟು ಪಾಚ್ಛಾಯಿಯವರು ರಾಯವೆಲ್ಲೂರಿಗೆ ಹೋಗಿ ಸಣ್ಣ ವೆಂಕಟಪತಿರಾಯರಿಗೆ ಪಟ್ಟಾಭಿಷೇಕ ಮಾಡಿಸಿ ತೆಗೆದುಕೊಂಡ ರಾಜ್ಯವನ್ನು ಮತ್ತೆ ಕೊಟ್ಟು ರಾಯವೆಲ್ಲರೂ ರಾಜಧಾನಿಯನ್ನು ಮಾಡಿ ಪಾಚ್ಛಾಯಿಯವರು ತಮ್ಮ ದೇಶಕ್ಕೆ ಪುನರ್ಗಮನ ಮಾಡಿದರು.

ಯೀ ಪ್ರಕಾರ ರಾಯವೇಲೂರಿನಲ್ಲೂ ರಾಮರಾಜ್ಯ ಮಾಡುತ್ತಿರಲಾಗಿ ನರಸರಾಯರಿಗೆ ಗೊಬ್ಬರುಪೋಚಿ ರಾಜರವರ ಕೊಮಾರ್‍ತೆಯನು ಅಡಿಗಿದ್ದರಿಂದ ಅವರು ಒಳ್ಳೆಯದು ಎಂದು ನಿಷ್ಕರ್ಷೆಮಾಡಿ ಇರಲಾಗಿ ಆ ಬಂಧುಗಳಾದ ಸಣ್ಣ ದೊಡ್ಡವರೊಂದಿಗೂ ಯೀ ನರಸರಾಯರು ಅಂದದ್ದು ನಾನು ಗೊಬ್ಬರು ಪೋಚಿರಾಜ ಕೊಮಾರ್‍ತೆಯನು ವಲ್ಲನು | ಅವರು ಸ್ವಾಮಿದ್ರೋಹಿಗಳು ಎಂದು ಅವರನ್ನು ನಿಂದಿಸಿ ತೊರಗಂಟಿ ಕುಮಾರ ನರಸಿಂಹರಾಜ ಕೊಮಾರ್‍ತೆಯನು ವಿವಾಹ ಮಾಡಿಕೊಳ್ಳುತ್ತಿದ್ದೇನೆ ಎಂದು ಇರುವಾಗ ಯೀ ಮಾತುಗಳನು ಗೊಬ್ಬರು ಪೋಚಿರಾಜ ಕೇಳಿ ನಮ್ಮಮೇಲೆ ರಾಯರು ಅಪಶಬ್ದ ಮಾಡಿದ್ದಾರಾ ಎಂದು ಒಂದು ದಿನ ರಾತ್ರಿ ಸಮಯದಲ್ಲಿ ಅಂತಃಪುರ ಪ್ರವೇಶವಾಗಿ ರಾಯರ ಸಂತತಿಗೆ ಇರುವ ಸಣ್ಣಮಕ್ಕಳನ್ನು ರಾಯರನ್ನು ಕೊಲ್ಲುವವರೆಗೆ ಆ ಕಲಾಪದಲ್ಲಿ ಪೋಚರಾಜರ ಬೋನಕತ್ತೆ ಸುಭದ್ರ ಎಂಬ ಹೆಸರಿನ ಗಂಗಮಾಂಬೆಗೆ ಪೋಚರಾಜರ ರಾಯರಿಗೆ ಕೊಟ್ಟಿದ್ದರು. ಯೀ ಬೋನಗತ್ತೆ ಮಹಾಬುದ್ಧಿಶಾಲಿಯಾಗಿದ್ದರಿಂದ ಆ ಸಮಯದಲ್ಲಿ ತಿಮ್ಮರಾಜನ ಮಗನಾದ ಶಿಶುವು ಮೂರುವರ್ಷದ ಸಣ್ಣವನು ರಾಮಪ್ಪಯ್ಯ ಎಂಬ ಹೆಸರುಳ್ಳವನಿಗೆ ಯೀ ಬೋನಗತ್ತೆ ತನ್ನ ಮೈಲಿಗೆ ಸೀರೆಯನ್ನು ಬಗಲಲ್ಲಿಟ್ಟುಕೊಂಡು ಬಾಗಿಲು ಚೌಕಿದಾರರು ಕೇಳಿದರೆ ಮೈಲಿಗೆ ವಸ್ತ್ರವೆಂದು ಅಗಸರಿಗೆ ಹಾಕಲು ಹೋಗುತ್ತಿದ್ದೇನೆಂದು ಹೇಳಿ ರಾಮಪ್ಪಯ್ಯನನ್ನು ತಂದು ಅಗಸರ ತಿಮ್ಮನ ಎಂಬುವನಿಗೆ ರಹಸ್ಯವಾಗಿ ಯಿ ವರ್ತಮಾನವನ್ನು ಹೇಳಲಾಗಿ ಅವನು ಬುದ್ಧಿವಂತನಾದ್ದರಿಂದ ಯಿ ರಾಜನನ್ನು ವೆಲಗೋಟಿ ಯಾಚಮನಾಯನಿ ಅವರಿಗೆ ಕಳಿಸು ಎನ್ನಲಾಗಿ ಅದೇ ಪ್ರಕಾರ ಆ ಶಿಶುವನ್ನು ಕೊಟ್ಟು ಕಾಪಾಡುತ್ತಾ ದಿನ ಕಳೆಯುತ್ತಾ ವೆಂಕಟಗಿರಿಯನ್ನು ಸೇರಿ ಈ ವರ್ತಮಾನವನ್ನು ಯೌಚಮನಾಯನಿಯರಿಗೆ ಹೇಳಿ ಯಿ ರಾಮರಾಯರನ್ನು ಒಪ್ಪಿಸಿ ಅಗಸರವನು ತಮ್ಮ ಸ್ಥಳಕ್ಕೆ ಹೋದನು ಆ ದತ್ತು ಶಿಶುವು ದಿವಸದಿವಸ ಪ್ರವರ್ಧಮಾನವಾಗಿ ಬೆಳೆಯುತ್ತಿತ್ತು ಇಲ್ಲಿ ಗಂಡಸರನ್ನು ಯಾರನ್ನೂ ಬಿಡದೆ ವಧಿಸಿಸಿದರು ಆ ಸ್ತ್ರೀಯರು ಮಾತ್ರ ಇದ್ದರು ಅದರಲ್ಲಿ ವೆಂಕಟಪತಿರಾಯರ ಹಿರಿಹೆಂಡತಿಗೆ ಪಟ್ಟಣಕ್ಕೆ ಅಧಿಕಾರ ಮಾಡಿ ನೀವು ಸಣ್ಣವನನ್ನು ದತ್ತುತಂದು ಕೊಡುತ್ತಿದ್ದೇವೆ ಎಂದು ಆ ಅಮ್ಮನಿಗೆ ಸಮಾಧಾನ ಮಾಡಿ ತಾವು ರಾಜ್ಯವನ್ನೆಲ್ಲಾ ಆಕ್ರಮಿಸಿ ಗೊಬ್ಬೂರು ಪೋಚಿರಾಜ ಇದ್ದನು.

ಯಿ ಪ್ರಕಾರ ಹನ್ನೆರಡು ವರುಷಗಳು ವೇಲೂರು ಆಕ್ರಮಿಸಿ ಅಧಿಕಾರ ಮಾಡುತ್ತಿದ್ದರು. ಇತ್ತ ಅಗಸರ ಮೂಟಿ ರಾಮರಾಯರಿಗೆ ಹದಿನಾರು ವರುಷದವನು ಆಗಿ ಪೂರ್ವಸ್ಥಳಗಳು ಗೊಬ್ಬೂರು ಪೋಚಿರಾಜರ ಅಧೀನದಲ್ಲಿವೆಯಾದ್ದರಿಂದ ಅವರನ್ನು ಶಿಕ್ಷಿಸಿ ಪಡೆಯಬೇಕೆಂದು ಯಾಚಮನಾಯನಿಯೊಂದಿಗೆ ಆಲೋಚಿಸಲಾಗಿ ಅವರು ಮಹಾ ಸಂತೋಷವೆಂದು ನಾಯನಿಗಳು ಪೌಜನ್ನು ನೀಡಲಾಗಿ ಮತ್ತೆ ಆ ಪ್ರದೇಶಗಳ ಪಾಳೆಗಾರರನ್ನು ಕರೆಸಲು ತಮ್ಮ ಕುಲಗುರುಗಳಾದ ಕಂಚ್ಚಿ ತಾತಾಚಾರ್ಯರ ಸನ್ನಿಧಿಗೆ ಬಂದು ಸಾಷ್ಟಾಂಗ ನಮಸ್ಕಾರಗಳನ್ನು ಮಾಡಿ ಅವರೊಂದಿಗೆ ಎಲ್ಲ ವಿಷಯವನ್ನು ತಿಳಿಸಲಾಗಿ ಅವರು ಮಹಾಸಂತೋಷಗೊಂಡು ತಾತಾಚಾರ್ಯರು ಚನ್ನಪಟ್ನ ಪಲಿಚೇರಿ ಸಹ ಇರುವ ವರ್ತಕರು ಸಾಹುಕಾರರಲ್ಲಿ ಬೇಕಾದ ಪದಾರ್ಥಗಳನ್ನು ತೆಗೆದುಕೊಂಡು ಪೌಜನ್ನು ಕಟ್ಟಿ ಮರಳಿಬಂದು ರಾಯವೇಲೂರು ಆಕ್ರಮಿಸಿ ಹಸ್ತಾಂತರಮಾಡಿಕೊ ಗೊಬ್ಬರೂ ಪೋಚಿರಾಜನನ್ನು ಹಿಡಿದುಕೊಂಡು ಅವಮಾನಮಾಡಿ ಆಮೇಲೆ ಕಡಪರಾಜರ ಕನ್ಯೆ ರಂಗಮಾಂಬ ಅನ್ನುವಳನ್ನು ವಿವಾಹ ಮಾಡಿದರು ಅವರಿಗೆ ಸಂತತಿ ಇಲ್ಲದಾಗಿ ಆ ರಾಮರಾಯರು ವೇಲೂರಿನಲ್ಲಿ ಇಪ್ಪತ್ತುಮೂರು ವರ್ಷ ಆಳ್ವಿಕೆ ನಡೆಸಿ ಸ್ವರ್ಗಸ್ಥನಾದನು. ಆ ವೇಲೂರು ಸಿಂಹಾಸನಕ್ಕೆ ಪ್ರಭು ಇಲ್ಲವಾಗಿದ್ದರಿಂದ ಅಲ್ಲಿಯೇ ಇದ್ದ ನಾಲ್ವರು ಬಂಧುಗಳು ಆಲೋಚನೆಮಾಡಿ ಆನೆಗೊಂದಿಗೆ ಹೋಗಿ ಕೊನಮ ರಾಜರನ್ನೂ ಕಂಡು ನೀವು ಮೂವರು ಮಕ್ಕಳು ಇದ್ದಿರಿ ಇವರ ಹೆಸರು ವೆಂಕಟಪತಿರಾಜ ರಾಮಲಯ್ಯ ಶ್ರೀರಂಗರಾಯ ಇವರಲ್ಲಿ ಒಬ್ಬರನ್ನು ರಾಯವೇಲೂರು ಸಿಂಹಾಸನಕ್ಕೆ ಕೊಡಬೇಕೆಂದು ಮನವಿಮಾಡಲಾಗಿ ದೊಡ್ಡಮಗನಾದ ವೆಂಕಟಪತಿರಾಯರನ್ನು ಕೊಟ್ಟನು. ಅವರು ಬಂದು ಪ್ರಶಸ್ತವಾಗಿ ಆಳ್ವಿಕೆ ಮಾಡದೆ, ವಿವಾಹವನ್ನು ಮಾಡಿಕೊಳ್ಳದೇ ಅಪಕೀರ್ತಿ ಹೊಂದಿ ಮೂವತ್ತುವರ್ಷ ಆಳ್ವಿಕೆ ನಡೆಸಿ ತೀರಿಕೊಂಡನು ಪುನಃ ಕೋನೇಟಿ ರಾಯರನ್ನು ದತ್ತು ಕೇಳಿ ಶ್ರೀರಂಗರಾಯರನ್ನು ಕೊಟ್ಟರು ಅವರನ್ನು ತಂದು ವೇಲೂರು ಸಿಂಹಾಸನಕ್ಕೆ ಅಧಿಕಾರ ನೀಡಲಾಗಿ ಆತ ಬಹುಜಾರನಾಗಿ ಪ್ರಭುತ್ವ ಸರಿಯಾಗಿ ನಡೆಯಲಿಲ್ಲ ಆದ್ದರಿಂದ ರಾಜ್ಯ ಅನ್ಯಾ ಕ್ರಾಂತವಾಗಿ ಬಿದನೂರಿಗೆ ಹೋಗಲು ಆ ಗ್ರಾಮಾ ಚಿಕ್ಕಮ್ಮಾಜಿ ಎದುರಾಗಿ ಬಂದು ಕರೆದುಕೊಂಡು ಹೋಗಿ ಎರಡು.....
ಬಿದನೂರಿನಲ್ಲಿರುವ ರಾಮದಾಸ ಎನ್ನುವ ಆನೆಯನ್ನು ಆನೆಗೊಂದಿಗೆ ಕಳಿಸಲು ಇಲ್ಲಿ ಕೊನಮರಾಜನ ಕುಮಾರರು ರಾಯಲಯ್ಯ ತೆಗೆದುಕೊಂಡರು ರಾಯರಿಗೆ ನಿಸ್ಸಂತತಿ ಆಗಿದ್ದರಿಂದ ಶ್ರೀರಂಗರಾಯರಿಗೆ ಪಟ್ಟಾಭಿಷೇಕನಾಗಿ ಗಗನಮಹಲು ಶೀತಾರಾಮನ ಚಾವಡಿ ದೊಡ್ಡನಗರ ಕಟ್ಟಿಸಿಕೊಂಡು ನಾಲ್ವರು ಬಂಧುಗಳೊಂದಿಗೆ ಆ ಸ್ಥಳದಲ್ಲಿ ಇದ್ದರು ಶ್ರೀಸ್ವಾಮಿ ಅನುಗ್ರಹದಿಂದ ನಲವತ್ತು ಲಕ್ಷಗಳ ರಾಜ್ಯ ಸಂಪಾದನೆ ಮಾಡಿ ಇರುವಾಗ ಶ್ರೀರಂಗರಾಯರಿಗೆ ಯಜಮಾನ ಚಂಡ್ರಾಜು ಅಯ್ಯ ದೊಡ್ಡ ವೆಂಗಣ್ಣಯ್ಯ ಯಿ ವುಭಯರು ಇಪ್ಪತ್ತು ವರ್ಷದವರಾಗಿರಲು ಯಜಮಾನ ಚಂಡ್ರಾಜು ಅಯ್ಯನಿಗೆ ಪಟ್ಟಾಭಿಷೇಕಮಾಡಿ ಶ್ರೀರಂಗರಾಯರು ಸ್ವರ್ಗಸ್ಥರಾದರು.

ಇತ್ತಕಡೆ ಶಾಜಿರಾವು ಆವಂತರದಿಂದ ರಾಜ್ಯತೊರೆದು ಕತ್ತೆರಮಲ ಪೋತುಗಲ್ಲು ಆ ಪ್ರಾಂತ್ಯಗಳ ಇಪ್ಪತ್ತುವರ್ಷಗಳು ಕಾಲಕ್ಷೇಪಮಾಡಿ ಅಲ್ಲಿರಲು ರಾಮಪ್ಪಯ್ಯನವರು ತಿಮ್ಮಪ್ಪಯ್ಯನವರು ಪೋತುಗಲ್ಲು ಎಂಬ ಗ್ರಾಮದಲ್ಲಿ ಹುಟ್ಟಿ ಎಂಟು ವರ್ಷಗಳು ಆದನಂತರ ರಾಯರ ರಾಯವೇಲೂರಿನಲ್ಲಿ ಕೆಲವರು ಬುಕ್ಕರಾಯರ ಕಮ್ಮವೆಲ, ಪೆನುಗೊಂಡದ ಹಳೇ ಸಂಬಂಧ ಬಂಡ್ರೌತು, ಕನಕಗಿರಿ ದೊಡ್ಡ ಕಡಚಿನಾಯುಡು, ಗುಡೇಕೋಟೆ ಸಣ್ಣ ಜಂಬು ನಾಯಕ, ಇವರೆಲ್ಲರೂ ಸೇರಿ ಬುಕ್ಕಸಾಗರದಲ್ಲಿ ಠಾಣೆಹೂಡಿ ಅಲ್ಲಿಂದ ಕೋಟೆಗಳ ಮೇಲೆ ಪ್ರವೇಶಿಸಿ ಊರಿನಲ್ಲಿರುವ ಶಹಾಜಿವಯರ ಕಾವಲುಗಾರರನ್ನು ರಾತ್ರಿ ಪಟ್ಟಣಕ್ಕೆ ಕರೆದು ಮೂಗು ಕಿವಿ ಕೊಯ್ದರು ಇದರಿಂದ ಪ್ರಜೆಗಳು ಹೆದರಿದರು ಮರು ತಿರುಗುವವರೆಗೆ ಶಹಿಜ ದುರ್ಗಗಳನ್ನು ನಿಮ್ಮ ಕಡೆಯಿಂದ ನಾಲ್ಕು ಸಾವಿರ ಜನರನ್ನು ಕಾಣಿಸದಿದ್ದರೆ ಮುಖಭಂಗ ಮಾಡಬೇಕೆಂದು ತಾಕೀತು ಮಾಡಿರಲು ಹಳೆಯಪೈಕದ ವೀರಣ್ಣ ಗವಿಯ ಸೇರಿ ಅತಿ ಉಪದ್ರವ ಮಾಡಲು ಪ್ರತಿದಿನವೂ ಹಳೆಯದರಲ್ಲಿ ಪೆಮ್ಮಸಾನಿ ವೆಂಗಟಪನಿನಾಯುನಿಗೆ ಆಂಜನೇಯಸ್ವಾಮಿ ದುರ್ಗವನ್ನು ದೇವರು ಕನಸಿನಲ್ಲಿ ಬಂದು ದೇವರಿಲ್ಲದ ಗುಡಿ ಪೂಜೆಮಾಡುತ್ತಿರುವಿರಿ ಇದು ಸುಗ್ರೀವರ ಬಿರುದು (ಪಟ್ಟಣ) ಇದೆ ಆದ್ದರಿಂದ ನಿಮ್ಮನ್ನು ಆಳಿದವರು ಪೋತುರಾಯ ಎಂಬ ಗ್ರಾಮದಲ್ಲಿ ಇದ್ದಾರೆ ಅವರನ್ನು ಇಲ್ಲಿಗೆ ಬರಹೇಲಿ ಮುಂದೆ ಸ್ವಾಮಿ ಕಾರ್ಯ ಸುಗಮವಾಗುವಂತೆ ನನಗೆ ಶ್ರೀರಾಮನ ಅನುಗ್ರಹವಾಗಿದೆ ಎಂದು ವೆಂಗಟಪತಿರಾಯನಿಗೆ ಆಂಜನೇಯನು ಆಜ್ಞಾಪಿಸಿದ ನಂತರ। ಸಣ್ಣದೊಡ್ಡವರು ನಾಲ್ಕುಮಂದಿ ನಾಯಕರನ್ನು ಸ್ವರ್ನಗಿರಿ ವುಡಿಚಿನಾಯುನಿಯೊಂದಿಗೆ ಆಂಜನೇಯನ ಕೃಪೆಮಾಡಿ ಪ್ರಸಾದಿಸಿದ ಅಭಿಪ್ರಾಯ ಇವರೆಲ್ಲರಿಗೆ ಒಪ್ಪಿಸಿ ಪೆಮ್ಮಸಾನಿ ವೆಂಕಟಪತಿನಾಯನಿ ತಮ್ಮ ರಂಗಪ್ಪನಾಯನಿಗೆ ನಾಗನ್ನರು ಚೆಂಚುರಾಮಣ್ಣ, ಉಪ್ಪಿನಕಾಯಿ ತಿಮ್ಮನ್ನ ವೆಲುಗೋಟಿ ಓಬನ್ನ ಈ ಐವರನ್ನು ಇಪ್ಪತ್ತೆರಡು ಮಂದಿ ಇದ್ದ ಬಂಡಿಯಲ್ಲಿ ಪ್ರಯಾಣಮಾಡಿ ನಾಲ್ಕುಸಾವಿರ ರೂಪಾಯಿಗಳು ಖರ್ಚಿಗೆಕೊಟ್ಟು ಪೋತುಗಲ್ಲಿಗೆ ಕಳಿಸಲಾಗಿ ಅವರು ಹೋಗಿ ರಾಜಾಧಿರಾಜ ಶ್ರೀ ರಾಮಪ್ಪಯ್ಯ ತಿಮ್ಮಪ್ಪಯ್ಯನವರಿಗೆ ಆಗತ್ಯವಾಗಿ ವರ್ತಮಾನವನ್ನು ಹೇಳಿ ಕಳಿಸಲು ರಾಜರಾಜಶ್ರೀ ರಾಯರು ಕರೆಕಳಿಸಲು ಇವರು ಹೋಗಿ ಸಾಷ್ಟಾಂಗ ನಮಸ್ಕಾರ ಮಾಡಿ ಯಾವದ್ ವರ್ತಮಾನವನ್ನು ಮನವಿಮಾಡಿಕೊಳ್ಳಲು ರಾಯರು ಪ್ರಧಾನಿಯಾದ ಗಾದಾರಿ ಅಪ್ಪಯ್ಯನನ್ನು ಕರೆದು ನಮ್ಮ ಸ್ಥಳಗಳಿಂದ ಶುಭವಾರ್ತೆಗಳು ತಂದು ಪಾತರಿಕರು ಬಂದಿದ್ದಾರೆ. ಇವರಿಗೆ ಏನು ಆಲೋಚನೆಯೆಂದು ರಾಯರು ಅಪ್ಪಣೆ ನೀಡಿದರು।

ಪ್ರಧಾನಿ ಗಾಧಾರಿ ಅಪ್ಪಯ್ಯ ದೇವರ ನಿಮ್ಮ ಪ್ರಭಾವದಿಂದಲಿ ಶುಭವಾರ್ತೆ ಕೇಳಿದಂತೆ ಆಯಿತು ಮಾರ್ಗಮಧ್ಯದಲ್ಲಿ ಶುಭಲಗ್ನವನ್ನು ವಿಚಾರಿಸಿ ಸಿದ್ಧಪಡಿಸಿ ಪ್ರಯಾಣಮಾಡಿ ಬಹಳದಿನಗಳು ವಾಸ ಮಾಡಿದೆವು ಯಾವತ್ ಪಾಳೆಗಾರರಿಗೆ ಸಾಹೇಬ್ ಸುಬೇದಾರರಿಗೆ ಚೆನ್ನಾಗಿದೆ । ಆದರೆ ನಾವು ರಾತ್ರಿ ಪ್ರಯಾಣವಾಗಿ ಆಯಾಸವಾಗಿದ್ದೇವೆ. ಈ ರಾತ್ರಿ

ಪೆನ್ನೋಬಳಂ ನರಸಿಂಹಸ್ವಾಮಿಗಳ ದರ್ಶನವನ್ನು ಮಾಡಿಕೊಂಡು ಅಲ್ಲಿಂದ ಅಮಿದಾಲರಾಕಿಲ್ಲೆ ಹತ್ತಿರ ಠಾಣೆಹೂಡಿ ಆ ಮರುದಿನ ಕತ್ತಲಾದ ಮೇಲೆ ತೆರಳಿಬಂದು ರಾಮಸಾಗರನ್ನು ಸೇರಿ ಅಲ್ಲಿಂದ ಬುಕ್ಕಸಾಗರ ಸೇರಿ ಅಲ್ಲಿಂದ ಬುಕ್ಕಸಾಗರಕ್ಕೆ ಬಂದು ಕೋಟೆಯಲ್ಲಿರುವ ಕಿಲ್ಲೇದಾರರಿಗೆ ಹೇಳಿ ಕಳಿಸಲು ಆ ತಳವಾರ ಮುರಾರಿ ನಾಯಕನು ಮೊದಲಾದ ಬಂಟರನ್ನು ಸ್ತೋಮ ಮಾಡಿಕೊಂಡು ಎದುರಿಗೆ ಬಂದು ಊರೊಳಗೆ ಕರೆದೊಯ್ದರು |

ಇವರನ್ನು ಇಲ್ಲಿ ಇರಲು ರಾಯರ ಅಪ್ಪಣೆನೀಡಲು ಪಾತರಿಕದವರು ಹೋಗಿ ವೀರಣ್ಣಗಟ್ಟಿನಲ್ಲಿರುವ ರಾಜರಾಜಶ್ರೀ ರಾಯರಿಗೆ ಸಾಷ್ಟಾಂಗ ವಂದನೆ ಹೇಳಿ ವಿನಯ ವಿಧೇಯರಾಗಿ ಮನವಿ ಮಾಡಿದರು | ನೀವು ನಮ್ಮ ಪಟ್ಟಣ ಸ್ವಾಧೀನ ಆಗುವವರೆಗೆ ಕನಕಗಿರಿಗೆ ವಿಜಯಮಾಡಿಸಬೇಕೆಂದು ಮನವಿಮಾಡಿ ಕರೆದುಕೊಂಡು ಹೋಗಿ ಕನಕಗಿರಿಯಲ್ಲಿ ಆಳಿದವರನ್ನು ನಿಲ್ಲಿಸುತ್ತೇನೆ. ಪಾತರಿಕರು ಬಂದು ಮೇಗೋಟಿ ದುರ್ಗವನ್ನು ಸೇರಿ ಅಲ್ಲಿ ಅವರೆಲ್ಲರೂ ಸೇರಿ ಯೋಚನೆಮಾಡಿ ರಾಯರಿಗೆ ಬಿನ್ನೈಸಿಕೊಂಡರು | ಆಳಿದವರಿಗೆ ಸಾಂಮ್ರಾಜ್ಯ ಪದವಿ ಸಿಂಹಾಸನರೂಢರಾದಾಗ ನಮಗೆ ಕೆಲವು ಬಿರುದು ನೀಡಬೇಕೆಂದು ಮನವಿ ಮಾಡಲಾಗಿ ರಾಜಾಧಿರಾಜಶ್ರೀ ಮೇಲಿನವರು ಅಪ್ಪಣೆ ನೀಡಿದರು. ನೀವು ಸ್ವಾಮಿ ಕಾರ್ಯಾ ದುರಂಧರಾಗಿದ್ದೀರಿ | ಯಾವತ್ತು ಕೀರ್ತಿ ಪ್ರತಾಪ ಖ್ಯಾತಿ ನಾಮಾಂಕಿತಾದಿ ಸಕಲ ಸುಖಾನುಭವ ನಿಮ್ಮದೇ ಆಗಿದೆ ಎಂದು ಮುಂದಿನ ಕಾರ್ಯ ಪ್ರೇರೇಪಣೆ ಮಾಡಬೇಕು | ಆಲಸ್ಯಾದಮೃತ ವಿಷಂ ಅನ್ನುವ ನ್ಯಾಯವಿದೆಯಾದ್ದರಿಂದ ಆಲಸ್ಯ ಮಾಡಬೇಡಿರೆಂದು ನಿರೂಪವಮಾಡಿದಾರಾದ್ದರಿಂದ ಸ್ವಾಮಿಕಾರ್ಯಕ್ಕೆ ಅಪ್ಪಣೆ ನೀಡಿದ್ದರಿಂದ ಮಹಾಪ್ರಸಾದವೆಂದು ಧುರಂಧರತ್ವ ಉಪಯೋಗಿಸಲಾಗಿ ಸಾಜಿಯವರಿಗೆ ಯೀ ಪಾತರಿಕದವರು ಅಧಿಕ ಉಪಟಳ ಮಾಡುತ್ತಾ ಇದ್ದಾರೆಂದು ಮನವಿ ಮಾಡಲಾಗಿ ಅವರು ಹೊಸ ಪೌಜನ್ನು ಜಮೆಮಾಡಿ ಪಟ್ಟಣಕ್ಕೆ ಬರಲು ಇರುವಷ್ಟರಲ್ಲಿಯೇ ವೆಮ್ಮಸಾನಿ ವೆಂಕಟಪತಿನಾಯುಡು ವುಡಿಚಿನಾಯುಡು ಯೀ ಉಭಯತ್ರರು ನಮಗೆ ಆಂಜನೇಯನ ಆಜ್ಞಾನುಸಾರವಾಗಿ ಯೀದಿನವು ಜಯಪ್ರದವಾಗಿದೆ| ನಾವು ಈ ಮಹೋರ್ತಕ್ಕೆ ಸಾಯಂಕಾಲದವರೆಗೆ ನಿಂತು ರಾತ್ರಿಯಾಗುವುದರೊಳಗೆ ಆಕ್ರಮಿಸಿ, ಲಗ್ಗೆಹಾಕಿ ಶಿರಚ್ಛೇದನ ಮಾಡಬೇಕೆಂದು ಆಲೋಚನ ಮಾಡಲಾಗಿ ||

ಅಡಿಟಿಪ್ಪಣಿಗಳು

೧. ಡಾ. ದೇವರಕೊಂಡಾರೆಡ್ಡಿ, ಪ್ರವಾಚಕರು, ಶಾಸನಶಾಸ್ತ್ರ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ದಾಖಲೆಯನ್ನು ನೀಡಿ ಸಹಕರಿಸಿದ್ದಕ್ಕಾಗಿ ಕೃತಜ್ಞತೆಗಳು

೨. ಡಾ. ಜಾಜಿ ದೇವೇಂದ್ರಪ್ಪ ಇವರು ದಾಖಲೆಯ ಕನ್ನಡ ಅನುವಾದದಲ್ಲಿ ನೆರವಾದುದಕ್ಕೆ ಕೃತಜ್ಞತೆಗಳು

❖ ❖

೪

ಎರಡನೆಯ ದೇವರಾಯನ ಕಲ್ಲೂರ ಶಾಸನ

ಜಗದೀಶ

ಹೊಸನಗರ ತಾಲೂಕಿನ ಕಲ್ಲೂರು ಗ್ರಾಮದಿಂದ ೨ ಕಿ.ಮೀ. ದೂರ ಇರುವ ಹಳೆಯು ಗ್ರಾಮದ ಪರಿಸರದ ದೇವಾಲಯವೊಂದರಲ್ಲಿ (ನವೀಕೃತ, ಹಂಚಿನಮಾಡನ್ನು ಹೊಂದಿದೆ) ನಂದಿಯನ್ನುಳ್ಳ ಶಿಲಾ ಸ್ತಂಭವಿದೆ. ಸ್ತಂಭದ ಬಲ, ಎಡ ಮತ್ತು ಮುಂಭಾಗದಲ್ಲಿ ಕ್ರಮವಾಗಿ ೧೯, ೭ ಮತ್ತು ೮ ಸಾಲುಗಳ ಅಪ್ರಕಟಿತ ಶಾಸನವಿದೆ.

ಬಲಭಾಗ (ಒಂದನೆಯ ಭಾಗ)

೧ ಶ್ರೀ ಗಣಾದಿಪತಯೆ ನಮಃ ಶ್ರೀ ಶಾರದ
೨ ೨. ಯೆ ನಮಃ ಶ್ರೀ ಗುರುಭ್ಯೋನಮಃ (ಸ್ವ)
೩ ಸ್ತು | ನಮಸ್ತುಂಗ ಸಿರಸ್ತುಂಭಿ ಚಂದ್ರಚಾಮ
೪ ರ ಚಾರವೆ ತ್ರೈಲೋಕ್ಯ ನಗರಾರಂಭ ಮೂ
೫ ಲ ಸ್ಥಂಭಾಯ ಶಂಬವೆ || ಸ್ವಸ್ತಿ ಶ್ರೀ ಜಯಾ
೬ ಬ್ಯದಯ ಶಕ ವರುಷ ೧೩೪೩ ನೆಯ
೭ ಶೋಭಕೃತು ಸಂವತ್ಸರದ ಮಾ ಸುದ್ಧ ೧೧
೮ ಸೋಮವಾರದಲು ಶ್ರೀ ಮಂನು ಮಹಾ
೯ ರಾಜಾಧಿರಾಜ ರಾಜಪರಮೇಶ್ವರ ಶ್ರೀ
೧೦ ವೀರ ಪ್ರತಾಪ ವಿಜಯ ಬುಕ್ಕರಾಯ ಮ
೧೧ ಹಾರಾಯರ ಕೊಮಾರ ಶ್ರೀ ವೀರ ಪ್ರ
೧೨ ತಾಪ ದೇವರಾಯ ಮಹರಾಯ

೧೩ ತಮಗೆ ಪಟ್ಟಾಭಿಷೇಖವಾದಲಿ ಶ್ರೀ ವಿರು
೧೪ ಪಾಕ್ಷ ದೇವರ ಅಮೃತ ಪಡಿಗೆ ಸಮರ್ಪಿ
೧೫ ಧಾರೆಯನೆರೆದು ಕೊಟ್ಟ ಆ ...
೧೬ ನಾಡ ವಳಗಣ ಕಲೂರ ನಾಡಿಂ ...
೧೭ ಗ್ರಾಮಗಳ ವಿ ..
೧೮ ಗ್ರಾಮ ....
(ಉಳಿದ ಭಾಗ ಅಡಿಪಾಯದಲ್ಲಿ ಹೂತು ಹೋಗಿದೆ)



ಎಡಭಾಗ ಎರಡನೆಯ ಭಾಗ
ಅತಿತೃಟಿತ

ಮುಂಭಾಗ ಮೂರನೆಯ ಭಾಗ
೧ ಮಹರಾಯ ದೇವರಾ
೨ ಯ ಮಹರಾಯ
೩ (ರು) ವಿಜಯಾನಗರಿ
೪ ಯಲು ಪಟ್ಟಾಭಿಷೇ
೫ (ಖ) ವಾದಲಿ ಹಂಪೆ
೬ ಯ ಶ್ರೀ ವಿರೂಪಾ
೭ ಕ್ಷ ದೇವರಿಗೆ ಕೊಟ್ಟ
೮ ಕಲೂರ ನಾಡು

ಇಮ್ಮಡಿ ದೇವರಾಯನ ಪಟ್ಟಾಭಿಷೇಖವನ್ನು ಉಲ್ಲೇಖಿಸುತ್ತಿರುವುದರಿಂದ ಈ ಶಾಸನವು ಮಹತ್ವದೆನಿಸಿದೆ. ಒಂದನೆಯ ದೇವರಾಯ ಮತ್ತು ದೇಮಾಂಬಿಕೆಯರಲ್ಲಿ ಪುತ್ರನಾಗಿ ವಿಜಯ ಭೂಪತಿ ಜನಿಸಿದನು. ಮೂರನೆಯ ಬುಕ್ಕರಾಯನೆಂದು ಈತನನ್ನು ಕರೆಯುತ್ತಾರೆ. ವಿಜಯ ಬುಕ್ಕರಾಯ ಮತ್ತು ನಾರಾಯಣದೇವಿಯರಲ್ಲಿ ಮೊದಲನೆಯವನಾಗಿ ಇಮ್ಮಡಿ ದೇವರಾಯ, ಎರಡನೆಯವನಾಗಿ ಶ್ರೀಗಿರಿನಾಥ ಮತ್ತು ಮಗಳು ಹರಿಣಿ ಜನಿಸುತ್ತಾರೆ.[೧]

ಮೂರನೆಯ ಹರಿಹರನ ೩ ಆಗಸ್ಟ ೧೪೨೨ ಶಾಸನವನ್ನು ಆಧರಿಸಿ ದೇವರಾಯನು ಈ ದಿನಾಂಕಕ್ಕೆ ಮೊದಲು ಮರಣಿಸಿರಬೇಕೆಂದು ಊಹಿಸಲಾಗಿದೆ.[೨] ವಿಜಯ ಬುಕ್ಕರಾಯನು ಕ್ರಿ.ಶ. ೧೪೧೩ ಮತ್ತು ಕ್ರಿ.ಶ. ೧೪೧೮ ರಲ್ಲಿ ದೇವರಾಯನ ಪ್ರತಿನಿಧಿಯಾಗಿ ಉತ್ತರ ಮತ್ತು ದಕ್ಷಿಣ ಆರ್ಕಾಟ್ ಜಿಲ್ಲೆಯಲ್ಲಿ ಆಳುತ್ತಿದ್ದನು. ೧೪.೦೮.೧೪೨೨ ಮತ್ತು ೨೧.೯.೧೪೨೨ ಅವಧಿಯಲ್ಲಿ ಅರಸನಾಗಿ ಆಳುತ್ತಿದ್ದನು. ಎರಡನೆಯ ದೇವರಾಯನ ತೀರ್ಥಹಳ್ಳಿ ತಾಲೂಕಿನ ಶಾಸನವೊಂದರಿಂದ ಮೂರನೆಯ ಬುಕ್ಕರಾಯನು ಕ್ರಿ.ಶ. ೧೪೨೩ ರಲ್ಲಿ ಸದ್ಗತಿ ಹೊಂದಿರುವುದನ್ನು ಗುರ್ತಿಸಲಾಗಿದೆ. ಡಾ. ಹೆಚ್.ಎಂ.ನಾಗರಾಜು ಅವರು

ಎರಡನೆಯ ದೇವರಾಯನ ಆಳ್ವಿಕೆಯ ಅವಧಿಯನ್ನು ೧೦/೨೫ ಫೆಬ್ರವರಿ ೧೪೨೩ ರಿಂದ ೨೪ ಮೇ ೧೪೪೬ ಇರಬೇಕೆಂದು ಪ್ರತಿಪಾದಿಸಿದ್ದಾರೆ.[೩]

ಈಗಿನ ಶಾಸನದಿಂದ ಎರಡನೆಯ ದೇವರಾಯನ ಆಳ್ವಿಕೆ ಪ್ರಾರಂಭವಾದ ಕಾಲವನ್ನು ಇನ್ನೂ ೧೫ ದಿನ ಹಿಂದಕ್ಕೆ ಹಾಕಬಹುದಾಗಿದೆ. ಶಾಸನದ ವಿವರಗಳಂತೆ ೨೨ ಜನವರಿ ೧೪೨೩ ಆಗುತ್ತದೆ, ಅಂದು ಶುಕ್ರವಾರ ಆಗಿದೆ. ದಿನಾಂಕ ೨೫ ಜನವರಿ ೧೪೨೩ ರಂದು ಸೋಮವಾರ ಇರುತ್ತದೆ.

ಇಲ್ಲಿನ ಕಲ್ಲೇಶ್ವರ ದೇವಾಲಯದ ಎದಿರು ಸಾಂತರವರ ಶ್ರೀ ವಲ್ಲಭನ ಕ್ರಿ.ಶ. ೧೧೬೮ರ ಶಾಸನ [೪] ಮತ್ತು ಹೊಂಬುಚ ಸಾಂತರರ ಕೆಲವು ಶಾಸನಗಳಲ್ಲಿ ಕಲ್ಲೂರ ನಾಡಿನ ಉಲ್ಲೇಖವಿದೆ. ಈ ನಾಡನ್ನು ಇದುವರೆಗೆ ಗುರ್ತಿಸಿಲ್ಲ.

ಪ್ರಸ್ತುತ ಇಮ್ಮಡಿ ದೇವರಾಯನ ಶಾಸನದಿಂದ ಕಲ್ಲೂರ ಗ್ರಾಮವೇ ಕಲ್ಲೂರ ನಾಡಿನ ಪ್ರಮುಖ ಪಟ್ಟಣವಾಗಿತ್ತೆಂದು ತಿಳಿಯುತ್ತದೆ. ಶಾಸನದ ಎರಡನೆಯ ಬದಿ ಅತಿತೃಟಿತವಾಗಿರುವುದರಿಂದ ಕಲ್ಲೂರ ನಾಡಿನಲ್ಲಿ ಇದ್ದ ಗ್ರಾಮಗಳ ವಿವರ ಸಿಗುವುದಿಲ್ಲ.

ಅಡಿಟಿಪ್ಪಣಿಗಳು

ಇಲ್ಲಿನ ಅಪ್ರಕಟಿತ ಶಾಸನದ ಕುರಿತು ಮಾಹಿತಿಯನ್ನು ನೀಡಿದ ಶ್ರೀಯುತರುಗಳಾದ ಕಲ್ಲೂರ ಮೇಘರಾಜ, ವಾಸಪ್ಪಗೌಡ ಮತ್ತು ತೇಜೋಮೂರ್ತಿ ಮತ್ತು ನನ್ನೊಂದಿಗೆ ಸಹಕರಿಸಿದ ರಾಮಚಂದ್ರ ಕಾರಂತ ಮತ್ತು ಜಯದೇವಪ್ಪ ಜೈನಕೇರಿ ಇವರಿಗೆ ಹಾಗೂ ಶಾಸನದ ಮೂಲ ಪಾಠವನ್ನು ನೀಡಿದ ಡಾ. ಶ್ರೀನಿವಾಸ ರಿತ್ತಿಯವರಿಗೆ ನನ್ನ ಕೃತಜ್ಞತೆಗಳು.

೧. ಇ.ಸಿ. ೮, ನಗರ ಶಾಸನ ಸಂಖ್ಯೆ ೬೫

೨. H.M.Nagaraju, Devaraya II and his times (History of Vijayanagara), University of Mysore, Mysore, other publications-94, 1991, pp-8 (EC Gu 24, Ch 159, EI XV No 14)

೩. ಅದೇ ಮೇಲಿನಂತೆ ಪುಟ ೮-೯ (ಇ.ಸಿ.-೮ ತೀರ್ಥಹಳ್ಳಿ ಸಂಖ್ಯೆ ೧೪, ಸೊರಬ ಸಂಖ್ಯೆ ೫೬೫ ಮತ್ತು ಇ.ಸಿ.-೧ ಶ್ರವಣಬೆಳ್ಗೊಳ ೧೨೫)

೪. ಜಯದೇವಪ್ಪ ಜೈನಕೇರಿ, ಶ್ರೀ ವಲ್ಲಭನ ಅಪ್ರಕಟಿತ ಕಲ್ಲೂರ ಶಾಸನ ಮತ್ತು ಕೆಲವು ಪ್ರಾಚೀನ ಅವಶೇಷಗಳು, ಇತಿಹಾಸ ದರ್ಶನ ೨೦೦೨, ಪುಟ ೬೩

❖ ❖

೫

ವಿಜಯನಗರ ಅರಸರ ಕಾಲದ ಆಡಳಿತ ಕೇಂದ್ರವಾಗಿ ಸವಳಂಗ ಕೆಲವು ಶಿಲ್ಪಗಳು ಮತ್ತು ಶಾಸನಗಳು

ಜಯದೇವಪ್ಪ ಜೈನಕೇರಿ

ಇತ್ತೀಚೆಗೆ ದಾವಣಗೆರೆ ಜಿಲ್ಲೆಗೆ ಸೇರಿರುವ ಒಂದು ಗ್ರಾಮ ಸವಳಂಗ. ಶಿವಮೊಗ್ಗ ಜಿಲ್ಲಾ ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಐತಿಹಾಸಿಕ ಹಿನ್ನೆಲೆಯ ಅನೇಕ ಪ್ರಾಚೀನ ಪಳೆಯುಳಿಕೆಗಳು ಕಂಡುಬರುವ ಈ ಗ್ರಾಮ ಚಾರಿತ್ರಿಕವಾಗಿ ಮಹತ್ವದ ಸ್ಥಾನ ಪಡೆದಿದೆ. ಗ್ರಾಮದ ಸುತ್ತ ಗುಡ್ಡ ಬೆಟ್ಟ ಹಳ್ಳ ಕೊಳ್ಳಗಳಿವೆ ಪ್ರಕೃತಿಯ ಮಡಿಲಲ್ಲಿ ದಟ್ಟ ಅರಣ್ಯದ ಮಧ್ಯೆ ಇದ್ದ ಸವಳಂಗ ಈಗ ಬಯಲು ಸೀಮೆಯಾಗಿದೆ.

ಸವಳಂಗದ ಮುಖ್ಯ ವೃತ್ತದ ಸುತ್ತ ಮೂರು ವೀರಗಲ್ಲುಗಳು ಕಂಡುಬರುತ್ತವೆ. ಅವುಗಳಲ್ಲಿ ಒಂದು ಹೊಯ್ಸಳರ ಕಾಲಕ್ಕೆ ಸೇರಿದೆ. ಆರಕ್ಷಕ ಠಾಣೆ ಎದುರಿಗಿರುವ ವೀರಗಲ್ಲು ವಿಜಯನಗರ ಅರಸರ ಕಾಲಕ್ಕೆ ಸೇರಿದೆ.



ಅಲ್ಲದೆ ಮತ್ತೊಂದು ವರಟು ಕಲ್ಲಿನ ಮುಕ್ಕಾದ ಶಾಸನ ಈಗ ರಸ್ತೆ ಒಳಭಾಗದಲ್ಲಿ ಸೇರಿಹೋಗಿದ್ದು ಅದು ಸಹ ವಿಜಯನಗರ ಕಾಲಕ್ಕೆ ಸಂಬಂಧಿಸಿದೆ. ಈ ಶಾಸನ ಶಿಲ್ಪವು, ಶಿವಮೊಗ್ಗ, ಹೊನ್ನಾಳಿ ರಸ್ತೆಯ ಬದಿಯಲ್ಲಿ ಪೂರ್ವ ದಿಕ್ಕಿಗಿದೆ. ಶಾಸನದ ಅಳತೆ ೨x೩ ಅಡಿ ಇದ್ದು ಮೇಲ್ಭಾಗ ಒಡೆದಿದೆ. ಸ್ಥಾಪನೆಯ ವರ್ಷ ದಾಖಲಾಗಿಲ್ಲ. E.C.Volume VII & VIII ಸಪ್ಲಿಮೆಂಟ್ ಪುಟ ೪ರಲ್ಲಿ ಹೊಸ ಶಾಸನ ಸಂಖ್ಯೆ ೧೨೪ ಉತ್ತರಮುಖವಾಗಿರುವ ಕಲ್ಲಿನಲ್ಲಿರುವ ಶಾಸನ

೧ **ಆನೆಗೊಂದಿಯ ಮಠ**

೨ **ದ ವಿಜೇಂದ್ರ ಒಡೆಯರ್**

೩ **ಸವಳಂಗದ ಗ್ರಾಮಕ್ಕೆ**

೪ **ಶುಭಮಸ್ತು**

ಎಂದು ದಾಖಲಾಗಿದೆ. ಈ ಶಾಸನದಿಂದ ವಿಜಯನಗರ ಅರಸರ ಕಾಲದಲ್ಲಿ ಆನೆಗೊಂದಿಯ ಮಠದ ಶ್ರೀ ವಿಜೇಂದ್ರ ಒಡೆಯರು ಸವಳಂಗ ಗ್ರಾಮಕ್ಕೆ ಆಗಮಿಸಿದ್ದು, ಗ್ರಾಮದ ಸಮಸ್ತರಿಗೆ ಶುಭವನ್ನು ಕೋರಿ ಆಶೀರ್ವದಿಸಿದ ಸಂಗತಿ ತಿಳಿದುಬರುತ್ತದೆ. ವಿಜೇಂದ್ರ ಒಡೆಯರ ಕಾಲಮಾನ ಕುರಿತು ತೀರ್ಮಾನಕ್ಕೆ ಬರಬೇಕಾಗಿದೆ.

ಶಿಕಾರಿಪುರದ ರಸ್ತೆಯಲ್ಲಿ ಬಲಭಾಗದ ಮಠದ ಹಿತ್ತಲು ಜಾಗದಲ್ಲಿ ಒಂದು ದೊಡ್ಡ ವೀರಗಲ್ಲು ಇದೆ. ಈ ವೀರಗಲ್ಲು ಹೊಯ್ಸಳರ ಕಾಲಕ್ಕೆ ಸೇರಿದೆ.



ಭೂಮಿಯ ಮೇಲ್ಭಾಗದಲ್ಲಿ ೩ ಹಂತಗಳಲ್ಲಿ ಕೆತ್ತಲಾಗಿದೆ. ಕೆಳಗಿನ ಹಂತದಲ್ಲಿ ಗ್ರಾಮದ ವೀರನು, ಶತ್ರುಗಳೊಂದಿಗೆ ಬಿಲ್ಲು ಬಾಣಗಳಿಂದ ಹೋರಾಡುತ್ತಿರುವ ದೃಶ್ಯ ಕೆತ್ತಲಾಗಿದೆ. ಮಧ್ಯದ ಹಂತದಲ್ಲಿ ಮರಣಹೊಂದಿದ ವೀರನನ್ನು ಸಕಲ ಗೌರವಗಳೊಂದಿಗೆ ಮೆರವಣಿಗೆಯಲ್ಲಿ ಕೊಂಡೊಯ್ಯುವ ಕೆತ್ತನೆ ಚಿತ್ರಗಳಿವೆ. ಮೂರನೇ ಹಂತದಲ್ಲಿ ವೀರನನ್ನು ಸ್ವರ್ಗದಲ್ಲಿ ಸ್ವಾಗತಿಸುವ ಚಿತ್ರಗಳಿವೆ. ಮೇಲ್ಭಾಗ ಅರ್ಧಚಂದ್ರಾಕೃತಿಯಲ್ಲಿದ್ದು ಮಧ್ಯದಲ್ಲಿ ಸಮತಟ್ಟಾಗಿದೆ. ಇದರಲ್ಲಿ ಅಸ್ಪಷ್ಟವಾದ ಕೆತ್ತನೆಗಳ ಶಿವಲಿಂಗ, ಬಸವಣ್ಣ ಮುಂತಾದ ಚಿತ್ರಗಳಿವೆ. ಈ ವೀರಗಲ್ಲಿನ ಮುಂಭಾಗದಲ್ಲಿ, ಸುಮಾರು ೯" ಎತ್ತರದ ವೀರನ ಮುಖಭಾಗದ ಒಂದು ಶಿಲ್ಪವಿದೆ. ಕಿರೀಟ ಕರ್ಣ ಕುಂಡಲಗಳಿಂದ ಅಲಂಕೃತವಾಗಿದೆ. ವೀರನ ಕಣ್ಣುಗಳು ದೊಡ್ಡದಾಗಿದ್ದು ಮೀಸೆಗಳಿಂದ ಕೂಡಿದೆ.



ಈ ಶಾಸನದ ಪಟ್ಟಿಕೆಗಳಲ್ಲಿರುವ ಶಾಸನ ಓದಲು ಬಾರದಂತೆ ತೃಟಿತವಾಗಿದೆ. ಶಾಸನದ ಲಕ್ಷಣಗಳಿಂದ ಇದು ಹೊಯ್ಸಳ ಕಾಲದ್ದೆಂದು ವಿದ್ವಾಂಸರು ಊಹಿಸಿದ್ದಾರೆ.

ಸವಳಂಗ ಗ್ರಾಮದ ವೃತ್ತದಲ್ಲಿರುವ ಪಂಚಾಯ್ತಿ ಮಳಿಗೆಗಳ ಹಿಂಭಾಗದಲ್ಲಿ ಪ್ರಾಚೀನವಾಗಿ ಪೂರ್ಣಯ್ಯನವರ ಛತ್ರವಾಗಿದ್ದ ಆವರಣದಲ್ಲಿರುವ ಸರ್ಕಾರಿ ಮಾಧ್ಯಮಿಕ

ಶಾಲೆಯ ಮುಂಭಾಗದಲ್ಲಿ ಒಂದು ಕಲಾತ್ಮಕವಾದ ಜೋಡಿ ಮಹಾಸತಿ ಕಲ್ಲು ಇದೆ.



ಮೂರು ಹಂತದಲ್ಲಿರುವ ಈ ಶಿಲ್ಪದ ಕೆಳಹಂತದಲ್ಲಿ ಇಬ್ಬರು ಸ್ತ್ರೀಯರು ಬಲಗೈ ಅಭಯ ಹಸ್ತದಿಂದ ಕೂಡಿ ನಿಂತಿರುವಂತೆ ಕೆತ್ತಲಾಗಿದೆ. ಎರಡನೇ ಹಂತದಲ್ಲಿ ಸ್ವರ್ಗಾರೋಹಣ ಚಿತ್ರಗಳೂ ಮೇಲ್ಭಾಗದ ಅರ್ಧ ಚಂದ್ರಾಕೃತಿಯ ಭಾಗದಲ್ಲಿ ಸೂರ್ಯ ಚಂದ್ರರ ಉಬ್ಬು ಕೆತ್ತನೆಗಳು, ಶಿವಲಿಂಗವನ್ನು ಆರಾಧಿಸುತ್ತಿರುವ ವಿಗ್ರಹಗಳಿವೆ. ಮೂರು ಹಂತಗಳ ಪಟ್ಟಿಕೆಗಳಲ್ಲಿರುವ ಶಾಸನವು ಸಂಪೂರ್ಣ ಹಾಳಾಗಿದ್ದು ಓದಲು ಅಸಾಧ್ಯವಾಗಿದೆ. ಈ ಎರಡೂ ಶಾಸನಗಳನ್ನು ಓದಲು ಸಾಧ್ಯವಾದರೆ ಸವಳಂಗ ಗ್ರಾಮದ ಇತಿಹಾಸದ ಮೇಲೆ ಹೊಸ ಬೆಳಕು ಚೆಲ್ಲಲು ಸಾಧ್ಯವಾಗಬಹುದು. ಈ ಮಹಾಸತಿ ಶಿಲ್ಪ ಕೆಳದಿ ಅರಸರ ಕಾಲಕ್ಕೆ ಸೇರಿರಬಹುದು.

ಸವಳಂಗದಿಂದ ನ್ಯಾಮತಿಗೆ ಹೋಗುವ ರಸ್ತೆಯ ಬಲಭಾಗದಲ್ಲಿ ಒಂದು ಹೆಂಚಿನ ಹೊದಿಕೆ ಇರುವ ಹನುಮಂತನ ಗುಡಿ ಇದೆ. ಗರ್ಭಗುಡಿಯಲ್ಲಿ ಇತ್ತೀಚಿನ ಆಂಜನೇಯ ಮೂರ್ತಿ ಇದೆ. ಒಂದು ವಿಷ್ಣುವಿನ ಮೂರ್ತಿ ಪಕ್ಕದಲ್ಲಿದೆ. ನಾಲ್ಕು ಕೈಗಳಿರುವ ಈ ಶಿಲ್ಪದ ಸುತ್ತ ಸುಂದರವಾದ ಪ್ರಭಾವಳಿ ಇದೆ. ಮೇಲ್ಭಾಗದ ಎರಡೂ ಕೈಗಳಲ್ಲಿ ಶಂಖ, ಚಕ್ರಗಳೂ, ಕೆಳಭಾಗದ ಬಲ ಕೈ ಅಭಯ ಹಸ್ತ ಮುದ್ರೆಯಲ್ಲೂ ಮತ್ತೊಂದು ಎಡದ ಕೈಯಲ್ಲಿ ಗದೆ ಇದೆ. ಅಕ್ಕಪಕ್ಕದಲ್ಲಿ ಸ್ತ್ರೀ ವಿಗ್ರಹಗಳಿವೆ. ಮೂರ್ತಿಯ ಲಕ್ಷಣಗಳಿಂದ ಇದು ಸಹ ವಿಜಯನಗರ ಕಾಲಕ್ಕೆ ಸೇರಿದ್ದೆಂದು ಹೇಳಬಹುದು. ಆಂಜನೇಯ ಗುಡಿಯ ಮುಂಭಾಗದ ದೀಪಸ್ಥಂಭದ ಹಿಂದೆ ಅರಳಿ ಮರದ ಕಟ್ಟೆಯ ಮೇಲೆ, ಎರಡು ಪ್ರಾಚೀನ ಶಿಲ್ಪಗಳಿವೆ.



ಅವುಗಳಲ್ಲಿ ಒಂದು ಲಕ್ಷ್ಮೀನಾರಾಯಣ ಮೂರ್ತಿ, ನಿಂತ ಭಂಗಿಯಲ್ಲಿರುವ ಶಿಲ್ಪ ಅರಳಿ ಮರದ ಆಕ್ರಮಣಕ್ಕೆ ಒಳಗಾಗಿ ಶಿಥಿಲವಾಗಿದೆ. ಮೇಲಿನ ಬಲದ ಕೈಯಲ್ಲಿ ಚಕ್ರವಿದೆ. ಎಡದ ಕೈ ಮರದ ಸಂದಿಯಲ್ಲಿ ಕಾಣೆಯಾಗಿದೆ. ಬಲದ ಕೆಳಗಿನ ಕೈ ಕೆಳಮುಖವಾಗಿ ಅಭಯಮುದ್ರೆಯಲ್ಲಿದೆ. ಲಕ್ಷ್ಮಿಯ ದೇಹದ ಮೇಲ್ಭಾಗ, ಮರದ ಬೇರುಗಳಿಂದ ಆವೃತವಾಗಿದೆ. ಕಾಲುಗಳು ತೃಟಿತವಾಗಿವೆ. ಪ್ರಭಾವಳಿಯಲ್ಲಿ ಹೂವಿನ ಕೆತ್ತನೆಗಳೂ ಎರಡು ಬದಿಯಲ್ಲಿ ಚಾಮರಧಾರಣಿಯರೂ, ಪೀಠದಲ್ಲಿ ಗರುಡ ವಿಗ್ರಹವೂ ಇದೆ. ಈ ದೀಪಸ್ಥಂಭದಲ್ಲಿರುವ ಮತ್ತೊಂದು ವಿಗ್ರಹ ಅಶ್ವಾರೋಹಿಯಾಗಿರುವ ವೀರನ ಹಿಂದೆ ಛತ್ರಧಾರಿಯಾದ ಮನುಷ್ಯನ ಶಿಲ್ಪವಿದೆ.



ಈ ಶಿಲ್ಪದಲ್ಲಿ ಯಾವುದೇ ಶಾಸನ ಕಂಡುಬರುತ್ತಿಲ್ಲ.

ನ್ಯಾಮತಿ ರಸ್ತೆಯಲ್ಲಿ ಹಳೆ ಕೆರೆ ಸೇತುವೆ ಸಮೀಪ ಒಂದು ಪ್ರಾಚೀನ ನಂದಿ ಬಸವಣ್ಣನ ಸಣ್ಣ ಗುಡಿ ಪೂರ್ವಾಭಿಮುಖವಾಗಿತ್ತು. ಗುಡಿಯ ಎಡಭಾಗದಲ್ಲಿ ಒಂದು ಸೋಪಾನಗಳಿರುವ ಪುಷ್ಕರಣಿ ಇತ್ತು. ಈಗ ಪುಷ್ಕರಣಿ ನಾಶವಾಗಿದೆ. ದೇವಾಲಯ ನವೀಕರಿಸಲ್ಪಟ್ಟು ಇತ್ತೀಚಿನ ಕೆತ್ತನೆಯ ವಿಗ್ರಹ ಸ್ಥಾಪಿಸಲಾಗಿದೆ. ಈ ನಂದಿ ಬಸವೇಶ್ವರ ಗುಡಿಯ ಬಲಭಾಗದ ಹೊಲದ ಮಧ್ಯೆ ಒಂದು ದಿಣ್ಣೆ ಇದ್ದು ಇದರಲ್ಲಿ ಒಂದು ಬನಶಂಕರಮ್ಮನೆಂದು ಸ್ಥಳೀಯರು ಹೇಳುವ ಸ್ತ್ರೀ ವಿಗ್ರಹವಿದೆ.



ವೀರಾಸನದಲ್ಲಿ ಕುಳಿತಿರುವ ಈ ವಿಗ್ರಹಕ್ಕೆ ನಾಲ್ಕು ಕೈಗಳಿವೆ. ಬಲಭಾಗದ ಮುಂದಿನ ಬಲಕೈಯಲ್ಲಿ ಕತ್ತಿ ಇದೆ. ಕಡೀ ಹಸ್ತ ಕಿರೀಟ ಕರ್ಣ ಕುಂಡಲಗಳಿಂದ ಶೋಭಿತವಾದ ಪಾರ್ವತಿಯ ವಿಗ್ರಹದ ಸುತ್ತ ಹಾಳು ಬಿದ್ದ ಗೋಡೆಗಳೂ ಮೇಲ್ಭಾಗದಲ್ಲಿ ಕಲ್ಲಿನ ಚಪ್ಪಡಿಯೂ ಇವೆ. ಈ ವಿಗ್ರಹದ ಪಕ್ಕದಲ್ಲಿ ಒಂದು ಜೋಡಿನಾಗ ಶಿಲ್ಪವಿದೆ. ಈ ಎಲ್ಲ ವಿಗ್ರಹಗಳೂ ಹೊಯ್ಸಳರ ಕೊನೆಯ ಕಾಲ ಅಥವಾ ವಿಜಯನಗರ ಅರಸರ ಆರಂಭಿಕ ಕಾಲಕ್ಕೆ ಸೇರಿವೆ.

ವಿಜಯನಗರ ಕಾಲದ ಶಾಸನವಿರುವ ವೀರಗಲ್ಲು

ಸವಳಂಗದ ವೃತ್ತದಲ್ಲಿ ಆರಕ್ಷಕ ಠಾಣೆ ಎದುರು ಭಾಗದಲ್ಲಿರುವ ವೀರಗಲ್ಲು ಸುಮಾರು ೪೦ ಇಂಚು ಎತ್ತರ ೨೪ ಇಂಚು ಅಗಲವಾಗಿದ್ದು, ಇಂದಿಗೂ ಗ್ರಾಮಸ್ಥರಿಂದ ಎಣ್ಣೆ ಹಾಕುತ್ತಿದ್ದು ಪೂಜೆಗೊಳ್ಳುತ್ತಿದೆ. ನಾಲ್ಕು ಹಂತಗಳಲ್ಲಿರುವ ಈ ವೀರಗಲ್ಲಿನ ಕೆಳಭಾಗ ಭೂಮಿಯಿಂದ ಕೆಳಗಿದೆ. ಯುದ್ಧದ ದೃಶ್ಯವಿದೆ. ಎರಡನೇ ಹಂತದಲ್ಲಿ ಬಿಲ್ಲು

ಬಾಣಗಳಿಂದಲೂ ಮುಷ್ಟಿಯಿಂದ ಮತ್ತು ಚೂಪಾದ ಕತ್ತಿಹಿಡಿದು ಯುದ್ಧ ಮಾಡುತ್ತಿರುವ ಉಬ್ಬು ಚಿತ್ರಗಳಿವೆ. ನಡುವೆ ಒಬ್ಬ ವೀರನು ಕೆಳಗೆ ಬಗ್ಗಿರುವ ಚಿತ್ರವಿದೆ. ಮೂರನೆಯ ಹಂತದಲ್ಲಿ ಸ್ವರ್ಗಾರೋಹಣ ಚಿತ್ರವಿದೆ. ಇಬ್ಬರು ವೀರರನ್ನು ಮೇನಾದಲ್ಲಿ ಕುಳ್ಳಿರಿಸಿ ಕೊಂಡೊಯ್ಯುವ ಚಿತ್ರವಿದೆ. ಮೇಲ್ಭಾಗದಲ್ಲಿ ಬಸವಣ್ಣ, ಶಿವಲಿಂಗ ಮತ್ತು ಸ್ವರ್ಗ ಸೇರಿ ಅಂಜಲೀ ಭದ್ರರಾಗಿ ಕುಳಿತ ವೀರರ ಚಿತ್ರಗಳಿವೆ. ಈ ವೀರಗಲ್ಲಿನ ಪಟ್ಟಿಕೆಗಳಲ್ಲಿಯೂ ಶಾಸನವಿದ್ದು, ಶಾಸನಪಾಠ ಕೆಳಗಿನಂತಿದೆ.

ಒಂದನೇ ಪಟ್ಟಿಕೆಯಲ್ಲಿರುವ ಶಾಸನಪಾಠ

೧. ನಮಸ್ತುಂಗ ಸಿರಸ್ತುಂಬಿ ಚಂದ್ರ ಚಾಮರ ಚಾರೆವೇ ತ್ರೈಲೂಕ್ಯ ನಗರಾರಂಭ ಮೂಲಸ್ತಂಭಾಯ ಸಂಭವೆ

೨. ಸಕವರುಸದ ೧೩೧೪ನೆಯ ಸುತ್ಸರದ ಸ್ರಾವಣ ಸು ೧೧ ಬು ಶ್ರೀ ರಾಜಾದಿರಾಜ ರಾಜ ಪರಮೇಶ್ವರ

೩. ಸ್ವಮುದ್ರಾದೀಶ್ವರ ಭಾಷೆಗೆ ತಪ್ಪುವ ರಾಯನ ಗಂಡ ಮೂರುರಾಯರ ಗಂಡ ಶ್ರೀ ವೀರ ಹರಿಹರರಾಯರು

೪. ಪೃಥುವೀ ರಾಜ್ಯಂಗೆಯುತ್ತಿಹಲ್ಲಿ ಆರಗದ ಜಂನ್ರಸ ವಡೆಯರು ನಾಡಿ (/) ಸವಳಂಗಿಯ

ಎರಡನೇ ಪಟ್ಟಿಕೆಯಲ್ಲಿರುವ ಶಾಸನಪಾಠ

೫. ಗೌಡ ಸವುಳಂಗದ ಕರಿಲಿಯುಗಲುಡನ ಸಕವರಿಸದ ಸಾಯಿರದ ಮಾಗಣ (/) ದಣ್ಣಾಯಕನಯಿತುರುಬಗೌಡ

೬. ಮಲಪನ ಕಾಳೆಗದಿಸಮರದೊಳುಬಿದನು|| ಆತನ್ ತಂದೆ ಹಾಡಿಯ ಹರಿಗೆನಾಯಕ ಮಡಿಸಿದ ಬೀರಗಲ್ಲು ||

೭. ಯಿ ಬೀರಗಲ ಮಾಡಿಡದನು ಮುದ್ದೋಜನ ಮಗ ದೇವೋಜನು || ಮಂಗಳ ಮಹಾ

ಈ ಶಾಸನದಲ್ಲಿ ಕಂಡುಬರುವ ಇಬ್ಬರು ವೀರರ ಪತ್ನಿಯರು ಸತೀ ಹೋಗಿರುವ ಮಹಾಸತಿಕಲ್ಲು ಹತ್ತಿರದ ಶಾಲೆ ಮುಂದಿರುವುದು ಇರಬಹುದೇ ನಿರ್ಧರಿಸಬೇಕಾಗಿದೆ. ಈ ವೀರಗಲ್ಲು ಶಾಸನದ ಕಾಲಮಾನ ಶಕವರ್ಷ ೧೩೧೪ ಎಂದು ಇದೆ. ಆರಗದ ಜನ್ನರಸನ ಉಲ್ಲೇಖವಿರುವ ಕ್ರಿ.ಶ. ೧೪೦೧ ರ ಶಾಸನ ತೀರ್ಥಹಳ್ಳಿ (ತಾ) ಖಂಡಕ ಗ್ರಾಮದಲ್ಲಿ ದೊರಕಿರುವ ಶಾಸನದಲ್ಲಿ ಉಲ್ಲೇಖವಾಗಿದ್ದು (ಎಂ.ಎ.ಆರ್. ೧೯೩೪ ಸಂಖ್ಯೆ ೩೧) ವಿದ್ವಾಂಸರಾದ ಬಿ.ಆರ್.ಗೋಪಾಲ್ ಅವರ, ವಿಜಯನಗರ ಶಾಸನ ಸಂಪುಟ ೩ರಲ್ಲಿ ಸವಳಂಗದ ಶಾಸನದ ಶಕವರ್ಷ ೧೩೧೪ ಬದಲಾಗಿ ೧೩೨೩ ಇರಬೇಕು ಎಂದಿದ್ದಾರೆ.

ವಿಜಯನಗರ ೩ನೇ ಸಂಪುಟ, ಪುಟ ೩೧೩ರಲ್ಲಿ ಕೆ.ಎನ್.೧೯೪೯ ಎಂ.ಎ.ಆರ್. ೧೯೪೨ ನಂ.೭೨ ಕನ್ನಡ ಭಾಷೆಯಲ್ಲಿರುವ ಈ ವೀರಗಲ್ಲು ಸಂಗಮ ವಂಶದ ೨ನೇ ಹರಿಹರನ (ಕ್ರಿ.ಶ. ೧೩೭೭-೧೪೦೪) ಕಾಲಕ್ಕೆ ಸೇರಿದೆ. ಶ್ರಾವಣ ಶುದ್ಧ ಬುಧವಾರ ಶಕವರುಷ ೧೩೧೪ ಅಂದರೆ ದಿ. ೨೦.೦೭.೧೪೦೧ಕ್ಕೆ ಸರಿಯಾಗುತ್ತದೆ. ಇದರಿಂದಾಗಿ ಶಕವರುಷ ೧೩೧೪ರ ಬದಲಾಗಿ ೧೩೨೩ ಎಂಬ ಬಿ.ಆರ್.ಗೋಪಾಲ್ ಅವರ ಅಭಿಪ್ರಾಯವಾಗಿದೆ.

ಆರಗದ ಜನ್ನರಸ ಒಡೆಯನ ಡಣ್ಣಾಯಕನಾದ ತುರುಬಗೌಡನು ಮಲ್ಲಪ್ಪ ಎಂಬುವನ ಮೇಲೆ ಯುದ್ಧಮಾಡಿ ವೀರಸ್ವರ್ಗ ಸೇರಿದನೆಂದೂ, ಮಡಿದ ವೀರನ ತಂದೆ ಹದಿಯ-ಹರಿಗೆ ನಾಯಕನು ವೀರಗಲ್ಲು ನಿಲ್ಲಿಸಿದನೆಂದೂ ತಿಳಿದುಬರುತ್ತದೆ. ಈ ವೀರಗಲ್ಲನ್ನು ದೇವೋಜನ ಮಗ ಮುದ್ದೋಜನು ಕೆತ್ತಿದ್ದಾನೆಂಬ ಉಲ್ಲೇಖವಿದೆ. ಈ ಎಲ್ಲ ಪಳೆಯುಳಿಕೆಗಳು ಮತ್ತು ಶಾಸನಗಳ ಆಧಾರದಿಂದ ಈಗಿನ ಸವಳಂಗ ಗ್ರಾಮವು ವಿಜಯನಗರ ಅರಸರ ಅಧೀನಕ್ಕೆ ಒಳಪಟ್ಟ ಆರಗ ವೇಂಟಿಯ ಸೀಮೆಯ ೧೮ ಕಂಪಣಗಳಲ್ಲಿ ಒಂದಾಗಿತ್ತು ಎನ್ನಬಹುದು. ರಕ್ಷಣಾದೃಷ್ಟಿಯಿಂದ ಗುಡ್ಡಬೆಟ್ಟಗಳಿಂದ ಕೂಡಿ ದುರ್ಗಮ ಪ್ರದೇಶವಾಗಿತ್ತು ಬಯಲು ಸೀಮೆಯ ಹೆಬ್ಬಾಗಿಲಾಗಿತ್ತು ಎನ್ನಬಹುದು. ಕಂಪಣದ ಡಣ್ಣಾಯಕ ತುರುಬಗೌಡನ ಆಡಳಿತ ಕೇಂದ್ರವಾಗಿ ವಿಜಯನಗರ ಸಾಮ್ರಾಜ್ಯದ ಆಡಳಿತದಲ್ಲಿ ವೈಭವದ ದಿನಗಳನ್ನು ಕಂಡ ಸವಳಂಗ ನಂತರದ ಕಾಲಘಟ್ಟದಲ್ಲಿ ಕೆಳದಿ ಅರಸರ ಆಳ್ವಿಕೆಗೆ ಒಳಪಟ್ಟಿತು.

ಆಕರ

೧. ಡಾ. ಬಿ.ಆರ್.ಗೋಪಾಲ್, ವಿಜಯನಗರ ಇನ್ಸ್‌ಕ್ರಿಪ್ಷನ್ಸ್ Vol-III ಪು. ೩೧೩, ೧೯೯೦, ಡೈರೆಕ್ಟರೇಟ್ ಆರ್ಕಿಯಾಲಜಿ ಮತ್ತು ಮ್ಯೂಸಿಯಂ, ಮೈಸೂರು

೨. ಪ್ರೊ. ಎಂ.ಶೇಷಾದ್ರಿ, ಎಪಿಗ್ರಾಫಿಕಾ ಕರ್ನಾಟಿಕಾ, Vol-VII ಮತ್ತು Vol-VIII ಸಪ್ಲಿಮೆಂಟರಿ ಇನ್ಸ್‌ಕ್ರಿಪ್ಷನ್ಸ್, ೧೯೭೦, ಪು. ೪

✣ ✣

೬

ವರಹ

ವಿಜಯನಗರ ಲಾಂಛನದ ಸಾಧ್ಯತೆಗಳು

ಡಾ. ಸ.ಚಿ.ರಮೇಶ್

ವಿಜಯನಗರ ಅರಸರಿಗೆ ಹಂದಿ (ವರಹ) ಏಕೆ ಲಾಂಚನವಾಯಿತು ಎನ್ನುವ ಪ್ರಶ್ನೆಯನ್ನು ಕೇಳಿಕೊಂಡರೆ ಅದಕ್ಕೆ ಉತ್ತರ ಮಹಾವಿಷ್ಣುವಿನ ಅವತಾರ 'ವರಹ' ಅದಕ್ಕಾಗಿ ಅದನ್ನು ರಾಜ್ಯ ಲಾಂಚನವಾಗಿಸಿದರು ಮತ್ತು ತಮ್ಮ ಕರೆನ್ಸಿಗೆ 'ವರಹ'ವೆಂದೇ ಕರೆದರು ಎಂಬ ಉತ್ತರ ಬಂದು ಬಿಡುತ್ತದೆ. ಆದರೆ ಈ ಬಗೆಗೆ ಜನಪದರ ನಿಲುವು ಇನ್ನೂ ಆಳಕ್ಕೆ ಇಳಿಯುತ್ತದೆ. ಮಹಾವಿಷ್ಣುವಿಗೆ ಇಬ್ಬರು ಹೆಂಡತಿಯರು. ಅವರುಗಳೇ ಶ್ರೀದೇವಿ ಹಾಗೂ ಭೂದೇವಿ. ಒಬ್ಬಳು ದೇವನ ತಲೆಯ ಭಾಗದಲ್ಲೂ ಇನ್ನೊಬ್ಬಳು ಪದತಳದಲ್ಲೂ ನೆಲೆಸಿದವರು. ಇದು ಜನಪದ ಪ್ರಜ್ಞಾಪಂಪರೆಯಲ್ಲಿ ನೆಲ ಮತ್ತು ಆಕಾಶಗಳನ್ನು ಸಂಕೇತಿಸುವ ಕಲ್ಪನೆ ಇರಬಹುದೆಂದು ಊಹಿಸಬಹುದು. ಹಿರಣ್ಯಕಶ್ಯಪ ಮತ್ತು ಹಿರಣಾಕ್ಷ ಎಂಬ ರಾಕ್ಷಸ ದ್ವಯರು ಲೋಕ ಕಂಠಕರಾಗಿದ್ದರು. ಅವರನ್ನು ಮುಗಿಸಲು ದೇವತೆಗಳು ಸಂಚು ಹೂಡಿದರು. ವಿಷ್ಣುವಿನಿಂದ ಆ ರಾಕ್ಷಸ ಸಹೋದರರನ್ನು ಹತ್ಯೆಗೈಯ್ಯುವುದೇ ಆ ಸಂಚಿನ ಒಳ ಉದ್ದೇಶವಾಗಿತ್ತು. ಅವರು ಮೊದಲು ವಿಷ್ಣುವಿಗೆ ಕೋಪ ಬರುವಂತೆ ಮಾಡಿದರು. ಇದನ್ನು ಉಪಾಯದಿಂದ ಹಿರಣಾಕ್ಷನಿಂದ ಕೆಣಕುವಂತೆ ಮಾಡಿದರು. ಇದರಲ್ಲಿ ನಾರದ ಮುನಿ ಪಾತ್ರ ಬಹಳವಾಗಿತ್ತು. ಮಹಾವಿಷ್ಣುವಿನ ಹೆಂಡತಿ ಭೂದೇವಿಯನ್ನು ಕೆಣಕುವಂತೆ ನಾರದ ಹಿರಣಾಕ್ಷನಿಗೆ

ಹೇಳಿಕೊಟ್ಟನು. ಇದರಿಂದ ಪ್ರಚೋದಿತನಾದ ಹಿರಣಾಕ್ಷ ಭೂದೇವಿಯನ್ನು ಕೆಣಕಿದನು. ಅವಳನ್ನು ಅಪಹರಿಸಿ ಅಮೇಧ್ಯದ ರಾಶಿಯಲ್ಲಿ ಬಚ್ಚಿಟ್ಟನು ಇದರಿಂದ ಕುಪಿತನಾದ ವಿಷ್ಣು ತನ್ನ ಹೆಂಡತಿಯ ರಕ್ಷಣೆಗೆ ಮುಂದಾದನು. ಅಮೇಧ್ಯದ ರಾಶಿಯಿಂದ ಎತ್ತಲೂ ಮತ್ತು ಅವಳಿಗೆ ರಕ್ಷಣೆ ನೀಡಲು ಹಂದಿಯ ರೂಪ ಪಡೆದು, ಭೂದೇವಿಯನ್ನು ತನ್ನ ಮೂಗಿನ ಮೇಲಿರಿಸಿ ಕೊಂಡು ಹಿರಣಾಕ್ಷನನ್ನು ವದಿಸಿ ತನ್ನ ಹೆಂಡತಿಯನ್ನು ಮೊದಲಿನ ಸ್ಥಿತಿಗೆ ತಂದನು. ಹೀಗಾಗಿ ವರಹ ಶಕ್ತಿಯ ಸಂಕೇತವಾಗುತ್ತದೆ. ರಾಜರು ಭೂಮಿಯ ರಕ್ಷಕರೇ ಆಗಿದ್ದರಿಂದ ಅವರ ಲಾಂಚನವನ್ನು ಶಕ್ತಿಯ ಸಂಕೇತವಾದ ಪ್ರಾಣಿ ಹಂದಿಯನ್ನು ಹೊಂದಿದರು.

ವಿಜಯನಗರ ಅರಸರಿಗೆ ಮೇಲಿಂದ ಮೇಲೆ ಇಸ್ಲಾಂ ದೊರೆಗಳ ಕಿರುಕುಳ ಇತ್ತೆಂದು ಚರಿತ್ರೆ ತಿಳಿಸುತ್ತದೆ. ಬಹುಶಃ ಕರ್ನಾಟಕ ಯಾವ ಸಾಮ್ರಾಜ್ಯಕ್ಕೂ ಇಸ್ಲಾಂ ದೊರೆಗಳು ಕಿರುಕುಳ ಈ ಪ್ರಮಾಣದಲ್ಲಿರಲಿಲ್ಲವೆನಿಸುತ್ತದೆ. ವಿಜಯನಗರದ ಅರಸರು ಇಸ್ಲಾಂ ದೊರೆಗಳನ್ನು ಸಮರ್ಥವಾಗಿ ಎದುರಿಸಿದರು. ಇಸ್ಲಾಂ ದೊರೆಗಳ ಶಕ್ತಿಯನ್ನು ಮತ್ತಷ್ಟು ಕುಗ್ಗಿಸಲು (ಹಂದಿ) ಧಾರ್ಮಿಕ ಅಸ್ತ್ರವೊಂದನ್ನು ಕಂಡುಕೊಂಡಿರಬಹುದೇ ಎನ್ನುವ ಸಾಧ್ಯತೆಗಳ ಬಗೆಗೂ ಚಿಂತಿಸಬಹುದು. ಇಸ್ಲಾಂ ಧರ್ಮಗ್ರಂಥವಾದ ಕುರಾನಿನಲ್ಲಿ ಹಂದಿಮಾಂಸ ನಿಷಿದ್ಧವಿದೆ. ಧಾರ್ಮಿಕ ನಿಷಿದ್ಧವೊಂದನ್ನು ತಾವು ಪ್ರಸಿದ್ಧವಾಗಿಸಿಕೊಂಡರೆ ಅವರನ್ನು ಮಾನಸಿಕವಾಗಿಯೂ ದೂರ ಇರಿಸಬಹುದಲ್ಲ ಎನ್ನುವ ಉದ್ದೇಶವು ಇರಬಹುದು.

ಹಣವನ್ನು ಲಕ್ಷ್ಮಿ ಎಂದು ನಾವು ಭಾವಿಸುತ್ತೇವೆ. ಹಣ ಇಲ್ಲದೇ ಏನೂ ಆಗದು. ಹೀಗಾಗಿ ಹಣ ಶ್ರೀಮಂತನಿಂದ ಹಿಡಿದು ಬಡವನವರೆಗೆ, ಆರೋಗ್ಯವಂತನಿಂದ ರೋಗಿಯವರೆಗೆ, ಸಾಧುವಿನಿಂದ ಕೊಲೆಗಾರನವರೆಗೆ ಹೀಗೆ ಎಲ್ಲ ವರ್ಗದ ಜನರೊಂದಿಗೆ ಚಲಾವಣೆಯಾಗುತ್ತಿರುತ್ತದೆ. ವಾಸ್ತವ ಬದುಕಿನಲ್ಲಿ ಹಂದಿಯೂ ಕೊಳಕು ಕಸಕಡ್ಡಿ ಹೇಸಿಗೆ ಇತ್ಯಾದಿ ಹೀಗೆ ಎಲ್ಲೆಂದರಲ್ಲಿ ಬದುಕು ಸಾಗಿಸುತ್ತದೆ. ಹಣಕ್ಕೂ ಹಂದಿಯ ಬದುಕಿಗೂ ಒಂದು ಸಾಮಾನ್ಯ ಸಮೀಕರಣವಿದೆ. ಹಣದ ಲಕ್ಷಣವನ್ನು ಹೋಲುತ್ತದೆ. ಹಂದಿ ಶಕ್ತಿಯ ಸಂಕೇತ ಹಾಗೂ ಭೂಮಿಯನ್ನು ರಕ್ಷಿಸಿದ ಮಹಾವಿಷ್ಣುವಿನ ವರಹ ರೂಪವಾಗಿದ್ದರಿಂದ ವಿಜಯನಗರ ಅರಸರು ನಾಣ್ಯಕ್ಕೆ 'ವರಹ' ಎಂದು ಕರೆದಿರುವ ಸಾಧ್ಯತೆ ಇದೆ.

ಭೂದೇವತೆಯನ್ನು ಹಿರಣ್ಯಾಕ್ಷನಿಂದ ರಕ್ಷಿಸಿದ ಫಲವಾಗಿ ಅದನ್ನು ಭಕ್ತಿಯಿಂದ ಪೂಜಿಸಲಾಗಿದೆ ಹಾಗೂ ಅವರ ದಿನನಿತ್ಯದ ಬದುಕಿನ ಬೇಕು ಬೇಡುಗಳನ್ನು ಒದಗಿಸುವ ಆರ್ಥಿಕ ಶಕ್ತಿಗೆ (ಹಣ) ವರಹ ಎಂದು ಕರೆದಿರಬೇಕು. ಹಂದಿಯನ್ನು ದೈವವಾಗಿ ಕಂಡ ಜನ ಅದನ್ನು ಬೇಟೆಯಾಡುವ ಮತ್ತು ಆಹಾರವಾಗಿ ಸೇವಿಸುವ ರೀತಿಯನ್ನು ಗಮನಿಸಿದರೆ ಹೊಸ ಚಿಂತನೆಗಳತ್ತ ಬೆಳಕು ಚೆಲ್ಲುತ್ತದೆ. ಬೆಟ್ಟ ಗುಡ್ಡ ಚಳಿ ಪ್ರದೇಶದಲ್ಲಿ ಬದುಕುವ ಜನರಿಗೆ ಕೊಬ್ಬಿನ ಅಂಶ ಅಗತ್ಯವಾಗಿ ಬೇಕಾಗಿತ್ತು. ಈ ಕಾರಣದಿಂದಲೇ ಹಂದಿಯನ್ನು ಹೆಚ್ಚು ಹೆಚ್ಚು ಬೇಟೆಯಾಡುತ್ತಿರಬೇಕು. ಈಗಲೂ ಅದರ ಕುರುಹು ಎನ್ನುವಂತೆ ಹಂಪಿಯ ಸುತ್ತಮುತ್ತಲ ದೇವಾಲಯ ಹಾಗೂ ಗುಡಿಗಳಲ್ಲಿ ಹಂದಿಯ ಬೇಟೆಯ ಶಿಲ್ಪಗಳಿರುವುದನ್ನು

ನೋಡಬಹುದು. ಈ ಹೇಳಿಕೆಯನ್ನು ಮತ್ತಷ್ಟು ಬಲಗೊಳಿಸಲು ಈ ಭಾಗದಲ್ಲಿ ನಡೆಯುವ ಆಚರಣೆಗಳನ್ನು ಗಮನಿಸಬಹುದು. ಕಮಲಾಪುರದ ನಾಯಕ ಜನವರ್ಗದವರಲ್ಲಿದ್ದ ಆಚರಣಾ ಬೇಟೆಯನ್ನು ಉದಾಹರಿಸಬಹುದು. ಯುಗಾದಿ ಹಬ್ಬದ ನಂತರ ಆಚರಿಸುವ ಮರಬೇಟೆ, ಮಚ್ಚುಬೇಟೆ ಸ್ಪಷ್ಟವಾಗಿ ಆ ಕಾಲದ ಹಂದಿಯ ಬೇಟೆಯೇ ಆಗಿದೆ. ಹಂದಿಯನ್ನು ಹೊಡೆದಾತ ಗೌರವ ಆದರಗಳಿಗೆ ಬಾಜನನಾಗುತ್ತಾನೆ. ಆತ ಕೊಂದ ಹಂದಿಯ ಜೊತೆಗೆ ಅಲಂಕರಿಸಿದ ಗಾಡಿಯಲ್ಲಿ ಹಂದಿಗೂ ಶೃಂಗರಿಸಿ, ಮೆರವಣಿಗೆ ಮಾಡುತ್ತಾರೆ. ಒಂದು ರೀತಿಯಲ್ಲಿ ಇದು ಕೊಡಗಿನ ನರಿಮಂಗಲವನ್ನು ನೆನಪಿಗೆ ತರುತ್ತದೆ. ವ್ಯತ್ಯಾಸವೆಂದರೆ ಅಲ್ಲಿ ಹಂದಿಯ ಬದಲಿಗೆ ಹುಲಿ ಹೊಡೆದವನಿಗೆ ಗೌರವಿಸುತ್ತಾರೆ. ಇಲ್ಲಿ ಹಂದಿಯನ್ನು ಹಂದಿಯೆಂದು ಕರೆಯದೆ 'ಮಿಗ'ವೆಂದು ಕರೆಯುತ್ತಾರೆ. ಇದನ್ನು ಕೊಡಗಿನ ನರಿಮಂಗಲ ಅನ್ನುವ ಹಾಗೆ 'ಮಿಗಮಂಗಲ' ಎಂದು ಕರೆಯಬಹುದು. ಬೇಟೆಯನ್ನು ಆಚರಣೆಗಾಗಿ ಮಾಡುವ ಈ ಜನರು ಹಂದಿ ಮತ್ತು ಕೋಳಿಗಳನ್ನು ತಿನ್ನುವುದಿಲ್ಲ. ಹಂದಿ ಅವರ ಪಾಲಿಗೆ ಲಕ್ಷ್ಮಿ. ಕೋಳಿಯ ಮಾಂಸ ನಿಷೇಧಕ್ಕೆ ಕಾರಣ ಹುಡುಕಬೇಕಾಗಿದೆ.

ಹಿಂದೆ ವಿಜಯನಗರ ಕಾಲದಲ್ಲಿ ಸೈನ್ಯದಲ್ಲಿದ್ದರೆನ್ನಲಾದ ಇವರು ತಮ್ಮ ರಾಜರುಗಳಂತೆ ಹಂದಿಯನ್ನು 'ವರಹಾವತಾರ' ಎಂದು ತಿಳಿದು ಪೂಜಿಸಿದ್ದರ ಕುರುಹಾಗಿರಬೇಕು. ದೈನಂದಿನ ಬದುಕಿನಲ್ಲಿ ಅವರು ಬಳಸುವ ಉಪಕರಣಗಳು ಇತ್ಯಾದಿಗಳಿಗೆ ಹಂದಿಯ ಕೊಬ್ಬನ್ನು ಲೇಪಿಸುತ್ತಾರೆ. ಇದು ಹೀನವಾದುದೆಂದು ನಂಬುತ್ತಾರೆ. ಅಂತಹ ಉಪಕರಣಗಳನ್ನು ನಾಶ ಮಾಡುತ್ತಾರೆ ಇಲ್ಲವೆ ಮಾರುತ್ತಾರೆ. ಸೈಕಲ್ಲು, ಮೋಟಾರುಬೈಕು, ಕಾರು ಇತ್ಯಾದಿಗಳನ್ನು ಇಲ್ಲಿ ಉದಾಹರಿಸಬಹುದು. ಇದಕ್ಕೆ ವಿರುದ್ಧವಾದ ನಂಬಿಕೆ ಮತ್ತು ಆಚರಣೆಯೂ ಇಲ್ಲಿದೆ ಜನವಸತಿಯ ಪ್ರದೇಶದಲ್ಲಿ ಹಂದಿಯು ತನ್ನಿಷ್ಟದಂತೆ ಮನೆಯನ್ನು ಪ್ರವೇಶಮಾಡಿದರೆ ಅವುಗಳನ್ನು ಹೊರ ಹೋಗಲು ಬಿಡದೆ ಅಲ್ಲಿ ಅವುಗಳ ಕಾಲು ಮುರಿದು ಹೊಂಡ ತೆಗೆದು ಜೀವಂತ ಸಮಾಧಿ ಮಾಡುತ್ತಾರೆ. ನಿತ್ಯ ಆ ಸ್ಥಳಕ್ಕೆ ಪೂಜೆ ಮಾಡುತ್ತಾರೆ. ಮನೆಯ ಹೊರಗೆ ಅನಿಷ್ಟವಾಗಿ, ಹೇಸಿಗೆಯಾಗಿ ಕಂಡ ಹಂದಿ ಮನೆಯ ಒಳಪ್ರದೇಶದ ಮರುಕ್ಷಣದಲ್ಲಿ ಲಕ್ಷ್ಮಿಯಾಗಿ ಪರಿವರ್ತಿತಗೊಳ್ಳುತ್ತದೆ. ಒಮ್ಮೆ ಮನೆಯ ಒಳಗೆ ಬಂದ ಹಂದಿ ತಪ್ಪಿಸಿಕೊಂಡು ಹೋದರೆ ಅದು ಅವರ ಪಾಲಿನ ಲಕ್ಷ್ಮಿ ಹೋಗಿ ದರಿದ್ರಲಕ್ಷ್ಮಿ ಮನೆಪ್ರವೇಶ ಮಾಡುತ್ತಾಳೆ ಎಂಬುದು ಅವರ ನಂಬಿಕೆ. ಈ ಪ್ರದೇಶದ ಜನರ ಆಚರಣೆಯಲ್ಲಿ ಲಕ್ಷ್ಮಿ ಎಂದು ಕರೆಯಿಸಿಕೊಳ್ಳುವ ಹಂದಿಗೂ ವಿಜಯನಗರ ಅರಸರ ಕಾಲದ ನಾಣ್ಯದ ವರಹಕ್ಕೂ ಸಂಬಂಧವನ್ನು ಕಲ್ಪಿಸಬಹುದಾಗಿದೆ. ನಾವು ಹಣವನ್ನು ಲಕ್ಷ್ಮಿ ಎಂದು ಪರಿಗಣಿಸುವುದಾದರೆ ಜನರ ಆಚರಣೆಯಲ್ಲಿ ಮತ್ತೆ ಮತ್ತೆ ಹಂದಿ ವಿಜಯನಗರ ಸಾಮ್ರಾಜ್ಯದ 'ವರಹ'ದ ಪಳಿಯುಳಿಕೆಯೇ ಆಗಿದೆ.

❖ ❖

೭

RECENT EXCAVATIONS IN THE MINT AREA

T.M. Keshava

The finding or identification of the place of Vira Harihara, who was the first ruler of the great Vijayanagara Empire (1336-1565AD), towards north of the so called 'Mint' area is the most outstanding results of serious, painstaking sincere efforts of nearly two decades of dedicated work of the Technical team of the Bangalore Circle of the Archaeological Survey of India. The excavation has provided firm evidence of the structural activity in and around the royal enclosure and also south of the river Tungabhadra. Earlier the scholors were of the firm beief that the early structural activity of the capital was restricted to Anegondi only. Two epigraphs found in an area identified as Silamanadapa (as per the inscriptions) has come out with startling evidences enabling the Survey to identify a structure to the west-north west of Hazara Ramachandra temple as the palace of Vira Harihara. It is also interesting to note that the usage of words referring to the construction the time space between two inscriptions and the development of the structure make an interesting study.

The first inscription by one Tippa Vodeya (Udeya) records the installation of an image of Bhuvaneswari in the place nearer to the house of SRI VIRA HARIHARA (SRI VIRAHARA

RAYANA MANEYA JAGADI TIPPA UDEYA MADISIDA PRATISHTE). This suggests that an image of Bhuvaneshwari was installed in the court yard of vira Harihara's (1337-1404) residence or house. The usage of the word maneya (house) is interesting since it would denote an austere dwelling and Tippa udeya could be one of the servants or a person attached to the residence of the king.

The second inscription of the times of Sri Krishnadeva Raya (1508-1530AD), the much reknowned king of the Vijayanagara dynasty. By the time of Krishnadeva Raya the Mane of Virabhadra had grown to the stature of HIRIYA ARAMANE as per this inscription and perhaps the elderly persons of the royal family used to reside and the epithet hiriya aramane. This also implies that there were Kiriya aramane as well and perhaps the Rangamahal and other grand palatial structures served the royalty. The most striking feature is the presence of both the inscriptions in the same vicinity. While the former is pedestal inscription the later is a pillar inscription. Timmoja son of pampoja the Architect of the Hiriya Aramane got a Silamandapa constructed in the year 1528 AD, is the jist of second inscription. The inscription also refers to Naga Bana. This naga bana is none other than the series of Naga stones installed from time to time infront of the mandapa housing the image of godess Bhuvaneswari, who might have been propitiated for the blessings of an off spring by the people. (The earlier excavations (1995-96) in the Silamandapa area yielded many naga stones and a fairley well preserved image of Bhuvaneswari right infront of the mandapa.

From the excavations conducted from 1994-95 to 1996-97, a huge palace complex which had been subjected to subsequent additions, alterations and enlargements has been found towards north-north west of the Silamandapa.

The structure enclosed in its own high enclosure walls have all the necessary structural components like imposing guarded entrances, zig-zag passages, water system, royal court, residential quarters, well laid garden, accessory structures like kitchen unit, rectangular halls and even toilet. In the paper that will be submitted the description of the structures and the evidence of the inscriptions will be placed before the scholors for study. In which the highly technical description is avoided to give a undisturbed continous reading.

So for 3 inscriptions have been found refering to the palaces. Amongst three the one found at Anegundi refers to the palace of Tippannavodeyara Aramane; the other two found at the Silamantapas behind Hazara Ram refers to the palace of "Sri Vira Hari Hara Raya" and "Hiriya Aramane".

I Face

೧.೦ ಶುಭಮಸ್ತು ಸ್ವಸ್ತಿಶ್ರೀಜ
೨. ಯಾಬ್ಯುದಯ ಶಾಲಿ
೩. ವಾಹನ ಶಕವರುಷ ೧೪೩೬
೪. ನೇಯ ಈಶ್ವರ ಸಂವತ್ಸರ
೫. ಅಶ್ವೀಜ ಸು ೫ ಆದಿಲು . .
೬. ರ. ಮಹಾರಾಜಾದಿ . .
೭. ರಾಜಪರಮೇಶ್ವರ ಶ್ರೀ . .
೮. ಪ್ರತಾಪ ಶ್ರೀ ವೀರಕೃ . . (ಷ್ಣರಾ)
೯. ಯ ಮಹಾರಾಯ . . . .
೧೦. ತುವಿ ರಾಜ್ಯವನ್ನಾ . .

II Face

೧೧. ಮೂಡಲು ರಾಮನಾಥ
೧೨. ದೇವರಗುಡಿ ಹಿರಿಯ
೧೩. ಅರಮನೆಯ ಕಂಮಾರ
೧೪. ಪೊಂಪೊಜನ ಮಗ ತಿಂಮೊ
೧೫. ಜ ಲಿ ಅಬಾನಿಲಮು.
೧೬. . . . ಸ್ಥಾನದ ರಾಮನಾಥದೇವ
೧೭. . . . ಟಿಸಿದ ಸಿಲಾಮಂಟಪದಸ
೧೮. . . . ಯನು ರಾಮನಾಥದೇವ
೧೯. . ಸ್ತಳದ ಯೆಪ್ಪತ್ತೆಯೇಳು ಮಂದಿ

III Face

೨೦.೦ ಎರಡು ಸಾವಿರ ಪರಿವಾ
೨೧. ರಕ್ಕೆ ಧರ್ಮಾವಾಗಲಿಎಂ
೨೨. ದುಹಿರಿಯ ಅರಮನೆ
೨೩. ಯ ಕಂಮಾಜಿ ಪೊಂಪೊ
೨೪. ಜನಮಗ ತಿಂಮೊಜಕಟ್ಟಿ
೨೫. ಸಿದ ಸಿಲಾ ಮಂಟಪಸ್ವದ
೨೬. ತ್ತಂವಗುಣಂ ಪುಣ್ಯಂ
೨೭. ಪರದತ್ತಂ ನೃಪಾಲನಂ
೨೮. ಪರದತ್ತಾಪಹಾರಣ ಸ್ವ
೨೯. ದತ್ತಂ ಪರಿಪಾಲಂಬವೇತ್

೨. Inscription on a pedastal Behind the Hazara Rama Tample.

೧.೦ ವೀರ ಹರಿಹರರಾಯಾ

೨. ನ ಮನೆಯ ಹೆಗಡತಿ ಚಲುಡಾ

೩. ಯಿ ಮಾಡಿಸಿದ ಪ್ರತಿಷ್ಠೆ

೩. Above the same place

ಶ್ರೀ ವೀರಹರ ರಾಯನ

ಮನೆಯ ಜಾಗದಿ ತಿಪ್ಪ

ವೊಡೆಯ ಮಾಡಿಸಿದ ಪ್ರತಿಷ್ಠೆ



Silamantapa, Inscription refering the palace



Palace complex of Vira HariHara Raya II (During excavation)




Eastern entrance of the palace



Royal Court



Royal Garden



Toilet & Eastern main entrance



Sri Vira Harihara Raya Palace Complex

Index :

1. Eastern Mahadwara 2. Outer Court yard 3. Elephant platform 4. Waterman's quarter 5. Water chanal 6. Trancepted northern entrance 7. Outer Court yard of the Royal Court 8. Eastern entrance Royal Court 9. Royal Court 10. Western gallery of Royal court 11. Guards platform 12. Passage to inner Court yard 13. Toilet block 14. Inner Court yard 15. Eastern gallery of Residential quarters 16. Residential Quarters 17. Royal Garden 18. Royal Residence (Palace) 19. Accessary Units

References

1. Annual Report of Indian Archaeology Review 1994-95, p. 28-32 Archaeological Survey of India and Field notes of the Author.
2. Patil C.S, 1985, Palace Architecture at Vijayanagara, VPR 1983-84, pp. 127-29.
3. John M. Fritz, George Michell, Nagaraja Rao M.S, 1984, The Royal Centre at Vijayanagara. Priliminary Report. University of Melbourne, Australia, pp. 28, 31.
4. Patil C.S, 2001, Remains of the palace structures, New light on Hampi; Marg Publications, pp. 56-57.
5. Kannada University Epigraphical Series - III No. 274, p. 206.
6. VPR. 1984-87 Inscription No. 178, p. 69, Directorate of Archaeology and Museums, Mysore.

The Author acknowledge the help of Dr. K.P.Punachha, Dr. C.S.Sheshadri, Dr. S.V.P.Halakatti of Archaeological Survey of India and Sri T.M. Manjunathaiah, Dept. of the Archaeology and Museums for writing the above article.

❖ ❖

೮

ವಿಜಯನಗರ ಕಾಲದಲ್ಲಿ ಯುದ್ಧಪ್ರೇರಣೆ

ಡಾ. ಎಸ್.ವೈ.ಸೋಮಶೇಖರ್

ದಕ್ಷಿಣ ಭಾರತದ ಮಧ್ಯಯುಗೀನ ಚರಿತ್ರೆಯಲ್ಲಿ ಪರಿಣಾಮಕಾರಿಯಾಗಿ ಆಳ್ವಿಕೆ ನಡೆಸಿದ ಸಾಮ್ರಾಜ್ಯ ವಿಜಯನಗರವಾಗಿದೆ. ಇದು ತನ್ನ ಆರಂಭದಂದಿನಿಂದ ಅವನತಿಯವರೆಗೆ ಒಂದಲ್ಲ ಒಂದು ರೀತಿಯ ಪ್ರತಿರೋಧವನ್ನು ಎದುರಿಸುತ್ತಲೇ ಬಂದಿತು. ಈ ಅವಧಿಯಲ್ಲಿ ಯುದ್ಧ, ಕದನ, ದಂಗೆ, ಕಾಳಗ, ಸಂಘರ್ಷಗಳು ಅನಿವಾರ್ಯವಾಗಿದ್ದವೇನೋ ಎಂದೆನಿಸುತ್ತದೆ. ಯುದ್ಧಗಳಿಗೆ ಅಂದು ಸೈನಿಕರು ಅಗತ್ಯವಾಗಿ ಬೇಕಾಗಿದ್ದರು. ಆದುದರಿಂದ ಸೈನ್ಯಕ್ಕೆ ಜನರನ್ನು ಸೇರುವಂತೆ ಮಾಡಲು ಪ್ರೇರೇಪಿಸುವ ಹುರಿದುಂಬಿಸುವಂತಹ ಯತ್ನಗಳನ್ನು ಆಯಾ ಕಾಲದ ಅರಸರು ಮಾಡಬೇಕಾಗಿದ್ದಿತು. ಯುದ್ಧದ ಆಶಯವನ್ನು ಜನರಲ್ಲಿ ಮೂಡಿಸುತ್ತಿದ್ದವರು ಆಳುವ ವರ್ಗದವರೇ ಆಗಿದ್ದರು. ಅವರು ತಮ್ಮ ರಕ್ಷಣೆ ಮತ್ತು ನೆರವಿಗಾಗಿ ಜನಸಾಮಾನ್ಯರನ್ನು ಅವಲಂಬಿಸಿದ್ದುದೇನೋ ನಿಜ. ಆದರೆ ಇವರು ಸಮಾಜದಲ್ಲಿ ತಮ್ಮ ಆಶಯಗಳಿಗಾಗಿ ಜನರನ್ನು ರಾಜ್ಯ ಮತ್ತು ರಕ್ಷಣೆಯ ಹೆಸರಿನಲ್ಲಿ ಬಲಿಪಶುಗಳಾಗಿ ಮಾಡುತ್ತಿದ್ದದನ್ನು ಕಾಣಬಹುದು. ಅವುಗಳಿಗೆ ಲೌಕಿಕ, ಅಲೌಕಿಕ ಕಲ್ಪನೆಗಳನ್ನು ಸೃಷ್ಟಿಸಿ ಸೈನ್ಯಕ್ಕೆ ಯೋಧರು ಹೆಚ್ಚು ಹೆಚ್ಚು ಸೇರುವಂತೆ ಪ್ರೇರೇಪಿಸುತ್ತಿದ್ದುದೂ ಉಂಟು. ಇದು ಬಹು ಹಿಂದಿನಿಂದಲೂ ನಡೆದು ಬಂದ ಪದ್ಧತಿ.

ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಯುದ್ಧ ಮಾಡಲು ಪ್ರೇರೇಪಿಸಿದ ಬಗೆಯಿದು: "ಯುದ್ಧದಲ್ಲಿ ಧರ್ಮವು ಅನೇಕ ಮುಖ, ಧರ್ಮಾಚರಣೆಯಲ್ಲಿ ದಯೆಗೆ ಜಾಗವಿರುವಂತೆ ಗಟ್ಟಿ ಮನಸ್ಸಿಗೂ ಜಾಗವಿರುತ್ತದೆ. ಕರ್ಮವು ಪುರುಷಾಯತ್ತ ಫಲವು ದೈವಾಯತ್ತ ಕರ್ಮ (ಯುದ್ಧ) ಮಾಡಿಯೂ ದೋಷವನ್ನು ಅಂಟಿಸಿಕೊಳ್ಳದಿರುವುದೇ ಕೌಶಲ್ಯ. ಅಮಾನುಷಕ್ಕೆ ಒಳಗಾಗಬೇಡ, ಹೃದಯ ದೌರ್ಬಲ್ಯವನ್ನು ನೀಗಿ ಎಚ್ಚೆತ್ತು ಶತ್ರುಗಳನ್ನು ಸದೆಬಡೆ" ಎನ್ನುತ್ತಾನೆ. ಅಲ್ಲದೆ "ಯುದ್ಧವು ತಾನಾಗಿ ಬಂದದ್ದು, ಅದು ಪಾಪವಾಗಲಾರದು. ಯುದ್ಧ ಮಾಡದೆ ಹೋದರೆ ಪಾಪವಾಗುತ್ತದೆ ಹಾಗೂ ಅಪಕೀರ್ತಿಗೆ ಒಳಗಾಗಬೇಕಾಗುತ್ತದೆ" ಎನ್ನುವ ಮಾತುಗಳಿಂದ ಯೋಧರನ್ನು ಧಾರ್ಮಿಕ ನಂಬಿಕೆಗಳಿಂದ ಹೇಗೆ ಪ್ರೇರೇಪಿಸುತ್ತಿದ್ದರೆಂಬುದು ವ್ಯಕ್ತವಾಗುತ್ತದೆ. ಇವು ಶ್ರೀಕೃಷ್ಣನ ಮಾತುಗಳಾದರೂ ನಂತರ ಕಾಲದ ಅರಸರು ಬಳಸಿದ ತಂತ್ರಗಳು ಇದೇ ಬಗೆಯವೇ. ಅರಸರು ಕೂಡ ಜನರಲ್ಲಿ ಯುದ್ಧಕ್ಕೆ ಸೇರಲು ಅನೇಕ ಮಾರ್ಗಗಳನ್ನು ಅನುಸರಿಸಿದ್ದರು. ಅವರು ಸೈನ್ಯಕ್ಕೆ ಸೇರುವಂತೆ ಮಾಡಲು ವೀರತ್ವ ಮತ್ತು ಶೌರ್ಯವನ್ನು ಮೌಲ್ಯವಾಗಿಸಲು ಹಲವಾರು ಶಾಸ್ತ್ರ ಧರ್ಮಗಳನ್ನು ಹೆಣೆದರು: ಸಂಪ್ರದಾಯಗಳನ್ನು ಸೃಷ್ಟಿಸಿದರು: ಇಹಲೋಕದ ಸುಖದ ಹತ್ತು ಪಟ್ಟು ಹೆಚ್ಚಿರುವ ಪರಲೋಕದ ಸುಖ-ಸಂತೋಷಗಳ ಆಮಿಷ ಒಡ್ಡಿದರು. ಶಾಸನಗಳು ಈ ಹಿನ್ನೆಲೆಯಲ್ಲಿಯೇ "ಜಿತೇನ ಲಭ್ಯತೇ ಲಕ್ಷ್ಮೀ: ಮೃತೇನಾಪಿ ಸುರಾಂಗನಾ ಕ್ಷಣವಿಧ್ವಂಸಿನೀ ಕಾಯೇ ಕೌ ಚಿಂತಾಮರಣೇ ರಣೆ" ಎಂದಿರುವುದು. ಇದರರ್ಥ ಯುದ್ಧದಲ್ಲಿ ಗೆದ್ದರೆ ಲಕ್ಷ್ಮಿ, ಸತ್ತರೆ ದೇವಲೋಕದ ಅಪ್ಸರೆಯರು, ಕ್ಷಣದಲ್ಲಿ ನಾಶವಾಗುವ ಈ ದೇಹಕ್ಕಾಗಿ ಚಿಂತಿಸಬಾರದು ಎಂಬುದಾಗಿದೆ. ಈ ಬಗೆಯ ನಂಬಿಕೆಗಳನ್ನು ವ್ಯವಸ್ಥಿತವಾಗಿ ಜನರಲ್ಲಿ ತುಂಬುತ್ತಿದ್ದವರು ಅರಸ ಮತ್ತಿತರ ಆಳುವ ವರ್ಗದವರೇ ದೇಹ ಅಶಾಶ್ವತ, ಕೀರ್ತಿ ಶಾಶ್ವತ: ಗೆದ್ದರೆ ಭೋಗ ಪ್ರಾಪ್ತಿ, ಸತ್ತರೆ ಸ್ವರ್ಗ, ರಾಜನ ಋಣದ ತೀರಿಕೆ, ಒಟ್ಟಿನಲ್ಲಿ ಯುದ್ಧದಂತೆ ಒಳ್ಳೆಗತಿಯನ್ನು ಕೊಡುವಂಥದ್ದು ಮತ್ತೇನೂ ಇಲ್ಲ: ಶೂರರ ಮೈಯಿಂದ ರಕ್ತಬಂದಾಗ ಅವರು ಪಾಪವನ್ನು ಕಳೆದುಕೊಳ್ಳುವರು. ಯುದ್ಧದಲ್ಲಿ ಹೊಡೆತ ಮುಂತಾದ ದು:ಖವನ್ನು ತಡೆದುಕೊಳ್ಳುವುದೇ ತಪಸ್ಸು ಎನ್ನುವ ನಂಬಿಕೆಗಳು ಜನರನ್ನು ಸೈನ್ಯಕ್ಕೆ ಸೇರುವಂತೆ ಪ್ರೇರೇಪಿಸಿದವು. ಹಾಗೆಯೇ ಸತ್ತ ಯೋಧರಿಗಾಗಿ ವೀರಗಲ್ಲುಗಳನ್ನು ನೆಡುವ, ಅವುಗಳನ್ನು ಪೂಜಿಸುವ ಕ್ರಮ ಕೂಡ ಪ್ರೇರಣೆಯ ಶಕ್ತಿಯಾಯಿತು. ಸಂಗಮ್ ಸಾಹಿತ್ಯದಲ್ಲಿ ಕಾಣಬರುವಂತೆ, "ಸೋತು ತಮ್ಮ ಮಗ್ಗುಲಲ್ಲಿ ಓಡಿಹೋಗುತ್ತಿದ್ದ ದಂಡುಗಳನ್ನು ಕಂಡು ವೀರಗಲ್ಲುಗಳು ಪರಿಹಾಸ್ಯ ಮಾಡುತ್ತಿದ್ದವು." ಈ ಬಗೆಯ ನಂಬುಗೆ ಆಚರಣೆಗಳು ಸಮಾಜದಲ್ಲಿ ಬಲವಾಗಿ ಬೇರುಬಿಡುವಂತೆ ವ್ಯವಸ್ಥಿತವಾಗಿ ನಿಯೋಜಿಸಿದ್ದುದು ಆಳುವ ವರ್ಗದವರೇ.

ಯುದ್ಧಕ್ಕೆ ಮುನ್ನ, ಯುದ್ಧ ಸಮಯ ಮತ್ತು ಯುದ್ಧಾ ನಂತರದಲ್ಲಿ ನೀಡುತ್ತಿದ್ದ ವೀಳೆಯ, ಬಹುಮಾನ, ಬಿರುದು-ಬಾವಲಿ ದಾನ-ದತ್ತಿಗಳು ಕೂಡ ಯುದ್ಧ ಅಥವಾ

ಹೋರಾಟಕ್ಕೆ ಪ್ರಚೋದಕ ಶಕ್ತಿಗಳಾಗಿದ್ದುದನ್ನು ಮರೆಮಾಚುವಂತಿಲ್ಲ. ವಿಜಯನಗರದ ಅರಸರು ಈ ಬಗೆಯ ನಿಯಮಗಳಿಗೆ ಹೊರತಾಗಿರಲಿಲ್ಲ. ಅವರು ಕೂಡ ಇದೇ ಪದ್ಧತಿಯನ್ನು ಮುಂದುವರಿಸಿದ್ದರು. ಇದರ ಬಗೆಗೆ ಹೆಚ್ಚಿನ ಮಾಹಿತಿಗಳು ದೊರೆಯದಿದ್ದರೂ ಕೆಲವು ಸಂಗತಿಗಳು ಯುದ್ಧ ಪ್ರೇರಣೆಯನ್ನು ಬಿಂಬಿಸುತ್ತವೆ. ವೀಳೆಯ ನೀಡುವ ಪದ್ಧತಿಯು ಯುದ್ಧ ಪ್ರೇರಕವೇ ಸರಿ. ರಾಮನಾಥ ಚರಿತದಲ್ಲಿ ಮಾತಂಗಿಯು ''ಹಿಡಿದು ತಂದೊಪ್ಪಿಸುವೆನು ರಾಮನಾಥನ ಕೊಡು ವೀಳೆಯವ ನೀನು'' ಎನ್ನುವ ಹಾಗೂ ಕೃಷ್ಣದೇವರಾಯನ ಅಮರನಾಯಕ ಪೆಮ್ಮಸಾನಿ ರಾಮಲಿಂಗನಾಯಕನು ರಾಯನಿಂದ ವೀಳೆಯವನ್ನು ಕೇಳಿ ಯುದ್ಧಕ್ಕೆ ಹೊರಟ ಸಂಗತಿಯನ್ನು ರಾಯವಾಚಕ ಪ್ರಸ್ತಾಪಿಸುತ್ತದೆ.[೨] ಇದು ರಣ ವೀಳೆಯ ನೀಡುವ ಪ್ರೇರಣೆಯಾದರೆ, ರಣರಂಗದ ಹೋರಾಟದಲ್ಲಿ ಶತ್ರುಸೈನ್ಯವನ್ನು ಸೋಲಿಸುವುದು ಕಷ್ಟವೆಂದು ತಿಳಿದಾಗ ರಾಜರು ಅನುಸರಿಸುತ್ತಿದ್ದ ತಂತ್ರ ಬಹುಮಾನ-ಉಡುಗೊರೆ ಹಾಗೂ ಹಣದ ಆಸೆ ತೋರುತ್ತಿದ್ದುದು.

ರಾಯಚೂರು ಕೋಟೆಯನ್ನು ವಶಪಡಿಸಿಕೊಳ್ಳುವುದು ಕಷ್ಟವೆಂದು ತಿಳಿದ ಕೃಷ್ಣದೇವರಾಯ ಮತ್ತು ಅವನ ಮಂತ್ರಿಗಳು ಕೋಟೆಗೋಡೆಯ ಕಲ್ಲುಗಳನ್ನು ಕಿತ್ತು ತಂದವರಿಗೆ ಕಲ್ಲಿನ ಗಾತ್ರಕ್ಕೆ ಅನುಗುಣವಾಗಿ ಹಣವನ್ನು ನೀಡುವುದಾಗಿ ಘೋಷಿಸಿದ್ದುದನ್ನು ಕಾಣಬಹುದು.[೩] ಶಿವತತ್ತ್ವ ರತ್ನಾಕರದಲ್ಲಿ ಯುದ್ಧ ಘೋಷಣೆಯ ನಂತರ ಅರಸನು ಸೈನಿಕ ಯೋಧರನ್ನು ಹುರಿದುಂಬಿಸುವ ಬಗೆ ಕುರಿತು, ''ರಾಜನನ್ನು ಕೊಂದವನಿಗೆ ಹತ್ತು ಲಕ್ಷ (ಸುವರ್ಣ ನಾಣ್ಯಗಳು) ಕೊಡುತ್ತೇನೆ. ರಾಜಕುಮಾರನನ್ನು ಕೊಂದವರಿಗೆ ಲಕ್ಷ ಕೊಡುತ್ತೇನೆ. ಅವನ ಸಾಮಂತರು ಜಿಲ್ಲಾ ಅಧ್ಯಕ್ಷರನ್ನು ಕೊಂದವರಿಗೆ ಹತ್ತು ಸಾವಿರ ಕೊಡುತ್ತೇನೆ. ಆನೆಗಳ ವ್ಯೂಹವನ್ನು ಭೇದಿಸಿದಂಥವರಿಗೆ ಎರಡು ಸಾವಿರ ಕೊಡುತ್ತೇನೆ. ರಥ ಸಮೂಹವನ್ನು ನಾಶಮಾಡಿದವರಿಗೆ ಒಂದು ಸಾವಿರ ಕೊಡುತ್ತೇನೆ. ಅಶ್ವಾರೋಹಿಗಳನ್ನು ಕೊಂದವರಿಗೆ ಐನೂರು ಕೊಡುತ್ತೇನೆ. ಸತ್ತವನ ತಲೆ ತಂದವರಿಗೆ ನೂರು ಕೊಡುತ್ತೇನೆಂದು ಹೇಳಿ ಸೈನಿಕರನ್ನು ಮರುಳುಗೊಳಿಸಿ ಯುದ್ಧಕ್ಕೆ ಹೊರಡಬೇಕು ಎಂದಿದೆ.[೪] ರಕ್ಕಸಗಿ-ತಂಗಡಗಿ ಯುದ್ಧದಲ್ಲಿ ರಾಮರಾಯ ತನ್ನ ಸೈನ್ಯವೆಲ್ಲವನ್ನೂ ರಣರಂಗದಲ್ಲಿ ಸಜ್ಜುಗೊಳಿಸಿ ಸೇನಾನಾಯಕರು ದಳವಾಯಿ ಮತ್ತಿತರ ಮುಖಂಡರನ್ನು ಕರೆಸಿ ಅವರಿಗೆ ಬಹುಮಾನ, ಹಾರ, ತುರಾಯಿ, ವಸ್ತ್ರಗಳಿಂದ ಗೌರವಿಸಿ, ''ಮುಸಲಮಾನ ಬಾದಶಾಹನವರು ನಡೆದು ನಮ್ಮ ಮೇಲೆ ಬರುತ್ತಾಯಿದ್ದಾರೆ. ಅವರ ಸಂಗಾತ ಯುದ್ಧ ಮಾಡಲಿಕೆ ಯುದ್ಧ ಮಾಡಲಿಕೆ ಯುದ್ಧ ಸಾಮಗ್ರಿಯನ್ನು ತೆಗೆದುಕೊಂಡು ಹೋಗಿ ಚೆರಿನಾ ಯುದ್ಧ ಮಾಡಿರಿ''[೫] ಎನ್ನುತ್ತಾನೆ. ಯುದ್ಧ ಸಮಯ ಅಂದರೆ ರಣರಂಗದಲ್ಲಿ ರಾಮರಾಯ ತನ್ನ ಸೈನಿಕರಿಗೆ ಹಣ-ಅಧಿಕಾರದ ಆಸೆ ತೋರಿದುದನ್ನು ಬುಸಾತಿನೆ ಸಲಾತಿನದಲ್ಲಿ ಹೀಗೆ ಹೇಳಿದೆ: ಯಾರು ಶೂರತನದಿಂದ ಕಾದಿ ನನ್ನ ಹತ್ತಿರ ಬರುವರೋ ಅವರಿಗೆ ಈ ಮುತ್ತು ರತ್ನಗಳನ್ನು ತುಂಬಿದ ತಟ್ಟೆಯನ್ನು ಕೊಡುವೆನು. ಅವರ ಅಂತಸ್ತು ಹಾಗೂ ಪದಾಧಿಕಾರಗಳನ್ನು ಎತ್ತರಿಸುವೆನು. ಈ ರೀತಿಯ

ಘೋಷಣೆಗಳಿಂದ ಸೈನಿಕರನ್ನು ಯುದ್ಧದಲ್ಲಿ ಹೋರಾಡುವಂತೆ ಹುರಿದುಂಬಿಸಿದನ್ನು ಕಾಣಬಹುದು.

ಯುದ್ಧಪ್ರೇರಣೆಗೆ ಧಾರ್ಮಿಕ ನಂಬಿಕೆಗಳನ್ನೂ ಬಳಸಿದ್ದರು. ಒಂದನೆಯ ಬುಕ್ಕರಾಯ ಬಹಮನಿಯ ಮಹಮ್ಮದನ ಸೈನ್ಯವನ್ನು ಸೋಲಿಸಲು ತನ್ನ ಸೈನಿಕರಿಗೆ ಪ್ರಚೋದನೆ ನೀಡಿದ ಬಗೆಯಿದು: "ಅವನು ತನ್ನ ಸೈನಿಕರಿಗೆ ಮಹಮ್ಮದೀಯರನ್ನು ಕೊಲ್ಲುವುದರಿಂದ ಬರುವ ಪುಣ್ಯ ಕುರಿತು ದಿನಾಲು ಪ್ರವಚನ ನೀಡುವಂತೆ ಬ್ರಾಹ್ಮಣರಿಗೆ ಆಜ್ಞೆಯಿತ್ತ. ನಿಜಭಕ್ತರು (ಮುಸ್ಲಿಮರು) ಎಸಗಿದ ಗೋಹತ್ಯೆ, ಪವಿತ್ರ ವಿಗ್ರಹಗಳಿಗೆ ಅವಮಾನ ಮತ್ತು ದೇವಾಲಯಗಳ ಧ್ವಂಸವನ್ನು ಬಣ್ಣಿಸುವಂತೆ ಅವರಿಗೆ ಆಜ್ಞೆಯಿತ್ತ"ನೆಂದು ಫೆರಿಸ್ತಾ ಹೇಳುತ್ತಾನೆ.[೬] ಆಡಳಿತವರ್ಗ ತನ್ನ ಉಳಿವಿಗೆ ಏನೆಲ್ಲಾ ತಂತ್ರಗಳನ್ನು ಬಳಸುತ್ತಿದ್ದರೆಂಬುದು ಇದರಿಂದ ಅರಿವಾಗುತ್ತದೆ. ಇಂದಿನ ಆಧುನಿಕ ಯುಗದಲ್ಲೂ ಆಡಳಿತವರ್ಗ ತನ್ನ ಗುರಿ ಸಾಧಿಸಲು ಬಳಸುವ ಅಸ್ತ್ರಗಳಲ್ಲಿ ಇದೂ ಒಂದಾಗಿರುವುದು ಗಮನಿಸಬೇಕಾದ ಅಂಶ. ವಿಜಯನಗರ ಸೇನೆಯಲ್ಲಿ ಮುಸ್ಲಿಮರ ಸಂಖ್ಯೆ ಎರಡನೆಯ ದೇವರಾಯನ ಅವಧಿಯಲ್ಲಿ ಹೆಚ್ಚಿಸಿದ ಕಾರಣ ತದನಂತರ ನಡೆದ ಯುದ್ಧಗಳಲ್ಲಿ ಮತೀಯ ದೃಷ್ಟಿಯಿರುವುದು ಅಷ್ಟಾಗಿ ಕಾಣಬರುವುದಿಲ್ಲ. ಬಹಮನಿ ಮತ್ತು ವಿಜಯನಗರಗಳಿಗೆ ಯುದ್ಧಗಳು ನಡೆದುದು ಹೆಚ್ಚಾಗಿ ಫಲವತ್ತಾದ ರಾಯಚೂರು ದೋಅಬ್ ಪ್ರದೇಶವನ್ನು ವಶಪಡಿಸಿಕೊಳ್ಳುವುದಕ್ಕಾಗಿ ಆದುದರಿಂದ ಇಲ್ಲಿ ಮತೀಯ ದೃಷ್ಟಿಗಿಂತ ಪ್ರಭುತ್ವನ್ನು ಸ್ಥಾಪಿಸುವ ಸಲುವಾಗಿ ನಡೆದ ಯುದ್ಧಗಳೇ ಹೆಚ್ಚಾಗಿವೆ.

ಶೌರ್ಯ ಸಾಹಸ ಪ್ರತೀಕದ ಮಾತುಗಳು ಯುದ್ಧಗಳಲ್ಲಿ ಸೈನಿಕರನ್ನು ಹೋರಾಡುವಂತೆ ಆಕರ್ಷಿಸಿದ ಘಟನೆಗಳೂ ಇವೆ. ರಾಯಚೂರು ಮುತ್ತಿಗೆಯ ಆರಂಭದಲ್ಲಿ ಸುಲ್ತಾನರ ಸೇನೆಯು ಕೃಷ್ಣದೇವರಾಯನ ಸೈನ್ಯವನ್ನು ಹಿಮ್ಮೆಟ್ಟಿಸಿದಾಗ ಸೈನಿಕರು ಓಡಿಹೋಗ ಲಾರಂಭಿಸಿದರು. ಆಗ ರಾಯನ್ನು ಸೈನಿಕರನ್ನು ಉದ್ದೇಶಿಸಿ, "ಹೇ ಹೇಡಿಗಳಿರಾ, ಎಲ್ಲಿಗೆ ಓಡುವಿರಿ! ಈ ಪ್ರಪಂಚದಲ್ಲಿ ಎಲ್ಲರೂ ಸಾಯಲೇಬೇಕು. ಯುದ್ಧದಲ್ಲಿ ಮಡಿದರೆ ವೀರಸ್ವರ್ಗ, ಆದ್ದರಿಂದ ಎಲ್ಲರೂ ನನ್ನೊಡನೆ ಬನ್ನಿ: ಹೇಡಿಗಳಾಗಬೇಡಿ" ಎನ್ನುತ್ತಾನೆ. ಅಲ್ಲದೆ "ರಾಯನು ತನ್ನ ಬೆರಳಿನಿಂದ ಒಂದು ಉಂಗುರವನ್ನು ಬಿಚ್ಚಿ ತನ್ನ ಸೇವಕನೊಬ್ಬನಿಗೆ ಕೊಟ್ಟು ತಾನು ಸತ್ತರೆ ಅದನ್ನು ತನ್ನ ರಾಣಿಯರಿಗೆ ತೋರಿಸಬೇಕೆಂದೂ ಅದನ್ನು ನೋಡಿ ಅವರು ಚಿತೆಯೇರುವರೆಂದೂ" ಹೇಳುತ್ತಾನೆ.[೭] ಯುದ್ಧದಲ್ಲಿ ಸ್ವತ: ಅರಸನೇ ಪ್ರಾಣ ಒತ್ತೆಯಿಟ್ಟು ಹೋರಾಡುವೆನೆಂಬ ಸಂಗತಿ ಕೇಳಿದ ರಾಯನ ಸೈನಿಕರು ತಮ್ಮ ಪ್ರಾಣವನ್ನು ಪಣವಾಗಿಟ್ಟು ಹೋರಾಡಿ ಜಯ ಗಳಿಸಿದ್ದುದನ್ನು ಕಾಣುತ್ತೇವೆ.

ಹೀಗೆ ಅರಸ ಅಥವಾ ಆಡಳಿತ ವರ್ಗವು ಜನರನ್ನು ಸೈನ್ಯದಲ್ಲಿ ಸೇರಿಸಿಕೊಳ್ಳುವಾಗ, ಯುದ್ಧ ಸಂದರ್ಭಗಳಲ್ಲಿ ಹೋರಾಟದ ಕೆಚ್ಚನ್ನು ತುಂಬಲು ಅವರನ್ನು ಅನೇಕ ರೀತಿಯ

ತಂತ್ರ, ಉಪಾಯಗಳು, ಆಸೆ-ಅಮಿಷಗಳು, ಧಾರ್ಮಿಕ ಆಚರಣೆ, ಇಹ-ಪರವೆಂಬ ನಂಬಿಕೆಗಳನ್ನು ತುಂಬಿ ಯುದ್ಧ-ಕದನಗಳಿಗೆ ಅಣಿಗೊಳಿಸುತ್ತಿದ್ದುದನ್ನು ಕಾಣಬಹುದು.

ಅಡಿಟಿಪ್ಪಣಿಗಳು

೧. ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ (ಅನು: ನಿರಂಜನ), ಪು. ೧೫೬

೨. ಶ್ರೀಕೃಷ್ಣದೇವರಾಯನ ದಿನಚರಿ, ಪು. ೪೦

೩. ನ್ಯೂನಿಜ್, ಪ್ರವಾಸಿ ಕಂಡ ಇಂಡಿಯಾ-೨, ಪು. ೨೯

೪. ಶಿವತತ್ತ್ವ ರತ್ನಾಕರ, ೫:೧೪.೧೯-೨೫, ಪು. ೩೩೨

೫. Ramarajana Bakhair, Further sources of Vijayanagar History, P. ೨೭೮

೬. ಮರೆತು ಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೩೬

೭. ನ್ಯೂನಿಜ್, ಪ್ರವಾಸಿ ಕಂಡ ಇಂಡಿಯಾ-೨, ಪು. ೪೦೦-೪೦೧

❖ ❖

೯

ಹೊಸಪೇಟೆ ಇತಿಹಾಸ-
ಒಂದು ವಿವೇಚನೆ

ಡಾ. ಎಂ.ಕೊಟ್ರೇಶ್

ಹೊಸಪೇಟೆ ನಗರ ಬಳ್ಳಾರಿ ಜಿಲ್ಲೆಯ ತಾಲೂಕು ಹಾಗೂ ಉಪವಿಭಾಗ ಕೇಂದ್ರವಾಗಿದೆ. ಇದು ಬಳ್ಳಾರಿಯಿಂದ ಪಶ್ಚಿಮದಿಕ್ಕಿಗೆ ೬೪ ಕಿ.ಮೀ. ದೂರದಲ್ಲಿದೆ. ನೀರಾವರಿ ಕೃಷಿ ಮತ್ತು ಕೈಗಾರಿಕೆ ಸಂಪನ್ಮೂಲ ಹೊಂದಿರುವ ಈ ಪರಿಸರವು ನಗರದ ನಿರಂತರ ಬೆಳವಣಿಗೆಗೆ ಕಾರಣವಾಗಿದೆ.

ಈಗಿನ ಹೊಸಪೇಟೆ ನಗರವು ವಿಜಯನಗರ ಕಾಲದಲ್ಲಿ ಎಂದರೆ ಸುಮಾರು ನಾಲ್ಕುನೂರು ವರ್ಷಗಳಿಗಿಂತಲೂ ಪೂರ್ವದಲ್ಲಿ (ಕ್ರಿ.ಶ. ೧೫೬೫ಕ್ಕೂ ಮೊದಲು) ಇದ್ದಂತೆ ಇಲ್ಲವಾದರೂ, ಅದು ಕಾಲಕಾಲಕ್ಕೆ ಬದಲಾದ ಪರಿಸ್ಥಿತಿಗನುಗುಣವಾಗಿ ಅನೇಕ ಮಾರ್ಪಾಟುಗಳಿಗೆ ಗುರಿಯಾದುದಾಗಿದೆ. ಆದುದರಿಂದ ಅದರ ಪೂರ್ವದ ವಿವರಣೆಗಳನ್ನು ಇಲ್ಲಿ ಚರ್ಚಿಸುವುದು ಸೂಕ್ತವೆನಿಸುತ್ತದೆ.

ಈಗ ಸಣ್ಣಕ್ಕಿ ವೀರಭದ್ರದೇವರ ಗುಡಿಯ ಆವರಣದಲ್ಲಿ[೧] ಇಂದಿರಾನಗರ ಬಡಾವಣೆಯ[೨] ಅಮರಾವತಿಯ ಪೂಜಾರಿ ಹನುಮಂತಪ್ಪನವರ ಹಿತ್ತಲಿನಲ್ಲಿ[೩] ಹಾಗೂ ಸಂಡೂರು ರಸ್ತೆ ಹತ್ತಿರ ಸಹಾಯಕ ಆಯುಕ್ತರ ಕಚೇರಿ ಆವರಣದಲ್ಲಿ[೪] ಕಂಡುಬರುವ ಶಾಸನಗಳ ಪ್ರಕಾರ ಈ ಪ್ರದೇಶವು ತಿರುಮಲದೇವಿ ಪಟ್ಟಣವೆಂದು ಪ್ರಸಿದ್ಧಿಯಾಗಿತ್ತು.[೫] ತಿರುಮಲಾದೇವಿಯು ಕೃಷ್ಣಾದೇವರಾಯನ ಇಬ್ಬರು ಪಟ್ಟದರಸಿಯರಲ್ಲಿ

ಒಬ್ಬಳಾಗಿದ್ದಳೆಂಬುದು ಅನೇಕ ಶಾಸನಗಳಿಂದ ಮತ್ತು ತಿರುಪತಿಯ ಬೆಟ್ಟದ ಮೇಲೆ ವೆಂಕಟೇಶ್ವರ ಸ್ವಾಮಿಯ ಎದುರಿನಲ್ಲಿ ಸ್ಥಾಪಿತವಾಗಿರುವ ಕೃಷ್ಣದೇವರಾಯನ ಮತ್ತು ಆತನ ಪಟ್ಟದರಸಿಯರ ಕಂಚಿನ ಪ್ರತಿಮೆಗಳಿಂದ ವೇದ್ಯವಾಗುತ್ತದೆ.

ತಿರುಮಲಾದೇವಿ ಅಮ್ಮನವರ ಪಟ್ಟಣದಲ್ಲಿದ್ದ ಸಣ್ಣಕ್ಕಿ ವೀರಭದ್ರ ದೇವರ ಗುಡಿಯ ಪರಿಸರಕ್ಕೆ ಸಣ್ಣಕ್ಕಿಪೇಟೆ ಎಂಬ ಹೆಸರಿರುವುದು ಈಗಲೂ ಜನರ ವಾಡಿಕೆಯಲ್ಲಿದೆ. ಅಂದರೆ ವ್ಯಾಪಾರಿ ಪೇಟೆ ಪ್ರದೇಶವಾಗಿದ್ದಿತೆಂದಾಯಿತು. ಮತ್ತು ಇಲ್ಲಿಯ ಶಾಸನದ ದಾನಿಗಳು ವ್ಯಾಪಾರಿ ಬಣಕ್ಕೆ ಸೇರಿದ ಶೆಟ್ಟಿ ಪಟ್ಟಣದ ಸ್ವಾಮಿಗಳು ಎಂದರೆ ಬಣಜಿಗರು. ಮತ್ತೊಂದು ಗಣನೀಯ ವಿಷಯವೆಂದರೆ ಗೌರೀಶ್ವರ ಎಂಬ ಹೆಸರಿನ ಈಶ್ವರ ದೇವರು ಶೆಟ್ಟಿ ಬಣಜಿಗರ ಕುಲದೇವತೆ[೬] (ಕನ್ನಿಕಾಪರಮೇಶ್ವರಿಯು ವೈಶ್ಯರ ಕುಲದೇವತೆಯಾಗಿರುವಂತೆ ಗೌರೀಶ್ವರನೆಂಬ ದೇವರು ಶೆಟ್ಟಿ ಬಣಜಿಗರ ಕುಲದೇವತೆಯಾಗಿದ್ದ ವಿಷಯವು ಅನೇಕ ಶಾಸನಗಳಿಂದ ಮತ್ತು ಗ್ರಂಥಗಳಿಂದ ತಿಳಿದುಬರುತ್ತದೆ) ಪ್ರಾಯಶ: ಈಗಿನ ವೀರಭದ್ರ ದೇವರ ದೇವಾಲಯವು ಗೌರೀಶ್ವರ ದೇವಸ್ಥಾನವಾಗಿದ್ದಿರಬೇಕು ಮತ್ತು ಇಲ್ಲಿಯ ವೀರಭದ್ರ ದೇವರ ಮೂರ್ತಿ ಅನಂತರದಲ್ಲಿ ಸ್ಥಾಪನೆಯಾಗಿರಬೇಕು.

ವಿಜಯನಗರ ಪತನಾ ನಂತರವೂ ಈ ಭಾಗವು ಹಾಳುಬಿದ್ದು ಜನವಸತಿಯು ಕ್ರಮೇಣ ಕಡಿಮೆಯಾಗುತ್ತಾ ಬಂದು[೭] ಸ್ವಲ್ಪ ಸ್ಥಳಾಂತರವಾಗಿರಲೂ ಸಾಕು. ಒಂದು ತಲೆಮಾರು ಹಿಂದಿನ ಇಲ್ಲಿಯ ಜನರನ್ನು ಕೇಳಿದರೆ ಈ ಭಾಗದಲ್ಲಿ ಕೋಟೆ-ಕೊತ್ತಳಗಳಿದ್ದುದನ್ನು ತಿಳಿಸುತ್ತಾರೆ. ಅದೆಲ್ಲವೂ ಹಾಳಾದ ನಂತರ ಜನವಸತಿ[೮] ಸ್ವಲ್ಪ ಸ್ಥಳಾಂತರಗೊಂಡು ಅದೇ ಇಂದಿನ ಹೊಸಪೇಟೆಯಾಗಿರಬಹುದು.

ಹರಪನಹಳ್ಳಿ ತಾಲೂಕಿನ ನಿಚ್ಚವನಹಳ್ಳಿಯ ಆಂಜನೇಯನ ದೇವಾಲಯದ ಹೊರಭಾಗದ ಗೋಡೆಯಲ್ಲಿರುವ ಕ್ರಿ.ಶ. ೧೭೨೯ರ ಶಾಸನದಲ್ಲಿ ಬಾಗಳಿ ಬಸಪ್ಪನಾಯಕನು ಹೊಸಪೇಟೆ ನಿರ್ಮಿಸಿದಂತೆ ಉಲ್ಲೇಖವಾಗಿರುವುದನ್ನು ಈ ಕೆಳಗಿನ ಶಾಸನ ಪಾಠದಿಂದ ಕಂಡುಕೊಳ್ಳಬಹುದು.[೯]

೧. ನಮಸ್ತುಂಗ ಶಿರಶ್ಚುಂಬಿ ಚಂದ್ರ ಚಾರಮ ಚಾರವೇ ತ್ರೈಲೋಕ್ಯ ನಗರಾರಂಭ ಮೂಲ ಸ್ತಂಬಾಯ ಶಾಂಭ

೨. ವೇ|| ಸ್ವಸ್ತಿ ಶ್ರೀಜಯಾಭ್ಯುದಯ ಶಾಲಿವಾಹನ ಶಖವರುಷಂಗಳು ೧೬೫೦ ಯ ಸೌಂಮ್ಯ ಸಂ | ದ

೩. ಪುಷ್ಯ ಶು ೫ ಲು ಶ್ರೀಮನ್ ಸಕಲಗುಣ ಸಂಪಂನರಾದ ರಾಜಮಾನ್ಯ || ರಾ || ಸುಬೇದಾರ ರಂಗಪ್ಪನವರಿಗೆ ಶ್ರೀಮನ್ಮಹಾನಾಯ

೪. ಕಾಚಾರ್ಯ ಭಾಷೆಗೆತಪ್ಪುವ ನಾಯಕರಗಂಡ ಮರೆಹೊಕ್ಕರೆಕಾಯ್ವ ಮಾರಾಂತರಕರ ಗೆಲುವ ಬಾಗಳಿ ಬಸವಪ ನಾ

೫. ಯಕರವರು ಬರಸಿಕೊಟ್ಟ ಗ್ರಾಮದಾನ ಪಟೆದ ಕ್ರಮವೆಂತ್ತೆಂದರೆ ನೀವು ನಂಮ್ಮ ಸಂಸ್ಥಾನಕ್ಕೆ ಆ ಯಲ್ಲು

೬. ಪರಮ ಆಪ್ತವ್ಯೆದವರಾಗಿ || ಹಿಂದೂರಾಯರು ಹೊಸಪೇಟೆಗೆ ಕೊಂಡುಯಿದಲಿ ಅಬ್ದುಲನ ಬರ್ಖಾದವರ ಬೇಟೆ ವ

೭. ಂನು ಕೊಂಡು ಆತನ ಕಾರ್ಯಕಾರಣ ಮಾಡಿಕೊಟು ಯಿತನ ಅನುಮತಿಯಿಂದಾ ನಂಮ ಹೊಸಪೇಟೆಯ

೮. ಂನು ಕಟಿಕೊಟ್ಟು | ಆಮೇಲೆ ಹಿಂದೂರಾಯರಿಗೆ ಕಾಲ ಕಾಲಕೆ ಕೊಡುವ ಹತ್ತುಸಾವಿರಕೆ ಯರಡು

೯. ಸಾವಿರದ ವರಹಾನ ಬಿಟು ಯೆಂಟುಸಾವಿರ ವರಹಾನ ಬಿಟ್ಟು ಕೊಡುವಂತೆ ಮಾಡಿ ಪತ್ರಗಳ ಬರಿಸಿ

೧೦. ಕೊಟ್ಟು ಆ ಹಿಂದೂರಾಯರು ನೀವು ಪುನಯೇಕಮತ್ಯವಾಗಿ | ಖಾ | ಸ್ಥಿರದೆ ಸುಬೇದಾರಿಕೆ ಯಾರ ಮಹಾಯಿರ ಖಾನಗೆ

೧೧. ಸಂದಪು . . . . ಬುವಾವಂನು ಮಾಡಿಕೊಂಡು ಅರಮನೆಯೇಕವಾಗಿ ಮೈಸೂರು ಮುಂತಾದ ಕಾರ್ಯಕೆ ನವ . . . .

೧೨. ಮಾಡಿ ಪೂರ್ನ ಆತಮನ ಸ್ನೇಹಾಸಂಪಾದಿಸಿದರ್ರಿಂದ ನಾವು ಕಾಲಕೆ ಕೊಡುವದೇನು ಕಸೆ

೧೩. ಬಕ್ಕೆ ಅರೆಗಂದಾಯವ ಮಾಡಿ ಆರು ಸಾವಿರಕೊಡುವಂತೆ ಕವುಲು ಕಾಗದವಂನು ಬ

೧೪. ರೆಸಿ ಕೊಟ್ಟು ಕನಕರಣ ಕಾರ್ಯಕಾರಣದಲ್ಲೂ ಮುಂತಾದ ಪೋಟುಪಾಯಗ . . . ಬಿಟ್ಟು ಸಂಸ್ಥಾ

೧೫. ನಕ್ಕೆ ವರವಮಾನ್ಯ ವ್ಯೆದವರಾಗಿ ಬರುತಿಧೀಯಾದ ಕಾರಣ ಹರುಪನಹಳ್ಳಿ ಚಂನಂಮನಪೇಟೆ . . . . ಡಿ

೧೬. ಯಲ್ಲಿ ಹೊಸದಾಗಿ ಮಠವನ್ನು ಕಟ್ಟಿಸಿ ನಿತ್ಯದಾಸೋಹವಂನು ಮಾಡಿಸಿ ಜಂಗಮಾರ್ಚನೆಯ

೧೭. ಂನು ಮಾಡಿಸೆವೆಂಬುದಾಗಿ ಹೇಳಿಕೊಂಡ ಕಾರಣ ಅತ:ಕರುಣಕ್ಕೆ ತಂದು ಪ್ರಾಕುಹಾರಕ

೧೮. ನಹಾಳ ಗ್ರಾಮಕ್ಕೆ ಪಟೆವ ಬರೆಸಿಕೊಂಟು ಯಿದಲಿ ಆ ಗ್ರಾಮಕ್ಕೆ ಸೀಮಾಸ್ಥಾಪಿತವಂನು ಮಾಡಿಕೊಡ

೧೯. ಬೇಕೆಂದು ಹೇಳಿಕೊಂಡದರ್ರಿಂದ ಯೀ ಗ್ರಾಮವಂನು ಅರಮನೆ ವಶವ ಮಾಡಿಕೊಂಡು ಆದಕ್ಕೆ ಬ

೨೦. ದಲಾಗಿ ಅರಸಿಕೆರೆಪಟಡಿ ವಳಗಣ ಗಡಿ ನಿಚಾಪುರದ ಗ್ರಾಮವಂನು | ದಾನ ಧಾರಾಪೂರ್ವ

೨೧. ಕವಾಗಿ ಶಿವಾರ್ಪಿತವಾಗಿ ಕೊಟ್ಟು ಯಿದೇವೆ ಯೀ ಗ್ರಾಮದಲ್ಲಿ ಯೇನು ಉಂಟಾದ ನಿಧಿನಿಕ್ಷೇಪ
೨೨. ಜಲ ಪಾಷಾಣ ಅಕ್ಷಿಣಿ ಆಗಾಮಿ ಸಿದಿ ಸಾಧ್ಯಂಗಳೆಂಬ ಅಷ್ಟಭೋಗ ತೇಜೋಪಾರ್ಜನೆ
೨೩. ಯಂನು ಆಗ ಮಾಡಿಸಿಕೊಂಡು ನಿಂಮ ಪುತ್ರ ಪೌತ್ರ ಪಾರಂಪರೆಯದಲ್ಲು ನಿತ್ಯ ಜಂ
೨೪. ಗಮಾರ್ಚನೆಯಂನ್ನು ಮಾಡಿಕೊಂಡು ಆಚಂದ್ರಾರ್ಕಸ್ಥಾಯಿಗಳಾಗಿ ಸುಖದಲ್ಲಿ
೨೫. ಯಿರೂದೆಂದು ಬರಿಸಿಕೊಟ್ಟ ಗ್ರಾಮದಾನ ಪಟ್ಟೆ | ಸ್ಥಾನ ಮಾಂನ್ಯ ಪೂರ್ವವನೂ
೨೬. ಣು | ದೇಶಾಯಿಕೆ ನಾಡದಳವಾರಿಕೆ ಆಯ ಮಾಂನ್ಯ ವರ್ತನೆ ಆರೆರವಳಿ
೨೭. ಮೊಗಲರಹಟ್ಟಿ ಭಮಾದಳಿ ಧರಣದಪಳಿ ಬೆಟಕೆ ದವ್ನ ಕಣಜ ದವನ | ಮು
೨೮. ತಾದ ಸಕಲವಂನು ಹೊಂನನು ಪಾಲಿಸಿ ಕೊಟ್ಟು ಯಿಧೇವೆ | ರಾಯಸ್ತರ ವರ್ತನೆಯ
೨೯. ಂನು ಕಾಲಕಾಲಕ್ಕೆ . . ಶೈಕವಾಗಿ ಕೊಟು ಬರಬೇಕು ಗ್ರಾಮಕೆ ಶೀಲಾಸ್ಥಾಪಿತವಂನು ಮಾಡಿಸಿ
೩೦. ಯಿಧೇವೆ || ಸ್ವದತ್ತಾ ದ್ವಿಗುಣ ಪುಣ್ಯಂ ಪರದತ್ತಾನುಪಾಲನಂ | ಪರದತ್ತಾಪ ಹಾ
೩೧. ರೇಣ ಸ್ವದತ್ತಂ ನಿಷ್ಫಲಂಭವೇತು|| ಸ್ವದತ್ತಾಂ ಪರದತ್ತಾಂ ವಾ | ಯೋ ಹರೇಚ ವ
೩೨. ಸುಂಧರಾಂ || ಷಷ್ಟಿರ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೇ ಕ್ರಿ
೩೩. ಮಿ || ೨ || ಆದಿತ್ಯ ಚಂದ್ರಾವನಿಲಅನಲಶ್ಚ ದ್ಯೌರ್ಭೂಮಿ . . ಹುದಯಂಮ
೩೪. . . ಶ್ವ ಆಹಶ್ವರ ವುಭಯೇಚ ಸಂದ್ಯೆದ ರ್ಮಶ ಜಾನಾತಿ ಸ್ವರಸ್ಯ ವೃತ್ತಂ || ೩ ||
೩೫. ದಾನಪಾಲನಯೋರ್ಮಧ್ಯೇ ದಾನಾಶ್ರೇಯೋನುಪಾಲನಂ | ದಾನಾತ್ಸ್ವರ್ಗಮವಾಪ್ನೋತಿ
೩೬. ಪಾಲನಾದಚ್ಯುತಪದಂ || ಮದ್ವಂಗಚಿಂತನರಮಹಿಪತಿ ವಂಶಜಾವ | ಯೇ ಭೂಮಿ
೩೭. ಪಾಃ ಸತತಮುಜ್ವಲ ಧರ್ಮ ಚಿತ್ತಾ: | ಯೇ ಧರ್ಮಮೇವ ಪರಿಪಾಲನ ನೋಚರಂತ | ಕಶ್ಯಾ
೩೮. ದ ಪದ್ಮಯಗಳಂ ಶಿರಸಾವಹಾಮಿ ಶ್ರೀಬಸವಪ

ನೈಜವಾಗಿ ಹೊಸಪೇಟೆ ಚಾರಿತ್ರಿಕ ಮಹತ್ವ ಹೊಂದಿದೆ. ಕಳಚೂರಿ ಬಿಜ್ಜಳದೇವನ ಕಾಲದಿಂದ ಅಥವಾ ಅದಕ್ಕೂ ಪೂರ್ವದಿಂದ ಪ್ರಾರಂಭವಾಗುತ್ತದೆ. ಸುಮಾರು ೧೨ನೆಯ ಶತಮಾನಕ್ಕೆ ಸೇರುವ ಒಡೆದ ಶಾಸನವೂ[೧೦] ಜೈನ ತೀರ್ಥಂಕರರ ಶಿಲ್ಪವು ಸಣ್ಣಕ್ಕಿ ವೀರಭದ್ರ ದೇಗುಲದ ಹಿಂಭಾಗದಲ್ಲಿವೆ.

ಇನ್ನೂ ಈ ಪ್ರದೇಶದ ಇತಿಹಾಸದ ಕುರುಹುಗಳು ಬಹು ಹಿಂದಕ್ಕೆ ಹೋಗುತ್ತವೆ. ಇಂದಿಗೆ ಒಂದು ಲಕ್ಷದಿಂದ ನಾಲ್ಕು ಲಕ್ಷ ವರ್ಷಗಳಷ್ಟು ಪೂರ್ವದಲ್ಲಿ ಇದ್ದಿತ್ತೆಂದು ಹೇಳಲಾಗುವ ಆದಿ ಹಳೆಯ ಶಿಲಾಯುಗ ಸಂಸ್ಕೃತಿಯು ಕೈಗೊಡಲಿ, ಹೆರೆಗತ್ತಿ, ಮಚ್ಚುಗತ್ತಿಗಳು ಹತ್ತಿರದ ಕಮಲಾಪುರ[೧೧] ಹಾಗೂ ಗಾದಿಗನೂರು[೧೨] ಗಳಲ್ಲಿ ಕಂಡುಬಂದಿವೆ. ಸುಮಾರು ೨೫೦೦ ವರ್ಷದಿಂದ ೧೦,೦೦೦ ವರ್ಷಗಳಷ್ಟು ಪೂರ್ವದ್ದೆನ್ನುವ ಸೂಕ್ಷ್ಮ

ಶಿಲಾಯುಗ ಸಂಸ್ಕೃತಿಯ ಚರ್ಟ್ ಶಿಲೆಯಲ್ಲಿ ರೂಪಿಸಲಾಗಿರುವ ಉಪಕರಣಗಳು ಕಾರಿಗನೂರು,[೧೩] ಗಾದಿಗನೂರು,[೧೪] ತಿಮ್ಮಲಾಪುರ,[೧೫] ದಾನಾಪುರ,[೧೬] ಭುವನಹಳ್ಳಿ,[೧೭] ಗಳಲ್ಲಿ ಕಂಡುಬರುತ್ತವೆ. ಸುಮಾರು ಕ್ರಿ.ಪೂ. ೨೪೦೦ ರಿಂದ ೧೦೦೦ ವರ್ಷಗಳಷ್ಟು ಹಳೆಯದಾದ ನೂತನ ಶಿಲಾಯುಗ ಸಂಸ್ಕೃತಿಯ ನೆಲೆಗಳು ಇಂಗಳಗಿ, ಕಾಕಬಾಳು, ಗಾದಿಗನೂರು, ತಿಮ್ಮಲಾಪುರ, ದಾನಪುರ, ಬೆಳಗೋಡುಹಾಳ್, ವೆಂಕಟಾಪುರಗಳಲ್ಲಿ ಕಂಡುಬರುತ್ತವೆ.[೧೮] ಶಿಲಾ ತಾಮ್ರಯುಗ ಕಾಲದ ನೆಲೆಗಳು ಹಂಪಿ, ಹಳಕಂಡಿ, ವೆಂಕಟಾಪುರ, ಬೆಳಗಲ್ಲು, ಬೆಳಗೋಡಹಾಳು, ನಿಂಬಾಪುರ, ಗುಡಿ ಓಬಳಾಪುರಗಳಲ್ಲಿ ಕಂಡುಬಂದಿವೆ.[೧೯] ಮಹಾಕಾವ್ಯಗಳಲ್ಲಿ ಒಂದಾದ ರಾಮಾಯಣದ ಕಿಷ್ಕಿಂದ ಕಾಂಡದಲ್ಲಿ ಈ ಪ್ರದೇಶದ ಉಲ್ಲೇಖಗಳು ಬರುತ್ತವೆ. ಮುಂದೆ ಚಾರಿತ್ರಿಕ ಯುಗವಾದ ಮೌರ್ಯರು, ಶಾತವಾಹನರ ಆಡಳಿತಕ್ಕೂ ಈ ಪ್ರದೇಶ ಒಳಪಟ್ಟು ನಂತರ ಕಾಲದಲ್ಲಿ ಕದಂಬರು, ಬಾದಾಮಿ ಚಾಳುಕ್ಯರು, ಗಂಗರು, ರಾಷ್ಟ್ರಕೂಟರ ಗಡಿಸೀಮೆಯಾಗಿತ್ತೆಂದು ತಿಳಿಯುವುದು ಗಮನಾರ್ಹ ಅಂಶ.[೨೦]

ಕ್ರಿ.ಶ. ೧೦೨೨ರ ನಂತರ ನೊಳಂಬವಾಡಿ ೩೨೦೦೦ ಚಾಳುಕ್ಯರ ಆಡಳಿತಕ್ಕೆ ಒಳಪಟ್ಟಿದ್ದಿತು. ಹೊಸಪೇಟೆಗೆ ಹತ್ತಿರದ ಕಂಪ್ಲಿ ಅವರ ಪ್ರಾದೇಶಿಕಾ ರಾಜಧಾನಿಯಾಯಿತು. ಜಗದೇಕಮಲ್ಲ ನೊಳಂಬ ಪಲ್ಲವನು ಈ ಪ್ರದೇಶವನ್ನು ಆಳಿದನು. ಅವನು ಮತ್ತು ಅವನ ಉತ್ತರಾಧಿಕಾರಿಗಳು ಚಾಳುಕ್ಯ ರಾಜರೆಂದು ಕರೆದುಕೊಂಡರು. ಕ್ರಿ.ಶ. ೧೦೫೭ರಲ್ಲಿ ನೊಳಂಬವಾಡಿ ೩೨೦೦೦ ಮೊದಲ ಸೋಮೇಶ್ವರ ಮತ್ತು ಆರನೇ ವಿಕ್ರಮಾದಿತ್ಯರ ಕಾಲದಲ್ಲಿ ಚಾಳುಕ್ಯರ ನೇರ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿತು. ಆರನೇ ವಿಕ್ರಮಾದಿತ್ಯನ ಪರವಾಗಿ ಮಹಾಮಂಡಲೇಶ್ವರ ಪಾಂಡ್ಯದೇವ (ಕ್ರಿ.ಶ.ಸು. ೧೧೨೧-೨೨) ಈ ಪ್ರದೇಶವನ್ನು ಆಳುತ್ತಿದ್ದನು. ಈ ಮಹಾಮಂಡಳೇಶ್ವರ ಆಡಳಿತಕ್ಕೆ ಮೊದಲು ಕ್ರಿ.ಶ. ೧೦೬೪ರಲ್ಲಿ ಆರನೇ ವಿಕ್ರಮಾದಿತ್ಯನ ಸೋದರ ವಿಷ್ಣುವರ್ಧನ ವಿಜಯಾದಿತ್ಯ ಈ ಪ್ರದೇಶದ ರಾಜ್ಯಪಾಲನಾಗಿದ್ದನು. ಆ ನಂತರ ಕ್ರಿ.ಶ. ೧೦೬೧ರಲ್ಲಿ ನೊಳಂಬರ ಹೆಸರಿನಿಂದ ಎರಡನೇ ಸೋಮೇಶ್ವರ ಅಥವಾ ಭುವನೈಕ್ಯಮಲ್ಲನ ಆಧೀನದಲ್ಲಿ ಜಯಸಿಂಗದೇವನೆಂಬುವನು ಆಳಿದನು. ಕ್ರಿ.ಶ. ೧೦೫೭ ರಿಂದ ನೊಳಂಬವಾಡಿ ಚಾಳುಕ್ಯರಾಜರ ನೇರ ಆಡಳಿತಕ್ಕೆ ಒಳಪಟ್ಟಿದ್ದರಿಂದ ಅವರು ತಮ್ಮ ಕುಟುಂಬದ ಸದಸ್ಯರನ್ನು ರಾಜಧಾನಿ ಕಂಪಿಲಿಯಲ್ಲಿ ರಾಜ ಪ್ರತಿನಿಧಿಗಳಾಗಿ ನೇಮಿಸಿದರು. ಬಹುಶಃ ಆಗಲೇ ಕಂಪ್ಲಿಯಲ್ಲಿ ಅವರು ಕೋಟೆ ಕಟ್ಟಿಕೊಂಡಿರಬೇಕು. ನಂತರ ಹೊಸಪೇಟೆ ಈ ಪ್ರದೇಶ ಕುಮ್ಮಟದುರ್ಗದ ಮುಮ್ಮಡಿ ಸಿಂಗೇನಾಯಕ, ಕಂಪಿಲರಾಯ ಹಾಗೂ ಕುಮಾರರಾಮನ ಆಡಳಿತ ಕ್ಷೇತ್ರವಾಗಿ ಮಾರ್ಪಟ್ಟಿತು. ವಿಜಯನಗರ ಸ್ಥಾಪನೆಯ ನಂತರ ಕ್ರಿ.ಶ. ೧೩೩೬ ರಿಂದ ೧೫೬೫ ರವರೆಗೆ ಸಂಗಮ, ಸಾಳ್ವ, ತುಳು ಮತ್ತು ಅರವೀಡು ವಂಶಗಳು ಇಲ್ಲಿ ಆಳ್ವಿಕೆ ಮಾಡಿದವು. ಈ ಅವಧಿಯಲ್ಲಿ ನೂರಾರು ದೇವಾಲಯಗಳು ಕೆರೆ-ಬಾವಿಗಳು ಕೋಟೆ-ಕೊತ್ತಲಗಳು ಸ್ಥಾಪನೆಗೊಂಡವು.

ಈ ಪಟ್ಟಣದಲ್ಲಿರುವ ವಿಜಯನಗರ ಕಾಲದ ಪ್ರಮುಖ ದೇಗುಲಗಳೆಂದರೆ ವಡಕರಾಯನಗುಡಿ, ಜಂಬುನಾಥನ ದೇವಾಲಯ, ಈಶ್ವರ ದೇವಾಲಯ, ಕಾಳಮ್ಮನಗುಡಿ, ವೀರಭದ್ರ ದೇವಾಲಯ, ಬನಶಂಖರಿ ಗುಡಿಗಳು ಪ್ರಮುಖವಾಗಿದೆ.

ನಗರದ ದಕ್ಷಿಣಭಾಗಕ್ಕೆ ಇರುವ ಹಳೇ ಊರಿನ ಜನವಸತಿ ಪ್ರದೇಶವನ್ನು ಈಗಲೂ ಕ್ಯಾಟೆ, ಕೋಟೆ ಎಂದು ಕರೆಯುವರು. ಆದರೆ ಕೋಟೆ ಕೊತ್ತಳದ ಯಾವುದೇ ಅವಶೇಷಗಳು ಇಂದು ಇಲ್ಲಿ ಕಾಣುವುದಿಲ್ಲ. ನಗರವು ವೇಗವಾಗಿ ಬೆಳೆಯುತ್ತಿರುವುದರಿಂದ ಇಲ್ಲಿ ಕೋಟೆ-ಕೊತ್ತಲಾವಶೇಷಗಳು ಇಲ್ಲವಾಗಿವೆ. ಇಲ್ಲಿಯ ಭೌಗೋಳಿಕ ಲಕ್ಷಣಗಳು ಹಾಗೂ ಸ್ಥಳೀಯರ ಹೇಳಿಕೆಯಿಂದಾಗಿ ಕೋಟೆಯು ಉತ್ತರಾಭಿಮುಖವಾಗಿದ್ದಂತೆ ತಿಳಿದುಬರುವುದು.

ಹೊಸಪೇಟೆ ಪಟ್ಟಣದ ಇಂದಿರಾನಗರ ಬಡಾವಣೆಯು ಈಶ್ವರನ ಗುಡಿಯಲ್ಲಿರುವ ಶಾಸನದಲ್ಲಿ ಹೊಸಪೇಟೆ ಪ್ರದೇಶದಲ್ಲಿ ಕೋಟೆ ಇದ್ದುದ್ದಕ್ಕೆ ಪೂರಕವಾಗಿ ಪ್ರಸ್ತಾಪವು ಕೆಳಗಿನಂತಿದೆ.[೨೦]

> ಶುಭಮಸ್ತು ಸ್ವಸ್ತಿ ಶ್ರೀ ವಿಜಯಾಭ್ಯುದಯ ಶಾಲಿವಾಹನ
> ಶಕ ವರ್ಷಗಳು ೧೪೪೩ನೆಯ ವಿಷು ಸಂವತ್ಸರ ಕಾರ್ತಿ
> ಕ.ಶು. ೧೧ ಪುಣ್ಯಕಾಲದಲ್ಲು ಶ್ರೀಮನ್ ಮಹಾರಾಜಾಧಿ ರಾ॰
> ಜಾ ರಾಜಪರಮೇಶ್ವರ ಶ್ರೀ ವೀರ ಪ್ರತಪ ಶ್ರೀ ವೀರ ಕೃಷ್ಣರಾಯಮ
> ಹರಾಯರು ಪೃಥವಿ ರಾಜ್ಯಂ ಗೈಲುತಯಿರಲು ತಿರುಮ
> ಲದೇವಿಯರ ಪಟ್ಟಣದ ನಾಲ್ಕು ಬಾಗಿಲ ಬಳಿಯ ಶ್ರೀಕಾಸಿ ವಿ
> ಶ್ವೇಶ್ವರನ ಪ್ರತಿಷ್ಠಾಕಾಲದಲ್ಲು ಅಭಿಷೇಕ ಪೂಜಾ ನೈವೇದ್ಯಕ್ಕೆ
> ತಿರುಮಲದೇವಿ ಪಟ್ಟಣಕ್ಕೆ ಸಲ್ಲುವ ಕೋಟೆಗೆ ಬಡಗಲು(ನ)
> ಯಲ್ಲಂಪಣನ ಕೆರೆಯನು ಶ್ರೀಕಾಸಿ ವಿಶ್ವನಾಥ ದೇವರಿಗೆ

ಈ ಶಾಸನವು ತಿರುಮಲದೇವಿ ಅಮ್ಮನವರ ಪಟ್ಟಣದಲ್ಲಿ ಯಲ್ಲಪಣ್ಣನ ಕೆರೆಯ ದಕ್ಷಿಣಕ್ಕೆ ಕೋಟೆ ಇರುವುದನ್ನು ಸೂಚಿಸುತ್ತದೆ. ಯಲ್ಲಪಣ್ಣನ ಕೆರೆಯು ಇಂದು ಬಸವೇಶ್ವರ ಬಡಾವಣೆಯಾಗಿದೆ. ಈಗ ಕೋಟೆಯೆಂದು ಕರೆಯುವ ಪ್ರದೇಶವು ಬಸವೇಶ್ವರ ಬಡಾವಣೆಯಿಂದ ದಕ್ಷಿಣಕ್ಕೆ ೧ ಕಿ.ಮೀ. ದೂರದಲ್ಲಿದೆ. ಕೋಟೆಯಲ್ಲಿ ವಿಜಯನಗರ ಕಾಲದ ರಾಮಲಿಂಗೇಶ್ವರ, ಈಶ್ವರ ಒಡಕರಾಯ, ಆಂಜನೇಯನ ಗುಡಿಗಳಲ್ಲದೆ ಒಂದೆರಡು ಕಡೆ ಕೋಟೆಗೆ ಬಳಸಿದ್ದ ಮಧ್ಯಮಗಾತ್ರದ ಕಲ್ಲುಗಳಿವೆ.

ಹೊಸಪೇಟೆ ಎಂಬ ಗ್ರಾಮವು ವಿಜಯನಗರ ರಾಜ್ಯದ ರಕ್ಷಾದುರ್ಗ ಹಾಗೂ ಪ್ರಮುಖ ಮಾರುಕಟ್ಟೆ ಸ್ಥಳವಾಗಿತ್ತು. ಭದ್ರವಾದ ಕೋಟೆ ಕೊತ್ತಳಗಳಿಂದ ಸುರಕ್ಷಿತವಾಗಿತ್ತೆಂದು ಚಿಕ್ಕೆರೂರು ಗೋವಿಂದಚಾರ್ಯರು ಅಭಿಪ್ರಾಯ ಪಡುತ್ತಾರೆ.[೨೨]

ಅಡಿಟಿಪ್ಪಣಿಗಳು

೧. ದೇವರಕೊಂಡಾರೆಡ್ಡಿ ಮತ್ತು ಇತರರು, ೧೯೯೮. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧. ಪು. ೧೩೮, ಹಂಪಿ, ಕನ್ನಡ ವಿಶ್ವವಿದ್ಯಾಲಯ

೨. ಅದೇ, ಪು. ೧೪೦

೩. ಕೊಟ್ರೇಶ್ ಎಂ. ೧೯೯೯, ವಿಜಯನಗರದ ಕಾಲದ ಶಾಸನ ಶೋಧ, ವಿಜಯನಗರ ಅಧ್ಯಯನ ಸಂಪುಟ-೪, ಪು. ೬೮

೪. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಪುರ್ವೋಕ್ತ, ಪು. ೧೪೪

೫. ಕೊಟ್ರೇಶ್ ಎಂ. ೧೯೯೯, ಪುರ್ವೋಕ್ತ, ಪು. ೬೯

೬. ಕೊಟ್ರಯ್ಯ ಸಿ.ಟಿ.ಎಂ. ೧೯೯೭, ಹೊಸಪೇಟೆ-ಚಾರಿತ್ರಿಕ ವಿವೇಚನೆ: ಐತಿಹ್ಯ: ಪರಿಶೀಲನೆ, ಹೊಸಪೇಟೆ ನಗರ ಚಾರಿತ್ರಿಕ ವಿವೇಚನೆ, ಪು. ೬, ಹೊಸಪೇಟೆ

೭. ಸದಾನಂದ ಕನವಳ್ಳಿ (ಅನು), ೧೯೯೨, ಮರೆತುಹೋದ ಮಹಾ ಸಾಮ್ರಾಜ್ಯ, ವಿಜಯನಗರ, ಪು. ೧೬೨

೮. ಸೂರ್ಯನಾಥ ಕಾಮತ್ (ಸಂ), ೧೯೮೪, ಕರ್ನಾಟಕ ರಾಜ್ಯ ಗ್ಯಾಸಿಟಿಯರ್, ಪು. ೪೮೬

೯. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಪುರ್ವೋಕ್ತ, ಪು. ೬೬೪-೬೫

೧೦. ಅದೇ, ಪು. ೧೩೯

೧೧. ಶಿವತಾರಕ್, ಕೆ.ಬಿ. ೨೦೦೨, ಕರ್ನಾಟಕ ಪುರಾತತ್ವ ನೆಲೆಗಳು, ಪು. ೩೬೮

೧೨. ಅದೇ, ಪು. ೩೬೯

೧೩. ಅದೇ, ಪು. ೩೬೯

೧೪. ಅದೇ, ಪು. ೩೬೯

೧೫. ಅದೇ, ಪು. ೩೭೦

೧೬. ಅದೇ, ಪು. ೩೭೧

೧೭. ಅದೇ, ಪು. ೩೭೧

೧೮. ಅದೇ, ಪು. ೩೭೨

೧೯. ಅದೇ, ಪು. ೩೭೨

೨೦. ಕೊಟ್ರಯ್ಯ ಸಿ.ಟಿ.ಎಂ. ೧೯೯೭, ಪುರ್ವೋಕ್ತ, ಪು. ೧೦

೨೧. ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ-೧, ಪುರ್ವೋಕ್ತ, ಪು. ೧೪೧

೨೨. ಗೋವಿಂದಚಾರ್ಯ ಚಿಕ್ಕೇರೂರು, ೧೯೯೭, ಹೊಸಪೇಟೆ ಐತಿಹ್ಯ, ಪು. ೧೨

❖ ❖

೧೦

ವಿಜಯನಗರ ಕಾಲದ ಬೇಟೆಹಬ್ಬ

ಡಾ. ವಿರೂಪಾಕ್ಷಿ ಪೂಜಾರಹಳ್ಳಿ

'ಬೇಟೆ' ಆದಿ ಮಾನವನ ಆಹಾರ ಸಂಗ್ರಹಣೆಯಲ್ಲಿ ಪ್ರಮುಖ ವೃತ್ತಿಯಾಗಿತ್ತೆಂಬುದು ಗಮನಾರ್ಹ. ಗಡ್ಡೆ-ಗೆಣಸುಗಳ ನಂತರ ಪ್ರಾಣಿಗಳನ್ನು ಕೊಂದು ತಿನ್ನುವ ವಿನೂತನ ಪ್ರವೃತ್ತಿ ಮಾನವನಲ್ಲಿ ಬೆಳೆದಂತೆ ಬೇಟೆಯ ಆಯಾಮದಲ್ಲಿ ಕ್ರಾಂತಿಕಾರಿ ಬದಲಾವಣೆಯಾಯಿತು. ದುಷ್ಟ ಮೃಗಗಳ ರಕ್ಷಣೆ, ಆಹಾರ ಸಮತೋಲನ, ಮನೋರಂಜನೆ, ಅಷ್ಟಾದಶವರ್ಣನೆ, ಆತ್ಮರಕ್ಷಣೆ, ವ್ಯಾಪಾರ ಹೀಗೆ ನಾನಾ ಕಾರಣಗಳಿಗಾಗಿ ಬೇಟೆ ಇಂದಿಗೂ ಜೀವಂತಿಕೆ ಪಡೆದುಕೊಂಡಿದೆ. ಭಾರತದ ಹಲವು ಆಳರಸರ ಕಾಲಾವಧಿಯಲ್ಲಿ ಈ ಬೇಟೆ ಚಿತ್ರಣವನ್ನು ಕಾಣಬಹುದಾಗಿದೆ. ಮಧ್ಯಕಾಲ ಅಥವಾ ವಿಜಯನಗರ ಕಾಲದಲ್ಲಿ ಬೇಟೆ ಸಾಂಸ್ಕೃತಿಕ ಪರಿವರ್ತನೆ ಮತ್ತು ರಾಜಪ್ರಭುತ್ವಕ್ಕೆ ಮಹಾತಿರುವಾಗಿ ಪರಿಣಮಿಸಿದ್ದು, ಚರಿತ್ರೆಯಲ್ಲಿ ದಾಖಲಾಗಿಲ್ಲ? ತಕ್ಕಮಟ್ಟಿಗೆ ಶಾಸನ, ವಿದೇಶಿಯಾತ್ರಿಕರ ವರದಿ, ಕನ್ನಡ ಕಾವ್ಯ, ಸ್ಮಾರಕ ಶಿಲ್ಪಗಳಲ್ಲಿ ಬೇಟೆ ಉಲ್ಲೇಖಗೊಂಡಿದ್ದು, ಜನಸಾಮಾನ್ಯರಿಂದ ಆಳರಸರವರೆಗೆ ಇದು ತುಂಬಾ ಮಹತ್ವದ ಕ್ರೀಡೆ ಮತ್ತು ಹವ್ಯಾಸವಾಗಿದ್ದಿತು.[೧]

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯ ಹಿಂದೆ ಬೇಟೆ ಪ್ರಸಂಗ ಬರುವುದು ಅತಿಶಯೋಕ್ತಿಯಲ್ಲ. ಒಂದು ದಿನ ಸಂಗಮನ ಸಹೋದರರಲ್ಲಿ ಹಿರಿಯವರಾದ ಹರಿಹರ,

ಬುಕ್ಕರಾಯರು ಬೇಟೆಗೆಂದು ಕಾಡಿಗೆ ಹೋದಾಗ ಮೊಲವೊಂದು ತನ್ನನ್ನು ಬೆನ್ನಟ್ಟಿ ಬರುತ್ತಿದ್ದ ನಾಯಿಗಳನ್ನೇ ಕಚ್ಚಿತು. ಈ ವಿಚಿತ್ರ ಘಟನೆ ಕಂಡ ಹರಿಹರ ಸಂನ್ಯಾಸಿಯೊಬ್ಬನ ಬಳಿ ತಿಳಿಸಿದನು. ಅವನು (ವಿದ್ಯಾರಣ್ಯ?) ಸಾಮ್ರಾಜ್ಯ ಕಟ್ಟಲು ಅದೇ ಒಳ್ಳೆಯ ಸ್ಥಾನ ಎಂದು ಉಪದೇಶ ಮಾಡಿದಂತೆ ಇವರು ಸಾಮ್ರಾಜ್ಯ ಸ್ಥಾಪಿಸಿದರಂತೆ. ಈ ಘಟನೆಯಂತೆ ಹೊಯ್ಸಳ, ಕುಮ್ಮಟದುರ್ಗ, ಗುಡೇಕೋಟೆ, ಜರಿಮಲೆ, ಸೊಂಡೂರು, ತರೀಕೆರೆ, ಚಿತ್ರದುರ್ಗ ಮೊದಲಾದ ಸಂಸ್ಥಾನಗಳ ಉಗಮದೊಂದಿಗೆ ಬೇಟೆ ಪ್ರಸಂಗ ಹಾಸುಹೊಕ್ಕಾಗಿ ಬರುತ್ತದೆ. ಹಂಪೆ ಪರಿಸರವು ತಪೋಭೂಮಿ, ಪ್ರಾಚೀನ ವಾನರ ಕೇಂದ್ರ, ಕಿರಾತರ ನೆಲೆಯಾಗಿದ್ದ ಉಲ್ಲೇಖಗಳಿವೆ. ಹೊಯ್ಸಳರ ಕಾಲಕ್ಕೆ ಹಂಪೆ ಪರಿಸರದಲ್ಲಿ ಕೋಟೆ-ಕೊತ್ತಲುಗಳ ರಕ್ಷಣೆಗೆ ಕಿರಾತ ಪಡೆಯನ್ನು ನೇಮಿಸಲಾಗಿತ್ತು. ವಿಜಯನಗರದ ಅರಸರು ಬೇಟೆಯಲ್ಲಿ ಬಹು ನಿಪುಣರಾಗಿದ್ದರು. ಈ ಅರಸರು ಯುದ್ಧಕ್ಕೆ ಹೋರಾಡುವ ಸಂಭ್ರಮದಂತೆ ಬೇಟೆಗೂ ಹೋಗುವ ಪರಿಪಾಟ ಇಟ್ಟುಕೊಂಡಿದ್ದರು. ಶಿಕಾರಿಗೆ ಹೊರಡುವಾಗ ಹೆಚ್ಚಿನ ಸಂಖ್ಯೆಯಲ್ಲಿ ೧೦,೦೦೦ ಅಶ್ವಾಳು, ೫,೦೦,೦೦೦ ಕಾಲಾಳು ಮತ್ತು ೭೦೦ ಗಜಗಳ ಪರಿವಾರವನ್ನು ಒಯ್ಯುತ್ತಿದ್ದರೆಂದು ತಿಳಿದುಬರುತ್ತದೆ. ವಿಜಯನಗರದಲ್ಲಿ 'ಬೇಡ ಪಡೆ' ನಾನಾ ಕಾರಣಗಳಿಗಾಗಿ ನಿರ್ಣಾಯಕ ಪಾತ್ರ ವಹಿಸಿದ್ದಿತು. ಮೀಸಲು ಪಡೆ, ಗುರಿಕಾರರ ನೆರವಿನೊಂದಿಗೆ ಅರಸರು ಬೇಟೆಗೆ ಹೋಗುತ್ತಿದ್ದ ಉಲ್ಲೇಖಗಳಿವೆ. ಹರಿಹರ, ೨ನೇ ದೇವರಾಯ ಮೊದಲಾದವರನ್ನು ಹೆಸರಿಸಬಹುದು. ಗಜಬೇಂಟೆಕಾರ ಎಂಬ ಬಿರುದನ್ನು ಹೊಂದಿರುವುದು ಶಾಸನಗಳಿಂದ ತಿಳಿಯಬಹುದಾಗಿದೆ.

ವಿಜಯನಗರ ಕಾಲದಲ್ಲಿ ಪ್ರಚಲಿತವಿದ್ದ ಬೇಟೆ ಬಗ್ಗೆ ಹಂಪೆಯ ವಿರೂಪಾಕ್ಷ ದೇವಾಲಯ, ಹಜಾರರಾಮ, ವಿಜಯವಿಠಲ, ಕೃಷ್ಣ, ಅಚ್ಯುತ, ಮಾಲ್ಯವಂತ ರಘುನಾಥ, ಪಟ್ಟಾಭಿರಾಮ, ಮಹಾನವಮಿ ದಿಬ್ಬಗಳಲ್ಲಿ ನೋಡಬಹುದು. ಹಂಪೆಯ ಹೊರಗೂ ಬೇಟೆಯ ಉಲ್ಲೇಖಗಳ ನೆಲೆಗಳನ್ನು ಗುರುತಿಸಬಹುದು: ಶೃಂಗೇರಿ, ಮೇಲುಕೋಟೆ, ನಂದಿಬೆಟ್ಟಗಳು, ಭಾಗಮಂಡಲ, ಕಲ್ಲೂರು, ಹಿರಿಯೂರು, ಶ್ರೀಶೈಲಂ, ಯಗಂಟಿ, ಲೇಪಾಕ್ಷಿ, ಪುಷ್ಪಗಿರಿ ಮತ್ತು ಶಂಕರಗಿರಿಗಳ ದೇವಾಲಯಗಳ ವಾಸ್ತುಶಿಲ್ಪದಲ್ಲಿ ಬೇಟೆ ಚಿತ್ರಣವಿದೆ. ಈ ಬೇಟೆ ಲೌಕಿಕ ಅಲೌಕಿಕ ಲಕ್ಷಣಗಳನ್ನು ಹೊಂದಿದೆ. ವಿಜಯನಗರ ವಾಸ್ತುಶಿಲ್ಪದಲ್ಲಿ ಬೇಟೆ ಚಿತ್ರಣವು ಆರಾಧನಾ ವೃತ್ತಿಯಾಗಿದ್ದಿತೆಂದು ಹೇಳಬಹುದು. ಬೇಟೆಗಾರರ ಹೆಬ್ಬಾಗಿಲು ಸಹ ಬೇಟೆಯ ಔನ್ನತಿಗೆ ಸಾಕ್ಷಿ. ಇಲ್ಲಿ ಹುಲಿಬೇಟೆ (ವಿಠಲ), ಜಿಂಕೆ ಬೇಟೆ (ಮಹಾನವಮಿ ದಿಬ್ಬ), ಹಂದಿ ಬೇಟೆ, ಆನೆ ಇತರ ಪ್ರಾಣಿಗಳ ಬೇಟೆ ಚಿತ್ರಣವು ಅದ್ಭುತವೆನಿಸುತ್ತದೆ. ಲೌಕಿಕ ಬೇಟೆಯನ್ನು ಮಹಾನವಮಿದಿಬ್ಬದಲ್ಲಿ ಕಾಣಬಹುದು. ಅಲೌಕಿಕ ಬೇಟೆಗೆ ಕಿರಾತಾರ್ಜುನೀಯ ಪ್ರಸಂಗವನ್ನು ಉದಾಹರಿಸಬಹುದು. ಅರ್ಜುನನ ಮತ್ಸಬೇಧ, ಲೇಪಾಕ್ಷಿ ವೀರಭದ್ರ ದೇವಾಲಯ (ಕಿರಾತಾರ್ಜುನೀಯ ಪ್ರಸಂಗ) ಇತರ ಸ್ಥಳಗಳಲ್ಲಿ ಕಮಲಾಪುರ, ಮರಿಯಮ್ಮನಹಳ್ಳಿ, ಗುಡೇಕೋಟೆಗಳಲ್ಲಿಯೂ ಮೇಲಿನಂತೆ ಕಾಣಬಹುದು. ವಿಜಯನಗರ

ಕಾಲದಲ್ಲಿನ ಬೇಟೆ ಉದ್ಯೋಗವಾಗಿತ್ತೇ ಅಥವಾ ಲಾಭದಾಯಕ ಉದ್ದಿಮೆಯಾಗಿತ್ತೆ ತಿಳಿಯುತ್ತಿಲ್ಲ.

ವಿದೇಶಿ ಪ್ರವಾಸಿಗರಾದ ವೇರ್ಥಮ, ಬಾರ್ಬೊಸ, ಅಬ್ದುಲ್ ರಜಾಕ್, ಪೆರ್ನಾಂವ್ಹೊ ನೂನಿಜ್ ಇತರರು ಬೇಟೆಯ ಸ್ವರ್ಗವೇ ಹಂಪಿ, ಇಲ್ಲಿ ಒಳ್ಳೆಯ ಬೇಟೆಗಾರರಿದ್ದಾರೆ, ಆನೆ ಬೇಟೆ, ಹಂಪೆಯಲ್ಲಿ ದೇವಾಲಯ ಕಟ್ಟಲು ಬೇಟೆಯೇ ಕಾರಣವೆಂದು ತಿಳಿಸುವಾಗ ಬೇಟೆಯ ಧಾರ್ಮಿಕ ಮಹತ್ವಕ್ಕೆ ಇವರು ಗಮನಹರಿಸಿದ್ದರು. ಬೇಟೆ ವಿಧಾನ, ಬಗೆಗಳಲ್ಲಿ ಹುಲಿ, ಆನೆ, ಜಿಂಕೆ, ಮೊಲ, ಹಂದಿಗಳ ಚಿತ್ರಣ ಬಹುವಿಧದಲ್ಲಿ ಉಲ್ಲೇಖಗೊಂಡಿದೆ. ಬೇಟೆಗಾರನೊಂದಿಗೆ ಬೇಟೆ ನಾಯಿಗಳು ಸಹ ಸಹಕರಿಸಿದ್ದು ಕಂಡುಬರುತ್ತದೆ. ಹಂಪಿ ಆನೆಗೊಂದಿ ಪರಿಸರದಲ್ಲಿ ಮೇಲಿನಂತೆ ವನ್ಯಜೀವಿಗಳೊಂದಿಗೆ ಮಾನವನ ಚಿತ್ರಣವನ್ನು ಆರಾಧನಾ ನೃತ್ಯವೆಂಬಂತೆ ಚಿತ್ರಿಸಲಾಗಿದೆ. ಜನಸಾಮಾನ್ಯರಿಂದ ಅಳಿದುಳಿದು ಬಂದ ಬೇಟೆಗೆ ರಾಜಮನ್ನಣೆ ದೊರೆತಾಗ ಅದು ಆರಾಧನೆ, ಧಾರ್ಮಿಕ ಸ್ವರೂಪಕ್ಕೆ ಸಿಲುಕಿ ಆಚರಣೆ ಸಂಪ್ರದಾಯಗಳು ತಲೆಮಾರುಗಳಿಂದ ಚಾಲನೆಗೆ ಬಂದವು. ಇವುಗಳ ನಡುವೆಯು ಬೇಟೆಯನ್ನಾಡಲು ವಿಧಿ-ಆಚರಣೆ, ನಂಬಿಕೆ-ನಿಷೇಧ ಇತರ ಕಟ್ಟುಪಾಡುಗಳಿದ್ದವೆಂಬುದು ಸ್ಪಷ್ಟ. ಮೇಲೆ ಹೇಳಿದ ಪ್ರಾಣಿಗಳಲ್ಲದೆ, ಇತರ ಪ್ರಾಣಿಗಳ ಬಗ್ಗೆ ಹೆಚ್ಚಿನ ಮಾಹಿತಿಯಿಲ್ಲ. ಕೆಲವು ಪ್ರಾಣಿಗಳಿಗೆ ನಿಷೇಧ ಹೇರಿದ್ದು, ಗೌರವದಿಂದ ಅವುಗಳ ವಧೆಯನ್ನು ಖಂಡಿಸಲಾಗುತ್ತಿತ್ತೆಂದು ತಿಳಿಯಬಹುದು. ಸಿಕ್ಕ ಬೇಟೆಯನ್ನು ಹಂಚಿಕೊಳ್ಳುವಾಗ ಅವರು ಪಡುವ ಸಡಗರ-ಸಂಭ್ರಮದಲ್ಲಿ ಆಹಾರ ವಿನಿಮಯವಲ್ಲದೆ, ಸಂತೋಷವಾಗಿ ಸಾಮೂಹಿಕವಾಗಿ ಕುಣಿಯುವ 'ಬೇಟೆ ನೃತ್ಯ'ವನ್ನು ಪ್ರದರ್ಶಿಸುತ್ತಿದ್ದರು. ಇದು ರಾಜನಿಗೂ ಪ್ರಜೆಗಳಿಗೂ ತುಂಬಾ ಇಷ್ಟವಾದ ಔಚಿತ್ಯ ಕಾರ್ಯಕ್ರಮವು ಆಗಿದ್ದಂತಿದೆ. ಇಂತಹ ಉತ್ಸವವನ್ನು ಇಂದು ಯುಗಾದಿ ಸಂದರ್ಭದಲ್ಲಿ ಮಾತ್ರ ನೋಡಲು ಸಾಧ್ಯ. ಆದರೆ ವಿಜಯನಗರದಲ್ಲಿ ಸಂದರ್ಭಕ್ಕೆ ತಕ್ಕಂತೆ ಆಯೋಜಿಸಲಾಗಿತ್ತು. ಹಂಪೆಯ ಮಹಾನವಮಿ ಹಬ್ಬವನ್ನು ಆಚರಿಸುವ ಪೂರ್ವದಲ್ಲಿ ಬೇಟೆ ಹಬ್ಬವನ್ನು ಆಚರಿಸುತ್ತಿದ್ದರು. ಈ ಬೇಟೆ ಹಬ್ಬವು ಸಾರ್ವತ್ರಿಕವಾಗಿ ನಡೆಯುತ್ತಿತ್ತಲ್ಲದೆ, ಇಂಥ ಹಬ್ಬದಿಂದಲೇ ಮಹಾನವಮಿ ಹಬ್ಬಕ್ಕೆ ಪ್ರಾಶಸ್ತ್ಯ ಬಂದಂತಿದೆ. ಇನ್ನು ಕೆಲವು ಆಚರಣೆಗಳ ಮೂಲಕ ನೋಡುವುದಾದರೆ ಬೇಟೆಗಾರರು ತಮ್ಮ ಆಯುಧಗಳನ್ನು ಪೂಜಿಸುವುದು ಈ ಹಬ್ಬದಲ್ಲಿ ಮತ್ತು ಬೇಟೆಯನ್ನು ಆಯುಧಗಳಿಗೆ ಬಲಿಕೊಡಲಾಗುತ್ತದೆ.

ವಿಜಯನಗರ ಕಾಲದ ಮಹಾಯಾತ್ರಾಸ್ಥಳ, ಧಾರ್ಮಿಕ ನೆಲೆಯಾದ ತಿರುಪತಿಯಲ್ಲಿ ಬೇಟೆ ಹಬ್ಬವು ನಡೆಯುತ್ತಿದ್ದುದು ಮೊದಲ ಉದಾಹರಣೆ. ಇಲ್ಲಿರುವ ಮಹಾನವಮಿ ದಿಬ್ಬದಲ್ಲಿ ಶೇ ೭೫ ಭಾಗ ವನ್ಯ ಜೀವಿಗಳ ಬಗ್ಗೆ, ಬೇಟೆ ದೃಶ್ಯಗಳ ಬಗ್ಗೆ ಇರುವ ಶಿಲ್ಪ ಪಟ್ಟಿಕೆಗಳನ್ನು ಅವಲೋಕಿಸಿದರೆ, ಬೇಟೆ ನೃತ್ಯ, ಬೇಟೆ ಹಬ್ಬ ಆಚರಿಸುವ ಬೇಟೆ ದಿಬ್ಬಣವಾಗಿರಬೇಕೆಂದು ನಂಬಬಹುದಾಗಿದೆ. ತಿರುಪತಿ ತಿರುಮಲೆಯಲ್ಲಿ ಬೇಟೆ ಹಬ್ಬವನ್ನು

ಬ್ರಹ್ಮೋತ್ಸವ ಆದ ಮೇಲೆ ೨ ದಿನ ದೀಪಾವಳಿ, ೧ ದಿನ ಕಾರ್ತಿಕ ಹಬ್ಬ, ೧ ದಿನ ಬೇಟೆ ಹಬ್ಬ ಮತ್ತು ೧ ದಿನ ಕಣುವ ಹಬ್ಬ ಮಾಡುತ್ತಿದ್ದರು. ಬೇಟೆ ಹಬ್ಬ ಬಹುತೇಕ ಬೇಸಿಗೆಯ ದಿನಗಳಿಂದಲೇ ಕೂಡಿರುತ್ತದೆ. ತಿರುಪತಿಯಲ್ಲಿ ನಡೆಯುವ ಬೇಟೆ ಹಬ್ಬಕ್ಕೆ ೧೦೦ ಹಣ್ಣು, ಕಬ್ಬು, ಬೆಲ್ಲ, ತೆಂಗಿನಕಾಯಿ, ಎಲೆ ಅಡಿಕೆ, ಹೂವು, ಪತ್ರೆ ಮೊದಲಾದ ವಸ್ತುಗಳನ್ನು ಪೂಜೆಗೆ ಬಳಸುತ್ತಿದ್ದರು. ಭಕ್ತಾದಿಗಳು ಈ ಹಬ್ಬಕ್ಕೆ ಉದಾರವಾಗಿ ದಾನಕೊಟ್ಟ ಉದಾಹರಣೆಗಳಿವೆ. ತಿಮ್ಮಪ್ಪ ದೇವರಿಗೆ ತಿಲ್ಲಪ್ಪನಾಯಕರ್ ದೇಣಿಗೆ ನೀಡಿದ್ದು ಸ್ಮರಣೀಯ. ಈ ಹಬ್ಬದಲ್ಲಿ ಸಂಪ್ರದಾಯದಂತೆ ಬೆಲ್ಲ, ಎಲೆ-ಅಡಿಕೆ, ಕಾಯಿ, ೫೦ ಅಡಿಕೆ, ೧೦೦ ಎಲೆ ಮೊದಲಾದ ವಸ್ತುಗಳನ್ನು ತಪ್ಪದೆ ಗೋವಿಂದನಿಗೆ ಅರ್ಪಿಸಿದ ಭಕ್ತಾದಿಗಳ ದೇಣಿಗೆಗೆ ಲೆಕ್ಕವಿಲ್ಲ. ಬೇಟೆ ಹಬ್ಬದ ದಿನ ಶ್ರೀ ವೆಂಕಟೇಶ್ವರನನ್ನು ಹೊರಗೆ ಆಹ್ವಾನಿಸುವ ಪ್ರಸಂಗವಿದೆ. ಬೇಸಿಗೆ ಅಥವಾ ಸುಗ್ಗಿಯ ಹಬ್ಬದಂತೆ ಬೇಟೆ ಹಬ್ಬವನ್ನು ತಿರುಪತಿ ಗೋವಿಂದರಾಜನ ಹೆಸರಿನಲ್ಲಿ ಉದಯ ಕಾಲದಿಂದ ಆಚರಿಸುತ್ತಾರೆ. ಅಲಂಕಾರ ಮಾಡಿ ದೇವಾಲಯದ ಸೌಂದರ್ಯ ಇಮ್ಮಡಿಗೊಳಿಸಿ ಬೇಟೆ ಹಬ್ಬದಂದು ೨ ಮರ ಅಕ್ಕಿ, ತುಪ್ಪ, ಹಣ್ಣು, ಕಾಯಿ, ೨೦೦ ಕಬ್ಬಿನದಂಟು-ಎಲೆಗಳು, ಮೆಣಸು, ೧೦೦ ಯಾಲಕ್ಕಿ, ಲವಂಗ, ೨೦೦ ಎಲೆ-ಅಡಿಕೆ, ೪ ತಾಳೆಗರಿಗಳನ್ನು ಹಂಚಲಾಗುತ್ತದೆ. ಮಂಟಪದಲ್ಲಿ ಆ ದಿನ ಕೊಳದ ಹತ್ತಿರ ಬೇಟೆ ಹಬ್ಬ ಅಮವಾಸ್ಯೆ ಆದ ಮೇಲೆ ಬಂಡಿಹಬ್ಬ ಆಗುತ್ತದೆ. ತೆಲುಗಿನಲ್ಲಿ ಬೇಟೆ ಹಬ್ಬಕ್ಕೆ 'ಪಾಡಿಯವೆಟ್ಟೈ' ಎಂದು ಕರೆಯುತ್ತಾರೆ. ವಿಜಯನಗರದ ಕೇಂದ್ರವಾದ ಹಂಪೆಯಲ್ಲಿ ಇತರ ಪ್ರದೇಶಗಳಲ್ಲಿ ಬುಡಕಟ್ಟು ಜನರು ಬೇಟೆ ದಿಬ್ಬ, ವೆಂಕಟಗಿರಿಪುರ ಎಂದು ಕರೆದು ಆರಾಧಿಸುತ್ತಾರೆ. ಅಡವಿಚೆಂಚರು ೧ ದಿನ ತಿರುಪತಿಯಲ್ಲಿ ನಡೆಸಿದಂತೆ ಬೇಟೆ ಹಬ್ಬವನ್ನು ತಾವು ಆಚರಿಸಿಕೊಂಡು ಬಂದಿರುತ್ತಾರೆ. ಹಂಪೆಯ ಬೇಟೆಕಾರರ ಹೆಬ್ಬಾಗಿಲು ಬಳಿ ತಿರುಪತಿ ಗುಡ್ಡವಿದ್ದು, ಇಲ್ಲಿಸಾಂಕೇತಿಕವಾಗಿ ಬೇಟೆ ಹಬ್ಬವನ್ನು ಮಾಡುತ್ತಿದ್ದರಂತೆ. ಕಾಲ ಬದಲಾದಂತೆ ಬೇಟೆ ಹಬ್ಬ ಕಣ್ಮರೆಯಾಗುವ ಬದಲು ತನ್ನ ಸ್ವರೂಪವನ್ನು ಬದಲಿಸಿಕೊಂಡಿದೆ ಎಂದು ಹೇಳಬಹುದು. ಇಂದು ಯುಗಾದಿ ಅಮವಾಸ್ಯೆ ದಿನ ಕಮಲಾಪುರ ಇತರ ಗ್ರಾಮಗಳ ಬೇಡರು ಆನೆಗೊಂದಿ ರಾಜರ ಅನುಮತಿ ಮೇರೆಗೆ (ಸಮಕ್ಷಮ) ಬೇಟೆಗೆ ಹೋಗುತ್ತಾರೆ. ವಿಜಯನಗರ ಸಾಮ್ರಾಜ್ಯದಲ್ಲಿದ್ದ ಈ ಬೇಟೆ ಹಬ್ಬ ಇಂದು ಯುಗಾದಿ ಹಬ್ಬದೊಂದಿಗೆ ಸೇರಿಕೊಂಡು ಕ್ಷತ್ರಿಯ ಧರ್ಮದ ಜೀವ ಕಳೆ ತರುವುದಾಗಿದೆ ಎಂಬ ಪ್ರಾಶಸ್ತ್ಯವಿದೆ. ಇಂದಿಗೂ ಈ ಪರಿಸರದಲ್ಲಿ ಬ್ಯಾಟಿಮರದ ಆಚರಣೆಯನ್ನು ಮಾಡುತ್ತಾರೆ. ಬೇಟೆಗಾರರ ಉಡುಗೆ ತೊಡುಗೆ ಬದಲಾಗಿವೆ.

ಒಟ್ಟಾರೆ ಹೇಳುವುದಾದರೆ, ವಿಜಯನಗರ ಸಾಮ್ರಾಜ್ಯದಲ್ಲಿ ಬೇಟೆ ಕಾರ್ಯಕ್ರಮವಿತ್ತು ಎಂಬುದು ಪ್ರಮುಖ ಸಂಗತಿ. ಬೇಟೆಯಿಂದ ರಾಜಪ್ರಭುತ್ವಗಳ ಸಮೃದ್ಧತೆ ಆದದ್ದು ಆಕಸ್ಮಿಕ ೩ ರೀತಿಯಲ್ಲಿ ಇದನ್ನು ಗುರುತಿಸಬಹುದು. ಸಾಮ್ರಾಜ್ಯ ಸ್ಥಾಪನೆ, ರಾಜ್ಯಾಳ್ವಿಕೆಯಲ್ಲಿ ಬೇಟೆಗಾರರು ಮತ್ತು ಅರಸರು ನಡೆಸಿದ ಬೇಟೆ ಜೀವನ ಮತ್ತು ಸ್ವಾಭಾವಿಕವಾಗಿ

ಬೇಟೆಗಾರರು ಆಹಾರಕ್ಕಾಗಿ ನಡೆಸಿದ ಬೇಟೆ ಜೀವನ. ವಿಜಯನಗರ ಪೂರ್ವದಲ್ಲಿ ಶಬರಿ, ಕಿರಾತರ, ನೆಲೆಯಾದ ಹಂಪೆಯಲ್ಲಿ ಬೇಟೆ ಇದ್ದಿತು. ಬೇಟೆ ಹಬ್ಬ ಆದ ಬಗ್ಗೆ ವರದಿಗಳಿಲ್ಲ. ಈ ಕಾಲಘಟ್ಟದಲ್ಲಿ ಬಹುಭಾಗದ ಜನರು ಬೇಟೆಯನ್ನು ವಿವಿಧ ಬಗೆಯಲ್ಲಿ ಅವಲಂಬಿಸಿದ್ದರು. ರಾಜಪ್ರಭುತ್ವದಲ್ಲಿ ಕಾರ್ತಿಕ ಹಬ್ಬದ ನಂತರ ಬೇಟೆ ಹಬ್ಬವಾದರೆ, ವಿಜಯನಗರ ಅವನತಿ ನಂತರ ಯುಗಾದಿ ಅಮವಾಸ್ಯೆಯಂದು ಆಗುತ್ತದೆ. ಅನೇಕ ನಾಯಕ -ಪಾಳೆಯಪಟ್ಟುಗಳು, ಬೇಡರು ಇಂದು ಯುಗಾದಿಯಲ್ಲಿಯೇ ಹಂದಿ ಬೇಟೆಗೆ ಹೋಗುವುದು ಗಮನಾರ್ಹ. ಹಂದಿ ಹುಲುಸು, ಇದರಿಂದ ಅಭಿವೃದ್ಧಿ ಸಂಪತ್ತು ಲಭಿಸುತ್ತದೆಂಬ ಪಾರಂಪರಿಕ ನಂಬಿಕೆಯಿದೆ.

ಆಕರ

೧. ವಿಜಯನಗರ ಕಾಲದ ವಾಸ್ತುಶಿಲ್ಪದಲ್ಲಿ ಬೇಟೆ ಚಿತ್ರಣ, ಇತಿಹಾಸ ದರ್ಶನ, ಸಂ.೧೪, ೧೯೯೯, ಪು. ೧೬೬-೧೭೩

ಅಭ್ಯಸಿಸಿದ ಗ್ರಂಥಗಳು

೧. ಕೊಟ್ರಯ್ಯ ಸಿ.ಟಿ.ಯಂ, ೧೯೯೭, ಹಂಪೆ, ಶ್ರೀ ಶರಣರ ಸುವಾಸಿನಿ ಬಳಗ, ಹೊಸಪೇಟೆ

೨. ಚನ್ನಬಸಪ್ಪ ಎಸ್ ಪಾಟೀಲ್, ವಿನೋದಾ ಪಾಟೀಲ್ (ಸಂ), ೧೯೯೮, ವಿಜಯನಗರ ಹಂಪೆ ಶಾಸನಗಳು

೩. ಚೆಲುವರಾಜು, ೨೦೦೦, ಹಂಪಿಯ ಸ್ಮಾರಕಗಳಲ್ಲಿ ಜಾನಪದೀಯ ಅಂಶಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೪. ನರಸಿಂಹಮೂರ್ತಿ ಎ.ವಿ, ೧೯೯೬, ವಿಜಯನಗರ ನಾಣ್ಯ ಸಂಪತ್ತು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

೫. ಪರಮೇಶ್ವರಪ್ಪ ಟಿ (ಸಂ), ೧೯೯೭, ಹಂಪಿ ಪರಿಸರ, ಶ್ರೀ ವಿ.ವಿ.ಹಂ.ಹೆ.ಟ್ರಸ್ಟ್, ಆನೆಗೊಂದಿ

೬. ಪುರುಷೋತ್ತಮ ಬಿಳಿಮಲೆ ಮತ್ತು ಚೆಲುವರಾಜು, ೧೯೯೬, ಹಂಪಿ ಜಾನಪದ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೭. ರಾಬರ್ಟ್ ಸಿವೆಲ್ (ಅನು) ಸದಾನಂದ ಕನವಳ್ಳಿ, ೧೯೯೨, ಮರೆತು ಹೋದ ಸಾಮ್ರಾಜ್ಯ ವಿಜಯನಗರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೮. ವಸುಂಧರಾ ಫಿಲಿಯೋಜಾ, ೧೯೯೨, ಅಳಿದುಳಿದ ಹಂಪೆ, ಪ್ರೇಮಸಾಯಿ ಪ್ರಕಾಶನ, ಬೆಂಗಳೂರು

❖ ❖

೧೧

ವಿಜಯನಗರ ಸಂಬಂಧದ ಎರಡು ವಿಷಯಗಳು

(ತಮ್ಮಡಿಗಳು, ರಾಮನಗರ ಪರಿಸರದಲ್ಲಿ ಸಂಗಮರು)

ಎಂ.ಜಿ.ನಾಗರಾಜ್

ಅ. ವಿಜಯನಗರ ಕಾಲದ ತಮ್ಮಡಿಗಳು ಹಿನ್ನೆಲೆ ಮುನ್ನೆಲೆ

ಹಿನ್ನೆಲೆ ಹಾಗೂ ಶಬ್ದ ನಿಷ್ಪತ್ತಿ : ತಮ್ಮಡಿ ಶಬ್ದವು ದ್ರಾವಿಡ ಭಾಷಾ ವರ್ಗದಲ್ಲಿ ಕಂಡುಬರುತ್ತದೆ. ಕನ್ನಡ, ತೆಲುಗು ತಮಿಳಿನಲ್ಲಿಯೂ ಕಂಡುಬರುವಲ್ಲಿ ಆ ಶಬ್ದ ಶಾಸನಗಳಲ್ಲಿ ೭ನೇ ಶತಮಾನದಿಂದಲೇ ಲಭ್ಯ. 'ಗುರುವಡಿಗಳ್'[೧] ಎಂಬ ಪ್ರಯೋಗವಿರುವಂತೆ 'ತಮ್ಮಡಿಗಳ್' ಎಂಬ ಪ್ರಯೋಗವನ್ನು ಗಮನಿಸಬಹುದು. 'ಗುರುವಡಿಗಳ್' ಎಂದಾಗ ಗುರುವಿನ ಶಿಷ್ಯ, ಗುರುಪಾದ (ಸೇವಕ) ಎಂದು ಅರ್ಥೈಸುವಂತೆ, ತಮ್ಮ ಶಿಷ್ಯ, ತಮ್ಮ ಪಾದ ಎಂದು ದೈವ ಸಂಬಂಧದ ರೂಢಿಯಾಗಿ ಅರ್ಥವಿರುವಂತಿದೆ. ಅಂದರೆ ದೇವರ ಸೇವಕ, ಅರ್ಚಕ ಎಂಬ ಅರ್ಥ ಆ ಶಬ್ದದ ಹುಟ್ಟಿನಲ್ಲಿಯೆ ಕಾಣಬರುವಂತಿದೆ. ಜೈನ, ಶೈವ, ವೀರಶೈವ ಧರ್ಮಗಳಲ್ಲಿ ಈ ಶಬ್ದ ಕಂಡುಬರುವಲ್ಲಿ ಅದರ ಅರ್ಥವೂ ಕಾಲ ಹಾಗೂ ಧಾರ್ಮಿಕ ಹಿನ್ನೆಲೆಯಲ್ಲಿ ಬದಲಾವಣೆಗೊಂಡಿದೆ ಎನ್ನಿಸುತ್ತದೆ.

'ಅಡಿಗಳ್' ಎಂಬ ದ್ರಾವಿಡ ಶಬ್ದವು 'ಶಿಷ್ಯ', ಸೇವಕ ಎಂಬ ಅರ್ಥದಲ್ಲಿಯೆ ಬಳಕೆಯಾಗಿದೆ. ತಮಿಳಿನಲ್ಲಿ ಅಡಿಯವನ್, ಅಡಿಯನ್, ಅಡಿಯೋನ್, ಅಡಿಚ್ಚಿ (ಸ್ತ್ರೀ)-ಅಡಿತ್ತಿ; ಮಲೆಯಾಳದಲ್ಲಿ ಅಡಿಯಾನ್ ಅಡಿಯಾತ್ತಿ (ಸ್ತ್ರೀ); ತೆಲುಗಿನಲ್ಲಿ

ಅಡಿಯ ಅಡಿಯಡು; ಕನ್ನಡದಲ್ಲಿ ಅಡಿಯ ಎಂಬ ಶಬ್ದ ಪ್ರಯೋಗವಿದ್ದು, ದಾಸ, ಸೇವಕ, ಶರಣ್ಯ ಎಂಬ ಅರ್ಥವನ್ನು ಕನ್ನಡ ನಿಘಂಟುಗಳು[3] ನೀಡಿವೆ. ಅಡಿಯೇನ್ ದಾಸನ್-ಎಂಬ ಬಳಕೆಯ ಮಾತೇ ಇದೆ. ಆದರೆ ಇಲ್ಲೆಲ್ಲ ದೇವರ ಸೇವಕ, ದೇವಸಮಾನರಾದ ಗುರುಗಳ ಸೇವಕ ಎಂಬ ಅರ್ಥದಲ್ಲಿಯೆ ತೆಗೆದುಕೊಳ್ಳಬೇಕಾಗುತ್ತದೆ. ಗ್ಯಾರೆಟ್ ನರೀತ್ಯಾ 'ಅಡಿಯ' ಎಂದರೆ ನೆಲಕೃಷಿ ಮಾಡುವ ಕೂಲಿ ಮಾಡುವ ಕನ್ನಡ ಜಿಲ್ಲೆಯ ಒಂದು ಜಾತಿಯ ಜನವಾಗಿದ್ದಾರೆ. ಅದೆ ಕೊಡಗಿನ ವೀರರಾಜೇಂದ್ರಪೇಟೆ ತಾ. ಕುಂದ ಕುಕ್ಲೂರು ಗ್ರಾಮ, ಐಮಂಗಲ, ಶ್ರೀಮಂಗಲ ಇತ್ಯಾದಿ ಕಡೆ 'ಅಡಿಯರು' ಭದ್ರಕಾಳಿಯ ಹಕ್ಕಿನ ಪೂಜಾರಿಗಳಾಗಿ ಕೇರಳ ಮೂಲದಿಂದ ಬಂದವರು. ಭದ್ರಕಾಳಿ ಇವರ ಕುಲದೇವತೆ. ಇವರನ್ನು ದಲಿತವರ್ಗದವರೆನ್ನಲಾಗಿದೆ. ಭದ್ರಕಾಳಿ ಇವರನ್ನು 'ಅಡಿಯ' ಎಂದು ಕರೆದರೆ, ಅಯ್ಯಪ್ಪನನ್ನು 'ತಂಬಿರ' (ಹಿರಿಯ ಸೋದರ, ತಮ್ಮ, ದೈವ ಎಂಬರ್ಥಗಳಿವೆ) ಎಂದು ಕರೆಯುತ್ತದೆ.[4] ಅಂದರೆ ಒಂದು ಕಾಲದ ಪ್ರತಿಷ್ಠಿತ ಪೂಜಾರಿಗಳಾಗಿದ್ದವರು ಈಗ 'ಅಡಿ' ಯಲ್ಲಿರುವಂಥವರಾಗಿದ್ದಾರೆ. ಅಂತಾಗಿ ಕುಕ್ಲೂರು ಕುಂದ ಗ್ರಾಮದ ಭದ್ರಕಾಳಿ ದೇಗುಲದಲ್ಲಿ ಶಾಂತಿಕಾರರಿಂದ (ಬ್ರಾಹ್ಮಣ) ಪೂಜೆಯು ಈಗ ನಡೆಯುತ್ತದೆ. ಆದರೆ ಅಯ್ಯಪ್ಪ-ಭದ್ರಕಾಳಿಯ ಕಿರುಗತ್ತಿಯಂಥ ಆಯುಧ 'ಕಡತಲೆ' (ಕಡಿತಲೆಯ ಅಪಭ್ರಂಶ ಕಿರುಗತ್ತಿ ಪ್ರತೀಕ)ಯನ್ನು ಮೊದಲು ಅಡಿಯರು ಪೂಜಿಸಿದ ಮೇಲೆ ಮುಂದೆ ಸಾಗಬೇಕು ಎಂದಿರುವಲ್ಲಿ ಮೊದಲಿನ ಆಕೆಯ ಅರ್ಚಕರು ಅವರಾಗಿದ್ದರು ಎಂಬ ಸೂಚನೆ ಒದಗುತ್ತದೆ. ಕಾಲದೇಶಾನು ಸಂದರ್ಭದಲ್ಲಿ ಅವರ ಸ್ಥಾನ ಸಾಮಾಜಿಕವಾಗಿ ಪರಿಶಿಷ್ಟವಾಗಿ ಬಿಟ್ಟಿದೆಯಷ್ಟೆ. 'ತಂಬಿರ' ಹಿರಿಯ ಸೋದರನೆನಿಸಿದರೆ, ತಂಬಡಿ ಕಿರಿಯ ಸೋದರನಾಗಿರಬಹುದಲ್ಲವೆ? ಎಂಬ ಅನುಮಾನ ಒದಗುತ್ತದೆ. ಅಂದರೆ ದೇವಿ (ದೇವ)ಯ ಸಂಬಂಧದವನೇ ಆಗುತ್ತಾನೆ. ತಂಬಡಿ vತಂಮಡಿ ಆಗುವುದು ಅಸಂಭಾವ್ಯವಲ್ಲ. ಹೀಗಾಗಿ ತಂಮಡಿ (ತಮ್ಮಡಿ) = ತಂಮ + ಅಡಿ = ತಮ(ಗ) + ಅಡಿ (ತಮ್ಮ ಪಾದ ಎಂಬ ಸಂಬೋಧನೆ ಗಮನಿಸಿ) ಎಂಬ ರೂಪದಲ್ಲಿ ಗಮನಿಸಿದರೆ (ಗುರು + ಅಡಿ = ಗುರುವಡಿ ಎಂಬಂತೆ) ಭಾಷಿಕವಾಗಿ ತಮ ಎಂದರೆ ಕತ್ತಲೆಯನ್ನು, ಅಡಿ ಎಂದರೆ ಅಧೀನಗೊಳಿಸುವವ ಅರ್ಥಾತ್ ಬೆಳಕು ಆರತಿ ತೋರುವವ ದೇಗುಲದ ಅರ್ಚಕ ಎಂದಾಗಬಹುದಲ್ಲವೆ! (ತಮ + ಅಡಿಗಳ್ = ತಮ + ಅಳಿಗಳ್ = ತಮನಾಶಕರು?) ಕಾಳಾಮುಖರು ಅಸಿತವಕ್ತ್ರರು, ಶಿಲ್ಪಗಳಲ್ಲಿ ಶಿವಲಿಂಗಾರ್ಚಕರಾಗಿ ಅವರು ಕೆತ್ತಲ್ಪಟ್ಟಿದ್ದಾರೆ. ಮಸಿ ಬಳಿದುಕೊಂಡು ಅವರು ಬೆಳಕು ತೋರುವ ದೇವರ ಸೇವಕರು ಅವರು ಎಂದರೆ ತಮ್ಮಡಿಗಳ ಮೂಲವನ್ನು ಕಾಳಾಮುಖರಲ್ಲೂ ಹುಡುಕಬೇಕಾಗುತ್ತದೆ. ತಮ್ಮಡಿ ಎಂದರೆ ಗುರು, ಆಚಾರ್ಯ, ಅರ್ಚಕ ಎಂದೆಲ್ಲ ಸಾಂದರ್ಭಿಕ ಅರ್ಥಗಳೂ ಒಡೆಯ, ಯಜಮಾನ ಎಂಬರ್ಥವೂ ನಿಘಂಟುವಿನಲ್ಲಿವೆ. ಕಿಟ್ಟೆಲ್ ನಿಘಂಟಿನಲ್ಲಿ[5] 'ತಮ್ಮಡಿ' = An Attendant on the Idol, ಎಂಬರ್ಥವನ್ನು ನೀಡಲಾಗಿದೆ. ದೇವಾ ಜೀವ, ದೇವಲ; ತಮ್ಮಳನಾಡು, ತಮ್ಮಳಿ, ತಮ್ಮಡಿ, ತಮ್ಮಲಿ, ತಮ್ಮಳೆವಾಡು ಎಂಬೆಲ್ಲ, ಅರ್ಥ-

ಪ್ರಯೋಗವನ್ನೂ ನೀಡಲಾಗಿದೆ; ತಮ್ಮಡಿ-ತಮ್ಮಡಿವಳ್ಳಿ ಎಂಬ ಸ್ಥಳನಾಮವನ್ನು ನೀಡಲಾಗಿದೆ. ಈ ಅರ್ಥ, ಪ್ರಯೋಗಗಳನ್ನು ಗಮನಿಸಿದರೆ ದೇವಾರ್ಚಕ, ದೇಗುಲ ಸ್ಥಾನಿಕ ಎಂಬ ಸೂಚನೆಯೂ ಒದಗುತ್ತದೆ; ಕಾಳಾಮುಖ-ಶೈವಾರ್ಚಕ ಮೂಲವೋ, ಮಾಹೇಶ್ವರ ಅರ್ಚಕ ಮೂಲವೋ ಅವರಿಗೆ ಕಾಲಾಂತರದಲ್ಲಿ ಅಳವಟ್ಟಿರುವಂತೆ ತೋರುತ್ತದೆ. ಹೀಗಾಗಿ ಬಹುತೇಕ ಕಲ್ಯಾಣಿ ಚಾಲುಕ್ಯರ ಕಾಲದ ಶಾಸನ ಶಿಲ್ಪಗಳಲ್ಲಿ (ಕೈಲಾಸಭಾಗ) ಕಾಣಬರುವ ಕಾಳಾಮುಖ ಶೈವಾರ್ಚಕರೆನ್ನಲಾದವರು ಅಥವಾ ಮಾಹೇಶ್ವರರಾರ್ಚಕರೆನ್ನಲಾದವರು, 'ತಮ್ಮಡಿ' ವರ್ಗದವರಿರಬಹುದೆ? ಎಂಬುದನ್ನು ಪರಿಶೀಲಿಸಬೇಕಿದೆ. ಕಿಟ್ಟೆಲ್ ಕೋಶದಲ್ಲಿ ಬರುವ ಗಾದೆ 'ತನಗೇ ಇಲ್ಲದ ಮಾರಿ ತಮ್ಮಡಿಗೆ ವರಾ ಕೊಟ್ಟೀತೆ?' - ಎಂಬುದು ಅರ್ಚಕ ತಮ್ಮಡಿಯ ಒಂದು ಕಾಲದ ಪರಿಸ್ಥಿತಿಯನ್ನು ಸೂಚಿಸುವಂತಿದೆ. ಅಲ್ಲದೆ ತಮ್ಮಡಿಗಳಲ್ಲೂ ವಿವಿಧ ವರ್ಗಗಳಿರುವಲ್ಲಿ ಈ ಗಾದೆ ಯಾರನ್ನು ನೋಡಿ ರೂಪುಗೊಂಡಿತು ಎಂದು ಹೇಳುವುದು ಕಷ್ಟ. ಪರಿಶಿಷ್ಟ ವರ್ಗದ 'ನಾಯಕರು'/ ಜನಾಂಗದವರಲ್ಲಿಯೂ ಮಾರಿ ಪೂಜೆ ಮಾಡುವ ತಮ್ಮಡಿಗಳಿದ್ದಾರೆ. ಮಲೆಮಹದೇಶ್ವರ ಬೆಟ್ಟದ ಪ್ರದೇಶದಲ್ಲಿ ಸೋಲಿಗರು ಲಿಂಗಧಾರಿಗಳಾಗಿ ತಮ್ಮಡಿಗಳೆನಿಸಿದರು ಎಂಬ ಮಾತೂ ಇದೆ. ಅದೇನೇ ಇರಲಿ ಒಂದು ಕಾಲದ ಸ್ಥಾನ ಗೌರವದ ಹಿರಿಮೆ ಕಾಲಾಂತರದಲ್ಲಿ ಪ್ರಭಾವ ಕಳೆದುಕೊಂಡು ಶಿಥಿಲಗೊಂಡ ರೂಪವೆನ್ನಿಸುತ್ತದೆ ಈ ಗಾದೆ.

ಇನ್ನ ತಮ, ತಮ ಶಬ್ದಗಳನ್ನು ಕೂಡಿಸಿದರೆ 'ತಮ್ತಮ' ಆಗುವಂತೆ, ತಮ ಮತ್ತು ಮಡಿಗಳನ್ನು ಕೂಡಿಸಿದ್ದಾಗ ತಮ + ಮಡಿ = ತಮ್ಮಡಿ ಎಂಬುದು ಸಿದ್ಧಿಸುತ್ತದೆ. ಇಲ್ಲಿ ತಮ ಎಂದರೆ ಕತ್ತಲೆಯನ್ನು, ಮಸಕನ್ನು, ಮಡಿ ಎಂದರೆ ಶುದ್ಧಗೊಳಿಸುವವ, ತೆಗೆಯುವವ ಎಂದರ್ಥವನ್ನು ಪೂರೈಸಬಹುದು. ತಮ್ಮಡಿ ದೇವ ಸಂಬಂಧಿಕಾರಣ, ದೇವಾರ್ಚಕನಾಗಿ ಬೆಳಕು ತರುವವ, ಕತ್ತಲನ್ನು ಅಡಿಗೆ ಹಾಕಿದವ, ಅಧೀನಗೊಳಿಸಿದವ ಎಂಬೆಲ್ಲ ಅರ್ಥಗಳೂ ಸ್ಫುರಿಸುತ್ತವೆ. .

ಸಾಂಪ್ರದಾಯಿಕ ನೆಲೆ

ಕ್ರಿ.ಶ. ೧೯೧೫ರಲ್ಲಿ ಪ್ರಕಟವಾಗಿರುವ 'ತಮ್ಮಡಿಗಳೆಂಬ ಶುದ್ಧ ಶೈವಾರ್ಚಕ ಬ್ರಾಹ್ಮಣ ಮತಾದರ್ಶ' (ಗುತ್ತಲು ಶಿವಾರ್ಚಕ ವೇ|| ಮುದ್ದಪ್ಪ ರಚಿತ) ಎಂಬ ಕೃತಿಯಲ್ಲಿ[೫] ವಾತುಲಾಗಮದಿಂದ ಉದ್ಧೃತ ಮಾಡಿ ತಮ್ಮಡಿಗೆ 'ಈಶಾನದೇವ ಮೀಡ್ಯ ತಂಮೀಡ್ಯ' ಎನ್ನಲಾಗಿದೆ. ಇದು ಶಿಷ್ಟಪರವಾದ ಅರ್ಥಸಂಭೋದನೆಯಾದರೂ, ಮುಖ್ಯವಾಗಿ 'ತಂಮೀಡ್ಯ' ಶಬ್ದವು ಗಮನಸೆಳೆಯುತ್ತದೆ. 'ಮೀಡ' ಎಂದರೆ battle (ಕಾಳಗ) ಎಂದು ಕಿಟೆಲ್ ನಿಘಂಟು ಹೇಳಿದರೆ ಕಸಾಪದ ಕ.ಕ.ನಿಘಂಟು 'ಟಗರು' ಎಂಬ ಅರ್ಥವನ್ನು ನೀಡಿದೆ. ಅದನ್ನನುಸರಿಸಿ ಹೇಳಿದರೆ, 'ಮೀಡ್ಯ' ಎನ್ನುವಲ್ಲಿ ಟಗರಿಗೆ ಸಂಬಂಧಿಸಿದವ, ಟಗರಿನಿಂದ ಸೇವಿಸಲ್ಪಡುವ ಕಾಳಗದ ವೀರ ಎಂಬ ಸೂಚ್ಯಾರ್ಥ ಒದಗುವಂತಿದೆ. ಶಿಷ್ಟ ಸಂದರ್ಭವನ್ನು

ಸ್ಮರಿಸುವುದಾದರೆ, ಟಗರು ಅಥವಾ ಟಗರುದಲೆಯ ದಕ್ಷ ಗಮನಕ್ಕೆ ಬರುತ್ತಾನೆ. ಆ ದಕ್ಷನಿಂದ ಸೇವಿತನಾದವ ವೀರಭದ್ರನಾಗುತ್ತಾನೆ. 'ತಂಮೀಡ್ಯ' ಎಂದಾಗ ತಮ್ಮುಡಿ ವೀರಭದ್ರ ಸಂಬಂಧಿಯಾದವ ಅರ್ಥಾತ್ ಅವನ ಅರ್ಚಕ, ಆರಾಧಕ ಎಂಬ ಅರ್ಥವೂ ಒದಗುತ್ತದೆ.

ಈ ಕೃತಿಯಲ್ಲಿ 'ತಮ್ಮಡಿ'ಗೆ ತಮ್ಮುಡಿ ಎಂದು ಸಂಬೋಧಿಸಿ ಬೇರೆ ಬೇರೆ ಆಗಮೋಕ್ತ ಆಧಾರಗಳನ್ನು ನೀಡಿ ಹೇಳಲಾಗಿದೆ. ಈ ಕೃತಿಯಲ್ಲಿ ಶೈವ ಮಹಾತ್ಮೆಯನ್ನು ವಾತುಲಾಗಮರೀತ್ಯಾ ಸಂವಾದ ರೂಪದಲ್ಲಿ ಶಿವನಿಂದ ಸ್ಕಂದನಿಗೆ (ಕುಮಾರಸ್ವಾಮಿ) ಅರಿವು ಮೂಡಿಸಿದ ವಿಷಯವಿದೆ. ಶೈವಪ್ರಭೇದಗಳು, ಶೈವಲಕ್ಷಣಗಳು ಕುರಿತು ಹೇಳುತ್ತ ಶುದ್ಧ ಶೈವದ ಲಕ್ಷಣಗಳನ್ನು ವಿವರವಾಗಿ ಮಂಡಿಸಲಾಗಿದೆ. ಶುದ್ಧಶೈವನು ಶಿವನ ಈಶಾನ್ಯ ಮುಖದಿಂದ ಸಂಜನಿಸಿದವ. ಅಗಸ್ತ್ಯನಿಗೆ ಶಿವನ ಈಶಾನ್ಯ ಮುಖದಿಂದ ದೀಕ್ಷೆಯಾಯಿತು. ಶುದ್ಧಶೈವನು ತಂಮೀಡ್ಯ ದೇಶಿಕ, ದೀಕ್ಷಿತ ಇತ್ಯಾದಿ ನಾಮಗಳೊಡನಿದ್ದು ಶೈವದೀಕ್ಷೆಯಲ್ಲದೆ ಮತ್ತಾವ ದೀಕ್ಷೆಯೂ ಇವನಿಗಿಲ್ಲ.ಇವನಿಗೆ ಶಿಖೆಯಲ್ಲಿ ಲಿಂಗಧಾರಣವಿರುತ್ತದೆ. ಯಜ್ಞೋಪವೀತಧಾರಣೆಯೂ ಉಂಟು. ಇವನಿಗೆ ಗುರುವಿನಿಂದ ಕೊಡಲ್ಪಟ್ಟ ಲಿಂಗವನ್ನು ಪೂಜಿಸುವ ಆತ್ಮಾರ್ಥ ಪೂಜೆ, ಸಮಸ್ತ ಪ್ರಾಣಿಗಳಿಗೂ ಹಿತಕರವಾದ, ದೇವ, ಋಷಿ, ಮಾನವ, ದಾನವ ಸ್ಥಾಪಿತ ಕ್ಷೇತ್ರ ಶಿವಲಿಂಗ ಪೂಜೆಯಾದ ಪರಾರ್ಥ ಪೂಜೆಯೂ ಇವನಿಗಿದೆ. ಆದರೆ ಶಿವಲಿಂಗವಲ್ಲದೆ ಮತ್ತಾವ ದೇವ ಪೂಜಾರ್ಚನೆ ಇವನದಲ್ಲ. ಶೈವದೀಕ್ಷೆ ಇಲ್ಲದೆ ಶಿವಲಿಂಗ ಮುಟ್ಟುವಂತಿಲ್ಲ. ಈಶ್ವರನೇ ಇವನಿಗೆ ಜಗದ್ಗುರುವಾಗಿರುತ್ತಾನೆ. ಇವನು ರುದ್ರಪಿಂಡೋದ್ಭವನಾಗಿದ್ದಾನೆ.

ತಮ್ಮುಡಿಗಳೆಂಬ ಹೆಸರು ಜಾತಿಸೂಚಕವಲ್ಲ; ವೃತ್ತಿಸೂಚಕ. ದೇಗುಲದ ಶೈವಾಗಮೋಕ್ತ ಆಚಾರ ವಿಚಾರಗಳಂತೆ, ಪಾಲಿಸುತ್ತ ಶಿವಲಿಂಗದ ಮುಡಿಯನ್ನು ತನುಕರಗಳಿಂದ ನಿರ್ಮಾಲ್ಯವಿಸರ್ಜನಾದಿ ಷೋಡಶೋಪಚಾರಗಳ್ಲಿಯೂ ಸ್ಪರ್ಶಿಸುವುದೇ ವೃತ್ತಿ. ಈ ವೃತ್ತಿಯಿಂದಲೇ ತಮ್ಮುಡಿ ಎಂಬ ನಾಮ ಉಂಟಾಗಿದೆ. ಮಸ್ತಕೇ ಲಿಂಗಧಾರಣೇ ಎಂಬ ಆಗಮ ಪ್ರಮಾಣದಂತೆ ಮುಡಿಯಲ್ಲಿಯೇ ಇಷ್ಟಲಿಂಗ ಧರಿಸಬೇಕು. ಅಂತಾಗಿ ತಮ್ಮುಡಿ ಎಂದು ಹೇಳಲ್ಪಡುತ್ತಾನೆ. ಶಿವನ ಈಶಾನ್ಯಮುಖ ಶಿಖಾಸ್ಥಾನದಲ್ಲಿರುವ ಕಾರಣ ಶುದ್ಧಶೈವನ ಉತ್ಪತ್ತಿ ಅಲ್ಲಿಂದಲೇ ಆಗಿದ್ದು ಆ ಕಾರಣದಿಂದ ಅವನು ತಮ್ಮುಡಿ. ಇವನು ರುದ್ರಾಂಶಜ. ಪ್ರಾಚೀನದಲ್ಲಿ ತಮ್ಮುಡಿಗಳ ವಂಶಸ್ಥರು ಕಾಶೆ ಧರಿಸಿ ಅಗ್ನಿಪ್ರವೇಶ (ಕೊಂಡ) ಮಾಡುತ್ತಿದ್ದವರು. ವೀರಭದ್ರನನ್ನು ಸ್ಕಾಂದಪುರಾಣದ ದಕ್ಷಕಾಂಡದಲ್ಲಿ 'ಲಿಂಗಾಂಕಿತ ಜಟಾಧರಃ' ಎಂದಿದೆ. ಹೀಗಾಗಿ ವೀರಭದ್ರ ಹಾಗೂ ತಮ್ಮುಡಿ ಎಂಬ ಆಚಾರ್ಯನಿಗೆ ಲಿಂಗಧಾರಣಸ್ಥಾನವು ಏಕಸ್ಥಾನವಾಗಿರುವುದರಿಂದ ರುದ್ರಾಂಶಜ ಎಂಬುದಕ್ಕೆ ಮುಖ್ಯ ಪ್ರಮಾಣ. ವೀರಭದ್ರನ ವಿಗ್ರಹಗಳಲ್ಲೂ ಲಿಂಗವು ಮುಡಿಯಲ್ಲಿಯೇ ಇರುವುದು ಸಾಮಾನ್ಯ. ವಾತುಲಾಗಮದಲ್ಲಿ ತಮ್ಮುಡಿಗೆ ಈಶಾನ್ ದೇವಮೀಡ್ಯನೆಂದೂ, ತಂಮೀಡ್ಯನೆಂದೂ,

ಶಿವಗೀತೆಯಲ್ಲಿ ತಂದೇವಮೀಡ್ಯ, ಬ್ರಂಹ್ಮಹೇವರ್ತದಲ್ಲಿ ವರದಮೀಡ್ಯ, ಮಹಾಭಾರತದಲ್ಲಿ ತಮ್ಮುಡಿ, ಪೂರ್ವ ಮೀಮಾಂಸೆಯಲ್ಲಿ ದೇವಕಾಮ ಎಂದೆಲ್ಲ ಹೇಳಿದೆ. ಇಂದ್ರಕೀಲದಲ್ಲಿ ಶಿವನಿಂದ ಪಾಶುಪತಾಸ್ತ್ರ ಪಡೆಯಲು ತಪಸ್ಸು ಮಾಡಿದ ಕ್ಷತ್ರಿಯ ಅರ್ಜುನನೂ ತಮ್ಮುಡಿ ಎಂದು ಮಹಾಭಾರತದ ಅರಣ್ಯಪರ್ವದಲ್ಲಿ ಹೇಳಿದೆ. ಅಂತೇ ವೃತ್ತಿಸೂಚಕ ಪದ ತಮ್ಮುಡಿ ಆಗಿದೆ.

ತಾಂ॥ ಮಡಿ॥ ತಮ್ಮಡಿ; ತಮ್ಮ॥ ಅಡಿ॥ ತಮ್ಮಡಿ ಎಂಬುದೂ ಅನ್ವಯವೆ. ತಾ ತಾನು, ಮಡಿ-ನಿರ್ಮಲದೇಹಿ. ತಮ್ಮ ಎಂಬುದಕ್ಕೆ ಮಸ್ತಕಲಿಂಗಧಾರಣೇ ಎಂಬ ಪ್ರಮಾಣದಂತೆ ಇವನು ಮುಡಿಯಲ್ಲಿ ಧರಿಸಿರುವ ಲಿಂಗಕ್ಕೆ ಅಡಿಯಾಗಿರುತ್ತಾನೆ. ಅಂತಾಗಿ ತಮ್ಮಡಿ ಗುರುಭಾವ ಈತನಿಗೆ ವರ್ತಿಸುವಕಾರಣ ನಮಸ್ಕಾರಾರ್ಹ. ಹಾಗಾಗಿ ತಮ್ಮಡಿ. ಈ ಶಬ್ದದ ತಕಾರ, ಮಕಾರ, ಡಕಾರಾಕ್ಷರಗಳಿಗೆ ಸಪ್ರಮಾಣ ಗ್ರಂಥ ಹಾಗೂ ಅಕ್ಷರಗ್ರಂಥಗಳಿಗೆ ವ್ಯಾಖ್ಯಾನವೂ ಇದೆ. ವಾತುಲಾಗಮದ ಶುದ್ಧಾಖ್ಯತಂತ್ರದಲ್ಲಿ

'ತಂಮೀಡ್ಯದೇಶಿಕಂತ್ಯುಕ್ರಾ ವಿಪ್ರಾದ್ಯಾ ಶಿವದೀಕ್ಷಿತಾಃ।
ಶಿವದೀಕ್ಷಾ ಪ್ರಯುಕ್ತೋಯ ಅನ್ಯದೀಕ್ಷಾ ನವಿದ್ಯತೇ॥

- ತಂಮೀಡ್ಯ, ದೇಶಿಕ, ಶಿವದೀಕ್ಷಿತ ಬ್ರಾಹ್ಮಣ್ಯದಲ್ಲಿ (ಬ್ರಾಹ್ಮಣದಲ್ಲಿ) ಮೊದಲಿನ, ಅನ್ಯದೀಕ್ಷಾವಿರಹಿತನಾದವನೇ ತಮ್ಮಡಿಯು -ಹೀಗೆ ಸಾಂಪ್ರದಾಯಿಕ ನೆಲೆಯಲ್ಲಿಯೂ ಆಕರಗಳನ್ನಿಟ್ಟು 'ತಮ್ಮುಡಿ' ಶಬ್ದಕ್ಕೆ ನಿಷ್ಪತ್ತಿ ನೀಡಲಾಗಿದೆ, ವಿವರಣೆ ನೀಡಲಾಗಿದೆ. ಇದೊಂದು ಶಿಷ್ಟಪದ ಚಿಂತನ. ಇದಕ್ಕೆ ಜನಪದ ಚಿಂತನ, ಶಿವಾಭಿಕ್ಯವಲ್ಲದ ಚಿಂತನವೂ ಇದೆ. ಶುದ್ಧ ಶೈವರಲ್ಲಿ ಶಿವಾಧಿಕ್ಯದಲ್ಲಿಯೇ ವಿಶ್ವಾಸವಿದ್ದು ಪೌರಾಣಿಕ ಶಿವದೀಕ್ಷೆ ಪಡೆದ ಲಿಂಗೈಕ್ಯ ಪೂಜಾಪರರು ಎನ್ನುವುದಿದೆ.[೬]

ಇದೆಲ್ಲ ಪೌರಾಣಿಕ ನೆಲೆಯಲ್ಲಿ ಪ್ರಸ್ತುತಗೊಂಡಿದ್ದರೂ ಇತಿಹಾಸದ ಎಳೆಗಳೂ ಕೆಲಮಟ್ಟಿಗೆ ಅಲ್ಲಿ ಬೆಸೆದುಕೊಂಡಿವೆ ಎನಿಸುತ್ತದೆ. ಶೈವಾರಾಧಕ ವಾಕಾಟಕದ ಪೂರ್ವಜರಾದ ಶೈವಾರಾಧಕ ಭಾರಶಿವರು ಕ್ರಿ.ಶ. ೨ನೇ ಶತಮಾನದವರು; ತಲೆಯ ಮೇಲೆ ಲಿಂಗವನ್ನು (ಬಾಣಭಾಗ - ಜಲಹರಿ ರಹಿತವಾದದ್ದು) ಹೊತ್ತು ತಿರುಗುತ್ತಿದ್ದರು (ಅಂಶಭಾರ ಸನ್ನಿವೇಶಿತ ಶಿವಲಿಂಗೋದ್ವಹನ ಎಂಬುದು ಶಾಸನೋಕ್ತ). ಭಾರಶಿವರಾಜನೊಬ್ಬನ ಮೂರ್ತಿ ಶಿಲ್ಪದಲ್ಲಿ ಮಥುರಾ ವಸ್ತುಸಂಗ್ರಹಾಲಯದ ಕ್ರಿ.ಶ.೨ನೇ ಶ.ದ ಭಾರಲಿಂಗ ಶಿವ ಇದಕ್ಕೆ ಶಿಲ್ಪಸಾದೃಶ್ಯ ಸಾಕ್ಷಿಗಳಾಗಿವೆ. ಭುಜದಲ್ಲಿ, ಬಟ್ಟೆಯಲ್ಲಿ ಸುತ್ತಿ, ಸಂಪುಟ (ಸಜ್ಜಿಕೆ-ಕರಡಿಗೆ)ಗಳಲ್ಲಿಟ್ಟು ಮೈಮೇಲೆ ಧರಿಸಿಕೊಳ್ಳುವುದು ಶೈವ ಸಂಪ್ರದಾಯದಲ್ಲಿದ್ದು, ಶಿವನೇ ಲಿಂಗವನ್ನು ಸದಾ ತನ್ನ ಕೊರಳಲ್ಲಿ ಆತ್ಮಲಿಂಗವಾಗಿ ಧರಿಸಿರುತ್ತಾನೆ ಎಂಬುದೂ ಇದೆ.[೭] ಇದಲ್ಲದೆ ಕಾಶಿ ಜಂಗಮವಾಡಿ ಮಠದ ಆಧಿಪತ್ಯಕ್ಕಿರುವ ಸೂರ್ಯದೇವಾಲಯದಲ್ಲಿ ಪ್ರಾಚೀನ ಭಾರಲಿಂಗ ಶಿವಶಿಲ್ಪ ಇಂದಿಗೂ ಇದೆ. ಶಿವನ ಪಂಚಮುಖ ಸಂಕೇತವಾಗಿ ಒಮ್ಮೊಗವನ್ನೂ ಹೊಂದಿರುವ ಶಿವಲಿಂಗವಿದೆ. ಈ ಹಿನ್ನೆಲೆಗಳನ್ನು 'ತಮ್ಮುಡಿ-ತಮ್ಮಡಿ'ಗಳ ಸಂದರ್ಭಕ್ಕೆ ತಾಳೆ ಹಾಕಿದರೆ

‘ಮಸ್ತಕೇ ಲಿಂಗಧಾರಣೇ’ ; ‘ಲಿಂಗಾಂಕಿತ ಜಟಾಧರಃ’ ಎಂಬ ಅಂಶವನ್ನು ಗಮನಿಸಿ ಹೇಳಿದರೆ, ಅವರು ಭಾರಶಿವರ ಸಂಪ್ರದಾಯದ ಸೂಕ್ಷ್ಮ ರೂಪವನ್ನು ಅನುಸರಿಸಿಕೊಂಡು ಬಂದಿರಬಹುದೇ ಎನಿಸುತ್ತದೆ. ಹಾಗಿದ್ದರೆ ಅವರ ಮೂಲವನ್ನು ಭಾರ ಶಿವರಲ್ಲಿಯೂ ಹುಡುಕಬೇಕಾಗುತ್ತದೆ. ಆದರೆ ಇದು ಶಿವಾಧಿಕ್ಯ ಸಂಪ್ರದಾಯದಲ್ಲಿ ಬರುವ ತಮ್ಮಡಿ ವರ್ಗಕ್ಕೆ ಅನ್ವಯವಾಗುತ್ತದೆ.

ಶಾಸನಗಳ ದೃಷ್ಟಿಯಿಂದ ಜೈನದಲ್ಲಿ ಮೊದಲಿಗೆ, ಶೈವ ಮತ್ತು ವೀರಶೈವರಲ್ಲಿ ನಂತರ ತಮ್ಮಡಿಗಳು ಕಂಡುಬರುತ್ತಾರೆ. ಪ್ರಾದೇಶಿಕವಾಗಿ ಚಿಕ್ಕಮಗಳೂರು, ಮಂಡ್ಯ, ಹಾಸನ, ಬೆಂಗಳೂರು, ಶ್ರವಣಬೆಳಗೊಳ, ಗುಂಡ್ಲುಪೇಟೆ, ಕೆಳದಿ ಇತ್ಯಾದಿ ಕಡೆ ಕಂಡುಬಂದರೆ, ವಿಶೇಷವಾಗಿ ಮೈಸೂರು ಪ್ರದೇಶದ ಚಾಮರಾಜನಗರ, ತಗಡೂರು, ಸಂಕಲಗೆರೆ, ಟಿ.ನರಸೀಪುರ, ಕೊತ್ತಲವಾಡಿ, ಮಲೆಮಹದೇಶ್ವರ, ಮುಡುಕುತೊರೆ, ಯಳಂದೂರು, ತೆರಕಣಾಂಬಿ, ಗುತ್ತಲು ನಂಜನಗೂಡು ಕಡೆಯಲ್ಲಿ ಇವರ ವಾಸ್ತವ್ಯ ಹೆಚ್ಚಿಗಿತ್ತು; ಈಗಲೂ ಇದೆ. ಕೆಳದಿ ಸಂಸ್ಥಾನದಲ್ಲಿ ‘ತಂಮ್ಮಡಿ ವೀರಪ್ಪ’ ಎಂಬ (ದಳವಾಯಿ) ಅಧಿಕಾರಿಯೇ ಇದ್ದ. ಆಂಧ್ರಪ್ರದೇಶದಲ್ಲಿ ತಮ್ಮಡಿಗಳು (ತಮ್ಮಡಿವಾಡು) ಗುಂಟೂರು ಪ್ರದೇಶದಲ್ಲಿ ಇದ್ದಾರೆ. ತಮ್ಮಡಿ ಬಸವಯ್ಯ ಎಂಬ ಹೆಸರಿನವರೂ ಅಲ್ಲಿದ್ದ ಬಗ್ಗೆ ಶ್ರೀ ಸಿ.ಟಿ.ಎಂ ಕೊಟ್ರಯ್ಯ ಅವರು ನನಗೆ ತಿಳಿಸಿದರು.

ಶಾಸನಗಳನ್ನು ಅನುಸರಿಸಿ ಹೇಳಿದರೆ ೭ನೇ ಶತಮಾನದಲ್ಲಿಯೆ ಜೈನಪರಂಪರೆಯಲ್ಲಿ ಗುರು, ಆಚಾರ್ಯ ಸ್ಥಾನದಲ್ಲಿದ್ದು ೧೨ನೆಯ ಶತಮಾನದ ವೇಳೆಗೆ ವೀರಶೈವದ ಪ್ರಭಾವಕ್ಕೆ ಒಳಗಾದರು. ದೇಗುಲದ ಮುಖ್ಯಸ್ಥರಾಗಿ (ಸ್ಥಾನಿಕ) ಸಾಕಷ್ಟು ಸ್ಥಿತಿವಂತರಾಗಿ, ಸೈನ್ಯದ ಸೇವೆ, ದಳವಾಯಿಗಳಾಗಿ ಸೇವೆ ಸಲ್ಲಿಸಿ ಕಾಲಾಂತರದಲ್ಲಿ ಸಾಮಾನ್ಯ ಅರ್ಚಕರಾಗಿ ಜೀವನ ನಿರ್ವಹಣೆ ಮಾಡತೊಡಗಿದರು. ಮಲೆಮಹದೇಶ್ವರ, ನಂಜನಗೂಡು, ಬೆಟ್ಟದ ಚಾಮುಂಡೇಶ್ವರಿ ದೇಗುಲಗಳಲ್ಲಿ ಮೊದಲಿಗೆ ಪ್ರಭಾವಿ ಅರ್ಚಕ ವೃಂದದಲ್ಲಿದ್ದರು. ಮಲೆಮಹದೇಶ್ವರ ಬಿಟ್ಟರೆ ಬೇರೆಡೆ ಮೊದಲಿಗಿದ್ದ ಇವರ ಸ್ಥಾನ-ಪ್ರಭಾವ ಈಗಿಲ್ಲ. ಒಂದು ರೀತಿ ವಂಚಿತರಾಗಿದ್ದಾರೆ. ತಂಬಿ ಎಂದರೆ ತಮ್ಮ; ದಂಡನೆ, ಶಿಕ್ಷೆ ಎಂಬ ಅರ್ಥವೂ ಕನ್ನಡ ನಿಘಂಟುವಿನಲ್ಲಿರುವ ಕಾರಣ ತಮ್ಮ ಅಡಿ (ತಮ್ಮಡಿ) ಎನ್ನುವಾಗ ದಂಡನೆ ವಿಧಿಸುವ ನ್ಯಾಯಾಧಿಕಾರಿಗಳಾಗಿದ್ದರೆ? ತಮ್ಮಡಿಗಳು ಎಂಬ ವಿಚಾರವೂ ಬರುತ್ತದೆ. ಇವರು ಇಷ್ಟಲಿಂಗಧಾರಿಗಳಾಗಿ ಪ್ರಾಚೀನದಲ್ಲಿದ್ದರೂ ೧೨ನೆಯ ಶತಮಾನದಲ್ಲಿ ವೀರಶೈವ ಪರಂಪರೆಯನ್ನೆ ಅನುಸರಿಸಿ ಪ್ರಭಾವಶಾಲಿಗಳಾದರೆನಿಸುತ್ತದೆ. ಆದರೆ ಶುದ್ಧಶೈವ ಶಿವಾರ್ಚಕರೆಂದು ಹೇಳಿಕೊಳ್ಳುವ ಇವರಲ್ಲಿ ಜನಿವಾರ-ಶಿವದಾರ ಧಾರಣೆಯವರೂ ಇದ್ದಾರೆ.

ಶಾಸನಾಕರಗಳು

ಪೂರ್ವೇತಿಹಾಸ : ಗಂಗಶ್ರೀ ಪುರುಷನ ಕಾಲದ ೮ನೇ ಶತಮಾನದ ಕಮರವಳ್ಳಿ ಶಾಸನಗಳಲ್ಲಿ ‘ಗುಣಸಾಗರ ಅಜಿಲೂರ ಗನಾವಟಿ ತಮ್ಮಡಿಗಳ್ಗೆ’ ಅರಿಲುಪರದ (ಅರಿಪಡಾರ

-ಚಾಮರಾಜನಗರ) ಪನ್ನಿರ್ವ್ವರು, ಪೆರ್ಗ್ಗಡೆ ಹಾಗೂ ಮಾದಪ್ಪಣ್ಣನು ಭೂದಾನ ಕೊಟ್ಟ ಸಂಗತಿ; ಮೈಳಿಮುನಿಜುಸಿ ಹೆಕಾರೆಯರು ಪೊರಳನ್ನಯರು ದಾನಕೊಟ್ಟ ಸಂಗತಿ ಇದೆ.[೮] ಆದರೆ ಈ ಗುಣಸಾಗರ ತಮ್ಮಡಿ ಶೈವ ಸಂಪ್ರದಾಯದವನೆ, ಜೈನಸಂಪ್ರದಾಯದವನೆ ಎಂಬುದು ಸ್ಪಷ್ಟವಾಗದಿದ್ದರೂ, ಹೆಸರು ಜೈನಪರವಾದದ್ದು ಎನ್ನಬಹುದು. ದಾನಕೊಟ್ಟವರ ಪೈಕಿ 'ಮಾದಪ್ಪಣ್ಣ' ಎಂದು ಬಂದಿರುವಲ್ಲಿ ಶೈವನಿರಬಹುದು ಎಂಬ ಅನುಮಾನವೂ ಬರುತ್ತದೆ. ಕ್ರಿ.ಶ. ೭೦೦ರ ಶ್ರವಣಬೆಳುಗೊಳ ಶಾಸನಗಳಲ್ಲಿ[೯] 'ಸ್ವಸ್ತಿಶ್ರೀ ಭಣ್ಟಾರಕ ಥಿಟ್ಟಗ ಪಾನದಾ ತಮ್ಮಡಿಗಳ ಶಿಷ್ಯರ್' ; 'ಆಮ್ಬಿಜಿ ತಮ್ಮಡಿಗಳ ನಿಸದಿಗೆ (ಕ್ರಿ.ಶ. ೮೦೦) ; ಕ್ರಿ.ಶ. ೧೧೧೦ರ ಕೊಪ್ಪ ಶಾಸನದಲ್ಲಿ 'ಶ್ರೀ ಸಿಂಹನನ್ದಿ ತಮ್ಮಡಿಗಳ್' ಎಂದಿರುವಲ್ಲಿ ಇವರೆಲ್ಲ ಜಿನಪಾದ ಸೇವಕರಾದ ಜೈನ ತಮ್ಮಡಿಗಳಾಗಿ 'ಗುರು, ಆಚಾರ್ಯ' ಎಂಬ ಅರ್ಥದಲ್ಲಿ ಮಂಡನೆಗೊಂಡಿದ್ದಾರೆ; ಶ್ರವಣಬೆಳಗೊಳದ ೧೦ನೇ ಶಾಸನದ 'ಮೋನಿ ಗುರುವರ ಶಿಷ್ಯ' ೨೩ನೇ ಶಾಸನದ 'ಮೋನಿ ಗುರುವಡಿಗಳ ಶಿಷಿಯತ್ತಿರ್' ಎನ್ನುವಲ್ಲಿ ಗುರುಗಳ ಪಾದಸೇವಕ, ಪಾದಾರಾಧಕ ಎಂಬ ಅರ್ಥ ಬರುವಂತೆ 'ತಮ್ಮಡಿಗಳ್' ಶಬ್ದವೂ ಗುರುಸ್ಥಾನದವ ಎಂಬ ಅರ್ಥದಲ್ಲಿ ಆ ಕಾಲಕ್ಕೆ ಸಂವಾದಿಯಾಗಿ ಬರುತ್ತದೆನ್ನಬೇಕು; ಪಾರ್ಶ್ವನಾಥ ಬಸದಿಯಲ್ಲಿನ ಶ್ರ.ಬೆ.ಚಿಕ್ಕಬೆಟ್ಟದ ೩೫ನೇ ಶಾನದಲ್ಲಿನ 'ಸಿಙ್ಗಣನ್ದಿ ಗುರುವಡಿಗಳ್' ಎಂಬ ಶಬ್ದವೂ ಮೇಲಿನ ವ್ಯಾಖ್ಯೆಗೆ ಇಂಬುಗೊಡುವಂತೆಯೇ ಇದೆ; ೧೨ನೆಯ ಶತಮಾನದ ಮೂಡಲಹಿಪ್ಪೆ ಶಾಸನದಲ್ಲಿ 'ತಮ್ಮಡಿಯ ಮಕ್ಕಳು' ದೇಗುಲ ಸೇವೆಯ ಬಗ್ಗೆ ಹೇಳಿದರೆ, ಕ್ರಿ.ಶ. ೧೧೩೧ರ ಅಲ್ಲಿಯ ಇನ್ನೊಂದು ಶಾಸನವು[೧೦] ತ್ರಿಭುವನಮಲ್ಲ ವೀರದುದ್ದ ಕೊಂಗಾಳ್ವದೇವನು ಮೊಳತೆಯ ಬೀಡು ರಾಜ್ಯವಾಳುತ್ತಿದ್ದಾಗ, ಹೊಯ್ಸಳ ನರಸಿಂಹ(I) ವಾರಿಬಂದ; ಆಗ ಕೊಂಗಾಳ್ವನ ಬೆಸದಿಂದ ಹರಪದಯುಗ ಭೃಂಗನೆನಿಪ 'ತಮ್ಮಡಿರುದ್ರ' ಹೊಯ್ಸಳರೆದುರು ಹೋರಾಡಿ ವೀರಸ್ವರ್ಗವೇರಿದ; ಅವನಿಗೆ ಕೋಟೆಹಾಳು ಗ್ರಾಮದಾನವಾದ ಸಂಗತಿ -ಇತ್ಯಾದಿ ವಿಷಯವನ್ನು ಹೇಳಿದೆ. ಅಂದರೆ ಕೊಂಗಾಳ್ವರು ಜೈನರಾಗಿ ಮುಂದುವರೆದಿದ್ದರು, 'ತಮ್ಮಡಿಗಳು' ಈ ಹೊತ್ತಿಗೆ ಶೈವ ಧರ್ಮವನ್ನು ಅನುಸರಿಸಿದ್ದ ಸೂಚನೆ ಸ್ಪಷ್ಟವಾಗಿ ಸಿಗುತ್ತದೆ. ಸೇನಾಧಿಪತಿಯಂಥ ಪದವಿಯಲ್ಲಿದ್ದರೆಂದೂ ತಿಳಿಯುತ್ತದೆ. 'ತಮ್ಮಡಿರುದ್ರ', ತಮ್ಮಡಿ ಗ್ರಾಮದವನೇ ಅಥವಾ ತಮ್ಮಡಿ ಜನಾಂಗದವನೇ ಎಂಬ ಅನುಮಾನ ಒದಗುವಂತಿದ್ದರೂ ಹೆಸರಿನ ಸ್ವರೂಪ ಜನಾಂಗೀಯ ನೆಲೆಯಲ್ಲಿಯೇ ಅವನನ್ನು ಪರಿಭಾವಿಸುವಂತೆ ಮಾಡುತ್ತದೆ; ಅಥವಾ ಶೈವ ತಮ್ಮಡಿಗಳ ಅಸ್ತಿತ್ವವನ್ನು ಇದು ಸೂಚಿಸಬಹುದು.

ಕ್ರಿ.ಶ. ೧೧೪೯ರ ಕಣಚೂರು ಶಾಸನದಲ್ಲಿ 'ತಂಮಡಿ ಮಸಕ' ಎಂಬುವನಿಗೆ ಸನ್ಧಿವಿಗ್ರಹಿವಾಚಿಮಯ್ಯ, ಶಾಂತಿಯಬ್ಬೆಯ ಮಗಳು ನಾಗಲತೆ ಭೂದಾನವನ್ನು ಕಲಜಟ್ಟು ಅಗ್ರಹಾರಕ್ಕೆಂದು ಅವನ ಕಾಲು ತೊಳೆದು ಹೊಯ್ಸಳ ಅಧಿಕಾರಿ ಸಮಕ್ಷಮದಲ್ಲಿ ವಿಷಯವಿದೆ.[೧೧] ಇದು ತಮ್ಮಡಿಗಳ ಅಗ್ರಹಾರವಿದ್ದ, ಅರ್ಥಾತ್ ಶಿವಾರ್ಚಕರ ಅಗ್ರಹಾರವಿದ್ದು, ಈ ತಮ್ಮಡಿ ಅದರ ಮುಖ್ಯಸ್ಥನಿದ್ದಿರುವಂತೆ ತೋರುತ್ತದೆ; ಹೊಯ್ಸಳ

ವಿಷ್ಣುವರ್ಧನನ ಕ್ರಿ.ಶ. ೧೧೭೦ರ ಮೂಡಹಳ್ಳಿ ಶಾಸನದಲ್ಲಿ 'ತಂಮಡಿ ಅಯ್ಯನಿಗೆ ಕೇರಿಗವೊಂಕ' ಎಂದಿದೆ.[೧೨] ಇಲ್ಲಿ ಅರ್ಚಕ ಅಥವಾ ಗುರುವೊಬ್ಬನಿಗೆ ತೆರಿಗೆ ವಿನಾಯಿತಿ ನೀಡಿ ಮೈಸುನಾಡ ಬೆಊಕುಂದ ನಾಡಿನ ಚಾಮಗಾಉಂಡನು ಭೂದಾನ ನೀಡಿದಂತಿದೆ. ಇದಕ್ಕೆ ಸಾಕ್ಷಿದಾರರು ಕಮ್ಮಾರ ಬೆಂಗ್ ತೆಲ್ಲಣ್ಣ ಅಗಸರ... ತೊಡಕತಾದ (ತೋಟಗಾರ!) ಸೆಯಣ್ಣ, ಯುನೊಯೂರ ಬ್ರಾಹ್ಮಣರು, ಸಾಕ್ಷಿಗಳಾಗಿದ್ದಾರೆ. ಬಹುಶಃ ಮಹಾದೇವಿ ದೇಗುಲದ ಅರ್ಚಕ ಅಥವಾ ಸ್ಥಾನಿಕ ಗುರುವಾಗಿ ತಂಮಡಿ ಅಯ್ಯನಿದ್ದು ಊರಿನವರೆಲ್ಲ ಗೌರವಿಸುತ್ತಿದ್ದುದರ ಸಂಕೇತವಿದೆನ್ನಿಸುತ್ತದೆ. ಕ್ರಿ.ಶ. ೧೧೭೮ರ ತಮ್ಮಡಿಹಳ್ಳಿ ಶಾಸನದಲ್ಲಿ[೧೩] 'ತಮ್ಮಡಿಪ್ಪಳ್ಳಿಯಲ್ ಸೋಮೇಶ್ವರ ದೇಗುಲ' ಎಂದಿದೆ. ಹೊಯ್ಸಳರ ಕಾಲದಲ್ಲಿ ತಂಮಡಿ, ತಮ್ಮಡಿ ಎಂಬ ಶಬ್ದರೂಪದ ಪ್ರಯೋಗ, 'ತಮ್ಮಡಿಹಳ್ಳಿ'ಯ ಅಸ್ತಿತ್ವ ಅರ್ಥಾತ್ ತಮ್ಮಡಿಗಳಿಗೇ ಮೀಸಲಾದ ಅಥವಾ ಶಿವಾರ್ಚಕರಿಗೇ ಮೀಸಲಾದ ಅಗ್ರಹಾರ ಸ್ವರೂಪದ ಹಳ್ಳಿ ಇತ್ತೆಂದರೆ ಅವರ ಅಂದಿನ ಪ್ರಭಾವದ ಕಲ್ಪನೆ ಒದಗುತ್ತದೆ. ಹೀಗೆಯೇ ಕ್ರಿ.ಶ. ೧೧೯೯ರ ಕೆಂಪನಪುರ ಶಾಸನದಲ್ಲಿ ಹೊಯ್ಸಳ ೧ನೇ ನರಸಿಂಹನ ಕಾಲದ ಚಂದ್ರಶೇಖರ ಮಾರಾಯನು ಭೂಮಿಯನ್ನು ಕೊಂಡು ಗಾವುಂಡರಿಗೆ ನೀಡುವ ಸಮಯದಲ್ಲಿ ಗೌರವಾನ್ವಿತ ಸಾಕ್ಷಿಗಳ ಪೈಕಿ 'ತಮ್ಮಡಿ ಮಾದೇವಂ' ಎಂಬವನಿದ್ದ[೧೪] ಕ್ರಿ.ಶ. ೧೧೯೮ರ ಜೋಡಿಕಾಟೂರು ಶಾಸನದಲ್ಲಿ[೧೫] ಇಮ್ಮಡಿ ಹೊಯ್ಸಳ ಬಲ್ಲಾಳನ ಕಾಲದಲ್ಲಿ ಮಹಾಪ್ರಧಾನ ಹಿರಿಯ ದಣ್ಣಾಯಕ ಗೌಡಯ್ಯ ನುಗುನಾಡಿನ ಕಾಟೂರನ್ನು ನಿರ್ವಹಿಸುತ್ತಿದ್ದಾಗ 'ಹುಟ್ಟಿದ ತಮ್ಮಡಿರಾಯಾಂಡ' ಮುಂತಾದವರು ಸೋಮೇಶ್ವರ ದೇಗುಲಕ್ಕೆ 'ತಾಣಿಕದ ಹೊನ್ನು' (ಸ್ಥಾನಿಕರ ಕಾಣಿಕೆ, ವೃತ್ತಿ ತೆರಿಗೆ!) ದೇಗುಲದ ನಿರ್ವಹಣೆಕಾರರಿಗೆ ೧೦೦೦ ಗುಳಿಯ ಮಣ್ಣುಬಿಟ್ಟ ಬಗ್ಗೆ ಹೇಳಿದೆ. ಇಲ್ಲಿ 'ಹುಟ್ಟಿದ' ಎಂಬುದು ರಾಯಾಂಡೆಯ ಹುಟ್ಟೂರು ಇರಬಹುದು ಅಥವಾ ಹೊಸದಾಗಿ 'ತಮ್ಮಡಿ' ಪದವಿ ಹೊಂದಿದ ಅಥವಾ ವೃತ್ತಿಸೂಚಕ ಪದವಾಗಿ ಬಳಸಿರುವಂತಿದೆ. ೧೨ನೇ ಶತಮಾನದ ಬೆಳತೂರು ಬಾಣೇಶ್ವರಗುಡಿ ಶಾಸನದಲ್ಲಿ[೧೬] ಹೊಯ್ಸಳ ವೀರ ನರಸಿಂಹದೇವನ ಆಳ್ವಿಕೆಯಲ್ಲಿ ನುಗುನಾಡಿನ ಮಹಾಪ್ರಭು ಇಮ್ಮಡಿ ದೇವವತರಾಯನ ಮಗ ಮಾಚಿದೇವನು ಮಹಾಪ್ರಭುಗಉಡುಗಳೊಡನೆ ಸೇರಿ ದೇಗುಲವನ್ನು ವಿಸ್ತರಿಸಿದ (ಜೀರ್ಣೋದ್ಧಾರ) ಸಂದರ್ಭವನ್ನು ಹೇಳುವಾಗ ಹುದುವಾಳಿಕೆಯ ತಮ್ಮಡಿಗಳು (Priests) ತಮ್ಮ ಸಂಕಷ್ಟಗಳನ್ನು ನಿವೇದಿಸಿದರು ಎಂದಿದೆ. ಆಗ ದೇಗುಲದ ಪುನರ್ ನಿರ್ಮಾಣವನ್ನು ೬೦ ಗದ್ಯಾಣಗಳ ವೆಚ್ಚದೊಡನೆ ಗದ್ದೆಯ ಭತ್ತದ ಕೊಡುಗೆ ಸಹಿತವಾಗಿ ಮಾಡಲಾಯಿತು. ಗೌಡರ ಅಪ್ಪಣೆ ಅಂದರೆ ಸಮ್ಮತಿ ಪಡೆದು ದೇಗುಲ ಜೀರ್ಣೋದ್ಧಾರ ಮಾಡಲಾಯಿತು. ಧರನುದೇವ, ಚಕುರ ತಮಡಿಜೀಯ, ದೇಗುಲದ ಅರ್ಚಕರಾಗಿ ಅಹವಾಲು ಸಲ್ಲಿಸಿದ ಸಂದರ್ಭವಿದು. ಇಲ್ಲಿ ಹೆಸರಿನ ರೂಪ ನೋಡಿದರೆ ಕಾಳಾಮುಖ ಶೈವ ಸಂಬಂಧದ್ದು ಎನಿಸುತ್ತದೆ. ಕ್ರಿ.ಶ. ೧೧೯೯ರ ಕೆಂಪನಪುರ ಶಾಸನದಲ್ಲಿ[೧೭] ಹೊಯ್ಸಳ ೧ನೇ ನರಸಿಂಹನ ಆಳಿಕೆ ಕಾಲದಲ್ಲಿ ಚಂದ್ರಶೇಖರ ಮಾರಾಯನು ಭೂಮಿಯನ್ನು

ಕೊಂಡು ಗಾವುಂಡರಿಗೆ ನೀಡಿದ ಭೂದಾನದ ಸಮಯದಲ್ಲಿ ಸೇನಬೋನ ಅತಿರಾಯ ಈಯೂರ ದೇವಮಾರಾಯ ಪಂಡಿತ ಪೆರಿಯಾಂಡ ಮುಂತಾದ ಗೌರವಾನ್ವಿತ ಸಾಕ್ಷಿಗಳೊಡನೆ 'ತಮ್ಮಡಿ ಮಾದೇವಂ' ಕೂಡ ಒಬ್ಬ ಗೌರವಾನ್ವಿತ ಸಾಕ್ಷಿಯಾಗಿದ್ದುದನ್ನು ಸೂಚಿಸುತ್ತದೆ. ಕ್ರಿ.ಶ. ೧೨೭೭ರ ಅಮರಾಪುರ ಕೆರೆಕೋಡಿ ಶಾಸನದಲ್ಲಿ[೧೮] ನೊಳಂಬ ಇರುಂಗೋಳದೇವಚೋಳ ಮಹಾರಾಜನ ಆಳ್ವಿಕೆಯ ಸಮಯದಲ್ಲಿ ತೈಲಂಗೆರೆಯ ಜೋಗಮಟ್ಟಿ ಬ್ರಹ್ಮ ಜಿನಾಲಯಕ್ಕೆ ತಂಮಡಿಯಹಳ್ಳಿಯ ಎರೆಗುಯ್ಯಲ ವಿಭಾಗ ಹಾಗೂ ಅಡಕೆ ಮರಗಳ ದಾನದ ಸಂಗತಿ ಇದೆ. ಜೋಗಮಟ್ಟ (ಶೈವಯತಿ) ದಾನಿತ ಜೋಗವಬ್ಬೆವಸ್ತ್ರದ ಸಂಗತಿಯು ಕಾರಣ ಈ ಜಿನಾಲಯ ಶೈವದೊಂದಿಗೆ ಹೊಂದಾಣಿಕೆಗೊಂಡಂಥ ಎಕ್ಕೋಟಿ ಜಿನಾಲಯವಾಗಿದ್ದಿರ ಬಹುದು. ಜೈನ-ಶೈವ ಸಮನ್ವಯವಿದ್ದ ಈ ಜಿನಾಯಲಯದಲ್ಲಿ ಜೈನ ತಮ್ಮಡಿಗಳಿದ್ದು, ಅವರಿಗಾಗಿ ತಮ್ಮಡಿ ತಮ್ಮಡಿಹಳ್ಳಿಯೊಂದಿತ್ತು ಎಂಬ ಸೂಚನೆ ಒದಗುತ್ತದೆ. ಅಥವಾ ವೀರಶೈವ ತಮ್ಮಡಿಗಳ ಹಳ್ಳಿಯಾಗಿದ್ದಿರಬಹುದು ಎಂದೂ ಗಮನಿಸಬೇಕಾಗುತ್ತದೆ. ಈ ಶಾಸನ ಜೈನ ಬಸದಿಯ ಆವರಣದಲ್ಲಿದೆ. ಬಹುಶಃ ಈ ತಮ್ಮಡಿಹಳ್ಳಿಯ ಮೇಲೆ ಪ್ರಸಿದ್ಧ ಬೊಲ್ಲಿಸೆಟ್ಟಿ ಸಂಗನಾಯಕನು ಧಾಳಿಮಾಡಿದಾಗ ಅಲ್ಲಿಯ ವೀರನೊಬ್ಬ ಕಾದು ವೀರಮರಣ ಅಪ್ಪಿದ ಸಂಗತಿಯಿಂದ ಈ ಹಳ್ಳಿಯ ಪ್ರಾಮುಖ್ಯವೂ ತಿಳಿಯುವಂಣತದೆ. ಅಲ್ಲದೆ ೧೩ನೇ ಶತಮಾನದ ನಿಸದಿಗಲ್ಲೊಂದು ತಮ್ಮಡಿಹಳ್ಳಿ ಆಂಜನೇಯ ದೇಗುಲದ ಆವರಣದಲ್ಲಿ ಬಿದ್ದಿರುವುದನ್ನು ಗಮನಿಸಿದರೆ 'ತಮ್ಮಡಿಹಳ್ಳಿ'ಗಳ ಹೊಯ್ಸಳರ ಕಾಲದ ಅಸ್ತಿತ್ವದ ಸೂಚನೆ ಆಗುತ್ತದೆ. ಇನ್ನೊಂದು ಗಮನಾರ್ಹ ಅಂಶವೆಂದರೆ ಚಿಕ್ಕನಾಯಕನ ಹಳ್ಳಿ ತಾಲೂಕಿಗೆ ಸೇರಿದ ಈ ತಮ್ಮಡಿಹಳ್ಳಿ ಕುಪ್ಪೂರು ತಮ್ಮಡಿಹಳ್ಳಿ ಎನಿಸಿದೆ. ಅಲ್ಲಿ ಒಂದು ವೀರಶೈವ ವಿರಕ್ತಮಠವೂ ಇದೆ. ಕ್ರಿ.ಶ. ೧೨೭೭ರ ಅಮಣಪುರ ಕೆರೆಕೋಡಿ ಗ್ರಾಮವೂ ಚಿಕ್ಕನಾಯಕನಹಳ್ಳಿ ತಾಲೂಕಿಗೆ ಸೇರಿತ್ತು. ತಮ್ಮಡಿಹಳ್ಳಿಯ ವೀರಶೈವ ಪರಿಸರವನ್ನು ಗಮನಿಸಿದರೆ (ಕುಪ್ಪೂರು ಗದ್ದುಗೆ ಮಠ, ತಮ್ಮಡಿಹಳ್ಳಿ ವಿರಕ್ತಮಠ) ತೈಲಂಗೆರೆ ಜೋಗಮಟ್ಟಿ ಜಿನಾಲಯವೂ ಎಕ್ಕೋಟಿ ಜಿನಾಲಯಕವಾಗಿದ್ದುದಕ್ಕೆ ಆಧುನಿಕ ಸಾಕ್ಷಿ ನುಡಿಯುವಂತಿವೆ; ಅಂದರೆ ತಮ್ಮಡಿಗಳ ಪಾತ್ರ ಎಕ್ಕೋಟಿ ಜಿನಾಲಯಗಳಲ್ಲಿ ಜೈನ ಶೈವ ಸಮನ್ವಯ ಕಾರರಾಗಿದ್ದ ಸಾಧ್ಯತೆಯನ್ನು ಸೂಚಿಸುವಂತಿದೆ.

ಕ್ರಿ.ಶ. ೧೩೧೬ರ ವೀರಬಲ್ಲಾಳನ ಕಾಲದ (ಮಂಡ್ಯ ತಾಲೂಕು) ಗುತ್ತಲು ಶಾಸನದಲ್ಲಿ[೧೯] ತಂಮಡಿಹಳ್ಳಿ ವಿಸಣ್ಣ ಎಂಬುವನ ಗದ್ದೆಯ ಭಾಗವನ್ನು ದಾನಕೊಟ್ಟ ಸಂಗತಿ ಇದೆ. ಕ್ರಿ.ಶ. ೧೮೧೫ರಲ್ಲಿ ತಮ್ಮಡಿಗಳೆಂಬ ಶುದ್ಧಶೈವ ಶಿವಾರ್ಚಕ ಬ್ರಾಹ್ಮಣ ಮತಾದರ್ಶ ಕೃತಿಯನ್ನು ಬರೆದಿರುವ ಕೃತಿಕಾರ ವೇ|| ಮುದ್ದಪ್ಪ ಗುತ್ತಲುಗ್ರಾಮದವರೇ ಆಗಿ ಆ ಸುತ್ತಿನಲ್ಲಿ ತಮ್ಮಡಿಗಳ ವಾಸ್ತವ್ಯ ಇಂದಿಗೂ ಇದೆ. ಹೀಗಾಗಿ ಸುಮಾರು ೭೦೦ ವರ್ಷಗಳ ತಮ್ಮಡಿಗಳ ವಾಸ್ತವ್ಯದ ಇತಿಹಾಸದ ಪೂರ್ವ ಸಂಕೇತದ ಸಾಕ್ಷಿಯಾಗಿ ಈ ಗುತ್ತಲು ಶಾಸನ ಕಾಣುವಂತಿದೆ;

ತಮ್ಮಡಿಗಳ ಪರಂಪರೆ ಆ ಪ್ರದೇಶದಲ್ಲಿ ಈವರೆಗೆ ಹರಿದುಬಂದಿರುವುದೂ ಗಮನಾರ್ಹ. ಆದರೆ 'ತಂಡಿಹಳ್ಳಿ' ಈಗ ಬೇಚಾರಕ್ ಆಗಿರುವಂತಿದೆ. ಕ್ರಿ.ಶ. ೧೩೧೮ರ ಚನ್ನಪಟ್ಟಣ ತಾಲೂಕು ಮಾಗೇನಹಳ್ಳಿ ಶಾಸನದಲ್ಲಿ[೨೦] ಹೊಯ್ಸಳ ವೀರಬಲ್ಲಾಳ ಅರುಣಸಮುದ್ರ ನೆಲೆವೀಡಿನಲ್ಲಿ ಆಳುತ್ತಿರುವಾಗ 'ಮುಗುಳನಹಳ್ಳಿ' (ಈಗ ಮಾಗೇನಹಳ್ಳಿ)ಯಲ್ಲಿ ತಮ್ಮಾಡಿಯಾದಡೆ ಅಂಣ್ನನೊಡವೆ ತಮ್ಮಂಗೆ ತಮ್ಮನೊಡವೆಯಣ್ಣಂಗೆ ಅಂಣತಂಮ್ಮಂದಿರಾರೂ ಇಲ್ಲದಿದ್ದರೆ ನಂಟರಿಷ್ಟರು ತೊತ್ತಿನ ಮಗಂಗೆ ಮುಖ್ಯವಾಗಿ ಸಲುವುದು ಅನ್ಯಾರೂ ಇಲ್ಲದಿದ್ದಡೆ ಆ ಅಪುತ್ರಿಕದ ನಕಲದೇವಾಲ್ಯಕ್ಕಿಕ್ಕುವುದು ತಮ್ಮಡಿ ಎಂಬ ವಾರ್ತೆ ಇಲ್ಲವೊಡೆ... ಮುಗುಳನಹಳ್ಳಿ ಪಟ್ಟಣಸಂತೆಕಟ್ಟಿಸಿ ನಾನಾದೇಸಿಯರಿಗೆ ವ್ಯವಹಾರ ಸಾಗಿಸುವುದು', ಎಂದು ಮುಗುಳನಹಳ್ಳಿಯನ್ನು ಚಿಟ್ಟಾದಿಸೆಟ್ಟಿ ಬಲಸೆಟ್ಟಿ ಮುಂತಾದವರಿಗೆ ನೀಡಿದ ಸಂಗತಿ ಇದೆ.

ಇಲ್ಲಿ ಒಂದು ಕುಟುಂಬದಲ್ಲಿ 'ತಮ್ಮಡಿ' ಆಗುವುದೆಂದರೆ ಪೂರ್ವಾಶ್ರಮ ಸಂಬಂಧ ಕಳೆದುಕೊಂಡು, ದೇಗುಲದ ಅರ್ಚಕ, ಸಂನ್ಯಾಸಿ, ಸ್ಥಾನಿಕ ಆಚಾರ್ಯ ದೀಕ್ಷೆ ಹೊಂದಬೇಕಿತ್ತು ಎಂಬ ಸೂಚನೆ ಒದಗುತ್ತದೆ. ತಮ್ಮಡಿಯಾಗುವವರು ನಿರ್ದಿಷ್ಟ ಕುಟುಂಬದಿಂದ ಬಂದವರಾಗಿರಬೇಕೆಂಬ ಸೂಚನೆಯೂ ಇಲ್ಲಿದೆ. ಜೊತೆಗೆ ಆ ಕಾಲದ ತಮ್ಮಡಿ ಕುಟುಂಬದವರು ಸಾಕಷ್ಟು ಸ್ಥಿತಿವಂತರೂ ಆಗಿದ್ದಿರುವಂತಿದೆ. ನಕರರ ದೇವಾಲಯದಲ್ಲಿ ತಮ್ಮಡಿಗಳಿರುತ್ತಿದ್ದರು ಎಂದೂ ತಿಳಿಯುತ್ತದೆ. ಇವೆಲ್ಲ ವಿಜಯನಗರ ಆರಂಭಕಾಲದವರೆಗೂ ಹಾಗೂ ಸಂಗಮದ ಆರಂಭಕಾಲದವರೆಗೂ ನಡೆದುಬಂದ 'ತಮ್ಮಡಿ ಎಂಬ ವಾರ್ತೆ'ಯಾಗಿ ಕಾಣಬರುತ್ತವೆ.

ವಿಜಯನಗರಕಾಲದಲ್ಲಿ ವಿಶೇಷವಾಗಿ ತಂಮಡಿಗಳ ಸ್ಥಿತಿಗತಿ ಹೆಚ್ಚು ಪ್ರಭಾವಪೂರ್ಣವಾದಂತೆ ಕಾಣುತ್ತದೆ.

ಕ್ರಿ.ಶ.೧೩೬೮ರ ತಗಡೂರು ಶಾಸನದಲ್ಲಿ[೨೧] ಮೂಲಸ್ಥಾನದೇವರು ದಿಬ್ಯಲಿಂಗವಾದ ಸಂಬಂಧ ನಂದಾದೀವಿಗೆಗೆ, ಪರಿಚಾರಕ, ಪೂವಡಿಗನ ಜೀವಿತಕ್ಕೆ... 'ತಂಮಡಿಗಳು ತೆಲುವ ದೇವದಾನದರಳದೊಳಗೆ...' (The adhikari of Tagadur in Hiriyanad agreed to pay 20 gadyanas from out of the amount the tammadis of the temple were to pay (to the palace!) annnally for burning a perpetnal lamp, maintenance of servant, florist in the temple and they would themselves make good of the amount ot be paid to the palace) ಇಲ್ಲಿ 'ದಿಬ್ಬಲಿಂಗವಾದ' ಎಂದರೆ 'ಜ್ಯೋತಿರ್ಲಿಂಗ'ವೆಂದಿರಬಹುದು. ಜ್ಯೋತಿರ್ಲಿಂಗ ಸಾಕ್ಷಿಯಾಗಿ ದೇಗುಲಾಚಾರಗಳ ನಿರ್ವಹಣೆಗಾಗಿ ದೇಗುಲಸ್ಥಾನಿಕರಾದ ತಮ್ಮಡಿಗಳೇ ತೆರುತ್ತಿದ್ದ ವೃತ್ತಿ ತೆರಿಗೆ (ದೇವದಾನ!) ಎನಿಸುತ್ತದೆ. ಅಂದರೆ ತಮ್ಮಡಿಗಳಿಗೆ ವರಮಾನ ಅಧಿಕವಿತ್ತು ಎಂಬ ಸೂಚನೆಯೂ ಇಲ್ಲಿದೆ. ಹೊಯ್ಸಳರ ಕಾಲದಲ್ಲೂ ಇಂಥ ಪದ್ಧತಿ ಇದ್ದದ್ದು (ತಮ್ಮಡಿ ರಾಯಾಂಡೆ ಸೋಮೇಶ್ವರ ದೇಗುಲಕ್ಕೆ ನೀಡಿದ ತಾಣಿಕದ ಹೊನ್ನು) ಕ್ರಿ.ಶ. ೧೧೯೮ರ ಜೋಡಿ ಕಾಟೂರು ಶಾಸನದಿಂದ

ತಿಳಿಯುತ್ತದೆ. ಅದು ವಿಜಯನಗರದ ಕಾಲದಲ್ಲೂ ಮುಂದುವರಿದ ತಾಣಿಕದ ಹೊನ್ನಾಗಿ ಸ್ಥಾನಿಕ ಅಧಿಕಾರದ ನಿಮಿತ್ತ ಕೊಡಬೇಕಿದ್ದ ವೃತ್ತಿ ತೆರಿಗೆ! ಇಲ್ಲಿಯೂ ಕಂಡುಬರುತ್ತದೆ.

ಕ್ರಿ.ಶ. ೧೩೯೭ರ ತಿ.ನರಸೀಪುರದ ತಾಮ್ರ ಶಾಸನದಲ್ಲಿ ದಾನವೊಂದರ ಸಂಬಂಧದಲ್ಲಿ ಇಮ್ಮಡಿ ಹರಿಹರನ ಕಾಲದಲ್ಲಿ 'ತಂಮಡಿಗೆರೆ' ಗ್ರಾಮದ ಅಸ್ತಿತ್ವ ಕಾಣಬರುತ್ತದೆ;[೨೨] ಕ್ರಿ.ಶ. ೧೪೦೭ರ ಸಾಗರೆ ಶಾಸನದಲ್ಲಿ,[೨೩] ಶ್ರೀಮತು ದೇವರ್ಸರು ಸಾಗರೆಯ 'ಸಂಖರದೇವರ ತಂಮಡಿಗಳು ಚೊಕ್ಕಾಲ ಗೋವಿಂದ್ಯರ್ತಾತೆ' ಅವರಿಗೆ ಕೆಲವು ತೆರಿಗೆಗಳ ಉತ್ಪನ್ನವನ್ನು ದೇಗುಲ ನಿರ್ವಹಣೆಗೆ ನೀಡಿದ ವಿಷಯವಿದೆ. ಇಲ್ಲಿ ಬರುವ ದೇವರಸ ಕ್ರಿ.ಶ. ೧೪೦೬-೨೨ರ ಸಂಗಮವಂಶದ ೧ನೇ ದೇವರಾಯನೆ ಅಥವಾ ದೇವರಸನೆಂಬ ಅಧಿಕಾರಿಯೆ ಎಂಬುದು ಸ್ಪಷ್ಟವಾಗದಿದ್ದರೂ ಶಾಸನದ ತೆರಿಗೆ ಉತ್ಪನ್ನದ ದಾನದ ವಿಷಯ ಗಮನಿಸದರೆ, ತಮ್ಮಡಿಗಳಿಗಿದ್ದ ಪ್ರಭಾವ ಗಮನಿಸಿದರೆ ಸಂಗಮರ ೧ನೇ ದೇವರಾಯನ ಸಂಬಂಧದ ಶಾಸನವೆಂಬುದಕ್ಕೆ ಒತ್ತು ಸಿಗುವಂತಿದೆ. ಇಲ್ಲಿ ಗೋವಿಂದ್ಯರ್ ತಾತೆ, ಚೊಕ್ಕಾಲಗ್ರಾಮದವರು, ಸಂಖರದೇವರ ಹಿರಿಯ ತಂಡಿಗಳು, ಸ್ಥಾನಿಕ ನಿರ್ವಹಣಾಧಿಕಾರಿಯಾಗಿದ್ದರು ಎಂಬ ಅಂಶಗಳು ಗೋಚರಕ್ಕೆ ಬರುತ್ತವೆ. ಅವರು ಗೌರವಾನ್ವಿತ ಸ್ಥಾನಿಕ ಅರ್ಚಕ ಪ್ರಧಾನಕ್ಕೂ ಗುರುಗಳೂ ಆಗಿದ್ದ ಸೂಚನೆಯೂ ಸಿಗುತ್ತದೆ. ಆದರೆ ಶಿವದೇಗುಲದ ಈ 'ತಂಮಡಿ'ಗಳು ವೈಷ್ಣವಪರವಾದ ವ್ಯಕ್ತಿನಾಮವನ್ನು ಹೊಂದಿರುವುದನ್ನು ನೋಡಿದರೆ ಹರಿ-ಹರ ಸಮನ್ವಯ ಆಚಾರ ವಿಚಾರಗಳು ಆ ಕಾಲದ ಶೈವ ತಮ್ಮಡಿಗಳಿದ್ದವು ಎಂದು ಧ್ವನಿತವಾಗುತ್ತದೆ. 'ತಾತೆ' ಶಬ್ದವನ್ನು 'ತಾತ' ಎಂದು ಪರಿಗ್ರಹಿಸಿದರೆ ಗುರುಗಳಿಗೆ 'ಅಜ್ಜಯ್ಯತಾತ' ಎಂದು ಸಂಬೋಧನಾರೂಢಿ ಇರುವಲ್ಲಿ, ಗೋವಿಂದ್ಯರ್ ಗುರುವಾಗಿದ್ದಿರಬೇಕೆನಿಸುತ್ತದೆ.

ಕ್ರಿ.ಶ. ೧೪೨೮ರ ಹಿರಿಯೂರು ಶಾಸನದಲ್ಲಿ ಸೋಮೇಶ್ವರ ತಮ್ಮಡಿ ಕೇತಜೀಯನ ಉಲ್ಲೇಖವಿದೆ. 'ಜೀಯ' ಎಂಬ ಉಫಾಧಿಯನ್ನು ಕಾಳಾಮುಖ ಶೈವರದೆನ್ನುವುದಕ್ಕೆ ಸೀಮಿತಗೊಳಿಸಿದರೆ ಕಾಳಾಮುಖ ಶೈವ ತಮ್ಮಡಿಗಳ ಅಸ್ತಿತ್ವದ ಕುರುಹಾಗಬಹುದು. ಆದರೆ ವೀರಶೈವ ಗುರುಗಳಲ್ಲೂ ಇಂಥ ಉಪಾಧಿಗಳಿದ್ದ ಉದಾಹರಣೆಗಳು ಇದೆ. ಅಲ್ಲದೆ ಶಾಸನ ಶಿಲ್ಪಗಳಲ್ಲಿ ಕಂಡುಬರುವ ದೀರ್ಘ ಜಟೆಯ ಶಿವಾರ್ಚಕರು ಕೈಲಾಸದ ದೃಶ್ಯದಲ್ಲಿ ಕಾಳಾಮುಖ ಶೈವರೆನ್ನಲಾಗಿದೆ. ಆದರೆ ಶಿವನ ಅರ್ಚಕರಾಗಿ ಶೈವ ತಮ್ಮಡಿಗಳಾಗಿರಬಹುದೇ ಎನ್ನಿಸುತ್ತದೆ.

ಕ್ರಿ.ಶ. ೧೪೦೫ರ 'ತಂಬಳ್ಳಪಲ್ಲಿ' ಶಾಸನದಲ್ಲಿ[೨೪] ವಿಜಯನಗರದ ೧ನೇ ದೇವರಾಯನ ಕಾಲದಲ್ಲಿ (೧೪೦೬-೨೨) ಚಂದ್ರಗಿರಿಯ ಮಲ್ಲಿಕಾರ್ಜುನ ದೇವರಿಗೆ ಅನಾದಿ ಪೂರ್ವದಲ್ಲಿ ಚಂದುಬಹದಂತಾ ತಂಮಡಿಯಹಳ್ಳಿಯಂಬ ಪುರವನು ಆ ದೇವರಿಗೆ ಅಮೃತಪಡಿಗೆ ಸರ್ವ್ವಮಾನ್ಯವಾಗಿ ನೀಡಿದ ವಿಷಯ ಆರುಬಾಗಿಯ ಪೂಜಾರಿಗಳು, ದೇವರ ಪೂಜಾರಿಗಳು, ಆರು ಬಾಗಿಲ ಸ್ಥಾನಿಕರು ಇವರ ಬಿನ್ನಹಕ್ಕನುಗುಣವಾಗಿ ಸ್ಥಾನಪತಿ ಪೆದಮಲಜೀಯ

ಮುಂತಾದವರಿಗೆ ವಿತರಿಸಬೇಕಾದ ಕಾಣಿಕೆ ಶಿವರಾತ್ರಿ ಹಬ್ಬಗಳಲ್ಲಿ ದೇಗುಲಕ್ಕೆ ಬರುತ್ತಿದ್ದ ಹಣ, ಕಾಣಿಕೆಗಳನ್ನು ಮುಂದುವರಿಸಿ ಮಯಿಲಪ್ಪ ಎಂಬುವವನಿಗೆ (ಅಧಿಕಾರಿಗೆ!) ದೊರೆ ನೀಡಿದ ನಿರೂಪದ ಬಗ್ಗೆ ಹೇಳಿದೆ. ಈ ಅಂಶಗಳಿಂದ 'ತಂಮಡಿಹಳ್ಳಿ' ಹೆಸರನ್ನು 'ತಂಬಳ್ಳಪಲ್ಲಿ' ಎಂದು ಕರೆಯುತ್ತಿದ್ದ ಬಗ್ಗೆ (ತೆಲುಗಿನಲ್ಲಿ ತಂಬಳ್ಳ; ಕನ್ನಡದ ತಂಬಳ್ಳಿ < ತಂಮಳ್ಳಿ < ತಮ್ಮಳ್ಳಿ < ತಮ್ಮಡಿಹಳ್ಳಿ ಆಗಿರುವ ಉದಾಹರಣೆ ಇದಾಗಿದೆ) ತಿಳಿಯುತ್ತದೆ. ದೇವರ ಪೂಜಾರಿಗಳು ಆರು ಬಾಗಿಯ ಪೂಜಾರಿಗಳು; ಸ್ಥಾನಿಕರು; ಸ್ಥಾನಾಧಿಪತಿಗಳು, ಗುರುಗಳು ಈ ಕ್ರಮ ಊರ್ಧ್ವ ಸ್ಥಾನವಿದ್ದು, ಬಹುಶ: ತಮ್ಮಡಿಗಳು ಪದವಿ ವಿಕಸನ ಕ್ರಮದ ಅಧಿಕಾರ ಹೊಂದುತ್ತಿದ್ದರೆಂದು ತೋರುತ್ತದೆ. ತಮ್ಮಡಿಹಳ್ಳಿಗಳನ್ನು ಮಾನ್ಯ ಗ್ರಾಮವಾಗಿ ಪ್ರಾಚೀನದಿಂದಲೂ ನೀಡುವ ಪದ್ಧತಿ ಇದ್ದ ಬಗ್ಗೆ ತಿಳಿಯುತ್ತದೆ.

ಕ್ರಿ.ಶ. ೧೪೬೫ರ ಮಳವಳ್ಳಿ ಶಾಸನದಲ್ಲಿ[೨೫] ತಮ್ಮಡಿಹಳ್ಳಿ ಹಿರಿಯ ಕೆರೆಯ ಕೆಳಗಿನ ತೋಟವನ್ನು ಮಳವಳ್ಳಿಯ ಅರ್ಕನಾಥದೇವರ ದೇಗುಲ ವೆಚ್ಚಗಳ ನಿರ್ವಹಣೆಗಾಗಿ ಪ್ರೌಢದೇವರಾಯನ ಕಾಲದಲ್ಲಿ ನೀಡಿದ ವಿಷಯವಿದೆ. ಇದು 'ತಮ್ಮಡಿಹಳ್ಳಿ'ಗಳ ಭೌಗೋಳಿಕತೆ, ಪ್ರಾಮುಖ್ಯ, ತಮ್ಮಡಿಗಳ ಮೀಸಲಾದ ವಾಸ್ತವ್ಯನೆಲೆಗಳು ಇರುತ್ತಿದ್ದ ಬಗೆಯನ್ನು ಸೂಚಿಸುವಂತಿದೆ.

ಕ್ರಿ.ಶ. ೧೫೧೬ರ ಮಂಡ್ಯದ ತಾಮ್ರ ಶಾಸನದಲ್ಲಿ[೨೬] ಕೃಷ್ಣದೇವರಾಯನ ಕಾಲದಲ್ಲಿ ಪ್ರತಿನಾಮಧೇಯವಿಟ್ಟು ಮಂಠೆದ ಗ್ರಾಮಕ್ಕೆ ದಾನನೀಡಿ ಸೀಮಾ ವಿವರವನ್ನು ಹೇಳಲಾಗಿದೆ. ಹಾಗೆ ಹೇಳುವಲ್ಲಿ ತೆಂಕಲು ತಂಮಡಿಗಟ್ಟೆಯ ಕಾಲ್ವೆ ತಿಟ್ಟೆ ಎಂದಿದೆ. ಅದು ತಂಮಡಿಗಟ್ಟೆ ಎಂಬ ಗ್ರಾಮದ ಅಸ್ತಿತ್ವವನ್ನೋ ಅಥವಾ ಆ ಹೆಸರಿನ ಕೆರೆಯನ್ನೋ 'ಕಾಲ್ವೆ' ಎಂಬ ಉಪಾಧಿ ಇರುವಲ್ಲಿ ಸೂಚಿಸುವಂತಿದೆ. ಅಂದರೆ ತಂಮಡಿಗಳಿದ್ದ ಗ್ರಾಮವನ್ನೇ ಅಥವಾ ಅವರ ಹೆಸರಿನಲ್ಲಿ ಕಟ್ಟಿಸಿಕೊಟ್ಟಿದ್ದ ಕೆರೆಯ ಅಸ್ತಿತ್ವ ಸೂಚಿಸಿ, ಅವರಿಗಿದ್ದ ಪ್ರಭಾವ ಸೂಚನೆ ನೀಡುತ್ತದೆ.

ಕ್ರಿ.ಶ. ೧೫೧೭ರ ನೆಲಮಂಗಲದ ತಾಮ್ರ ಶಾಸನವು[೨೭] ಕೃಷ್ಣದೇವರಾಯನ ಆಳ್ವಿಕೆಯ ಸಮಯದ ದೇವ ದಾನವನ್ನು ಹೇಳುವಲ್ಲಿ ಶಿವಗಂಗೆಯ ಗಂಗಾಧರನನ್ನು ಸ್ಮರಿಸಿ '...ಗ್ರಾಮಂಚ ಸಕಲ್ಯಾಂಖ್ಯಂ ಬಿಭ್ರಾಣಂ ಭುವಿವಿಶ್ರುತಂ | ಕೊರಟೀಕೆರೆ ನಾಮಾನಂ ಗ್ರಾಮಂ ಚಾಪಿ ಮನೋಹರಂ | ರಮ್ಯಂ ತಮ್ಮಡಿಹಳ್ಳಿಂಚ ಸದಾ ಸಸ್ಯ ಸಮನ್ವಿತಾ ಎಂದಿದೆ. ಸದಾ ಸಸ್ಯದಿಂದ ಕೂಡಿದ ರಮ್ಯವಾದ ಹರಿದ್ವರ್ಣ ಪರಿಸರದ ತಮ್ಮಡಿಹಳ್ಳಿ ಒಂದು ಫಲವತ್ತಾದ ಗ್ರಾಮವಾಗಿತ್ತು. ದೇವರ ನೈವೇದ್ಯಾರ್ಥ ಬೆಳೆಯುತ್ತಿದ್ದ ಸಸ್ಯೋತ್ಪನ್ನವು ಅಲ್ಲಿದ್ದು ತಮ್ಮಡಿಗಳಿಗೆ ಅಂಥ ಹಳ್ಳಿ ಒದಗಿರಬೇಕಾದರೆ ಅವರ ಪ್ರಾಮುಖ್ಯವು ತಿಳಿಯುತ್ತದೆ. ಅಥವಾ ಆ ಪರಿಸರದ ದೇಗುಲಗಳ ಅರ್ಚಕರ ನೆಲೆ ಅದಾಗಿ ಹೆಸರುಗೊಂಡಿರಲೂಬಹುದು. ಬಹುಶಃ ಈ ಗ್ರಾಮದ ತಮ್ಮಡಿಗಳು ಶೈವ ತಮ್ಮಡಿಗಳಾಗಿದ್ದಿರಬೇಕು. ಸಾಮಾನ್ಯವಾಗಿ ಮಹಾಜನರಿಗೆ (ಬ್ರಾಹ್ಮಣ ವಿದ್ವಾಂಸರು) ಅಗ್ರಹಾರ ನೀಡುತ್ತಿದ್ದಂತೆ (ಮಹೇಶ್ವರ ಹಾಗೂ

ಮಹಾಜನರೊಂದಿಗೆ ಸಮಾನ ಅಧಿಕಾರಿಗಳಾಗಿದ್ದ ಸ್ಥಾನಿಕರು ಅವರೊಂದಿಗೆ ದೇವಸ್ಥಾನಕ್ಕೆ ಬರುತ್ತಿದ್ದ ಹಣದ ಹಾಗೂ ಬೆಳೆಯ ಕಾಣಿಕೆಗಳನ್ನು ಸ್ವೀಕರಿಸುತ್ತಿದ್ದವರು[೩೮]) ಸ್ಥಾನಿಕರಾಗಿ ತಮ್ಮಡಿಗಳೂ 'ತಮ್ಮಡಿಹಳ್ಳಿ'ಗಳನ್ನು ಪಡೆಯುತ್ತಿದ್ದಂತೆ ತೋರುತ್ತದೆ ಮತ್ತು 'ತಮ್ಮಡಿ' ಎಂಬ ವೃತ್ತಿವಾಚಿಯೂ ಜನಾಂಗವಾಚಿ ಶಬ್ದವೇ ಅವರ ವಾಸ್ತವ್ಯದ ನೆಲೆಗೆ ಸ್ಥಳನಾಮವಿರುತ್ತಿದ್ದುದೂ ಗಮನಾರ್ಹ. ಶಿವಗಂಗೆಯ ಗಂಗಾಧರೇಶ್ವರನಿಗೆ ಒಂದು ಕಾಲಕ್ಕೆ ಸ್ಥಾನಿಕ ಅರ್ಚಕರಾಗಿ ತಮ್ಮಡಿಗಳಿದ್ದಂತೆ ತೋರುತ್ತದೆ. ನೆಲಮಂಗಲದ ಒಂದು ಬಂಡೆಗಲ್ಸ್ ಶಾಸನದ ರೀತ್ಯಾ[೩೯] 'ಲಿಂಗರಾಜಪಯನವರ ಕಾರ್ಯಕೆ ಕರ್ತರಾದ ಬಸಗುವರಸಯನವರೂ ಶಿವಗಂಗೆಯ ಸ್ತಾನಿಕರೂ ಕೆರೆ ಸಮುದ್ರ ಹೊಂನ ಹಲಗೆ ಲಿಂಗ ಲಿಂಗೆ... ದೇವಸ್ತಾನದ ಹಳ್ಳಿ' ಎಂಬ ಸಾಲನ್ನು ಗಮನಿಸಿದರೆ ಬಹುಶಃ ಸ್ತಾನಿಕರಾಗಿದ್ದ ತಮ್ಮಡಿಗಳನ್ನು ಹೇಳುವಂತಿದೆ. ದೇವಸ್ತಾನದಹಳ್ಳಿ ತಮ್ಮಡಿಗಳಿಗೆ ಸಂಬಂಧಿಸಿರಬಹುದೆಂದೂ ತೋರುತ್ತದೆ. ಆದರೆ ಇವರ ವೀರಶೈವ ಅರ್ಥಾತ್ ಲಿಂಗಧಾರಿ ತಮ್ಮಡಿಗಳಿರಬೇಕೆನ್ನಿಸುತ್ತದೆ.

ಕ್ರಿ.ಶ. ೧೫೪೧ರ ಅಚ್ಯುತದೇವರಾಯನ ಕಾಲದಲ್ಲಿಯ ತಮ್ಮಡಿಹಳ್ಳಿ ಶಾಸನದಲ್ಲಿ[೪೦] ತಮ್ಮಡಿಹಳ್ಳಿಕೆರೆ ಮೂರುಕಡೆ ಬಿರುಕುಬಿಟ್ಟು ಖಿಲವಾಗಿದ್ದಾಗ ವೆಂಕಟಾದ್ರಿ ನಾಯಕರ ಕಾರ್ಯಕೆಕರ್ತರಾದ ತಿಪ್ಪರಾಜ ಮಹಾ ಅರಸು, ತಮ್ಮಡಿಹಳ್ಳಿಯ ಚೆನ್ನಗೊಂಡ, ತಿಮ್ಮಗೊಂಡ ಅವರುಗಳು ತಮ್ಮ ಹೊಂನಿನ ಖರ್ಚಿನಲ್ಲಿ ಕೆರೆಯ ಪುನರ್ ನಿರ್ಮಾಣ ಮಾಡಿದ ಸಂಗತಿ ಇದೆ. ತಮ್ಮಡಿಹಳ್ಳಿಗಳಲ್ಲಿ ವಿಜಯನಗರ ಕಾಲದಲ್ಲಿ ಸಾಮಾನ್ಯವಾಗಿ ಕೆರೆಗಳ ನಿರ್ಮಾಣವಾಗುತ್ತಿದ್ದುದಲ್ಲದೆ ತಮ್ಮಡಿಹಳ್ಳಿಗಳ ಸಂಖ್ಯೆಯೂ ವಿಪುಲಗೊಂಡಿರುವುದು ಕಾಣಬರುತ್ತದೆ. ದೇವರಾಧನೆ ಹಾಗೂ ಅರ್ಚಕರ ದೈನಂದಿನ ಬದುಕಿನ ಸವಲತ್ತುಗಳತ್ತ ವ್ಯಪಸಾಯೋತ್ಪನ್ನಗಳತ್ತ ಗಮನವಿದ್ದುದೂ ಸೂಚಿತವಾಗುವಂತಿದೆ. ಬಹುತೇಕ ತಮ್ಮಡಿಗಳು ಕೃಷಿಭೂಮಿಯ ಒಡೆಯರಾಗಿ ಬೇಸಾಯವನ್ನೂ ಜೀವನದ ಅಂಗವಾಗಿ ಮಾಡಿಕೊಂಡಿದ್ದಂತೆ ಇಂಥ ತಮ್ಮಡಿಹಳ್ಳಿಗಳಿಗೆ ಭೌಗೋಳಿಕ ಪರಿಸರದಿಂದ ಸೂಚನೆಗೊಳ್ಳುತ್ತದೆ.

ಕ್ರಿ.ಶ. ೧.೪.೧೫೩೧ರ ನಂಜನಗೂಡು ನಂಜುಂಡೇಶ್ವರ ದೇಗುಲದ ಅಚ್ಯುತದೇವರಾಯನ ಕಾಲದ ಅಪ್ರಕಟಿತ ಶಾಸನದಲ್ಲಿ[೪೧] ಬರುವ ಸಾಲುಗಳು '...ನಂಜುಂಡೇಶ್ವರ ದೇವರಿಗೆ ಅಚುತರಾಯ ಮಹಾರಾಯರ ನಿರೂಪದಿಂದ... ಸ್ವಾಮಿಯ ಮಾದ್ಯಾಂಹಿಕ ಕಾಲದಲ್ಲಿ ನೈವೇದ್ಯಕ್ಕೆ... ಉಯ್ಯಂಬಳಿಯ ಸ್ಥಳದೊಳಕ್ಕೆ ದಣಾಯಕಪುರ ಗ್ರಾಮವನೂ... ಧಾರೆಯನೆರದು... ಸ್ವಾಮಿಗೆ ಧೂಪ ದೀಪ್ತಿ ನೈವೇದ್ಯ ತಾಂಬೂಲವನೂ ಮಾಡಿಬಹ ಹಾಗೆ ಲಿಂಗಪ್ಪಗಳ ಕೆಂಪನಂಜಯಗಳು ದೇವೇಶಭಟ್ಟರ ಮಕ್ಕಳೂ ದೊಡ್ಡನಂಜಯಗಳೂ ಬುಸ್ವಪ್ಪಗಳನಾರಿಪ್ಪಗಳೂ ಚಲುಡಪ್ಪಗಳ ಮಕ್ಕಳೂ ಲಿಂಗಯಂಮಗಳು ದೇವೇಶಭಟ್ಟರ ಮಕ್ಕಳು ಚಿಕ್ಕನಂಜಯ್ಯಗಳೂ ಬುಸ್ವಪಗಳ ವಿರುಪಯ್ಯಗಳು ಯೀ ಆರು ಮಂದಿಯೂ ಆ ಗ್ರಾಮನೂ ಅನುಭವಿಸಿಕೊಂಡು ಧೂಪ

ದೀಪ ನೈವೇದ್ಯ ತಾಂಬೂಲವನು ದಿನಚ(ರಿ)ಯಲ್ಲಿ ಮಾಡಿ ಆ ಪ್ರಸಾದವನು ತಾವೇ ಕೊಂಡು ಹೋಹರು ಆ ಗ್ರಾಮವನು ಅಗ್ರಹಾರವಾಗಿ ಪುತ್ರ ಪಾತ್ರ ಪಾರಂಪರಿ ಆ ಚಂದ್ರಾರ್ಕಸ್ತಾಯಿಯಾಗಿ ಅನುಭವಿಸಿಕೊಂಡು ಬಹದುಯೆಂದು ಬರದ ಶಿಲಾಶಾಸನ...'

ಎಂದಿರುವಲ್ಲಿ ನಂಜುಂಡೇಶ್ವರ ದೇಗುಲದ ಅರ್ಚಕರ ಹೆಸರುಗಳ ಬಗೆ ಅವರ ದೈನಂದಿನ ಪೂಜಾ ವಿವರಗಳು ಹಾಗೂ ದಾನವಿತ್ತ ಗ್ರಾಮ ಇವುಗಳೆಲ್ಲದರ ಪೂರ್ಣ ವಿವರವಿಲ್ಲಿದೆ. ಹೆಸರುಗಳಂತು ವೀರಶೈವ ಅರ್ಚಕರಂತೆ ಯು ಶುದ್ಧ ಶೈವ ಶಿವಾರ್ಚಕರದಂತೆ ಸ್ಪಷ್ಟವಾಗಿವೆ. ಶ್ರೀಮತಿ ಮಂಜುಳಾ ಹುಲ್ಲಹಳ್ಳಿ ಅವರು, ಕ್ರಿ.ಶ. ೧೫೧೧ರ ನಂಜುಂಡೇಶ್ವರ ದೇಗುಲದ ಶಾಸನೋಕ್ತ ಅರ್ಚಕರ ಹೆಸರುಗಳೊಡನೆ ಹೋಲಿಸುತ್ತ (ಎ.ಕ.ಸಂ.೫ ಮೈಸೂರು ೧೧೬) ಆಲಯದ ಪೂಜಾಕಾರ್ಯ ಅನುವಂಶೀಯವಾಗಿರಲಿಲ್ಲ; 'ಮುಮ್ಮಡಿ ಕೃಷ್ಣರಾಜ ಒಡೆಯರು ಆಗಮೋಕ್ತ ಪೂಜೆ ನಡೆಯಲೆಂದು ತಮಿಳುನಾಡಿನಿಂದ ಬ್ರಾಹ್ಮಣರನ್ನು ಕರೆತಂದರು' ಎಂಬ ಜನಪದ ಹೇಳಿಕೆಗೆ ವಿರುದ್ಧವಾಗಿ ಈ ಹೊಸ ಶಾಸನದಿಂದ ನಂಜುಂಡೇಶ್ವರ ಆಲಯ ಮೊದಲಿನಿಂದಲೂ ತಮ್ಮಡಿಗಳ ವಶದಲ್ಲಿತ್ತು ಎಂದು ತಿಳಿಯುತ್ತದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ತಮ್ಮಡಿಗಳ ದೃಷ್ಟಿಯಿಂದ ತುಂಬ ಗಮನಾರ್ಹವಾದ ವಿಷಯ. ಅಲ್ಲದೆ ಉಯ್ಯಂಬಳ್ಳಿ ಸ್ಥಳವು ೧೭ನೇ ಶತಮಾನದಲ್ಲಿ ಪ್ರಕೃತಿ ವಿಕೋಪದಿಂದ ಅಳಿದುಹೋದಾಗ ಅಲ್ಲಿಂದ ವಲಸೆಬಂದು ಮೇಲಿನ ಸ್ಥಳದಲ್ಲಿ ರಚಿಸಿಕೊಂಡ ನಂಜೆದೇವಪುರಕ್ಕೆ ಬಂದರು. ಆದರೆ ಊರಿನ ಬಹುಪಾಲು ಜನರು ಉಯ್ಯಂಬಳ್ಳಿ ಸ್ಥಲದ ಶಿಥಿಲ ಶಂಕರೇಶ್ವರ ಹಾಗೂ ಮಾರಿಗುಡಿಗಳಿಗೆ ನಡೆದುಕೊಳ್ಳುತ್ತಿರುವ ವಿಷಯವೂ ಉಕ್ತವಿದೆ. ಇದಲ್ಲದೆ ಕ್ರಿ.ಶ. ೧೫೧೧ರ ಮೇಲ್ಲೂಚಿತ ಶಾಸನದಲ್ಲಿ ನಂಜುಂಡೇಶ್ವರ ದೇಗುಲದ ಅರ್ಚಕರ ಪೈಕಿ 'ತಿಂಮಂಣಗಳ ಮಕ್ಕಳು ನಂಜುಂಡದೇವಗಳು, ವೀರಗಣಗಳ ಮಕ್ಕಳು ಅಂಣೆಭಟರು' ಎಂದಿರುವುದನ್ನೂ ಗಮನಿಸಿದರೆ ತಮ್ಮಡಿಗಳ ಪೈಕಿಯ ಹೆಸರುಗಳು ಕ್ರಿ.ಶ. ೧೫೩೭ರ ಮುನ್ನವೆ ಶಾಸನೋಕ್ತಗೊಂಡಿವೆ ಎನ್ನಬೇಕು. ಒಂದು ಕಾಲಕ್ಕೆ ನಂಜುಂಡೇಶ್ವರ ದೇಗುಲದ ಪೂಜಾಚಾರಣೆಗಳು ಪೂರ್ಣವಾಗಿ ತಮ್ಮಡಿಗಳ ಶೈಲಿ ಇದ್ದದ್ದು, ಅವರ ಪ್ರಾಬಲ್ಯ ಕಡಿಮೆಯಾದಾಗ ಅನ್ಯ ವೈದಿಕ ಅರ್ಚಕರು ಸೇರಿಕೊಂಡು ಪರ್ಯಾಯ ಅವಧಿಗಳನ್ನು ನಿಗದಿಗೊಳಿಸಿಕೊಂಡಿರಬೇಕು. ತಮ್ಮಡಿಗಳ ಪ್ರಭಾವ ಕುಸಿಯುತ್ತ ಬಂದಂತೆ ಮೈಸೂರು ರಾಜ್ಯಾಡಳಿತದಲ್ಲಿ ವೈದಿಕರ ಪರವಾದ ಮುಖ್ಯಾಧಿಕಾರಿಗಳು ಚುಕ್ಕಾಣಿ ಹಿಡಿದಾಗ ತಮ್ಮಡಿಗಳ ನಂಜುಂಡೇಶ್ವರ ದೇಗುಲದ ಪೂಜಾಚಾರಗಳ ಹಕ್ಕನ್ನು ಕಸಿದುಕೊಳ್ಳಲಾಯಿತೆನಿಸುತ್ತದೆ. ಆದರೆ ನಂಜುಂಡನಿಗೆ ಮೊದಲಿನಿಂದಲೂ ಇದ್ದ ಜನಪದ ಆಚಾರಗಳನ್ನು ಜನತ ಮಾಡಿದ್ದವರು ತಮ್ಮಡಿಗಳೇ ಆಗಿದ್ದರು. ನಂದ್ಯಾಲ ಪ್ರದೇಶದ ತಮ್ಮಡಿಗಳು ನಂಜನಗೂಡಿಗೆ ತಮ್ಮ ದೇವನಾಯಕ ನಂಜುಡನೊಡನೆ ವಲಸೆ ಬಂದು ೫ನೇ ಶತಮಾನದ ಸುಮಾರಿನಿಂದ ೧೬ನೇ ಶತಮಾನದವರೆಗೆ ನಿಕಟ ಅರ್ಚಕರಾಗಿದ್ದರು. ಕೇಳುಮೆಯಲ್ಲಿ ಜನಪದರು ತಿಳಿದ ನಂಜುಂಡ ಹಾಗೂ ನಂದ್ಯಾಲ ತಮ್ಮಡಿಗಳ ವಲಸೆಯನ್ನು

ಐತಿಹಾಸಿಕ ಸೂಕ್ಷ್ಮವಾಗಿ 'ಅದು ಬೆಟ್ಟ ಇದು ಬೆಟ್ಟವೋ ನಂಜುಂಡ ನಂದ್ಯಾಲ ಗಿರಿಬೆಟ್ಟವೋ' ಎಂದು ಹಾಡಿಕೊಂಡು ಬಂದಿರಬೇಕು.[೨]

ಇನ್ನೂ ಕ್ರಿ.ಶ. ೧೫೩೧ರ ಶಾಸನದಲ್ಲಿ ಡಣಾಯಕಪುರ ಗ್ರಾಮ ದಾನದ ಸ್ವರೂಪ ನೋಡಿದರೆ ಅದು ನಂಜನಗೂಡು ದೇಗುಲದ ತಮ್ಮಡಿಗಳ 'ಶುದ್ಧಶೈವ ಶಿವಾರ್ಚಕ ಅಗ್ರಹಾರ'ವಾಗಿ ತಮ್ಮಡಿಹಳ್ಳಿಯೆ ಆದರೂ ಹಾಗೆ ಪ್ರತಿನಾಮಧೇಯವಾಗಲಿಲ್ಲವಷ್ಟೆ. ಆದರೆ ಈ ಹೊತ್ತಿಗೆ ಅವರು ವೀರಶೈವರ ಪ್ರಭಾವಕ್ಕೊಳಗಾಗಿ ಪೂರ್ವ ಪರಂಪರೆಯನ್ನು ಬಿಡದೆ ಲಿಂಗಧಾರಿ ತಮ್ಮಡಿಗಳೇ ಆಗಿದ್ದರೆನಿಸುತ್ತದೆ. ಉಯ್ಯಂಬಳ್ಳಿ ಸ್ಥಳದ ಶಂಕರೇಶ್ವರ ಹಾಗೂ ಮಾರಿಗುಡಿಗಳಿಗೆ ಅವರ ವಂಶೀಕರು ಇಂದಿಗೂ ನಡೆದುಕೊಳ್ಳುತ್ತಿದ್ದಾರೆಂದರೆ ಜನಪದ ಗಾದೆಯಲ್ಲಿರುವಂತೆ ಮಾರಿಗುಡಿಯ ಅರ್ಚಕರಾಗಿಯೂ ಪೂಜಾಚಾರ ನಡೆದಿರುವಂತಿದೆ. ಅವರ 'ಮತಾದರ್ಶಿ' ಗ್ರಂಥದಲ್ಲಿ ವೀರಭದ್ರ ಹಾಗೂ ತಮ್ಮಡಿಗಳ ಲಿಂಗಧಾರಣ ಸ್ಥಾನ ಏಕಸ್ಥಾನವಾಗಿರುವುದರಿಂದ ಅವರು ರುದ್ರಾಂಶಜರೆನ್ನಲಾಗಿದೆಯಷ್ಟೆ. ಇದರಿಂದ ಅವರು ಪೂಜಿಸುವ 'ಮಾರಿ' ಎನ್ನಲಾದ ದೇವತೆ ವೀರಭದ್ರಸತಿ ಭದ್ರಕಾಳಿಯೂ ಅವಳ ಅಂಶಜನಿಳಾಗಿರುವ ದೈವವಾಗಿರಬೇಕೆನಿಸುತ್ತದೆ.

ಕ್ರಿ.ಶ. ೧೫೫೮ರ ಮುದ್ದೇನಹಳ್ಳಿ ಶಾಸನದಲ್ಲಿ[೩] ಚಂಗಾಳ್ವರಸ ಬೆಟ್ಟದ ಮೇಲಣ ವೀರೇಶ್ವರ ದೇವರ ಅಂಗರಂಗ ಭೋಗಕ್ಕೆ ಕಲ್ಲುಮಠದ ಧರ್ಮಾತ್ತ ಮಾಡಿದ ವಿವರ ನೀಡುವಲ್ಲಿ ಅಲ್ಲಿನ ಗ್ರಾಮಾಧಿಕಾರಿ 'ತಂಡಿಗಳು' ನೀಡಿದ ಎಂದಿದೆ. ಅದು ತಂಮಡಿಗಳ ಗದ್ದೆ ಉತ್ಪನ್ನದಿಂದ ದೇವರಿಗೆ ಅಥವಾ ತಮ್ಮಡಿಗಳ ವಂಶವಿಲ್ಲದೆ ಹೋದಾಗ ಅವರ ಭಾಗಕ್ಕಿದ್ದ ಸ್ಥಿರಾಸ್ತಿ ದೇಗುಲಕ್ಕೆ ಹೋಗುತ್ತಿದ್ದ ಸೂಚನೆ ಇದಾಗಿದೆ. ತಮ್ಮಡಿಗಳಿಗೆ ಕೊಡುತ್ತಿದ್ದ ದಾನದ ಯಾವುದೇ ಬಗೆಯಾಗಲಿ ಅದು ಅವರು ನಡೆಸುತ್ತಿದ್ದ ದೇಗುಲ ಪೂಜಾಚಾರ ಹಾಗೂ ಜೀವನ ನಿರ್ವಹಣೆಗೆ ಮೀಸಲಾಗಿತ್ತು ಎಂಬುದು ಇದರಿಂದ ತಿಳಿಯುತ್ತದೆ.

ವಿಜಯನಗರಕಾಲದ ನಿರ್ವಹಿತ ತಮ್ಮಡಿಗಳ ಸಂಬಂಧ ವಿಧಿ ವಿಧಾನಗಳು ೧೮ನೇ ಶತಮಾನದಲ್ಲಿಯೂ ಮುಂದುವರೆದುದು ತಿ.ನರಸೀಪುರದ ಶಾಸನಗಳಿಂದ ತಿಳಿಯುತ್ತದೆ. (ತಿ.ನ.೧೬. ಕ್ರಿ.ಶ. ೧೭೪೯) ವಳಗೆರೆ ತಮ್ಮಡಿ ಲಿಂಗವಡೇರ ಹೊಲ ಗದ್ದೆಗಳು ಅವರ ಸ್ಥಾನಿಕ ಪರಂಪರೆಯಿಂದ ಬಂದುದಾಗಿತ್ತು. ಆದರೆ ಕೃಷ್ಣರಾಜ ಒಡೆಯರ ಕಾಲದಲ್ಲಿ ದಳವಾಯಿ ದೇವರಾಜಯ್ಯನು ೧೪ ಗ್ರಾಮ ಸೇರಿ ತಮ್ಮಡೀಗದ್ದೆ ಉತ್ಪತ್ತಿ ಕೂಡಿದಂತೆ, ರಾಮಚಂದ್ರಾಪುರ ಅಗ್ರಹಾರ ಮಾಡಿ ದಾನ ನೀಡಿರುವುದನ್ನು ನೋಡಿದರೆ ಅವರ ಪಾರಂಪರಿಕ ಹಕ್ಕುಗಳೆಲ್ಲ ಕಸಿಯಲ್ಪಟ್ಟವು ಎನಿಸುತ್ತದೆ. ತಂಮಡಿ ಕೆಂಪಯ ಮಾರೆಯರು ಮಲ್ಲಿಕಾರ್ಜುನ ದೇವರಿಗೆ ಸೇವೆ ಮಾಡಿಸಿರುವದನ್ನು (ಚಾಮರಾಜನಗರ ೭೪ - ಕುದೇರು - ೧೮ನೇ ಶತಮಾನ) ಗಮನಿಸದರೆ, ಅವರು ಅಕೇಶ್ವರನಲ್ಲದೆ, ಶಿವನ ವಿವಿಧ ನಾಮದ ದೇವರುಗಳಿಗೂ ನಡೆದುಕೊಳ್ಳುತ್ತಿದ್ದಿರಬೇಕು.

ಸಾಹಿತ್ಯೋಕ್ತ ಆಕರಗಳು

ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟು, ಕಿಟ್ಟೆಲ್ ನಿಘಂಟು ಕೂಡ ತಮ್ಮಡಿಗಳ ಕುರಿತು ಸಾಹಿತ್ಯೋಲ್ಲೇಖಗಳನ್ನು ಕೆಲಮಟ್ಟಿಗೆ ಮಾಡಿವೆ. ವಿವಿಧ ಕಾವ್ಯ, ಪುರಾಣ, ವಚನಗಳಲ್ಲಿ ತಮ್ಮಡಿಗಳು ಉಕ್ತರಾಗಿರುವುದನ್ನು ನೋಡಿದರೆ ಅವರ ಬದುಕು, ಜೀವನವಿಧಾನ, ಸಂಸ್ಕೃತಿ ಸಮಾಜದಲ್ಲಿ ಬಹಳ ಪ್ರಭಾವಯುತವಾಗಿ ಕಾಣಬರುತ್ತಿದ್ದವೆನ್ನಬೇಕು.

ಕ್ರಿ.ಶ. ೧೦೩೧ರ ದುರ್ಗಸಿಂಹನ ಪಂಚತಂತ್ರದಲ್ಲಿ ತಮ್ಮಡಿಗೆ ಮೊರೆವ್ ಶ್ವಾನಂ ದಮ್ಮಿ (ಧರ್ಮಿ)ಯನೇಕೆ ಬಾವಿಲಿತ್ತೆಪುದು ಎನ್ನುವಲ್ಲಿ ಯಜಮಾನನಿಗೆ ವಿಧೇಯವಾದರೆ ತಮ್ಮಡಿಗೆ ವಿಧೇಯ ಎನ್ನುವಂತಿಲ್ಲ. ಕ್ರಿ.ಶ. ೧೩೦೦ರ ಸುಮಾರಿನ ನಾಚಿರಾಜನ 'ನಾಚಿರಾಜೀಯ'ದಲ್ಲಿ ತಮ್ಮಡಿಯನ್ನು ಕೇವಲ ಪೂಜಾರಿ, ಅರ್ಚಕ ಎಂದು ಪರಿಭಾವಿಸಲಾಗಿದೆ. ಕ್ರಿ.ಶ. ೧೨೨೫ರ ಸುಮಾರಿನ ರಾಘವಾಂಕನ ಸಿದ್ಧರಾಮ ಪುರಾಣದಲ್ಲಿ: 'ಆದಿಯೊಳು ಕಂಡ ನವಣೆಯ ಕೆಯ್ಯ ತಮ್ಮಡಿಯ ಹೆಸರಕೊಂಡ... ಗುರುಮೂರ್ತಿಯ ಆ ಬಳಿಕ್ಕೊಂದಿತು ಹದಿನೇಳು ಯೋಗಲಿಂಗಗಳನು ನಿರ್ಮಿಸಿದನು' ಎಂದಿರುವಾಗ ತಮ್ಮಡಿಯ ಬೇಸಾಯ ಮೂಲವನ್ನು ಹೇಳಿ ನಂತರ ತನಗೆ ತಾನೆ ಆಧಾರವಾಗುವ ಕುಂಡಲಿನೀ ಶಕ್ತಿಯ ಯೋಗಲಿಂಗವನ್ನು ನಿರ್ಮಿಸಿದ ಎಂದಿದೆ. ಅಂದರೆ ಶೈವದಿಂದ ವೀರಶೈವಕ್ಕೆ ಬಂದ ಸೂಚನೆಯನ್ನು ಇಲ್ಲಿ ನೀಡಿದಂತಿದೆ. ತಮ್ಮಡಿಯೂ ಹೀಗಾದನೆಂಬ ಧ್ವನಿ ಇಲ್ಲಿರುವಂತಿದೆ. ಕ್ರಿ.ಶ. ೧೨೨೫ರ ಸುಮಾರಿನ ವೀರಶೈವ ಕವಿ ಸೋಮರಾಜನ ಉದ್ಭಟ ಕಾವ್ಯದಲ್ಲಿ: 'ಕವಾಟಂ ಬಂಧಿಸಿ ಪಿರಿದು ಬೀಯಗ್ ನಿಕ್ಕಿದರ್ ತಮ್ಮಡಿಗಳ್' ಎಂದಿರುವಾಗ ದೇಗುಲದ ಹೊಣೆಯ ಸ್ಥಾನಿಕ ಪಿರಿಯ ಅರ್ಚಕ ಎಂಬರ್ಥವಿರುವಂತಿದೆ ಹಿಮಾಲಯದ ವೀರಶೈವ ಪಂಚಪೀಠಗಳೊಲ್ಲೊಂದಾದ ವೈರಾಗ್ಯ ಸಿಂಹಾಸನವೆನಿಸಿರುವ ಕೇದಾರ ಪೀಠದ ಜಗದ್ಗುರುವಾಗಲು ಮೊದಲಿಗೆ ಮೋಳಿಗೆ ಮಾರಯ್ಯನ ವಚನದಲ್ಲಿ: 'ಪೂಜಿಸುವ ತಮ್ಮಡಿ ಲಿಂಗವಾದುದ ಕಂಡೆ' ಎಂಬ ಸಾಲು ವೀರಶೈವ ಪರಿಭಾಷೆಯಲ್ಲಿ ತಮ್ಮಡಿಯ ಲಿಂಗೈಕ್ಯನಾದ ಎಂದು ಹೇಳಿದಂತಿದೆ. ಶೈವ ತಮ್ಮಡಿ ವೀರಶೈವ ತಮ್ಮಡಿಯಾದ ಎಂಬರ್ಥ ಇಲ್ಲಿದೆ. ಕ್ರಿ.ಶ. ೧೬೭೭ರ ಸುಮಾರಿನ ಷಡಕ್ಷರ ದೇವನ ವೃಷಭೇಂದ್ರ ವಿಜಯದಲ್ಲಿ: 'ಗುಡಿಯ ಗೋಪುರಮಂ ಕೆಡಪಿ ತಮ್ಮಡಿಯಂ ಜಡಿಯಲು' ಎನ್ನುವಲ್ಲಿ ವಿಧರ್ಮೀಯರು ಅಥವಾ ಪರಸಮಯಿಗಳು ಶಿವದೇಗುಲವನ್ನು ಹಾನಿಗೊಳಿಸಿ, ತಮ್ಮಡಿಯನ್ನು ಹಿಂಸಿಸಿದರು ಎಂಬರ್ಥ ಒದಗಿ ತಮ್ಮಡಿಗಳಿಗೆ ಒದಗಿದ ಪರಿಸ್ಥಿತಿ, ಕುಸಿದ ಪ್ರಭಾವದ ಚಿತ್ರವನ್ನು ನೀಡುತ್ತದೆ; ಭೀಮಕವಿಯ ಕ್ರಿ.ಶ. ೧೩೬೯ರ ಸುಮಾರಿನ ಭಾಮಿನಿ ಷಟ್ಪದಿಯಲ್ಲಿ ರಚಿತವಾದ ಬಸವ ಪುರಾಣದಲ್ಲಿ: 'ಕಣ್ಣಪನ ಮನದ ವಿರಳಪ್ರಿಯಭಕ್ತಿಯಂ, ಮುಗ್ಧ ಸ್ವಭಾವವನು ಭವಹರ ತಾಂ ತಮ್ಮಡಿಗೆ ತೋರುವೆನೆನುತ ಎಂದಿದ್ದಾನೆ. ಬೇಡರ ಕಣ್ಣಪ್ಪನ ಶುದ್ಧವಾದ ಮುಗ್ಧಭಕ್ತಿ ಪ್ರಾಮಾಣಿಕವಾದುದು; ಆದರೆ ಶುದ್ಧ ಶಿವಾರ್ಚಕನೆಂದುಕೊಳ್ಳುವ ತಮ್ಮಡಿಯ ಅರ್ಚನೆ ಯಾಂತ್ರಿಕವಾಗಬಾರದು ಎಂದ

ಶಿವನ ಪರೀಕ್ಷಾಭಕ್ತಿಯ ಚಿತ್ರವಿಲ್ಲದೆ ಅಂದಿನ ತಮ್ಮಡಿಗಳು ಬರಿ ಗುಡಿಯ ಶಿವಲಿಂಗದ ಕೇವಲ ಅರ್ಚಕರಾಗಿದ್ದರು ಎಂದು ಹೇಳುತ್ತಲೆ ಅದೇ ಗುಡಿಯ ಶಿವಲಿಂಗವು ವೀರಶೈವ ಪ್ರಣೀತವಾದಾಗ ಕಣ್ಣಪ್ಪನ ಶುದ್ಧ ಮುಗ್ಧ ಭಕ್ತಿಯಂತಿದ್ದು, ಸರ್ವೈಕ್ಯಭಾವವಿರುತ್ತದೆ. ಶರಣರು ಮೆಚ್ಚಿದ್ದು, ಆಚರಿಸಿದ್ದು ಇಂಥ ವ್ಯಕ್ತಿತ್ವ ಎಂಬ ಧ್ವನಿ ಕಾವ್ಯದ ಸಾಲಿನಲ್ಲಿದೆ; ಕ್ರಿ.ಶ. ೧೪೨೦ರ ಸುಮಾರಿನ ಕುಮಾರವ್ಯಾಸನು ಭಾರತ ಕಥಾಮಂಜರಿಯ ಅರಣ್ಯಪರ್ವತದಲ್ಲಿ ೬ನೇ ಸಂಧಿಯ ೨ನೇ ಪದ್ಯದಲ್ಲಿ (ರಾಜ್ಯ ಸರ್ಕಾರದ ಪ್ರಕಟಣೆ) ಕಿರಾತಶಿವನು ಭಕ್ತ ಅರ್ಜುನನ ಮನದ ಧೃತಿಯನ್ನು ಪರೀಕ್ಷೆ ಮಾಡವಲ್ಲಿ ಹೇಳಿಸಿರುವ ಮಾತು: 'ಇದೇನು ತಮ್ಮಡಿ ನಿನಗೆ ತಪದಲ್ಲಿ ಖಡ್ಗವೇಕೇಧನು ಶಿರವಾಳಯೇಕೆ ನಿನ್ನಂಗ ಏಣಿ ಯೇನೆಂದ - ಇಲ್ಲಿ ಅರ್ಜುನನು ಕ್ಷತ್ರಿಯನಾದರೂ, ಮುನಿವೇಷಿಯಾಗಿ ಶಿವನ್ನೊಲಿಸಿಕೊಳ್ಳಲು ಬಂದ ಭಕ್ತ; ಶಿವಾರ್ಚಕ ತಪಸ್ವಿ. ಹೀಗಾಗಿ ತಮ್ಮಡಿ ಎಂದರೆ ಶುದ್ಧ ಪ್ರಾಮಾಣಿಕ ಮುಗ್ಧಭಕ್ತನಾಗಿ ಶಿವನನ್ನು ಆರಾಧಿಸಬೇಕಾದವ ಎಂಬ ಭಾವ. ಇದು ವಿಜಯನಗರ ಕಾಲದಲ್ಲಿ ಸಾಹಿತ್ಯಕವಾಗಿ ಎದ್ದು ಕಾಣಬೇಕಿದ್ದ ಭಾವವಾಗಿತ್ತು. ಹಾಗಾಗಿ ಅವರಿಗೆ ಕೊಡುತ್ತಿದ್ದ ದಾನ, ಪ್ರೋತ್ಸಾಹ ಕೂಡ ಹೆಚ್ಚಳಗೊಂಡಿತ್ತು. ಭೀಮಕವಿ ಹಾಗೂ ಕುಮಾರ ವ್ಯಾಸರಲ್ಲಿ 'ಲಾಂಛನಕ್ಕೆ ಶರಣೆಂಬೆ, ಲಾಂಛನಕ್ಕೆ ತಕ್ಕ ಆಚಾರವಿಲ್ಲದಿರ್ದೊಡೆ ಛೀ ಎಂಬೆ' ಎಂಬ ಬಸವಣ್ಣನ ವಚನದ ಪ್ರಭಾವ, ಕಾವ್ಯದ ಸಾಲುಗಳಲ್ಲಿನ ಅಂತರ್ಗಾಮಿ ಧ್ವನಿಯಾಗಿ ಕಾಣುವಂತಿದೆ; ಸಮಾರು ೧೬-೧೭ನೇ ಶತಮಾನದ ಕೌಶಿಕ ರಾಮಾಯಣದಲ್ಲಿ: 'ಜಡೆಯ ಹೊತ್ತುದೋ ಸಿಡಿಲು ಶಿವಶಿವ ವಡಬ ತಮ್ಮಡಿಯಾದನೆ?' ಎಂದಿರಲು, ತಮ್ಮಡಿಯ ಒಂದು ತೀವ್ರ ಕ್ರೋಧದ ಚಿತ್ತತ್ತಿದ್ದ ಪದ್ಧತಿ ಇತ್ತೆಂದು ತೋರುತ್ತದೆ. ಶಿವನ ಕ್ರೋಧ ಜಟಾ ಸಂಭವನಾದವ ವೀರಭದ್ರ ಎಂಬ ಪೌರಾಣಿಕ ಕತೆಯೇ ಇದೆ. ತಮ್ಮಡಿಯೂ ವೀರಭದ್ರನಂತೆ ಲಿಂಗಧಾರಣ ವಾಕಸ್ಥಾನಿ. ಹೀಗಾಗಿ ವೀರಭದ್ರನ ಶೂರಾರ್ಭಟದಂತೆ ಅಗ್ನಿ ಉಗುಳುವಂತೆ (ಸಮುದ್ರಾಗ್ನಿ) ಸಿಟ್ಟುಗೊಂಡವನಾದ ಚಿತ್ರವಿಲ್ಲಿದೆ. ಸಮುದ್ರದಂತೆ ಶಾಂತನಾಗಿರುವವನು ಜಟೆ ಬಡಿದು ವಡಬಾಗ್ನಿ ಕ್ರೋಧ ತೋರಿದ ಎಂಬರ್ಥ ತೆಗೆದುಕೊಂಡರೆ ಅವನ ನೀಳ ಜಟೆಯ ಸೂಚನೆಯೇ ಸಿಗುತ್ತದೆ ಮತ್ತು ೧೨ನೇ ಶತಮಾನದ ಶಾಸನ ಶಿಲ್ಪಗಳಲ್ಲಿ ಕಂಡುಬರುವ ಕೈಲಾಸ ದೃಶ್ಯದ ನೀಳ ಜಟೆಯ ಅರ್ಚಕ ಕಾಳಾಮುಖ ಶೈವರ ಪೈಕಿ ಎನ್ನಲಾಗುತ್ತಿದೆ. ಕೌಶಿಕ ರಾಮಾಯಣದ ಚಿತ್ರಣ ಗಮನಿಸಿದರೆ ಅಂಥ ಜಟೆಯ ಅರ್ಚಕರು ಬಹುಶ: ಅವನ ಕಾಲಕ್ಕೂ ಇದ್ದಿರಬೇಕು ಎನಿಸುತ್ತದೆ. ಅಂತಾಗಿ ೧೧ನೇ ಶತಮಾನದ ನೀಳಜಟೆಯ ಅರ್ಚಕ ಶಿಲ್ಪಗಳು 'ತಮ್ಮಡಿ'ಗಳದಾಗಿರಬಹುದೆನಿಸುತ್ತದೆ. ಹೀಗೆ ಸಾಹಿತ್ಯಕ ಆಕರಗಳೂ 'ತಮ್ಮಡಿ'ಗಳ ಏಳು ಬೀಳುಗಳನ್ನು ಚಿತ್ರಿಸಿವೆ ಎನ್ನಬೇಕು.

ಜನಪದದಲ್ಲಿ ಗಾದೆಯಾಗಿ ಬಂದಿರುವ 'ತನಗೇ ಇಲ್ಲದ ಮಾರಿ ತಮ್ಮಡಿಗೆ ವರ ಇಟ್ಟಿತೆ?' ಎಂಬ ಮಾತಿನಲ್ಲಿ ತಮ್ಮಡಿಯ ಸ್ಥಾನ ಸಾಮಾನ್ಯಗೊಂಡುದುದರ ಸಂಕೇತವಿದೆ. ಮಾರಿಯ ಪೂಜೆಯನ್ನೇ ಮರೆತ ಜನರು ತಮ್ಮಡಿಯ ಗತಿಯನ್ನು ಎಲ್ಲಿ ಯೋಚಿಸುತ್ತಾರೆ?

ಎಂಬ ಸೂಚ್ಯಾರ್ಥವಿಲ್ಲಿದೆ. ವೀರಭದ್ರನ ಆರಾಧಕರೂ ಆಗಿದ್ದು ವೀರಗಾಸೆಕಟ್ಟಿ (ಕಾಸೆ) ಬಸವಣ್ಣನನ್ನು ಸ್ಮರಿಸಿ ಖಡ್ಗವನ್ನು ಹೇಳುವ ವೀರಗಾಸಿಗಳೂ ಅವರಲ್ಲಿದ್ದಾರೆ.[೩೪] ವಿಜಯನಗರ ಕಾಲದಲ್ಲಿ ವೀರಭದ್ರ ಆರಾಧನೆ, ವೀರೋತ್ಸಾಹಗಳಿಗೆ ಹೆಚ್ಚಿನ ಒತ್ತು ಸಿಕ್ಕಿತು. ಬಹುಶಃ ತಮ್ಮಡಿಗಳೂ ವೀರಗಾಸಿ ಕಾಯಕದಲ್ಲಿ ಆಗ ಹೆಚ್ಚು ತೊಡಗಿಕೊಂಡಂತಿದೆ. ಇದಕ್ಕೆ ಕಾರಣವೂ ಇದೆ. ಅವರು ಅರ್ಚಕ ವರ್ಗದವರಾಗಿ ವೀರಭದ್ರ ಹಲಗೆಯನ್ನು ಕೊಂಡ ಹಾಯುವಲ್ಲಿ ಒಯ್ಯಬೇಕಾದ ಸಂಪ್ರದಾಯವಿದೆ. ಅವರ ಹಿಂದೆ ವೀರಗಾಸಿಗಳೂ ಬರಬೇಕು. ವೀರಭದ್ರ ಪ್ರತಿಷ್ಠೆ ನಡೆಯುವಡೆಯಲ್ಲಿ ಅಗ್ನಿಕೊಂಡ ಹಾಯುವಿಕೆ ಜೊತೆಗೂಡುವ ಸಂಪ್ರದಾಯ. ಇದರಲ್ಲಿ ವೀರಶೈವ ಪರಂಪರೆ ಇದೆ. ೧೨ನೇ ಶತಮಾನಾನಂತರ 'ತಮ್ಮಡಿ'ಗಳೂ ಅದರ ಪ್ರಭಾವಕ್ಕೆ ಒಳಗಾದರು. ಹೀಗಾಗಿ ಪೂರ್ವ ಸಂಪ್ರದಾಯದ ಜನಿವಾರ, ವೀರಶೈವದ ಶಿವದಾರ ಎರಡು ಪದ್ಧತಿಗಳೂ ಅಳವಟ್ಟವು. ಅದು ಒಂದು ರೀತಿಯಲ್ಲಿ ಶುದ್ಧಶೈವ ಶಿವಾರ್ಚಕ ತಮ್ಮಡಿಗಳು, ವೀರಶೈವ ತಮ್ಮಡಿಗಳು (ಲಿಂಗಧಾರಿ) ಎಂಬ ವರ್ಗಗಗಳನ್ನು ಸೃಷ್ಟಿಸಿದರೂ ಪರಸ್ಪರ ಸನಿಹವೇ ಇದ್ದಾವೆ. ಹೀಗಾಗಿ ಸೋಗಾಲ ಸೋಮೇಶ್ವರ, ನೆರಲೂರು ವೈದ್ಯೇಶ್ವರ, ಕೆರಗುಪ್ಪೆ ಪಂಚಲಿಂಗೇಶ್ವರ, ಗುತ್ತಲು ಅರ್ಕೇಶ್ವರ ಮುಂತಾದ ಶಿವಮೂರ್ತಿಗಳು ಇಂದೂ ಅವರ ಮನೆದೇವರುಗಳಾಗಿವೆ.[೩೫]

ಶಿಲ್ಪಗಳಲ್ಲೂ ತಮ್ಮಡಿಗಳಿದ್ದಾರೆಂದರೆ ಮೇಲೆ ಸೂಚಿಸಿದಂತೆ ಶಾಸನ ಶಿಲ್ಪಗಳಲ್ಲಿನ ನೀಳಜಟೆಯ ಅರ್ಚಕರಲ್ಲಿ ಅವರಿರಬಹುದು ಎಂಬುದು ಒಂದು ಮಾತು; ಕೆಳದಿ ವೀರಭದ್ರನ ಗುಡಿಯ ಒಳಜಗತಿ ಆವರಣದ ಹಾಸು ಚಪ್ಪಡಿಯಲ್ಲಿ, ಧ್ವಜಸ್ತಂಭದ ಮುಂದಿನ ಪ್ರವೇಶದ್ವಾರ ದಾಟಿದ ತಕ್ಷಣ ಕಾಣುವ ಶಾಸನೋಕ್ತನಾಮ 'ತಂಮಡಿ ವಿರಪ್ಪ' ಎಂದು ಕಂಡರಣೆ ಇದೆ; ಅವನ ರೇಖಾಶಿಲ್ಪವೂ ಇದೆ. ಕೆಳದಿ ಅರಸರ ಕಾಲದ ವೇಷಭೂಷ ಧರಿಸಿ ಪ್ರಣಾಮ ಸ್ಥಾನಕ ಪಾರ್ಶ್ವಮುಖ ಭಂಗಿಯಲ್ಲಿರುವ ಇವನು ಕೆಳದಿ ಅರಸರಲ್ಲಿ ದಳವಾಯಿಯೂ ಆಗಿದ್ದ ಇವನ ರೇಖಾಶಿಲ್ಪವು ವೀರಭದ್ರಗುಡಿಯ ಅಂತರಾಳದ ಮುಂದಿನ ಜುಗತಿ ಅಂಗಳದಲ್ಲಿ ರಂಗಮಂಟಪ - ಭೋಗಮಂಟಪ ಸರಿ ಎದುರಾಗಿ ದೇವರ ಪಾದದ ಅಡಿ ರೇಖೆ ಆಕೃತಿ ಬಿಡಿಸಿಕೊಳ್ಳುವ ಭಕ್ತರಂತೆ, ಕಂಡರಣೆಗೊಂಡಿದೆ. ಇವನ ಹೆಸರು ದೇವರೆದುರಿನ ನಮನಭಂಗಿ ಇವನ್ನೆಲ್ಲ ಗಮನಿಸದರೆ, ವೀರಭದ್ರನ ಒಕ್ಕಲಾಗಿ, ವೀರಭದ್ರ ಅರ್ಚಕರ ವಂಶಿಕನಾಗಿದ್ದಂತೆ ತೋರುತ್ತದೆ. ಈ ವೀರಭದ್ರ ಪ್ರತಿಷ್ಠೆಯನ್ನು ಮಾಡಿದವ ಕೆಳದಿಯ ದೊರೆ ದೊಡ್ಡ ಸಂಕಣ್ಣನಾಯಕ (ಕ್ರಿ.ಶ. ೧೫೪೬-೧೫೫೯)[೩೬] ವಿಜಯನಗರಕಾಲದವ. ಇಮ್ಮಡಿ ಸೋಮಶೇಖರ ನಾಯಕನ ಕಾಲದಲ್ಲಿ (ಕ್ರಿ.ಶ. ೧೭೧೫-೧೭೪೦) ಈ ವೀರಭದ್ರನಿಗೆ ಕೆಂಡದರ್ಚನೆ ಯರ್ಪಿಸುವುದು (ಅಗ್ನಿಕೊಂಡ) ವ್ಯವಸ್ಥೆ ಮುಂದುವರಿದ ಬಗ್ಗೆ ಸೂಚನೆಯನ್ನು ಕೆಳದಿ ನೃಪವಿಜಯ ನೀಡುತ್ತದೆ.[೩೭] ಇದರಿಂದ ದೊಡ್ಡ ಸಂಕಣ್ಣನಾಯಕನ ಕಾಲದಿಂದ ಚೆನ್ನಮ್ಮಾಜಿ ಹಿರಿಯ ಬಸಪ್ಪನಾಯಕ, ಇಮ್ಮಡಿ ಸೋಮಶೇಖರ ನಾಯಕನ ಕಾಲದವರೆವಿಗೂ ವೀರಭದ್ರ ಪ್ರಾಮುಖ್ಯ ಮುಂದುವರಿದೇ

ಬಂದುದು ಸಾಹಿತ್ಯ ಹಾಗೂ ಶಿಲ್ಪ ಆಕರಗಳಿಂದ ಹೀಗೆ ಸೂಚಿತವಾಗುತ್ತದೆ. ಸದ್ಯ ತಂಮಡಿ ವೀರಪ್ಪನ ರೇಖಾಶಿಲ್ಪವು ೧೭-೧೮ ಶತಮಾನದ್ದು.[೩೮] ಅದಾಗಿ ವೀರಭದ್ರನ ಅರ್ಚಕರಾಗಿ ವೀರಶೈವ ತಮ್ಮಡಿಗಳು ದೊಡ್ಡ ಸಂಕಣ್ಣನಾಯಕನ ಕಾಲದಿಂದಲೇ ಇಲ್ಲಿ ನೇಮಿತರಾದಂತಿದೆ. ಇದ್ದಕ್ಕಿದ್ದಂತೆ ಒಬ್ಬ ತಮ್ಮಡಿ ಅದು ದಳವಾಯಿ ಪದವಿಗೇರಿದವನು ಕೆಳದಿಯ ರಾಜರ ಕುಲದೇವರ ಮುಂದೆ ಕಾಣಿಸಿಕೊಳ್ಳಲು ಸಾಧ್ಯವಿಲ್ಲ. ಅದಾಗಿ ಆ ತಮ್ಮಡಿಗಳ ವಂಶಿಕನಾಗಿ ಅವನು ಸ್ಥಾನಿಕನೂ ಆಗಿರಲು ಸಾಕು. ರೇಖಾಶಿಲ್ಪದಲ್ಲಿಯ ಅಧಿಕಾರಿ ವೇಷ ಅದರ ಸೂಚನೆ ನೀಡುವಂತಿದೆ. ಇದಲ್ಲದೆ ಕ್ರಿ.ಶ. ೧೬೮೧ರಲ್ಲಿ ವೀರಭದ್ರ ದೇಗುಲದ ಮುಂದೆ ಕೆಳದಿ ದೇವಮ್ಮಾಜಿ ಶಾಸನೋಕ್ತವಾಗಿ ನಿಲ್ಲಿಸಿದ ಧ್ವಜಸ್ತಂಭ ಕೋಷ್ಠದಲ್ಲಿ (ಗಣಪತಿ ಶಿಲ್ಪದ ಕೆಳಗೆ) ೫ ವ್ಯಕ್ತಿ ಶಿಲ್ಪಗಳಿವೆ. ಅವುಗಳು ಕೆಳದಿ ಚೆನ್ನಮ್ಮಾಜಿ, ಮರಿಚೆನ್ನಮ್ಮಾಜಿ, (ಇನ್ನೊಬ್ಬ ಸಾಕುಪುತ್ರಿ) ಚನ್ನಮ್ಮಾಜಿಯ ದತ್ತುಪುತ್ರ ಹಿರಿಯ ಬಸಪ್ಪನಾಯಕ (ಅದು ಈವರೆಗೆ ಭಾವಿಸಿದ್ದಂತೆ ಶಿವಾಜಿಯ ಪುತ್ರ ರಾಜಾರಾಮನ ವ್ಯಕ್ತಿ ಶಿಲ್ಪವಲ್ಲ) ಮನೆವಾರ್ತೆ ಹುದಾರ ವೀರಪ್ಪ ಎಂದು ಸಾಧಿಸಲಾಗಿದೆ.[೩೯] ಕಾರಣ ಕುಲದೇವರು-ಮನೆದೇವರಾದ ವೀರಭದ್ರನ ಮುಂದೆ ಶಿಲ್ಪಗೊಳ್ಳುವವರು ಆಯಾ ವಂಶಿಕರು, ಒಕ್ಕಲುಗಳೇ ವಿನಾ ಅನ್ಯರಲ್ಲ. ಈ ಮನೆವಾರ್ತೆ ಹುದಾರ ವೀರಪ್ಪ ಯಾರು?

ಆರ್.ಶಾಮಾಶಾಸ್ತ್ರಿ ಸಂಪಾದಿತ ಕೆಳದಿ ನೃಪವಿಜಯವನ್ನು ಆಧರಿಸಿ ದಾಖಲಿಸಿರುವ ಕೆಳದಿ ಅರಸರ ಸಚಿವರು, ಅಧಿಕಾರಿಗಳ ಪಟ್ಟಿಯಲ್ಲಿ 'ಮನೆವಾರ್ತೆ ಹುದಾರ ವೀರಪ್ಪ'ನ ಹೆಸರಿನ ನಮೂದು ಇದೆ. ಹಿರಿಯ ಬಸಪ್ಪನಾಯಕ (೧೬೯೮-೧೭೧೫), ಇಮ್ಮಡಿ ಸೋಮಶೇಖರ; ನಾಯಕನ ಕಾಲದಲ್ಲಿ ಇವನನ್ನು ನಮೂದಿಸಲಾಗಿದೆ. ಧ್ವಜಸ್ತಂಭಕೋಷ್ಠ ದಲ್ಲಿ ಹಿರಿಯ ಬಸಪ್ಪನಾಯಕನ (ರಾಜ ಠೀವಿಯ) ಪಕ್ಕದಲ್ಲಿ ರಾಜಗೌರವದ ಸಂಕೇತಗಳನ್ನು ಹಿಡಿದ ದಂಢಧಾರಿ ನಿಂತಿದ್ದಾನೆ. 'ಮನೆವಾರ್ತೆ ಹುದಾರ'ನ ಕಾರ್ಯ ಖಾಸಾ ಸನ್ನಿಧಿ ಊಳಿಗದ ಜಮಾಧಾರನಂತೆಯೇ ಖಾಸಾರಹಸ್ಯದ ಆಪ್ತ ಕಾರ್ಯದರ್ಶಿ-ರಾಯಭಾರಿಯಂತೆ ಇದ್ದಿರುವಂತಿದೆ. ಹೀಗಾಗಿ ಅವನು ರಾಜಮನೆತನಕ್ಕೆ ತೀರ ಹತ್ತಿರದವನೇ. ಹಿರಿಯ ಬಸಪ್ಪನಾಯಕನಲ್ಲಿ ಇವನು ಹೀಗಿದ್ದಿರಲು ಕೆಳದಿ ಚನ್ನಮ್ಮಾಜಿ ಕಾಲಕ್ಕೂ ಮನೆವಾರ್ತೆಯವನಾಗಿ - ರಾಣಿಯ ಆಡಳಿತದಲ್ಲಿ ಬೇಕಾಗಿದ್ದ ಮನೆವಾರ್ತೆ ಊಳಿಗದ ಜಮಾದಾರನಾಗಿ-ಇದ್ದಂತೆ ತೋರುತ್ತದೆ. ಅಂತಾಗಿ ನಿಖರವಾಗಿ ಈರ್ವ ದೊರೆಗಳ ಕಾಲದಲ್ಲಿ ನಮೂದುಗೊಂಡಿದ್ದಾನೆ. ಈ ಮನೆವಾತೇ ಹುದಾರ ಕಾಯಕದವರಾಗಿ ಚೆನ್ನಬಸವ ನಾಯಕನ ಕಾಲದಲ್ಲಿ (೧೭೫೫-೧೭೫೮), ವೀರಮ್ಮಾಜಿ ಕಾಲದಲ್ಲಿ (೧೭೫೮-೬೩) 'ಮನೆವಾರ್ತೆ ಹುದಾರ ವೀರಭದ್ರಯ್ಯ' ಇಮ್ಮಡಿ ಸೋಮಶೇಖರ ನಾಯಕನ ಕಾಲದಲ್ಲಿ (೧೬೬೪-೧೬೭೨) ಹೂದಾರ ಶಾಂತಯ್ಯ ಇದ್ದುದನ್ನು ನೋಡಿದರೆ[೪೦] ಕೆಳದಿ ಅರಸರಲ್ಲಿ ಮೊದಲಿನಿಂದಲೂ ಇದ್ದ ಕಾಯಕ ಸಂಪ್ರದಾಯವೆನಿಸುತ್ತದೆ. ಆದರೆ ಕೆಳದಿ ನೃಪವಿಜಯ ಕಾಲಕ್ಕೆ ಹಿಂದಿನ ಹೆಸರುಗಳು ಸಿಕ್ಕದೆ ಹೋಗಿರುವಂತಿದೆ. (ಆರಂಭದ ಚೌಡಪ್ಪ ನಾಯಕ, ಸದಾಶಿವನಾಯಕರ

ಕಾಲದ ಸಚಿವ-ಅಧಿಕಾರಿಗಳ ಹೆಸುರಗಳ ನಮೂದು ಕಾಣದಿರುವುದೆ ಅದಕ್ಕೊಂದು ಸಾಕ್ಷಿ). 'ಮನೆವಾರ್ತೆ'ಯವರು ಸಚಿವ ದರ್ಜೆ ಅಧಿಕಾರಿಗಳೆನ್ನಲಾಗಿದೆ. ಸದ್ದಿಯ 'ತಂಮಡಿ ವೀರಪ್ಪ'ನ ವೇಷಭೂಷಣವನ್ನು 'ಮನೆವಾರ್ತೆ ಹುದಾರ ವೀರಪ್ಪ'ನದಕ್ಕೆ ಹೋಲಿಸಿದರೆ ಹಾಗೂ ಅವನು ಗಳಿಸಿದ್ದೆ, ಗಳಿಸಿದ ಸ್ಥಾನಮಾನ ನೋಡಿದರೆ ಹೆಸರಿನ ಸಾಮ್ಯವನ್ನು ಗಮನಿಸಿದರೆ ಎರಡೂ ಹೆಸರು ಒಬ್ಬನಿಗೆ ಅನ್ವಯವಾಗಿರುವಂತಿದೆ. ಮನೆವಾರ್ತೆಯವನಾಗಿ ಆ ಮನೆತನದ ಆಚಾರ, ವಿಚಾರ, ಪೂಜೆ, ಪುನಸ್ಕಾರ, ಗೃಹಕೃತ್ಯ ನೋಡಿಕೊಳ್ಳುವ ಹೊಣೆ ಅವನಿಗಿರುತ್ತದೆ. ಅದಾಗಿ ಅಂಥ ಸಂಬಂಧದ ವಂಶದವನೆ ಅವನಾಗಿರಬೇಕು. ಸದ್ಯ ವೀರಭದ್ರಗುಡಿಯ ಪರಿಸರದಲ್ಲಿ ಈ ಅಂಶಗಳೆಲ್ಲ ತಾರ್ಕಣೆಗೊಳ್ಳುವ ಕಾರಣ ಈ 'ವೀರಪ್ಪ' ವೀರಶೈವ ತಮ್ಮಡಿಯಾಗಿ 'ಮನೆವಾರ್ತೆ ಹುದಾರ ವೀರಪ್ಪ' ಎಂದು ಅಧಿಕಾರದ ನಮೂದಿನಲ್ಲಿದ್ದು, ದೇವರ ಎದುರಿಗೆ ಸ್ಥಾನಿಕಭಕ್ತನಾಗಿ 'ತಂಮಡಿ ವೀರಪ್ಪ' ಎಂದು ನಮೂದುಗೊಂಡಿರುವಂತಿದೆ. ಈ ಹಿನ್ನೆಲೆಯ 'ತಮ್ಮಡಿ'ಗಳ ಶಿಲ್ಪಕ್ಕೆ ಒಂದು ನಿಖರ ಉದಾಹರಣೆಯಾಗಿ ಅವನು ಒದಗುತ್ತಾನೆ. ಆದರೆ ೧೧ನೇ ಶತಮಾನದ ತಮ್ಮಡಿ ವೇಷವೇ ಬೇರೆ ೧೭-೧೮ನೇ ಶತಮಾನದ ಅಧಿಕಾರಿ 'ತಮ್ಮಡಿ' ವೇಷವೇ ಬೇರೆ. ಮೊದಲಿಗೆ ಜಟೆ ಇಳಿಬಿಟ್ಟುಕೊಂಡಂತಿದ್ದರೆ ಇಲ್ಲಿ ಎತ್ತಿಕಟ್ಟಿದ ಜಟೆಯಂತಿದೆ ಶಿರೋವೇಷ.

ಒಟ್ಟಾರೆ ತಮ್ಮಡಿಗಳಲ್ಲಿ ಭಾರಶಿವರ ಮೂಲ, ಶುದ್ಧಶೈವ ಶಿವಾರ್ಚಕಮೂಲ, ಜೈನಮೂಲ, ಕಾಳಾಮುಖಶೈವ ಮೂಲ, ವೀರಶೈವ ಮೂಲವನ್ನು ಹೆಕ್ಕಬಹುದು. ಜೈನತಮ್ಮಡಿ, ಶುದ್ಧಶೈವ ತಮ್ಮಡಿ, ವೀರಶೈವ ತಮ್ಮಡಿ, ಸಾಮಾನ್ಯ ತಮ್ಮಡಿ ಎಂದು ಸ್ಥೂಲವಾಗಿ ವಿಂಗಡನೆ ಮಾಡಬಹುದು. ವಿಜಯನಗರ ಕಾಲದಲ್ಲಿ ಅವರಿಗೆ ಸಿಕ್ಕ ಪ್ರಾಧಾನ್ಯ ಮುಂದೆ ಕುಂಠಿತಗೊಂಡಿತು. ಇಂದು ವೀರಶೈವ ಸಂಪ್ರದಾಯಕ್ಕೆ ಹತ್ತಿರದವರಾದರೂ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿದ್ದಾರೆ. 'ಶಿವಾರ್ಚಕ ಸಂಘ'ವನ್ನು ರೂಪಿಸಿಕೊಂಡು, 'ಶಿವದೀಕ್ಷೆ' ಶಿವಾರ್ಚನಾ ತರಬೇತಿ, ಶಿವಚಿಂತನಾ ಶಿಬಿರ ಇತ್ಯಾದಿಗಳನ್ನು ಏರ್ಪಡಿಸುತ್ತಾರೆ. ಅವರಲ್ಲಿ ಹೆಂಗಸರು ಶಿವಲಿಂಗವನ್ನು ಸಂಪುಟ (ಸೆಜ್ಜಿಕೆ)ದಲ್ಲಿಟ್ಟು ಪೂಜಿಸಿ ದೇವರ ಗೂಡಿನಲ್ಲಿಡುತ್ತಾರೆ. ಲಿಂಗಧಾರಿ ಅರ್ಚಕರು ದೇಗುಲ ಪೂಜೆಯಲ್ಲಿ ನಿರತರಾಗುತ್ತಾರೆ. ಈ ಶಿವಚಿಂತಕರು ಶಿವಸಂಸ್ಕೃತಿಯ ಅಂಗವಾಗಿ ಉಳಿದುಕೊಂಡಿದ್ದಾರೆ.

ಆ. ಬೆಂಗಳೂರು ಜಿಲ್ಲೆ ರಾಮನಗರದ ಪರಿಸರದಲ್ಲಿ ಸಂಗಮರಸರ ಮೊದಲ ಸಂಬಂಧಗಳು

ವಿಜಯನಗರದ ಸಂಗಮರಸರನ್ನು ಸಾಮಾನ್ಯವಾಗಿ ಪಂಪಾಪುರಿ ಪರಿಸರ ಭವೇ ಸಂಗಮಾಖ್ಯಾ: ಎನ್ನುವುದುಂಟು. ಪಂಪಾಪುರಿ (ಹಂಪೆಯ) ಪರಿಸರದಲ್ಲಿ ವಂಶಸ್ಥಾಪನೆ ಮಾಡಿಕೊಂಡವರು ಎಂದು ಅರ್ಥೈಸುವುದುಂಟು ತಪ್ಪಲ್ಲ. ಆದರೆ ಅಲ್ಲಿ ಪುನರ್ಜಾತರಾಗಿ ವಂಶಸ್ಥಾಪನೆ ಅಂದರೆ ರಾಜ್ಯ ಸ್ಥಾಪನೆ ಮಾಡಿದರು ಎಂಬುದು ಹೆಚ್ಚು ಅರ್ಥಪೂರ್ಣವಾಗಬಹುದು. ಕಾರಣ ಹಂಪೆಯ ಪ್ರದೇಶದಲ್ಲಿ ರಾಜ್ಯ ಸ್ಥಾಪನೆ ಮಾಡುವ

ಮುನ್ನ ಅವರ ಹೊಯ್ಸಳರ ಮಾಂಡಲಿಕರಾಗಿ, ಕಾಕತೀಯ ಭಂಡಾರಿಗಳಾಗಿ, ಕಂಪಿಲನ ಅಧಿಕಾರಿಗಳಾಗಿ ಇದ್ದುದು ಇತಿಹಾಸದಲ್ಲಿ ವರ್ಣಿತಗೊಂಡಿರುವ ವಿಷಯವಾಗಿದೆ. ಅಲ್ಲದೆ ಕೆಲವೆಡೆ ಅವರು ೧೪ನೇ ಶತಮಾನದ ಆರಂಭಕ್ಕೆ ಪಾಳೆಯಪಟ್ಟಿನ ಅಧಿಕಾರವನ್ನು ಹೊಂದಿದ್ದದೂ ಬಾಯ್ದೆರೆ ಇತಿಹಾಸದಲ್ಲಿ ಕೇಳಿಬರುತ್ತದೆ. ಅದಕ್ಕೆ ತಾರ್ಕಣೆಗಳೂ ಒದಗುತ್ತವೆ. ಅಂತಾಗಿ ಅವರು ಕ್ರಿ.ಶ. ೧೩೩೬ರಲ್ಲಿ ರಾಜ್ಯಸ್ಥಾಪನೆ ಮಾಡುವ ಮುನ್ನ ಅವರ ವಂಶಿಕ ನೆಲೆಗಳು ಹರಡಿಕೊಂಡಿದ್ದ ಪ್ರದೇಶಗಳನ್ನು ತಿಳಿಯುವುದವಶ್ಯಕವೆನಿಸುತ್ತದೆ.

ಸಂಗಮ ಸಹೋದರರು ಕ್ರಿ.ಶ. ೧೩೩೬ಕ್ಕೂ ಮುನ್ನ ಹೊಯ್ಸಳ ಬಲ್ಲಾಳನ ರಾಜ್ಯದಲ್ಲಿ ಚಟುವಟಿಕೆಯಿಂದಿದ್ದರು.[೪೧] ಸಂಗಮನಿಗೆ ಐವರು ಮಕ್ಕಳಲ್ಲದೆ ಬಹುಶ: ಒಬ್ಬ ಮಗಳೂ ಇದ್ದಳು.[೪೨] ಸಂಗಮನ ತಂದೆಯ ಹೆಸರೂ ಬುಕ್ಕನೆಂದಿದೆ. ತಾಮ್ರ ಶಾಸನಗಳಲ್ಲದೆ ಬೇರೆ ಬೇರೆ ವಿದ್ವಾಂಸರೂ ಸಂಗಮ ವಂಶಾವಳಿಯನ್ನು ಹರಿಹರ, ಕಂಪಣ, ಬುಕ್ಕ, ಮಾರಪ್ಪ, ಮುದ್ದಪ್ಪ ಎಂಬ ಕ್ರಮವನ್ನು ಅನುಸರಿಸಿ ಆ ಸೋದರರ ಹೆಸರನ್ನು ಹೇಳುತ್ತಾರೆ. ಇದಕ್ಕೆ ಭಿನ್ನವಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಕರ್ನಾಟಕ ಚರಿತ್ರೆ, ಸಂಪುಟ-೩ (ಪು. ೨೧)ರಲ್ಲಿ '೧ನೇ ಹರಿಹರನಿಗೆ (೧೩೩೬-೫೬) ನಾಲ್ವರು ತಮ್ಮಂದಿರು: ೧ನೇ ಬುಕ್ಕ, ಕಂಪಣ, ಮಾರಪ್ಪ ಮತ್ತು ಮುದ್ದಪ್ಪ; ಇವರಲ್ಲಿ ಮೊದಲನೆಯವನಾದ ೧ನೇ ಬುಕ್ಕನು ಅಣ್ಣನೊಂದಿಗೆ ರಾಜ್ಯದ ಸ್ಥಾಪನೆ ಮತ್ತು ವಿಸ್ತರಣೆಗಳಲ್ಲಿ ಪಾಲುಗೊಂಡನು' ಎಂದಿದೆ.[೪೩] ಸಿ.ಟಿ.ಎಂ.ಕೊಟ್ರಯ್ಯನವರೂ ಹರಿಹರನ ತಮ್ಮಂದಿರು 'ಬುಕ್ಕ, ಕಂಪಣ, ಮಾರಪ್ಪ, ಮುದ್ದಪ್ಪ' ಎಂಬ ಅನುಕ್ರಮದಲ್ಲಿಯೇ ಹೇಳಿದ್ದಾರೆ.[೪೪] ಕ್ರಿ.ಶ. ೧೩೪೭ರ ಸೊರಬದ ತಾಮ್ರ ಶಾಸನದಲ್ಲಿ ಹರಿಹರನ ನಂತರ 'ಶಂಕರಕ್ಷೋಣಿಪಾಲೋ ವೀರ ಶ್ರೀ ಬುಕ್ಕಭೂಪ' ಎಂದಿದೆ. ಇಲ್ಲಿ ಸೂಚಿತವಾದ 'ಶಂಕರ', ಕಂಪಣನಿಗಿದ್ದ ಮಗದೊಂದು ಹೆಸರೋ ಅಥವಾ ಬುಕ್ಕನಿಗೆ ಅನ್ವಯವಾದ ವಿಶೇಷಣವೋ ಎಂಬುದು ಸ್ಪಷ್ಟವಿಲ್ಲ. ಆದರೂ 'ಬುಕ್ಕ' ಎಂಬ ಶಬ್ದದ ನಿಷ್ಪತ್ತಿ, 'ತ್ರಯಂಬಕ' ಎಂಬುದರಿಂದ ಬಂದಿದೆ ಎನ್ನಲಾಗಿರುವುದರಿಂದ, 'ಶಂಕರ' ಶಬ್ದ ಬುಕ್ಕನಿಗೆ ಅನ್ವಯ ವಿಶೇಷಣವೆನಿಸಿ ಹರಿಹರನ ಮೊದಲನೇ ಸೋದರ ಅವನೇ ಇರಬಹುದೇ! ಎನಿಸುತ್ತದೆ. ಕ್ರಿ.ಶ. ೧೩೭೫ರ ಮುದ್ದಲಿಂಗಲನಹಳ್ಳಿ ಶಿಲಾಶಾಸನದಲ್ಲಿ...'[೪೫] ಶ್ರೀ ಮಂ ಮಹಾಮಂಡಲೇಶ್ವರ ಮಂಡಳಿಕ ಬೇಂಟೆರಾಯ ಅರಿರಾಯವಿಭಾಡ ಭಾಷೆಗೆ ತಪ್ಪುವ ರಾಯರಗಂಡ ಸಂಗಮೇಸ್ವರರಾಯನ ಕುಮಾರ ಶ್ರೀ ವೀರಬುಕ್ಕಂಣವೊಡೆಯರು ಎಂದಿದ್ದು ಗ್ರಾಮೀಣ ಶಿಲಾಶಾಸನದ ಬರಹಗಾರನಿಗೂ ಸಂಗಮವಂಶದ ಪರಿಚಯವಿತ್ತೆನ್ನುವ ಸಂಕೇತವಿದಾಗುತ್ತದೆ.

ಈ ಹಿನ್ನೆಲೆಯಲ್ಲಿ ಆರಂಭದೆಸೆಯ ಸಂಗಮವಂಶದ ಪಾಳೆಯಪಟ್ಟುಗಳ ಸಂಬಂಧವಾಗಿ ರಾಮನಗರ ಹಾಗೂ ಜಾಲಮಂಗಲ (ಬೆಂಗಳೂರು ಗ್ರಾಮಾಂತರ ಜಿಲ್ಲೆ) ಹಾಗೂ ಕೋಲಾರ ಜಿಲ್ಲೆಯ 'ವಾನರಾಸಿ' ಗ್ರಾಮದ ಅಪ್ರಕಟಿತ ಹಾಗೂ ಪ್ರಕಟಿತ ಶಾಸನಗಳು ಗಮನಕ್ಕೆ ಬರುತ್ತವೆ.

ರಾಮನಗರ ತಾಲೂಕು ಜಾಲಮಂಗಲದ ಸೋಮೇಶ್ವರ ಗುಡಿಯ ಬದಿಯ ಹೊಲದಲ್ಲಿ 'ಹೊಯಸಳ ಭೈರವಂ' ಎಂಬ ಸ್ತಂಭ ಶಾಸನ-ಶಿಲ್ಪವಿದೆ. ಈ ಪ್ರದೇಶದಲ್ಲಿದ್ದ ವಿಜಯನಗರದ ಮುನ್ನಿನ ಹೊಯ್ಸಳ ಪ್ರಭಾವಕ್ಕೆ ಇದೂ ಒಂದು ಸಾಕ್ಷಿಯೆ. ಇದು ಕ್ರಿ.ಶ. ೧೩೯೫ರ (ಶಕ ೧೨೪೧) ದೆನ್ನಬಹುದಾದ ಸೋಮೇಶ್ವರಗುಡಿಯ ಛಾವಣಿ ಶಾಸನವು[೬] ವೀರಬುಕ್ಕಣ್ಣ ಒಡೆಯನಿಗೆ ಸಂಬಂಧಿಸಿದುದೆನ್ನಬಹುದಾಗಿದೆ. ಈ ಶಾಸನದಲ್ಲಿ (ಕಾಲ ನಿರ್ಧಾರದ ಬಗ್ಗೆ ವಿಶ್ಲೇಷಣೆಯನ್ನು ಅಡಿಟಿಪ್ಪಣಿಯಲ್ಲಿ ನೀಡಿದೆ) ಶ್ರೀ ಕಲಿಗುಂ, ಕಂಪರಾಯ ಮಾದುಗ ಎಂದೆಲ್ಲ ಮಾತುಗಳಿವೆ. 'ಕಂಪರಾಯ' ಎಂಬ ಹೆಸರಿಗೆ ಯಾವ ವಿಶೇಷಣವೂ ಇಲ್ಲದ ಕಾರಣ ಅದನ್ನು ಬುಕ್ಕನ ಸೋದರನೆಂದಾಗಲಿ, ಬುಕ್ಕನ ಕುಮಾರ ಕಂಪಣನಿಗೆ ಅನ್ವಯಿಸಲು ಸಾಧ್ಯವಾಗದು. ಅಂತಾಗಿ ಆ ಪ್ರದೇಶದ ಒಬ್ಬ ನಾಯಕನಿರಬಹುದೆನಿಸುತ್ತದೆ. ಮುಂದಿನ ಅಕ್ಷರಗಳೂ ತೀರ ಅಳಿಸಿಹೋಗಿರುವ ಕಾರಣ ನಿರ್ಣಯ ಕಷ್ಟ. ಈ ಪ್ರದೇಶದ ಅಚ್ಚಿಗರ ಹಳ್ಳಿ, ಜಾಲಮಂಗಲ ಶಾಸನಗಳು, ಶ್ರೀ ಕಾಳಿಕದೇವರ, ದುರ್ಗ್ಗಾರಾಧಕರು, ಶ್ರೀ ಕಲಿದೇವರು, ಕಲಿಯದೇವರ ಅಮೃತಪಡಿಗೆ ಎಂಬ ದಾನೋಕ್ತಿ ಇದ್ದು ಆ ಕಾಲದ ಕಲಿದೇವರ ಸಂಪ್ರದಾಯಸೂಚಿ ಎನಿಸುವಂತಿವೆ. ಕಾಳಾಮುಖ ಶೈವಸಂಪ್ರದಾಯದ ಪ್ರಭಾವಸೂಚಿ ಅದಾಗಿದ್ದು, 'ತ್ರಿಯಂಬಕ' ಎಂಬ ನಾಮವೂ ಕಾಳಾಮುಖ ಶೈವರ ಆತ್ಮೀಯ ಹೆಸರಾಗಿತ್ತು ಎಂಬುದಕ್ಕೆ ರಾಮನಗರದ ರಾಮದೇವರ ಬೆಟ್ಟದ ಶಾಸನವೊಂದು ಕಾಣಸಿಗುತ್ತದೆ.

ರಾಮದೇವರ ಬೆಟ್ಟದ ಪಶ್ಚಿಮದಿಸೆಗೆ ಶಿವನಗಿರಿ ಎಂಬ ಬೆಟ್ಟ ಸುಮಾರು ೨ ಕಿ.ಮೀ. ಫಾಸಲೆಯಲ್ಲಿದೆ. ಕಡಿದಾದ ಆ ಬೆಟ್ಟವೊಂದು ಪ್ರಾಚೀನ ಗಿರಿದುರ್ಗವಾಗಿತ್ತು. ಇಂದಿಗೂ ಕೋಟೆಗೋಡೆಗಳೂ, ತಳಾವಶೇಷಗಳೂ ಜೀರ್ಣೋದ್ಧಾರಗೊಂಡ ಅವಶೇಷಗಳ ಸಹಿತವಾಗಿ ಕಾಣಬರುತ್ತವೆ. ಬೆಟ್ಟಹತ್ತುವುದು ಇಂದಿಗೂ ತೀರ ದುಸ್ತರವಾದರೂ ಅಂದಿನ ಕುದುರೆಗಳೂ ಸಾಗುವಂತೆ ಮಾಡಿದುದು ಒಂದು ಕೌಶಲಪೂರ್ಣ ವ್ಯವಸ್ಥೆ. ಈ ಗಿರಿಗೂ ರಾಮದೇವರ ಬೆಟ್ಟಕ್ಕೂ ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಸಂಬಂಧವಿದೆ. ಬಾಯ್ದೆರೆ ಇತಿಹಾಸದಲ್ಲಿ ಈ ಶಿವನಗಿರಿದುರ್ಗದಲ್ಲಿ 'ಹರ-ಹರಿ' (ಹರಿ-ಹರ) ಎಂಬ ಪಾಳೇಗಾರರಿದ್ದರು. ಅವರು ಏನೋ ಕಾರಣದಿಂದ ದೊರೆ ಆಜ್ಞೆ ಅಂತ ಮಾಗಡಿ ಪ್ರದೇಶಕ್ಕೆ ಹೋದರೆನ್ನುವುದಿದೆ, ಅಲ್ಲಿಂದ ತೆಲುಗುದೇಶಕ್ಕೆ ಹೋದರೆನ್ನುವುದೂ ಇದೆ. ಈ ಕತೆಗಳಿಗೆ ಪೋಷಕ ಸಂಕೇತವೆಂಬಂತೆ ರಾಮದೇವರ ಬೆಟ್ಟದ ಪಶ್ಚಿಮ ಬದಿಯ ಕಾರ್ಖಾನೆ ಬಂಡೆ ಕೋಟೆ ಬಳಿಯಲ್ಲಿನ ಚಪ್ಪಡಿಯೊಂದರ ದಕ್ಷಿಣಮುಖದಲ್ಲಿ ಒಂದು ಸಾಲಿನ ಅಪ್ರಕಟಿತ ಶಾಸನವಿದೆ. (ಈಗ ಸ್ಮರಣ ಸಂಪುಟಗಳಲ್ಲಿ ಪ್ರಕಟಿತ) ಕೆಲ ಅಕ್ಷರಗಳು ಅಸ್ಪಷ್ಟವಾಗಿದ್ದರೂ ಕಾಲನಿರ್ದೇಶನಕ್ಕೆ ಅನುಕೂಲಿಸುವ ಪಠ್ಯಭಾಗ ಹಾಗೂ ಲಿಪಿ ಸ್ವರೂಪವಿದೆ. ಸಾಂದರ್ಭಿಕ ಇತಿಹಾಸವನ್ನು ಸಮ್ಮಿಲನ ಮಾಡಿ, ಗಮನಿಸಿದರೆ, ಸಂಗಮವಂಶದ ದೊರೆ ಮತ್ತು ಅರಸಿತಿಗೆ ಸಂಬಂಧಿಸಿದ ಸಾಂಸ್ಕೃತಿಕ ಚರ್ಯೆಯೊಂದನ್ನು ಈ ಶಾಸನ ಹೇಳುವಂತಿದೆ. ಶಾಸನದ ಚಪ್ಪಡಿಗಲ್ಲು ಅಲ್ಲಿದ್ದ ಮಠದ ಬಾಗಿಲುವಾಡದ ಅಂಗವಾಗಿತ್ತು ಎನಿಸುವಂತಿದೆ. ಶಾಸನ ಪಾಠ ಹೀಗೆ:

ಈ ಶಾಸನದ ಮೊದಲ ಅಕ್ಷರವನ್ನು 'ಹು' ಅಥವಾ 'ಬು' ಅಕ್ಷರದಿಂದ ತುಂಬಬಹುದು. 'ಹು' ಅಕ್ಷರದಿಂದ ತುಂಬಿದರೆ ಹುಕ್ಕಂಣನ[೪೭] ರಾಣಿ ಬುಕ್ಕವ್ವೆಗೆ ಅನ್ವಯಿಸುವಂತಾಗುತ್ತದೆ. ಆಕೆ ಕುಲಪರಂಪರೆಯಂತೆ ತ್ರಿಯಂಬಕರ ಆರಾಧಕಳಾಗಿ ದೇಗುಲಸಹಿತ ಗುರುಮಟ ಕಟ್ಟಿಸಿರುವ ಸಾಧ್ಯತೆ ಆಗುತ್ತದೆ. ಇಮ್ಮಡಿ ಹರಿಹರನಿಗೆ ಇದ್ದ ಅರಸಿಯರ ಹೆಸರುಗಳು ಪಂಪಾದೇವಿ ಹಾಗೂ ಮಲ್ಲಾದೇವಿ.[೪೮] ಅವರ ತ್ರಿಯಂಬಕ ಭಕ್ತಿಗೆ ಸ್ಪಷ್ಟ ಪುರಾವೆಗಳಿಲ್ಲ ಹಾಗೂ ಅವರ ಹೆಸರೂ 'ತ್ರಿಯಂಬಕ' ಶಬ್ದಕ್ಕೆ ಅನುಗುಣ ಅನುರಣನ ಸಂವಾದಿ ರೂಪವಾಗಿಲ್ಲ. ಹೀಗಾಗಿ ಶಾಸನದ ಕಾಲವನ್ನು ಒಂದನೇ ಹರಿಹರನ ಕಾಲಕ್ಕೆ ಅನ್ವಯಿಸಬಹುದಾಗಿದೆ. ಅಥವಾ ಶಾಸನದ ಮೊದಲಕ್ಷರವನ್ನು 'ಬು' ಅಕ್ಷರದಿಂದ ತುಂಬಿದರೆ ಬುಕ್ಕನ ಹೆಸರಿನ ನಿಷ್ಪತ್ತಿಯನ್ನು ಸಂಸ್ಕೃತದ 'ತ್ರ್ಯಂಬಕ' ಎಂಬ ಶಬ್ದದಿಂದ ಹೆಕ್ಕಿರುವಲ್ಲಿ[೪೯] ಅವನ ಆರಾಧ್ಯ ದೈವದ ಕುರಿತ ಭಕ್ತಿಯಾಗಿ ಅವನ ಸತಿ ಯಾ ಸತಿಯರು (ಬಹುಶಃ ದೇವಾಯಿ-ದೇವಾಂಬಿಕೆ) ರಾಮದೇವರ ಬೆಟ್ಟದಲ್ಲಿ ತ್ರಿಯಂಬಕ ಮಠವನ್ನು ದೇಗುಲ ಸಹಿತವಾಗಿ ರೂಪಿಸಿರುವ ಸಾಧ್ಯತೆಯಾಗುತ್ತದೆ. ಹೀಗಾಗಿ ಬೆಟ್ಟದ ಮೇಲಿರುವ ರಾಮೇಶ್ವರ ಲಿಂಗವು ವಿಜಯನಗರ ಕಾಲದಲ್ಲಿ ತ್ರಿಯಂಬಕೇಶ್ವರ ಎಂದೆನಿಸಿದ್ದಿರಬೇಕು.[೫೦] ಹಿರಿಯ ಕೆಂಪೇಗೌಡನ ಕಾಲಕ್ಕೆ ಜೀರ್ಣೋದ್ಧಾರಗೊಂಡು ಶ್ರೀರಾಮಕಥಾ ಪ್ರಭಾವದಿಂದ ರಾಮೇಶ್ವರ ಎಂದು ಪ್ರತಿನಾಮಧೇಯ ಪಡೆದಿರಬೇಕು. ಕ್ರಿ.ಶ.ಸು. ೧೬೩೦ರಲ್ಲಿ ಇಮ್ಮಡಿ ಕೆಂಪೇಗೌಡನು ಮಾಗಡಿ ಶಾಸನ (ಸೋಮೇಶ್ವರಗುಡಿ ಅರ್ಚಕನಲ್ಲಿದ್ದ ತಾಮ್ರಶಾಸನ ಸಂ.೧, ಎ.ಕ.ಸಂ.೯ ರೈಸ್)ವೊಂದರಲ್ಲಿ 'ಶ್ರೀ ರಾಮಚಂದ್ರ ಪರಿಪೂಜಿತ ಶ್ರೀ ರಾಮೇಶ್ವರಾಯ ನಮಃ' ಎಂದು ಸ್ತುತಿಸಿ ಮಾಗಡಿ ಸೀಮೆಗೆ ಸಲ್ಲುವ ಕಂಚುಗಾರ್ರಹಳ್ಳಿ ಹಾಲುಶಿಂಗನಹಳ್ಳಿಗಳನ್ನು, ನಿತ್ಯಕಟ್ಲೆಪಡಿತರ ದೀಪರಾಧನೆ ಮಹಾ ರಥೋತ್ಸವಕ್ಕೆ ಕೋಟೆ ರಾಮೇಶ್ವರನಿಗೆ! ದಾನ ನೀಡಿರುವುದು ಈ ಸಂದರ್ಭದಲ್ಲಿ ಗಮನಾರ್ಹವಾಗುತ್ತದೆ.) ಈ ದೃಷ್ಟಿಯಿಂದ ಶಾಸನದ ಕಾಲವನ್ನು ಹುಕ್ಕಬುಕ್ಕರ ಆರಂಭಕಾಲಕ್ಕೆ ಹಾಕಬಹುದೆನಿಸುತ್ತದೆ. ಶಾಸನದ ಲಿಪಿಯೂ ವಿಜಯನಗರ ಕಾಲದ್ದು. ಇದಲ್ಲದೆ ಇಮ್ಮಡಿ ಕಂಪಣನ ರಾಣಿ ಕವಿಪತ್ನಿ (ಕೆಲವು ಇತಿಹಾಸಕಾರರ ರೀತ್ಯಾ ಸೇವಕಿ!) ಮತ್ತು ಬುಕ್ಕನ ಸೊಸೆ ಗಂಗಾದೇವಿಯ ತ್ರಿಯಂಬಕ ಭಕ್ತಿಯೂ ಇದಕ್ಕೆ ಕಾರಣವಿರಬಹುದೆಂದು ವಾದವಿಡಬಹುದು. ಆದರೆ ಶಾಸನದಲ್ಲಿ ಕಾಣುವಂಥ ಮೂರನೆಯ ಅಕ್ಷರ 'ಪ' ಕಾರ ಎನ್ನುವುದಕ್ಕೆ (ಅಂದರೆ ಕ್ಕಂ ಪ ಣ) ಲಿಪಿ ಲಕ್ಷಣವಾಗಲಿ, ಹಿಂದಿನ ಊಹಾ ಅಕ್ಷರಪಾಠಕ್ಕಾಗಲಿ ಹೊಂದಿಕೆಯಾಗುವ ಸಾಧ್ಯತೆಗಳು ಕಡಿಮೆ. ಈ ಹಿನ್ನೆಲೆಗಳಿಂದ ಸಂಗಮ ಹಾಗೂ ಸಂಗಮಪುತ್ರರಾದ ಹುಕ್ಕ ಬುಕ್ಕರು ಬೆಂಗಳೂರು ಜಿಲ್ಲೆಯಲ್ಲಿ ಹಾಗೂ ೧ನೇ ಕಂಪಣನು ಕೋಲಾರ ಜಿಲ್ಲೆಯಲ್ಲಿ ೧೩ನೇ ಶತಮಾನಾಂತ್ಯ ೧೪ನೇ ಶತಮಾನದ ಮೊದಲ ದಶಕಗಳಲ್ಲಿ ಹೊಯ್ಸಳ ಮಾಂಡಲಿಕರಾಗಿ ಪಾಳೆಯಪಟ್ಟುಗಳನ್ನು ಹೊಂದಿದ್ದರು; ಕನ್ನಡ ನೆಲೆ ಮೂಲದಲ್ಲಿಯೇ ಬೆಳಗಿ

ಬಂದವರೆನ್ನುವುದಾಗುತ್ತದೆ. ಕೋಲಾರ ತಾಲೂಕು ವಾನರಾಸಿಯ ಶಾಸನವು ಇದಕ್ಕೆಲ್ಲ ಮಗದೊಂದು ಮುಖ್ಯ ಸಾಕ್ಷಿಯಾಗಿ ಕ್ರ.ಶ. ೧೩೧೩ರಲ್ಲಿಯ ಸಂಗಮಪುತ್ರ ೧ನೇ ಕಂಪಣನ ಆಳ್ವಿಕೆಯನ್ನು ಹೇಳುತ್ತದೆ. ರೈಸರು ಹಾಗೂ ಶ್ರೀಮತಿ ವಸುಂಧರಾ ಫಿಲಿಯೋಜಾ ಅವರು ಓದುವಲ್ಲಿ ಬಿಟ್ಟಿದ್ದ ಶಾಸನಾಕ್ಷರಗಳನ್ನು ಓದಿ ಶಾಸನದ ನಕಲು ತೆಗೆದು ಕೆಲವು ಬದಲಾವಣೆಗಳನ್ನು ಅಕ್ಷರ ಸ್ವರೂಪ ಕಂಡಂತೆ ಮಾಡಿಕೊಂಡು ಇಲ್ಲಿ ಪಾಠವನ್ನು ಸೂಚಿಸಲಾಗಿದೆ. ರೈಸರು ಶಾಸನ ನಕಲು ತೆಗೆದ ಕಾಲಕ್ಕೆ ಅದು ಹುತ್ತದಿಂದ ಹಿಂಬದಿಯಿಂದ ಆವರಿಸಿದ್ದ ಕಾರಣ ಅವರ ಕಣ್ಣಿಗೆ ಹಿಂಬದಿಯ ಕೆಲವಕ್ಷರಗಳೂ ಗಮನಕ್ಕೆ ಬಂದಿಲ್ಲ.

ಶಾಸನದ ಪಾಠ

ಮುಂಬದಿ: ೧. ಪರಿಧಾವಿ ಸಂವತ್ಸರದ ಫಾಲ್ಗುಣ ಸು. ೫ ಗು

೨. ಶ್ರೀಮತು ಮಹಾಮಂಡಲೇಶ್ವರಂ

೩. ಶ್ರೀ ವೀರ ಕಂಪಂಣೊಡೆಯರು

೪. ದೈವಾಲ ಆಯಯಾಧಕೆಂದು ಕೊಟ್ಟ

೫. ಅಂ (ಗ)ಭೋಗ ದು (ದೈ)ವಾಲಕೆ ಸಲುವ ಹೊ

೬. ದೆ ನಾಡೊಳಗಣ ವಂನರಾಸಿ ಯಂ

೭. ಬ ಊರನೂ ನಿಮಗೆ ಮಡಿ(ಡ)ಪುರ ವಾ

೮. ಗಿ ಕೊಟ್ಟ ಸಂಮಂಧ ಸರ್ವಮಾಂನ್ಯವಾಗಿ

೯. ಉಭಯಂಗ ರೊರೊಗಾಗಿ ಉ ದಿ

೧೦. ಪರ್ವ್ವಗಯಾಗಲಿ ಸಹ ಸರ್ವ ಬಾದ ಪರಿ

೧೧. ಹಾರವಾಗಿ ಆಚಂದ್ರರ್ಕಸ್ತಾಯಿ ಆಗಿ

೧೨. ಸರ್ವಮಾಂನ್ಯ ಅಗ್ರಹಾರಪುರವಾಗಿ ಕೊಟ್ಟ

೧೩. ಸ್ಥಾನಮಾಂನ್ಯ ಪೂರ್ವ ಮರಿಯಾದಿ

ಹಿಂಬದಿ:

೧೪. ಯದ ಲಿ... ಡಗಿ

೧೫. ದ... ರದು

೧೬. .....ದಿ

೧೭. .....

೧೮. ...ರು ...ರಸರ

ಶಾಸನದ ಪಾಠದ ರೀತ್ಯಾ ವಂನರಾಸಿಯೆಂಬ ಹೊದೆನಾಡಿನ ಊರನ್ನು ಮಡಿಪುರ (ಮಡಪುರ > ಮಠಪುರ)ವಾಗಿ ಮಾಡಿ, ದೇಗುಲಕ್ಕೆ ಅಂಟಿದಂತೆ ಬಹುಶ: ಮಠವೊಂದಿದ್ದ ಕಾರಣ ಆಯಾವಾಗಿ ತಂದುಕೊಟ್ಟ ಧಾನ್ಯವನ್ನು ದೇಗುಲದ ಅಂಗಭೋಗ, ಪರ್ವ್ವಾದಿ

ಉತ್ಸವಗಳಿಗೆ ಸರ್ವಬಾಧಾ ಪರಿಹಾರವಿಟ್ಟು, ಸರ್ವಮಾನ್ಯ ಅಗ್ರಹಾರಪುರವೆಂದು ಸ್ಥಾನಮಾನ ಪೂರ್ವ ಪರ್ಯಾದೆಯಂತೆ (ಕ್ರಿ.ಶ. ೧೩೧೩ರ) ವೀರಕಂಪಣೊಡೆಯನ ಆಳ್ವಿಕೆಯ ಕಾಲದಲ್ಲಿ ಕೊಟ್ಟ ವಿಷಯವಾಗಿ ಕಾಣುತ್ತದೆ. ಶಾಸನದಲ್ಲಿ ಆಯವಾಗಿ ತಂದುಕೊಟ್ಟ ಧಾನ್ಯ ಶಾಸನದ ನಾಲ್ಕನೇ ಸಾಲಿನ ಪದ 'ಆಯಯಾದಕೆಂದು' ಎಂಬುದು 'ಆಯದಾಯಕೆಂದು' ಎಂಬುದರ ತಪ್ಪು ಲಿಖಿತವಾಗಿರುವಂತಿದೆ. ಮಡಿಪುರ (ಮಡಪುರ-ಮಠಪುರ) ದೇವಾಲಯವಿದ್ದ ಬಗ್ಗೆ ಇತ್ಯಾದಿ ಸೂಚನೆಗಳಿವೆ. 'ಆಯ'ವನ್ನು ಮಠದ ಅಯ್ಯನವರು ಕಣಕ್ಕೆ ಸುಗ್ಗಿಕಾಲದಲ್ಲಿ ಹೋದಾಗ ಒಕ್ಕಲಿನವರು ಕೊಡುವ ದಾನಭಾಗ ಎಂಬ ಸಂಪ್ರದಾಯವಿದೆ. ಇಲ್ಲಿ ಅಂಗಭೋಗ ಶಬ್ದವೂ ದೇವರ ಅಲಂಕಾರ, ಸುಗಂಧ ಭೋಗವಲ್ಲದೆ ನೈವೇದ್ಯಭೋಗ ಸಂಬಂಧವೂ ಕೂಡಿರಬಹುದು. ಮಡಿಪುರ-ಮಠಪುರ ಎನ್ನುವಾಗ ದೇಗುಲಕ್ಕೆ ಅಂಟಿದ ಮಠದ ಸಂಬಂಧವಾಗುತ್ತದೆ. ಅಗ್ರಹಾರಪುರವೆಂದಿರುವ ಕಾರಣ ವಂನರಾಸಿ (ವಾನರಾಸಿ)ಯನ್ನು ಶಿವಪುರವಾಗಿ ಮಾಡಿ ದಾನ ನೀಡಲಾಯಿತೇ? ಎಂಬ ಮಾತಿಗೆ ಇಂಬು ಸಿಕ್ಕಿದಂತಾಗುತ್ತದೆ. ಹಾಗಿದ್ದರೆ ಇಲ್ಲಿನ ಈ ಸಂದರ್ಭಗಳನ್ನೆಲ್ಲ ಗಮನಿಸಿ ಹೇಳಿದರೆ ವೀರಶೈವ ಮಠವೊಂದಿದ್ದು, ಶಿವಪುರವಾಗಿ ವಂನರಾಸಿ ಅಗ್ರಹಾರವಿತ್ತು ಎಂದಾಗುತ್ತದೆ. ಸ್ಥಳೀಯ ಪ್ರಾಜ್ಯಾವಶೇಷಗಳು, ಹಿರಿಯರ ಹೇಳಿಕೆಗಳು, ಸಂವಾದಿ ಸಾಕ್ಷ್ಯಗಳನ್ನು ಹೀಗಾಗಿ ಇಲ್ಲಿ ಪರಿಶೀಲಿಸಬೇಕಾಗುತ್ತದೆ. ಶಾಸನದ ಮೇಲ್ತುದಿಯ ಶಿಲ್ಪಭಾಗದಲ್ಲಿ ಸೂರ್ಯ, ತ್ರಿಶೂಲ, ಚಂದ್ರ ಇರುವುದು. ಶಿವಪರ ಸನ್ನಿವೇಶವನ್ನೇ ಸೂಚಿಸುತ್ತದೆ.

ವಾನರಾಸಿ ಬಳಿ ಮುದವಾಡಿ, ಹೊಸಳ್ಳಿ ಗ್ರಾಮಗಳು ಪಕ್ಕ ಪಕ್ಕಕ್ಕೆ ಇದ್ದು ಮೊದಲಿಗೆ ಇವೆಲ್ಲ ಸೇರಿ ಒಂದೇ ಊರಾಗಿದ್ದವು. ಶಾಸನವಿರುವ ಸ್ಥಳದಿಂದ ಸುಮಾರು ಒಂದು ಫರ್ಲಾಗ್ ದೂರದಲ್ಲಿ ಹಳೆ ವಾನರಾಸಿ ಊರು ಇತ್ತು. ಚಂದ್ರಮೌಳೇಶ್ವರ ಗುಡಿಯೂ ಇತ್ತು. ಈ ಶಿಲಾದೇಗುಲದ ಸುತ್ತ ಗುಡಿ ಹೊಗಳು ಇದ್ದವು. ಈ ಹೊಲಗಳ ಪಕ್ಕದಲ್ಲಿ ಪಾಲಾರ್ ನದಿ ಹರಿಯುತ್ತಿತ್ತು. ಮುದುವಾಡಿಕೆರೆ ಒಂದು ಕಾಲಕ್ಕೆ ವಾನರಾಸಿಯ ಕೆರೆಯೆ ಆಗಿತ್ತು. ಮುದುವಾಡಿ ಕಟ್ಟೆ ಕಟ್ಟುವ ಮುನ್ನ ಗುಡಿ ಹೊಲದ ಬಳಿಯ ನಾಗರಕಟ್ಟೆಯಲ್ಲಿ (ಕೆ.ಹನುಮಂತಪ್ಪನವರ ಮಕ್ಕಳ ಹೊಲದಲ್ಲಿ ಈಗ ಅದಿದೆ) ಕೊರಳು ಸುತ್ತಿದ ನಾಗರ ಹೆಡೆಯ ಶಿವ, ಪ್ರಣಾಮಭಂಗಿಯ ಭಕ್ತನೊಬ್ಬನ ಉಬ್ಬುಶಿಲ್ಪಗಳ ಫಲಕಗಳು ಪ್ರಾಚೀನ ಅವಶೇಷಗಳಾಗಿ ನೆಲೆಯ ಪ್ರಾಚೀನತೆಗೆ ಸಾಕ್ಷಿ ಆಗಿವೆ. ಕ್ರಿ.ಶ. ೧೩೧೩ರ ವೇಳೆಗೆ ನೆರೆಯ ಪಾಲಾರ್ ನದಿಯು ಜನಪದರಲ್ಲಿ ಬಹುಶ: ವಾರಣಾಸಿ ಹೆಸರಿನ ಮೂಲದ ಗಂಗೆಯ ನೆನಪಿನಲ್ಲಿ ಪಾಲಾರ್ ಗಂಗೆಯ ತಡಿಯ ಊರಾಗಿ 'ವಾರಣಾಸಿ' ಎಂಬುದನ್ನೆ 'ವಾನರಾಸಿ' ಎಂಬ ಪಲ್ಲಟ ರೂಪದಲ್ಲಿ ಕರೆಯುತ್ತಿದ್ದರೇ? ಶಾಸನದಲ್ಲಿ 'ವಂನರಾಸಿ' ಎಂದೇ ಗ್ರಾಮನಾಮವಿದೆ. ಅದು 'ವನರಾಶಿ'ಯ ನೆಲೆಯಾಗಿ (ಪರಿಸರ ಇಂದಿಗೂ ಹಾಗಿದೆ. ನದಿ ನೀರು ಬತ್ತಿದೆ) ಶಾಸನದಲ್ಲಿ ಅಂದಿನ ಜನಪದ ರೂಢಿಯ 'ವಂನರಾಸಿ'ಯಾಗಿ ದಾಖಲಿಸಲ್ಪಟ್ಟಿದೆ. ಗಂಗೆ ಹಾಗೂ ವನಬಾಹುಳ್ಯ ಸೇರಿ 'ವಂನರಾಸಿ' ಎಂಬ ಹೆಸರೇ ಗ್ರಾಮದ ನಿಜವಾದ ಹೆಸರಾಗಿದ್ದಿರಬೇಕು.

ವಾನರಾಸಿಯಿಂದ ಕೋಲಾರ ತಾಲೂಕಿನ ಹೊದಲನಾಡಿಗೆ ಸುಮಾರು ೧೦ ಕಿ.ಮೀ. ದೂರ. ಈ ಹೊದಲವಾಡಿಯೆ ಶಾಸನೋಕ್ತ ಅಂದಿನ ಹೊದೆನಾಡು. ತಮಿಳು ಪ್ರಭಾವದಿಂದ ಎಂದೋ ಅದು 'ಹೊದಲನವಾಡಿ' ಎನಿಸಿದ್ದಿರಬೇಕು. ಬಹುಶಃ ಜಿಲ್ಲೆಯ ಮೊದಲ ನಾಡಾಗಿ ಪ್ರಸಿದ್ಧಿಗೊಂಡು ಹಾಗೆ ಕರೆದರೋ ಅಥವಾ (ಹೊದೆ=) ಪೊದೆಯ ಕಾರಣ ಪೊದೆನಾಡೆನಿಸಿ, ಹೊದೆನಾಡು, ಹೊದಲನಾಡಿ ಎಂದು ರೂಢಿಗೆ ನಿಂತಿರಬೇಕು. ಈ ಹಿನ್ನೆಲೆಯಲ್ಲಿ ವನರಾಶಿಯೆ ಆಗಿ ವಂನರಾಸಿ-ವಾನರಾಸಿ ಆಗಿತ್ತೆನ್ನಬೇಕು. ಈ ವಾನರಾಸಿಗೆ ವಿಜಯನಗರ ಕಾಲದ ವೀರಳಪ್ಪನ ವೀರಗಾಥೆಯ ಕತೆ ಅಂಟಿದೆ.[೫೧]

ವಾನರಾಸಿ ಶಾಸನದ ನೆಲೆಯಿಂದ ಪಶ್ಚಿಮ ಹಿಂಬದಿಗೆ ಸುಮಾರು ಮೂರು ಕಿ.ಮೀ. ದೂರದಲ್ಲಿರುವ ಬೂದಾಳುವಿನಲ್ಲಿ ಜನಗಳ ಕೋರಿಕೆಯ ಮೇಲೆ, ಶತ್ರುಗಳ ಮೇಲೆ ಕಾಳಗಕ್ಕೆ ಹೋದ ವೀರಳಪ್ಪ. ಶತ್ರುಗಳನ್ನು ಸದೆಬಡಿದು ಅಶ್ವಾರೋಹಿಯಾಗಿ ಬರುತ್ತಿದ್ದ. ಶರಣರ ವಚನಗಳಲ್ಲಿ (ಒಕ್ಕಲಿನ ಕಣದಿಂದ ತರುವ ದಾನಭಾಗದ ಕಾಳು) ದಾಯಗಾರಿಕೆಯಲ್ಲಿ ತಂದು ದಾಸೋಹವ ಮಾಡುಬಹುದೆ? ಎಂದಿದೆ. ಮರೆಯಲ್ಲಿ ಅಡಗಿದ್ದ ಶತ್ರು ಸೈನಿಕ ಅವನ ರುಂಡವನ್ನು ಹಾರಿಸಿ ಮುಂಡವನ್ನು ಅವನ ಬಿಳಿಯ ಕುದುರೆಯ ಮೇಲೆ ಬಿಟ್ಟ. ಆದರೆ ಕುದುರೆ ಶತ್ರು ಸೈನಿಕನನ್ನು ಬಿಡದೆ ಮೇಲೆ ಹಾರಿ ತುಳಿದು ಸಾಯಿಸಿತು. ವಾನರಾಸಿಗೆ ಅಕ್ಕಂದಿರ ಮನೆಗೆ ಬಂದು ಎಲಚಿಹಣ್ಣು ತಿನ್ನುತ್ತಿದ್ದಾಗ ಬೂದಾಳು ಜನರ ಆರ್ತನಾದ ಶತ್ರು ಕೋಲಾಹಲ ತಿಳಿದು ಧಾವಿಸಿ ಹೋಗಿ ಕಾದಾಡಿ ಜಯತಂದಿತ್ತರೂ ಮಡಿದ ವೀರಳಪ್ಪ. ಅಂಥ ಶೂರ ತಮ್ಮನಾದ್ದರಿಂದ ಅವನ ಮೃತವೀರ ಶರೀರದೊಡನೆ ವಾನರಾಸಿ ಶಾಸನದಿಂದ ಸುದೂರ ಪೂರ್ವಬದಿಯ ಆಲದಮರದ ಬಳಿ ಅಕ್ಕಂದಿರೂ ಬೆಂಕಿಗೊಡ್ಡಿಕೊಂಡ ವಿಶಿಷ್ಟ ಸ್ಮಾರಕವಾಗಿ ವೀರಗಲ್ಲೊಂದಕ್ಕೆ ಆರೋಪಿಸಲಾಗಿದೆ. ವೀರಗಲ್ಲಾದರೋ ವಿಜಯನಗರ ಪೂರ್ವ ಪ್ರಾಚೀನ ಶಾಸನೋಕ್ತ ವೀರಗಲ್ಲು ಶಿಲ್ಪಗಳನ್ನು ಹೊಂದಿದೆ. ಕುದುರೆಯ ಮೇಲೆ ಮುಂಡ, ಕೈಯಲ್ಲಿ ರುಂಡ ಹಿಡಿದು ಬಂದು ದೇವರಿಗೆ ಮೀಸಲಾಗಿ ಅರ್ಪಿಸಿರುವಂಥ ವೀರಶಿಲ್ಪವದೆನ್ನಿಸುತ್ತದೆ. ಕತೆ ಮಾತ್ರ ವಿಜಯನಗರ ಕಾಲದ ವೀರನಿಗೆ ಆರೋಪಿತವಾಗಿದೆ. ಅದಕ್ಕೆ ಅನುಗುಣವಾಗಿ ವೀರನ ಮೂಲಗುಡಿ (ವೀರಳಪ್ಪ)ಯ ಮುಂದಿನ ಸ್ತಂಭದ ಬುಡಭಾಗದಲ್ಲಿ (ಪಿಂಡಿಕೆ) ಮಾತ್ರ ಎಡಗೈಯಲ್ಲಿ ಇಷ್ಟಲಿಂಗ ಹಿಡಿದು ಪೂಜಿಸುವಂತೆ ತೋರುವ ಸ್ತಂಭವ್ಯಕ್ತಿಯ ಶಿಲ್ಪವಿದ್ದು ಅದು ವಿಜಯನಗರ ಕಾಲದ್ದಾಗಿದೆ. ಒಳಗಿನ ಗುಡಿ ಶಿಲ್ಪವು ಗಂಗಶೈಲಿಯನ್ನನುಸರಿಸಿದ ರಾಜಗೊಡೆಯ ಆಶ್ವಾರೋಹಿ, ಭುಜಕ್ಕಾನಿಸಿದ ಓರೆಗತ್ತಿಯ ವೀರಶಿಲ್ಪವಾಗಿದೆ; ಮೇಲ್ಸೂಚಿತ ವೀರಗಲ್ ಶಿಲ್ಪಗಳನ್ನು ಮೇಲಿನ ಪಟ್ಟಿಕೆಯಲ್ಲಿ ಹೊಂದಿದೆ.

ಈ ಹಿನ್ನೆಲೆಗಳನ್ನು ಗಮನಿಸಿದರೆ ವೀರಕಂಪಣನ ಕಾಲದ ಈ ನೆಲೆಯ ಕತೆಯು ವೀರಗಲ್ ಶಾಸನವೊಂದಕ್ಕೆ ಅರೋಪಿತವಾಗಿರುವುದ; ಕಂಪಣನ ವಾನರಾಸಿ ಶಾಸನದಲ್ಲಿ ಹೇಳಿರುವ ದೇವಾಲಯ ಚಂದ್ರಮೌಳೇಸ್ವರನದಾಗಿರುವುದು; ದೇವದಾನವು ಕ್ರಿ.ಶ. ೧೩೧೩ರಲ್ಲಿಯೆ

ಈ ದೇಗುಲಕ್ಕೆ ಒದಗಿಸಿರುವುದು ಇವೆಲ್ಲಾ ತಿಳಿಯುತ್ತವೆ. ಇದಲ್ಲದೆ ಕ್ರಿ.ಶ. ೧೩೧೩ರಲ್ಲಿಯೆ ಸಂಗಮಪುತ್ರನೊಬ್ಬನ ಆಳ್ವಿಕೆ ಈ ಕನ್ನಡ ನೆಲೆಯಲ್ಲಿದ್ದುದು ವಿದಿತವಾಗುತ್ತದೆ. ಸಂಗಮರ ಶಿವಾರಾಧನೆಯ ಒಂದು ಕುರುಹಾಗಿ ಈ ಶಾಸನೋಕ್ತ ವಿಷಯವು ಕಂಡುಬರುತ್ತದೆ. ಇಲ್ಲೊಂದು ವೀರಶೈವ ಮಠದ ಅಸ್ತಿತ್ವವಿದ್ದ ಬಗ್ಗೆ ಸೂಚನೆ ಸಿಗುತ್ತದೆ. ಮಡಪುರ (ಮಠಪುರ)ವೆನ್ನಲಿ, ಮಡಿಪುರವೆಂಬ ಅಗ್ರಹಾರವೆನ್ನಲಿ ಮಠವಿದ್ದ ಶೈವ ಅಗ್ರಹಾರವಾಗಿ ವಂನರಾಸಿ ಇದ್ದ ಬಗ್ಗೆ ತಿಳಿಯುತ್ತೆ; 'ಮಡಿಪುರ'ವೆಂದರು ಅಗ್ರಹಾರಕ್ಕೆ ಪರ್ಯಾಯ ಶಬ್ದವೊಂದರ ಬಳಕೆ ಇಲ್ಲಿ ಕಾಣಬರುತ್ತದೆ. ಈ ಅಗ್ರಹಾರದಲ್ಲಿದ್ದರೆನ್ನಲಾದ ಬ್ರಾಹ್ಮಣವಂಶಿಕರು ವಾನರಾಸಿಯ ದಕ್ಷಿಣಕ್ಕಿರುವ (ಸು. ೧೦ ಕಿ.ಮೀ. ದೂರ) ಸೋಮಾಂಬುಧಿ ಅಗ್ರಹಾರಕ್ಕೆ ವಲಸೆಗೊಂಡಿದ್ದಾರೆ. ಶಾಸನದಲ್ಲಿ ಬರುವ 'ಉದ್ವಿಪರ್ವ್ವ' ಶಬ್ದವು ಚಂದ್ರಮೌಳೇಶ್ವರನಿಗೆ ಅ ಮಹಾರುದ್ರಾಭೀಷೇಕವನ್ನೋ, ರಥೋಥ್ಸವ ಸಂದರ್ಭವನ್ನೋ ಎರಡು ಜಾತ್ರೆ (ಚಿಕ್ಕ ಜಾತ್ರೆ, ದೊಡ್ಡ ಜಾತ್ರೆ)ಯ ಸಂದರ್ಭವನ್ನೋ ಸೂಚಿಸಿ ಅವುಗಳ ನಿರ್ವಹಣೆಗೆ ದಾನವನ್ನು ನೀಡಿರುವ ಬಗ್ಗೆ ಹೇಳಿದಂತಿದೆ.

'ಚಂದ್ರಮೌಳೇಶ್ವರಲಿಂಗ'ದ ಸಂಬಂಧವು ಬಾಳೆಹೊನ್ನೂರಿನ ಶ್ರೀಮದ್ರಂಭಾಪುರಿ ಪೀಠ ಹಾಗೂ ಶೃಂಗೇರಿಯ ಶ್ರೀಮತ್ ಶಾರದಾ ಶೃಂಗೇರಿ ಆದಿಶಂಕರ ಪೀಠಕ್ಕೂ ಸಮಾನಾನ್ವಯವಾಗಿರುವ ಲಿಂಗಸಂಬಂಧವೆನ್ನುವುದುಂಟು. ಹುಕ್ಕ, ಬುಕ್ಕ, ಕಂಪಣ, ಮಾರಪ್ಪ, ಮುದ್ದಪ್ಪ ಇತ್ಯಾದಿ. ಸಂಗಮ ಸೋದರರ ವಿಜಯನಗರ ಸಾಮ್ರಾಜ್ಯೋತ್ಸವದ ಕ್ರಿ.ಶ. ೧೩೪೬ರ ಸಂದರ್ಭದ ಆಶೀರ್ವಾದದ ಸಂಗತಿಗೆ ಈ ಚಂದ್ರಮೌಳೇಶ್ವರ ಲಿಂಗ ಸಂಬಂಧವೂ ಪೂರಕವಾಗಿರುವಂತಿದೆ. ರೇವಣಸಿದ್ಧರು ರಂಭಾಪುರಿ ಪೀಠ ಪರಂಪರೆಯಯ ಜಗದ್ಗುರವಾಗಿದ್ದವರು ವಿದ್ಯಾರಣ್ಯ ಕಾಲಜ್ಞಾನ ಇತ್ಯಾದಿ ಕೃತಿಗಳಲ್ಲಿ ಹಕ್ಕ ಬುಕ್ಕರ ಕನಸಿನಲ್ಲಿ ರೇವಣಸಿದ್ಧರು ಬಂದು ಸಾಮ್ರಾಜ್ಯ ಸ್ಥಾಪನೆ ಮಾಡಲು ಹೇಳಿದರೆಂಬ ಕತೆಯೂ ಇದೆ. ಸಂಗಮ ಸೋದರರ ಶೈವ ಹಿನ್ನೆಲೆಯಲ್ಲಿ ಬುಕ್ಕನ ಕಾಲದ ಶಾಸನೋಕ್ತ ದಾನ ಶ್ರೀ ಮದ್ರಂಭಾಪುರಿ ಪೀಠಕ್ಕೆ ಇರುವಲ್ಲಿ ಕ್ರಿ.ಶ. ೧೩೫೨ರ ಸಂಗಮಪುತ್ರ ಮಾರಪ್ಪನ ಕಾಲದ ಪ್ರಧಾನ ಮಲಪ್ಪವೊಡೆಯರ ಮನೆಯ ಅಧಿಕಾರಿ ಬೊಂಮರಸನು ಅರಮನೆಯ ಪರವಾಗಿ ರಂಭಾಪುರಿ ಪೀಠದ ವೀರಭದ್ರನಿಗೆ ಶಾಸನೋಕ್ತ ದಾನ ನೀಡಿರುವಲ್ಲಿ (ಕೊಪ್ಪ ತಾಲೂಕು ೬ ಮತ್ತು ೭ನೇ ಶಾಸನಗಳು, ಕಡೂರು ಜಿಲ್ಲೆ-ರೈಸ್ ಆವೃತ್ತಿ); ಸಂಗಮ ಪುತ್ರರು ಸಾಮ್ರಾಜ್ಯೋತ್ಸವ ಸಂದರ್ಭದಲ್ಲಿ ಶೃಂಗೇರಿಯ ನೆರೆಗೇ ಇರುವ ಶ್ರೀಮದ್ರಂಭಾಪುರಿ ಪೀಠದ ಗುರುಗಳ ದರ್ಶನಾಶೀರ್ವಾದ ಪಡೆದಿರುವ ಸಾಧ್ಯತೆ ಇಲ್ಲವೆನ್ನುವಂತಿಲ್ಲ. ಅಂತಾಗಿ ಸಂಗಮಪುತ್ರರಿಗೆ ವಂನರಾಸಿಯ ಚಂದ್ರಮೌಳೇಶ್ವರದ ಆರಾಧನಾ ಸಂಬಂಧವನ್ನೂ ಕೂಡಿಸಿಕೊಂಡಂತೆ ಹೇಳಿದರೆ ಅವರ ಸಾಮ್ರಾಜ್ಯ ಸ್ಥಾಪನೆಯ ಬಹುಪೂರ್ವದಿಂದಲೇ ಮೇಲ್ಕಂಡ ಉಭಯ ಪೀಠಗಳಿಗೆ ಭಕ್ತಿ ಗೌರವಗಳನ್ನು ಸಲ್ಲಿಸುತ್ತಿದ್ದಂತೆ ತೋರುತ್ತದೆ. ವಂನರಾಸಿ ಶಾಸನದಲ್ಲಿ ಬರುವ 'ಉಭಯಂಗರೂರುಗಾಗಿ ಉದ್ವಿಪರ್ವ್ವಯಾಗಲಿ'

ಎಂಬುದು ಉಭಯ ಪೀಠಗಳ ಶಾಖಾಮಟಗಳು ವಾನರಾಸಿಯಲ್ಲಿದ್ದು 'ಚಂದ್ರಮೌಳೇಶ್ವರ' ಲಿಂಗದ ಆರಾಧನೆ ನಡೆಸುತ್ತಿದ್ದುವೆನಿಸುತ್ತದೆ. ರೈಸರ ಶಾಸನ ಸಂಪುಟದಲ್ಲಿ ಈ ಶಾಸನ ದಾಖಲಾಗಿದ್ದು, ಶ್ರೀ ವೀರಕಂಪಣ ವೊಡೆಯರು ಕೊಟ್ಟ ಗ್ರಾಮದಾನದ ಬಗ್ಗೆ ಉಕ್ತ ಮಾಡಿದೆ.[೫೨] ರೈಸರು ಈ ಶಾಸನದ ಕಾಲವನ್ನು ಕ್ರಿ.ಶ. ೧೩೭೨ರ ಬುಕ್ಕನ ಮಗ ಇಮ್ಮಡಿ ಕಂಪಣರು ಎಂದು ಶಕ ಸಂವತ್ಸರ ಮಾತ್ರವಲ್ಲದೆ ತೇದಿಯ ವಿವರಸಿದ್ದರೂ ಶಾಸನದ ಕಾಲದ ಬಗ್ಗೆ ಸಂದೇಹ ಅಭಿಪ್ರಾಯವಿಟ್ಟಿದ್ದಾರೆ. ಡಾ. ವಸುಂಧರಾ ಫಿಲಿಯೋಜಾ ಫಿಲಿಯೋಜ ಅವರು ಶಾಸನದಲ್ಲಿ ಬರುವ 'ಪರಿಧಾವಿ ಸಂವತ್ಸರದ ಫಾಲ್ಗುಣ ಶುದ್ಧ ೫ ಗುರುವಾರ ಎಂಬ ಕಾಲವನ್ನು ಯಫಿ ಮರೀಸ್‌ನ ಹೊಂದಿಕೆಯಿಟ್ಟು ಕ್ರಿ.ಶ. ೧೩೧೩ ಫೆಬ್ರವರಿ ಮೊದಲ ತೇದಿ ಎಂದು ಮತ್ತೆ ಶಾಸನಡ ಲೇಖನವನ್ನು ವಾನರಾಸಿಗೆ ಹೋಗಿ ಓದಿ ನಿರ್ಧರಿಸಿದೆ ಎಂದಿದ್ದಾರೆ.[೫೩] (ಶಾಸನದ ಪೂರ್ಣಪಾಠವನ್ನು ರೈಸರೂ ಕೊಟ್ಟಿಲ್ಲ. ಕಾರಣ ರೈಸರ ಕಾಲಕ್ಕೆ ಶಾಸನದ ಹಿಂಬದಿ ಹುತ್ತದಿಂದ ಮುಚ್ಚಿ ಹೋಗಿತ್ತು. ಶಾಸನದ ಹಿಂಬದಿಯಲ್ಲಿಯೂ ಶಾಸನಾಕ್ಷರಗಳಿದ್ದು, ಅಸ್ಪಷ್ಟವಾಗಿದೆ. ಶ್ರೀಮತಿ ಫಿಲಿಯೋಜಾ ಅವರೂ ಅದನ್ನು ಗಮನಿಸಿಲ್ಲ. ಇರಲಿ) ಶಾಸನದ ಮೇಲ್ತುದಿಯಲ್ಲಿ ಸೂರ್ಯಚಂದ್ರರ ನಡುವೆ ತ್ರಿಶೂಲವಿದ್ದು, ಶಿವಪರವಾದ ಅಂಶವು ಶಾಸನದ ವಿಷಯಕ್ಕೆ ಅನುಗುಣವಾಗಿದೆ. ಶಾಸನದಲ್ಲಿ ಹೇಳಿರುವ ದೈವಾಲೆಯು ಶಿವದೇವಾಲಯವೆಂದು ಪರಿಸರ ಸಾಕ್ಷ್ಯದಿಂದ ಅರಿವಿಗೆ ಬರುತ್ತದೆ. ಸಂಗಮ ವಂಶಿಕರು ತ್ರ್ಯಂಬಕ ಶಿವರಾಧಕರಲ್ಲವೆ! ಇದರ ಜೊತೆಗೆ ಕ್ರಿ.ಶ. ೧೩೬೧ರ ವೀರಬುಕ್ಕಂಣ ವೊಡೆಯನ ಕಾಲದ ತಮಿಳು ಶಾಸನದಲ್ಲಿ 'ಶ್ರೀ ವೀರಪ್ಪ ಕಣಾಲು ಉಟ್ಟೆಯರ ಕುಮಾರರ ಕಮಟಾ ಉಟೈರು! ಅಂದರೆ ಶ್ರೀ ವೀರ ಬುಕ್ಕಂಣ್ಣ ಉಡೆಯರ ಕುಮಾರರು ಕಂಪಣ ಒಡೆಯರು, ಮುಳುಯಾಯಿಟ್ (ಮುಳುಬಾಗಿಲು) ಪಟ್ಟಣದಿಂದ ರಾಜ್ಯವಾಳುತ್ತಿದ್ದ ಬಗ್ಗೆ ಹೇಳಿದೆ.[೫೪] ಆದರೆ ವಾನರಾಸಿ ಶಾಸನದಲ್ಲಿ 'ಕುಮಾರ' ಎಂಬ ವಿಶೇಷಣ 'ಕಂಪಣ'ನಿಗಿರದೆ ಮುಂದಿನ ಕಾಲದ ತಮಿಳು ಶಾಸನದಲ್ಲಿರುವ ಕಾರಣ ವಾನರಾಸಿ ಶಾಸನದ 'ಶ್ರೀ ವೀರ ಕಂಪಣ ವೊಡೆಯನು' ಸಂಗಮಪುತ್ರ ಕಂಪಣನಾಗಿ ಕ್ರಿ.ಶ. ೧೩೧೩ರ ಕಾಲದವ ಎಂಬುದೇ ಸೂಕ್ತವಾಗುತ್ತದೆ. ಅರಕಲಗೂಡು ತಾಲೂಕು ರುದ್ರಪಟ್ಟಣದ ಕ್ರಿ.ಶ. ೧೩೫೭ (!)ರ ಶಾಸನದಲ್ಲಿ[೫೫] ಶ್ರೀ ವೀರ ಬುಕ್ಕಂಣನ ಆಳ್ವಿಕೆಯನ್ನು ಹೇಳುತ್ತಾ, 'ಹುಕ್ಕಂಣ ವೊಡೆಯರು ತಂಮಕುಮಾರ ಬುಕ್ಕಣ್ಣ ವೊಡೆಯರಿಗೆ' ಲಕ್ಷ್ಮೀಪುರದ ರಾಜಕಾಲುವೆಯನ್ನು ಗಟ್ಟಿಗೊಳಿಸಲು ಹೇಳಿದ ವಿಷಯವಿದೆ. ಇಲ್ಲಿ 'ಕುಮಾರ' ಎಂಬ ಶಬ್ದವು 'ಸೋದರ' ಎಂಬ ಅರ್ಥ ಕೊಡುವಂತೆ ಕೋಲಾರದ ತಮಿಳು ಶಾಸನ ನೀಡುವುದಿಲ್ಲ. ಅಲ್ಲದೆ ಬುಕ್ಕಣ್ಣನ ತಮ್ಮ 'ಕಂಪಣ' ಎಂದು ಇಲ್ಲಿಯೂ ಪರಿಗ್ರಹಿಸಿದರೆ ಕ್ರಿ.ಶ. ೧೩೬೧ರ ಶಾಸನದ ಕಾಲದಲ್ಲಿ ಈ 'ಕಂಪಣ' ಇರದೆ ಇತಿಹಾಸ ಸಾಮಂಜಸ್ಯಕ್ಕೆ ಸರಿಯಾಗುವುದಿಲ್ಲ. ಶಾಸನದ ಕಾಲ ತಪ್ಪಾಗಿ ಉಕ್ತವೆಂದರೆ ಬುಕ್ಕನಿಗೆ ಕಿರಿಯವೆನಿಸುವಂಥ ಕಂಪಣನೇ ಕ್ರಿ.ಶ. ೧೩೧೩ರಲ್ಲಿ ಆಳುವಲ್ಲಿ ಬುಕ್ಕನ ಆ ಕಾಲದ ಆಳ್ವಿಕೆಗೆ ಮತ್ತಷ್ಟು ಪುರಾವೆ ಸಿಕ್ಕಿದಂತಾಗುತ್ತದೆ.

ಇನ್ನು ಕ್ರಿ.ಶ. ೧೩೫೫ರ ಚಿತ್ರದುರ್ಗದ ಸಂಪಿಗೆ ಸಿದ್ದೇಶ್ವರಗುಡಿ ಶಾಸನದಲ್ಲಿ[೫೬] (ಮುಮ್ಮಡಿ ಬಲ್ಲಾಳನ ಮೈದುನ ಸೋಮಯ್ಯ) ಸಾಯ್ಯದ ಯಾ ಸೋಮಯ್ಯನ ಮಗ ಮಲ್ಲಿನಾಥ ವೊಡೆಯನ ಆಳ್ವಿಕೆಯನ್ನು ಪ್ರಸ್ತಾಪಿಸಿದೆ. ಇವನ ತಂದೆ ಸೋಮಯ್ಯ ಕ್ರಿ.ಶ. ೧೩೦೫ರ ಕಂಪಿಲನೆದುರಿನ ಯುದ್ಧದಲ್ಲಿ ತೀರಿಕೊಂಡ ಬಗ್ಗೆ ಹೊಳಲ್ಕೆರೆ ಶಾಸನವು ಹೇಳಿದೆ. ಇದರಿಂದ ಮಲ್ಲಿನಾಥ ಒಡೆಯನು ಸೋಮಯ್ಯನಿಗೆ ಕ್ರಿ.ಶ. ೧೩೦೫ ಅಥವಾ ಅದಕ್ಕೂ ಮುನ್ನ ಹುಟ್ಟಿದನೆಂದಾಗುತ್ತದೆ. ಸೋಮಯ್ಯ ಬುಕ್ಕನ ಅಳಿಯ ಮಲ್ಲಿನಾಥ ಬುಕ್ಕನ ಮೊಮ್ಮಗ ಎಂದಿರುವ ಶಾಸನವೊಂದನ್ನು ಒಪ್ಪಿದರೆ ಬುಕ್ಕ ಕ್ರಿ.ಶ. ೧೩೭೭ರ ವೇಳೆಗೆ ಸಥಾಯುಷಿಯಾಗಿ ೮ನೇ ವಯಸ್ಸಿನಿಂದ ೨೧ ವರ್ಷ ರಾಜ್ಯವಾಳಿದ ಎಂಬುದು ಅಭಾಸವಾಗುತ್ತದೆ. ಅಂತಾಗಿ ಸೋಮಯ್ಯ ಬುಕ್ಕನ ತಂಗಿಯ ಗಂಡ, ಮಲ್ಲಿನಾಥ ಸೋದರಿಯ ಮಗನಿರಬೇಕು ಎಂದು ಶ್ರೀಮತಿ ಫಿಲಿಯೋಜಾ ಹೇಳುತ್ತಾರೆ. ಬುಕ್ಕ ಕ್ರಿ.ಶ. ೧೩೦೦ರ ಸುಮಾರಿನಲ್ಲಿ ಹುಟ್ಟಿದ ಎಂದಿದ್ದಾರೆ.[೫೭] ಆದರೆ ಸಂಗಮಪುತ್ರ ಬುಕ್ಕನ ಜನನ ಕಾಲವನ್ನು ಕ್ರಿ.ಶ. ೧೩೦೦ಕ್ಕೂ ಮುಂಚೆ ಒಯ್ಯಬಹುದು. ಬುಕ್ಕನು ೧ನೇ ಕಂಪಣನ ತಮ್ಮನೆಂದರೆ ಕಂಪಣನು ಕ್ರಿ.ಶ. ೧೩೧೩ರ (ವಾನರಾಸಿ ಶಾಸನ) ಮಹಾಮಂಡಲೇಶ್ವರನಾಗಿ ಆಳುವಲ್ಲಿ ಕನಿಷ್ಠ ೨೫ ವರ್ಷದವನೆನ್ನಬೇಕು. ಬುಕ್ಕ ಹಾಗೂ ಕಂಪಣರ ನಡುವೆ ೧ ವರ್ಷ ವ್ಯತ್ಯಾಸವೆಂದರೂ ಬುಕ್ಕ ೨೪ ವರ್ಷದವನಾಗುತ್ತಾನೆ. ಅವರು ಏಕೋದರರರರೆಲ್ಲದಿದ್ದರಂತು ಬುಕ್ಕನಿಗೂ ಆ ವೇಳೆಗೆ ೨೫ ವರ್ಷವಾಗಿರುವಂತಾಗಬಹುದು. ಬುಕ್ಕನೇ ಕಂಪಣನ ಅಣ್ಣನೆಂದರೆ ಮೇಲಿನ ವಾದವೇ ಹೊಂದುತ್ತದೆ. ಅಲ್ಲಿಗೆ ಕ್ರಿ.ಶ. ೧೩೧೯ ರದೆನ್ನಬಹುದಾದ ಜಾಲಮಂಗಲ ಶಾಸನದ ಕಾಲವನ್ನು ಸಮ್ಮತಿಸಿದರೆ ಬುಕ್ಕನೂ ಮಹಾಮಂಡಲೇಶ್ವರನಾಗಿ ಆ ವೇಳೆಗೆ ಇದ್ದಿರಬೇಕೆಂದಾಗುತ್ತದೆ.

ಇನ್ನು ಬುಕ್ಕನ ಭಾವಮೈದುನ ಸೋಮಯ್ಯನಿಗೆ ಕ್ರಿ.ಶ. ೧೩೦೫ರ ವೇಳೆಗೆ ಮಲ್ಲಿನಾಥ ಜನಿಸಿದನೆಂದರೆ ಆಗ ಅವನ ತಾಯಿ ಬುಕ್ಕನ ತಂಗಿಗೆ ಕನಿಷ್ಠ ೧೬ ವರ್ಷವಿದ್ದು ಕ್ರಿ.ಶ. ೧೨೮೯-೯೦ರ ಸುಮಾರಿಗೆ ಹುಟ್ಟಿದವಳಾಗುತ್ತಾಳೆ. ಅಂದರೆ ಸಂಗಮನಿಗೆ ಒಬ್ಬ ಪುತ್ರಿಯೂ ಇದ್ದಳೆಂದಾಗುತ್ತದೆ; ಬುಕ್ಕ ಕ್ರಿ.ಶ. ೧೨೮೮-೮೯ರ ಆಸುಪಾಸಿನಲ್ಲಿ ಹುಟ್ಟಿದವನಾಗುತ್ತಾನೆ. (ಅವನು ಬಹಳ ದೀರ್ಘಕಾಲ ಬದುಕಿದ್ದ ಎನ್ನುವ ಮಾತೂ ಇದೆ) ಹೀಗಾಗಿ, ೧ನೇ ಕಂಪಣ ಕ್ರಿ.ಶ. ೧೩೧೩ರಲ್ಲಿ ಮಹಾಮಂಡಲೇಶ್ವರನಾಗಿದ್ದನೆಂದರೆ ಹರಿಹರನೂ ಬೇಲೂರು ತಾಲೂಕು ಪುಷ್ಪಗಿರಿ ಶಾಸನ (ಸಂಖ್ಯೆ ೪೪೮) ಅನುಸರಿಸಿ ಹೇಳಿದರೆ ಈ ಹೊತ್ತಿಗೆ ಮಹಾಮಂಡಲೇಶ್ವರನಾಗಿದ್ದುದು ಸಹಜವಾಗುತ್ತದೆ. ಮತ್ತೆ ಕ್ರಿ.ಶ. ೧೩೧೯ರಲ್ಲಿ ಬುಕ್ಕನೂ ಮಹಾಮಂಡಲೇಶ್ವರನಾಗಿದ್ದ ಸಾಧ್ಯತೆಯನ್ನು ಜಾಲಮಂಗಲ ಶಾಸನದಿಂದ ಹೆಕ್ಕುವುದಾಗುತ್ತದೆ.

ರಾಮನಗರದ ಬೆಟ್ಟದ ಶಾಸನ (ತ್ರಿಯಂಬಕಮಟ) ಹಾಗೂ ರಾಮನಗರ ತಾಲೂಕಿನ ಜಾಲಮಂಗಲ ಶಾಸನಗಳ ಹಿನ್ನೆಲಯಲ್ಲಿ ಬಾಯ್ದೆರೆ ಕತೆಗಳ ಹಿನ್ನೆಲೆಯಲ್ಲಿ ಸಂಗಮ

ಸೋದರರಿಬ್ಬರು ಈ ಪ್ರದೇಶಗಳಲ್ಲಿ ತಮ್ಮ ಆರಂಭಿಕ ದೆಸೆಯನ್ನು ಕೆಲಕಾಲ ಕಳೆದಿರಬೇಕೆನ್ನಿಸುತ್ತದೆ. ಇದಕ್ಕೆ ಪೋಷಕವಾಗಿ ಗೆಜ್ಜಗಾರಗುಪ್ಪೆಯ ಬಟ್ರಾಜುಗಳ ಮನೆತನದ ಚರಿತ್ರೆಯೂ ಪರೋಕ್ಷ ಪುರಾವೆ ನೀಡುತ್ತದೆ. ಈ ಭಟ್ರಾಜುಗಳು ಕಾಕತೀಯರಲ್ಲಿ ವೀರ ಪರಾಕುದಾರರಾಗಿ ಹೋಗಲು ಈ ಸುತ್ತಿನಲ್ಲಿ ಹಕ್ಕ ಬುಕ್ಕರು ಅವರ ಪರಿಚಯಕ್ಕೆ ಬಂದು ಕಾಕತೀಯರಲ್ಲದೆ ಹಕ್ಕ ಬುಕ್ಕರ ವಿಜಯನಗರದಾಳ್ವಿಕೆಯಲ್ಲಿ ಅವರಲ್ಲಿ ಸೇವೆಗೆ ನಿಂತದ್ದು ಶಾಸನೋಕ್ತವಾಗಿ ಭಟ್ರಾಜುಗಳಿಗೆ ಅನ್ವಯವಾದಂತಿದೆ. ಗೆಜ್ಜಗಾರಗುಪ್ಪೆ ಜಾಲಮಂಗಲದ ಮುಂದಿನ ಗ್ರಾಮಗಳಲ್ಲಿ ಒಂದು.


ಓರಂಗಲ್ಲಿನ ಕಾಕತೀಯ ಪ್ರತಾಪರುದ್ರನು ಕ್ರಿ.ಶ. ೧೩೦೪ ರಿಂದ ಕ್ರಿ.ಶ. ೧೩೧೬ರ ಸುಮಾರಿನಲ್ಲಿ ಕರ್ನಾಟಕದ ಕೆಲ ಭಾಗಗಳನ್ನು ವಶಪಡಿಸಿಕೊಂಡಾಗ ಕ್ರಿ.ಶ. ೧೩೨೩ ರವರೆಗೂ ಆ ಭಾಗಗಳ ನಿಯಂತ್ರಣವನ್ನು ಸ್ಥಳೀಯ ಪಾಳೆಯಗಾರ ನಾಯಕರನ್ನು ಒಲಿಸಿಕೊಂಡು ನಾಯಕರ ವ್ಯವಸ್ಥೆಯ ಪ್ರಭಾವದಂತೆ ಅಧಿಕಾರಿಗಳನ್ನಾಗಿ ಮಾಡಿಕೊಂಡು ಆಳಿರಬೇಕೆನ್ನಿಸುತ್ತದೆ. ಜೋಳರಿಂದ ಮಾಗಡಿ ಪ್ರದೇಶವನ್ನು ಹೊಯ್ಸಳರು ವಶಪಡಿಸಿಕೊಂಡಂತೆ ಪ್ರತಾಪರುದ್ರನು ಅವರಿಂದ ಮಾಗಡಿ ಪ್ರದೇಶವನ್ನು ವಶಪಡಿಸಿಕೊಂಡು ಕೆಲಕಾಲ ಆಳಿದ.[೫೮] ಈ ಅವಧಿಯಲ್ಲಿ ಹಕ್ಕ ಬುಕ್ಕರು ಶಿವನಗಿರಯ ಐತಿಹ್ಯಕ್ಕೂ ಪೋಷಕವಾಗಿರುವಂತೆ ಪ್ರತಾಪರುದ್ರನ ಪ್ರಭಾವಕ್ಕೆ ಒಳಗಾಗಿ ಅಧಿಕೃತ ಮಹಾಮಂಡಲೇಶ್ವರ ಪದವಿಯನ್ನು ಸಾಂಗಗೊಳಿಸಿಕೊಂಡು ಸಂಪರ್ಕಗೊಂಡಿರುವಂತಿದೆ. ಇದರಿಂದ ಕಾಕತೀಯರಲ್ಲಿ ಭಂಡಾರಿಗಳಾಗಿ ಹೋಗಲು ಅನುಕೂಲವಾಗಿರಬೇಕು. ಬಹುಶ: ಹೊಯ್ಸಳರಲ್ಲಿ ಮಹಾಮಂಡಲೇಶ್ವರರಾಗಿದ್ದರೂ ಪ್ರತಾಪರುದ್ರನ ಮಾಗಡಿ ಪ್ರದೇಶದ ಅಧಿಕಾರವಧಿಯಲ್ಲಿ ಅದಕ್ಕೆ ಎರವಾದಾಗ ಅವನಲ್ಲಿಗೆ ಭಂಡಾರಿಗಳಾಗಿ ಹೋದರೆನಿಸುತ್ತದೆ. ಕಾಕತೀಯರಲ್ಲಿ ಪ್ರತಾಪರುದ್ರ ಹಕ್ಕ ಬುಕ್ಕರು ಭಂಡಾರಿಗಳಾಗಿದ್ದರು ಎಂಬುದನ್ನು ಡಾ. ಜಿ.ಎಸ್.ದೀಕ್ಷಿತ್ ಅವರು ಖಚಿತಗೊಳಿಸಿದ್ದಾರೆ.[೫೯] ಪಾಲ್ಕುರಿಕೆ ಸೋಮನಾಥನೂ ಮಾಗಡಿ ಸನಿಹದ ಕಲ್ಯಕ್ಕೆ ೬೪ ಶೀಲದ ಚನ್ನಮ್ಮನ ದರ್ಶನಕ್ಕೆ ಬಂದ. ಅಷ್ಟೇ ಅಲ್ಲ ಅಲ್ಲಿಯೇ ನಿಂತು ವೀರಶೈವ ಧರ್ಮಪ್ರಸಾರಕ್ಕೂ ಅನುವು ಮಾಡಿಕೊಂಡದ್ದು ಕಾಕತೀಯರ ಈ ಭಾಗದ ಅಧಿಕಾರಾವಧಿಯಲ್ಲಿರಬೇಕು.

ರೈಸರು ಪ್ರಶ್ನೆಚಿಹ್ನೆ ಇಟ್ಟು ಕ್ರಿ.ಶ. ೧೨೩೪ ರದೆಂದಿರುವ ತುಮಕೂರು ತಾಲೂಕು ಮುಳುಕುಂಟೆ ತಾಮ್ರ ಶಾಸನದ ರೀತ್ಯಾ[೬೦] ಕಾಕತೀಯ ಪ್ರತಾಪರುದ್ರನು ಕರ್ನಾಟ, ದ್ರಾವಿಡ, ತೌಳವ ಇತ್ಯಾದಿ ದೇಶಗಳನ್ನು ಭಾಗಗಳು ಅಂಕೆಗೆ ತೆಗೆದುಕೊಂಡು ತೀರ್ಥಯಾತ್ರೆ ಮಾಡುತ್ತಾ ಕಕುದ್ಗಿರಿಗೆ (ಶಿವಗಂಗೆ) ಬಂದ ವಿಷಯವಿದೆ ಹಾಗೂ ಮಕರಸಂಕ್ರಾಂತಿಯಂದು ಗಿರಿಯ ಮೇಲಿನ ಗಂಗೋದ್ಭವವನ್ನು ಕಂಡು ಗಂಗಾಧರೇಶನಿಗೆ ಉತ್ಸವ ಮಾಡಿಸಿದ; ಗಿರಿಜಾ ಕಲ್ಯಾಣ ಮಹೋತ್ಸವವನ್ನು ಮಾಡಿಸಿದ. ಗಿರಿಯಲ್ಲಿ ರಾಮೇಶ್ವರ ಹಾಗೂ ಹನುಮಲಿಂಗಗಳನ್ನು ನೋಡಿ ಅನಂತಪುರ ಎಂಬ ಗ್ರಾಮವನ್ನು ಅಲ್ಲಿ ನಿರ್ಮಿಸಿ, ಕೆರೆ ಕಟ್ಟಿಸಿ ತಾಮ್ರಶಾಸನ

ಹಾಕಿಕೊಟ್ಟದ್ದನ್ನು ಪ್ರತಿಲೇಖ ಮಾಡಿದೆ ಎಂದು ಶಾಸನೋಕ್ತವಿದೆ. ರೈಸರು ಸೂಚಿಸಿರುವ ಸಂದೇಹದ ಕಾಲವನ್ನು ಒಪ್ಪಿದರೆ ಇತಿಹಾಸ ಸಾಮಂಜಸ್ಯ ಬರುವುದಿಲ್ಲ. ಕ್ರಿ.ಶ. ೧೧೫೦-೯೫, ಒಂದನೇ ಪ್ರತಾಪರುದ್ರನ ಕಾಲ; ಕ್ರಿ.ಶ. ೧೨೩೪ರಲ್ಲಿ ಕಾಕತೀಯ ದೊರೆ ಆಗಿದ್ದವನು ಗಣಪತಿದೇವ (ಕ್ರಿ.ಶ. ೧೧೯೯-೧೨೬೨). ಹೀಗಾಗಿ ೨ನೇ ಪ್ರತಾಪರುದ್ರನ ಸಂಬಂಧದ್ದೆ (ಕ್ರಿ.ಶ. ೧೨೮೯-೧೩೨೩) ಮುಳುಕುಂಟೆ ಶಾಸನವಾಗಿರಬೇಕು. ಶಾಸನದಲ್ಲಿ 'ಗಜಪತಿ ವೀರಪ್ರತಾಪರುದ್ರ' ಎಂಬ ಹೆಸರು, ಆಂಧ್ರದ ಜಿಲ್ಲೆಯ 'ಅನಂತಪುರ' ಎಂಬ ಹೆಸರಿನಲ್ಲಿ ಗ್ರಾಮದ ಇಲ್ಲಿಯ ಸ್ಥಾಪನೆ; ಶಿವಗಂಗೆಯ ಪ್ರಸಂಗಗಳ ಉದ್ಧೃತ ಪ್ರತಾಪರುದ್ರನ ಸಂದರ್ಭ ಶಿವಗಂಗೆಯಲ್ಲಿ ರಾಚೋಟಿ ವೀರಭದ್ರ (ಆಂಧ್ರದ ದೇವತೆ) ದೇಗುಲವಿದ್ದು ಗುಂಡಯ್ಯ ಬ್ರಹ್ಮಯ್ಯ ಶಿಲ್ಪಗಳಿರುವುದು ಪಾಲ್ಕುರಿಕೆ ಸೋಮನಾಥನ ಕಲ್ಯದ ವಾಸ್ತವ್ಯ ಇವೆಲ್ಲ ೨ನೇ ಪ್ರತಾಪರುದ್ರನ ಅಂಕೆಗೆ ಕೆಲಕಾಲವಾದರೂ ಮಾಗಡಿ ಪ್ರದೇಶವಿದ್ದ ಬಗ್ಗೆ ಸಾಂಸ್ಕೃತಿಕ ಸಾಕ್ಷ್ಯಗಳಾಗಿ, ಶಾಸನದ ನೈಜತೆಗೂ ಒತ್ತುಗೊಳ್ಳುತ್ತದೆ. ಆದ್ದರಿಂದ ಈ ಸಂದರ್ಭಗಳಲ್ಲಿ ಹಕ್ಕ ಬುಕ್ಕರು ಕಾಕತೀಯ ಪ್ರತಾಪರುದ್ರನ ಸಂಪರ್ಕಕ್ಕೆ ಬಂದು ತಮ್ಮ ಮುಂದಿನ ಬದುಕನ್ನು ರೂಪಿಸಿಕೊಂಡಿರುವಂತಿದೆ.

ಓರಂಗಲ್ಲಿನ ಪತನಾನಂತರ ದೆಹಲಿ ಸುಲ್ತಾನರ ವಿರುದ್ಧದ ಭಂಡಾಯಕ್ಕೆ ಚಳುವಳಿಗೆ ಕಾಕತೀಯ ರಾಜಬಂಧುವಾಗಿದ್ದ ಪ್ರೋಲಯನಾಯಕನು 'ಭಟ್ರಾಜು'ಗಳಂಥ ವೀರಲಾವಣಿಕಾರರನ್ನು ನಾಡಪದಕಾರರನ್ನು ಹಾಗೂ ಬೇರೆ ಬೇರೆ ಜಾತಿಗಳಲ್ಲಿದ್ದ ಪರಾಕುದಾರರನ್ನು ಪರಾಕು ಪದಗಳನ್ನು ಹೇಳಲು ಬಳಸಿಕೊಂಡ ವಿಷಯವಿದೆ.[೬೧] ಇಲ್ಲಿಯೇ ಈಗಾಗಲೇ ಪ್ರಸ್ತಾಪಿಸಿದ ಗೆಜ್ಜಗಾರಗುಪ್ಪೆಯ ಬಟ್ರಾಜುಗಳ ಪಾತ್ರ ಬರುವುದು. ಇವರು ಹೊಯ್ಸಳರ ಕಾಲದಿಂದಲೂ (ಶಾಸನೋಕ್ತ ವಿದ್ಯಾರಾಜಬಟು, ಕೀರ್ತಿರಾಜು ಮುಂತಾದ) ಗಜವೀರರಾಗಿದ್ದವರು. ವೀರಪರಾಕುದಾರಿಕೆಯೂ ಇವರಿಗಿತ್ತು. ಜನಿವಾರ ಧಾರಿಗಳಾದ, ೭೭ ಹಳ್ಳಿಗಳ ಪ್ರಸ್ತಾಪವನ್ನು (ಆಂಧ್ರದ ೭೭ ನಾಯಂಕಾರ ವ್ಯವಸ್ಥೆ ಗಮನಿಸಿ) ಇಂದಿಗೂ ಮಾಡುವ ಭಟ್ಟಗ್ರಹಾರವನ್ನೂ ಹೊಂದಿದ್ದವರಾಗಿ ಸ್ತುತಿಪಾಠಕರಾಗಿದ್ದ; 'ಭಟ್ರಾಜು'ಗಳೆಂದು ಇಂದಿಗೂ ಹೇಳಿಕೊಳ್ಳುತ್ತಾರೆ. ಅಂದರೆ ಕೇವಲ ಭಟ್ಟಂಗಿಗಳ ಕೆಲಸದಲ್ಲಿ ನಿರತರಿದ್ದಿದ್ದ ಗಜಶಾಸ್ತ್ರ ಬಲ್ಲಿದರಾಗಿ ಗಜವೀರರೂ ಆಗಿದ್ದ ಕಾರಣ ಬಹುಶಃ ಹಕ್ಕ ಬುಕ್ಕರಿಲ್ಲಿದ್ದಾಗ ಪಡೆದ ಪರಿಚಯದಿಂದಾಗಿ ಓರಂಗಲ್ಲಿನಲ್ಲಿ ಚಕ್ರವರ್ತಿಯ ಸೇವೆಗೆ ನಿಲ್ಲಲನುವಾಗಿರಬೇಕು. ಕೇವಲ 'ಭಟ್ಟ'ರೆನಿಸದೆ ಆಂಧ್ರ ಸಂಪ್ರದಾಯದಂತೆ 'ಭಟ್ರಾಜು'ಗಳೆನಿಸಿ ಆಂಧ್ರ ಪ್ರಭಾವಿತ ವ್ಯಕ್ತಿ ಹಾಗೂ ಕುಲನಾಮಗಳನ್ನು ರೂಪಾಂತರಿಸಿಕೊಂಡಂತಿದೆ. ಇಲ್ಲಿಂದ ಹೋದವರ ವಂಶಿಕರೆ ಪ್ರೋಲಯನಾಯಕನ ಕಾಲದಲ್ಲಿ ಮುಂದುವರಿದಿರಬೇಕು. ಇದಲ್ಲದೆ ಹಕ್ಕ ಬುಕ್ಕರು ವಿಜಯನಗರ ಸ್ಥಾಪನೆಯಾಗಿ ದೊರೆಗಳಾದಾಗ ಈ ಬಟ್ರಾಜುಗಳು ಅವರಲ್ಲಿಯೂ ಸೇವೆಗೆ ನಿಂತರು. ಪೋಷಕವಾಗಿ (ಅರುಹಸಹಳ್ಳಿ, ಕೀರ್ತಿರಾಜು) ಕೀರ್ತಿಯರಸನ ಹಿರಿಯ ಮಗ ಭಟ್ಟರ ಬಾಚಪ್ಪ ಬುಕ್ಕರಾಯನ ಸೇವೆಯಲ್ಲಿದ್ದುದು[೬೨] ಇದಕ್ಕೊಂದು ಉದಾಹರಣೆ ಎನ್ನಬಹುದು.

ಹೀಗೆ ರಾಮನಗರದ ಮಾಗಡಿ ಪ್ರದೇಶದ ಪಾಳೆಯಪಟ್ಟುಗಳಿದ್ದು, ಕಾಕತೀಯರಲ್ಲಿ ಭಂಡಾರಿಗಳಾಗಿ ಹೋಗಿ, ಕಾಕತೀಯ ಪತನಾನಂತರ ಕಂಪಿಲಕ್ಕೆ ಸ್ಥಾನಕ್ಕೆ ಸಾಗಿ, ನಂತರ ಅನೇಕ ವಿಷಮ ಪರಿಸ್ಥಿತಿಗಳನ್ನೆದುರಿಸಿದ ಹಕ್ಕ ಬುಕ್ಕರು ಕೊನೆಗೆ 'ಪಂಪಾಪರಿ ಪರಿಸರೇ ಭವ ಸಂಗಮಾಖ್ಯಾ:'[೬೩] ಎಂದು ಶಾಸನೋಕ್ತವಾಗಿ ಪುನರುತ್ಥಾನಗೊಂಡರು. ಈ ಪರಿಸರದಲ್ಲಿ ಪುನರ್ಭವವಾದರು ಎಂದೇ ವಿನಹಃ 'ಭಾವಸಂಗಮ' ಎಂಬ ವ್ಯಕ್ತಿನಾಮದ ಸಂಬಂಧವಿಲ್ಲಿಲ್ಲ. ಅಂದರೆ ಹೊಸ ಸಾಮ್ರಾಜ್ಯ ಸ್ಥಾಪನೆಗೆ ಕಾರಣರಾದರು ಎಂದಾಗುತ್ತದೆ. ಹೀಗಾಗಿ ಸಂಗಮ ಪುತ್ರರು ಕನ್ನಡನೆಲದ ಕಟ್ಟಾಳುಗಳಾಗಿ ಕರ್ನಾಟಕದ ಸಾಮ್ರಾಜ್ಯ ವೈಭವವನ್ನು ತೋರಿದವರಾಗಿದ್ದಾರೆ. ಅದಕ್ಕೆ ಪೋಷಕವಾಗಿ ರಾಮನಗರ ತಾಲೂಕು ಮಾಗಡಿ ತಾಲೂಕು ಪ್ರದೇಶಗಳಂಥವೂ ಅವರ ಬದುಕಿಗೆ ಪುಟಗೊಟ್ಟ ಬಗೆಯನ್ನು ಇಲ್ಲಿ ಹೇಳಿದೆ.




ಕೆಳದಿ ವೀರಭದ್ರ ದೇವಾಲಯದ ಭೋಗ ಮಂಟಪದ ಹಾಸುಗಲ್ಲಿನ ಮೇಲಿರುವ
ತಮ್ಮಡಿ ವೀರಪ್ಪನ ರೇಖಾ ಚಿತ್ರ



ರಾಮದೇವ ಬೆಟ್ಟದ ಕಾರ್ಖಾನೆಯ ಬಂಡೆ ಹತ್ತಿರದ ಚಪ್ಪಡಿ ಶಾಸನ



ಜಾಲಮಂಗಲದ ಸೋಮೇಶ್ವರ ಗುಡಿಯ ಶಾಸನ



ವಾನರಾಶಿಯ ಕ್ರಿ.ಶ. ೧೩೧೩ನೆಯ ಶಾಸನ



ಕೆಳದಿ ವೀರಭದ್ರ ದೇವಾಲಯದ ಧ್ವಜಸ್ತಂಭದ ಮೇಲೆ ಕೆಳದಿ ಚೆನ್ನಮ್ಮಾಜಿ, ಇತರ ಶಿಲ್ಪಗಳು

ಅಡಿಟಿಪ್ಪಣಿಗಳು

೧. ಎಫಿಗ್ರಾಫಿಯ ಕರ್ನಾಟಕ, ಸಂ.೧೧ (ರೈಸ್ ಆವೃತ್ತಿ), (ಶ್ರವಣಬೆಳಗೊಳ ಚಿಕ್ಕಬೆಟ್ಟ, ಶಾಸನ ಸಂಖ್ಯೆ ೭, ೨೦, (ಕ್ರಿ.ಶ. ೮ನೇ ಶತಮಾನ); ಹೊಸ ಆವೃತ್ತಿ - ಸಂಖ್ಯೆ ೯, ೨೩); 'ಗೊರವಡಿಗಳ್ ಎಂಬ ಪ್ರಯೋಗ ೬ ಮತ್ತು ೭ನೇ ಸಂಖ್ಯೆಶಾಸನದಲ್ಲಿದೆ. 'ಮೋನಿ ಗುರುವರ ಶಿಷ್ಯ; ಮೋನಿ ಗುರುವಡಿಗಳ ಸಿಷಿತ್ತಿಯರ್ ' ಎಂಬ ಪ್ರಯೋಗ ೧೦, ೨೩ನೇ ಶಾಸನದಲ್ಲಿದೆ.

೨. ಕನ್ನಡ ನಿಘಂಟು (ಮೊದಲನೆಯ ಸಂಪುಟ), ೧೯೭೮, ಕನ್ನಡ ಸಾಹಿತ್ಯ ಪರಿಷತ್ತು, ಪು. ೧೪೩
ii. ಸಿರಗನ್ನಡ ಅರ್ಥಕೋಶ, ೧೯೬೨, (ಸಂ) ಶಿವರಾಮಕಾರಂತ

೩. ಎಂ.ಜಿ.ನಾಗರಾಜ್, ೧೯೯೩, ಕೆಂಬಟ್ಟಿ ಹೊಲೆಯರ ಸಂಸ್ಕೃತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ಪು. ೩೪೧

೪. ಕಿಟ್ಟೆಲ್ ನಿಘಂಟು, ೨೦೦೧ (೧೦th Aesprint- ನ್ಯೂಡೆಲ್ಲಿ) (ಪ್ರಥಮ ಮುದ್ರಣ, ೧೮೯೨) ಪು. ೬೯೪

೫. ಮಂಡ್ಯ ತಾಲೂಕು ಗುತ್ತಲು ಶಿವಾರ್ಚಕ ‖ ವೇ ‖ ಮುದ್ದಪ್ಪ, ೧೯೧೫, ಶ್ರೀಮರ್ಮ ಮೈಸೂರು ಸಂಸ್ಥಾನದಲ್ಲಿದತಕ್ಕ ತಮ್ಮಡಿಗಳೆಂಬ ಶುದ್ಧ ಶೈವ ಶಿವಾರ್ಚಕ ಬ್ರಾಹ್ಮಣ ಮತಾದರ್ಶ, ಬೆಂಗಳೂರು, ಪು. ೫೬, ಈ ಕೃತಿಯನ್ನು ಒದಗಿಸಿಕೊಟ್ಟ ತಮ್ಮಡಿಗಳ ಪೈಕಿಯ ಶ್ರೀ ಎಸ್ .ಕುಮಾರಸ್ವಾಮಿ, ಬೆಂಗಳೂರು ಅವರಿಗೆ ಲೇಖಕ ಆಭಾರಿ.

೬. ಶಿವಾಗಮ ಸೌರಭ (ಭಾಗ-೨), ೧೯೮೬, (ಸಂ) ಎಂ.ಜಿ.ನಂಜುಂಡಾರಾಧ್ಯ, ಶ್ರೀ ಜಚನಿ ಅಧ್ಯಯನ ಪೀಠ ಮತ್ತು ಸಂಶೋಧನ ಸಂಸ್ಥೆ, ಬೆಂಗಳೂರು, ೧೫೬

೭. ಎಸ್.ಕೆ.ರಾಮಚಂದ್ರರಾವ್, ೧೯೫೭, ಮೂರ್ತಿಶಿಲ್ಪ ನೆಲೆ ಹಿನ್ನೆಲೆ, ಬೆಂಗಳೂರು ವಿಶ್ವವಿದ್ಯಾಲಯ, ಪು. ೧೧೧-೧೧೩

೮. ಎ.ಕ.ಸಂ.೩. (ಹೊಸತು), ೧೯೩೪, ಗುಂಡ್ಲುಪೇಟೆ ೬೭, ೬೮ (ಕಮರವಳ್ಳಿ, ೮ನೇ ಶತಮಾನ) ಮೈಸೂರು ವಿಶ್ವವಿದ್ಯಾಲಯ

೯. ಎ.ಕ. ಸಂಪುಟ ೨, (ಹೊಸತು), ೧೯೭೩, (ಶ್ರವಣಬೆಳಗೊಳ ೨೨, ೧೭)

೧೦. ಎ.ಕ.ಸಂಪುಟ ೮ (ಹೊಸತು), ೧೯೮೪, ಹಾಸನ ಜಿಲ್ಲೆ, ಹೊಳೆ ನರಸೀಪುರ ೧೦೭, ೧೦೮ (ಮೂಡಲಹಿಪ್ಪೆ, ೧೨ನೇ ಶತಮಾನ, ಕ್ರಿ.ಶ. ೧೧೭೧)

೧೧. ಎ.ಕ.ಸಂ.೧೧ (ಹೊಸತು) ೨೦೦೨, ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ೧೭ (ಕಣಚೂರು, ಕ್ರಿ.ಶ. ೧೦೪೯; ಶಾಸನದಲ್ಲಿ ತಂಮಡಿ ಮಸಕ ಎಂದಿರುವಾಗ 'ಮಸಕ' ಎಂದರೆ ತೀವ್ರ ಆವೇಶ, ಮಸಕುಬಣ್ಣ ಎಂದು ಕಿಟ್ಟೆಲ್ ನಿಘಂಟಿನಲ್ಲಿ (ಪು. ೧೨೨೪) ನೀಡಲಾಗಿದೆ. ಈ ತಮ್ಮಡಿಯ ಸಂದರ್ಭದಲ್ಲಿ ತೀವ್ರ ಆವೇಶದವ ಎಂಬುದಕ್ಕಿಂತ ಮಸಕುಬಣ್ಣದ ಅಂದರೆ ಕಪ್ಪುಬಣ್ಣದವರ ಎಂಬುದು ಹೆಚ್ಚು ಸೂಕ್ತವಾಗಬಹುದು. ಹಾಗಾದರೆ ಕಾಳಾಮುಖ ಶೈವನಾಗಿ ಈ ತಂಮಡಿ ಮಸಕನಿಟ್ಟಿರಬಹುದು ಹಾಗೂ ಆ ವರ್ಗದವರಲ್ಲೂ ತಮ್ಮಡಿಗಳಿದ್ದರು ಎಂದಾಗುತ್ತದೆ. ಕಾರಣ ಕಾಳಾಮುಖ ಶೈವರನ್ನು ಶುದ್ಧಶೈವರೆನ್ನುವುದುಂಟು.

೧೨. ಎ.ಕ.ಸಂ.೩ (ಹೊಸತು), ೧೯೭೪, ಮೈಸೂರು ಜಿಲ್ಲೆ, ನಂಜನಗೂಡು ೧೯೧ (ಮೂಡಹಳ್ಳಿ, ಕ್ರಿ.ಶ. ೧೧೭೦)

೧೩. ಎ.ಕ.ಸಂ.೩ (ಹೊಸತು), ೧೯೭೪ ಮೈಸೂರು ಜಿಲ್ಲೆ, ಚಾಮರಾಜನಗರ ೩೮೩, (ತಮ್ಮಡಿಹಳ್ಳಿ, ಕ್ರಿ.ಶ. ೧೧೭೮)

೧೪. ಅದೇ ಮೈಸೂರು ಜಿಲ್ಲೆ, ಚಾಮರಾಜನಗರ ೧೪೩ (ಕೆಂಪನಪುರ, ಕ್ರಿ.ಶ. ೧೧೬೯)

೧೫. ಎ.ಕ.ಸಂ.೩ (ಹೊಸತು), ೧೯೭೪, ನಂಜನಗೂಡು ೧೫೬, (ಜೋಡಿಕಾಟೂರು, ಕ್ರಿ.ಶ. ೧೧೯೮)

೧೬. ಎ.ಕ.ಸಂ.೩ (ಹೊಸತು), ಅದೇ, ಹೆಗ್ಗಡದೇವನಕೋಟೆ ೫೬ (ಬೆಳತೂರು, ೧೨ನೇ ಶತಮಾನ)

೧೭. ಎ.ಕ.ಸಂ.೩ (ಹೊಸತು), ಅದೇ, ಚಾಮರಾಜನಗರ ೧೪೩ (ಕೆಂಪನಪುರ; ಕ್ರಿ.ಶ. ೧೧೬೯)

೧೮. ಆಂಧ್ರಪ್ರದೇಶದ ಶಾಸನಗಳು, ೨೦೦೧, (ಸಂ), ಡಾ.ಕೆ.ಆರ್.ಗಣೇಶ್, ಡಾ. ಆರ್.ಶೇಷಶಾಸ್ತ್ರಿ, ಅಮರಾಪುರಂ ೬, ಕೆರೆಕೋಡಿ, ಕ್ರಿ.ಶ. ೧೨೭೭, ಮೊದಲಿಗೆ ಚಿಕ್ಕನಾಯಕನಹಳ್ಳಿ ತಾಲೂಕಿಗೆ ಸೇರಿದ ಗ್ರಾಮವಾಗಿತ್ತು. ಹಂಪಿ ಕನ್ನಡ ವಿಶ್ವವಿದ್ಯಾಲಯ ಈಗ ಮಡಕಸಿರಾ ತಾಲೂಕು ಅನಂತಪುರ ಜಿಲ್ಲೆಗೆ ಸೇರಿದ್ದು ಈ ಶಾಸನಗಳ ಸಂಖ್ಯೆ ಅಮರಾಪುರಂ ೫೬, ೬೪ ಆಗಿದೆ. (ನೋಡಿ ಪು. ೬೨, ೬೮); ೦ ತಮ್ಮಡಿಹಳ್ಳಿ (ಮಡಕಸಿರಾ ೭೨)

೧೯. ಎ.ಕ.ಸಂ. ೫ (ಹೊಸತು); ೧೯೭೬, ಮಂಡ್ಯಜಿಲ್ಲೆ, ಮೈಸೂರು ವಿಶ್ವವಿದ್ಯಾಲಯ, ಮಂಡ್ಯ ೬೦ (ಗುತ್ತಲು, ಕ್ರಿ.ಶ. ೧೩೧೬)

೨೦. ಎ.ಕ.ಸಂ. ೯ (ರೈಸ್ ಆವೃತ್ತಿ), ಬೆಂಗಳೂರು ಜಿಲ್ಲೆ, ಚನ್ನಪಟ್ಟಣ ೭೩ (ಮಾಗೇನಹಳ್ಳಿ; ಕ್ರಿ.ಶ. ೧೩೧೮)

೨೧. ಎ.ಕ.ಸಂ.೩ (ಹೊಸತು). ಅದೇ, ನಂಜನಗೂಡು ೨೫೮ (ತಗಡೂರು, ಕ್ರಿ.ಶ. ೧೩೬೮)

೨೨. ಎ.ಕ.ಸಂ.೫ (ಹೊಸತು). ಅದೇ, ಹೆಗ್ಗಡದೇವನಕೋಟೆ ೧೫೧ (ಸಾಗರ ಕ್ರಿ.ಶ. ೧೪೦೭)

೨೪. ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ-೧. ೨೦೦೧. ಅದೇ, ಮದನಪಲ್ಲಿ ೨೪೦ (ತಂಬಳ್ಳಪಲ್ಲಿ ಕ್ರಿ.ಶ. ೧೪೦೫)

೨೫. ಎ.ಕ.ಸಂ.೭ (ಹೊಸತು), ೧೯೭೦, ಮಂಡ್ಯಜಿಲ್ಲೆ (ಮಳವಳ್ಳಿ ೩, ಕ್ರಿ.ಶ. ೧೪೬೫)

೨೬. ಅದೇ, ಮಂಡ್ಯ ೭, ಕ್ರಿ.ಶ. ೧೫೧೬

೨೭. ಎ.ಕ.ಸಂ.೯ (ಅನುಬಂಧ), ಬೆಂಗಳೂರು ಜಿಲ್ಲೆ, ನೆಲಮಂಗಲ ೯೦, ಕ್ರಿ.ಶ. ೧೫೧೭

೨೮. ಕನ್ನಡ ನಿಘಂಟು, ಸಂ.೭ (೧೯೯೩), (ಪ್ರ.ಸಂ) ಎನ್.ಬಸವಾರಾಧ್ಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೬೯೯೪

೨೯. ಎ.ಕ.ಸಂ.೯ (ಅನುಬಂಧ), ಅದೇ ನೆಲಮಂಗಲ ೭೫ (ಶಿವಗಂಗೆ)

೩೦. ಆಂಧ್ರಪ್ರದೇಶದ ಕನ್ನಡ ಶಾಸನಗಳು, ಭಾಗ-೧, ಅದೇ, ಮಡಕಸಿರಾ ೭೩ (ತಮ್ಮಡಿಹಳ್ಳಿ, ಕ್ರಿ.ಶ. ೧೫೪೧)

೩೧. ಮಂಜುಳಾ ಹುಲ್ಲಹಳ್ಳಿ, 'ನಂಜನಗೂಡಿನ ಒಂದು ಅಪ್ರಕಟಿತ ಶಾಸನ', ಇತಿಹಾಸದರ್ಶನ, (ಸಂ) ಎಂ.ಜಿ.ನಾಗರಾಜ್, ಪಿ.ವಿ.ಕೃಷ್ಣಮೂರ್ತಿ, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ಸಂ. ೧೩/೧೯೯೮, ಪು. ೩೬

೩೨. ಎಂ.ಜಿ.ನಾಗರಾಜ್, 'ಜನಪದದಲ್ಲಿ ನಂಜುಂಡ', ಜಾನಪದ ಜಗತ್ತು (ಪ್ರ.ಸಂ.) ಎಚ್.ಎಲ್. ನಾಗೇಗೌಡ, (ಸಂ) ಡಿ.ಲಿಂಗಯ್ಯ, ಡಾ.ಚಕ್ಕೆರೆ ಶಿವಶಂಕರ್, ಕರ್ನಾಟಕ ಜಾನಪದ ಪರಿಷತ್ತು, ಬೆಂಗಳೂರು, ಸಂ. ೨೩, ಸಂಚಿಕೆ ೨-೩, (ಏಪ್ರಿಲ್ -ಸೆಪ್ಟೆಂಬರ್ ೨೦೦೨), ಪು. ೩೬

೩೩. ಎ.ಕ.ಸಂ. ೫ (ಹೊಸತು), ಅದೇ, ಕೃಷ್ಣರಾಜನಗರ ೧೪ (ಮುದ್ದೇನಹಳ್ಳಿ, ಕ್ರಿ.ಶ. ೧೫೯೮)

೩೪. ಇಂದಿಗೂ ವೀರಗಾಸೆ ಕಟ್ಟುವವರು ತಮ್ಮಡಿಗಳ ಪೈಕಿ ಬೂದನೂರು ಪರಶಿವಮೂರ್ತಿ, ಕಿರಾಳು ಮಹೇಶ್, ಹಲಗೂರು ನಾಗರಾಜ್, ಹುಲ್ಲೇನಹಳ್ಳಿ ಆನಂದ ಮುಂತಾದವರು ಪ್ರಸಿದ್ಧ ವೀರಗಾಸಿಗಳಾಗಿದ್ದಾರೆ. ಚಾಮರಾಜನಗರ, ತೆರಕಣಾಂಬಿ ಮುಂತಾದ ಕಡೆ ವೀರಭದ್ರಗುಡಿಯ ಅರ್ಚಕರೂ ಅವರಾಗಿದ್ದಾರೆ.

೩೫. ಈ ಮಾಹಿತಿಯನ್ನು ನೀಡಿದವರು ಬೆಂಗಳೂರಿನ ಶ್ರೀ ಎಸ್.ಕುಮಾರಸ್ವಾಮಿ ಅವರು.

೩೬. i. ಕೆಳದಿ ನೃಪವಿಜಯಂ, ೧೯೭೬, (ಸಂ) ಕೆಳದಿ ಗುಂಡಾಜೋಯಿಸ್, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ತೃತೀಯಾಶ್ವಾಸ, ಪು. ೯೭-೯೯

ii. ಶಿವತತ್ತ್ವ ರತ್ನಾಕರವೂ ವೀರಭದ್ರ ಪ್ರತಿಷ್ಠಾನೆಯ ಬಗ್ಗೆ ಹೇಳಿದೆ (ಸ್ವಂ ಪ್ರಾಪ್ಯದೇಶಂ ಕೆಳದೀ ರಾಮೇಶಾಗಾರ ಸನ್ನಿಧೌ| ನಿರ್ಮಾಪ್ಯಭವನಂ ವೀರಭದ್ರಮಸ್ಥಾಪಯತ್ತತ:||)

೩೭. ಕೆಳದಿನೃಪವಿಜಯಂ, ಅದೇ, ದಶಮಾಶ್ವಾಸ, ಪದ್ಯ ೫೫

೩೮. ಡಾ. ಎಂ.ಜಿ.ಚಂದ್ರಕಾಂತ್, ಎಂ.ಜಿ.ನಾಗರಾಜ್, 'ಕೊಡಗು ಮತ್ತು ಕೆಳದಿ ಅರಸರ ವಂಶಿಕ ಸಂಬಂಧಗಳು', ಇತಿಹಾಸ ದರ್ಶನ, ಸಂ. ೧೪/೧೯೯೯, ಪು. ೨೬೫; ಇದರಲ್ಲಿ ಈ ವೀರಪ್ಪನ ಶಾಸನವನ್ನು 'ಮದುನಿ ವೀರಪ್ಪ' ಎಂದು ಮನೆವಾರ್ತೆ ಸಂದರ್ಭದವನಾಗಿದ್ದ ಕಾರಣ ಗ್ರಹಿಸಲಾಗಿತ್ತು. ಮತ್ತೆ ಶಾಸನದ ನಕಲನ್ನು ತೆಗೆದು ನೋಡಿದಾಗ 'ತಂಮಡಿ ವೀರಪ್ಪ'ನೆಂದು ತಿಳಿಯಲಾಗಿ ಅದರಂತೆ ಈಗ ತಿದ್ದುಪಡಿ ಮಾಡಲಾಗಿದೆ.

೩೯. i. ಎಂ.ಜಿ.ನಾಗರಾಜ್, ೧೯೯೯, ಸಾಂಸ್ಕೃತಿಕ ಶ್ರೀ ವೀರಭದ್ರಸ್ವಾಮಿ, ಶ್ರೀ ಮದ್ರಂಭಾಪುರಿ ವೀರಸಿಂಹಾಸನ ಮಹಾಪೀಠ, ಬಾಳೆಹೊನ್ನೂರು, ಪು. ೮೪

೪೦. ಕೆಳದಿ ಅರಸರ ಸಚಿವರು ಮತ್ತು ಅಧಿಕಾರಿಗಳು, ಆರ್.ಶಾಮಾಶಾಸ್ತ್ರಿ ಸಂಪಾದಿತ 'ಕೆಳದಿ ನೃಪವಿಜಯ' ಕೃತಿಯಿಂದ ಪಿ.ಶಂಕರನಾರಾಯಣರಾವ್ ಅವರು ಸಂಗ್ರಹಿಸಿದ ಪಟ್ಟಿ ನೋಡಿ. ಕೆಳದಿ ಸಂಸ್ಥಾನ ಸಮಗ್ರ ಅಧ್ಯಯನ, (ಸಂ) ಡಾ. ಎಂ.ಎಂ.ಕಲಬುರ್ಗಿ, ಬಿ.ಎಸ್.ರಾಮಭಟ್ಟ, ೧೯೯೪, ಪು. ೪೯೮-೫೦೭

೪೧. ಡಾ. ವಸುಂಧರಾ ಫಿಲಿಯೋಜಾ, ೧೯೮೦, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೧೬

೪೨. ಡಾ. ವಸುಂಧರಾ ಫಿಲಿಯೋಜಾ, ೧೯೯೨, (೨ನೇ ಮುದ್ರಣ), ಅಳಿದುಳಿದ ಹಂಪೆ, ಬೆಂಗಳೂರು, ಪು. ೮

೪೩. ಕರ್ನಾಟಕ ಚರಿತ್ರೆ, ಸಂಪುಟ ೩, ೧೯೯೭, (ಸಂ), ಪ್ರೊ. ಬಿ.ಷೇಕ್ ಅಲಿ, ಪ್ರೊ. ಕೆ.ಎಸ್.ಶಿವಣ್ಣ ಕನ್ನಡ ವಿಶ್ವವಿದ್ಯಾಲಯ, ಹಂಪಿ, ಪು. ೨೧

೪೪. ಸಿ.ಟಿ.ಎಂ.ಕೊಟ್ರಯ್ಯ, ೧೯೯೯, 'ವಿಜಯನಗರ ಸಾಮ್ರಾಜ್ಯ ಮತ್ತು ವೀರಶೈವ ಪ್ರಭಾವ' ಎನಗಿಂತ ಕಿರಿಯರಿಲ್ಲ (ಶ್ರೀ ಅಂಗಡಿ ಸಂಗಣ್ಣ ಅಭಿನಂದನ ಗ್ರಂಥ), (ಸಂ) ಡಾ. ಬಸವರಾಜ ಮಲಶೆಟ್ಟಿ, ಕೊಪ್ಪಳ, ಪು. ೨೮೫

೪೫. ಎ.ಕ.ಸಂ. ೯ (ರೈಸ್ ಆವೃತ್ತಿ), ಬೆಂಗಳೂರು ಜಿಲ್ಲೆ, ನೆಲಮಂಗಲ ೫೩ (ಮುದ್ದಲಿಂಗನಹಳ್ಳಿ ಶಾಸನದಲ್ಲಿ ಶಕವರ್ಷ ೧೩೩೮ ಎಂದು ತಪ್ಪಾಗಿ ನಮೂದಿದೆ. ಅದು ಶಕವರ್ಷ ೧೨೩೮ ಆಗಬೇಕು)

೪೬. ಎ.ಕ.ಸಂ.೯ (ರೈಸ್ ಆವೃತ್ತಿ), ಬೆಂಗಳೂರು ಜಿಲ್ಲೆ, ಚನ್ನಪಟ್ಟಣ ೧೭೫ (ಜಾಲಮಂಗಲ); ಚನ್ನಪಟ್ಟಣ ೧೭೬ (ಜಾಲಮಂಗಲ ಈ ಶಾಸನದಲ್ಲಿ ಕಂಡರಣೆ ಆಗಿರುವ ಲಿಪಿಯ ಕಾಲವು ೧೨೨೧ ಎಂದು ಶಾಸನ ಪಠ್ಯದಲ್ಲಿ ಹಾಗಯೇ ಮುದ್ರಿತವಾಗಿದೆ. ರೈಸರು ಬುಕ್ಕನ ಕಾಲಕ್ಕೆ ಹೊಂದಿಕೆಯಾಗದು ಎಂದು ಊಹಿಸಿ ಕ್ರಿ.ಶ. ೧೩೫೫ (?) ಎಂದು ಪ್ರಶ್ನೆ ಇಟ್ಟು ಕಾಲವನ್ನು ನಮೂದು ಮಾಡಿದ್ದಾರೆ. ಶಾಸನದಲ್ಲಿ ಸಂವತ್ಸರದ ವಿವರಗಳು ಅಳಿಸಿಹೋಗಿವೆ. ಮತ್ತೆ ನಾನು ಶಾಸನದ ಸೂಚಿತ ಅಂಕಿಗಳ ನಕಲನ್ನು ತೆಗೆದು ನೋಡಿದಾಗ '೧' ಮತ್ತು '೨' ಅಂಕಿಗಳು ಹೊಯ್ಸಳ ಶೈಲಿಯಲ್ಲಿದ್ದಂತೆ ಮೂರನೆಯ ಅಂಕಿಯೂ ದುಂಡು ಆಕೃತಿಯಲ್ಲಿದ್ದು ೨ ಅಥವಾ ೮ ಎಂಬ ಸಂಭಾವ್ಯ ಅಂಕಿಯಂತ ತೋರುತ್ತಿವೆ. ರೈಸರು '೨' ಅಂಕಿಯನ್ನು ಪರಿಭಾವಿಸಿದರೂ ಶಕ ೧೨೭೭ (ಕ್ರಿ.ಶ. ೧೩೫೫) ಎಂದೇ ಕಾಲವನ್ನು ಇತಿಹಾಸದ ಅನುಕೂಲತೆ ಎಂದು ನಮೂದಿಸಿರುವುದಕ್ಕೆ ಕಾರಣ ಸ್ಪಷ್ಟವಿಲ್ಲ. ಅಲ್ಲದೆ ಅಂಕಿ '೨' ಮೂರನೇ ಸ್ಥಳದಲ್ಲಿ ಹೊಂದುವುದಿಲ್ಲ. ಬದಲು '೮' ಅಥವಾ '೪' ಅಂಕಿಗಳಾಗಿರಬೇಕು. ನೋಡುವುದಕ್ಕೆ ಮೊದಲಿಗೆ '೮' ಎಂದೇ ಕಂಡರೂ ಕ್ರಿ.ಶ. ೧೨೮೧ (ಕ್ರಿ.ಶ. ೧೩೫೯) ಎಂದು ಭಾವಿಸಿದರೆ ವಾದಕ್ಕೆ ಅವಕಾಶವೇ ಇಲ್ಲ. ಬದಲು ಮೂರನೇ ಅಂಕಿಯತಳ ದುಂಡಗಿದ್ದು ಮೇಲ್ಭಾಗ ಅಡ್ಡಹಾಯ್ದು ಎರಡು ಭಾಗಗಳಾಗಿ ಕಾಣುವಂತಿರುವುದರಿಂದ ಮೂರನೆ ಸ್ಥಳದ ಅಂಕಿ '೪' ಎಂದು ಭಾವಿಸಬೇಕಾಗುತ್ತದೆ. ಆಗ ಶಾಸನದ ಕಾಲ ಶಕ ೧೨೪೧ (ಕ್ರಿ.ಶ. ೧೩೧೯) ಆಗುತ್ತದೆ. ಇಲ್ಲಿನ ಇತಿಹಾಸ ಸಾಮಂಜಸ್ಯಕ್ಕೆ ಕೋಲಾರ ಜಿಲ್ಲೆ ವಾನರಾಸಿಯ ಶಾಸನ ಬೆಂಬಲವಾಗುವಂತಿದೆ. ಮತ್ತು '೮' ಅಂಕಿ ಆಗಿದ್ದರೆ ಒಂದು ಕಡೆ (ಬಲ) ತುಂಡಾಗಿದ್ದು, ಅಂಕಿಯ ಎಡಭಾಗ ಉದ್ದವಾಗಿ ಹೋಗಿ ತುದಿ ತುಸು ಬಾಗಬೇಕಿತ್ತು. ಆದರೆ ಇಲ್ಲಿ ಅಂಕಿಯ ಎರಡೂ ತುದಿಗಳೂ ಮೇಲಕ್ಕೆ ಚಾಚಿ '೪' ಎಂಬುದನ್ನೇ ಹೇಳುತ್ತವೆ.

೪೭. ಎ.ಕ.ಸಂ.೮ (ಹೊಸತು); ೧೯೮೪, ಹಾಸನ ಜಿಲ್ಲೆ, ಅರಕಲಗೂಡು ೧೦೭ (ರುದ್ರಪಟ್ಟಣ); ಕ್ರಿ.ಶ. ೧೩೫೭ ರದೆನ್ನಲಾಗಿರುವ ಈ ಶಾಸನದಲ್ಲಿ ೧ನೇ ಹರಿಹರನ ಹೆಸರನ್ನು 'ಹುಕ್ಕಂಣ ವೊಡೆಯರು' ಎಂದು ಹೇಳಿ 'ಹಕ್ಕ' ಶಬ್ದದ ಮೊದಲ ರೂಪವನ್ನು ಸೂಚಿಸುವಂತಿದೆ. ಇದು ರಾಮದೇವರ ಬೆಟ್ಟದ ಪ್ರಸ್ತುತ ಶಾಸನದ ವಿವೇಚನೆಯ ಸಂದರ್ಭದಲ್ಲಿ ಗಮನಾರ್ಹವಾಗುತ್ತದೆ.

೪೮. ಕರ್ನಾಟಕ ಚರಿತ್ರೆ ಸಂಪುಟ ೩, ಹಂಪಿ ಕನ್ನಡ ವಿಶ್ವವಿದ್ಯಾಲಯ, ಪು. ೨೬

೪೯. ಡಾ. ಕೆ.ವಿ.ರಮೇಶ್, ೧೯೭೧, ಕರ್ನಾಟಕ ಶಾಸನ ಸಮೀಕ್ಷೆ, ಬೆಂಗಳೂರು ವಿಶ್ವವಿದ್ಯಾಲಯ, ಪು.೬೯

೫೦. ಎ.ಕ.ಸಂ.೯ (ರೈಸ್ ಆವೃತ್ತಿ), ಬೆಂಗಳೂರು ಜಿಲ್ಲೆ, ಚನ್ನಪಟ್ಟಣ ೧೬ (ಐಜೂರು ರಾಮನಗರ; ಕ್ರಿ.ಶ. ೧೩೫೫) ಈ ಶಾಸನದಲ್ಲಿ ಉಕ್ತನಾಗಿರುವ 'ಬೆಟ್ಟದ ಬೊಮ್ಮಯ್ಯನಾಯಕ' ರಾಮದೇವರ ಬೆಟ್ಟದ ಗಿರಿದುರ್ಗ ಧನಕುಂಭಿ ಕೋಟೆಯಲ್ಲಿದ್ದ ಬಗ್ಗೆ ಸೂಚನೆಗಳಿವೆ. ಅವನ ಕಾಲದಲ್ಲಿದ್ದ ತ್ರಂಬಕೇಶ್ವರ ದೇಗುಲವು ಶಿಥಿಲವಾಗಿ ಬಿದ್ದಿದ್ದಾಗ ಹಿರಿಯ ಕೆಂಪೇಗೌಡನ ಕಾಲದಲ್ಲಿ ಪುನರುಜ್ಜೀವನಗೊಂಡು 'ರಾಮೇಶ್ವರ' ಎಂದು ಪುನರ್ ಪ್ರತಿಷ್ಠಾಪನೆಗೊಂಡಿರಬೇಕು. ಜಾಲಮಂಗಲದ ಕಲಿದೇವರು, 'ಸೋಮೇಶ್ವರ', ಇಬ್ಬಳಿಕಹಳ್ಳಿ 'ಸೋಮೇಶ್ವರ' ರಾಮನಗರಕ್ಕೆ ಬಂದು 'ಅರ್ಕೇಶ್ವರ' ಎನಿಸಿದಂತೆ ಈ ಮೇಲಿನ ಸಾಧ್ಯತೆಗಳಾಗಿವೆ.

೫೧. ವಾನರಾಸಿಯ ನನ್ನ ಕ್ಷೇತ್ರಕಾರ್ಯದಲ್ಲಿ ನೆರವಾದ ಸರ್ವಶ್ರೀ ವಿ.ಎಮ್ .ಮುನಿವೀರೇಗೌಡ ವಾನರಾಸಿ ಶ್ರೀನಿವಾಸ್, ಬೀರಮಾನಹಳ್ಳಿ ರಾಮಕೃಷ್ಣ, ಕೆ.ವೆಂಕಟೇಶ್, ಹೆಚ್.ಕೆ.ಕೋದಂಡರಾಮಯ್ಯ, ಕೆ.ಕೃಷ್ಣಪ್ಪ, ಬಿ.ಎಸ್.ಭಾರ್ಗವ ಅವರುಗಳ ಮೂಲಕ ಈ ಕತೆಗಳು ತಿಳಿದುಬಂದವು. ಅವರಿಗೆಲ್ಲ ಲೇಖಕ ಆಭಾರಿ.

೫೨. ಎ.ಕ.ಸಂ.೧೦ (ರೈಸ್ ಆವೃತ್ತಿ), ಕೋಲಾರ ಜಿಲ್ಲೆ, ಕೋಲಾರ ತಾಲೂಕು, ೨೦೫ (ವಾನರಾಸಿ)

೫೩. ಡಾ. ವಸುಂಧರಾ ಫಿಲಿಯೋಜಾ, ೧೯೮೦, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು. ೧೭

೫೪. ಎ.ಕ.ಸಂ. ೧೦ (ರೈಸ್ ಆವೃತ್ತಿ), ಅದೇ, ಕೋಲಾರ ೨೦೩ (ಚಿಕ್ಕಪುರ)

೫೫. ಎ.ಕ.ಸಂ. ೮ (ಹೊಸತು; ೧೯೮೪, ಹಾಸನ ಜಿಲ್ಲೆ, ಅರಕಲಗೂಡು ೧೦೭ (ರುದ್ರಪಟ್ಟಣ) ಮೈಸೂರು ವಿಶ್ವವಿದ್ಯಾಲಯ

೫೬. i. ಡಾ. ವಸುಂಧರಾ ಫಿಲಿಯೋಜಾ, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ಅದೇ, ಪು. ೧೨

೫೭. ii. ಅದೇ, ಅಳಿದುಳಿದ ಹಂಪೆ, ಪು. ೮

೫೮. i. ಎಂ.ವಿ.ಕೃಷ್ಣರಾವ್, ೧೯೯೪, ಬೆಂಗಳೂರು ಕೆಂಪೇಗೌಡ, ಬೆಂಗಳುರು, ಪು. ೭೧

ii. ಪೂರಕವಾಗಿ N.G.Ranga, ೧೯೭೧, Kakatiya Nayakas, Nidubrolu, foot Notes, P. ४२; Dr. V.Yashoda Devi, ೧೯೭೫, After Kakatiyas Andrapradesh Sahitya Accdemy, Hyderabad, Pp- ೧-೨೦; Andrapradesh Gazetteer, Orangal, ೧೯೭೬, P. ३५, ಈ ಕೃತಿಗಳಲ್ಲಿನ ಅಂಶಗಳನ್ನು ಗಮನಿಸಬಹುದು.

೫೯. ಡಾ. ಜಿ.ಎಸ್.ದೀಕ್ಷಿತ್, ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ನಾಗಾಭಿನಂದನ ೧೯೯೪, (ಸಂ) ಡಾ. ಎಚ್.ಎಸ್.ಗೋಪಾಲರಾವ್, ಅಭಿನಂದನ ಸಮಿತಿ, ಬೆಂಗಳೂರು, ಪು. ೯೮

೬೦. ಎ.ಕ.ಸಂ. ೧೨ (ರೈಸ್ ಆವೃತ್ತಿ), ತುಮಕೂರು ಜಿಲ್ಲೆ, ತುಮಕೂರು ೧೪ (ಮುಳಕುಂಟೆ ತಾಮ್ರಶಾಸನದ ನಕಲು)

೬೧. N.G.Ranga; OP.cit, P. ೭೧

೬೨. ಡಾ. ವಸುಂಧರಾ ಫಿಲಿಯೋಜಾ, ವಿಜಯನಗರ ಸಾಮ್ರಾಜ್ಯಸ್ಥಾಪನೆ, ಅದೇ, ಪು. ३೯-४೦

೬೩. ಎ.ಕ.ಸಂ. ೫ (ಹೊಸತು), ೧೯೭೬, ಮೈಸೂರು ಜಿಲ್ಲೆ, ಕೃಷ್ಣರಾಜನಗರ ೭೭ (ಹಬಸೂರು)

❖ ❖

೧೨

ವಿಜಯನಗರ ವಾಸ್ತು : ಕೆಲವು ವಿಚಾರಗಳು

ಡಾ. ಶ್ರೀನಿವಾಸ ಪಾಡಿಗಾರ

ವಿಜಯನಗರ ರಾಜ್ಯಸ್ಥಾಪನೆಯೊಂದಿಗೆ ರಾಜಧಾನಿಯಲ್ಲಿ ಬೃಹತ್ ಪ್ರಮಾಣದಲ್ಲಿ ವಾಸ್ತು ಚಟುವಟಿಕೆ ಗೋಚರಿಸುತ್ತದೆ. ವಿಜಯನಗರದ ಪರಿಸರದಲ್ಲಿರುವ ಕಣಶಿಲೆಯ ಬಂಡೆ-ಬೆಟ್ಟಗಳು ಬೃಹದ್ಗಾತ್ರದ ವಾಸ್ತುರಚನೆಗೆ ನಿರಂತರ ಸಾಮಗ್ರಿಯನ್ನು ಒದಗಿಸಿದವು. ವಿರೂಪಾಕ್ಷ, ವಿಠ್ಠಲ, ಬಾಲಕೃಷ್ಣ, ಅಚ್ಯುತರಾಯ ಇತ್ಯಾದಿ ದೇವಾಲಯಗಳು ಮಹಾದ್ವಾರ, ಗೋಪುರ, ಪ್ರಾಕಾರ, ಮಂಟಪಾದಿಗಳಿಂದಲೂ ನಿರ್ಮಾಣಕ್ಕೆ ಬಳಸಿದ ಕಣಶಿಲೆಯೊಂದಿಗೆ ಇಟ್ಟಿಗೆ, ಗಾರೆ ಕೆಲಸಗಳಿಂದಲೂ ಕೂಡಿ ಪ್ರೇಕ್ಷಕರ ದೃಷ್ಟಿಯನ್ನು ಕೇವಲ ಗಾತ್ರ ಮಾತ್ರದಿಂದಲೇ ಸೆಳೆಯುತ್ತವೆ. ಒಟ್ಟಾರೆ ನೋಡಿದಾಗ ವಿಜಯನಗರ ಅರಸರು ತಮಗಿಂತ ಮುಂಚೆ ಆಳಿದ ಕಲ್ಯಾಣದ ಚಾಳುಕ್ಯರು ಮತ್ತು ಹೊಯ್ಸಳರು ರೂಢಿಸಿದ್ದ ವಾಸ್ತು ಪರಂಪರೆಯನ್ನು ಕೈಬಿಟ್ಟು ತಮಿಳು ಪ್ರದೇಶದ ಪೂರ್ತಿ "ದ್ರಾವಿಡ" ವಾಸ್ತು ಪರಂಪರೆಯನ್ನು ಕರ್ನಾಟಕಕಕ್ಕೆ ಕೊಂಡು ತಂದರೋ ಎಂಬ ಭಾವನೆಯನ್ನು ಮೂಡಿಸುತ್ತವೆ. ಅವು ವಿಜಯನಗರ ಶೈಲಿಯ ಉತ್ಕೃಷ್ಟ ಉದಾಹರಣೆಗಳು ಎಂಬುದರ ಬಗ್ಗೆ ಎರಡು ಮಾತಿರದು. ಆದರೆ ಕಾಲಮಾನ ದೃಷ್ಟಿಯಿಂದ ಅವು ವಿಜಯನಗರದ ಪ್ರೌಢ ಕಾಲಾವಧಿಗೆ ಅನ್ವಯವಾಗುತ್ತವೆಂಬುದನ್ನೂ ಗಮನಿಸಬೇಕು.

ಹಾಗಾದರೆ ವಿಜಯನಗರದ ಆರಂಭ ಘಟ್ಟದಲ್ಲಿ ಪರಂಪರಾಗತ ಕರ್ನಾಟಕ ವಾಸ್ತುರಚನಾ ರೀತಿಯ ಮುಂದರಿಕೆ ಇದೆಯೆ? ಎಂಬ ಪ್ರಶ್ನೆ ಏಳುತ್ತದೆ. ಹಂಪೆಯಲ್ಲಿರುವ ವಿರೂಪಾಕ್ಷ ದೇವಾಲಯ ಸಂಕೀರ್ಣದ ಪರಿಸರದಲ್ಲಿರುವ ಕೆಲವು ದೇಗುಲಗಳನ್ನು ವಿಜಯನಗರಪೂರ್ವ ಕಾಲಘಟ್ಟದವೆಂದು ಗುರುತಿಸಲಾಗಿದೆ. ಹೇಮಕೂಟದಲ್ಲಿರುವ ದೇಗುಲಗಳೂ ಅದರಲ್ಲಿ ಸೇರಿವೆ.[೧] ಈ ದೇವಾಲಯ ಮಾದರಿಗಳಲ್ಲಿ ಪ್ರಧಾನವಾದವುಗಳು ಫಾಂಸನಾ (ಕದಂಬನಾಗರ) ರೀತಿಯಲ್ಲಿವೆ. ಈ ರೀತಿಯ ವಾಸ್ತುರಚನೆ ಬಳ್ಳಾರಿ ಜಿಲ್ಲೆಯಲ್ಲಿ ಸಾಕಷ್ಟು ಜನಪ್ರಿಯವಾಗಿತ್ತು.[೨] ಸರಳ ಮತ್ತು ನಿರಾಲಂಕಾರ ಲಕ್ಷಣಗಳಿಂದಾಗಿ ಸೂಕ್ಷ್ಮ ಕೆತ್ತನೆ ಇರದ ಈ ಮಾದರಿ ಕಣಶಿಲೆಯಲ್ಲಿ ಕೆಲಸಮಾಡಲು ಬಹು ಯೋಗ್ಯವಾಗಿತ್ತು. ಅಧಿಷ್ಠಾನದ ಕೆಲವೇ ಮಡಿಕೆಗಳು, ಸರಳ ಗೋಡೆಯಲ್ಲಿದ್ದ ನಿರಾಲಂಕೃತ ಅಥವಾ ನಾಲ್ಕುಪಕಳೆಯ ಹೂವಿನಲಂಕಾರವುಳ್ಳ ಪಟ್ಟಿ, ಮೇಲಕ್ಕೇರಿದಂತೆ ಕಿರಿದಾಗುತ್ತ ಹೋಗುವ ನಾಸಿ ಅಲಂಕಾರವಿರುವ ಸಮಾನಾಂತರ ಕಪೋತಗಳಿಂದಾದ ಪಿರಮಿಡ್ಡಿನಾಕಾರದ ಮೇಲ್ಕಟ್ಟಡ, ಹಿಂಚಾಚು ಮೂಲೆಗಳುಳ್ಳ ಚೌಕ ಶಿಖರ, ಅದರ ಮೇಲ್ಗಡೆ ಸ್ತೂಪಿ-ಕಲಶ, ಅಂತರಾಳದ ಮೇಲ್ಗಡೆ ಮುಂಚಾಚಿರುವ ಶುಕನಾಸಿ ಇತ್ಯಾದಿಗಳು ಖಚಿತ ರೂಪವನ್ನೊದಗಿಸುತ್ತವೆ. ವಿಜಯನಗರಪೂರ್ವದಲ್ಲಿ ಈ ಮಾದರಿ ಬಹುಸಂಖ್ಯೆಯಲ್ಲಿ ಬಳಕೆಯಾಗಿದೆ.

ಸಹಜವಾಗಿಯೇ ಹಂಪಿಯಲ್ಲಿ ನಿರ್ಮಾಣಗೊಂಡ ಸಂಗಮರ ಕಾಲದ ಕೆಲವು ದೇಗುಲಗಳು ಈ ಮಾದರಿಯಲ್ಲಿ ರಚಿತವಾಗಿವೆ. ೧೩೮೫ರಲ್ಲಿ ಕುಂಥುಜಿನನಾಥ ತೀರ್ಥಂಕರನಿಗಾಗಿ ಇಮ್ಮಡಿ ಹರಿಹರನ ಸೇನಾಪತಿ ಇರುಗಪ್ಪ ದಂಡಾನಾಯಕನಿಂದ ರಚಿತವಾದ 'ಗಾಣಗಿತ್ತಿ' ಜೈನ ಚೈತ್ಯಾಲಯ ಇದಕ್ಕೊಂದು ಉದಾಹರಣೆ. ಈ ಚೈತ್ಯಾಲಯದ ಮೇಲ್ಕಟ್ಟಡ ಮೆಟ್ಟಿಲು ಮೆಟ್ಟಿಲಾಗಿ ಪಿರಮಿಡ್ಡಿನಂತೆ ಕಿರಿದಾಗುತ್ತ ಮೇಲಕ್ಕೇರುತ್ತದೆ. ಆದರೆ ಕಪೋತಗಳ ಸಾಲುಗಳ ಮಧ್ಯಾವಕಾಶದಲ್ಲಿ ಹಿಂಚಾಚುಗಳು ಇಲ್ಲ. ಇದನ್ನು ಕದಂಬನಾಗರದ ರೂಪಾಂತರ ಎಂದು ಭಾವಿಸಬಹುದು.

'ಆನೆಲಾಯ'ದ ಹಿಂದುಗಡೆ ಇರುವ ಪಾರ್ಶ್ವನಾಥ ಚೈತ್ಯಾಲಯವು ೧೪೨೬ರಲ್ಲಿ ಇಮ್ಮಡಿ ದೇವರಾಯನ ಆಳ್ವಿಕೆಯಲ್ಲಿ ನಿರ್ಮಾಣಗೊಂಡಿತು. ಇದರ ಮೇಲ್ಕಟ್ಟಡ ಈಗ ಇಲ್ಲ. ಆದರೆ ಗೋಡೆಯಲ್ಲಿರುವ ಪಟ್ಟಿ (ಬಂಧನ) ಮತ್ತು ಕಪೋತದಲ್ಲಿರುವ ಸರಳ ನಾಸಿ ಅಲಂಕಾರ ಇದೊಂದು ಮೂಲತ: ಕದಂಬನಾಗರ ಮಾದರಿಯ ದೇಗುಲವೆಂಬುದನ್ನು ಸೂಚಿಸುತ್ತವೆ. ಮಂಟಪದಲ್ಲಿರುವ ಕಂಬಗಳು ಕಲ್ಯಾಣದ ಚಾಳುಕ್ಯರ ಕಂಬಗಳನ್ನು ನೆನಪಿಸುತ್ತವೆಯಾದರೂ ಕೆಳಗಿನಿಂದ ಮೇಲಕ್ಕೆ ಕಿರಿದಾಗುತ್ತ ಸಾಗಿವೆ.

ಮೇಲೆ ಹೇಳಿದ ಉದಾಹರಣೆಗಳು ಜೈನಬಸದಿಗಳಾದ್ದರಿಂದ ಅವುಗಳಿಗೆ ಕದಂಬನಾಗರ ಮಾದರಿಯನ್ನು ಬಳಸಲಾಗಿದೆ ಎಂಬ ಭಾವನೆ ಮೂಡಬಹುದು. ಆದರೆ ಕದಂಬನಾಗರದ ಬಳಕೆಯ ಕನಿಷ್ಠ ಒಂದು ಜೈನೇತರ ಉದಾಹರಣೆ ಹಂಪಿಯಲ್ಲಿ ಕಾಣಸಿಗುತ್ತದೆ. ವಿರೂಪಾಕ್ಷ

ದೇವಾಲಯದಿಂದ ವಿಜಯವಿಠ್ಠಲ ದೇವಾಲಯಕ್ಕೆ ಹೋಗುವ ಹಾದಿಯಲ್ಲಿರುವ ನರಸಿಂಹದೇವಾಲಯ ಈ ಉದಾಹರಣೆ.[೩] ಈ ದೇವಾಲಯ ೧೩೭೯ರಲ್ಲಿ ಆಗಲೇ ಅಸ್ತಿತ್ವದಲ್ಲಿತ್ತು ಎಂಬುದು ಶಾಸನಗಳಿಂದ ಅರಿವಾಗುತ್ತದೆ. ಆದ್ದರಿಂದ ಅದನ್ನು ಇಮ್ಮಡಿ ಹರಿಹರನ ಆಳ್ವಿಕೆಯ ಅವಧಿಗೆ (೧೩೭೭-೧೪೦೪) ಅನ್ವಯಿಸಲಾಗುತ್ತದೆ. ಗರ್ಭಗೃಹ, ಶುಖನಾಸಿ ಮತ್ತು ರಂಗಮಂಟಪಗಳನ್ನೊಳಗೊಂಡು ಈ ದೇವಾಲಯಕ್ಕೆ ಕದಂಬನಾಗರ ಮಾದರಿಯ ಶಿಖರವಿದೆ. ಕಂಬಗಳು ಕಲ್ಯಾಣದ ಚಾಳುಕ್ಯರ ಕಾಲದ ದೇಗುಲಗಳ ಕಂಬಗಳನ್ನು ನೆನಪಿಸುತ್ತವೆ. ನರಸಿಂಹನಿಗೆ ಮುಡಿಪಾದ ವೈಷ್ಣವ ದೇವಾಲಯವಾಗಿರುವುದರಿಂದ ಗೋಡೆಯಲ್ಲಿ ಗರುಡ, ಹನುಮಂತ ಶಿಲ್ಪಗಳಿವೆ. ಗೋಡೆಯಲ್ಲಿರುವ ಲತಾಪಟ್ಟಿ ಮತ್ತು ರಂಗಮಂಟಪದ ಪಶ್ಚಿಮ ದ್ವಾರದ ದ್ವಾರಪಾಲಕರು ಚಾಳುಕ್ಯ-ಹೊಯ್ಸಳ ಶೈಲಿಗೆ ಸಾಮ್ಯಹೊಂದಿವೆ.

ರಾಜಧಾನಿಯಿಂದ ದೂರದಲ್ಲಿ, ಪಶ್ಚಿಮ ಕರ್ನಾಟಕದಲ್ಲಿ ಕದಂಬನಾಗರ ರೀತಿಯ ಜೈನ ಮತ್ತು ಹಿಂದೂ ದೇವಾಲಯಗಳೆರಡಕ್ಕೂ ಪ್ರಧಾನವಾಗಿ ಬಳಕೆಯಾಗಿರುವುದು ಗೋಚರಿಸುತ್ತದೆ. ಬೀಳಗಿಯ ರತ್ನತ್ರಯ ಬಸದಿ, ಇಟಗಿಯ ರಾಮೇಶ್ವರ ದೇವಾಲಯ,[೪] ಸೋಂದೆಯ ಶಂಕರನಾರಾಯಣ ಮತ್ತು ತ್ರಿವಿಕ್ರಮ ದೇವಾಲಯಗಳು (ಎಲ್ಲವೂ ಉತ್ತರ ಕನ್ನಡ ಜಿಲ್ಲೆಯಲ್ಲಿವೆ) ಇದಕ್ಕೆ ಉದಾಹರಣೆಗಳನ್ನೊದಗಿಸುತ್ತವೆ.[೫]

ದಕ್ಷಿಣ ಭಾರತೀಯ 'ದ್ರಾವಿಡ' ದೇಗುಲ ಮಾದರಿಗೆ ಒಲವು ಸೂಚಿಸುವ ದೇಗುಲ ಸಂಗಮರ ಆಳ್ವಿಕೆಯ ಕಾಲದಲ್ಲಿಯೇ ಕಾಣದೊರೆಯುತ್ತದೆ. ಈ ದೃಷ್ಟಿಯಿಂದ ಹೇಮಕೂಟದಲ್ಲಿರುವ ದೇಗುಲಗಳ ಗುಂಪಿನಲ್ಲಿರುವ ೩ನೆಯ ನಂಬರಿನ ತ್ರಿಕೂಟ ದೇಗುಲ ಗಮನೀಯವಾದುದು. ಇದನ್ನು ವಿಜಯನಗರಪೂರ್ವ ಕಾಲದ ದೇಗುಲವೆಂದು ಸಾಮಾನ್ಯವಾಗಿ ಭಾವಿಸಲಾಗುತ್ತಿದೆ. ಆದರೆ ವಿವರಗಳನ್ನು ಗಮನಿಸಿದಾಗ ಸಂಗಮರ ಆರಂಭಕಾಲಕ್ಕೆ (೧೪ನೇ ಶತಮಾನದ ಎರಡು-ಮೂರನೆಯ ಪಾದ) ಇದನ್ನು ಅನ್ವಯಿಸಬೇಕಾಗುತ್ತದೆ. ಪೂರ್ತಿ ಕಣಶಿಲೆಯಿಂದ ರಚಿತವಾಗಿರುವ ಈ ದೇಗುಲವು ಚಾಳುಕ್ಯ-ಹೊಯ್ಸಳ ಪರಂಪರೆಯನ್ನು ಕಂಬಗಳ ವಿನ್ಯಾಸದಲ್ಲಿ ಹಾಗೂ ಶುಕನಾಸ ಮುಂಚಾಚಿನಲ್ಲಿ ಮುಂದುವರಿಸಿದೆ. ಚಾಳುಕ್ಯ-ಹೊಯ್ಸಳ ದೇಗುಲಗಳ ವಿವರಕ್ಕೂ ಈ ದೇಗುಲದ ವಿವರಕ್ಕೂ ಇರುವ ಒಂದು ಪ್ರಮುಖ ವ್ಯತ್ಯಾಸವೆಂದರೆ ಮೇಲ್ಕಟ್ಟಡದ ಹಾರದಲ್ಲಿರುವ ಸ್ಪಷ್ಟ ಮತ್ತು ಖಚಿತ ಕೂಟ, ಶಾಲ, ಪಂಜರಗಳ ರೂಪು. ಈ ಲಕ್ಷಣವು ಅದನ್ನು ವಿಜಯನಗರದ 'ದ್ರಾವಿಡ' ಶೈಲಿಗೆ ಹತ್ತಿರ ತರುತ್ತದೆ.

ಇಮ್ಮಡಿ ದೇವರಾಯನ ಕಾಲದವರೆಗಿನ ಸಂಗಮರ ಕಾಲದ ದೇವಾಲಯಗಳು ವಿಜಯನಗರಪೂರ್ವ ದೇವಾಲಯಗಳಂತೆ ಸಾಮಾನ್ಯ ಗಾತ್ರದವಾಗಿರುತ್ತಿದ್ದುವೆಂಬುದು ಗಮನೀಯ. ಉದಾಹರಣೆಗೆ ಹಜಾರರಾಮ ದೇವಾಲಯ. ಈ ದೇವಾಲಯದಲ್ಲಿ ಕೆಲವು ಹೊಸ ಲಕ್ಷಣಗಳು ಕಾಣಿಸಿಕೊಂಡಿವೆ. ರಂಗಮಂಟಪವನ್ನು ಪ್ರವೇಶಿಸಲು ಮುಖಮಂಟಪ

ಸಹಿತ ಮೂರು ದ್ವಾರಗಳಿದ್ದಾಗ್ಯೂ ಗರ್ಭಗೃಹದ ಇಕ್ಕೆಲಗಳಲ್ಲಿ ರಂಗಮಂಟಪದ ಮೂಲಕ ಪ್ರದಕ್ಷಿಣೆಗೆ ಅನುಕೂಲಕರವಾಗುವಂತೆ ದ್ವಾರಗಳಿರುವುದು ವಿಶೇಷ. ಇದು ನಿರಂಧಾರ ದೇಗುಲವಾಗಿದ್ದರೂ ಈ ರೀತಿಯ ವ್ಯವಸ್ಥೆ ಇರುವುದು ಕುತೂಹಲಕಾರಿಯಾಗಿದೆ. ಮುಂದೆ ವಿಜಯವಿಠ್ಠಲ, ಬಾಲಕೃಷ್ಣ ದೇವಾಲಯಗಳಲ್ಲಿ ಕಾಣುವ ಸಾಂಧಾರ ರಚನೆಗೆ ಪೂರ್ವಭಾವಿಯಾಗಿ ಹಜಾರರಾಮ ದೇಗುಲದ ಈ ರಚನೆ ಇದ್ದಂತಿದೆ. ಗೋಡೆಗಳಲ್ಲಿರುವ ರಾಮಾಯಣದ ಕಥಾನಿರೂಪಕ ದೃಶ್ಯಗಳು ಈ ಗುಡಿಯ ಇನ್ನೊಂದು ವಿಶೇಷ. ದೇಗುಲಗಳ ಗೋಡೆಯನ್ನು ಶಿಲ್ಪಗಳಿಂದ ಅಲಂಕರಿಸುವ ಚಾಳುಕ್ಯ-ಹೊಯ್ಸಳ ಪರಂಪರೆಗೆ ಇದು ಸಂಬಂಧ ಹೊಂದಿರಬಹುದು. ನಂತರದ ವಿಜಯನಗರ ದೇಗುಲಗಳಲ್ಲಿ ಗೋಡೆಯ ಅಲಂಕಾರವು ಕೇವಲ ಸ್ತಂಭಪಂಜರ, ಕುಂಭಪಂಜರ, ದೇವಕೋಷ್ಠ ಇತ್ಯಾದಿಗಳಿಗೆ ಸೀಮಿತವಾಗಿರುತ್ತದೆ. ಇತರ ಶಿಲ್ಪಗಳು ತೀರ ಅಪರೂಪ.

ಎರಡನೆಯ ವಿಚಾರ ಕಟ್ಟಡ ನಿರ್ಮಾಣ ಸಾಮಗ್ರಿಗೆ ಸಂಬಂಧಿಸಿದೆ. ವಿಜಯನಗರ ಕಾಲದಲ್ಲಿ ಸಾಮಾನ್ಯವಾಗಿ ಕಣಶಿಲೆಯ ದೊಡ್ಡಗಾತ್ರದ ಘನಗಳನ್ನು ಬಳಸಿ ಕಟ್ಟಡಗಳನ್ನು ನಿರ್ಮಿಸಿರುವುದು ಮತ್ತು ಮೇಲ್ಕಟ್ಟಡಗಳನ್ನು ಇಟ್ಟಿಗೆ-ಗಾರೆಗಳಿಂದ ನಿರ್ಮಿಸಿರುವುದು ಕಾಣುತ್ತದೆ. ಭಾರೀ ಗಾತ್ರದ ಕಟ್ಟಡಗಳಾಗಿದ್ದುದರಿಂದ ಬಹುಶಃ ಕಣಶಿಲೆಯ ಮೇಲ್ಕಟ್ಟಡ ರಚನೆಯ ಭಾರವನ್ನು ಹೊರಲು ಸಾಧ್ಯವಾಗದೆಂಬ ಭಾವನೆಯಿಂದ ಈ ರೀತಿ ಮಾಡಲಾಯಿತೆ? ಅಥವಾ ದೊಡ್ಡ ಪ್ರಮಾಣದಲ್ಲಿ ಕಣಶಿಲೆಯ ಘನಗಳನ್ನು ಮೇಲಕ್ಕೆತ್ತಲು ಬೇಕಾಗುವ ತಾಂತ್ರಿಕ ಸಾಮರ್ಥ್ಯದ ಕೊರತೆಯಿತ್ತೆ? ಇಟ್ಟಿಗೆಗಳನ್ನು ಮೇಲಕ್ಕೆತ್ತುವ ಕಾರ್ಯ ಹೆಚ್ಚು ಸರಳ. ಇಟ್ಟಿಗೆ-ಗಾರೆಗಳನ್ನು ಬಳಸಿ ಮೇಲ್ಕಟ್ಟಡ ರಚಿಸಲು ಬೇಕಾಗುವ ಕಾಲಾವಕಾಶವೂ ಕಡಿಮೆ. ಸಹಜವಾಗಿಯೇ ಪ್ರತಿಯೊಬ್ಬ ಅರಸನೂ ತಾನು ಪ್ರಾರಂಭಿಸಿದ ದೇವಾಲಯ ನಿರ್ಮಾಣ ಬೇಗನೆ ಮುಗಿಯಬೇಕೆಂಬ ಆಕಾಂಕ್ಷೆಯುಳ್ಳವನಾಗಿರುತ್ತಾನೆ. ಬಹುಶಃ ಈ ಕೊನೆಯ ಎರಡು ಕಾರಣಗಳಿಂದಾಗಿಯೇ ಇಟ್ಟಿಗೆ-ಗಾರೆಯ ದೊಡ್ಡ ಪ್ರಮಾಣದ ಬಳಕೆ ವಿಜಯನಗರದ ದೇಗುಲ ನಿರ್ಮಾಣದಲ್ಲಿ ಕಾಣುತ್ತದೆ ಎಂದು ಭಾವಿಸಬಹುದೇನೊ. ಹೊಯ್ಸಳರ ಕಾಲದಲ್ಲಿ ಬೃಹತ್ ಶಿಕರ ನಿರ್ಮಾಣದ ಸಂದರ್ಭದಲ್ಲಿ ವಾಸ್ತುಶಿಲ್ಪಿಗಳು ಇದೇ ತಂತ್ರಕ್ಕೆ ಮಾರುಹೋಗಿರುವ ಸ್ಪಷ್ಟ ಉದಾಹರಣೆ ಇದೆ. ವಿಷ್ಣುವರ್ಧನನು ಕಟ್ಟಿಸಿದ ಬೇಲೂರಿನ ಚನ್ನಕೇಶವ ದೇವಾಲಯಕ್ಕೆ ಈಗ ಶಿಖರವಿಲ್ಲ. ಆದರೆ ಮೂಲತಃ ಇಟ್ಟಿಗೆ-ಗಾರೆಯಿಂದ ರಚಿತ ಭೂಮಿಜ ಶಿಖರವನ್ನು ಅದು ಹೊತ್ತಿತ್ತೆಂಬುದು ೧೯೧೩ರಲ್ಲಿ ಬಾರ್ನೆಟ್ ಪ್ರಕಟಿಸಿರುವ ಛಾಯಾಚಿತ್ರವೊಂದರಿಂದ ಅರಿವಾಗುತ್ತದೆ.೬ ಹೊಯ್ಸಳರ ಇನ್ನಿತರ ಕೆಲವು ದೇಗುಲಗಳಿಗೂ ಇದೇ ತಂತ್ರದ ಬಳಕೆಯಾಗಿರುವ ಸಾಧ್ಯತೆ ಹೆಚ್ಚು. ಚೋಳರು ಅನೇಕ ಸಂದರ್ಭಗಳಲ್ಲಿ ಇಟ್ಟಿಗೆ-ಗಾರೆಯ ಮೇಲ್ಕಟ್ಟಡಗಳನ್ನು ರಚಿಸಿರುವುದು ತಿಳಿದೇ ಇದೆ.

ಈ 'ಅವಸರ'ವೇ ಕಾರಣವೇನೋ ಎಂಬಂತೆ ಬೃಹತ್ ವಿಜಯನಗರ ದೇವಾಲಯಗಳಲ್ಲಿ ಉತ್ಕೃಷ್ಟ ಶಿಲ್ಪಕಲೆಯ ಪ್ರಮಾಣ ಕುಸಿದಂತೆ ತೋರುತ್ತದೆ. ದೊಡ್ಡ ಪ್ರಮಾಣದಲ್ಲಿ

ಉದ್ಯಮೋಪಾದಿಯಲ್ಲಿ ತೀವ್ರಗತಿಯಲ್ಲಿ ಒತ್ತಡಪೂರ್ವಕ ಬೃಹತ್ ನಿರ್ಮಿತಿಗಳಾಗ ತೊಡಗಿದಾಗ ಸಹಜವಾಗಿಯೇ ಅದರ ಪರಿಣಾಮ ಸೂಕ್ಷ್ಮ ಕೆತ್ತನೆಯ ಉತ್ಕೃಷ್ಟತೆಯ ಮೇಲೆ ಅದರ ದುಷ್ಪರಿಣಾಮವಾಗಬಲ್ಲದು. ದೇಗುಲಗಳ ನಿರ್ಮಾಣಕ್ಕಾಗಿ ಕಂಬಗಳ ರಚನೆ ಹೀಗೆ ಉದ್ಯಮೋಪಾದಿಯಲ್ಲಿ ನಡೆದಂತೆ ಕಾಣುತ್ತದೆ. ಆದ್ದರಿಂದ ಅವು 'ಸ್ಟೀರಿಯೋ ಟೈಪ್' ನಿರ್ಮಿತಿಗಳಾಗಿ ಗೋಚರಿಸುತ್ತವೆ. ಹೀಗೆ ಅವರಸರ ಸೂಚನೆ ಶಿಲ್ಪಕಲೆಯ ಕೆಳದರ್ಜೆಯಿಂದಲೂ ಕಾಣುತ್ತದೆ. ಶಿಲಾಶಿಲ್ಪದ ಬದಲಿಗೆ ಹೆಚ್ಚು ಗಮನೀಯ ಉತ್ಕೃಷ್ಟ ಕಲೆಯ ಉದಾಹರಣೆಗಳು ಗಾರೆಯ ಶಿಲ್ಪಗಳಲ್ಲಿ ಅಭಿವ್ಯಕ್ತವಾಗಿವೆ. ವಿಜಯವಿಠ್ಠಲ ದೇಗುಲದ ಅಗ್ರಮಂಟಪ, ಕಲ್ಯಾಣ ಮಂಟಪ ಇತ್ಯಾದಿ ಕೆಲವು ಉದಾಹರಣೆಗಳಲ್ಲಿ ಮಾತ್ರ ಲಕ್ಷ್ಯವಹಿಸಿ ಶಿಲ್ಪ ಮಾಡಿರುವದನ್ನು ಕಾಣಬಹುದು.

ಮೂರನೆಯ ವಿಚಾರ ವಿಜಯನಗರ ವಾಸ್ತು ರಚನೆಯಲ್ಲಿ ಇಂಡೋ-ಇಸ್ಲಾಮಿಕ್ ತಂತ್ರ ಶೈಲಿಗಳ ಪ್ರಭಾವದ ಕುರಿತು. ವಿಜಯನಗರ ರಾಜ್ಯದ ಉತ್ತರಕ್ಕಿದ್ದ ಮುಸ್ಲಿಂ ರಾಜ್ಯಗಳಲ್ಲಿ ವಾಸ್ತುರಚನೆ ದೊಡ್ಡ ಪ್ರಮಾಣದಲ್ಲಿಯೇ ನಡೆಯಿತು. ವಿಜಯನಗರದ ರಾಜ್ಯಾಡಳಿತಾಂತ್ಯದವರೆಗೂ ದೇಗುಲ ನಿರ್ಮಾಣದಲ್ಲಿ ಇಂಡೋ-ಇಸ್ಲಾಮಿಕ್ ಆರ್ಚ್ (ಕಮಾನು) ಮತ್ತು ಡೋಮ್ (ಗುಮ್ಮಟ) ತಂತ್ರಗಳ ಬಳಕೆ ಗೋಚರಿಸುವುದಿಲ್ಲ ಎಂಬುದು ಗಮನೀಯ. ಆದರೆ ಲೌಕಿಕ ವಾಸ್ತುವಿನಲ್ಲಿ ಇವುಗಳ ಬಳಕೆ ಕಾಣುತ್ತದೆ! ಉದಾಹರಣೆಗೆ ಕುದುರೆ ಲಾಯ, ಆನೆ ಲಾಯ, ಅರಸಿಯ ಸ್ನಾನದ ಕಟ್ಟಡ, ಕಮಲ ಮಹಲ್ ಇತ್ಯಾದಿ. ಅಂದರೆ ದೇಗುಲ ನಿರ್ಮಾಣದಲ್ಲಿ ಸಂಪ್ರದಾಯಬದ್ಧತೆ ಸ್ಫುಟವಾಗಿದೆ. ವಿಜಯನಗರೋತ್ತರ ಕಾಲದ ಧಾರ್ಮಿಕ ನಿರ್ಮಿತಿಗಳಲ್ಲಿ ಮಾತ್ರ ಇಂಡೋ-ಇಸ್ಲಾಮಿಕ್ ತಂತ್ರಗಳು ಗುರುತರವಾಗಿ ಬಳಕೆಯಾಗತೊಡಗಿದವು.

ಅಡಿಟಿಪ್ಪಣಿಗಳು

೧. ಡಿ.ವಿ.ದೇವರಾಜ್ ಮತ್ತು ಸಿ.ಎಸ್.ಪಾಟೀಲ್ (ಸಂ). ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್, ೧೯೮೭-೮೮, ಮೈಸೂರು, ೧೯೯೧, ಪು. ೧೧೩-೧೪೨

೨. ವಿವಿಧ ಉದಾಹರಣೆಗಳಿಗೆ ನೋಡಿ, ಸಿ.ಎಸ್.ಪಾಟೀಲ್, ಟೆಂಪಲ್ಸ್ ಆಫ್ ರಾಯಚೂರ್ ಅಂಡ್ ಬಳ್ಳಾರಿ ಡಿಸ್ಟ್ರಿಕ್ಟ್ಸ್, ಕರ್ನಾಟಕ ೧೦೦೦-೧೩೨೫, ಮೈಸೂರು, ೧೯೯೨

೩. ಡಿ.ವಿ.ದೇವರಾಜ್ ಮತ್ತು ಸಿ.ಎಸ್.ಪಾಟೀಲ್ (ಸಂ), ವಿಜಯನಗರ ಪ್ರೊಗ್ರೆಸ್ ಆಫ್ ರಿಸರ್ಚ್, ೧೯೮೪-೮೭, ಮೈಸೂರು, ೧೯೯೧, ಪು. ೧೭೪-೧೭೬

೪. ಚಿತ್ರಗಳಿಗೆ ನೋಡಿ, ರಘುನಾಥ ಭಟ್ ಮತ್ತು ಎಂ.ಎಂ.ಕಲಬುರ್ಗಿ (ಸಂ), ಬೀಳಗಿ ಅರಸು ಮನೆತನ, ಬೆಳಗಾವಿ, ೧೯೯೫

೫. ಚಿತ್ರಗಳಿಗೆ ನೋಡಿ, ಎಂ.ಎಂ.ಕಲಬುರ್ಗಿ ಮತ್ತು ಅ.ಸುಂದರ (ಸಂ). ಸ್ವಾದಿ ಅರಸುಮನೆತನ, ಗದಗ, ೧೯೯೫

೬. ಗೆರಾರ್ಡ್ ಪೊಕಿಮ, ಹೊಯ್ಸಳ ಆರ್ಕಿಟೆಕ್ಚರ್, ನವದೆಹಲಿ, ೧೯೯೪. ಸಂಪುಟ-೨. ಚಿತ್ರ ೧೮೧

❖ ❖

೧೩

ವಿಜಯನಗರದಲ್ಲಿ 'ಪುರ'ಗಳು

ಡಾ. ಹೆಚ್.ಎಂ.ಚಂದ್ರಶೇಖರಶಾಸ್ತ್ರಿ

ವಿಜಯನಗರ ಸಾಮ್ರಾಜ್ಯದ ಸ್ಥಾಪನೆಗೆ ಮೊದಲೇ ಹಂಪೆ ರಾಜಕೀಯ, ಸಾಂಸ್ಕೃತಿಕ ಮತ್ತು ಧಾರ್ಮಿಕ ಕ್ಷೇತ್ರವಾಗಿ ವಿಶಿಷ್ಟ ಸ್ಥಾನವನ್ನು ಪಡೆದಿತ್ತು. ಇದರ ಪ್ರಾಮುಖ್ಯತೆ ಹೆಚ್ಚಿದ್ದು ಹೊಯ್ಸಳ-ವೀರಬಲ್ಲಾಳನ ಕಾಲದಲ್ಲಿ ಮತ್ತು ವಿಜಯನಗರದ ಸಂಗಮ ಮನೆತನದ ಅರಸರ ಆಳ್ವಿಕೆಯಲ್ಲಿ. ಈ ಮನೆತನದ ಆಳ್ವಿಕೆಯ ಆರಂಭದ ಕಾಲದಲ್ಲಿ ಒಂದು ಚಿಕ್ಕ ಕೇಂದ್ರವಾಗಿದ್ದ ಹಂಪೆ ಮುಂದೆ ರಾಜಧಾನಿಯಾಗಿ ಹಿಂದೂ ಮಹಾ ಸಾಮ್ರಾಜ್ಯದ ನಿರ್ಮಾಣಕ್ಕೆ ಸ್ಫೂರ್ತಿ ಚೇತನವನ್ನು ಒದಗಿಸಿತ್ತು. ಚರಿತ್ರಾರ್ಹ 'ವಿಜಯನಗರ' ಸಾಮ್ರಾಜ್ಯದ ರಾಜಧಾನಿಯಾಗಿ ಕ್ರಿ.ಶ. ೧೫೩೧ರ ನಂತರದ ಶಾಸನಗಳಲ್ಲಿ 'ವಿದ್ಯಾನಗರ' ಅಥವಾ 'ವಿದ್ಯಾನಗರಿ' ಎಂದು ಕರೆಯಲಾಗಿದೆ.[೧]

ರಾಜಧಾನಿ ವಿಜಯನಗರವು ಪಟ್ಟಣ ಆನೆಗುಂದಿ, ಹೊಸಪೇಟೆ, ಹಂಪೆ, ಕಮಲಾಪುರ, ಬುಕ್ಕಸಾಗರ, ಶಿವಪುರ, ನೆಲ್ಲಾಪುರ, ದರೋಜಿ ಗ್ರಾಮಗಳನ್ನು ಒಳಗೊಂಡಿತ್ತು. ಈ ವಿಶಾಲ ಗಡಿಗಳ ನಡುವೆ ವಿಜಯನಗರವು ಹಲವು 'ಪುರ'ಗಳಿಂದ ಕೂಡಿತ್ತು. ಆ ಪುರಗಳೆಂದರೆ 'ವಿರುಪಾಕ್ಷಪುರ', 'ಕೃಷ್ಣಾಪುರ'. 'ವಿಠ್ಠಲಾಪುರ', 'ಅಚ್ಯುತಾಪುರ', 'ಕಡೆ ರಾಂಪುರ', 'ಕಮಲಾಪುರ', 'ವರದಾದೇವಿ ಅಮ್ಮನ ಪಟ್ಟಣ' ಇವಲ್ಲದೆ ನಗರದ ಸುತ್ತಮುತ್ತಲಿನಲ್ಲಿ ನಿರ್ಮಾಣಗೊಂಡ ಉಪನಗರಗಳಾದ 'ಮಾಲಪನಗುಡಿ', 'ಸಾಲೆ ತಿರುಮಲರಾಯ ಪಟ್ಟಣ', 'ನಾಗಲಾದೇವಿಪುರ', 'ತಿರುಮಲದೇವಿ ಅಮ್ಮನ ಪಟ್ಟಣ',

‘ಚಿನ್ನವಾಡಿ’ ಅಥವಾ ‘ಚಿತ್ತವಾಡಿ’ಗಳಿಂದ ಕೂಡಿತ್ತು. ವಿರೂಪಾಕ್ಷಪುರ, ಅಚ್ಯುತಾಪುರ, ವಿಠ್ಠಲಾಪುರಗಳು ಕೃಷ್ಣಾಪುರ, ಕಮಲಾಪುರ, ಕಡೆರಾಂಪುರ, ವರದಾದೇವಿ ಅಮ್ಮನ ಪಟ್ಟಣಗಳು ಬೆಳೆದುಬಂದಿವೆ.

ವಿರೂಪಾಕ್ಷಪುರ, ಕೃಷ್ಣಾಪುರ, ವಿಠ್ಠಲಾಪುರ, ಅಚ್ಯುತಾಪುರ, ಕಮಲಾಪುರ, ವರದಾದೇವಿ ಅಮ್ಮನ ಪಟ್ಟಣಗಳು ಪರ್ವತಗಳಿಂದ ಆವೃತ್ತವಾಗಿದ್ದು, ನದಿ, ಕೆರೆ, ಕಾಲುವೆ, ತೋಟ, ಕೋಟೆ ಕೊತ್ತಳಗಳಿಂದ ಕೂಡಿವೆ. ಹೇಮಕೂಟ, ಮಾತಂಗ, ಕಿಷ್ಕಿಂಧ, ಮಾಲ್ಯವಂತ, ಋಷ್ಯಮೂಕ ಪರ್ವತಗಳು ಪ್ರಕೃತಿದತ್ತವಾದ ಪರ್ವತಗಳು ನಿರ್ಮಾಣವಾದ ಬೃಹತ್ ಭದ್ರಕೋಟೆಗಳಂತಿವೆ. ವಿರೂಪಾಕ್ಷಪುರದಿಂದ ಪೆನುಗೊಂಡೆ ಬಾಗಿಲುವರೆಗೆ, ಕಮಲಾಪುರ ಕೆರೆಯಿಂದ ತಳವಾರ ಘಟ್ಟದವರೆಗೂ ಇರುವ ಅಂತರ ೬ ಕಿ.ಮೀ. ಇದೆ. ಇದೇ ರೀತಿ ಕಮಲಾಪುರ - ಹೊಸಪೇಟೆ ರಸ್ತೆಯಲ್ಲಿ ಬರುವ ನೈರುತ್ಯ ದಿಕ್ಕಿನ ಐದು ಹೊರವಲಯಗಳ ಅಂತರವೂ ಸುಮಾರು ೬ ಕಿ.ಮೀ. ಇದ್ದು, ನಗರ ಯೋಜಕರು ಮುಂದೆ ಬೆಳೆಯಬಹುದಾಗಿದ್ದ ನಗರದ ಬೆಳವಣಿಗೆಯನ್ನು ಗಮನವಿರಿಸಿಕೊಂಡೇ ಉಪನಗರಗಳನ್ನು ವಿಜಯನಗರದ ಸುತ್ತಮುತ್ತಲು ನಿರ್ಮಿಸಿದ್ದರು.

ವಿಜಯನಗರದ ಪುರಗಳಲ್ಲೇ ಪ್ರಾಚೀನ ಪುರ ವಿರೂಪಾಕ್ಷಪುರ. ಹಂಪೆಯ ಪ್ರಮುಖ ದೇವಾಲಯವೆಂದರೆ ಪಂಪಾ ವಿರೂಪಾಕ್ಷನದು. ತುಂಗಭದ್ರ ನದಿಯ ತೀರದಲ್ಲಿದ್ದು ದಕ್ಷಿಣ ಭಾರತದ ಪ್ರಸಿದ್ಧ ಯಾತ್ರಾಕ್ಷೇತ್ರಗಳಲ್ಲೊಂದಾಗಿದೆ. ಶ್ರೀ ವಿರೂಪಾಕ್ಷ ಹಂಪೆಯ ಪಾಲಕದೇವರಾಗಿದ್ದ[೨] ವಿಜಯನಗರದ ಪೂರ್ವ ಶಾಸನಗಳು ೭ನೇ ಶತಮಾನದಿಂದ ೧೪ನೇ ಕ್ರಿ.ಶ.ದ. ಶಾಸನಗಳು ಹಂಪೆಯನ್ನು ವಿವಿಧ ಹೆಸರುಗಳಿಂದ ಕರೆದಿವೆ. ವಿರೂಪಾಕ್ಷ ದೇವಾಲಯ ಕ್ರಿ.ಶ. ೬೮೯ರ ವಿನಯಾದಿತ್ಯನ ಕಾಲದಲ್ಲಿತ್ತೆಂದು ಶಾಸನದಿಂದ ತಿಳಿಯಬಹುದಾಗಿದೆ.[೩] ಈ ಶಾಸನದಲ್ಲಿ ಹಂಪೆಯನ್ನು ‘ಪಂಪಾತೀರ್ಥ’ ಎಂದು ಕರೆಯಲಾಗಿದೆ. ಇನ್ನೂ ಕೆಲವು ಶಾಸನಗಳು ‘ಪಂಪಾ’, ‘ಪಂಪಾಕ್ಷೇತ್ರ’, ‘ಪಂಪಾಪುರ’, ‘ಪಂಪಾಸ್ಥಳ’, ‘ವಿರೂಪಾಕ್ಷ ತೀರ್ಥ’, ‘ಹಂಪೆ’, ‘ವಿರೂಪಾಕ್ಷಪುರ’ ಎಂದು ಕರೆದಿರುವುದನ್ನು ತಿಳಿಸುತ್ತವೆ. ವಿರೂಪಾಕ್ಷಪುರವು ವಿಜಯನಗರ ಕಾಲಕ್ಕಿಂತಲೂ ಮುಂಚೆ ಸುದೀರ್ಘ ಇತಿಹಾಸವನ್ನು ಹೊಂದಿತ್ತೆಂದರೆ ತಪ್ಪಾಗಲಿಕ್ಕಿಲ್ಲ.

ಸಂಗಮ ಮನೆತನದ ಅರಸರ ಆಳ್ವಿಕೆ ಆರಂಭವಾಗಿ ಹಂಪೆ ರಾಜಧಾನಿಯಾದ ನಂತರ ಬೆಳವಣಿಗೆ ಹೊಂದಿತು. ಈ ಅವಧಿಯಲ್ಲಿ ವಿರೂಪಾಕ್ಷ ದೇವಾಲಯವನ್ನು ಜೀರ್ಣೋದ್ಧಾರ ಮಾಡಿ, ಗೋಪುರ, ಮಂಟಪಗಳನ್ನು ಸೇರಿಸಿ ವಿಶಾಲವಾಗಿಸಿದರು. ಎರಡನೇ ಪ್ರೌಢದೇವರಾಯ ವಿರೂಪಾಕ್ಷಪುರದ ಬೆಳವಣಿಗೆಯ ಬಗ್ಗೆ ಆಸಕ್ತಿ ವಹಿಸಿದ್ದರ ಬಗ್ಗೆ ಲಕ್ಕಣದಂಡೇಶನು ತನ್ನ ‘ಶಿವತತ್ವ ಚಿಂತಾಮಣಿ’ಯಲ್ಲಿ ಉಲ್ಲೇಖಿಸಿರುವುದನ್ನು ಕಾಣಬಹುದಾಗಿದೆ.[೪] ಇದೇ ರೀತಿ ಮುಂದೆ ತುಳುವ ಮನೆತನದ ಕೃಷ್ಣದೇವರಾಯನ ತನ್ನ ಪಟ್ಟಾಭಿಷೇಕೋತ್ಸವದ ನೆನಪಿಗಾಗಿ ಸಿಂಗಿನಾಯಕನಹಳ್ಳಿಯನ್ನು ವಿರೂಪಾಕ್ಷ ದೇವಾಲಯಕ್ಕೆ

ದತ್ತಿ ಬಿಟ್ಟು, ಮಹಾಮಂಟಪ ಮತ್ತು ರಾಯ ಗೋಪುರವನ್ನು ಕಟ್ಟಿಸಿದರ ಬಗ್ಗೆ ಕ್ರಿ.ಶ. ೧೫೧೦ರ ಶಾಸನ ವಿವರವಾಗಿ ತಿಳಿಸುತ್ತದೆ.[೫] ವಿರೂಪಾಕ್ಷ ದೇವಾಲಯದ ಮುಂಭಾಗದಿಂದ ಪ್ರಾರಂಭವಾಗಿ ಕೊನೆಗೆ ಎದುರು ಬಸವಣ್ಣನ ಮಂಟಪದವರೆಗೂ ಇರುವ ಉದ್ದನೆಯ ಬೀದಿಯೇ 'ವಿರೂಪಾಕ್ಷ ಬಜಾರು' ಇದನ್ನೇ 'ಪಂಪಾರಥವೀಧಿ', 'ತೇರುಬೀದಿ', 'ಹಂಪೆ ಬಜಾರು' ಎಂದು ವಿವಿಧ ಹೆಸರುಗಳಿಂದ ಕರೆಯಲಾಗಿದೆ. ವಿರೂಪಾಕ್ಷ ಬಜಾರು ವಿರೂಪಾಕ್ಷ ದೇವಾಲಯದಷ್ಟೇ ಪ್ರಾಚೀನ. ಈ ಬಜಾರದ ಉದ್ದ ೭೨೦ ಮೀಟರ್ ಅಗಲ ದೇವಾಲಯದ ಹತ್ತಿರ ೩೦ ಮೀಟರ್ ಇದ್ದು ಬಜಾರದ ಕೊನೆಯಲ್ಲಿ ೩೮ ಮೀಟರ್ ಇದೆ.[೬] ಬಜಾರದ ಎಡ-ಬಲಗಳಲ್ಲಿ ಪ್ರಾರಂಭದಿಂದ ಕೊನೆಯ ಮಂಟಪದವರೆಗೂ ಸಾಲುಕಲ್ಲಿನ ಮಂಟಪಗಳನ್ನು ಮೂರು ಅಡಿ ಎತ್ತರದ ಅಧಿಷ್ಠಾನದ ಮೇಲೆ ಕಟ್ಟಲಾಗಿದೆ. ಕೆಲವು ಮಂಟಪಗಳು ಎರಡು ಅಂಕಣಗಳಿಂದ ಕೂಡಿದ್ದರೆ ಇನ್ನೂ ಕೆಲವು ಎರಡು ಅಂಕಣಗಳಿಗಿಂತ ಹೆಚ್ಚು ವಿಸ್ತಾರವಾಗಿವೆ. ಈ ಬೀದಿಯಲ್ಲಿದ್ದ ಕಲ್ಲು-ಮುಳ್ಳುಗಳನ್ನು ತೆಗೆದು ಹಾಕಿಸಿ, ವಿಶಾಲವಾಗಿಸಿದುದರ ಬಗ್ಗೆ ಮತ್ತು ವೀಥಿ (ಬೀದಿ)ಯನ್ನು ಯಾವ ಉದ್ದೇಶಕ್ಕಾಗಿ ಪ್ರೌಢದೇವರಾಯನು ನಿರ್ಮಿಸಿದನೆಂದು, ವಿರೂಪಾಕ್ಷ, ಪಂಪಾಂಬಿಕಾ ಮತ್ತು ಗಣಾಧಿಪರ ರಥ ಎಳೆಯುತ್ತಿದ್ದುದರ ಬಗ್ಗೆ ತನ್ನ ಗ್ರಂಥದಲ್ಲಿ ತಿಳಿಸುತ್ತಾನೆ. ವಿದೇಶಿ ಪ್ರವಾಸಿಗರಾದ ನಿಕೋಲೊ-ದಿ-ಕಾಂಟಿ ಮತ್ತು ಡೊಮಿಂಗೊ ಪಾಯೇಸ ಸಹಾ ರಥಗಳ ಬಗ್ಗೆ ಉಲ್ಲೇಖಿಸಿದ್ದಾರೆ. ಈ ಬೀದಿ ಆರಂಭದಲ್ಲಿ ಕೇವಲ ತೇರು ಬೀದಿಯಾಗಿ ಕಾರ್ಯನಿರ್ವಹಿಸಿದ್ದು, ಅನಂತರ ರಥೋತ್ಸವಗಳ ಜೊತೆಗೆ ಉತ್ಸವಗಳೂ, ಮೆರವಣಿಗೆಗಳೂ ನಡೆಯುತ್ತಿದ್ದವು. ನಿಕೋಲೊ-ದಿ-ಕಾಂಟಿ ಹೋಳಿ ಹಬ್ಬದಲ್ಲಿ ಹೋಳಿಯನ್ನು (ಬಣ್ಣವನ್ನು) ಬೀದಿಯ ಎರಡೂ ಬದಿಯಲ್ಲಿಟ್ಟು ರಾಜ-ರಾಣಿಯರನ್ನು ಬಿಡದೆ ಎಲ್ಲರ ಮೇಲೆ ಎರಚುತ್ತಿದ್ದರೆಂದು ವಿವರಣೆ ನೀಡುತ್ತಾನೆ.

ವಿರೂಪಾಕ್ಷ ದೇವಾಲಯದ ಸುತ್ತಮುತ್ತಲೂ ಬಜಾರನ್ನು ಒಳಗೊಂಡಂತೆ ವಿರೂಪಾಕ್ಷಪುರ ಬೆಳೆದು, ವಿರೂಪಾಕ್ಷ ಬಜಾರು ಮಾರುಕಟ್ಟೆಯಾಗಿದ್ದಿತು. ಬೀದಿಯ ಎಡ-ಬಲಗಳಲ್ಲಿ ಕಟ್ಟಲಾದ ಮಂಟಪಗಳು ಅಂದಿನ ವ್ಯಾಪಾರದ ಮಳಿಗೆಗಳಾಗಿದ್ದವು.

ವಿರೂಪಾಕ್ಷ ಬಜಾರು ಕೇವಲ ಧಾರ್ಮಿಕ-ಆಚರಣೆಗಳ ಮತ್ತು ವ್ಯಾಪಾರಗಳ ಕೇಂದ್ರವಾಗಿರದೆ ಅನೇಕ ಮಠಗಳು ಇಲ್ಲಿದ್ದವು. ಈ ಬಜಾರದಲ್ಲಿ ನಿತ್ಯದಾಸೋಹ ಮಾಡುತ್ತ ಪಂಪಾಪತಿ ರಥವೀಥಿಯಲ್ಲಿ ನೆಲೆಸಿದ್ದ ಗುರುಮೂರ್ತಿ ಒಂದೊತ್ತಿನಯ್ಯಗಳು, ಅಲ್ಲದೆ ಕ್ರಿಯಾಶಕ್ತಿ ಒಡೆಯತಿರಾಯ, ದಕ್ಷಿಣಾಮೂರ್ತಿ ಯತಿಚಕ್ರವರ್ತಿಗಳ ಉಲ್ಲೇಖವನ್ನು ಲಕ್ಕಣ ದಂಡೇಶ ಪ್ರಸ್ತಾಪಿಸಿರುವುದನ್ನು ತಿಳಿಯಬಹುದಾಗಿದೆ.[೭] ಈ ವಿರೂಪಾಕ್ಷ ಬಜಾರದಲ್ಲೇ ಕೆಲವು ವೀರಶೈವ ಮಠಗಳನ್ನು ಮಂಟಪದ ರೂಪದಲ್ಲಿ ನೋಡಬಹುದಾಗಿದ್ದು, ಕೆಲವೊಂದು ಮಠಗಳಲ್ಲಿ ಎರಡು ಮಹಡಿಯನ್ನು ಕಾಣಬಹುದಾಗಿದೆ.[೮] ಮಠಗಳು ಅಂದು ವಿದ್ಯಾದಾನದ ಕೇಂದ್ರಗಳಾಗಿದ್ದವು. ಕನಕದಾಸರು ತಮ್ಮ 'ಮೋಹನ ತರಂಗಿನಿ'ಯಲ್ಲಿ ವಿದ್ಯಾಭ್ಯಾಸ

ಮಾಡುತ್ತಿದ್ದ ವಿದ್ಯಾರ್ಥಿಗಳಿಗೆ ಉಚಿತ ಊಟ-ಬಟ್ಟೆಗಳ ವ್ಯವಸ್ಥೆಯನ್ನು ಮಠಗಳಲ್ಲಿ ಮಾಡುತ್ತಿದ್ದ ಬಗ್ಗೆ ಉಲ್ಲೇಖಿಸುತ್ತಾರೆ.[೯] ಒಟ್ಟಾರೆ ವಿರೂಪಾಕ್ಷಪುರ ಕೇವಲ ಪವಿತ್ರ ಧಾರ್ಮಿಕ ಶಿಕ್ಷಣ ವಾಣಿಜ್ಯ ಕೇಂದ್ರವಾಗಿ ಅಚ್ಚಳಿಯದ ಛಾಪನ್ನು ಮೂಡಿಸಿದ್ದು ವಿಜಯನಗರದ ಏಳಿಗೆಗೆ ತನ್ನದೇ ಆದ ವಿಶಿಷ್ಟ ರೀತಿಯ ಕೊಡುಗೆಯನ್ನು ನೀಡಿದೆ.

ವಿರೂಪಾಕ್ಷಪುರಕ್ಕಿರುವಂತೆ ಕೃಷ್ಣಾಪುರ[೧೦], ವಿಠ್ಠಲಾಪುರ[೧೧], ಅಚ್ಯುತಾಪುರ[೧೨], ವರದಾದೇವಿ ಅಮ್ಮನ ಪಟ್ಟಣ[೧೩], ಕಮಲಾಪುರ[೧೪], ಸಾಲೆ ತಿರುಮಲರಾಯ ಪಟ್ಟಣ[೧೫], ನಾಗಲಾದೇವಿಪುರ[೧೬] ತಿರುಮಲಾದೇವಿ ಅಮ್ಮನ ಪಟ್ಟಣ[೧೭], ಚಿಕ್ಕವಾಡಿ ಅಥವಾ ಚಿನ್ನಾದೇವಿವಾಡ[೧೮] ಗಳಿಗೆ ಶಾಸನಗಳ ಉಲ್ಲೇಖ ಇರುವುದು ನಿಚ್ಚಳವಾಗಿ ಕಂಡುಬರುತ್ತದೆ.

ಈ ಎಲ್ಲಾ ಪುರ-ಪಟ್ಟಣಗಳು ಶಾಸನ ಉಲ್ಲೇಖ ಹೊಂದಿದ್ದು ಕೆಳಕಂಡ ಮುಖ್ಯ ಲಕ್ಷಣಗಳನ್ನು ಹೊಂದಿವೆ :

೧. ಪುರ-ಪಟ್ಟಣಗಳು ಮುಖ್ಯ ದೇವಾಲಯದ ಸುತ್ತ ಮುತ್ತಲು ಬೆಳೆದಿದ್ದವು.
೨. ಒಂದೊಂದು ಪುರದಲ್ಲೂ ಮಾರುಕಟ್ಟೆ ಇದ್ದು, ವಿವಿಧ ಅಂಗಡಿಗಳನ್ನು ರಸ್ತೆಯ (ಬೀದಿಯ) ಎರಡೂ ಬದಿಯಲ್ಲಿ ಕಾಣಬಹುದಾಗಿದೆ.
೩. ಎಲ್ಲಾ ಪುರಗಳ ಮುಖ್ಯ ದೇವಾಲಯಗಳ ಎಡ ಭಾಗದಲ್ಲಿ ಪುಷ್ಕರಿಣಿ, ಕೊಳ ಅಥವಾ ಹೊಂಡಗಳನ್ನು ಕಾಣಬಹುದು.
೪. ಪುರದ ದೇವಾಲಯಗಳು ವಿದ್ಯಾಪ್ರಸಾರದ ಕೇಂದ್ರಗಳಾಗಿದ್ದವು.
೫. ಈ ಎಲ್ಲಾ ಪುರಗಳ ಮುಖ್ಯ ದೇವಾಲಯಗಳಲ್ಲಿ ಧಾರ್ಮಿಕ ಹಬ್ಬ ಹರಿದಿನಗಳ ಆಚರಣೆಗಳನ್ನು ನಿರಂತರವಾಗಿ, ನಿಯಮಿತವಾಗಿ ಆಚರಿಸಲಾಗುತಿತ್ತು. ಕಾಲಾಂತರದಲ್ಲಿ ಮಠಗಳು ಸಹಾ ಪುರಗಳಲ್ಲಿ ತಲೆ ಎತ್ತಿದವು.
೬. ಪುರಗಳು ವ್ಯಾಪಾರ-ವಾಣಿಜ್ಯೋದಮದ ಕೇಂದ್ರಗಳಷ್ಟೇ ಆಗಿರದೆ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳೂ ಆಗಿದ್ದವು.
೭. ಪುರಗಳು ವಿವಿಧ ಜನಾಂಗಕ್ಕೆ ಸೇರಿದ ಜನವಸತಿಯ ತಾಣಗಳಾಗಿದ್ದವು.
೮. ಪುರಗಳ ಬೆಳವಣಿಗೆಯಿಂದಾಗಿ ಅಗ್ರಹಾರಗಳು ಹುಟ್ಟಿಕೊಂಡವು.
೯. ಪುರಗಳು ಯಾವುದೇ ದೇವರ ಹೆಸರಲ್ಲಿ ಇದ್ದರೂ ರಾಜರ ಅಲ್ಲಿ ಸಾಮಾಜಿಕ ಸೌಹಾರ್ದತೆಯನ್ನು ರಕ್ಷಿಸಿ ರಾಜ್ಯದ ಅಭಿವೃದ್ಧಿಗೆ ಕಾರಣರಾಗಿದ್ದರು.
೧೦. ಈ ಎಲ್ಲಾ ಪುರಗಳ ಆಡಳಿತ ನಗರ ನಿಯಂತ್ರಣಾಡಳಿತಕ್ಕೆ ಒಳಪಟ್ಟಿದ್ದವು.

ಈ ಎಲ್ಲಾ ಲಕ್ಷಣಗಳನ್ನು ಕೂಲಂಕುಷವಾಗಿ ಅವಲೋಕಿಸಿದಾಗ ತಿಳಿದು ಬರುವ ಮುಖ್ಯ ವಿಚಾರಗಳು

ಅ. ವಿಜಯನಗರದ ಎಲ್ಲಾ ಪುರ ಮತ್ತು ಪಟ್ಟಣಗಳನ್ನು ರಾಜಧಾನಿಯ ಒಳಗೋ ಅಥವಾ ಹೊರಗೂ ರಾಜನಿಂದಾಗಲಿ ಅಥವಾ ಅವನ ಸಂಬಂಧಿಗಳಿಂದ ಇಂತಹ ಪುರ ಅಥವಾ ಪಟ್ಟಣ ಸ್ಥಾಪಿಸಿದ್ದು ತಿಳಿದು ಬರುತ್ತದೆ.

ಆ. ಈ ಪುರ ಅಥವಾ ಪಟ್ಟಣಗಳು ಇಷ್ಟ ದೈವದ ಹೆಸರಲ್ಲಿ ಅಥವಾ ತಾಯಿಯ ಜ್ಞಾಪಕಾರ್ಥವಾಗಿ ಅಥವಾ ಮಡದಿಗಾಗಿ ಅಥವಾ ಮಕ್ಕಳ ಹೆಸರಲ್ಲಿ ನಿರ್ಮಿಸಿದ್ದು ಕಂಡುಬರುತ್ತದೆ. ಉದಾ: ಕೃಷ್ಣದೇವರಾಯ ತಾಯಿಗಾಗಿ 'ನಾಗಲಾದೇವಿಪುರವನ್ನು', ಮಗನಿಗಾಗಿ 'ಸಾಲೆ ತಿರುಮಲರಾಯ ಪಟ್ಟಣ'ವನ್ನು ಮುಖ್ಯ ಮಡದಿಗಾಗಿ 'ತಿರುಮಲದೇವಿ ಅಮ್ಮನ ಪಟ್ಟಣ', ಚಿಕ್ಕಮಡದಿಗಾಗಿ 'ಚಿಕ್ಕವಾಡಿ' ಅಥವಾ 'ಚಿನ್ನಾದೇವಿವಾಡ' ಸ್ಥಾಪಿಸಿದ್ದನ್ನು ನೋಡಬಹುದಾಗಿದೆ.

ಇ. ತುಳುವ ಮನೆತನದ ಕೃಷ್ಣದೇವರಾಯ ಮತ್ತು ಅಚ್ಯುತದೇವರಾಯ ವಿಜಯನಗರದಲ್ಲಿ ಒಂದಕ್ಕಿಂತ ಹೆಚ್ಚು ಪುರ-ಪಟ್ಟಣಗಳನ್ನು ಸ್ಥಾಪಿಸಿ ವಿಜಯನಗರದ ವಿಸ್ತಾರದ ಕೀರ್ತಿಗೆ ಪಾತ್ರರಾಗಿದ್ದಾರೆ.

ಈ. ಪುರಗಳು ಮುಖ್ಯ ದೇವಾಲಯದ ಸುತ್ತ-ಮುತ್ತಲು ಬೆಳೆದರೂ ಆಯಾ ಧರ್ಮಕ್ಕನುಗುಣವಾಗಿಯೇ ಸ್ಥಾಪಿಸಲಾಗಿತ್ತು.

ಉ. ಹೆಚ್ಚುತ್ತಿದ್ದ ಜನ ಸಂಖ್ಯೆಯನ್ನು ಗಮನದಲ್ಲಿರಿಸಿಕೊಂಡೇ ಉತ್ತಮ ಸೌಲಭ್ಯಗಳನ್ನು ನೀಡುವ ದೃಷ್ಟಿಯಿಂದ ಪುರ-ಪಟ್ಟಣಗಳನ್ನು ರಾಜಧಾನಿಯ ಎಲ್ಲಾ ದಿಕ್ಕುಗಳಲ್ಲಿ ಸ್ಥಾಪಿಸಿ ಅಭಿವೃದ್ಧಿಪಡಿಸಲಾಗಿತ್ತು.

ದೇವಾಲಯದ ಸುತ್ತ-ಮುತ್ತ ಅಥವಾ ದೇವಾಲಯದ ಬಜಾರುಗಳ ಸುತ್ತ-ಮುತ್ತಲೇ ಪುರ ಅಥವಾ ಪಟ್ಟಣಗಳೇಕೆ ಬೆಳೆದು ಬಂದವು? ಎನ್ನುವುದು ಅತ್ಯಂತ ಕುತೂಹಲ ಮೂಡಿಸುತ್ತದೆ.

ದೇವಾಲಯಗಳು ವಿದ್ಯಾ ಪ್ರಸಾರದ ಕೇಂದ್ರಗಳಾಗಿದ್ದು ಪುರಗಳಲ್ಲಿ ಕ್ರಮೇಣ ಅಗ್ರಹಾರಗಳು, ಮಠಗಳು ಬೆಳೆದು ಬಂದವು. ಕೃಷ್ಣಾಪುರ[೧೯], ನೆಳಲಹುಣಸೆ[೨೦], ನಾಗಲಾದೇವಿಪುರ[೨೧], ಕುಮಾರಗಿರಿ[೨೨], ಅಗ್ರಹಾರಗಳು ರಾಜಧಾನಿ ವಿಜಯನಗರದಲ್ಲಿ ಬೆಳೆದುಬಂದಿದ್ದವು. ಕಲಿಯುವ ಮತ್ತು ಕಲಿಸುವ ವಿಚಾರಕ್ಕಾಗಿ ಸಾಮ್ರಾಜ್ಯದ ನಾನಾ ಭಾಗಗಳಿಂದ ಪಂಡಿತರು ಮತ್ತು ವಿದ್ಯಾರ್ಥಿಗಳು ಬಂದು ವಿವಿಧ ಪುರಗಳಲ್ಲಿ ನೆಲೆಸಿದರು. ರಾಜರು, ಅಧಿಕಾರಿಗಳು, ವರ್ತಕರು ಇಂತಹ ಅಗ್ರಹಾರಗಳ ಬೆಳವಣಿಗೆಗೆ ಉದಾರ ದಾನ-ದತ್ತಿ-ಕೊಡುಗೆಗಳನ್ನು ನೀಡಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ.[೨೩] ಇದು ಸಾಮಾಜಿಕವಾಗಿ ಅಗ್ರಹಾರಗಳ ಸ್ಥಾನ-ಮಾನವನ್ನು ಹೆಚ್ಚಿಸಿದ್ದವು. ಕನಕದಾಸರು 'ಮೋಹನ ತರಂಗಿಣಿ'ಯಲ್ಲಿ ಇತಿಹಾಸ, ವೇದ, ವೇದಾಂತ, ಆಗಮ, ಗಣಿತ, ಖಗೋಳ ಶಾಸ್ತ್ರ, ವ್ಯಾಕರಣ, ತರ್ಕ, ಆಯುರ್ವೇದ, ಕಾವ್ಯ, ನಾಟಕ, ಸಂಗೀತಗಳಲ್ಲಿ ಪರಿಣಿತರಾದವರನ್ನು ಶಿಕ್ಷಕರೆಂದು ಅಗ್ರಹಾರಗಳಲ್ಲಿ ನೇಮಕ ಮಾಡುತ್ತಿದ್ದರ ಬಗ್ಗೆ ಗಮನ ಹರಿಸುತ್ತಾರೆ. ಅಗ್ರಹಾರಗಳಷ್ಟೇ ಮಠಗಳು ಸಹ ವಿದ್ಯಾ ಪ್ರಸಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದವು. ವಿಜಯನಗರದ ಸಾಮ್ರಾಜ್ಯ ಸ್ಥಾಪನಾ ಪೂರ್ವ ಹಂಪೆ ಶೈವ ವಿದ್ಯಾಕೇಂದ್ರವಾಗಿತ್ತು.[೨೪] ಮಠಗಳಲ್ಲಿ ಅಲ್ಲದೆ ದೇವಾಲಯಗಳಲ್ಲೂ ವಿದ್ಯಾರ್ಥಿ ಮತ್ತು ಶಿಕ್ಷಕರಿಗೆ ಊಟ ಮತ್ತು ವಸತಿಗಳನ್ನು ಉಚಿತವಾಗಿ

ಏರ್ಪಡಿಸಲಾಗಿರುತಿತ್ತು. ಈ ದೆಸೆಯಲ್ಲಿ ವಿರೂಪಾಕ್ಷ ದೇವಾಲಯದ ಬಗ್ಗೆ ಶಾಸನ ಮಾಹಿತಿ ಸಿಗುತ್ತದೆ.[೨೯] ಸಾಮಾನ್ಯವಾಗಿ ಮಠ-ದೇವಾಲಯಗಳಲ್ಲಿನ ಶಿಕ್ಷಕರೇ ಜನತೆಗೆ ಧಾರ್ಮಿಕ ಆಚರಣೆಗಳ ಬಗ್ಗೆ ತಿಳುವಳಿಕೆ ನೀಡುತ್ತಿದ್ದರು.

ಜನತೆಗೆ ಬೇಕಾದ ಎಲ್ಲಾ ಅಗತ್ಯ ವಸ್ತುಗಳನ್ನು ಯಾವುದೇ ಒಂದು ಸ್ಥಳದಲ್ಲಿ ಬೆಳೆಯಲು ಸಾಧ್ಯವಾಗದು ಅಥವಾ ತಯಾರಿಸಲಾಗದು. ಹಾಗಾಗಿ ಈಗಾಗಲೆ ಬಂದು ನೆಲೆಸಿದ ಮತ್ತು ಇನ್ನಿತರ ಜನತೆಯ ಬೇಡಿಕೆಗಳನ್ನು ಈಡೇರಿಸಲು ಮಾರುಕಟ್ಟೆಗಳು ವಿವಿಧ ಪುರಗಳಲ್ಲಿ ಅಸ್ತಿತ್ವಕ್ಕೆ ಬಂದವು. ವ್ಯಾಪಾರ ವಹಿವಾಟಿಗಾಗಿ ಸಾಮ್ರಾಜ್ಯದ ನಾನಾ ಭಾಗಗಳಿಂದ ವ್ಯಾಪಾರಿಗಳು ತಮ್ಮ ವಿವಿಧ ವಸ್ತುಗಳೊಂದಿಗೆ ಬಂದು ಪುರದಲ್ಲಿ ನೆಲೆಸಿದರು. ಹೀಗೆ ಬೇರೆ ಬೇರೆ ಪುರಗಳಲ್ಲಿ ಬೇರೆ ಬೇರೆ ದಿನದಂದು ಮಾರುಕಟ್ಟೆಯ ದಿನಗಳು ನಿಗದಿಯಾಗಿ ನಿರಂತರವಾಗಿ ನಡೆದಿದ್ದವು. ಉದಾಹರಣೆಗೆ ಹೇಳುವುದಾದರೆ ಡೊಮಿಂಗೊ ಪಾಯೇಸ್ ತಿಳಿಸುವಂತೆ ದಿನಾಲು ನಗರದ ಬೇರೆ ಬೇರೆ ಭಾಗಗಳಲ್ಲಿ ಸಂತೆ ಜರುಗುತ್ತಿತ್ತು[೩೦], ಕೃಷ್ಣಾಪುರದಲ್ಲಿ ಪ್ರತಿ ಸೋಮವಾರ[೩೧], ಅಚ್ಯುತಾಪುರದಲ್ಲಿ ಪ್ರತಿ ಮಂಗಳವಾರ[೩೨], ಸಂತೆ ನಡೆಯುತ್ತಿದ್ದುದರ ಬಗ್ಗೆ ಶಾಸನಗಳು ವಿವರಣೆಗಳನ್ನು ನೀಡುತ್ತವೆ. ಕಾಲಾಂತರದಲ್ಲಿ ಈ ಪುರಗಳ ಮಾರುಕಟ್ಟೆಗಳ ಮೂಲಕವೇ ವಿದೇಶಿ ವ್ಯಾಪಾರ ನಡೆದು ರಾಜ್ಯದ ಸಮಗ್ರ ಸಮೃದ್ಧ ಅಭಿವೃದ್ಧಿ ವೈಭವಕ್ಕೆ ಕಾರಣವಾಗಿದ್ದವು.

ಒಟ್ಟಾರೆ ಈ ಎಲ್ಲಾ ಪುರಗಳು ವಿಜಯನಗರದ ಅವಿಭಾಜ್ಯ ಅಂಗಗಳಾಗಿದ್ದವು. ಈ ಪುರಗಳು ಇಂದಿನ ಆಧುನಿಕ ಪಟ್ಟಣಗಳಲ್ಲಿ ಬೇರೆ ಬೇರೆ ಬಡಾವಣೆಗಳಿರುವಂತೆ ಅಂದು ವಿಜಯನಗರದಲ್ಲಿದ್ದವು. ಪುರಗಳು ಅಂದಿನ ಸಾಮಾಜಿಕ, ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರಗಳಾಗಿದ್ದವು. ದೇವಾಲಯಗಳು ಹಲವಿದ್ದು, ಮಠಗಳೂ ಸಹ ಆಯಾ ಧರ್ಮಕ್ಕನುಗುಣವಾಗಿ ವಿರೂಪಾಕ್ಷ ಪುರದಲ್ಲಿ ಶೈವ ಮಠಗಳು, ವಿಠ್ಠಲಾಪುರದಲ್ಲಿ ಶ್ರೀ ವೈಷ್ಣವಮಠಗಳು ಇದ್ದುದರ ಬಗ್ಗೆ ಶಾಸನಗಳು ತಿಳಿಸುತ್ತವೆ. ಇವು ಅಂದಿನ ವಿದ್ಯಾದಾನದ ಕೇಂದ್ರಗಳಾಗಿದ್ದವು. ಕನಕದಾಸರು ತಮ್ಮ 'ಮೋಹನ ತರಂಗಿಣಿ'ಯಲ್ಲಿ ಸೋಮಸೂರಿಯ ಬೀದಿಯಲ್ಲಿದ್ದ ಅಂಗಡಿಗಳು, ವಿವಿಧ ಅಂಗಡಿಗಳಲ್ಲಿ ಮಾರಾಟವಾಗುತ್ತಿದ್ದ ವಿವಿಧ ವಸ್ತುಗಳನ್ನು ವರ್ಣಿಸಿದ್ದಾರೆ. ವಿವಿಧ ಪುರಗಳಲ್ಲಿ ಸಂತೆ ನಡೆಯುತ್ತಿದ್ದು, ಎತ್ತಿನಗಾಡಿಗಳು ಸಾಗಾಣಿಕೆಯ ಮುಖ್ಯ ಅಂಗಗಳಾಗಿದ್ದವು. ಹೇರುಗಳ ಸಾಗಾಟಕ್ಕೆ ಎತ್ತು-ಎಮ್ಮೆ ಕತ್ತೆಗಳಲ್ಲದೆ ಕುದುರೆ-ಕೋಣ-ಆನೆಗಳನ್ನು ಬಳಸುತ್ತಿದ್ದುದರ ಬಗ್ಗೆ ವಿದೇಶಿ ಪ್ರವಾಸಿಗರ ಬರಹಗಳು ತಿಳಿಸುತ್ತವೆ. ಪುರಗಳು ಪ್ರಮುಖ ವ್ಯಾಪಾರ ಕೇಂದ್ರಗಳೂ ಆಗಿ ರಾಜಧಾನಿಯ ಸಮೃದ್ಧತೆಗೆ ಸಮರ್ಥವಾಗಿ ಬೆಂಬಲಿಸಿ ಸಂಪತ್ತಿನ ಕೇಂದ್ರಗಳಾಗಿದ್ದವು.

ಅಡಿಟಿಪ್ಪಣಿಗಳು

೧. Saletore, B.A: Social and Political life in the vijayanagara Empire, Vol.I, p.112, S.I.I. Vol.iv, Nos. 248, 265.etc.

೨. EI, III, p.22, v-p. 42

೩. ಲಕ್ಕಣ್ಣ ದಂಡೇಶ - ಶಿವತತ್ವ ಚಿಂತಾಮಣಿ

೪. Kannada University Epigraphical Series - III, No. 34, AR No. 29 of 1889

೫. Nagaraja Rao, M.S.(Ed) - In Vijayanagar; Progress of Research, 1979-83, p.9

೬. ಭೂಸನೂರಮಠ ಸಂ.ಶಿ. - ವಿಜಯಕಲ್ಯಾಣ PP. 75-76

೭. ಕೊಟ್ರಯ್ಯ ಸಿ.ಟಿ.ಎಂ, ಹಂಪೆ ವೀರಶೈವ ಮಠಗಳು ಮತ್ತು ಸಾಹಿತ್ಯ ಪರಂಪರೆ, ಪು. ೨೦

೮. ಕೃಷ್ಣಶರ್ಮಾ ಬಿ, ಕರ್ನಾಟಕ ಜನಜೀವನ, ಪು. ೯೦-೯೩

೯. S.I.I. Vol. iv, No. 254, p. 44

೧೦. S.I.I. Vol. iv, No. 272, p. 68; No. 280, pp. 74-75

೧೧. S.I.I. Vol. ix, pt-II, No. 564

೧೨. S.I.I. Vol. ix, pt-II, No. 595, No. 573, No. 245

೧೩. S.I.I. Vol. ix, pt-II, No. 533

೧೪. A.R. on S.I. Epigraphy, 1922, No. 683

೧೫. S.I.I. Vol. ix, pt-II, No. 504

೧೬. S.I.I. Vol. ix, pt-II, No. 539, No. 573

೧೭. S.I.I. Vol. ix, pt-II, No. 636

೧೮. Arise of 1935-36, No. 377, SII, Vol-iv, No. 254, p. 44

೧೯. S.I.I. Vol. iv, No. 255

೨೦. S.I.I. Vol. iv, pt-II, No. 504

೨೧. S.I.I. Vol. iv, pt-II, No. 533, SII Vol-xvii, No. 26

೨೨. S.I.I. Vol. iv, No. 255, A.R. No. 24 of 1903

೨೩. S.I.I. Vol. iv, No. 260

೨೪. Ibid

೨೫. ಸದಾನಂದ ಕನವಳ್ಳಿ (ಅನು), ಮರೆತುಹೋದ ಮಹಾಸಾಮ್ರಾಜ್ಯ ವಿಜಯನಗರ, ಪು. ೨೭೪

೨೬. S.I.I. Vol. iv, No. 266

೨೭. Ibid

❖ ❖

೧೪

ರಾಜಧಾನಿ ವಿಜಯನಗರದ ನೀರು ಪೂರೈಕೆಗಳು

ಬಾಲಸುಬ್ರಮಣ್ಯ

ವಿಜಯನಗರವು ಮಧ್ಯಕಾಲೀನ ಇತಿಹಾಸದಲ್ಲಿ ತನ್ನದೇ ಆದ ಮಹತ್ವದ ಸ್ಥಾನವನ್ನು ಹೊಂದಿದೆ. ಈ ಪಟ್ಟಣದ ಸಿರಿವಂತಿಕೆಯನ್ನು ಹೊಗಳಿ ಅಂದು ಭೇಟಿ ನೀಡಿದ ವಿದೇಶಿಯ ಪ್ರವಾಸಿಗರು ಅರಮನೆ, ಭವ್ಯ ದೇವಾಲಯಗಳು, ಮಹಾದ್ವಾರಗಳು, ಉಪನಗರಗಳು, ಬಜಾರುಗಳು, ತೋಟ, ಹೊಲ, ಗದ್ದೆಗಳು ಬಹಳಷ್ಟು ಹೆಗ್ಗಳಿಕೆಯನ್ನು ಗಳಿಸಿವೆ. ೧೬ನೇ ಶತಮಾನದಲ್ಲಿ ಈ ಪಟ್ಟಣವು ರೋಮ್ ನಷ್ಟು ಜನಸಂಖ್ಯೆಯನ್ನು ಹೊಂದಿತ್ತೆಂದು ವರ್ಣಿಸಿರುವುದನ್ನು ಸಾಹಿತ್ಯದಲ್ಲಿ ಕಾಣಬಹುದು. ಅಪಾರ ಜನಸಂಖ್ಯೆಯನ್ನು ಹೊಂದಿದ್ದ ಈ ಪ್ರಖ್ಯಾತ ರಾಜಧಾನಿಯಲ್ಲಿ ನಾಗರೀಕ ವ್ಯವಸ್ಥೆ ಅದರಲ್ಲೂ ದಿನನಿತ್ಯದ ಬಳಕೆಗೆ ಮೂಲ ಆಧಾರವಾದ ನೀರಾವರಿ ವ್ಯವಸ್ಥೆಯ ಬಗೆಗೆ ಕೈಗೊಂಡ ಕ್ರಮಗಳ ಬಗ್ಗೆ ಅಧ್ಯಯನಕ್ಕೆ ಯೋಗ್ಯವಾಗಿವೆ. ನಗರದ ನೀರು ಸರಬರಾಜು ವ್ಯವಸ್ಥೆಯ ಬಗೆಗೆ ಅನೇಕ ಮಾಹಿತಿಗಳು ಈಗಲೂ ಕಂಡುಬರುತ್ತವೆ. ಅಳಿದುಳಿದಿರುವ ಈ ಕುರುಹುಗಳು ನೀರು ಸರಬರಾಜು ವ್ಯವಸ್ಥೆಗೆ ಅಂದು ನೀಡಿರುವ ಪ್ರಾಮುಖ್ಯತೆಯನ್ನು ಸ್ಪಷ್ಟವಾಗಿ ತಿಳಿಸುತ್ತವೆ. ಅಲ್ಲದೆ ನೋಡುಗರ ಗಮನವನ್ನು ಈಗಲೂ ಸೆಳೆಯುತ್ತವೆ.

ನೀರು ಸರಬರಾಜು ವ್ಯವಸ್ಥೆಯ ಸ್ಪಷ್ಟ ಕುರುಹುಗಳು ರಾಜ ಪ್ರಾಂಗಣದಲ್ಲಿ ಮಾತ್ರ ವಿಶೇಷವಾಗಿ ಕಾಣಬರುತ್ತವೆ. ಆದರೆ ನಗರದ ಇತರ ಭಾಗಗಳಲ್ಲಿ ಕುರುಹುಗಳು ಹೆಚ್ಚಾಗಿ ದೊರೆತಿಲ್ಲ. ನಗರದ ಕೆಲವು ಮುಖ್ಯ ಸ್ಥಳಗಳು ಹಾಗೂ ಉಪನಗರಗಳ ಕೆಲವು ಆಯ್ದ ಪ್ರದೇಶಗಳಲ್ಲಿ ನೀರಾವರಿ ಸರಬರಾಜು ವ್ಯವಸ್ಥೆ ಇರುವುದನ್ನು ಗುರುತಿಸಬಹುದಾಗಿದೆ.

ವಿಜಯನಗರ ಪಟ್ಟಣ ಪ್ರದೇಶ ಬಹು ವಿಶಾಲವಾದುದು. ಸಮಗ್ರವಾಗಿ ನೀರು ಸರಬರಾಜು ಮಾಡುವ ಕೇಂದ್ರ ಸರಬರಾಜು ವ್ಯವಸ್ಥೆಯಿರಲಿಲ್ಲ. ಉಪನಗರಗಳಲ್ಲಿರುವ ಬೃಹತ್ ದೇವಾಲಯ ಸಮುಚ್ಚಯದಲ್ಲಿರುವ ಕೊಳ, ಬಾವಿಗಳು ದೇವಾಲಯದ ನೀರಿನ ಅವಶ್ಯಕತೆಯನ್ನು ಪೂರೈಸುವುದರಲ್ಲಿ ಮಾತ್ರ ಸೀಮಿತವಾಗಿತ್ತು. ಸದ್ಯ ಇರುವ ಕುರುಹುಗಳನ್ನು ಆಧರಿಸಿ ಹೇಳುವುದಾದರೆ, ಈ ನೀರು ಸರಬರಾಜು ವ್ಯವಸ್ಥೆ ವಿಜಯನಗರದ ರಾಜ ಮಹಾರಾಜರಿಗೆ ಅವರ ಪರಿವಾರದವರಿಗೆ, ಮಂತ್ರಿ ಮಹೋದಯರಿಗೆ, ಅರಮನೆಗಳಿಗೆ ಅನುಕೂಲ ಕಲ್ಪಿಸಿತ್ತು. ಈ ಪ್ರದೇಶದಲ್ಲಿ ಮಳೆಯು ಹೆಚ್ಚಾಗಿ ಬೀಳದಿರುವುದರಿಂದ ಬಿದ್ದ ಮಳೆಯನ್ನು ಸಂರಕ್ಷಿಸಿ ಇತರ ಮೂಲಗಳಿಂದ ದೊರಕುವ ನೀರನ್ನು ವ್ಯವಸ್ಥಿತವಾಗಿ ಸಂಚಯಿಸಲು ಅನೇಕ ವಿಧಾನಗಳನ್ನು ಅನುಸರಿಸುತ್ತಿದ್ದರು. ಇಲ್ಲಿ ಮಳೆ ವರ್ಷಕ್ಕೆ ಸುಮಾರು ೫೧ ಸೆಂ.ಮೀ. ಬೀಳುತ್ತಿದ್ದು, ಬಿದ್ದ ಮಳೆಯ ಶೇಖರಣೆ ಮುಖ್ಯವಾಗಿರುತ್ತದೆ.[೧]

ನೀರಾವರಿ ವ್ಯವಸ್ಥೆಗೆ ಮತ್ತು ಸತತವಾದ ನೀರು ಪೂರೈಕೆಗೆ ದೊಡ್ಡ ಮತ್ತು ಸಣ್ಣ ಕೆರೆಗಳನ್ನು ಕಟ್ಟಲಾಗಿತ್ತು. ಇವುಗಳಲ್ಲಿ ಕೆಲವು ನೀರಿನ ಸೆಲೆಯ ಅಭಾವದಿಂದ ಬೇಸಿಗೆಯಲ್ಲಿ ಬತ್ತಿಹೋಗುತ್ತಿತ್ತು. ಆದರೆ ಕೆಲವು ಕೆರೆಗಳು ವರ್ಷದ ಕೆಲವೇ ದಿನ ನೀರನ್ನು ಪೂರೈಸುತ್ತಿದ್ದವು. ಕೆಲವು ಕೊಳಗಳು ನೀರನ್ನು ಹೊಂದಲು ಸರಿಯಾದ ನೀರಿನ ಅಂತರ್ಜಲದ ಮಟ್ಟ ಹಾಗೂ ಸೆಲೆಯ ವ್ಯವಸ್ಥೆ ಹೊಂದಿದ್ದವು. ದೇವಾಲಯ ಸಮುಚ್ಚಯಗಳಲ್ಲಿರುವ ಅದರಲ್ಲೂ ದೇವಾಲಯದ ರಥ ಬೀದಿಗಳಲ್ಲಿರುವ ಬಾವಿಗೆ ನೀರನ್ನು ಸತತವಾಗಿ ಹರಿಸಲು ಒಂದು ಪ್ರತ್ಯೇಕವಾದ ವ್ಯವಸ್ಥೆ ಇದ್ದಿತು. ಹಿರಿಯ ಕಾಲುವೆಯಿಂದ ಕೊಳವೆಗಳನ್ನು ಈ ಕೊಳಕ್ಕೆ ಜೋಡಿಸುವ ಮೂಲಕ ನೀರು ಈ ಕೊಳಕ್ಕೆ ಹರಿದು ವರ್ಷವಿಡಿ ಅಲ್ಲಿ ಲಭಿಸುವಂತೆ ಮಾಡಲಾಗಿತ್ತು. ಇದಲ್ಲದೆ ಕಾಲುವೆಗಳ ನೀರನ್ನು ನದಿಯಿಂದ ಪಡೆಯುತ್ತಿದ್ದರು. ಕಾಲುವೆಗಳ ಸನಿಹದಲ್ಲಿ ಬರುವ ಕೆರೆಗಳು ನೀರನ್ನು ಈ ಕಾಲುವೆಗಳಿಂದ ಹೊಂದುತ್ತಿದ್ದವು. ಇದಕ್ಕೆ ಉತ್ತಮವಾದ ಉದಾಹರಣೆಯೆಂದರೆ ಕಮಲಾಪುರದ ಕೆರೆ ಮತ್ತು ಭೂಪತಿ ಕರೆ.

ಹಿರಿಯಕಾಲುವೆ

ಹಿರಿಯ ಕಾಲುವೆಯಿಂದ ಅಂದರೆ ಇಂದಿನ ತುರ್ತಾ ಕಾಲುವೆಯಿಂದ ಭೂಪತಿ ಕೆರೆಗೆ ನೀರು ಬರುತ್ತಿತ್ತು. ಭೂಪತಿ ಕೆರೆಯು ಹಿರಿಯ ಕಾಲುವೆಯ ಕೆಳಭಾಗಕ್ಕೆ ಬರುವುದರಿಂದ ನೀರು ಹರಿಯಲು ಅನುಕೂಲವಾಗಿತ್ತು. ಇಲ್ಲಿಂದ ಮುಂದೆ ಈ ಕೆರೆಯ ನೀರನ್ನು ತಿರುವೆಂಗಳನಾಥ (ಅಚ್ಯುತರಾಯ) ದೇವಾಲಯಕ್ಕೆ ಮತ್ತು ಆಸುಪಾಸಿನಲ್ಲಿ ಬರುವ ಕೆಲವು

ಸ್ಥಳಗಳಿಗೂ ಹರಿಸಲಾಗುತ್ತಿತ್ತು. ಹೀಗೆ ಸತತವಾದ ನೀರು ಪೂರೈಕೆಯಿಂದ ದೇವಾಲಯದ ಬಜಾರಿನಲ್ಲಿ ಬರುವ ದೇವಾಲಯದ ಕೊಳ ತುಂಬಿರುತ್ತಿತ್ತು.

ಹಿರಿಯ ಕಾಲುವೆಯಿಂದ ಭೂಪತಿಯ ಕೆರೆಯ ಮೂಲಕ ಹರಿದ ನೀರು ತಿರುವೆಂಗಳನಾಥ ದೇವಾಲಯ ಸಮುಚ್ಚಯಕ್ಕೆ ಹರಿದು ಬರುವಾಗ ಸಣ್ಣ, ಸಣ್ಣ ಟಿಸಿಲುಗಳಾಗಿ ಸುತ್ತಣ ಪ್ರದೇಶದ ಜನರಿಗೆ, ಪುರ ಪ್ರಮುಖರ ವಾಸ ಸ್ಥಳಗಳಿಗೆ ನೀರಿನ ಸರಬರಾಜಾಗುತ್ತಿತ್ತು. ಈ ಪ್ರದೇಶದಲ್ಲಿ ವಾಸಿಸುತ್ತಿದ್ದ ಗಣ್ಯ ವ್ಯಕ್ತಿಗಳಿಗೆ ಇದರ ಉಪಯೋಗ ಹೆಚ್ಚಾಗಿ ದೊರಕಿರಬೇಕು. ಇದು ಅಲ್ಲಲ್ಲಿ ದೊರಕುವ ಗಾರೆಯಿಂದ ನಿರ್ಮಿಸಿದ ಸಣ್ಣ ಕಾಲುವೆಗಳಿಂದ ತಿಳಿದುಬರುತ್ತದೆ. ಈ ರೀತಿ ನಗರ ಪ್ರದೇಶದಲ್ಲಿ ದೊರಕುತ್ತಿದ್ದ ನೀರು ಅಲ್ಲಿನ ಭೌಗೋಳಿಕ ಅನುಕೂಲತೆಯ ಮೇಲೆ ಅವಲಂಬಿಸಿರುತ್ತಿತ್ತು. ಕಾರಣ ಸಣ್ಣ ಕಾಲುವೆಗಳಲ್ಲಿ ನೀರಿನ ಹೆಚ್ಚಿನ ಒತ್ತಡವಿಲ್ಲದ್ದರಿಂದ ಎತ್ತರದ ಪ್ರದೇಶಗಳಿಗೆ ಅಥವಾ ಸಣ್ಣ ದಿಬ್ಬಗಳ ಮೂಲಕ ಹರಿಯುವುದು ಸಾಧ್ಯವಾಗುತ್ತಿರಲಿಲ್ಲ. ಹಾಗೆಯ ಈ ವ್ಯವಸ್ಥೆ ಸಂಪೂರ್ಣವಾಗಿ ಗುರುತ್ವಾಕರ್ಷಣದ ಮೇಲೆ ನಡೆಯುತ್ತಿದ್ದುದರಿಂದ ಸಮತಟ್ಟಾದ ಒಂದೇ ಎತ್ತರದಲ್ಲಿ ಮಾತ್ರ ಹರಿಯಲು ಅನುಕೂಲವಿತ್ತು. ಹೀಗೆ ದೇವಾಲಯ ಸಮುಚ್ಚಯದಲ್ಲಿ ಹರಿವ ನೀರು ದೇವಸ್ಥಾನ ಮತ್ತು ಜನಗಳ ಅವಶ್ಯಕತೆಯನ್ನು ಪೂರೈಸುತ್ತಿತ್ತು. ಹಿರಿಯ ಕಾಲುವೆಯ ಮೇಲೆ ಇಕ್ಕಾಟದ ಪ್ರದೇಶದಲ್ಲಿ ಕಲ್ಲು ಹಾಸುಗಳನ್ನು ಕಾಲುವೆಯ ಮೇಲೆ ಹಾಸಿ ದೇವಾಲಯದ ಕೆಲಭಾಗಗಳನ್ನು ನಿರ್ಮಿಸಿರುವ ನಿದರ್ಶನಗಳಿವೆ.[೩] ಇದರಿಂದಾಗಿ ದೇವಾಲಯದ ದೈನಂದಿನ ಅವಶ್ಯಕತೆಗಳನ್ನು ಪೂರೈಸಲು ಬೇಕಾಗುವ ಯತೇಚ್ಛ ನೀರಿನ ಪೂರೈಕೆಯಾಗುತ್ತಿತ್ತು. ನೀರು ದೊರಕುವಿಕೆಯಿಂದಾಗಿ ಹಿರಿಯ ಕಾಲುವೆಯ ದಡದಲ್ಲಿ ಉದ್ದಕ್ಕೂ ಅಲ್ಲಲ್ಲಿ ದೇವಾಲಯಗಳು, ದೇವಾಲಯಗಳ ಸಣ್ಣ ಸಮುಚ್ಚಯಗಳನ್ನು ಕಾಣಬಹುದು.

ಬಾವಿಗಳು

ವಿಜಯನಗರದಲ್ಲಿ ದೊಡ್ಡ, ಸಣ್ಣ ಬಾವಿಗಳು ಜನರ ಅವಶ್ಯಕತೆಯನ್ನು ಪೂರೈಸುತ್ತಿದ್ದವು. ಕೆಲವು ಪ್ರದೇಶಗಳಲ್ಲಿ ಮನೆಗೊಂದರಂತೆ ಬಾವಿಯಿರುವುದನ್ನು ಕಾಣಬಹುದು. ದೊಡ್ಡ ಬಾವಿಗಳಿಂದ ನೀರನ್ನು ಮೇಲಕ್ಕೆತ್ತಿ ಸಣ್ಣ ಮಣ್ಣಿನ ಕೊಳವೆಗಳ ಮೂಲಕ ಮಧ್ಯಮ ಗಾತ್ರದ ತೊಟ್ಟಿಲುಗಳಲ್ಲಿ ಶೇಖರಿಸಿ ಕೊಳವೆಗಳ ಮೂಲಕ ಗೊತ್ತಾದ ಸ್ಥಳಗಳಿಗೆ ಸರಬರಾಜು ಮಾಡಿರುವುದು ಕಂಡುಬರುತ್ತದೆ. ಇದಕ್ಕೆ ಉತ್ತಮ ಉದಾಹರಣೆ ಎಂದರೆ ಮಾಲ್ಯವಂತ ದೇವಾಲಯದ ಉತ್ತರಕ್ಕಿರುವ ಪ್ರದೇಶ. ಇಲ್ಲಿ ಈ ವ್ಯವಸ್ಥೆಯ ಕುರುಹುಗಳಿವೆ.

ಬಾವಿಗಳು ನೀರಾವರಿಗೆ ಉತ್ತಮವಾದ ಸಾಧನವಾಗಿವೆ. ಬಾವಿಯನ್ನು ಪೋಷಿಸುವುದು ಧರ್ಮದ ಕಾರ್ಯವೆಂದು[೪] ತಿಳಿದು ರಾಜ ಮಹಾರಾಜರಾದಿಯಾಗಿ ಎಲ್ಲರೂ

ಭಾಗಿಯಾಗಿರುವುದನ್ನು ಶಾಸನಗಳು ಹಾಗೂ ಜನಪದ ಸಾಹಿತ್ಯದಿಂದಾಗಿ ತಿಳಿದುಬರುತ್ತದೆ. ಅಹಮದ್ ಖಾನ್ ಧರ್ಮಶಾಲೆಯ ಬಾವಿಯನ್ನು ತನ್ನ ಸ್ವಾಮಿ ಪ್ರೌಢದೇವರಾಯನಿಗೆ ಒಳಿತಾಗಲೆಂದು ಕಟ್ಟಿಸಿದ ಬಗ್ಗೆ ಉಲ್ಲೇಖವಿದೆ.[೫] ಎರಡನೇ ಹರಿಹರನ ಕಾಲದಲ್ಲಿ 'ಒರತೆಯ ಕುಂಡ' ಬಾವಿಯನ್ನು ಕಟ್ಟಿಸಿ ಮೈಲಾರ ದೇವರನ್ನು ಪ್ರತಿಷ್ಠಾಪಿಸಿ ದಾರಿಯ ಪಕ್ಕ ಗಿಡ, ಮರಗಳನ್ನು ನಡೆಸಿದ ಬಗ್ಗೆ ಉಲ್ಲೇಖಿಸಲಾಗಿದೆ. ಹೀಗೆ ಈ ಬಾವಿಯ ನೀರನ್ನು ಭಕ್ತಾದಿಗಳು ಉಪಯೋಗಿಸಿರುವಂತೆ ಮಾಡಿರುವುದು ತಿಳಿದುಬರುತ್ತದೆ.[೬] ಕ್ರಿ.ಶ. ೧೫೬೦ರ ಇನ್ನೊಂದು ಶಾಸನದಲ್ಲಿ ಬಾವಿಯನ್ನು ತೋಡಿಸಿದ ಬಗ್ಗೆ ಉಲ್ಲೇಖಿಸಲಾಗಿದೆ.[೭] ಇದೇ ಕಾಲದ ಮತ್ತೊಂದು ಶಾಸನದಲ್ಲಿ ಬಾವಿಯನ್ನು ತೋಡಿಸಿ ಅಶ್ವತ್ಥ ಮರವನ್ನು ನೆಡಸಿದ ಬಗ್ಗೆ ತಿಳಿಸಲಾಗಿದೆ.[೮] ಈ ರೀತಿ ಪ್ರತಿಷ್ಠಿತ ವ್ಯಕ್ತಿಗಳು ಬಾವಿಯನ್ನು ತೋಡಿಸಿದ ಜನರಿಗೆ ಅನುಕೂಲ ಮಾಡಿದ ಅಂಶಗಳನ್ನು ತಿಳಿಯಬಹುದಾಗಿದೆ.[೯] ಕೆಲವು ಬಾವಿಗಳನ್ನು ಭಕ್ತರ ಅನುಕೂಲಕ್ಕೆ ತೋಡಿಸಿದ್ದು, ಆ ಬಾವಿಗಳನ್ನು ಮೂಲದೇವರ ಹೆಸರಿನೊಡನೆ ಸೇರಿಸಿರುವುದು ಕಂಡುಬರುತ್ತದೆ. ರಂಗನಾಥ ಬಾವಿ, ಲಿಂಗದ ಬಾವಿ, ಇಲ್ಲಿ ರಂಗನಾಥ ಹಾಗೂ ಲಿಂಗದ ಹೆಸರಿನೊಡನೆ ಬಾವಿಯನ್ನು ಸೇರಿಸಿರುವುದನ್ನು ಗಮನಿಸಬಹುದಾಗಿದೆ.[೧೦] ಶ್ರೀಮಂತ ವಣಿಕ ವರ್ಗದವರು ಪುಣ್ಯವಾಗಲೆಂದು ಬಾವಿಯನ್ನು ತೋಡಿಸಿರುವುದನ್ನು ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೧೧] ಬಾವಿಗಳಲ್ಲಿ ಅನೇಕ ಬಗೆಗಳಿದ್ದು, ನಾಡಬಾವಿ ಮತ್ತು ಕಪಿಲೆಯ ಬಾವಿ ಎಂದು ಕರೆದಿರುವುದನ್ನು ಶಾಸನಗಳಲ್ಲಿ ಗಮನಿಸಬಹುದಾಗಿದೆ.[೧೨] ನಾಡ ಬಾವಿಯಲ್ಲಿ ನೀರನ್ನು ತೆಗೆದುಕೊಳ್ಳುವುದಕ್ಕೆ ಮೆಟ್ಟಿಲುಗಳಿದ್ದರೆ, ಕಪಿಲೆಯ ಬಾವಿಯ ನೀರನ್ನು ತೆಗೆದುಕೊಳ್ಳುವುದಕ್ಕೆ ತಾಂತ್ರಿಕ ಸಾಧನದ ಅವಶ್ಯಕತೆಯಿರುತ್ತದೆ. ಚರ್ಮದ ಚೀಲ ಅಥವಾ ಕಬ್ಬಿಣದ ದೊಡ್ಡ ಪಾತ್ರೆಗಳ ಸಹಾಯದಿಂದ ಎತ್ತುಗಳನ್ನು ಬಳಕೆ ಮಾಡಿ ನೀರನ್ನು ಎತ್ತುತ್ತಿದ್ದರು. ಈ ತೆರನಾದ ಬಾವಿಯ ವರ್ಣನೆಯನ್ನು ಶಾಸನಗಳಲ್ಲಿ ಕಾಣಬಹುದಾಗಿದೆ.[೧೩]

ಜನರ ಸೌಕರ್ಯಕ್ಕಾಗಿ ತೊಟ್ಟಿಗಳನ್ನು ಕಟ್ಟಿಸಿ ಶಾಸನವನ್ನು ಬರೆಸಿರುವ ಉಲ್ಲೇಖಗಳಿವೆ.[೧೪] ಊರುಗಳ ಮಧ್ಯೆ ಸಂಪರ್ಕ ಕಲ್ಪಿಸುವ ಸಲುವಾಗಿ ರಸ್ತೆ ನಿರ್ಮಿಸುವಾಗ ಅಲ್ಲಲ್ಲಿ ದಾರಿಹೋಕರ ಅನುಕೂಲಕ್ಕಾಗಿ ಅರವಟ್ಟಿಗೆಗಳನ್ನು ನಿರ್ಮಿಸಿ ಅವುಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿಕೊಂಡು ಹೋಗಲು ದಾನವನ್ನು ನೀಡಿದ ಬಗ್ಗೆ ಉಲ್ಲೇಖವಿದೆ.[೧೫] ಪ್ರಾಕೃತಿಕ ಚಿಲುಮೆಗಳ ಉಲ್ಲೇಖವನ್ನು ಶಾಸನದಲ್ಲಿ ಕಾಣಬಹುದು. ಇಂತಹ ಚಿಲುಮೆಗಳಿಗೆ ಉತ್ತಮವಾದ ಉದಾಹರಣೆ ಮುಕ್ತಿಋಣ ನಿರ್ಮಲ ತಿರ್ಥ ಇದು ಕಮಲಾಪುರದ ಆಗ್ನೇಯ ದಿಕ್ಕಿಗಿದೆ.[೧೬]

ಕಾಲುವೆಗಳು

ವಿಜಯನಗರದ ಕಾಲದಲ್ಲಿ ಅನೇಕ ಕಾಲುವೆಗಳು ವ್ಯವಸಾಯಕ್ಕೆ ನೀರನ್ನು ಒದಗಿಸುತ್ತಿದ್ದವು. ಈ ಕಾಲುವೆಗಳು ಪಟ್ಟಣದ ಮಧ್ಯಭಾಗದಲ್ಲಿ ಕೆಲವೊಮ್ಮೆ ಪಟ್ಟಣದ

ಅಂಚಿನ ಭಾಗದಲ್ಲಿ ಹಾಯ್ದು ಹೋಗುತ್ತಿದ್ದವು. ಕೆಲವು ನಿಗದಿತ ಸ್ಥಳಗಳಲ್ಲಿ ಜನರ ಅನುಕೂಲಕ್ಕಾಗಿ ನೀರನ್ನು ತೆಗೆಯಲು ಸೋಪಾನಗಳು ಹಾಗೂ ಸಣ್ಣ ಸೇತುವೆಗಳನ್ನು ನಿರ್ಮಿಸಿರುವುದನ್ನು ಕಾಣಬಹುದಾಗಿದೆ. ದೈನಂದಿನ ಉಪಯೋಗಕ್ಕೆ ಕಾಲುವೆಯ ನೀರನ್ನು ಬಳಸಿಕೊಳ್ಳಲಾಗುತ್ತಿತ್ತು.[೧೭] ಹಿರಿಯ ಕಾಲುವೆ ಹಾಗೂ ಇನ್ನಿತರ ಕಾಲುವೆಗಳಿಂದ ಸಣ್ಣ ಕಾಲುವೆಗಳಿಗೆ ನೀರನ್ನು ಹರಿಯಬಿಡಲಾಗುತ್ತಿತ್ತು. ಕೆಲವು ಕಾಲುವೆಗಳನ್ನು ಇಂದೂ ಗುರುತಿಸಬಹುದಾಗಿದೆ. ಕೆಲವನ್ನು ಗುರುತಿಸುವುದು ಕಷ್ಟಕರವಾಗಿರುತ್ತದೆ.[೧೮] ಕೆಲವು ವಿಶಿಷ್ಟವಾದ ಕಾಲುವೆಗಳ ಉಲ್ಲೇಖವನ್ನು ಶಾಸನದಲ್ಲಿ ಕಾಣಬಹುದು. ಇದಕ್ಕೆ ಉತ್ತಮವಾದ ಉದಾಹರಣೆಯೆಂದರೆ ಪೆನುಕೊಂಡ ಬಾಗಿಲು ಬಳಿಯ ಊಟದ ಕಾಲುವೆ[೧೯] ಹೀಗೆಯೆ ಇನ್ನೊಂದು ಊಟದ ಕಾಲುವೆಯು ಮಹಾನವಮಿ ದಿಬ್ಬದ ದಕ್ಷಿಣಕ್ಕೆಯಿದ್ದು,[೨೦] ಇಂದೂ ಜನಪದರು ಹಾಗೆಯೇ ಕರೆಯುತ್ತಾರೆ. ನದಿಯಿಂದ ಸಣ್ಣ ಕಾಲುವೆಗಳ ಮೂಲಕ ವಿದ್ಯಾರಣ್ಯ ಮಠ ಹಾಗೂ ವಿರೂಪಾಕ್ಷ ದೇವಾಲಯದ ಉಗ್ರಾಣ ಹಾಗೂ ಭಕ್ತಾದಿಗಳ ಉಪಯೋಗಕ್ಕೆ ದೇವಾಲಯದ ಹೊರ ಪ್ರಾಂಗಣದ ಮೂಲಕ ಹರಿದು, ಮುಂದೆ ದೇವಾಲಯದ ಉತ್ತರದ ಪ್ರಾಕಾರವನ್ನು ದಾಟಿ ಹೂದೋಟಕ್ಕೆ ಹರಿದಿರಬೇಕು.

ಕೆರೆಗಳು

ಕೆಲವು ಕಣಿವೆಗಳ ಪ್ರದೇಶಗಳಲ್ಲಿ ಸಣ್ಣ ಕೆರೆ ಕಟ್ಟೆಗಳನ್ನು ಕಟ್ಟಿ ನೀರನ್ನು ಶೇಖರಿಸಲಾಗುತ್ತಿತ್ತು. ಹೀಗೆ ಶೇಖರಿಸಿದ ನೀರನ್ನು ಸಣ್ಣ ಕಾಲುವೆಗಳ ಮೂಲಕ ಹಾಯಿಸಿ ಆಯಾಕಟ್ಟಿನ ಕೆಳಭಾಗದ ಪ್ರದೇಶದಲ್ಲಿ ವಾಸಿಸುವ ಜನರಿಗೆ ಒದಗಿಸಲಾಗುತ್ತಿತ್ತು. ಕೆಲವು ಪ್ರದೇಶಗಳಲ್ಲಿ ಸರಣಿ ಕಟ್ಟೆಗಳ ನಿರ್ಮಾಣವನ್ನು ಕಾಣಬಹುದು. ಇವುಗಳಿಂದ ಹರಿದ ನೀರು ದೊಡ್ಡ ಕೆರೆಯನ್ನು ಸೇರುತಿತ್ತು. ವಿಜಯನಗರದ ಅನೇಕ ಕೆರೆಗಳು ಹೂಳು ತುಂಬಿದ್ದು ಹೆಚ್ಚಿನ ಕೆರೆಗಳನ್ನು ಗುರುತಿಸುವುದು ಕಷ್ಟಕರವಾಗಿದೆ. ಅಲ್ಲದೆ ಕೆರೆಯ ಪ್ರದೇಶಗಳನ್ನು ಗದ್ದೆ ಹಾಗು ನಿವೇಶನಗಳನ್ನಾಗಿ ಪರಿವರ್ತಿಸಲಾಗಿದೆ. ಶಾಸನಗಳಲ್ಲಿ ಹಲವಾರು ಕೆರೆಗಳ ಬಗೆಗೆ ಉಲ್ಲೇಖವಿದೆ. ಇವುಗಳಲ್ಲಿ ಮುಖ್ಯವಾದುದು ಭೂಪತಿ ಕೆರೆ,[೨೧] ಅನಂತಾಪುರದಕೆರೆ,[೨೨] ಕೃಷ್ಣರಾಯ ಸಮುದ್ರ,[೨೩] ರಾಮಪುರದಕೆರೆ,[೨೪] ನಾಗಸಮುದ್ರ,[೨೫] ಕನ್ನಡಿಕೆರೆ.[೨೬]

ರಾಜಪ್ರಾಂಗಣದ ನೀರಿನ ವ್ಯವಸ್ಥೆ

ರಾಜ ಪ್ರಾಂಗಣದಲ್ಲಿ ದೈನಂದಿನ ಬಳಕೆಗೆ ವ್ಯವಸ್ಥಿತವಾದ ನೀರಿನ ಸಂಪರ್ಕ ಜಾಲ ಹೊಂದಿದ್ದರು. ಇಲ್ಲಿ ನೀರನ್ನು ಸಣ್ಣ ಕಾಲುವೆಗಳ ಮೂಲಕ ಬೇಕಾದ ಸ್ಥಳಗಳಿಗೆ ತೆಗೆದುಕೊಳ್ಳಲಾಗುತ್ತಿತ್ತು. ಕೆಲವೊಮ್ಮೆ ನೀರನ್ನು ಸಣ್ಣ ಕೊಳವೆಗಳ ಮೂಲಕ ನಿಗದಿತ ಸ್ಥಳಗಳಿಗೆ ಹರಿಸಲಾಗುತ್ತಿತ್ತು. ನಗರದೊಳಗೆ ಸಣ್ಣ ಶೇಖರಣಾ ಕಟ್ಟೆಗಳನ್ನು ಆಯಾಕಟ್ಟಿನ ಪ್ರದೇಶಗಳಲ್ಲಿ ನಿರ್ಮಿಸಲಾಗುತ್ತಿತ್ತು. ಇಲ್ಲಿಗೆ ಸುತ್ತಲೂ ಪ್ರದೇಶದಿಂದ ಮಳೆಯ ನೀರು ಹರಿದು ಅಲ್ಲಿ ಶೇಖರಣೆಯಾಗುತ್ತಿತ್ತು. ನಂತರ ಅದನ್ನು ಬೇಕಾದಾಗ

ಉಪಯೋಗಿಸುತ್ತಿದ್ದರು. ಈ ರೀತಿಯ ಕುರುಹುಗಳನ್ನು ಹಳ್ಳಿಕೆರೆ ಹಾಗೂ ಅದಕ್ಕೆ ಪೂರ್ವಕ್ಕಿರುವ ಸಣ್ಣ ಕಟ್ಟೆಗಳಿಂದ ಗುರುತಿಸಬಹುದಾಗಿದೆ. ಈ ಸಣ್ಣ ಕಟ್ಟೆಗಳು ಮಳೆಯ ನೀರು ಸಣ್ಣ ಹಳ್ಳವಾಗಿ ಹರಿಯುವ ಪ್ರದೇಶಕ್ಕೆ ಅಡ್ಡಲಾಗಿ ನಿರ್ಮಾಣ ಮಾಡಿರುವುದನ್ನು ಕಾಣಬಹುದು. ಈ ರೀತಿಯ ಕಟ್ಟೆಗಳಿಂದಾಗಿ ಆ ಪರಿಸರದ ಅಂತರ್ಜಲ ವೃದ್ಧಿಯಾಗಿದ್ದು ಕಂಡುಬರುತ್ತದೆ. ಕಮಲಾಪುರದ ಕೆರೆಯ ನೀರು ಮುಖ್ಯವಾದ ನೀರಿನ ಆಸರೆಯಾಗಿದ್ದು, ಅದರೊಡನೆ ಮನೆಗಳ ಸನಿಹದಲ್ಲಿ ಬಾವಿಗಳು, ಇಳಿಜಾರು ಪ್ರದೇಶಕ್ಕೆ ಅಡ್ಡಲಾಗಿ ಕಟ್ಟಿದ ಕಟ್ಟೆಗಳು ನೀರಿನ ಮುಖ್ಯ ಆಸರೆಯಾಗಿದ್ದವು.

ರಾಜ ಪ್ರಾಂಗಣಕ್ಕೆ ನೀರನ್ನು ಕಮಲಾಪುರದ ಕೆರೆಯಿಂದ ನೇರವಾಗಿ ಕಾಲುವೆಗಳ ಮೂಲಕ ಕೊಂಡೊಯ್ಯಲಾಗುತಿತ್ತು. ಅಂದು ನಿರ್ಮಿಸಿದ ನೀರಾವರಿಯ ಸಣ್ಣ ಕಾಲುವೆಗಳ ಕುರುಹುಗಳನ್ನು ಅಲ್ಲಲ್ಲಿ ಇಂದೂ ಕಾಣಬಹುದಾಗಿದೆ. ಕಲ್ಲಿನಲ್ಲಿ ನಿರ್ಮಿಸಿದ ಗೋಡೆ ಎರಡೂ ಪಕ್ಕದಲ್ಲಿ ಗಾರೆಯಿಂದ ಗಿಲಾವು ಮಾಡಿದ್ದು, ನೀರು ಸೋರಿಕೆಗೆ ಯಾವುದೇ ಅವಕಾಶವಿರಲಿಲ್ಲ. ಇದರಿಂದ ಅವ್ಯಾಹತವಾಗಿ ನೀರು ರಾಜಪ್ರಾಂಗಣಕ್ಕೆ ಹರಿಯುತ್ತಿತ್ತು. ಅಲ್ಲಿ ನೀರನ್ನು ಶೇಖರಣಾ ತೊಟ್ಟಿಗಳಲ್ಲಿ ಸಂಗ್ರಹಿಸಿ, ಮುಂದೆ ಅವಶ್ಯವಿದ್ದ ಸ್ಥಳಗಳಿಗೆ ಸಣ್ಣ ಕಾಲುವೆಗಳ ಮೂಲಕ ಹರಿಸಲಾಗುತಿತ್ತು. ಕೆಲವೊಮ್ಮೆ ಸಣ್ಣ ಕಾಲುವೆಗಳನ್ನು ಏಕ ಶಿಲೆಗಳಲ್ಲಿ ನಿರ್ಮಿಸಿರುವುದನ್ನು ಕಾಣಬಹುದು. ರಾಜಪ್ರಾಂಗಣದ ಅನೇಕ ಸಮುಚ್ಚಯಗಳಲ್ಲಿ ಬೇಕಾಗುವಷ್ಟು ನೀರನ್ನು ಸಂಗ್ರಹಿಸಲು ವಿವಿಧ ಅಳತೆಯ ಸಂಗ್ರಹಣಾ ತೊಟ್ಟಿಗಳಿವೆ. ಹೀಗೆ ಸಂಗ್ರಹಿಸಿದ ನೀರು ಅವರ ಅಗತ್ಯತೆಗಳನ್ನು ಪೂರೈಸುವುದರ ಜೊತೆಗೆ ದೈನಂದಿನ ಇತರ ಕಾರ್ಯಗಳಿಗೂ ಅನುಕೂಲವಾಗುತ್ತಿತ್ತು. ಇಲ್ಲಿ ಉಪಯೋಗಿಸಿದ ನಂತರ ಬಂದ ಮಲಿನ ನೀರನ್ನು ಸಣ್ಣ ಕಾಲುವೆಗಳ ಮೂಲಕ ದೊಡ್ಡ ಚರಂಡಿಗೆ ಹರಿಸಲಾಗುತ್ತಿತ್ತು. ಸಣ್ಣ ಕಾಲುವೆಗಳಲ್ಲಿ ನೀರು ವೃಥಾ ವ್ಯಯವಾಗದಂತೆ ಎಚ್ಚರ ವಹಿಸಿದ್ದರು. ಸಣ್ಣ ಕಲ್ಲಿನ ಗೋಡೆಗಳಿಗೆ ಗಾರೆಯ ಗಿಲಾವು ಮಾಡಿ ಅದರ ಮೇಲೆ ಸಣ್ಣ ಚಪ್ಪಡಿಯ ಕಲ್ಲುಗಳ ಹೊದಿಕೆಯನ್ನು ಹೊದಿಸಲಾಗಿತ್ತು. ಕಮಲಾಪುರದ ಕೆರೆಯಿಂದ ಗಾರೆಯ ಕಾಲುವೆಗಳ ಮುಖಾಂತರ ರಾಜಪ್ರಾಂಗಣದ ಶೇಖರಣಾ ತೊಟ್ಟಿಗಳು, ಕಾರಂಜಿ, ಜಲಕ್ರೀಡಾ, ಸೌಧಗಳು ಹೀಗೆ ಹಲವು ಪ್ರದೇಶಗಳಿಗೆ ನೀರನ್ನು ಹರಿಸಿ ಅದರ ಉಪಯೋಗ ಪಡೆಯುತ್ತಿದ್ದರು.

ರಾಜ ಪ್ರಾಂಗಣದಲ್ಲಿರುವ ಬೃಹತ್ ತೊಟ್ಟಿ, ಇತ್ತೀಚೆಗೆ ಉತ್ಖನನದಲ್ಲಿ ದೊರಕಿದ ಪುಷ್ಕರಣಿ, ಹಾಗೂ ಅವುಗಳಿಗೆ ನೀರನ್ನು ಹಾಯಿಸಲು ನಿರ್ಮಿಸಿರುವ ಏಕಶಿಲಾ ತೊಟ್ಟಿಗಳು ಗಮನಾರ್ಹ. ಈ ಪುಷ್ಕರಣಿಯು ಚಚ್ಚೌಕವಾಗಿದೆ. ಮೇಲಿನಿಂದ ಕೆಳಗಿನವರೆವಿಗೂ ಚೌಕಾಕಾರದಲ್ಲಿ ನಿರ್ಮಿಸಲಾಗಿದೆ. ಈ ಪುಷ್ಕರಣಿಯನ್ನು ಹಸಿರು ಬಳಪದ ಕಲ್ಲಿನಿಂದ ಕಟ್ಟಲಾಗಿದೆ. ಇಲ್ಲಿನ ಹಲವು ಮೆಟ್ಟಿಲುಗಳನ್ನು ಗುಂಪು, ಗುಂಪಾಗಿ ಒಂದರ ಮೇಲೆ ಒಂದರಂತೆ ವ್ಯವಸ್ಥಿತವಾಗಿ ಜೋಡಿಸಲಾಗಿದೆ. ಇಲ್ಲಿ ಪ್ರತಿಯೊಂದು ಕಲ್ಲಿಗೂ ಅದರ ದಿಕ್ಕು ಮತ್ತು ಸಂಖ್ಯೆಯನ್ನು ನೀಡಲಾಗಿದೆ. ಬಹುಶಃ ಕಲ್ಲಿನ ಗಣೆಯ ಬಳಿಯೆ ಇವುಗಳಿಗೆ

ಸಂಖ್ಯೆಗಳನ್ನು ನೀಡಿ, ಪ್ರತಿಯೊಂದು ಕಲ್ಲು ಯಾವ ಸ್ಥಳದಲ್ಲಿ ಸೇರಬೇಕು ಎನ್ನುವುದನ್ನು ನಿರ್ಧರಿಸಲಾಗಿತ್ತು ಎಂದು ತೋರುತ್ತದೆ. ಕಲ್ಲು ಗಣಿಯಲ್ಲೇ ನಿಗದಿತ ಸಂಖ್ಯೆ ನೀಡಿದ್ದರಿಂದ ಪ್ರತಿಯೊಂದು ಕಲ್ಲಿಗೂ ಒಂದು ಗೊತ್ತಾದ ಸ್ಥಳವನ್ನು ಪೂರ್ವಭಾವಿಯಾಗಿ ನಿರ್ಧರಿಸಿರುವುದು ತಿಳಿಯುತ್ತದೆ. ಈ ರೀತಿ ಬಳಪದ ಕಲ್ಲಿನ ನಿರ್ಮಿತಿಗಳನ್ನು ಕಲ್ಯಾಣಿ ಚಾಲುಕ್ಯ, ಹೊಯ್ಸಳರ ಕಾಲದಲ್ಲಿ ವಿಶೇಷವಾಗಿ ಕಾಣಬಹುದು.

ಈ ಪುಷ್ಕರಣಿಗೆ ನೀರನ್ನು ಕಲ್ಲಿನ ದೋಣಿಯ ಮೂಲಕ ಒದಗಿಸಲಾಗುತಿತ್ತು. ಅಲ್ಲದೆ ಈ ಕೊಳವು ಸಾಕಷ್ಟು ಆಳದಲ್ಲಿರುವುದರಿಂದ ಅಂತರ್ಜಲದಿಂದಾಗಿ ಪುಷ್ಕರಣಿಯಲ್ಲಿ ನೀರು ಒಂದು ಗೊತ್ತಾದ ಮಟ್ಟದವರೆಗೂ ಇರುತಿತ್ತು.[೨೨] ಈ ಪುಷ್ಕರಣಿಯು ಆಯಾಕಟ್ಟಿನ ಸ್ಥಳದಲ್ಲಿದೆ. ಇದರ ವಾಸ್ತುವಿನ್ಯಾಸವನ್ನು ಗಮನಿಸಿದಲ್ಲಿ ಈ ನೀರನ್ನು ಧಾರ್ಮಿಕ ಕ್ರಿಯೆಗಳಿಗೆ ಉಪಯೋಗಿಸಿರುವುದನ್ನು ಕಾಣಬಹುದು. ಉತ್ಖನನದಲ್ಲಿ ದೊರೆತ ಸಣ್ಣ ಆಲಂಕಾರಿಕ ಮಡಿಕೆಗಳು ಈ ಪುಷ್ಕರಣಿಯ ಉಪಯೋಗದ ಬಗೆಗೆ ಹೆಚ್ಚಿನ ಬೆಳಕು ಚೆಲ್ಲಬಲ್ಲವು. ಇಂದಿಗೂ ಹಬ್ಬ, ದೇವರ ಎಡೆ ಮುಂತಾದ ಸಂದರ್ಭಗಳಲ್ಲಿ ಇವುಗಳನ್ನು ಉಪಯೋಗಿಸಲಾಗಿದೆ. ಹಾಗಾಗಿ ಈ ನೀರನ್ನು ಒಂದು ನಿಗದಿತ ಆಚರಣೆಗೆ ಅಂದರೆ ಪವಿತ್ರ ಸ್ನಾನ ಅಥವಾ ದೇವತಾ ಕಾರ್ಯಗಳಿಗೆ ಉಪಯೋಗಿಸಿರಬಹುದು. ನೀರಿನ ಸೌಲಭ್ಯವು ರಾಜ ಪ್ರಾಂಗಣದ ಕಟ್ಟಡಗಳಲ್ಲಿ ವಾಸಿಸುವ ಜನರಿಗೆ ಮುಖ್ಯವಾಗಿ ಬೇಕಾಗಿದ್ದು ಅದರ ವ್ಯವಸ್ಥಿತ ಸರಬರಾಜಿಗೆ ಬೇಕಾಗುವ ಅನುಕೂಲತೆಯನ್ನು ಕಟ್ಟಿಸಿಕೊಂಡಿದ್ದರು. ನೀರು ಇದ್ದ ಸ್ಥಳಗಳಿಗೆ ನಿಗದಿತವಾಗಿ ಹರಿದುಬರುವುದು ಇದರ ವೈಶಿಷ್ಟ್ಯ. ಇಲ್ಲಿಗೆ ನೀರನ್ನು ಕೆಲವು ವಿಶೇಷ ಸಂದರ್ಭಗಳಲ್ಲಿ ಮಾತ್ರ ಹರಿಯಿಸುತ್ತಿದ್ದರೆಂದು ತಿಳಿಯಲಾಗಿದೆ. ಅಲ್ಲದೆ ಅರಮನೆಗೆ ವಿಶೇಷ ಅತಿಥಿಗಳು ಆಗಮಿಸಿದಾಗ ಹಬ್ಬದ ದಿನಗಳಲ್ಲಿ ಮಾತ್ರ ಉಪಯೋಗಿಸುತ್ತಿದ್ದರೆಂದು ಅಭಿಪ್ರಾಯ ಪಡಲಾಗಿದೆ. ಇಲ್ಲಿಯ ಅಗತ್ಯತೆ ಹಾಗೂ ಕುರುಹುಗಳನ್ನು ನೋಡಿದಲ್ಲಿ ಈ ಅಭಿಪ್ರಾಯವು ಸರಿಯಲ್ಲವೆನಿಸುತ್ತದೆ. ರಾಜ ಪ್ರಾಂಗಣದಲ್ಲಿ ನೀರು ತೀವ್ರವಾದ ಅಗತ್ಯತೆ ಹೊಂದಿದ್ದರಿಂದ ಸದಾ ನೀರಿನ ಅನುಕೂಲತೆ ಬೇಕಾಗಿತ್ತು. ಅಲ್ಲದೆ ದೊಡ್ಡ ಸಂಗ್ರಹಣಾ ತೊಟ್ಟಿಗಳನ್ನು ಶುಚಿಗೊಳಿಸಿದಾಗ ಮಲಿನ ನೀರು ಹೊರ ಹೋಗಲು ದ್ವಾರಗಳಿರುವುದನ್ನು ಗಮನಿಸಿದಲ್ಲಿ ನೀರಿನ ಪ್ರಾಮುಖ್ಯತೆ ತಿಳಿಯುತ್ತದೆ.

ರಾಜ ಪ್ರಾಂಗಣದಲ್ಲಿ ನೀರನ್ನು ಹರಿಬಿಡಲು ಕಲ್ಲಿನ ದೋಣಿಗಳು ಕೆಲವು ಕಟ್ಟಡದ ಬಳಿಯಿರುವ ತೊಟ್ಟಿಗಳು ಸಂಗ್ರಹಣಾ ವ್ಯವಸ್ಥೆಗಳು ನೀರನ್ನು ಒಂದು ನಿರ್ದಿಷ್ಟ ರೀತಿಯಲ್ಲಿ ಉಪಯೋಗಿಸಿದ ಬಗೆಗೆ ಉತ್ತಮ ಉದಾಹರಣೆಯಾಗಿವೆ. ರಾಜ ಪ್ರಾಂಗಣದ ಮಧ್ಯದಲ್ಲಿರುವ ಬೃಹತ್ ಬಾವಿ, ಕಲ್ಲಿನ ದೋಣಿಯ ಹರಿವು ದಿಕ್ಕುಬದಲಿಸುವ ಮೂಲೆಯಲ್ಲಿದೆ. ಹೊರಗಿನ ನೀರು ಸರಬರಾಜು ವ್ಯತ್ಯಯವಾದಾಗ ಈ ಬಾವಿಗೆ ರಾಟೆಯನ್ನು ಹೊಂದಿಸಲು ಬಾವಿಯ ಎರಡು ಪಕ್ಕದಲ್ಲಿ ಬೃಹತ್ ಪ್ರಮಾಣದ ಚಪ್ಪಡಿ ಕಲ್ಲುಗಳಿದ್ದು ಮೇಲ್ಭಾಗದಲ್ಲಿ ದೊಡ್ಡ ರಂಧ್ರವಿದೆ. ಇದರ ಮೂಲಕ ಅಡ್ಡ ತೊಲೆಗಳನ್ನು ಹಾಕಿ ರಾಟೆಯನ್ನು

ಕೂಡಿಸಿರಬೇಕು. ಈ ರಾಟೆಯಿಂದ ನೀರನ್ನು ಮೇಲೆತ್ತಿ ಕಲ್ಲಿನ ದೋಣಿಗಳ ಮೂಲಕ ಹರಿಯಬಿಡಲಾಗುತಿತ್ತು. ಈ ಬಾವಿಯ ಪಕ್ಕದಲ್ಲಿರುವ ಪುಷ್ಕರಣಿಯಂತೆ ಈ ಬಾವಿಯಲ್ಲೂ ಉತ್ತಮ ಅಂತರ್ಜಲದ ಸೆಲೆಯಿದ್ದು ಪರಿಪೂರ್ಣ ನೀರಿನ ಸರಬರಾಜಿಗೆ ಉತ್ತಮ ಸಾಧನವಾಗಿತ್ತು. ರಾಜಪ್ರಾಂಗಣದಲ್ಲಿ ಬಾವಿಗಳ ಪ್ರಮಾಣ ಕಡಿಮೆಯಿದೆ. ಆದರೆ ನೀರು ಶೇಖರಣಾ ತೊಟ್ಟಿಗಳು ಹೇರಳವಾಗಿ ಕಂಡುಬಂದಿವೆ. ಅಂದರೆ ಹೊರಗಿನಿಂದ ಸರಬರಾಜದ ನೀರನ್ನು ಸಂಗ್ರಹಿಸಿ ಉಪಯೋಗಿಸಲಾಗುತಿತ್ತು. ಮಳೆ ನೀರು ಒಂದು ಕಡೆ ಹರಿದು ಅದನ್ನು ಸಂಗ್ರಹಿಸಲು ನೀರಿನ ತೊಟ್ಟಿಗಳನ್ನು ಮಾಡಲಾಗಿತ್ತು. ಕೆಲವು ಕಟ್ಟಡಗಳ ಬಳಿ ಗಾರೆಯಿಂದ ಲೇಪಿಸಿದ ಸಣ್ಣ ಕಾಲುವೆಗಳು ನಿರ್ದಿಷ್ಟ ತೊಟ್ಟಿಗೆ ಜೋಡಣೆಯಾಗಿವೆ. ಇವು ಕಟ್ಟಡದ ಬಳಿ ಬಿದ್ದ ನೀರನ್ನು ಒಯ್ಯುವ ವ್ಯವಸ್ಥೆಯಾಗಿರಬೇಕು. ಇಲ್ಲಿ ಸಂಗ್ರಹವಾದ ನೀರನ್ನು ದಿನಬಳಕೆಗೆ ಉಪಯೋಗಿಸಿರಬಹುದು.

ನೀರನ್ನು ಹರಿಸಲು ಸುಟ್ಟ ಮಣ್ಣಿನ ಕೊಳವೆಗಳನ್ನು ಒಂದರ ಪಕ್ಕದಲ್ಲಿ ಒಂದನ್ನು ಜೋಡಿಸಿ ಗಾರೆಯಿಂದ ಭದ್ರಪಡಿಸಿರುವುದರಿಂದ ಈ ಕೊಳವೆಗಳು ಒಡೆದು ಹೋಗುವ ಅಥವಾ ಹಾಳಾಗುವುದನ್ನು ತಡೆಯಬಹುದಾಗಿದೆ. ಅಲ್ಲದೆ ನೀರು ಒತ್ತಡದಲ್ಲಿ ಹರಿಯಲು ಅನುಕೂಲವಾಗಿದೆ. ಒತ್ತಡ ಹಾಗೂ ಗುರುತ್ವಾಕರ್ಷಣೆಯಿಂದ ರಭಸವಾಗಿ ಹರಿಯುವ ನೀರನ್ನು ಕಾರಂಜಿ ಕೃತಕ ನೀರಿನ ಹರಿವುಗಳನ್ನು ನಿರ್ಮಿಸಲು ಉಪಯೋಗಿಸಲಾಗುತಿತ್ತು.[೨೮] ಜಲಕ್ರೀಡಾ ಸೌಧಗಳಿಗೆ ನೀರನ್ನು ಹರಿಸುವಾಗ 'ಕೆಸರು ಸಂಗ್ರಹಕ್ಕಾಗಿ' ಅಲ್ಲಲ್ಲಿ ಸಣ್ಣ ತೊಟ್ಟಿಗಳಿದ್ದು, ಆಗಿಂದಾಗ್ಗೆ ಸಂಗ್ರಹವಾದ ಕೆಸರನ್ನು ತೆಗೆಯಲಾಗುತಿತ್ತು. ಇದೇ ರೀತಿಯ ವ್ಯವಸ್ಥೆ ಸುಟ್ಟ ಮಣ್ಣಿನ ಕೊಳವೆಗಳಲ್ಲಿ ನೀರು ಹಾಯಿಸುವಾಗಲೂ ಮಾಡಿರುವುದು ಕಂಡುಬರುತ್ತದೆ. ಈ ವ್ಯವಸ್ಥೆಯಿಂದ ಕೆಸರನ್ನು ಹೊರತುಪಡಿಸಿದ ತಿಳಿನೀರು ಉಪಯೋಗಕ್ಕೆ ದೊರಕುತಿತ್ತು. ಅಲ್ಲದೆ ಕೊಳವೆಗಳಲ್ಲಿ ಕೆಸರು ಸಂಗ್ರಹವಾಗುವುದನ್ನು ತಡೆಯಲು ಉತ್ತಮ ಮಾರ್ಗವಾಗಿತ್ತು.

ಸುಟ್ಟಮಣ್ಣಿನ ಕೊಳವೆಗಳ ಮುಖಾಂತರ ನೀರನ್ನು ಹಾಯಿಸುವುದನ್ನು ವಿಜಯನಗರ ಕಾಲದ ಪೂರ್ವದಲ್ಲಿ ಹೇರಳವಾಗಿ ಬಳಸಿರುವುದು ಕಂಡುಬಂದಿಲ್ಲ. ಆದರೆ ವಿಜಯನಗರದ ಪಕ್ಕದ ರಾಜ್ಯವಾದ ಬಹಮನಿ ಸುಲ್ತಾನರ ಹಾಗೂ ಅವರ ವಾಸ್ತು ವಿನ್ಯಾಸಗಳಲ್ಲಿ ಬಳಸಿದ್ದಾರೆ. ವಾಸ್ತು ಮತ್ತು ತಾಂತ್ರಿಕತೆಯಲ್ಲಿ ಪರಸ್ಪರ ಕೊಡು ಕೊಳ್ಳುವಿಕೆಯಿಂದ ಸುಟ್ಟ ಮಣ್ಣಿನ ಕೊಳವೆಗಳ ಬಳಕೆ ಹೆಚ್ಚಾಗಿತ್ತೆಂದು ಕಾಣುತ್ತದೆ.

ನೀರಾವರಿ ವ್ಯವಸ್ಥೆಯ ಕಾಲಮಾನ

ರಾಜ ಪ್ರಾಂಗಣದ ನೀರಾವರಿ ಸೌಲಭ್ಯಗಳ ಬಗೆಗೆ ಅಧಿಕೃತವಾಗಿ ಕಾಲಮಾನವನ್ನು ನಿರ್ಧರಿಸಲಾಗುವುದಿಲ್ಲ. ಇಲ್ಲಿಯ ರಚನೆಗಳ ಬಗೆಗೆ ಶಾಸನಗಳಲ್ಲಿ ಮಾಹಿತಿ ಸಿಗುವುದಿಲ್ಲ. ಅಥವಾ ಇನ್ನಾವುದೇ ಮೂಲದಿಂದಲೂ ತಿಳಿಯುವುದು ಕಷ್ಟಕರವಾಗುತ್ತದೆ. ಸ್ತರ

ಏಂಗಡನೆಯ ಮೂಲಕ ದಾಖಲಿಸುವುದಕ್ಕೆ ಹಲವಾರು ಸಮಸ್ಯೆಗಳು ಎದರಾಗುತ್ತವೆ. ನೀರಿನ ಸೌಕರ್ಯದ ಪ್ರದೇಶಗಳು ಹಾಗೂ ಕಟ್ಟಡಗಳು ಹಲವಾರು ಬದಲಾವಣೆಗಳನ್ನು ಹೊಂದಿವೆ. ಕೆಲವು ಸಂದರ್ಭಗಳಲ್ಲಿ ಉಪಯೋಗಿಸಲು ಯೋಗ್ಯವಾದ ವಿಜಯನಗರದ ಪ್ರಾರಂಭಿಕ ಹಂತದ ಕಟ್ಟಡದ ಕೆಲವು ವಸ್ತುಗಳು ಬಳಕೆಗೆ ಯೋಗ್ಯವಾದುದರಿಂದ ಪುನ: ಉಪಯೋಗಿಸಲಾಗಿದೆ. ಇದರಿಂದಾಗಿ ಈ ನೀರಾವರಿ ವ್ಯವಸ್ಥೆಯ ಕಾಲವನ್ನು ನಿರ್ಧರಿಸಲಾಗಿಲ್ಲ. ರಾಜಪ್ರಾಂಗಣದ ಬೃಹತ್ ನೀರಿನ ತೊಟ್ಟಿ ಅಷ್ಟಕೋನಾಕೃತಿಯ ಕಾರಂಜಿ ಅಷ್ಟಕೋನಾಕೃತಿಯ ಜಲಸೌಧಗಳ ವಾಸ್ತುವಿನ್ಯಾಸ ಆಕರ್ಷಕವಾಗಿವೆ. ಉತ್ತಮವಾಗಿ ಸಿದ್ಧಪಡಿಸಿದ ಕಲ್ಲುಗಳು ಹಾಗೂ ಗಾರೆಯ ಲೇಪನ ಇಲ್ಲಿ ಸಾಮಾನ್ಯವಾಗಿ ಕಂಡುಬರುವ ಲಕ್ಷಣಗಳು. ಈ ಕಟ್ಟಡಗಳಲ್ಲಿ ಸ್ವಲ್ಪ ರೀತಿಯ ಬದಲಾವಣೆಗಳನ್ನು ಮಾಡಲಾಗಿದೆ. ಮೇಲೆ ತಿಳಿಸಿದ ರೀತಿಯ ಕಟ್ಟಡಗಳನ್ನು ಪರಿಶೀಲಿಸಿದಲ್ಲಿ ಅವುಗಳ ಕಾಲಮಾನ ಒಂದೇ ಇರಬೇಕೆಂದೆನಿಸುತ್ತದೆ. ಕಾರಣ ಈ ರೀತಿಯ ಕಟ್ಟಡಗಳು ತಮ್ಮ ವೈಭವದ ಸಂಕೇತವಾಗಿ ನಿಲ್ಲುವುದರಿಂದ ರಾಜ್ಯದಲ್ಲಿ ಸಮೃದ್ಧಿ, ಸುಭಿಕ್ಷೆ, ಆರ್ಥಿಕ ಸಬಲತೆಯಿದ್ದಾಗ ನಿರ್ಮಿಸಿರಬಹುದೆಂದು ತೋರುತ್ತದೆ. ಒಟ್ಟಾರೆ ಹೇಳುವುದಾದರೆ ವಿಜಯನಗರದಲ್ಲಿ ಉತ್ತಮವಾದ ನೀರಿನ ಪೂರೈಕಾ ವ್ಯವಸ್ಥೆ ಇದ್ದಿತೆಂದು ಹೇಳಬಹುದು.

ಅಡಿಟಿಪ್ಪಣಿಗಳು

೧. ಸಿಂಗ್ ಆರ್.ಎಲ್. ಮತ್ತು ಇತರರು, ಕರ್ನಾಟಕ ಪ್ಲೆಟೂ ಇನ್ ಇಂಡಿಯಾ ಎ.ರೀಜನಲ್ ಜಿಯಾಗ್ರಫಿ, ನ್ಯಾಷನಲ್ ಜಿಯಾಗ್ರಫಿಕ್ ಸೊಸೈಟಿ ಆಫ್ ಇಂಡಿಯಾ, ವಾರಣಾಸಿ, ೧೯೭೧

೨. ವಿಪ್ರೊರಿ, ೧೯೮೩-೮೪, ಸಂ. ೭೩

೩. ಅದೇ, ಸಂ. ೧೮

೪. ಕೊಟ್ರಯ್ಯ ಸಿ.ಟಿ.ಯಂ. ಇರಿಗೇಷನ್ ಸಿಸ್ಟಮ್ ಇನ್ ವಿಜಯನಗರ ಮೈಸೂರು, ೧೯೯೫, ಪುಟ ೯೬

೫. ಸೌ.ಇಂ.ಇ. ೯(೨) ಸಂ. ೪೪೭

೬. ವಿಪ್ರೊರಿ ೩, ೧೯೯೧, ಪು. ೧೦೫, ಸಂ. ೪೯-೫೦

೭. ಅದೇ, ಸಂ. ೨೬, ಪುಟ ೩೨

೮. ಅದೇ, ಸಂ. ೨೭, ಪುಟ ೩೩

೯. ಜಂಕಿನ್ಸ್ ಡಿ.ಡಿ. ಇರಿಗೇಷನ್ ಅಂಡ್ ವಾಟರ್ ಸಪ್ಲೈ ಸಿಸ್ಟಮ್ ಇನ್ ವಿಜಯನಗರ ಎಂಪೈಯರ್ ನ್ಯೂಡೆಲ್ಲಿ, ೧೯೭೭, ಪುಟ. ೯೮

೧೦. ವಿಪ್ರೊರಿ, ೧೯೮೪-೮೭, ಸಂ. ೧೦೮, ೧೧೦, ಪುಟ ೫೦ ಮತ್ತು ೫೧

೧೧. ಅದೇ, ಸಂ. ೯೮

೧೨. ಜಂಕಿನ್ಸ್ ಡಿ.ಡಿ. ಇರಿಗೇಷನ್ ಅಂಡ್ ವಾಟರ್ ಸಿಸ್ಟಮ್ ಇನ್ ವಿಜಯನಗರ ಎಂಪೈಯರ್ , ನ್ಯೂಡೆಲ್ಲಿ, ೧೯೭೭, ಪುಟ ೧೦೦

೧೩. ಸೌ.ಇಂ.ಇ. ೯(೨) ಪುಟ ೫೩೩, ೫೪೮

೧೪. ವಿಪ್ರೊರಿ ೮೪-೮೭, ಸಂ. ೩೩-೧೨೮

೧೫. ಅದೇ, ಸಂ. ೧೦೬-೧೬೭

೧೬. ಅದೇ, ಸಂ. ೧೦೯

೧೭. ಸೀವೆಲ್ : ಪಾರ್ ಗಾಟನ್ ಎಂಪೈಯರ್, ಲಂಡನ್, ೧೯೦೦, ಪುಟ ೫೧, ೩೦೧

೧೮. ಸೌ.ಇಂ.ಇ. ೫, ಸಂ. ೬೬೮

೧೯. ಅದೇ, ೪, ಸಂ. ೨೪೫

೨೦. ವಿಜಯನಗರ ಅಧ್ಯಯನ, ೧, ೧೯೯೬, ಪುಟ ೬೪

೨೧. ಸೌ.ಇಂ.ಇ. ೯(೨) ಸಂ. ೫೦೪-೨೧

೨೨. ಸೌ.ಇಂ.ಇ. ೯(೨) ಸಂ. ೨೪೫

೨೩. ವಿಪ್ರೊರಿ ೮೪-೮೭, ಸಂ. ೧೨೯

೨೪. ಅದೇ, ಸಂ. ೮೯

೨೫. ಸೌ.ಇಂ.ಇ. ಸಂ. ೫೦೪

೨೬. ಅದೇ, ಸಂ. ೨೬೭

೨೭. ಜಂಕಿನ್ಸ್ ಡಿ.ಡಿ. ಇರಿಗೇಷನ್ ಅಂಡ್ ವಾಟರ್ ಸಪ್ಲೈ ಸಿಸ್ಟಮ್ ಇನ್ ವಿಜಯನಗರ ಎಂಪೈಯರ್, ನ್ಯೂಡೆಲ್ಲಿ, ೧೯೭೭, ಪುಟ ೭೮

೨೮. ಕೊಟ್ರಯ್ಯ ಸಿ.ಟಿ.ಯಂ. ಇರಿಗೇಷನ್ ಸಿಸ್ಟಮ್ ಇನ್ ವಿಜಯನಗರ ಮೈಸೂರು, ೧೯೯೫, ಪುಟ ೧೦೨

❖ ❖

೧೫

ಅತ್ತಿವಟ್ಟಿ ಶಾಸನ ಮತ್ತು ಸ್ಥಳೀಯ ಕೃಷಿ ವ್ಯವಸ್ಥೆ

ಡಾ. ಡಿ.ವಿ.ಪರಮಶಿವಮೂರ್ತಿ

ಹಂಪಿಯ ಸುಪ್ರಸಿದ್ಧ ಬಾಲಕೃಷ್ಣಗುಡಿಗೆ ಸಂಬಂಧಪಟ್ಟ ಶಾಸನವೊಂದು ಗಂಗಾವತಿ ತಾಲೂಕಿನ ಹತೋಟಿ ಎಂಬ ಹಾಳೂರಿನಲ್ಲಿ ದೊರಕಿದ್ದು ಆ ಶಾಸನದ ಬಗೆಗೆ ಈಗಾಗಲೆ ಒಂದಿಷ್ಟು ಚರ್ಚೆ ನಡೆದಿದೆ.[೧] ಈ ಶಾಸನವನ್ನು ಕ್ರಿ.ಶ. ೧೫೧೫, ಫೆಬ್ರುವರಿ ೨೦ ರಂದು ಹಾಕಿಸಲಾಗಿದ್ದು ಒಟ್ಟು ೧೦ ಸಾಲುಗಳನ್ನು ಒಳಗೊಂಡಿದ್ದು ಅದರ ಲಿಪಿಯು ಬಹಳ ಸ್ಪುಟವಾಗಿದೆ. ಈ ಶಾಸನ ದೊರೆತ ಹತೋಟಿ ಗ್ರಾಮವು ಪೂರ್ವದಲ್ಲಿ ಅತ್ತಿವಟ್ಟಿ ಎಂಬ ಗ್ರಾಮವಾಗಿತ್ತು. ಈ ಅತ್ತಿವಟ್ಟಿಯ ಗದ್ದೆಗಳನ್ನು ಬಾಲಕೃಷ್ಣ ಗುಡಿಗೆ ಸಂಬಂಧಪಟ್ಟ ಹತ್ತೊಂಬತ್ತು ಜನ ಬ್ರಾಹ್ಮಣರಿಗೂ, ಅತ್ತವಟ್ಟೆಯ ತೆಗಿಗೆಯನ್ನು ಬೇರೆ ಬೇರೆ ವೃತ್ತಿಯ ಅನೇಕ ಬ್ರಾಹ್ಮಣರಿಗೂ ದಾನ ನೀಡಿದ ವಿಷಯವುಳ್ಳ ಎರಡು ಶಾಸನಗಳು ಹಂಪಿಯಲ್ಲಿ ಈ ಮೊದಲೇ ದೊರೆತಿವೆ.[೨]

ಅತ್ತಿವಟ್ಟಿ ಗ್ರಾಮದ ಶಾಸನವು ನಾಲ್ಕು ದೃಷ್ಟಿಗಳಿಂದ ನಮಗೆ ಬಹಳ ಮುಖ್ಯವಾಗುತ್ತದೆ. ಮೊದಲನೆಯದಾಗಿ ಅತ್ತಿವಟ್ಟಿ ಗ್ರಾಮವು ಎಲ್ಲಿತ್ತು ಎಂದು ಈವರೆಗೂ ತಿಳಿದಿರಲಿಲ್ಲ. ಈ ಶಾಸನವು ದೊರಕಿದ ಸ್ಥಳವಾದ ಹಾಳೂರು ಹತೋಟಿಯೇ ಶಾಸನಸ್ಥ ಅತ್ತಿವಟ್ಟಿ ಗ್ರಾಮವಾಗಿದೆ. ತುಂಗಭದ್ರೆಯ ಉತ್ತರ ದಡದಲ್ಲಿ ನಗರಗಡ್ಡಿ ಮಠದ ದಾರಿಯಲ್ಲಿದೆ. ಇಂದಿಗೂ ಈ ಸ್ಥಳದಲ್ಲಿ ಮನೆಗಳ ಅವಶೇಷಗಳಿದ್ದು, ಸಮೀಪದ ಗುಡ್ಡದ ಮೇಲೆ ಕಾವಲು ಗೋಪುರಗಳು, ಮಂಟಪಗಳು ಇಂದಿಗೂ ಉಳಿದಿವೆ.

ಎರಡನೆಯದಾಗಿ ಹಂಪಿ ಬಾಲಕೃಷ್ಣನ ಮೂಲ ಮೂರ್ತಿಯ ಬಗೆಗಿದ್ದ ಗೊಂದಲವನ್ನು ನಿವಾರಿಸಲು ಈ ಶಾಸನ ನೆರವಾಗುತ್ತದೆ. ಡಾ. ಸಿ.ಶಿವರಾಮಮೂರ್ತಿಯವರ ಹೇಳಿಕೆಯ ಪ್ರಕಾರ ಈ ಗುಡಿಯಲ್ಲಿ ಪ್ರತಿಷ್ಠಾಪಿಸಿದ್ದ ಮೂರ್ತಿಯು ಪೀಠದಲ್ಲಿ ಕುಳಿತ ಕೃಷ್ಣನ ಮೂರ್ತಿಯೆಂದು ತಿಳಿದುಬರುತ್ತದೆ.[೩]

ಡಾ. ರಾಜಶೇಖರರು ಬಾಲಕೃಷ್ಣನ ಗುಡಿಯ ಮುಖಮಂಟಪದ ಕಂಬದಲ್ಲಿ ಅಂಬೆಗಾಲ ಬಾಲಕೃಷ್ಣನ ಮೂರ್ತಿಯನ್ನು ಮತ್ತು ಅದರ ಮುಂದೆ ತ್ರಿಭಂಗಿಯಲ್ಲಿ ನಿಂತಿರುವ ಕೃಷ್ಣದೇವರಾಯನ ಮೂರ್ತಿಯನ್ನು ಗುರುತಿಸಿರುವರು.[೪] ಈ ಊಹಿತ ಆಧಾರಗಳನ್ನು ಹೊರತುಪಡಿಸಿದರೆ ಬಾಲಕೃಷ್ಣನ ಮೂರ್ತಿಯ ಬಗ್ಗೆ ಯಾವುದೇ ಸ್ಪಷ್ಟ ಆಧಾರಗಳಿರಲಿಲ್ಲ. ಅತ್ತಿವಟ್ಟಿ ಶಾಸನದ ಮೇಲ್ಭಾಗದಲ್ಲಿ ಮತ್ತು ಕೆಳಭಾಗದಲ್ಲಿ ಬಲಗೈಯಲ್ಲಿ ಬೆಣ್ಣೆಹಿಡಿದ ಅಂಬೆಗಾಲಿನ ಬಾಲಕೃಷ್ಣನ ಮೂರ್ತಿಯನ್ನು ಚಿತ್ರಿಸಲಾಗಿದೆ. ಈ ಶಾಸನವನ್ನು ಬಾಲಕೃಷ್ಣನ ಪ್ರತಿಷ್ಠೆಯಾದ ಮಾರನೆ ದಿನವೇ ಹಾಕಿಸಿರುವುದರಿಂದ ಈ ಶಾಸನದ ಮೇಲೆ ಮತ್ತು ಕೆಳಗೆ ಕೆತ್ತಲಾಗಿರುವ ಮೂರ್ತಿಯು ಹಂಪಿಯ ಬಾಲಕೃಷ್ಣನ ಪ್ರತಿರೂಪವೆಂದು ತಿಳಿದುಬರುತ್ತದೆ. ಡಾ. ಶಿವರಾಮಮೂರ್ತಿಯವರು ಹೇಳುವಂತೆ ಮದ್ರಾಸ್ ಮ್ಯೂಸಿಯಂನಲ್ಲಿರುವ ಮೂರ್ತಿ ಮೂಲಮೂರ್ತಿಯಲ್ಲ. ಯಾವುದೋ ಕಾರಣದಿಂದ ಮೂಲ ಮೂರ್ತಿಯು ಭಗ್ನವಾಗಿರಬಹುದು. ಆಗ ಅದರ ಸ್ಥಳದಲ್ಲಿ ಕುಳಿತ ಭಂಗಿಯ ಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಿರಬಹುದು.

ಮೂರನೆಯದಾಗಿ ಬಾಲಕೃಷ್ಣನ ಗುಡಿಯಲ್ಲಿ ನಡೆಯುತ್ತಿದ್ದ ಆಚರಣೆಗಳ ಬಗೆಗೂ ಈ ಶಾಸನ ಮಾಹಿತಿ ನೀಡುತ್ತದೆ. ಅದೇನೆಂದರೆ" . . . . . ಅಮೃತಪಡಿ ಅಂಗರಂಗ ವೈಭವ ಚೈತ್ರಮಾಸದ ರಥೋತ್ಸವ ನಿತ್ಯ ನೈಮಿತ್ತಿಕ ದೀಪಾರಾಧನೆಗಳು ಪಂಚಪರ್ವ ಯುಗಾದಿಮನಾದಿ ಅಯನ ಗಜಛಾಯಾಪಥಕೆ . . . . ." ದಾನ ನೀಡಿದ ವಿಷಯ ಶಾಸನದಲ್ಲಿದೆ. ಇಲ್ಲಿ ಉಲ್ಲೇಖವಾಗಿರುವ "ಗಜ ಛಾಯಾಪಥ"ವೆಂಬ ಪದ ಇದುವರೆಗೂ ಯಾವ ಶಾಸನದಲ್ಲೂ ಬಳಕೆಯಾಗಿಲ್ಲ. ಹಬ್ಬ, ಉತ್ಸವ ಮತ್ತು ಜಾತ್ರೆಗಳ ಸಂದರ್ಭದಲ್ಲಿ ದೇವರ ಮೆರವಣಿಗೆಯ ಮುಂದೆ ಅಲಂಕೃತಗೊಂಡ ಆನೆ ಅಥವಾ ಆನೆಗಳ ಮೆರವಣಿಗೆಯನ್ನು 'ಗಜ ಛಾಯಾಪಥ' ಶಬ್ದವು ಸೂಚಿಸುತ್ತದೆ. ಕಳಸ ಕನ್ನಡಿ ಮತ್ತು ಲಾಂಛನಗಳೊಂದಿಗೆ ಆನೆಗಳ ಮೆರವಣಿಗೆ ಅಥವಾ ಪಥಸಂಚಲನ (March fast)ವೆಂದು ಹೇಳಬಹುದು. ದೇವರ ಉತ್ಸವಮೂರ್ತಿಯನ್ನು ಬೆನ್ನಮೇಲೆ ಹೊತ್ತು ಸಾಗುವುದನ್ನೂ ಈ ಶಬ್ದ ಸೂಚಿಸುತ್ತದೆ. ಈ ರೀತಿಯ ಆನೆಗಳ ನಿರ್ವಹಣೆಗೆ, ಮಾವುತರ ಜೀವನಕ್ಕೆ ದಾನ-ದತ್ತಿಗಳನ್ನು ನೀಡುವ ಪದ್ಧತಿಯನ್ನು ಈ ಶಬ್ದ ಸೂಚಿಸುತ್ತದೆ.

ನಾಲ್ಕನೆಯದಾಗಿ ಮತ್ತು ಮುಖ್ಯವಾಗಿ ಈ ಶಾಸನದ ಮಹತ್ವವೇನೆಂದರೆ ಆ ಕಾಲದ ಕೃಷಿ ವ್ಯವಸ್ಥೆ ಬಗ್ಗೆ ಈ ಶಾಸನವು ಸ್ವಲ್ಪಮಟ್ಟಿನ ಬೆಳಕನ್ನು ಚೆಲ್ಲಿರುವುದು. ನಮ್ಮ ಶಾಸನಗಳು ನಮ್ಮ ನಾಡಿನ ಮೂಲ ಕಸುಬಾದ ಕೃಷಿಯ ಬಗ್ಗೆ ಹೆಚ್ಚು ಮಾಹಿತಿಯನ್ನೇ ನೀಡುತ್ತಿಲ್ಲ.

ಶಾಸನ ಪಾಠದಲ್ಲಿ ದಾನದ ವಿವರವನ್ನು ನೀಡುವಾಗ ". . . . . ಹುಲಿಗೆಯ ಮಾಗಣೆಯವೊಳಗಣ ಅತ್ತಿವಟ್ಟಿ ಅಂಬಾ ಗ್ರಾಮಕ್ಕೆ ಸಲ್ಲುವ ನೀರಾಡಂಬ ಕಾಡಾರಂಭ ಗಂಗಾಗವಿದೊಳಗಣ ಕಾರುವ ಖಾಲಾಹೊಸಹಳ್ಳಿ ಸೆಣಬಿನ ಕಟಿಗೆ ಪೇಟೆವೊಳಗಾದ . . . . ." ಎಂದು ಉಲ್ಲೇಖಿಸುತ್ತದೆ. ಇಲ್ಲಿನ ಖಾಲಾ ಹೊಸಹಳ್ಳಿ ಬಹುಶ: ಹುಲಿಗಿ ಬಳಿಯಿರುವ ಈಗಿನ ಹೊಸಹಳ್ಳಿ ಆಗಿರಬಹುದು. ಸೆಣಬಿನ ಕಟ್ಟಿಗೆಪೇಟೆಯೂ ಅದರದ್ದೇ ಎಂದು ಊಹಿಸಬೇಕಷ್ಟೆ. ಅದು ಎಲ್ಲಾದರೂ ಇರಲಿ! ಈ ಸೆಣಬಿನ ಕಟಿಗೆ ಪೇಟೆ ಎಂಬ ಪದವೇ ಬಹಳ ಅಪರೂಪದ್ದು. ವಿಜಯನಗರದ ಅರಸರ ಕಾಲದಲ್ಲಿ ಸೆಣಬಿನಕಟ್ಟಿಗೆಯನ್ನು ಮಾರುವ ಪೇಟೆಗಳೇ ಇದ್ದವೆಂಬುದನ್ನು ಈ ಪದ ಸೂಚಿಸುತ್ತದೆ. ಸೆಣಬು ಇಂದು ಗೋಣಿಚೀಲಗಳ ಮತ್ತು ತಾಡಪಾಲುಗಳ ತಯಾರಿಕೆಯಲ್ಲಿ ಮುಖ್ಯಪಾತ್ರ ವಹಿಸುತ್ತಿದೆ. ಹಾಗೆಯೇ ಕೃಷಿವ್ಯವಸ್ಥೆಯಲ್ಲಿಯೂ ಸೆಣಬಿಗೆ ಮಹತ್ವವಿದೆ. ಸೆಣಬು ನೀರಿನಲ್ಲಿ ಕೊಳೆತರೆ ಬಹಳ ಉತ್ತಮವಾದ ಸಾವಯವ ಗೊಬ್ಬರವಾಗುತ್ತದೆ. ಇಂದಿಗೂ ಹಂಪಿ, ಕಮಲಾಪುರ ಮತ್ತು ಕಂಪಿಲಿ ಪರಿಸರದಲ್ಲಿ ಸೆಣಬನ್ನು ಗೊಬ್ಬರವನ್ನಾಗಿ ಬಳಸುತ್ತಿರುವರು. ಈ ಪದ್ಧತಿಗೆ ಸುಮಾರು ಐದುನೂರು ವರ್ಷಗಳ ಇತಿಹಾಸವೇ ಇದೆಯೆಂದು ಈ ಶಾಸನದಿಂದ ತಿಳಿದುಬರುತ್ತದೆ. ಇದು ರೈತರಿಗೆ ಅತ್ಯಾವಶ್ಯಕವಾದುದ್ದರಿಂದ ಪ್ರಾಚೀನ ಕಾಲದಲ್ಲಿ ವಾಣಿಜ್ಯ ಬೆಳೆಯಾಗಿಯೂ ರೂಢಿಯಲ್ಲಿದ್ದಿರಬೇಕು. ಇದರ ಮಾರಾಟವೂ ಒಂದು ಲಾಭದಾಯಕ ಬೆಳೆಯಾಗಿರಬೇಕು. ಇದರಿಂದ ರಾಜ್ಯದ ಬೊಕ್ಕಸಕ್ಕೂ ಸಾಕಷ್ಟು ಆದಾಯವಿದ್ದರಲೇಬೇಕು. ಇಂದು ಕೃತಕ ರಸಗೊಬ್ಬರಗಳ ಬಳಕೆ ಹೆಚ್ಚಾಗಿದ್ದರೂ ಕೂಡ ಜನಮನದಲ್ಲಿ ಪಾರಂಪರಿಕ ಬೇಸಾಯದ ಅಂಶಗಳು ಇಂದಿಗೂ ಹೇಗೆ ಉಳಿದುಕೊಂಡು ಬಂದಿವೆಯೆಂಬುದನ್ನು ಸೆಣಬಿನ ಉದಾಹರಣೆಯೊಂದಿಗೆ ಹೇಳಬಹುದು. ಜಾಗತೀಕರಣದ ಮತ್ತು ಆಧುನಿಕರಣದ ನೆಪದಲ್ಲಿ ನಮ್ಮ ರೈತರು ಕೃತಕ ಗೊಬ್ಬರಗಳನ್ನು ಬಳಸಿ ತಮ್ಮ ನೆಲ ಮತ್ತು ಹಣ ಎರಡನ್ನೂ ಹಾಳುಮಾಡಿಕೊಳ್ಳುತ್ತಿರುವ ಇವತ್ತಿನ ಪರಿಸ್ಥಿತಿಯಲ್ಲಿ, ಪರಿಸರದಲ್ಲಿ ಸಿಗುವ ಸಸ್ಯಗಳಿಂದಲೇ ಉತ್ತಮ ಗೊಬ್ಬರ ತಯಾರಿಸಿ ಅಧಿಕ ಇಳುವರಿ ಪಡೆಯುತ್ತಿದ್ದ ನಮ್ಮ ಪುರಾತನರ ಬೇಸಾಯ ಪದ್ಧತಿ ನಮಗಿಂದು ಮಾದರಿಯಾಗಬೇಕಿದೆ. ಈ ನೆಲ ನಮ್ಮ ಮುಂದಿನ ತಲೆಮಾರಿಗೂ ಫಲವತ್ತತೆಯನ್ನು ಉಳಿಸಿಕೊಳ್ಳಬೇಕಾಗಿದೆ. ಹಂಪಿ ಪರಿಸರದಲ್ಲಿ ಇಂದಿಗೂ ಬಳಕೆಯಲ್ಲಿರುವ ಸೆಣಬಿನ ಬಳಕೆಗೆ ಐದುನೂರು ವರ್ಷಗಳಿಗಿಂತಲೂ ಹೆಚ್ಚು ಇತಿಹಾಸವಿದೆಯೆಂಬುದನ್ನು ಈ ಶಾಸನವು ಸೂಚ್ಯವಾಗಿ ತಿಳಿಸುತ್ತಿದೆ. ಆ ಮಟ್ಟಿಗೆ ಈ ಶಾಸನ ಮಹತ್ವವಾದುದೆಂದು ನಮ್ಮ ಭಾವನೆ.

ಶಾಸನ ಪಾಠ

೧. ಶುಭಮಸ್ತು ಶ್ರೀ ಬಾಲಕೃಷ್ಣದೇವರ ಗ್ರಾಮ ಸ್ವಸ್ತಿ ಶ್ರೀ ಜಯಾಭ್ಯುದಯ ಶಾಲಿವಾಹನ ಶಕ ೧೪೩೬

೨. ನೆಯ ಭಾವಸಂವತ್ಸರದ ಪಾಲ್ಗುಣ ಶುದ್ಧ ೩ ಶನಿವಾರದಲು ಶ್ರೀ ಮನ್ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀಕೃಷ್ಣರಾಯ ಮಹಾರಾಯರು

೩. ಶ್ರೀ ಬಾಲಕೃಷ್ಣದೇವರ ಪ್ರತಿಷ್ಠಾ ಕಾಲದಲ್ಲಿ ಅಮೃತಪಡಿ ಅಂಗರಂಗ ವೈಭವ ಚೈತ್ರಮಾಸದ ರಥೋತ್ಸವ ನಿತ್ಯ ನೈಮಿತ್ತಿಕ ದೀಪಾರಾಧನೆಗಳು ಪಂಚಪರ್ವ

೪. ಯುಗಾದಿಮನಾದಿ ಅಯನ ಗಜಛಾಯಾ ಪಥಕೆ ಗ್ರಹಣ ಸಂಕ್ರಾತಿ ಮಾಸೋಛವ ಪಕ್ಷೋಛವ ನಿತ್ಯೋಛವ ಜಲಾಷ್ಟಮಿ ಮಹೋಛವಗಳಿಗಾಗಿ ಸಮರ್ಪಿಸಿದ

೫. ಹುಲಿಗೆಯ ಮಾಗಣಿಯವೊಳಗಣ ಅತ್ತಿವಟ್ಟಿ ಅಂಬಾಗ್ರಾಮಕೆ ಸಲ್ಲುವ ನೀರಾಡಂಭ ಕಾಡಾರಂಭ ಗಂಗಾಗವಿದೊಳಗಣ ಕಾರುವ ಖಾಲಾಹೊಸಹಳ್ಳಿ ಸೆಣಬಿನ ಕಟಿಗೆ

೬. ಪೇಟೆವೊಳಗಾದ ಆ ಗ್ರಾಮಕೆ ಸಲ್ಲುವ ಸುಂಕ ತಳವಾರಿಕೆ ಜೋಡಿಬೀರಾಡ ಸಾಮ್ಯ ಸಕಲ ಬತ್ತಾದಾಯ ಅನುದತ್ತಜೀವಾಮೃತಸಂಬಂದನು

೭. ನಂಮ ತಂದೆ ನರಸಣನಾಯಕರಾದಿಯಾಗಿ ನಂಮ ತಾಯಿಗಳು ನಾಗಲಾದೇವಿ ಅಂಮನವರಿಗೆ ಯೀ ಧರ್ಮವಾಗಿ ಭಾವ ಸಂವತ್ಸರದ ಪಾಲ್ಗುಣ ಶು. ೩ ಶನಿವಾರದಲು ಶ್ರೀ ಬಾಲಕೃಷ್ಣದೇವರ ಪ್ರತಿ

೮. ಷ್ಠಾ ಕಾಲದಲು ಸರ್ವಮಾನ್ಯವಾಗಿ ಆ ಚಂದ್ರಾರ್ಕಸ್ಥಾಯಿ ಆಗಿ ನಡೆವ ಮರ್ಯಾದೆಲು ದಾರಾಪೂರ್ವಕವಾಗಿ ಸಮರ್ಪಿಸಿದೆವು ಯೀ ಧರ್ಮಕೆ ಆರೊಬ್ಬರು ಅಳುಪಿದರೆ ತಂಮ ಮಾತಾ ಪಿತ್ರು

೯. ಗಳನು ವಾರಣಾಸಿಯಲ್ಲಿ ವಧಿಸಿದ ಪಾತಕಕೆ ಹೋಹರು ಬ್ರಹ್ಮಹತ್ಯ ಗೋಹತ್ಯ ಸೀಹತ್ಯ ಬ್ರಾಹ್ಮಣ ಹತ್ಯ ಪಾತಕಕೆ ಹೋಹರು ಸ್ವದತ್ತಾಂ ಪಾಲನಂ ಪರದತ್ತಾಪ ಹಾರೇಣ . . . . . ಸಾಮಾನ್ಯೋಯಂ ಧರ್ಮಸೇತುಂ ಕಾಲೇ ಕಾಲೇ ಪಾಲನಿಯೋಛವದ್ಧಿ:

ಅಡಿಟಿಪ್ಪಣಿಗಳು

೧. ಅತ್ತಿವಟ್ಟಿಯ ಅಪ್ರಕಟಿತ ಶಾಸನ - ಹಂಪೆಯ ಬಾಲಕೃಷ್ಣ
ಡಾ. ಡಿ.ವಿ.ಪರಮಶಿವಮೂರ್ತಿ, ಸೂರ್ಯಕೀರ್ತಿ, ಪು. ೩೭-೪೧

೨. ಎಸ್.ಐ.ಐ. IV ಸಂಖ್ಯೆ - ೨೫೪, ೨೫೫

೩. ಸಿ.ಶಿವರಾಮಮೂರ್ತಿ, Balakrishna from Hampi in the Madras Museum. Journal of Oriental Research, Madras. Vol- ೧೦, ೧೯೩೬

೪. ಡಾ. ಎಸ್.ರಾಜಶೇಖರ್, ಹಂಪೆಯ ಕೃಷ್ಣದೇವರಾಯನ ಅಪೂರ್ವ ವಿಗ್ರಹ. ಇತಿಹಾಸ ದರ್ಶನ, ಸಂ-೨, ೧೯೮೭, ಪು. ೨೩

❖ ❖

೧೬

ಎರಡು ಹೊಸ ವಿಜಯನಗರ ತಾಮ್ರ ನಾಣ್ಯಗಳು

ಡಾ. ಎನ್.ಹವಳಯ್ಯ

ಇತ್ತೀಚೆಗೆ ಮೈಸೂರಿನಲ್ಲಿ ನಾನು ಎರಡು ನಾಣ್ಯಗಳನ್ನು ಕೊಂಡುಕೊಂಡೆ, ಎರಡೂ ತಾಮ್ರದ ನಾಣ್ಯಗಳು. ಅವುಗಳು ಎಲ್ಲಿ ದೊರಕಿದ್ದವು ಎಂದು ಗೊತ್ತಿಲ್ಲ. ಈ ಎರಡು ನಾಣ್ಯಗಳು ಬಹಳ ಅಪರೂಪವಾಗಿ ಕಂಡುಬಂದಿದ್ದು, ಅವು ಅಪ್ರಕಟಿತವೆಂದು ಕಂಡು ಡಾ. ಎ.ವಿ.ನರಸಿಂಹಮೂರ್ತಿ[೧] ಹಾಗೂ ಗಣೇಶ ಗಿರಿಜಾಪತಿಯವರು[೨] ಈ ನಾಣ್ಯಗಳನ್ನು ತಮ್ಮ ವಿಜಯನಗರ ನಾಣ್ಯಗ್ರಂಥಗಳಲ್ಲಿ ಸೇರಿಸಿಲ್ಲ. ಇತರ ಯಾವ ಲೇಖಕರೂ ಇವುಗಳನ್ನು ಗಮನಿಸಿಲ್ಲ. ಆದುದರಿಂದ ಇವೆರಡೂ ಅಪ್ರಕಟಿತ ನಾಣ್ಯಗಳೆಂದು ಖಚಿತವಾದುದರಿಂದ ಅವುಗಳನ್ನು ಈ ಸಮಯದಲ್ಲಿ ತಮ್ಮ ಮುಂದೆ ಮಂಡಿಸುತ್ತಿದ್ದೇನೆ.


ಅವುಗಳ ಪ್ರಾಮುಖ್ಯತೆ ತಿಳಿಸುವುದಕ್ಕೆ ಮುಂಚೆ ಅವುಗಳ ವರ್ಣನೆಯನ್ನು ನೀಡುತ್ತೇನೆ. ಎರಡೂ ವೃತ್ತಾಕಾರದಲ್ಲಿರುವ ತಾಮ್ರದ ನಾಣ್ಯಗಳು ಮೊದಲನೆಯ ನಾಣ್ಯದ ತೂಕ ೩.೨ ಗ್ರಾಂ, ವ್ಯಾಸ ೧.೩ ಸೆಂ.ಮೀ, ದಪ್ಪ ೨ ಮಿಲಿ ಮೀಟರ್.

ಮುಮ್ಮುಖ : ವೀರಾಸನದಲ್ಲಿರುವ ಹನುಮಂತ ಬಲಗೈಯಲ್ಲಿ ಗದೆ ಇದೆ, ಒಂದು ಕಾಲನ್ನು ಮಡಚಿದ್ದಾನೆ.


ಹಿಮ್ಮುಖ : ಎರಡು ಸಾಲುಗಳ ನಾಗರೀ ಬರಹ

ಪ್ರತಾಪ ದೇ
ವರಾಯ

ಎರಡನೆಯ ನಾಣ್ಯದ ತೂಕ ೨.೮೩ ಗ್ರಾಂ, ವ್ಯಾಸ ೧.೪ ಸೆಂ.ಮೀ, ದಪ್ಪ ೨ ಮಿಲಿ ಮೀಟರ್.



ಮುಮ್ಮುಖ : ಬಲಕ್ಕೆ ನಿಂತಿರುವ ಒಂಟೆ ಉದ್ದನೆಯ ಕಾಲುಗಳು, ಅಗಲವಾದ ಪಾದ, ಅದರ ಮೇಲೆ ಸವಾರ



ಹಿಮ್ಮುಖ : ಮೂರು ಸಾಲುಗಳ ನಾಗರೀ ಬರಹ

ಪ್ರತಾಪ
ಕೃಷ್ಣ
ರಾಯ,
ಮಧ್ಯೆ ಅಡ್ಡ ಗೆರೆಗಳು.

ಈಗ ಈ ನಾಣ್ಯಗಳ ಪ್ರಾಮುಖ್ಯತೆಯನ್ನು ಗಮನಿಸಬಹುದು. ಮೊದಲನೆಯದರಲ್ಲಿ ಪ್ರತಾಪ ದೇವರಯಾ ಎನ್ನುವ ಬರಹವಿರುವುದರಿಂದ ಅದನ್ನು ಆ ದೊರೆಗೆ ಸೇರಿದ್ದೆಂದು ಭಾವಿಸಲು ಯಾವು ಕಷ್ಟವೂ ಇಲ್ಲ. ಆದರೆ ಇಬ್ಬರು ದೇವರಾಯರು ವಿಜಯನಗರದಲ್ಲಿದ್ದುದರಿಂದ ಇದು ಯಾವ ದೇವರಾಯನದೆಂದು ತೀರ್ಮಾನಿಸುವುದು ಕಷ್ಟಕರವಾದ ಕೆಲಸವೇ ಸರಿ. ಮೊದಲನೆ ದೇವರಾಯನು ಆನೆಗಳ ಬೇಟೆಯಲ್ಲಿ ವಿಶಿಷ್ಟ ಆಸಕ್ತಿ ವಹಿಸಿದ್ದರಿಂದ ಎ.ವಿ.ನರಸಿಂಹಮೂರ್ತಿಯವರು ಆನೆಗಳ ಚಿತ್ರವಿರುವ ಗಜಬೇಂಟೆಕಾರ ಎನ್ನುವ ಬರಹವಿರುವ ನಾಣ್ಯಗಳನ್ನು ಈ ದೊರೆಗೆ ಸೇರಿದ್ದೆಂದು ಭಾವಿಸುತ್ತಾರೆ. ಇದನ್ನು ಎಲ್ಲರೂ ಒಪ್ಪಿದ್ದಾರೆ. ಈ ಇಬ್ಬರು ದೊರೆಗಳ ರಾಜ್ಯ ಕಾಲದ ಅಂತರ ಹೆಚ್ಚಾಗಿರಲಿಲ್ಲವಾದುದರಿಂದ ಲಿಪಿ ಲಕ್ಷಣಗಳು ನಮ್ಮ ಸಹಾಯಕ್ಕೆ ಬರುವುದಿಲ್ಲ.[೩] ಈ ಮೇಲಿನ ಅಭಿಪ್ರಾಯವನ್ನು ಆಧರಿಸಿ ಹೇಳುವುದಾದರೆ ಈ ನಾಣ್ಯವನ್ನು ವಿಜಯನಗರದ ಮೂರು ದೊರೆಗಳು ಟಂಕಿಸಿದರು. ಅವರು ಯಾರೆಂದರೆ ಮೊದಲನೆ ಹರಿಹರ, ಮೊದಲನೆ ಬುಕ್ಕ ಮತ್ತು ಇಮ್ಮಡಿ ತಿರುಮಲರಾಯ, ದೇವರಾಯನ ಹೆಸರಿರುವ ಹನುಮಂತನ ಚಿತ್ರವಿರುವ ನಾಣ್ಯ ಇದುವರೆಗೆ ದೊರಕಿರಲಿಲ್ಲ. ಈಗ ಇದು ದೊರಕಿದೆ. ಆದುದರಿಂದ

ಇದೊಂದು ಹೊಸ ಅಪ್ರಕಟಿತ ನಾಣ್ಯ. ಮೊದಲನೆ ಹರಿಹರ ಮತ್ತು ಮೊದಲನೆಯ ಬುಕ್ಕ ಇವರಿಗೆ ಕಾಲಮಾನದ ದೃಷ್ಟಿಯಿಂದ ಈ ನಾಣ್ಯದ ಹನುಮಂತ ಸಮೀಪವಾಗಿರುವುದರಿಂದ, ಈ ನಾಣ್ಯವನ್ನು ಮೊದಲನೆಯ ದೇವರಾಯನಿಗೆ ಸಂಬಂಧಿಸಿದ್ದೆಂದು ಭಾವಿಸಬಹುದು. ಒಟ್ಟಿನಲ್ಲಿ ಇದೊಂದು ಹೊಸ ನಮೂನೆಯ ವಿಜಯನಗರ ನಾಣ್ಯ.

ಎರಡನೆ ನಾಣ್ಯ ತುಂಬಾ ಆಸಕ್ತಿಕರವಾದುದು. ಏಕೆಂದರೆ ಅದರ ಮುಮ್ಮುಖದಲ್ಲಿ ಒಂಟೆಯ ಮೇಲೆ ಕುಳಿತಿರುವ ಸವಾರನ ಚಿತ್ರವಿದೆ. ವಿಜಯನಗರ ನಾಣ್ಯಗಳ ಮುಮ್ಮುಖದಲ್ಲಿ ದೇವದೇವತೆಗಳು, ಧಾರ್ಮಿಕ ಚಿಹ್ನೆಗಳು ಅಥವಾ ಧರ್ಮಕ್ಕೆ ಸಂಬಂಧಿಸಿದ ಪ್ರಾಣಿಗಳು (ಗರುಡ, ನಂದಿ ಇತ್ಯಾದಿ) ಇರುವುದು ಎಲ್ಲರಿಗೂ ತಿಳಿದಿರುವ ವಿಷಯ. ಆದರೆ ಒಂಟೆ ಧಾರ್ಮಿಕ ಚಿಹ್ನೆಯಲ್ಲ. ಆದುದರಿಂದ ಇದನ್ನು ನಾಣ್ಯದ ಮೇಲೆ ಅಳವಡಿಸಲು ಕಾರಣವೇನು ಎಂದು ತಿಳಿಯುವುದು ಅವಶ್ಯಕ. ಆದರೆ ಇದು ಸುಲಭವಲ್ಲ. ವಿಜಯನಗರ ಕಾಲದಲ್ಲಿ ಒಂಟೆಗಳಿದ್ದವೆಂದು ವಿದೇಶಿಯರ ಬರವಣಿಗೆಗಳಿಂದ ತಿಳಿದುಬರುತ್ತದೆ.[೪] ಆದರೆ ಅದು ಸೈನ್ಯದ ಭಾಗವಾಗಿರಲಿಲ್ಲವೆಂದು ತೋರುತ್ತದೆ. ಅದು ಶಿಲ್ಪಗಳಲ್ಲಿ ಕಂಡುಬರುತ್ತದೆ, ಎಲ್ಲಿ ಅಂದರೆ ಮಹಾನವಮಿ ದಿಬ್ಬದ ದಕ್ಷಿಣ ದಿಕ್ಕಿನ ಗೋಡೆಯ ಮೇಲೆ ನೋಡಬಹುದಾಗಿದೆ ಎಂಬುದನ್ನು ವಿದ್ವಾಂಸರ ಗಮನಕ್ಕೆ ತರಬಯಸುತ್ತೇನೆ. ಕ್ರಿ.ಶ. ೧೩೧೧ರ ಅಂದರೆ ವಿಜಯನಗರ ಸ್ಥಾಪನೆಗೆ ಮುಂಚಿನ ಹೊಯ್ಸಳ ಶಾಸನದಲ್ಲಿ 'ಒಟ್ಟೆಯ ಪಟ್ಟಸಾಹಣಿ' ಅಂದರೆ ಒಂಟೆಯನ್ನು ಪಳಗಿಸುವ ಮೇಲಾಧಿಕಾರಿಯ ಉಲ್ಲೇಖ ಕಾಣಬರುತ್ತದೆ.[೫] ಈ ದೃಷ್ಟಿಯಿಂದ ವಿಜಯನಗರ ಶಾಸನಗಳನ್ನು ಗಮನಿಸಬೇಕಾದ ಅವಶ್ಯಕತೆಯಿದೆ. ಒಂಟೆಯ ಚಿತ್ರವನ್ನೂ ನಾಣ್ಯದ ಮೇಲೆ ಹಾಕಿಸಬೇಕಾದರೆ ಅದು ಪ್ರಾಮುಖ್ಯವಾದ ಪ್ರಾಣಿಯಾಗಿರಬೇಕು ಎಂದು ಊಹಿಸಬಹುದು ಅಷ್ಟೇ. ಈ ದೃಷ್ಟಿಯಿಂದ ಇನ್ನೂ ಹೆಚ್ಚಿನ ಸಂಶೋಧನೆ ನಡೆಯಬೇಕು. ಈ ನಾಣ್ಯದ ಬರಹದ ಆಧಾರದ ಮೇಲೆ ಇದು ಕೃಷ್ಣದೇವರಾಯನ ನಾಣ್ಯವಿರಬಹುದು ಎನ್ನುವ ಸಂದೇಹ ಬರುತ್ತದೆ. ಒಟ್ಟಿನಲ್ಲಿ ಇದೊಂದು ಹೊಸನಾಣ್ಯ. ಈ ದೃಷ್ಟಿಯಿಂದ ಈ ಎರಡು ನಾಣ್ಯಗಳು ಗಮನಾರ್ಹವಾದವು.

ಅಡಿಟಿಪ್ಪಣಿಗಳು

೧. ಡಾ. ಎ.ವಿ.ನರಸಿಂಹಮೂರ್ತಿ, ವಿಜಯನಗರದ ನಾಣ್ಯಸಂಪತ್ತು ಮತ್ತು ಕಾಯಿನ್ಸ್ ಅಂಡ್ ಕರೆನ್ಸಿ ಇನ್ ಕರ್ನಾಟಕ

೨. ಗಣೇಶ ಗಿರಿಜಾಪತಿ, ವಿಜಯನಗರ ಕಾಯಿನ್ಸ್

೩. ವಿಜಯನಗರ ನಾಣ್ಯ ಸಂಪತ್ತು, ಪು. ೬೮

೪. ಟಿ.ವಿ.ಮಹಾಲಿಂಗ ಅವರು ತಮ್ಮ ಗ್ರಂಥ "Administration and Social Life in Vijayanagar" ಎಂಬ ಗ್ರಂಥದಲ್ಲಿ ಉಲ್ಲೇಖಿಸಿಲ್ಲ.

೫. ಕನ್ನಡ-ಕನ್ನಡ ನಿಘಂಟು ಮೊದಲನೆಯ ಸಂಪುಟ, ಪು. ೧೨೦೦

❖ ❖

೧೭

ಶ್ರೀ ಪ್ರತಾಪ ಸದಾಶಿವರಾಯನ (ಕ್ರಿ.ಶ. ೧೫೪೨-೧೫೭೦) ಒಂದು ಅಪ್ರಕಟಿತ ತಾಮ್ರದ ನಾಣ್ಯ

ಡಾ. ಆರ್.ಗೋಪಾಲ್

ವಿಜಯನಗರ ಕಾಲವು (ಕ್ರಿ.ಶ. ೧೩೩೬-೧೫೬೫) ಸುವರ್ಣ ಯುಗವಾಗಿತ್ತು ಎನ್ನುವುದಕ್ಕೆ ನಮಗೆ ಇದುವರೆಗೆ ಯತೇಚ್ಛವಾಗಿ ದೊರೆತಿರುವ ಮತ್ತು ಪ್ರಾಚ್ಯವಸ್ತು ಸಂಗ್ರಹಾಯಲದಲ್ಲಿ ದಾಖಲಾಗಿರುವ ಗುಪ್ತನಿಧಿಗಳ ನಾಣ್ಯ ಸಂಗ್ರಹಗಳು ಸಾಕ್ಷಿಯಾಗಿವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಸುವರ್ಣ ನಾಣ್ಯಗಳ ಅಧ್ಯಯನಕ್ಕಿಂತ ತಾಮ್ರದ ನಾಣ್ಯಗಳ ಅಧ್ಯಯನ ತುಂಬ ಕಡಿಮೆ ಎಂದು ಹೇಳಬಹುದಾಗಿದೆ. ಈ ನಿಟ್ಟಿನಲ್ಲಿ ಸದಾಶಿವರಾಯನ ಈ ತಾಮ್ರದ ನಾಣ್ಯವು ವಿಜಯನಗರ ಕಾಲದ ಸಾಂಸ್ಕೃತಿಕ ಮತ್ತು ಧಾರ್ಮಿಕ ಇತಿಹಾಸವನ್ನು ತಿಳಿಯಲು ಸಹಕಾರಿಯಾಗಿದೆ.


ವಿಜಯನಗರ ಕಾಲದ ನಾಣ್ಯಗಳಲ್ಲಿ ಎದ್ದುಕಾಣುವ ಒಂದು ಪ್ರಮುಖ ಅಂಶವೆಂದರೆ ನಾಣ್ಯದ ಮುಂಭಾಗದಲ್ಲಿ ದೇವತೆಗಳ ಚಿತ್ರಗಳು ಅಥವಾ ಪ್ರಾಣಿಗಳ ಚಿತ್ರಗಳಿದ್ದು, ಹಿಂಭಾಗದಲ್ಲಿ ಆಯಾ ಕಾಲದ ರಾಜರ ಹೆಸರುಗಳನ್ನು ನಾಗರೀ ಲಿಪಿ ಅಥವಾ ತೆಲುಗು ಅಥವಾ ತಮಿಳು ಅಥವಾ ಕನ್ನಡ ಲಿಪಿಗಳಲ್ಲಿ ಆ ಲೇಖನಗಳನ್ನು ಸಾಮಾನ್ಯವಾಗಿ ಕಾಣಬಹುದಾಗಿದೆ. ಈ ಕಾಲದ ನಾಣ್ಯಗಳ ಮೇಲೆ ಅವುಗಳ ಮೌಲ್ಯಗಳಾಗಲೀ ಅಥವಾ ಅವುಗಳು ಠಂಕಿತವಾದ ಸ್ಥಳಗಳಾಗಲೀ ಕಂಡುಬರುವುದಿಲ್ಲ. ಆದರೆ

ವಿಜಯನಗರದ ಶಾಸನಗಳು ನಾಣ್ಯಗಳ ಮೌಲ್ಯಗಳನ್ನು ಮತ್ತು ಠಂಕ ಶಾಲೆಗಳ ಹೆಸರುಗಳನ್ನು ಹೆಸರಿಸುತ್ತವೆ.[೧] ವಿಜಯನಗರ ಕಾಲದ ಶಾಸನಗಳು ಉಲ್ಲೇಖಿಸುವ ಪ್ರಮುಖ ಠಂಕ ಶಾಲೆಗಳೆಂದರೆ ಹಂಪೆ, ಪೆನುಗೊಂಡ, ತಿರುಪತಿ, ಗುತ್ತಿ, ಗಂಡಿಕೋಟೆ, ಆದೋನಿ, ತಾಡಪತ್ರಿ, ಮದುರೆ, ನೆಲ್ಲೂರು, ಬಾರಕೂರು ಮತ್ತು ಮಂಗಳೂರು ಈ ಮೇಲಿನ ಪಟ್ಟಿಯಿಂದ ತಿಳಿದು ಬರುವುದೇನೆಂದರೆ ಕರ್ನಾಟಕ ಮತ್ತು ತಮಿಳುನಾಡುಗಳಿಗಿಂತ ಆಂಧ್ರಪ್ರದೇಶಕ್ಕೆ ಸೇರಿದ ಹೆಚ್ಚಿನ ಭಾಗಗಳಲ್ಲಿ ವಿಜಯನಗರ ಕಾಲದ ಠಂಕ ಶಾಲೆಗಳಿದ್ದವು ಎಂದು ಹೇಳಬಹುದಾಗಿದೆ.

ಪ್ರಸ್ತುತ ತಮ್ಮ ಮುಂದೆ ಮಂಡಿಸುತ್ತಿರುವ ವಿಷಯದ ವಸ್ತುವಾಗಿರುವ ಈ ತಾಮ್ರದ ನಾಣ್ಯವು ವಿಜಯನಗರದ ಮತ್ತೊಬ್ಬ ಪ್ರಮುಖ ರಾಜನಾದ ಶ್ರೀ ಪ್ರತಾಪ ಸದಾಶಿವರಾಯನ ತಾಮ್ರದ[೨] ನಾಣ್ಯವಾಗಿದ್ದು ಅದರ ವಿವರ ಕೆಳಕಂಡಂತೆ ಇವೆ.

ಲೋಹ - ತಾಮ್ರ   ದಪ್ಪ - ೦.೩ ಸೆಂ.ಮೀ.   ಅಗಲ - ೧.೩ ಸೆಂ.ಮೀ.

ಆಕಾರ - ದುಂಡಾಗಿದೆ   ತೂಕ - ೩.೪ ಗ್ರಾಂ ಇವೆ.



ಮುಂಭಾಗ :- ಕಿರೀಟದಾರಿಯಾದ ಗರುಡನು ನಮಸ್ಕಾರ ಭಂಗಿಯಲ್ಲಿ ನಿಂತಿದ್ದಾನೆ. ಆತನ ಎರಡು ಭಾಗಗಳಲ್ಲಿ ಅಡ್ಡ ಗೆರೆಗಳಿಂದ ರಚಿತವಾದ ರೆಕ್ಕೆಗಳು ಸುಂದರವಾಗಿ ಚಿತ್ರಿತವಾಗಿದೆ.

ಹಿಂಭಾಗ :- ವೃತ್ತಾಕಾರವಾದ ನಾಣ್ಯದ ಮಧ್ಯಭಾಗದಲ್ಲಿ ಅಡ್ಡಗೆರೆಯಿದ್ದು, ಎರಡು ಭಾಗಗಳಾಗಿ ನಾಣ್ಯವನ್ನು ವಿಭಾಗಿಸಿದೆ. ಮೇಲ್ಭಾಗದ ಎಡಭಾಗದಲ್ಲಿ ಚಂದ್ರನು ಮತ್ತು ಬಲಭಾಗದಲ್ಲಿ ಸೂರ್ಯನ ಚಿತ್ರಗಳಿವೆ. ಕೆಳಭಾಗದಲ್ಲಿ ಸದಾಶಿವ ಎಂಬ ಒಂದು ಸಾಲಿನ ನಾಗರೀ ಅಲೇಖ (Corrupt legend) ಇದೆ.

ಇದುವರೆವಿಗೆ ದೊರೆತಿರುವ ಸದಾಶಿವರಾಯನ ನಾಣ್ಯಗಳಲ್ಲಿ ಶಿವ-ಪಾರ್ವತಿ, ಲಕ್ಷ್ಮಿ-ನಾರಾಯಣ, ಗರುಡ ಮತ್ತು ನಂದಿಯ ಚಿತ್ರವಿರುವ ನಾಣ್ಯಗಳು ದೊರೆತಿವೆ.[೩] ಆದ್ದರಿಂದ ಶ್ರೀ ಪ್ರತಾಪ ಸದಾಶಿವರಾಯನು ಸಹ ವಿಜಯನಗರದ ಇತರ ಅರಸರಂತೆ ಸರ್ವ ಧರ್ಮ ಅನುಯಾಯಿ ಎನ್ನುವುದಕ್ಕೆ ಆತನು ಹೊರಡಿಸಿರುವ ನಾಣ್ಯಗಳೇ ಸಾಕ್ಷಿ. ಪ್ರಸ್ತುತ ನಾಣ್ಯವು

ಇತರ ವಿಜಯನಗರದ ನಾಣ್ಯಗಳಿಗಿಂತ ವಿಶೇಷವಾಗಿದ್ದು, ಈ ನಾಣ್ಯದ ಹಿಂಭಾಗದ ಮೇಲ್ಭಾಗದಲ್ಲಿ ಸೂರ್ಯ ಮತ್ತು ಚಂದ್ರನ ಜೊತೆಗೆ ಕೆಳಭಾಗದಲ್ಲಿ ಅಲೇಖವಿರುವುದು ವಿಶೇಷ. ಒಟ್ಟಿನಲ್ಲಿ ಈ ನಾಣ್ಯವು ವಿಜಯನಗರದ ನಾಣ್ಯಶಾಸ್ತ್ರ ಇತಿಹಾಸಕ್ಕಷ್ಟೇ ಅಲ್ಲದೇ ಕರ್ನಾಟಕ ನಾಣ್ಯಶಾಸ್ತ್ರ ಇತಿಹಾಸಕ್ಕೆ ಹೊಸ ವಸ್ತುವಿಷಯವಾಗಿ ಹೊರಹೊಮ್ಮಿದೆ.

ಅಡಿಟಿಪ್ಪಣಿಗಳು

೧. ಪ್ರೊ. ಎ.ವಿ.ನರಸಿಂಹಮೂರ್ತಿ, ಕಾಯಿನ್ಸ್ ಅಂಡ್ ಕರೆನ್ಸಿ ಸಿಸ್ಟಂ ಇನ್ ಕರ್ನಾಟಕ, ಪುಟ ೨೪೭

೨. ತಮ್ಮಲ್ಲಿದ್ದ ಒಂದು ಅಪ್ರಕಟಿತ ನಾಣ್ಯವನ್ನು ಪ್ರಕಟಿಸಲು ನೀಡಿದ ಶ್ರೀ ಪಿ.ಕೇಶವಮೂರ್ತಿ, ಟೆಲಿಕಾಂ ಅಧಿಕಾರಿ, ಹುಣಸೂರು ಇವರಿಗೆ ಆಭಾರಿಯಾಗಿದ್ದೇನೆ.

೩. ಪ್ರೊ. ಎ.ವಿ.ನರಸಿಂಹಮೂರ್ತಿ, ಕಾಯಿನ್ಸ್ ಅಂಡ್ ಕರೆನ್ಸಿ ಸಿಸ್ಟಂ ಇನ್ ಕರ್ನಾಟಕ, ಪುಟ ೨೩೩

❖ ❖

೧೮

'ಆನಂದನಿಧಿ'ದಾನ

ರಮೇಶ್ ನಾಯಕ್

ಅನಾದಿಕಾಲದಿಂದಲೂ ಮಾನವನ ಬದುಕನ್ನು ದೈವೀಸಂಭೂತ ಅಂಶಗಳು ಬಲವಾಗಿ ಆವರಿಸಿಕೊಂಡಿವೆ. ಅದರಲ್ಲೂ ಪುಣ್ಯ-ಪಾಪಗಳ ಪರಿಕಲ್ಪನೆಯು ತುಂಬಾ ಮಹತ್ವ ಪಡೆದಿವೆ. ಇವುಗಳ ತುಲಾಭಾರವನ್ನು ಮನುಷ್ಯ ತನ್ನ ಜೀವಿತಾವಧಿಯ ನಡುವೆ ಕೈಗೊಂಡ ಕಾರ್ಯಚಟುವಟಿಕೆಗಳಿಂದ ಮೌಲ್ಯಮಾಪನ ಮಾಡಲಾಗುತ್ತದೆ. ಪುಣ್ಯ ಪರಿಕಲ್ಪನೆಯು ಜನ್ಮಜನ್ಮಾಂತರ ಕಾಲಾವಧಿಯಲ್ಲಿ ಪಡೆಯುವ ಸುಖಜೀವನದ ನಿರ್ಧಾರಾತ್ಮಕ ಅಂಶವಾಗಿ ಪರಿಗಣಿತವಾಗುತ್ತದೆ. 'ದಾನ' ಎಂಬ ಪುಣ್ಯಕಾರ್ಯದ ಮೂಲಕ ಸ್ವರ್ಗಕ್ಕೆ ನೇರವಾದ ಪ್ರವೇಶ ಪಡೆಯಬಹುದು. ದಾನಕ್ಕೆ ನಾನಾ ಅರ್ಥಗಳಿವೆ. ಉದಾಹರಣೆ ದೇಣಿಗೆ, ಕೊಡುಗೆ ನೀಡುವುದು ಮುಂತಾದವು. ದಾನಗಳು ವಿಶೇಷವಾಗಿ ವಸ್ತುಗಳ ಸ್ವರೂಪದಲ್ಲಿಯೇ ಇರುತ್ತವೆ. ಇದರ ಮುಖ್ಯ ಉದ್ದೇಶವೆಂದರೆ, ಕೊಟ್ಟದಾನದಿಂದ ಹೆಚ್ಚಿನ ಪುಣ್ಯ ಪಡೆದು ಬದುಕನ್ನು ಸಾರ್ಥಕಗೊಳಿಸಿಕೊಳ್ಳುವುದು. ಹೆಚ್ಚಿನ ಪುಣ್ಯ ತನಗೆ ಲಭಿಸಲೆಂಬ ಪರಿಕಲ್ಪನೆ ಭಾರತೀಯ ಪರಂಪರೆಯಲ್ಲಿರುವುದರಿಂದ ರಾಜನಿಂದ-ಸೂಳೆಯವರೆಗೂ ದಾನ ನೀಡಿರುವ ಉಲ್ಲೇಖಗಳಿವೆ. ಗಳಿಕೆ (ಸಂಪಾದನೆ ಆದಾಯ)ಯನ್ನು ತನ್ನಷ್ಟಕ್ಕೆ ತಾನೇ ಇಟ್ಟುಕೊಂಡು ಉಪಭೋಗಿಸುವುದು ಪಾಪಾಕಾರ್ಯವಾಗಿತ್ತು. ಹಾಗೂ ಮುಂದಿನ ಜನ್ಮದಲ್ಲಿನ ಕಷ್ಟಜೀವನಗಳಿಗೆ ಎಡೆಮಾಡಿಕೊಟ್ಟಂತೆ ಎಂದು ಪರಿಭಾವಿಸಲಾಗುತ್ತಿತ್ತು. ಆದ್ದರಿಂದ 'ದಾನ'

ಪ್ರಕ್ರಿಯೆಗಳು ಇಂದಿಗೂ ಸಹ ಅತೀ ಮಹತ್ವ ಪಡೆದ ಜೀವನ-ಮೌಲ್ಯಗಳಾಗಿವೆ. ದಾನ ಎಂಬುದು ಎಲ್ಲ ಧರ್ಮಗಳ ಮೂಲ ಅಡಿಪಾಯವಾಗಿದೆ.

ದಾನಗಳನ್ನು ಹೆಚ್ಚಾಗಿ ರಾಜಪ್ರಭುತ್ವದ ಎಲ್ಲ ಅಧಿಕಾರವರ್ಗವೂ ಕೊಡುತ್ತಿತ್ತು. ಆದರೆ ಇವುಗಳನ್ನು ತೆಗೆದುಕೊಳ್ಳುವ ಮುಖ್ಯ ಕೇಂದ್ರಗಳೆಂದರೆ ದೇವಾಲಯ ಮತ್ತು ಬ್ರಾಹ್ಮಣವರ್ಗ ಮಾತ್ರ. ಪ್ರಾಚೀನ ದೇವಾಲಯಗಳು ಜನಸಾಮಾನ್ಯರ ಎಲ್ಲ ಬಗೆಯ ಚಟುವಟಿಕೆಗಳನ್ನು ನಿಯಂತ್ರಿಸುವ ಮತ್ತು ನಿರ್ಧರಿಸುವ ಕೇಂದ್ರಗಳಾಗಿದ್ದವು. ಆದ್ದರಿಂದ ಸಮಾಜ ಚಲನೆಯ ಜೀವಮೂಲವಾದ ದೇವಾಲಯಗಳನ್ನು ಉಳಿಸಿ-ಬೆಳೆಸುವುದು ಎಲ್ಲರ ಕರ್ತವ್ಯ ಹಾಗೂ ನೈತಿಕ ಜವಾಬ್ದಾರಿಯೆಂದು ಬಿಂಬಿತವಾಗಿತ್ತು. ಪ್ರಾಚೀನ ಪರಂಪರೆಯ ಸಾಂಸ್ಕೃತಿಕ ವಾರಸುದಾರರಾದ ದೇವಾಲಯಗಳ ಸಕಲ ನಿರ್ವಹಣೆಗೆ, ರಾಜ, ರಾಣಿ, ರಾಜಪರಿವಾರದವರು, ಅಧಿಕಾರಿ ಹಾಗೂ ವರ್ತಕ ವರ್ಗವು ಪ್ರಮುಖವಾಗಿ ದಾನಕಾರ್ಯಗಳನ್ನು ಕೈಗೊಳ್ಳುತ್ತಿದ್ದವು. ಈ ವರ್ಗದ ಎಲ್ಲ ಜನರಿಗೆ ದಾನಕೊಡುವುದೆಂದರೆ ಧರ್ಮದ ಪರಿಪಾಲನೇ ಆಗಿದೆ ಎಂಬ ತಿಳುವಳಿಕೆ ಬಲವಾಗಿ ಬೇರೂರಿತ್ತು. ಇಂಥ ಚಟುವಟಿಕೆಗಳಿಗೆ ವಯಸ್ಸು ಹಾಗೂ ಲಿಂಗಭೇದಗಳಿರಲಿಲ್ಲ. ಆದರೆ ಧರ್ಮ ಅಥವಾ ಜಾತಿ ಭೇದಗಳಿದ್ದಿರುವ ಅನೇಕ ಮಾಹಿತಿಗಳಿವೆ. ಬದುಕು ಸಾರ್ಥಕತೆಯನ್ನು ಪಡೆಯಬೇಕಾದರೆ ರಾಜನಿಂದ ಹಿಡದು ಸಾಮಾನ್ಯ ಪ್ರಜೆಯವರೆಗೆ ಈ ಮೂರು ರೀತಿಯ ಕಾರ್ಯಗಳನ್ನು ನಿರ್ವಹಿಸಲೇಬೇಕಾಗಿತ್ತು. ೧. ನಿರ್ಮಿಸುವುದು, ೨. ಪ್ರತಿಷ್ಠಾಪಿಸುವುದು ಹಾಗೂ ಇವುಗಳೆರಡರ ನಿರಂತರತೆಯನ್ನು ಸದಾ ಕಾಯ್ದುಕೊಂಡು ಹೋಗಲು ೩. ನಿರ್ವಹಣೆ (ದಾನ) ಮಾಡುವುದೇ ಮುಖ್ಯ ಕಾರ್ಯಗಳು. ಕೊಟ್ಟ ದಾನ-ದತ್ತಿಗಳು ಯಾವ ಅಡತಡೆಗಳಿಲ್ಲದೇ ಮುಂದುವರಿಕೆಯ ಸಂಬಂಧವಾಗಿ ಶಾಸನಗಳು ಹುಟ್ಟಿಕೊಂಡವು. ಚರಿತ್ರೆಯ ಬರವಣಿಗೆಯ ರಚನೆಯಲ್ಲಿ ಮೂಲ ಆಕರ ಸಾಮಗ್ರಿಗಳಾಗಿ ಪರಿಗಣಿಸಲ್ಪಡುವ ಅಂದಿನ ಶಾಸನಗಳೆಂದರೇ ಪರ್ಯಾಯವಾಗಿ ಕೊಡುಗೆಗಳನ್ನು ರಕ್ಷಿಸಿಕೊಂಡು ಹೋಗಲು ರಚಿಸಿರುವ ಕಾನೂನು ಕಟ್ಟಳೇ ಆಗಿವೆ. ಶಾಸನಗಳಲ್ಲದೇ ಸಾಹಿತ್ಯ ಕೃತಿಗಳು ಸಹ ಹಲವಾರು ದಾನಗಳ ಉಲ್ಲೇಖವನ್ನು ನೀಡುತ್ತವೆ.

ದಾನದ ಬಗ್ಗೆ (ಪ್ರಕಾರ)ಗಳು :

ಧಾರ್ಮಿಕ ವಿಧಿವಿಧಾನಗಳು ಅಥವಾ ಪರಂಪರೆಯು ವಿಸ್ತರಿಸಿದಂತೆ ದಾನಕಾರ್ಯಗಳು ಬಹುರೂಪಗಳನ್ನು ಪಡೆದವು. ಮುಖ್ಯವಾಗಿ ಧನ ಮತ್ತು ಧಾನ್ಯಗಳ ರೂಪದಲ್ಲಿ ದಾನಗಳು ನೆರವೇರಿಸಲ್ಪಡುತ್ತಿದ್ದವು. ಕೊಡುಗೆಗಳನ್ನು ಸಾಮಾನ್ಯವಾಗಿ ತಮ್ಮ (ತನ್ನ) ಆರಾಧ್ಯ ದೈವದ ಹೆಸರಿನಲ್ಲಿ ಅಥವಾ ತಮ್ಮ ಪೂರ್ವಜರ ನೆನಪಿನಲ್ಲಿ ಬೇರೆ ಬೇರೆ ಸಂದರ್ಭಗಳಲ್ಲಿ ಕೊಟ್ಟಿರುವುದನ್ನು ಗಮನಿಸುತ್ತೇವೆ.

ಸ್ಥೂಲವಾಗಿ ದಾನಗಳನ್ನು ಎರಡು ರೀತಿಯಲ್ಲಿ ವಿಂಗಡಿಸಿದ್ದಾರೆ.

೧. ವೈಯಕ್ತಿಕ ದಾನ ಹಾಗೂ ೨. ಸಾಮೂಹಿಕ ದಾನ. ಅನೇಕ ಸಾಮಾಜಿಕ ಅವಶ್ಯಕ ಕಾರ್ಯಚಟುವಟಿಕೆ (ದೇವಾಲಯ) ಕೆರೆ-ಕಟ್ಟೆ, ಪೂಜೆ-ಪುನಸ್ಕಾರ, ವಿದ್ಯಾಭ್ಯಾಸ ಹಾಗೂ ರಕ್ಷಣೆಯ ವ್ಯವಸ್ಥೆ ನಿರ್ಮಾಣ)ಗಳು ಯಾವ ತರದ ಬಾಧೆಗಳಿಲ್ಲದೇ ಉಳಿದುಕೊಂಡು ಹೋಗಲು ಸಮಾಜದ ಎಲ್ಲ ಅನುಕೂಲಸ್ಥ ವರ್ಗದ ಜನಗಳು ದಾನಗಳನ್ನು ನೀಡುತ್ತಿದ್ದರು. ಇಂಥ ದಾನಕಾರ್ಯವು ಒಬ್ಬ ವ್ಯಕ್ತಿಗೆ ಅಥವಾ ಅವನ ಮನೆತನಕ್ಕೆ ಮಾತ್ರ ಸೀಮಿತಗೊಂಡು ಕೆಲವು ದಾನಗಳು ಕೊಡಮಾಡಲ್ಪಡುತ್ತಿದ್ದವು.

ಸಾಮೂಹಿಕ ದಾನಗಳೆಂದರೆ, ವಿವಿಧ ಕಾರ್ಯಗಳಿಗೆ ಹಲವು ವ್ಯಕ್ತಿಗಳು ಒಟ್ಟಾರೆಯಾಗಿ ದಾನ ನೀಡುವುದಾಗಿತ್ತು. ಅಲ್ಲದೇ ನಿರ್ದಿಷ್ಟಪಡಿಸಿದ ವಿಧಿವಿಧಾನ (ಪರಂಪರೆ)ಗಳಿಗೆ ಮಾತ್ರ ಆಯಾ ಪರಿಗಣಿತ ವ್ಯಕ್ತಿ-ವರ್ಗದವರು ದಾನಬಿಟ್ಟಿರುವ ಉಲ್ಲೇಖಗಳಿವೆ. ಜೈನಾಗಮಗಳಲ್ಲಿ ಲೌಕಿಕ ಹಾಗೂ ಅಲೌಕಿಕ (ಪಾರಮಾರ್ಥಿಕ)ವೆಂಬ ಎರಡು ಪ್ರಕಾರದ ದಾನ ಉಲ್ಲೇಖಗಳಿವೆ.

ವ್ಯಕ್ತಿಗಳಿಂದ ನೀಡುವ ಕೊಡುಗೆಗಳು ಅಧಿಕೃತತೆ ಅಥವಾ ಮಾನ್ಯತೆ ಪಡೆಯಲು ನಿಶ್ಚಿತವಾದ ಸಮುದಾಯದ ಸಮ್ಮುಖದಲ್ಲಿ ನೆರವೇರಿಸಲ್ಪಡುವುದು ಕಡ್ಡಾಯವಾಗಿತ್ತು. ಉದಾಹರಣೆ ಸ್ಥಾನಚಾರ್ಯ, ಆಚಾರ್ಯ, ಪಂಡಿತ, ಪಾದಪದ್ಮೋಪಜೀವಿ, ತಪೋವನಾಧಿಪತಿಗಳ ಮಹಾಜನರ ಹಾಗೂ ಬ್ರಾಹ್ಮಣ ಇವೇ ಮುಂತಾದ ವರ್ಗಗಳ ಉಪಸ್ಥಿತಿ ತುಂಬಾ ಪ್ರಾಮುಖ್ಯವಾಗಿತ್ತು. ರಾಜ್ಯಾಧಿಕಾರದ ಯಾವುದೇ ಬಗೆಯ ಸ್ಥಿತ್ಯಂತರಗಳು ದಾನಕಾರ್ಯಗಳ ಚಟುವಟಿಕೆಗಳಿಗೆ ಅಡ್ಡಿಯಾಗಿರಲಿಲ್ಲ. ಗದುಗಿನ ತ್ರಿಕೂಟೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಶಾಸನವನ್ನು ಉಲ್ಲೇಖಿಸುವುದಾದರೆ, 'ಸಮುದ್ರದಲ್ಲಿ ತೆರೆಗಳು ಸ್ಥಗಿತವಾಗಬಹುದು ಆದರೆ ದಯಾಮಯಿಯಾದ ಆಚಾರ್ಯನಿಗೆ ದಾನಗಳು ನಿರಂತರವಾಗಿ ಎನ್ನುವುದು ಕಷ್ಟಸಾಧ್ಯ. ಕೆಲವು ದಾನಚಟುವಟಿಕೆಗಳು ನಿರ್ದಿಷ್ಟಪಡಿಸಿದ ಕಾರ್ಯಗಳಿಗಾಗಿ ಹಾಗೂ ನಿಶ್ಚಿತ ಕಾಲಾವಧಿಯ ನಂತರ ತಮ್ಮ ಮಹತ್ವವನ್ನು ಕಳೆದುಕೊಂಡಿರುವ ಅನೇಕ ಸಂಗತಿಗಳಿವೆ.

ಉದಾಹರಣೆಗೆ ಅಚ್ಯುತರಾಯನ ಕಾಲದಲ್ಲಿಯೇ ರೂಪಿಸಲ್ಪಟ್ಟ 'ಆನಂದನಿಧಿ' ದಾನವು ಹಿಂದಿನ ಯಾವ ರಾಜರ ಕಾಲದಲ್ಲೂ ಹಾಗೂ ಅಚ್ಯುತರಾಯನ ನಂತರ ಕಾಲಾವಧಿಯಲ್ಲಿ ಮುಂದುವರೆದುಕೊಂಡು ಹೋಗಿರುವ ಯಾವ ಮಾಹಿತಿಗಳು ಈವರೆಗೂ ಸಿಕ್ಕಿಲ್ಲ.

ದಾನಗಳಲ್ಲಿ ಅತ್ಯಂತ ಶ್ರೇಷ್ಠವಾದ ದಾನವೆಂದರೆ 'ಗೋದಾನ' ಆದರೆ ಕಾಳಮುಖರ ದಾನಶಾಸನಗಳಲ್ಲಿ 'ಅನ್ನ'ಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಿದ್ದಾರೆ. ದೇವರು ಹುಟ್ಟುವ ಮೊದಲೇ 'ಅನ್ನ' ಹುಟ್ಟಿತೆಂದು ಯಜುರ್ವೇದ ಹೇಳುತ್ತದೆ. ನಾನು ಅಮೃತತ್ವದ ನಾಭಿಕುಲ ಇತರರಿಗೆ ನನ್ನನ್ನು ದಾನಮಾಡುವವನ ಬಳಿ ನಾನು ಸದಾವಕಾಲವೂ ವಾಸವಾಗಿರುತ್ತೇನೆ, ನಾನು ಅನ್ನ ಎಂಬ ವಿಚಾರ ತೈತ್ತರೀಯ ಬ್ರಾಹ್ಮದಲ್ಲಿ ಬರುತ್ತವೆ. ಜೀವನಾಧಾರಕ್ಕೆ ಮೂಲವಾದ ಅನ್ನದ ಸಂಪಾದನೆಗಾಗಿ ಯಾಗಾದಿಗಳನ್ನು ಆರಂಭಿಸಿದ ಬ್ರಾಹ್ಮಣರು, ಸೃಜಿಸಿದ ಧಾರ್ಮಿಕ

ಆದರ್ಶವೊಂದನ್ನು ತಮ್ಮ ಸ್ವಂತ ಸೌಖ್ಯಕ್ಕೆ ಉಪಯೋಗಿಸಿಕೊಂಡಂತೆ, ಕಾಳಾಮುಖ ಆಚಾರ್ಯರೂ ಉಪಯೋಗಿಸಿಕೊಂಡರು.[೨]

ಅಗ್ನಿಪುರಾಣದಲ್ಲಿ ಹತ್ತು ದಾನದ ಪ್ರಾಕರಗಳನ್ನು (ಬಂಗಾರ, ಕುದುರೆ, ಎಳ್ಳು, ಆನೆ, ಕನ್ಯೆ, ರಥ, ಭೂಮಿ, ಮನೆ, ವಧು ಮತ್ತು ಕಂದುಬಣ್ಣದ ಹಸು)ಗಳನ್ನು ವಿವರಿಸಿದ್ದರೆ ಮತ್ಸ್ಯ ಪುರಾಣದಲ್ಲಿ ಹದಿನಾರು ಬಗೆಯ ದಾನ (ತುಲಾಪುರಷ, ಹಿರಣ್ಯಗರ್ಭ, ಬ್ರಹ್ಮಾಂಡ, ಕಲ್ಪವೃಕ್ಷ, ಗೋಸಹಸ್ರ (ಗೋಸಾಸ) ಕಾಮಧೇನು ಅಥವಾ ಹಿರಣ್ಯಕಾಮಧೆನು, ಹಿರಣ್ಯಾಶ್ವ, ಹಿರಣ್ಯಶ್ವರಥ, ಹೇಮಹಸ್ತಿರಥ, ಹೈಯಧಾರದಾನ, ವಿಶ್ವಚಕ್ರ, ಕಲ್ಪಲತ, ಸಪ್ತಸಾಗರ, ರತ್ನಧೇನು, ಮಹಾಭೂತಘಟ ಹಾಗೂ ಪಂಚಲಾಂಬಲಕ)ಗಳ ವಿವರಣೆ ಇದೆ. ಇವುಗಳನ್ನು 'ಶೋಡಷ' ದಾನಗಳೆಂದು ಸಹ ಕರೆಯುತ್ತಾರೆ. ಈ ಮೇಲಿನ ಉಲ್ಲೇಖಿತ ದಾನ ಪ್ರಕಾರಗಳು ಪ್ರಾಚೀನ ಎಲ್ಲ ದಾನಶಾಸನಗಳಲ್ಲಿ ಸರ್ವೇಸಾಮಾನ್ಯ.

ವಿಜಯನಗರದ ಕಾಲದ 'ಆನಂದನಿಧಿ' ದಾನ :

ದಕ್ಷಿಣಭಾರತದ ಪ್ರದೇಶವನ್ನು ಒಂದು ಮಾಡಿ ಆಳಿದ ವಿಜಯನಗರದ ಅರಸರಷ್ಟು, ಪರ್ಯಾಯ ದ್ವೀಪದ ಯಾವ ರಾಜರು ಅಷ್ಟೊಂದು ದಾನ-ದತ್ತಿಗಳನ್ನು ಕೊಟ್ಟಿಲ್ಲವೆಂದು ಹೇಳಬಹುದು. ಇವರು ಮುಖ್ಯವಾಗಿ ಧಾರ್ಮಿಕ ಹಾಗೂ ಸಾಮಾಜಿಕ ಕಾರ್ಯಚಟುವಟಿಕೆಗಳಿಗೆ ದಾನಗಳನ್ನು ಕೊಟ್ಟರು. ಇಂತಹ ಚಟುವಟಿಕೆಯ ವಿಧಾನಗಳೇ ವಿಜಯನಗರ ರಾಜ್ಯದ ಆಡಳಿತಕ್ಕಿರುವ ಬುನಾದಿಗಳಾಗಿದ್ದವು. ವಿಜಯನಗರದ ಅರಸುರಗಳ ದಾನ ಉಲ್ಲೇಖಗಳನ್ನು ಗಮನಿಸಿದರೆ, ಅವರುಗಳ ಮಧ್ಯೆ ದಾನನೀಡುವ ಪೈಪೋಟಿ ನಡೆದಿತ್ತೇ ಎಂಬ ಸಂಶಯಗಳು ಹುಟ್ಟಿಕೊಳ್ಳುತ್ತವೆ. ಉದಾ: ಕೃಷ್ಣದೇವರಾಯನ ಆಡಳಿತವಧಿಯನ್ನೇ ಪರಿಗಣಿಸಿದರೆ, ಈತನು ದಾನಕಾರ್ಯಗಳನ್ನು ನಿರ್ವಹಿಸದ ದಿನವೇ ಇಲ್ಲವೆಂದು ಅಭಿಪ್ರಾಯಿಸಬಹುದು.

ಸಂಗಮ, ಸಾಳ್ವ ಅರಸರಂತೆ ತುಳುವಂಶದ ಅರಸರು ಸಹ ಭೇದಭಾವಗಳಿಲ್ಲದೇ ಎಲ್ಲ ಧರ್ಮೀಯರ ಪೂಜಾಸ್ಥಳಗಳಿಗೆ ಹೇರಳವಾದ ತುಳು ಅರಸರು ಶ್ರೀ ವಿಷ್ಣುವಿನ ಸಂಪ್ರದಾಯ (ದೇವಾಲಯ ಹಾಗೂ ಧಾರ್ಮಿಕ ಕಾರ್ಯವಿಧಾನ)ಗಳಿಗೆ ಹೆಚ್ಚಿನ ಪ್ರಮಾಣದಲ್ಲಿ ದಾನ ನೀಡಿರುವುದನ್ನು ಕಾಣುತ್ತೇವೆ. ಉದಾ: ಹಂಪಿಯಲ್ಲಿನ ವಿಜಯವಿಠಲ (ವಿಠ್ಠಲೇಶ್ವರ) ಬಾಲಕೃಷ್ಣ (ಕೃಷ್ಣಸ್ವಾಮಿ) ಹಾಗೂ ಅಚ್ಯುತದೇವರಾಯ (ತಿರುವೇಂಗಳನಾಥ) ದೇವಾಲಯಗಳ ಚಟುವಟಿಕೆಗಳಿಗೆ ನೂರಾರು ದಾನಗಳನ್ನು ನೀಡಿದ್ದಾರೆ. ವಿಜಯನಗರ ಅರಸರು ನೀಡಿರುವ ಅನೇಕ ದಾನಗಳನ್ನು ನೋಡಬಹುದು. ಕಾಮಧೇನು, ಕಲ್ಪಕ್ಷಿತಿ ರುಹತಿಲಕ, ಕಾಂಚನೀ, ಕಾಂಚನಮೇರು, ತುಲಾಪುರುಷ, ಪಂಚಲಾಂಗಲ, ಬ್ರಹ್ಮಾಂಡ, ರತ್ನಧೇನು, ವಿಶ್ವಚಕ್ರ, ಸ್ವರ್ನಕ್ಷ್ಮಾ, ಸುವರ್ಣಮೇರು, ಹೇಮಾಶ್ವ, ಹೇಮಗರ್ಭ, ಹಿರಣ್ಯಾಶ್ವ ಮುಂತಾದ ಅನೇಕ ಬಗೆಯ ದಾನಗಳ ವಿವರಣೆಗಳಿವೆ.

ಈ ಮೇಲಿನ ಉಲ್ಲೇಖಿತ ದಾನಗಳು ವಿಜಯನಗರದ ಅರಸರ ದಾನಶಾಸನಗಳಲ್ಲಿ ಸರ್ವೇಸಾಮಾನ್ಯ ದಾಖಲಿತ ಸಂಗತಿಗಳಾಗಿವೆ. ಹಾಗೂ ಇವುಗಳ ಉದ್ದೇಶ ಹಾಗೂ ಕಾರ್ಯವಿಧಾನಗಳ ಬಗೆಗೂ ಮಾಹಿತಿಗಳಿವೆ. ಆದರೆ ಅಚ್ಯುತದೇವರಾಯನು ಕೊಡಲ್ಪಟ್ಟ 'ಆನಂದನಿಧಿ' ದಾನ ಉಲ್ಲೇಖ ಈತನ ಆಡಳಿತಾವಧಿಯಲ್ಲಿನ ಕೆಲವು ಶಾಸನಗಳಲ್ಲಿ ಮಾತ್ರ ನೀಡಲಾಗಿದೆ. ಇಂಥ ದಾನವನ್ನು ಯಾವ ಕಾರಣಕ್ಕಾಗಿ ಹಾಗೂ ಯಾವ ಬಗೆಯ ಸಂದರ್ಭದಲ್ಲಿ ಈ ಹೊಸ ಹೆಸರಿನೊಂದಿಗೆ ಸ್ಥಾಪಿಸಲಾಯಿತು ಎಂಬುದು ಕುತೂಹಲದ ವಿಷಯವಾಗಿದೆ. ಆನಂದನಿಧಿ ದಾನವನ್ನು ಕ್ರಿ.ಶ. ೧೫೩೯ರಲ್ಲಿ ಅಚ್ಯುತರಾಯ ಕೊಟ್ಟಿರುವ ಉಲ್ಲೇಖವಿದೆ.

ನಾಗರಿಲಿಪಿ, ಸಂಸ್ಕೃತಭಾಷೆಯ ಶಾಲಿವಾಹನ ಶಕವರ್ಷ ೧೪೬೧, ವಿಕಾರಿ ಭಾದ್ರಪದ ಶುದ್ಧದ್ವಾದಶಿ ಅಂದರೆ, ಕ್ರಿ.ಶ. ೨೬-೦೮-೧೫೩೯ಕ್ಕೆ ಸರಿಹೊಂದುವ ವರ್ಷದಲ್ಲಿ 'ಆನಂದನಿಧಿ' ಎಂಬ ದಾನವನ್ನು ಅಚ್ಯುತದೇವರಾಯನು ಬ್ರಾಹ್ಮಣರಿಗೆ ಕೊಟ್ಟಿದ್ದಾನೆ. ಈ ಹೆಸರಿನ ಉಲ್ಲೇಖವುಳ್ಳ ಶಾಸನಗಳು ಹಂಪಿಯಲ್ಲಿವೆ. (ಶಾಸನದ ನಕಲನ್ನು ಪ್ರಬಂಧದ ಕೊನೆಗೆ ಕೊಡಲಾಗಿದೆ). ಕೃಷ್ಣಸ್ವಾಮಿ (ಬಾಲಕೃಷ್ಣ) ದೇವಾಲಯದಲ್ಲಿ ಎರಡು ಅಚ್ಯುತನಾರಾಯಣ (ತಿರುವೇಂಗಳನಾಥ) ಸ್ವಾಮಿ, ವಿಠ್ಠಲೇಶ್ವರ (ವಿಜಯವಿಠ್ಠಲ) ಪಟ್ಟಾಭಿರಾಮ ಹಾಗೂ ಕಮಲಾಪುರದ (ಹೊಸಪೇಟೆ ತಾಲೂಕು) ಬಳಿ ಇರುವ ಚಿಕ್ಕಹುಡೆ ದೇವಾಲಯದಲ್ಲಿ ತಲಾ ಒಂದು ಶಾಸನ ಇದೆ. ಈ ಎಲ್ಲ ಶಾಸನಗಳು ಪ್ರಕಟವಾಗಿವೆ ಹಾಗೂ ಆರು ಶಾಸನಗಳ ತೇದಿ (ಕಾಲ) ಹಾಗೂ ಶಾಸನ ವಿಷಯ (Text) ಒಂದೇ ಆಗಿದೆ. ಅಂದರೆ ಒಂದು ಮುಖ್ಯವಾದ ಶಾಸನದ ಪಠ್ಯವನ್ನು ಪ್ರತಿ (ನಕಲು) ಮಾಡಿ ಎಲ್ಲಕಡೆಗೂ ವಿಸ್ತರಿಸಿದ್ದಾರೆ. ಹಾಗಾದರೆ 'ಆನಂದನಿಧಿ' ದಾನದ ಉಲ್ಲೇಖವುಳ್ಳ ಮೊದಲ ಶಾಸನ ಯಾವುದು? ಹಾಗೂ ಯಾವ ಆರಾಧ್ಯದೈವದ ಸನ್ನಿಧಿಯಲ್ಲಿ ನೀಡಲಾಯಿತು ಎಂಬ ಜಿಜ್ಞಾಸೆ ಹುಟ್ಟಿಕೊಳ್ಳುತ್ತದೆ. ಇದೇ ಶಾಸನ ಪಠ್ಯ ಹಾಗೂ ತೇದಿ ಹೊಂದಿರುವ ಶಾಸನಗಳನ್ನು ಹಂಪಿ ಹೊರತುಪಡಿಸಿ ಗದುಗಿನ ವೀರನಾರಾಯಣ ದೇವಾಲಯ ಹಾಗೂ ಅಣ್ಣಿಗೇರಿಯ ಅಮೃತೇಶ್ವರ ದೇವಾಲಯದಲ್ಲೂ ಸಹ ಸ್ಥಾಪಿಸಿದ್ದಾರೆ. (ಸೌತ್ ಇಂಡಿಯನ್ ಇನ್‌ಸ್ಕ್ರಿಪಶನ್ಸ್ , ಸಂಪುಟ-೧೫, ಸಂಖ್ಯೆ-೨೫೨, ೨೫೩ ಮತ್ತು ೨೫೪) ಈ ಮೂರು ಶಾಸನಗಳಿಂದ ಮೇಲಿನ ಆರು ಶಾಸನಗಳ ಬಗೆಗಿರುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬಹುದು.

ಈ ಶಾಸನಗಳು ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಅಚ್ಯುತರಾಯನು ವಿಜಯನಗರ ರಾಜ್ಯವನ್ನು ಆಳುತ್ತಿರಲು ಭಾಸ್ಕರ ಕ್ಷೇತ್ರದ (ಹಂಪಿ) ತುಂಗಭದ್ರಾ ತೀರದ ವಿಠ್ಠಲೇಶ್ವರನ ಸನ್ನಿಧಿಯಲ್ಲಿ ಮಾಧವ (ವಿಷ್ಣು)ನ ಪ್ರೀತಿ ಪಾತ್ರನಾಗಿ ಆನಂದನಿಧಿ ಎಂಬ ದಾನವನ್ನು ಸಮಸ್ತ ಭೂಸುರರ (ಬ್ರಾಹ್ಮಣ)ರಿಗೆ ನೀಡಿ ಸಂತೋಷಪಡಿಸಿದನು ಎಂಬ ವಿವರಣೆಯೊಂದಿಗೆ ಆರಂಭವಾಗುತ್ತದೆ. ಹಾಗೂ ಹಂಪಿಯಲ್ಲಿನ ಮೂಲ ಶಾಸನವನ್ನು ನಕಲಾಗಿ ಹಾಗೂ ಸ್ಥಳೀಯವಾಗಿರುವ ಆರಾಧ್ಯ

(ಗದುಗಿನ ವೀರನಾರಾಯಣ, ತ್ರಿಯಂಬಕ ಹಾಗೂ ಅಣ್ಣಿಗೇರಿಯ ಅಮೃತೇಶ್ವರ) ದೇವರ ಸನ್ನಿಧಿಯಲ್ಲಿ ಸ್ಥಾಪಿಸಲಾಗಿದೆ. ಅಲ್ಲದೇ ಗದುಗಿನ ವೀರನಾರಾಯಣನ ದೇವಾಲಯದಲ್ಲಿರುವ ಶಾಸನದಲ್ಲಿ ಕನ್ನಡದ ಸುಪ್ರಸಿದ್ಧ (೧೫ನೇ ಶತಮಾನ) ಕವಿ ಕುಮಾರವ್ಯಾಸನ ಬಗೆಗೆ ಪ್ರಾಸಂಗಿಕವಾದ ಉಲ್ಲೇಖವಿದೆ. ಈ ಮೇಲಿನ ಮೂರು ಶಾಸನಗಳಲ್ಲಿ ಮಾತ್ರ ಭಾಸ್ಕರಕ್ಷೇತ್ರ (ಹಂಪಿ)ದ ವಿಠ್ಠಲೇಶ್ವರನ ಸನ್ನಿಧಿಯಲ್ಲಿ ಎಂಬ ಮಾಹಿತಿ ಸಿಗುತ್ತದೆ. ಹೀಗಾಗಿ ವಿಠ್ಠಲ ದೇವಸ್ಥಾನದಲ್ಲಿರುವ ಈಗೀನ ಶಾಸನವೇ ಮೊದಲ ಶಾಸನವಾಗಿದ್ದು, ಹಾಗೂ ಇದರ ನಕಲನ್ನೂ ಹಂಪಿ ಸೇರಿದಂತೆ ಉಳಿದೆಲ್ಲ ಕಡೆಗೂ ವಿಸ್ತರಿಸಿರಬಹುದು. ಈ ಪ್ರಧಾನ ಶಾಸನ ಪಠ್ಯವು ವಿಸ್ತರಣೆಗೊಂಡ ಎಲ್ಲ ಶಾಸನಗಳಲ್ಲೂ ಇದೆ ಹಾಗೂ ಶಾಸನವು ನಕಲಾಗಿ ವಿಸ್ತಾರ ಕ್ಷೇತ್ರದಲ್ಲಿ ಹರಡಿರುವುದನ್ನು ಅವಲೋಕಿಸಿದಾಗ 'ಆನಂದನಿಧಿ' ದಾನವು ಅಚ್ಯುತದೇವರಾಯನ ಕಾಲದಲ್ಲಿ ಪ್ರಾರಂಭದ ಅತೀ ಮುಖ್ಯ ದಾನಕಾರ್ಯವೇ ಆಗಿದೆ ಎಂದು ಅಭಿಪ್ರಾಯಿಸಬಹುದು. ಆದರೆ ದಾನದ ಆರಂಭಕ್ಕೆ ನಿರ್ದಿಷ್ಟವಾದ ಕಾರ್ಯಕಾರಣ ಸಂಬಂಧಗಳು ಶಾಸನಗಳಲ್ಲಿ ಇಲ್ಲ. ಹಾಗೂ ಈ ದಾನ ಪ್ರಕಾರ ಅಚ್ಯುತರಾಯನ ನಂತರ ಕಾಲಾವಧಿಯಲ್ಲಿ ಮುಂದುವರೆದಿರುವ ಮಾಹಿತಿಗಳಿಲ್ಲ. ಅಂದರೆ ನಿರ್ದಿಷ್ಟ ಸಂದರ್ಭ ಮತ್ತು ನಿಶ್ಚಿತ ಕಾಲಾವಧಿಗೆ ಮಾತ್ರ ಸೀಮಿತವಾಗಿದೆ.

'ಆನಂದನಿಧಿ' ಎಂಬ ಪದದ ಒಟ್ಟು ಅರ್ಥ ಹುಡುಕುವುದು ಕಷ್ಟಸಾಧ್ಯವಾದುದು. ಹೀಗಾಗಿ ಈ ಪದವನ್ನು ಬಿಡಿಸಿ ಅರ್ಥೈಸಿಕೊಳ್ಳುವುದು ಸೂಕ್ತವಾಗಿದೆ. ಆನಂದ ಎಂಬ ಶಬ್ದದ ಸಾಮಾನ್ಯ ಅರ್ಥಗಳೆಂದರೆ ಸಂತೋಷ, ಪರಮಾವಧಿಯಾದ ಸಂತೋಷ ಎಂಬುದು. ಅಲ್ಲದೇ ಷಡ್ವಿದ ಭಕ್ತಿಗಳಲ್ಲಿ ಆನಂದವು ಒಂದು. (ಶ್ರದ್ಧೆ, ನಿಷ್ಠೆ, ಅವಧಾನ, ಆನಂದ, ಅನುಭವ ಹಾಗೂ ಸಾಮರಸ) 'ಆನಂದ' ಎಂಬ ಸಂವತ್ಸರವು ಇದೆ. 'ನಿಧಿ' ಎಂಬುದು ಸಂಪತ್ತು ಧನ ಎಂಬ ಅರ್ಥಗಳಲ್ಲಿ ಬಳಕೆಯಾಗುತ್ತದೆ.[೪] ಕೆಲವು ನಿಘಂಟುಗಳಲ್ಲಿ 'ಆನಂದ' ಶಬ್ದಕ್ಕೆ (ಬ್ರಹ್ಮ) ಎಂಬ ಪರ್ಯಾಯ ಅರ್ಥವೂ ಇದೆ. 'ನಿಧಿ' ಎಂದರೆ Commentary (ವ್ಯಾಖ್ಯಾನ ಅಥವಾ ಭಾಷ್ಯ) ಎಂಬ ಅರ್ಥವನ್ನು ಸಹ ಕೊಡಲಾಗಿದೆ.[೫] 'ಆನಂದನಿಧಿ' ಒಟ್ಟು ಪದದ ಅರ್ಥವಿವರಣೆ ಅಸ್ಪಷ್ಟವಾದುದು.

ಸ್ಥೂಲವಾಗಿ ಅಭಿಪ್ರಾಯಪಡುವುದಾದರೆ ತನ್ನ ರಾಜ್ಯದ ಉನ್ನತಿಗಾಗಿ ಈ ದಾನ ಕೊಟ್ಟಿರಬಹುದು. ಆದರೆ ಯಾವ ಕಾರ್ಯನಿಮಿತ್ತ ಅಥವಾ ಸಾಧನೆಗಾಗಿ ಈ ದಾನವನ್ನು ನೀಡಿರಬಹುದೆಂಬ ಮಾಹಿತಿ ಅಸ್ಪಷ್ಟವಾದುದು. ಕೆಲವು ಊಹಾತ್ಮಾಕ ಅಂಶಗಳಿಂದ ಮಾತ್ರ ನಿಷ್ಕರ್ಷೆಗೆ ಒಳಪಡಿಸಬಹುದು.

ಕ್ರಿ.ಶ. ೧೫೨೯ರಲ್ಲಿ ಪಟ್ಟಕ್ಕೆ ಬಂದ ಅಚ್ಯುತದೇವರಾಯನು ಅನೇಕ ಏಳುಬೀಳುಗಳ ನಡುವೆಯೂ ಒಬ್ಬ ಸಮರ್ಥ ದೊರೆ. ತನ್ನ ಮಂತ್ರಿ ಸಲಕ ತಿರುಮಲರಾಜನ ಜೊತೆಗೂಡಿ ಅನೇಕ ನಿರ್ಣಾಯಾತ್ಮಕ ಯುದ್ಧಗಳನ್ನು ಕೈಗೊಂಡಿದ್ದಾನೆ. ಬಹುಶಃ ಅಂಥದೊಂದು ಯುದ್ಧದಲ್ಲಿ ಜಯಶಾಲಿಯಾದ ಪ್ರಯುಕ್ತ ತನ್ನ ಸಂತೋಷಕ್ಕಾಗಿ 'ಆನಂದನಿಧಿ' ದಾನವನ್ನು

ತ್ರಿಮತಸ್ಥ ಬ್ರಾಹ್ಮಣರಿಗೆ ಕೊಟ್ಟಿರಬಹುದು. ೧೫೩೯ರಲ್ಲಿ ಅಚ್ಯುತದೇವರಾಯನ ಸೈನ್ಯ ಏಲಂ (ಶ್ರೀಲಂಕಾ) ಪ್ರದೇಶದವರೆಗೆ ಮುನ್ನುಗ್ಗುತ್ತದೆ. ಹಾಗೂ ಈತನ ಕಾಲದಲ್ಲಿ ಮೊಟ್ಟಮೊದಲಿಗೆ ಪರ್ಯಾಯ ದ್ವೀಪದ ಆಚೆಗೂ ವಿಜಯನಗರ ಬಾಹುಳ್ಯ ವಿಸ್ತರಿಸಿರುವ ನಿದರ್ಶನ. ಇಂಥವೊಂದು ವಿಶೇಷ ಸಂದರ್ಭದಲ್ಲಿ ತನ್ನ ಸಂತೋಷ (ಆನಂದ)ಕ್ಕಾಗಿ ಈ 'ನಿಧಿ' ದಾನವನ್ನು ಕೊಟ್ಟಿರಬಹುದು. ಮತ್ತು ಇದರ ಮುಖ್ಯ ಉದ್ದೇಶ ತನ್ನ ವಿಜಯಕ್ರಮಗಳು ಸದಾಮುಂದುವರೆಯಲು ಪ್ರತಿಷ್ಠಿತ (ಬ್ರಾಹ್ಮಣ) ವರ್ಗದ ಅಭಯಹಸ್ತವು ಬೇಕಾಗಿತ್ತು. ಆದರೆ ಆನಂದನಿಧಿ ದಾನವು ಆ ಹೊತ್ತಿನ ಸಮಯಕ್ಕೆ ಮಾತ್ರ ಸೀಮಿತವಾಗಿದ್ದು, ಬಹುಶ: ಮುಂದುವರೆದಿರಲಿಕ್ಕಿಲ್ಲ. ಈ ಮೊದಲು ಅಂದರೆ ಕ್ರಿ.ಶ. ೧೫೩೩ರಲ್ಲಿ ಅಚ್ಯುತದೇವರಾಯನು "ಸುವರ್ಣಮೇರು" ದಾನ ಕೊಟ್ಟಿರುವ ಉಲ್ಲೇಖಗಳಿವೆ. ಆನಂದನಿಧಿ ದಾನವನ್ನು ಗುಣವಾಚಕ ರೂಪದಲ್ಲಿ ಸಹ ನೋಡುವ ಸಾಧ್ಯತೆ ಇದೆ. ಅಥವಾ ಮಾಧ್ವಪರಂಪರೆಯ ಹರಿಕಾರರಾದ ವಾಸುದೇವ (ಆನಂದತೀರ್ಥ)ರ ಹೆಸರಿನಲ್ಲಿ ಏನಾದರೂ ಈ ನಿಧಿದಾನವನ್ನು ಸ್ಥಾಪಿಸಿರಬಹುದೇ? ಇಂಥ ಅನೇಕ ಸಂಶೋಧನಾತ್ಮಕ ಊಹೆಗಳಿಗೆ ಆನಂದನಿಧಿ ದಾನ ಎಡೆಮಾಡಿಕೊಡುತ್ತದೆ. ತನ್ನ ತೂಕದಷ್ಟು ಧನವನ್ನು ದಾನವಾಗಿ ಕೊಡುವುದರಿಂದ ಇದು "ತುಲಾಪುರುಷ" ದಾನವೆಂದು ಅನಿಸಿಕೊಳ್ಳುವುದು. ತುಲಾಪುರುಷ ದಾನದಲ್ಲಿ ಬರುವ ಈ ದಾನಕ್ಕೆ "ಆನಂದನಿಧಿ" ಎಂಬ ಹೊಸ ಹೆಸರನ್ನು ಸೂಚಿಸಿರಬಹುದಾಗಿದೆ.

ಅಡಿಟಿಪ್ಪಣಿ

೧. ಹಿರೇಮಲ್ಲೂರ ಈಶ್ವರನ್, ೧೯೬೭, "ಲಿಂಗಾಯತಧರ್ಮ ಒಂದು ಅಧ್ಯಯನ", ಪು. ೪

೨. ಅದೇ, ಪು. ೪೧

೩. ಶಾಸನ ಸಂಖ್ಯೆ ೭೫, ೧೩೩, ೩೩೫, ೨೦೦, ೩೨೩ ಮತ್ತು ೩೨೫, ದೇವರಕೊಂಡಾರೆಡ್ಡಿ ಮತ್ತು ಇತರರು, ೨೦೦೦, ಹಂಪಿ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ ಶಾಸನಗಳ ಸಂಪುಟ-೩, ಕ.ವಿ.ವಿ.ವಿದ್ಯಾರಣ್ಯ

೪. ಕನ್ನಡ ನಿಘಂಟು, ೧೯೭೦, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೫. ಶ್ರೀ ಮೊನಿಯರ್, ಮೊನಿಯರ್ ವಿಲಿಯಮ್ಸ್, ಸಂಸ್ಕೃತ-ಇಂಗ್ಲೀಷ್ ಶಬ್ದಕೋಶ, ದೆಹಲಿ
(ಈ ಪ್ರಬಂಧ ರೂಪಿಸುವಲ್ಲಿ ಸಹಾಯ ನೀಡಿದ ಪ್ರೊ. ಲಕ್ಷ್ಮಣ ತೆಲಗಾವಿ ಅವರಿಗೆ ವಂದನೆಗಳು)

೬. Vasundara Filliozat: 1988, Hampi Vijayanagara, The temple of vittala, Sitaram Bharatiya Institute of Scientific Research, New Delhi, p.xv

೭. Inscriptions of Karnataka Vol. I, 1996, No. 202, 203, 229, 258, 259, 417, 464, 467, Directorate of Archaeology and Museums, Mysore.

೮. ಅಚ್ಯುತರಾಯ ದೇವಾಲಯದಲ್ಲಿನ ಆನಂದನಿಧಿ ಶಾಸನ
"ಹಂಪಿ ಶಾಸನಗಳು" - ಕನ್ನಡ ವಿಶ್ವವಿದ್ಯಾಲಯ ಶಾಸನಗಳ ಸಂಪುಟ-೩

ನಾಗರಿ ಲಿಪಿ, ಸಂಸ್ಕೃತ ಭಾಷೆಯ ಈ ಶಾಸನದಲ್ಲಿ ಚಂದ್ರ, ರಸ, ಅಮರ ಇಂದ್ರ ಗಣಿತೇ ಎಂದಿದ್ದು ಇದು ಶಾಲಿವಾಹನ ಶಕವರ್ಷ ೧೪೬೧, ಭಾದ್ರಪದ, ಶು, ದ್ವಾದಶಿ, ಬುಧವಾರ (ಭೂಮಿಸುತ)ವಾಗಿದ್ದು ಇದು ಕ್ರಿ.ಶ. ೨೬-೮-೧೫೩೯ರ ಮಂಗಳವಾರ (ಬುಧವಾರವಲ್ಲ)ಕ್ಕೆ ಸರಿಯಾಗುತ್ತದೆ.

ಅಚ್ಯುತರಾಯರನು ಬ್ರಾಹ್ಮಣರಿಗೆ ಆನಂದನಿಧಿ ಎಂಬ ದಾನವನ್ನು ಮಾಡಿದ್ದನ್ನು ತಿಳಿಸುತ್ತದೆ.

೧. ಶಕೇ ಚಂದ್ರರಸಾ
೨. ಮರೇಂದ್ರ ಗಣಿತೇ ವರ್ಷೇ ವಿಕಾ
೩. ರ್ಯ್ಯಾಹ್ವಯೇ ಪಕ್ಷೇ ಭಾದ್ರಪದಸ್ಯ
೪. ಪೋಷಿತವಿಧೌ ದ್ವಾದಶ್ಯಭಿ
೫. ಖ್ಯಾ ತಿಥೌ ವಾರೇ ಭೂಮಿಸುತಸ್ಯ
೬. ವಿಷ್ಣವಧಿಪತೌ ತಾರೇಚ್ಯುತಕ್ಷ್ಮಾಪತಿ
೭. ರ್ದತ್ತ್ವಾನಂದನಿಧಿ ದ್ವಿಜಾನ್ ಧನದಯೆ
೮. ನ್ನಾಮೋದಯನ್ಮಾಧವಂ || ಪುಣ್ಯೈಘೈಃ
೯. ಪರಿಪಾಲಿತಸ್ಯ ಪರಿ(ತೋ) ಭೂತಾ
೧೦. ಲಿ ಸಂವೇಷ್ಟಿತಾಸ್ಸದ್ವರ್ಗೈಃ (ಸ್ವವ)
೧೧. ಶೀಕೃತಸ್ಯ ಸತತಾಕ್ರಾನ್ತಾ
೧೨. ಭುಜಂಗವ್ರಜೈಃ ಪ್ರಾಪ್ತಸ್ಯಾತಿನ
೧೩. ವಪ್ರಶಸ್ತಿಮಧಿಕ ಪ್ರಖ್ಯಾತ
೧೪. ಶೌರ್ಯಾಚ್ಯುತಕ್ಷ್ಮಾಪಾನಂ
೧೫. ನಿರ್ಧೇರ್ನವಾಪಿ ನಿಧಯಃ ಕಿಂ
೧೬. ತೇ ಲಭಂತೇ ತುಲಾಂ || ಶ್ರೀ ಶ್ರೀ
೧೭. ಶ್ರೀ ಶ್ರೀ ಶ್ರೀ ||

❖ ❖

೧೯

ಹಂಪೆ ಪರಿಸರದ ಮೈಲಾರನ ಪರಂಪರೆ

ವಾಸುದೇವ ಬಡಿಗೇರ

ಹಂಪೆ ಪರಿಸರವು ಫಲವತ್ತಾದ ಭೂಮಿ, ನೀರಿನ ಸರಬರಾಜು, ಕಾಡು, ಕಬ್ಬಿಣ, ತಾಮ್ರ, ಚಿನ್ನದ ಅದಿರು ಮತ್ತು ಗ್ರನೈಟ್ ಬಂಡೆಗಳಿಂದ ಕೂಡಿದ ಬೆಟ್ಟಗಳು ಮುಂತಾದ ಭೌಗೋಳಿಕ ಲಕ್ಷಣಗಳಿಂದಾಗಿ ಪ್ರಾಗೈತಿಹಾಸ ಹಾಗೂ ಇತಿಹಾಸ ಕಾಲದ ಸಂಸ್ಕೃತಿ ಸಮೃದ್ಧವಾಗಿ ಬೆಳೆದುಬಂದಿತು. ಪ್ರಾಗೈತಿಹಾಸ ಕಾಲದಲ್ಲಿ ಹುಟ್ಟಿಕೊಂಡ ಧಾರ್ಮಿಕ ಕಲ್ಪನೆಗಳಲ್ಲಿ ಶೈವ ಧರ್ಮವೆ ಮೊದಲಿನದು. ಈ ಪ್ರದೇಶಕ್ಕೆ ಹತ್ತಿರದಲ್ಲಿರುವ ಜೇವರಗಿ-ಆಂದೋಲಾಗಳಲ್ಲಿಯ ಬೃಹತ್ ಶಿಲಾ ಗೋರಿಗಳ ಉತ್ಖನನದಲ್ಲಿ ಕಬ್ಬಿಣದ ಮೂರು ಕಾಲಿನ ಮಣೆ, ಹಿಡಿಕೆಯುಳ್ಳ ದೀಪದ ಹಣತೆ, ಗಜಪೃಷ್ಠಾಕಾರದ ಘಂಟೆ ಮತ್ತು ಆಂಧ್ರ ಪ್ರದೇಶ ಭಾಗದಲ್ಲಿ ದೊರೆತ ತ್ರಿಶೂಲ[೧]ಗಳಿಂದ ಇದು ಸ್ಪಷ್ಟ ಗೊಳ್ಳುತ್ತದೆ. ಈ ಪ್ರದೇಶದಲ್ಲಿರುವ ಬೂದಿದಿಬ್ಬಗಳು ದನಗಳ ಸಗಣಿ ಸುಡುವಿಕೆಯಿಂದ ಉಂಟಾದವು. ಇದರಿಂದ ಪಶುಪಾಲನೆ ವೃತ್ತಿ ಮುಂಚೂಣಿಯಲ್ಲಿತ್ತು. ಈ ಪಶುಪಾಲಕರಿಂದಲೇ ಶಿವನ ಆರಾಧನೆ ಆರಂಭವಾಗಿರಬಹುದು. ಇವರು ಅವಲಂಬಿಸಿದ ಪಶುಗಳಲ್ಲಿ ನಂದಿ ಶಿವನ ವಾಹನವಾದ ಇದರಿಂದ ಶಿವ ಪಶುಪತಿ ಅಥವಾ ಪಶುಪಾಲಕರ ಒಡೆಯನೆಂದು ಗುರುತಿಸಿಕೊಂಡ. ಕಾಡು, ಬೆಟ್ಟ, ನದಿ ತೀರ ಪ್ರದೇಶಗಳು ಶೈವ ಕ್ಷೇತ್ರಗಳಾದವು. ಆರಂಭದಲ್ಲಿ ಶಿವನನ್ನು ಕಾಡಿನ ದೇವತೆಯೆಂದು ಗುರುತಿಸಿದಂತೆ ಕಾಣುತ್ತದೆ. ಈ ಹಿನ್ನೆಲೆಯಾಗಿ ಮೂರ್ತಿ ಪೂಜೆಗಳಲ್ಲಿ ಭೈರವ ರೂಪ ಹುಟ್ಟಿಕೊಂಡಿತು. ವೀರಯೋಧನಂತೆ ಕಾಣುವ ಭೈರವ

ತ್ರಿಶೂಲ-ಢಮರು, ಖಡ್ಗ ಕಪಾಲ ಪಾತ್ರೆಗಳನ್ನು ಹಿಡಿದು ನಾಯಿಯೊಂದಿಗೆ ಕಾಣಿಸಿಕೊಳ್ಳುತ್ತಾನೆ. ಮುಂದೆ ಈ ಭೈರವ ರೂಪವೆ ಮಲಯವಂತ, ಮಲೆಮಲ್ಲೇಶ್ವರ, ಮೈಲಾರನಾಗಿ ಕಾಣಿಸಿಕೊಳ್ಳುತ್ತಾನೆ.

ಹಂಪೆ ಪರಿಸರದ ಪ್ರಾಚೀನ ಸಾಂಸ್ಕೃತಿಕ ಘಟ್ಟಗಳನ್ನು ಗಮನಿಸಿದರೆ ಇದು ಶೈವ ಕ್ಷೇತ್ರ ಕ್ರಿ.ಶ. ೧೦೪೬ರ ಮೋರಗೆರೆ ಶಾಸನದಲ್ಲಿ ವಿರೂಪಾಕ್ಷ ದೇವನ ಉಲ್ಲೇಖವಿದೆ.[೨] ಹಂಪೆಯ ದುರ್ಗಾದೇವಾಲಯದ ಹತ್ತಿರವಿರುವ ಎರಡನೆಯ ರಾಚಮಲ್ಲನ ಶಾಸನದಲ್ಲಿ ಪಂಪಾತೀರ್ಥದ ಹಂಪಾದೇವಿ, ವಿರೂಪಾಕ್ಷ ಮತ್ತು ಭೈರವರಿಗೆ ದಾನಕೊಟ್ಟ ವಿಷಯವಿದೆ.[೩] ಈ ವಿರೂಪಾಕ್ಷನ ಉಲ್ಲೇಖ ಬರುವ ಮೊದಲೇ ಭೈರವನ ಆರಾಧನೆ ನಡೆಯುತ್ತಿತ್ತು. ಕ್ರಿ.ಶ. ೧೦೪೦ರ ಹಾವಿನಾಳು ಶಾಸನ ಪಂಪಾತೀರ್ಥದ ಮಹಾಕಾಳ ದೇವರಿಗೆ ದಾನ ಬಿಟ್ಟಿರುವುದನ್ನು ತಿಳಿಸುತ್ತದೆ.[೪] ವಿರೂಪಾಕ್ಷ ಎನ್ನುವ ಹೆಸರೂ ಕೂಡಾ ಭೈರವನಂತೆ ಉಗ್ರದೇವತೆ ಅಥವಾ ಯುದ್ಧದ ದೇವತೆಯನ್ನು ಸೂಚಿಸುತ್ತದೆ. ಈ ಭೈರವನ ಕ್ಷೇತ್ರದಲ್ಲಿ ಕ್ರಮೇಣ ಮೈಲಾರನ ಪರಂಪರೆ ಕಾಣಿಸಿಕೊಳ್ಳುತ್ತದೆ. ಹಂಪೆ, ಮಲ್ಲಯ್ಯನಗುಡ್ಡ, ಮೈಲಾರ ಈ ದೇವತೆಯ ಪ್ರಮುಖ ಕ್ಷೇತ್ರಗಳು.

ಭೈರವ - ಮೈಲಾರನ ಸಂಬಂಧ

ಈ ಎರಡೂ ದೇವತೆಗಳ ಮೂರ್ತಿಲಕ್ಷಣಗಳಲ್ಲಿ ಅಷ್ಟು ವ್ಯತ್ಯಾಸ ಕಂಡುಬರುವುದಿಲ್ಲ. ಕೆಲವು ಕಡೆ ಈ ಭೈರವನನ್ನೇ ಮೈಲಾರನೆಂದು ಕರೆದು ಪೂಜಿಸಲಾಗುತ್ತಿದೆ. ಮೈಲಾರಲಿಂಗನನ್ನು ಮಲ್ಲಾರಿ, ಮೈಲಾರ ಖಂಡೇರಾಯ, ರಾವುನಾಥ ಮೊದಲಾದ ಹೆಸರಿನಿಂದ ಕರೆಯುತ್ತಾರೆ.[೫] ಶಿವನ ಅವತಾರದ ಮಾರ್ತಾಂಡ ಭೈರವನೇ ಇವನೆಂದು ಪ್ರತೀತಿ. ವಿಷ್ಣು ಸಂಹರಿಸಿದ ಮಧು-ಕೈಟಭ ದೈತ್ಯರ ಅವಶೇಷಗಳಿಂದ ಹುಟ್ಟಿಕೊಂಡ ಮಣಿ ಮಲ್ಲರೆಂಬ ಸಹೋದರರು ವಿಷ್ಣುವಿನ ಮೇಲೆ ಸೇಡು ತೀರಿಸಿಕೊಳ್ಳಲು ಶಿವನನ್ನು ಒಲಿಸಿಕೊಂಡು ಲೋಕಕಂಟಕರಾಗುತ್ತಾರೆ. ಕಡೆಗೆ ಶಿವನು ಮಾರ್ತಾಂಡ ಭೈರವನ ರೂಪ ತಾಳಿ ಮೊದಲು ಮಣಿಯನ್ನು ನಂತರ ಮಲ್ಲನನ್ನು ಕೊಂದು ಮಲ್ಲಾರಿಯಾದನಂತೆ. ಅಲ್ಲದೆ ಈ ಮಣಿಮಲ್ಲನೆಂಬ ದೈತ್ಯ ಒಬ್ಬನೆಯಾಗಿದ್ದು ಅವನಿಗೆ ಎರಡು ತಲೆಗಳಿದ್ದವೆಂದೂ ಹೇಳುವುದಿದೆ.[೬] ಮಹಾರಾಷ್ಟ್ರದಲ್ಲಿ ಪ್ರಚಲಿತವಿರುವ ಖಂಡೋಬನಿಗೆ ಲಿಂಗಪೂಜೆ ಮತ್ತು ಮೂರ್ತಿಪೂಜೆ ಎರಡೂ ಇವೆ. ಸ್ಕಂದನಿಗೂ ಖಂಡೋಬನಿಗೂ ಸಂಬಂಧ ಕಲ್ಪಿಸಲಾಗಿದೆ. ಸ್ಕಂದನೆನ್ನುವ ಅಪಭ್ರಂಶವೇ ಖಂಡೋಬ ಎಂದು ಹೇಳಲಾಗುತ್ತಿದೆ. ಖಂಡೋಬನನ್ನು ಕತ್ತಿ, ತ್ರಿಶೂಲ, ಡಮರು, ಪಾನಪಾತ್ರೆಗಳನ್ನು ಹಿಡಿದು ಕುದುರೆಯನ್ನೇರಿ ಕುಳಿತಂತೆ ಇಲ್ಲವೆ ಪೀಠದ ಮೇಲೆ ಕುದುರೆ ಲಾಂಛನ ಇರುವಂತೆ ಚಿತ್ರಿಸಿರುತ್ತಾರೆ. ಧ್ಯಾನಶ್ಲೋಕದಲ್ಲಿ ಮೈಲಾರನ ವರ್ಣನೆ ಈ ರೀತಿಯಾಗಿದೆ:

ಧ್ಯಾಯೋನ್ಮಲ್ಲಾರಿದೇವಂ ಕನಕಗಿರಿನಿಭಂ ಮ್ಹಾಲಸಾಭೂಷಿತಾಂಕಂ |

ಶ್ವೇತಾಶ್ವಂ ಖಡ್ಗಹಸ್ತಂ ವಿಬೂಧಬುಧಗಣ್ಯೈಃ ಸೇವ್ಯಮಾನಂ ಕೃತಾರ್ಥ್ಯೈ
ರ್ಯಾಕ್ತಾಂಘ್ರಿಂ ದೈತ್ಯಮೂರ್ಧ್ನಿಡಮರು ವಿಲಸಿತಂ ನೈಶಚೂರ್ಣಾಭಿರಾಮಂ |
ನಿತ್ಯಂ ಭಕೇಷು ತುಷ್ಟಂ ಶ್ವಗಣಪರಿವೃತಂ ನಿತ್ಯಮೊಲಿಕಾರಗಮ್ಯಂ ||

ಮೈಲಾರನಿಗೆ ನಾಯಿ ಮತ್ತು ಕುದುರೆಗಳ ಸಂಬಂಧ

ಮೈಲಾರನು ಭೈರವನಾಗಿರುವುದರಿಂದ ನಾಯಿಯ ಸಂಬಂಧವಿರುವುದು ಸಾಮಾನ್ಯ. ಮೈಲಾರನ ಉತ್ಸವದಲ್ಲಿ ಅವನ ಭಕ್ತರು ನಾಯಿಗಳಂತೆ ನಡೆದುಕೊಳ್ಳುತ್ತಾರೆ. ಮಲ್ಲನನ್ನು ಕೊಲ್ಲಲೂ ಮೈಲಾರ ಬೇಟೆ ನಾಯಿಗಳೊಂದಿಗೆ ಹೊರಟನು. ಮಲ್ಲನನ್ನು ಕೊಂದ ನಂತರ ಗುಡ್ಡದ ಮೇಲೆ ಬಂದು ನಿಲ್ಲುತ್ತಾನೆ. ಆಗ ಅವನ ನಾಯಿಗಳೆಲ್ಲವೂ ಮನುಷ್ಯ ರೂಪತಾಳಿ ಮೈಲಾರನ ಸೇವೆಯಲ್ಲಿ ತೊಡಗುತ್ತಾರೆ. ಇವರಿಗೆ ವಾಗ್ಗಯ್ಯಗಳೆಂದು ಕರೆಯಲಾಗುತ್ತದೆ. ಈ ವಾಗ್ಗಯ್ಯಗಳು ತಮ್ಮತಮ್ಮ ಬಟ್ಟಲುಗಳನ್ನು ನೆಲದ ಮೇಲಿಟ್ಟು ದೂರಸರಿದು ನಿಲ್ಲುತ್ತಾರೆ. ಒಂದೇ ಸಲಕ್ಕೆ ಬೊಗಳುತ್ತ ಬಟ್ಟಲುಗಳ ಬಳಿ ಓಡಿಬಂದು ಕಚ್ಚಾಡಿ ಅದರೊಳಗಿನ ಆಹಾರವನ್ನು ನಾಯಿಯಂತೆ ತಿನ್ನುತ್ತಾರೆ. ತಿಂದನಂತರ "ಏಳು ಕೋಟಿ ಮಲ್ಲಾರಿ ಮಾರ್ತಾಂಡ" ಎಂದು ಕೂಗುತ್ತಾರೆ.

ಇದೆ ವಾಗ್ಗಯ್ಯಗಳು ಕುದುರೆಯವರಾಗಿರುತ್ತಾರೆ. ಕೈಯಲ್ಲಿ ಚಾಟಿ ಹಿಡಿದುಕೊಂಡು ಕುದುರೆಗಳಂತೆ ನೆಗೆಯುತ್ತ ಚಾಟಿಗಳಿಂದ ತಮ್ಮನ್ನು ತಾವೇ ಹೊಡೆದುಕೊಳುತ್ತಾರೆ. ಇದೆಲ್ಲವನ್ನು ಗಮನಿಸಿದಾಗ ಉಗ್ರದೇವತೆಯಾದ ಭೈರವ ಮತ್ತು ಮೈಲಾರನಿಗೂ ಸಾಮ್ಯತೆಗಳಿವೆ. ಯಾವುದೋ ಹಂತದಲ್ಲಿ ಭೈರವನಿಂದ ಅವಿಭವಿಸಿರಬೇಕು. ಭೈರವ ಸಂಪ್ರದಾಯದ ಜನಾಂಗಗಳಲ್ಲಿ ಧಾರ್ಮಿಕ ಭಿನ್ನಾಭಿಪ್ರಾಯಗಳು ತಲೆದೋರಿ ಅದರಿಂದ ಪ್ರತ್ಯೇಕಗೊಂಡ ಗುಂಪು ಮೈಲಾರನನ್ನು ಸೃಷ್ಟಿಸಿಕೊಂಡಿರಲು ಸಾಧ್ಯತೆಗಳಿವೆ. ಭೈರವ ಮೈಲಾರದಿಬ್ಬರ ವಾಹನವೂ ನಾಯಿ, ತ್ರಿಶೂಲ, ಡಮರು, ಖಡ್ಗ-ಪಾನಪಾತ್ರೆ ಮೊದಲಾದ ಆಯುಧ ಮತ್ತು ಶಬ್ದ ಸಂಕೇತಗಳು ಈ ಎರಡೂ ದೇವತೆಗಳ ಧಾರ್ಮಿಕ ಅಂಶಗಳಾಗಿವೆ. ಭೈರವನಿಗೆ ಜೋಗಿಗಳು ಮೈಲಾರನಿಗೆ ಗೊರವರು, ಭೈರವನ ಹೆಂಡತಿ ಭೈರವಿ ಅಥವಾ ಕಾಳಿ, ಮೈಲಾರನ ಹೆಂಡತಿ ಮಾಳಿ ಅಥವಾ ಕಾಳಿ ಎರಡೂ ಒಂದೇ ರೂಪ.[೮] ಇದರಿಂದ ಭೈರವನ ಮತ್ತೊಂದು ಹೆಸರು ಮೈಲಾರನೆಂಬುವುದರಲ್ಲಿ ಅನುಮಾನವಿಲ್ಲ.

ನಾಥಪಂಥದೊಂದಿಗಿನ ಸಂಬಂಧ

ಪ್ರಾಚೀನ ಕಾಲದಲ್ಲಿ ಶಿವನ ಅನೇಕ ರೂಪಗಳು ಸೃಷ್ಟಿಯಾಗಿ ಒಂದೊಂದು ರೂಪವನ್ನು ಒಂದೊಂದು ಗುಂಪಿನವರು ಆರಾಧಿಸಲು ಆರಂಭಿಸಿದರು. ಇದರಿಂದ ಅನೇಕ ಪಂಥಗಳು ಉಗಮಗೊಳ್ಳಲು ಕಾರಣವಾದವು. ಹಠಯೋಗ ಸಾಧನೆಯಿಂದ ಇಂದ್ರಿಯಗಳನ್ನು ಜಯಿಸಿ ಶಿವಸಾಯುಧ್ಯವನ್ನು ಪಡೆಯುವ ಏಕೈಕ ಗುರಿ ಹೊಂದಿದ ನಾಥ ಪಂಥ ಪ್ರಧಾನ ಸ್ಥಾನವನ್ನು ಪಡೆಯಿತು. ಮೊದಲು ಒಂಭತ್ತು ಜನರಿಂದ ಆರಂಭವಾದ ಇದಕ್ಕೆ ನವನಾಥ ಪಂಥವೆಂದು

ಕರೆಯಲಾಯಿತು.[೯] ಇದರಲ್ಲಿ ರುದ್ರಪಂಥದ ಆರು ಪ್ರಧಾನ ಪಂಥ ಮತ್ತು ಅದರ ಉಪಪಂಥಗಳಿಗೆ ಭೈರವ ರೂಪವೆ ಅಗ್ರಸ್ಥಾನ ಪಡೆಯಿತು.

ದಕ್ಷಿಣ ಭಾರತದಲ್ಲಿ ನಾಗನಾಥ ಪಂಥವನ್ನು ಪ್ರವರ್ಧಮಾನಕ್ಕೆ ತಂದವರು ಕರ್ಮನಾಥ, ಮಲ್ಲಿಕಾರ್ಜುನನಾಥ ಮತ್ತು ರೇವಣನಾಥರು. ಕರ್ಮನಾಥ ಆದಿಚುಂಚನ ಗಿರಿಯಲ್ಲಿ, ಮಲ್ಲಿಕಾರ್ಜುನನಾಥ ಶ್ರೈಶೈಲದಲ್ಲಿ, ರೇವಣನಾಥ ಕೊಲ್ಲಿಪಾಕಿಯಲ್ಲಿ ನಿಂತು ಧರ್ಮ ಪ್ರಚಾರ ಮಾಡಿದರು. ಇದರ ಪ್ರಚಾರಕ್ಕೆ ಜೋಗಿಗಳು, ಭೈರಾಗಿಗಳು, ಗೊರವರು ಮುಂತಾದವರಿದ್ದರು. ಇದನ್ನು ಕಾಳಭೈರವ ಅಥವಾ ಮಾರ್ತಾಂಡ ಭೈರವ ಪಂಥ ಎಂದೂ ಕರೆಯುತ್ತಾರೆ. ಕಾಳಭೈರವ ಪಂಥಕ್ಕೂ, ಮೈಲಾರ ಪಂಥಕ್ಕೂ ಅವಿನಾಭಾವ ಸಂಬಂಧಗಳಿವೆ. ಭೈರವನ ಆರಾಧಕರಾದ ಪಾಶುಪತ ಕಾಳಾಮುಖರಿಗೂ, ಮೈಲಾರನ ಆರಾಧಕರಾದ ಗೊರವರಿಗೂ ಯಾವುದೇ ವ್ಯತ್ಯಾಸವಿರಲಿಲ್ಲವೆಂದು ತೋರುತ್ತದೆ. "ಗೊರವರ್ ಕಾಳಾಮುಖರ್ ನೈಷ್ಠಿಕರ್ ಎನಿಸಿದೊಡಂ" [೧೦] ಎನ್ನುವುದು ಇವರ ಸಂಬಂಧಗಳು ಮತ್ತು "ಬ್ರಾಹ್ಮಣರಿಗಲ್ಲದೆ ಗೊರವುಗಳಿಗೆ ಸಲ್ಲದು ಬ್ರಾಹ್ಮಣ ಪೂಜೆ" [೧೧] ಎನ್ನುವ ಮಾತುಗಳು ಬ್ರಾಹ್ಮಣರು ಕಾಳಾಮುಖರಲ್ಲಿ ಘರ್ಷಣೆಗಳು ಆರಂಭವಾದುದು ಸ್ಪಷ್ಟಗೊಳ್ಳುತ್ತವೆ. ನಾಥಪಂಥದ ವಾಮಾಚಾರದ ಆಚರಣೆಗಳೆಲ್ಲವೂ ಮೈಲಾರನಿಗಿದ್ದುದರಿಂದ ನಾಥ ಎನ್ನುವ ಹೆಸರೂ ಇವನಿಗೆ ಪ್ರಾಪ್ತವಾಯಿತು.

ವಿಜಯನಗರ ಪೂರ್ವದಲ್ಲಿ ಮೈಲಾರನ ಆರಾಧನೆ

ಹಂಪೆ ಪರಿಸರದಲ್ಲಿ ೯-೧೨ನೆಯ ಶತಮಾನದಲ್ಲಿ ಕಾಳಾಮುಖ ಪರಂಪರೆ ದಟ್ಟವಾಗಿ ಹರಡಿತ್ತು. ಇವರು ವಾಮಾಚಾರದ ಮೂಲಕ ಶಿವನನ್ನು ಆರಾಧಿಸುತ್ತಿದ್ದರು. ವೈದಿಕ ಆಚರಣೆಗಳನ್ನೂ ಅಳವಡಿಸಿಕೊಂಡಿದ್ದರು. ಭೈರವಿ, ತ್ರಿಪುರಾ, ಕರಾಳೀ, ಕಾಳೀ, ಶ್ಮಶಾನತಲವಾಸಿನೀ ಎಂದು ಪ್ರಸಿದ್ಧಳಾದ ಭದ್ರಕಾಳಿಯ ಆರಾಧಕರಾಗಿದ್ದರು. ಇವರ ಪ್ರಧಾನ ದೇವತೆ ಭೈರವ. ಹೀಗಾಗಿ ಪ್ರಸಿದ್ಧ ಶೈವ ಕ್ಷೇತ್ರವಾದ ಹಂಪೆಯಲ್ಲಿ ಮೊದಲು ಕಾಣಿಸಿಕೊಂಡಿರುವುದು ಮಹಾಕಾಳಭೈರವ. ಪಂಪಾತೀರ್ಥದ ಮಹಾಕಾಳ ದೇವರೆಂದಿರುವುದು ಇಡೀ ಹಂಪೆಯಲ್ಲಿಯೆ ಪ್ರಧಾನ ದೇವತೆಯಾಗಿದ್ದುದನ್ನು ಸೂಚಿಸುತ್ತದೆ. ಮುಂದೆ ಮೂರು ವರ್ಷ ಕಳೆಯುವುದರೊಳಗೆ ಈ ಪರಿಸರದಲ್ಲಿ ಮೈಲಾರನ ಉಲ್ಲೇಖ ಕಾಣಿಸಿಕೊಳ್ಳುತ್ತದೆ. ಮೈಲಾರನ ಕ್ಷೇತ್ರವೆಂದೇ ಪ್ರಸಿದ್ಧವಾದ ಮಲ್ಲಯ್ಯನ ಗುಡ್ಡದ (ಶಿರುಗುಪ್ಪ ತಾ.) ಕ್ರಿ.ಶ. ೧೧೧೭ರ ಶಾಸನದಲ್ಲಿ ಕಲ್ಯಾಣ ಚಾಲುಕ್ಯ ಅರಸ ಜಗದೇಕ ಮಲ್ಲನ ಮಹಾಮಂಡಳೇಶ್ವರ ಇರುವ ನೊಳಂಬನೆಂಬುವನು ನೊಳಂಬವಾಡಿ-೩೨೦೦೦, ಕದಂಬಳಿಗೆ-೧೦೦೦, ಕೋಗಳಿ-೫೦೦, ಬಲ್ಲಕುಂದೆ-೩೦೦, ಕುದಿಯ ಪರವಿ-೭೦, ಕರವಿಡಿ-೩೦ನ್ನು ಆಳುತ್ತಿರುವಾಗ ಬಲ್ಲಕುಂದೆ ಮುನ್ನೂರರೊಳಗಿನ ಪಗರೆಯ ತಡಿಯ ಸಿರಿಯನೂರನ್ನು ಶ್ರೀಮತ್ ಮೈಲಾರ ದೇವರಿಗೆ ಕೊಟ್ಟಿದ್ದಾನೆ.[೧೨]

ಈ ಪ್ರದೇಶಕ್ಕೆ ಹತ್ತಿರದಲ್ಲಿರುವ ದೇವಿ ಹೊಸೂರಿ (ಹಾವೇರಿ ಜಿಲ್ಲೆ)ನ ಕ್ರಿ.ಶ. ೧೦೬೩ರ ಶಾಸನದಲ್ಲಿ ಮೈಲಾರನ ಹೆಂಡತಿ ಮಾಳಸದೇವಿಯ ಉಲ್ಲೇಖ ಬರುತ್ತದೆ. ಅಂಘರಕ್ಕೆ ಇಂದಪಯ್ಯ ನಾಯಕನು ದೆಯ್ವದ ಪೊಸವೂರಿನಲ್ಲಿಯ ಮಾಳದೇಟಿಗೆ ತೋರಣ ಮಾಡಿಸಿದ್ದಾನೆ.[೧೩] ಪ್ರಸ್ತುತ ಬನಶಂಕರಿ ದೇವಿಯೆಂದು ಕರೆಯುವ ಇವಳು ಮೈಲಾರನ ಹೆಂಡತಿ ಮಾಳಸದೇವಿಯೇ ಇರಬೇಕು. ಇವಳನ್ನು ಗ್ರಾಮದೇವತೆಯೆಂದು ಆರಾಧಿಸುವ ಪರಿಪಾಟವೂ ಇದ್ದಂತೆ ತೋರುತ್ತದೆ.

ಹಂಪೆ ಪರಿಸರದಲ್ಲಿ ಕಾಳಾಮುಖ ಪರಂಪರೆಗೆ ಸೇರಿದ ಎಕ್ಕೋಟಿ ಚಕ್ರವರ್ತಿ ಮಠಗಳಿದ್ದವು. ಇಲ್ಲಿ ಭೈರವನ ಸ್ಥಳದಲ್ಲಿ ಮೈಲಾರನ ಆರಾಧನೆ ಬಂದದ್ದು ಸ್ಪಷ್ಟಗೊಳ್ಳುತ್ತದೆ. ಕ್ರಿ.ಶ. ೧೧೪೧ರ ಸಿಂದಗೆರೆ ಶಾಸನದಲ್ಲಿ ನಿರ್ವಾಣಿ ದೇವನ ಉಲ್ಲೇಖ ಬರುತ್ತದೆ.[೧೪] ಇವನು ಎಕ್ಕೋಟಿ ಚಕ್ರವರ್ತಿ ಮಠಕ್ಕೆ ಒಡೆಯನಾಗಿದ್ದ. ದಶಬ್ರಹ್ಮರಾಯ ಮತ್ತು ನಾಗಲಾದೇವಿಯರ ಮಗನಾದ ಪ್ರಿಥ್ವಿದೇವ ಕೊಟ್ಟೂರಿನ ಸೋಮೇಶ್ವರ ದೇವರ ಸ್ಥಾನಾಚಾರ್ಯ ಖಿಳೇಶ್ವರ ಪಂಡಿತರ ಶಿಷ್ಯನಾಗಿದ್ದು[೧೫] ಮುಂದೆ ನಿರ್ವಾಣಿ ದೇವನೆಂದು ಹೆಸರು ಪಡೆದು ಮುಳಗುಂದದ ಸ್ವಯಂಭುದೇವರ, ಸಿಂದಗೆರೆಯ ಮಲ್ಲಿಕಾರ್ಜುನ ದೇವರ ಸ್ಥಾನಾಚಾರ್ಯನಾಗಿ ಎಕ್ಕೋಟಿ ಚಕ್ರವರ್ತಿ ಮಠಕ್ಕೆ ಅಧಿಪತಿಯಾಗುತ್ತಾನೆ. ಈ ಪರಂಪರೆಗೆ ಸೇರಿದ ಇಬ್ಬರು ಸ್ಥಾನಾಚಾರ್ಯರ ಹೆಸರುಗಳನ್ನು ಶಾಸನ ಉಲ್ಲೇಖಿಸುತ್ತದೆ. ಅವರು "ಕಾಳಾಮುಖ ಸಮಯಸಮುದ್ಧರಣರುಂ ಪರವಾದಿ ಮದನ ಮಹೇಶ್ವರರು ಮಪ್ಪಮುಳಗುನ್ದದ ಶ್ರೀ ಸ್ವಯಂಬುದೇವರಾಚಾರ್ಯ್ಯರೆಕ್ಕೋಟಿ ಚಕ್ರವರ್ತ್ತಿ ವಾಮದೇವರ ಶಿಷ್ಯರಪ್ಪ ಶ್ರೀಮತ್ರಿಲೋಚನದೇವರ ಶಿಷ್ಯರಪ್ಪ ನಿರ್ವಾಣಿದೇವರೆಂದಿದೆ." "ಇದು ಎಕ್ಕೋಟಿ ಚಕ್ರವರ್ತಿಮಠ" ಎನ್ನುವುದರಿಂದ ಈ ಮಠ ಸಿಂದಗೆರೆಯಲ್ಲಿಯೇ ಇದ್ದಿರಬೇಕು.

ಕುಡತಿನಿಯ ಕ್ರಿ.ಶ. ೧೨೦೭ ಮತ್ತು ೧೨೧೦ರ ಶಾಸನಗಳಲ್ಲಿ ಎಕ್ಕೋಟಿ ತಪೋಧನ ಉಲ್ಲೇಖಗಳಿವೆ. ಒಂದರಲ್ಲಿ ತಪೋವನಾಧಿಪತಿ ವಿಷ್ಣುಕರದೆವ, ಐದುವರ್ಗದವರು, ಏಳ್ಕೋಟಿ ತಪೋಧನರು, ಬಣಜಿಗರು ಮಹಾಸಭೆಯಾಗಿ ನೆರೆದು ನಾಗೇಶ್ವರ ದೇವರಿಗೆ ಗಾಣ, ಭೂಮಿ ದಾನ ಮಾಡಿದ್ದಾರೆ.[೧೬] ಇನ್ನೊಂದರಲ್ಲಿ ವಿಷ್ಣುಕರ ಬ್ರಹ್ಮಚಾರಿ, ಸ್ಥಾನದಯ್ದುವರ್ಗ, ಏಳ್ಕೋಟಿ ಮಹಾದೇವರು, ಮುಮ್ಮುರಿದಂಡಗಳು ಸೇರಿ ಊರಿಗೆ ಅನ್ಯಾಯ ಅವಾಂತರಗಳು ಬಂದರೆ ಅದನ್ನು ಸ್ಥಾನಿಕರು, ತಪೋಧನರ ಸಂಮತ ನಡೆಯುವಂತದ್ದೆಂದು ಕಟ್ಟುಪಾಡು ಮಾಡಿದ್ದಾರೆ.[೧೭]

ಬೆಣ್ಣೆಹಳ್ಳಿಯ ಕ್ರಿ.ಶ. ೧೨೮೦ರ ಶಾಸನದಲ್ಲಿ "ಶ್ರೀ ಬಾಳೇಶ್ವರ ದೇವರ ದಿಬ್ಬ ಶ್ರೀ ಪಾದಪದ್ಮರಾಧಕರುಮಪ್ಪ ಕೋಗಳಿಯೈಯ್ನುರರ ಏಳುಕೋಟಿ ಸಮೆಯ ಚಕ್ರವರ್ತ್ತಿ ಶ್ರೀಮನು ಮಹಾಮಂಡಳಾಚಾರ್ಯ ರಾಜಗುರು ಖಿಳೇಶ್ವರ ದೇವರೆಂದು ಉಲ್ಲೇಖವಿದೆ."[೧೮] ಇವೆಲ್ಲವನ್ನು ಗಮನಿಸಿದರೆ ಮೈಲಾರನ ಪರಂಪರೆ ೧೧-೧೩ನೆಯ ಶತಮಾನದಲ್ಲಿ ಆರಂಭವಾಗಿ ಕಾಳಾಮುಖರಿಂದ ಇನ್ನೂ ಪ್ರಚಾರ ಗಿಟ್ಟಿಸಿಕೊಳ್ಳಲು ಕಾರಣವಾಯಿತು.

ವಿಜಯನಗರ ಕಾಲದ ಮೈಲಾರನ ಆರಾಧನೆ

ಈ ಅವಧಿಯಲ್ಲಿ ಮೈಲಾರ ದೇವರಿಗೆ ರಾಜಾಶ್ರಯ ದೊರೆತು ವಿಜಯನಗರ ಅರಸರು ಮತ್ತು ಅಧಿಕಾರಿಗಳು ಅನೇಕ ದಾನದತ್ತಿಗಳನ್ನು ನೀಡಿದ್ದಾರೆ. ಈ ಪರಿಸರದ ಮಲ್ಲಯ್ಯನಗುಡ್ಡ, ಹಿರೆಮೈಲಾರ ಮತ್ತು ಹಂಪೆಗಳಲ್ಲಿ ಮೈಲಾರನಿಗೆ ಸಂಬಂಧಪಟ್ಟ ಶಾಸನಗಳಿವೆ.

ಮಲ್ಲಯ್ಯನಗುಡ್ಡ

ತೆಕ್ಕಲಕೋಟೆ ಹತ್ತಿರ ಪೂರ್ವಕ್ಕೆ ೨ ಕಿ.ಮೀ. ದೂರದಲ್ಲಿ ಮಲ್ಲಯ್ಯನ ಗುಡ್ಡವಿದೆ. ಅದರ ಮೇಲಿರುವ ಹರಿಮಲ್ಲಯ್ಯ ದೇವಾಲಯ ಮೈಲಾರ ಪರಂಪರೆಗೆ ಸೇರಿದುದು. ಕಲ್ಯಾಣ ಚಾಲುಕ್ಯರ ಶೈಲಿಯಲ್ಲಿರುವ ಇದು ವಿಶಾಲವಾದ ಆವರಣದಲ್ಲಿ ಗರ್ಭಗೃಹ, ಪ್ರದಕ್ಷಿಣಾಪಥ, ಸಭಾಮಂಟಪ, ಮಹಾಮಂಟಪಗಳಿಂದ ಕೂಡಿದೆ. ಈ ಮಹಾಮಂಟಪಕ್ಕೆ ಹೊಂದಿಕೊಂಡು ಎದುರಿಗೆ ಈಶ್ವರ ದೇವಾಲಯವಿದೆ. ಮುಖ್ಯಗರ್ಭಗೃಹದಲ್ಲಿ ಮಲ್ಲಯ್ಯನ ಶಿಲ್ಪ ಸು. ೪ ಅಡಿ ಎತ್ತರವಾಗಿದೆ. ಕೈಗಳಲ್ಲಿ ತ್ರಿಶೂಲ-ಡಮರು, ಕಿರುಗತ್ತಿ-ಪಾನಪಾತ್ರೆಗಳಿವೆ. ಕೆಳಭಾಗ ಬೃಂಗಿಶಿಲ್ಪವಿದೆ. ಈ ಗರ್ಭಗೃಹದ ಮುಂಭಾಗ ಇಕ್ಕೆಲಗಳಲ್ಲಿರುವ ಚಿಕ್ಕಗರ್ಭಗೃಹಗಳಲ್ಲಿ ಎಡಬದಿ ಗಂಗಿಮಾಳಮ್ಮ ಬಲಬದಿ ಲಕ್ಷ್ಮಿ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಗಂಗಿಮಾಳಮ್ಮನ ಕೈಗಳಲ್ಲಿ ತ್ರಿಶೂಲ-ಡಮರು, ಖಡ್ಗ-ಪಾನಪಾತ್ರೆಗಳಿವೆ. ದೇವಾಲಯದ ಮುಂಭಾಗ ಶಿಬಾರಕಟ್ಟೆ ಮತ್ತು ದೀಪಸ್ತಂಭಗಳಿವೆ. ಪ್ರಾಕಾರಕ್ಕೆ ಎರಡು ಪ್ರವೇಶದ್ವಾರಗಳಿದ್ದು ಪೂರ್ವದ ದ್ವಾರಕ್ಕೆ ವಿಜಯನಗರ ಕಾಲದ ಗೋಪುರವಿದೆ.

ಈ ದೇವಾಲಯದಲ್ಲಿರುವ ಶಿಲ್ಪಗಳಿಗೆ ಭೈರವ ಭೈರವಿಯ ಲಕ್ಷಣಗಳಿದ್ದರೂ ಶಾಸನಗಳು ಅವನನ್ನು ಮೈಲಾಗನೆಂದು ಕರೆದಿವೆ. ಇದರಿಂದ ಎರಡೂ ದೇವತೆಗಳನ್ನು ಜನರು ಒಂದೇ ರೂಪದಲ್ಲಿ ಕಾಣುತ್ತಿದ್ದರು. ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದ ಈ ದೇವಾಲಯವನ್ನು ೧೭ನೆಯ ಶತಮಾನದವರೆಗೂ ಜೀರ್ಣೋದ್ಧಾರಗೊಳಿಸಲಾಗಿದೆ. ಈ ಪ್ರದೇಶದ ಶಾಸನೋಕ್ತ ಪ್ರಾಚೀನ ಮೈಲಾರ ದೇವಾಲಯ ಇದಾಗಿದ್ದು ಇಂದಿನವರೆಗೂ ಆಚರಣೆ ಉತ್ಸವಗಳು ಮುಂದುವರೆದುಕೊಂಡು ಬಂದಿವೆ. ಚಾಳುಕ್ಯರ ಕಾಲದಲ್ಲಿ ಇರುವ ನೊಳಂಬನೆಂಬ ಮಹಾಮಂಡಳೇಶ್ವರ ಹಗರಿಯ ನದಿದಂಡೆಯ ಮೇಲಿರುವ ಸಿರಿಯನೂರನ್ನು ಈ ಮೈಲಾರ ದೇವರಿಗೆ ದಾನ ನೀಡಿದ್ದಾನೆ.[೧೯] ಕ್ರಿ.ಶ. ೧೫೩೮ರಲ್ಲಿ ಅಚ್ಯುತರಾಯ ಮಹಾರಾಯರಿಗೆ ಪುಣ್ಯವಾಗಬೇಕೆಂದು ಪಯಜರ್ಯನವರು ಹರವಿನ ದೇವರಿಗೆ ಪೂರ್ವಾರ್ಧದಲ್ಲಿ ನೈವೇದ್ಯ, ಅಮೃತಪಡಿಗೆ ಬಿಟ್ಟ ದಾನವನ್ನು ಪುನಃ ದತ್ತಿ ನೀಡುತ್ತಾನೆ.[೨೦] ದಕ್ಷಿಣದ್ವಾರದ ಮುಂಭಾಗ ಗುಡ್ಡದ ಬಂಡೆಯ ಮೇಲಿರುವ ವಿಗ್ರಹದ ಕೆಳಗೆ ಏಳುಕೋಟಿ ಪದದರಸನಿಗೆ ಮೂರು ಹೊನ್ನು ದಾನ ನೀಡಿದ ಉಲ್ಲೇಖವಿದೆ.[೨೧] ಕ್ರಿ.ಶ. ೧೨೦೧ರ ಶಾಸನದಲ್ಲಿ ಮಹಾರಾಜ

ಭೀಮಸಿಂಗಹಡೆ ಕಲ್ಲುದ್ವಾರವಟ್ಟವನ್ನು ನಿರ್ಮಿಸುತ್ತಾನೆ. ಇದರಲ್ಲಿ ಈ ದೇವರನ್ನು ಹರವಿನ ಲಿಂಗಪ್ಪ ಎಂದು ಕರೆಯಲಾಗಿದೆ.[೨೨]

ಮೇಲಿನ ಉಲ್ಲೇಖಗಳನ್ನು ಗಮನಿಸಿದರೆ ೧೧ನೆಯ ಶತಮಾನದ ಮುಂಚೆಯೇ ಆರಂಭವಾದ ಮೈಲಾರನ ಆರಾಧನೆ ಮತ್ತು ಅವನಿಗೆ ಮೈಲಾರ, ಏಳುಕೋಟಿ ಪದದರಸ, ಹರವಿನ ಲಿಂಗಪ್ಪ ಮುಂತಾದ ಹೆಸರುಗಳಿಂದ ಕರೆದಿರುವುದು ತಿಳಿಯುತ್ತದೆ.

ಹಿರೆಮೈಲಾರ

ಹಡಗಲಿ ತಾಲೂಕಿನ ತುಂಗಭದ್ರಾ ನದಿದಂಡೆಯ ಮೇಲಿರುವ ಈ ಗ್ರಾಮ ಹಿರೆಮೈಲಾರ ಎಂದೇ ಹೆಸರುವಾಸಿಯಾಗಿದೆ. ಅಲ್ಲಿರುವ ಮೈಲಾರ ದೇವಾಲಯ ಚಾಳುಕ್ಯರ ಕಾಲದಲ್ಲಿ ನಿರ್ಮಾಣವಾದದ್ದು. ಅದು ಗರ್ಭಗೃಹ, ಅಂತರಾಳ, ಸಭಾಮಂಟಪ ಮತ್ತು ಮುಖಮಂಟಪಗಳಿಂದ ಕೂಡಿದೆ. ಹುತ್ತದ ಮಣ್ಣಿನಿಂದ ತಯಾರಿಸಿದ್ದೆಂದು ಹೇಳುವ ಮೃಣ್ಮಯ ಮೈಲಾರನ ಮೂರ್ತಿ ಅದರ ಮುಂಭಾಗ ಉದ್ಭವ ಲಿಂಗಗಳು ಗರ್ಭಗೃಹದಲ್ಲಿವೆ. ಈ ದೇವಾಲಯದ ಪ್ರಾಕಾರದಲ್ಲಿ ವೀರಭದ್ರ, ಗಂಗಿಮಾಳಮ್ಮ, ಹಳೆಯ ಜುಂಜಯ್ಯ, ತುಪ್ಪದ ಮಾಳಮ್ಮನ ಗುಡಿಗಳಿವೆ. ವಿಜಯನಗರ ಕಾಲದಲ್ಲಿ ಹೆಚ್ಚು ಅಭಿವೃದ್ಧಿ ಹೊಂದಿದ ದೇವಾಲಯವನ್ನು ಪ್ರಾಮುಖ್ಯತೆಗನುಗುಣವಾಗಿ ವಿಸ್ತರಿಸುತ್ತ ಬರಲಾಯಿತು.

ಕ್ರಿ.ಶ. ೧೪೧೨ರಲ್ಲಿ ಮೈಲಾರ ದೇವರ ಭಂಡಾರಿಯಾದ ನಾಗರಸನ ಮಗ ಗಂಗರಸನು ಮಾಳಲದೇವಿಗೆ ಸುಖನಾಸಿ, ನವರಂಗ ಮಂಟಪವನ್ನು ಮತ್ತು ಕ್ರಿ.ಶ. ೧೪೧೩ರಲ್ಲಿ ಇದೇ ಗಂಗರಸ ಶ್ರೀ ಹೆಗ್ಗಡೆಯವರ ಶಿಲಾಮಂಟಪವನ್ನು ಕಟ್ಟಿಸುತ್ತಾನೆ.[೨೩] ಕ್ರಿ.ಶ. ೧೪೪೮ರಲ್ಲಿ ಪ್ರೌಢದೇವರಾಯನ ನಿರೂಪದಂತೆ ಗಂಗರಸ ಶಿಲಾರಂಗ ಮಂಟಪವನ್ನು ಕಟ್ಟಿಸುತ್ತಾನೆ.[೨೪] ಅಲ್ಲದೆ ಅವನು ಮೈಲಾರ ದೇವರ ನಿಜಭಕ್ತನೆಂದು ಹೇಳಿಕೊಂಡಿದ್ದಾನೆ. ಮಾಳಲದೇವಿಯ ವಿಗ್ರಹದ ಅಡಿಯಲ್ಲಿರುವ ಕ್ರಿ.ಶ. ೧೫೫೧ರ ಶಾಸನ ಮೈಲಾರ ಉತ್ಸವವನ್ನು ಉಲ್ಲೇಖಿಸುತ್ತದೆ.[೨೫] ಈ ಮೂರ್ತಿಯ ಹಿಂಬದಿಯಲ್ಲಿ ಸೆಟ್ಟಿಯ ಮಗ ನಕರಸಯ್ಯ ಆತನ ಹೆಂಡತಿ ಬಸವಮ್ಮಳು ಇಬ್ಬರೂ ಮಾಡಿಸಿದರೆಂದಿದೆ. ತೇದಿ ಇಲ್ಲದ ರಂಗಮಂಟಪದ ಕಂಬದಲ್ಲಿರುವ ಶಾಸನ ಈ ಮೈಲಾರನನ್ನು ಮಲ್ಲಾರಿ ಶಂಕರನೆಂದು ಕರೆದಿದೆ.[೨೬] ಇನ್ನೊಂದು ಕಂಬದ ಮೇಲಿರುವ ಶಾಸನ ಮಾಲಚಿಪತಿ ಎಂದು ಕರೆದು ಗಂಗಣನು ಈ ದೇವರಿಗೆ ಹೊಸದಾಗಿ ಚಿತ್ರತೋರಣ, ವಾತಾಯನ ಹಾಗೂ ವಿವಿಧ ದೇವತೆಗಳನ್ನೊಳಗೊಂಡ ಮಂಟಪವೊಂದನ್ನು ರಚಿಸಿದನೆಂದಿದೆ.[೨೭] ಈ ಗ್ರಾಮದ ಮೈಲಾರನ ಆರಾಧನೆ ಮತ್ತು ಉತ್ಸವ ೧೫ನೆಯ ಶತಮಾನದಿಂದ ಹೆಚ್ಚು ಪ್ರಚಾರಕ್ಕೆ ಬಂದಂತೆ ಕಾಣುತ್ತದೆ. ಇದಕ್ಕಿಂತ ಪೂರ್ವದ ಶಾಸನಗಳು ಈ ಗ್ರಾಮದಲ್ಲಿದ್ದರೂ ಮೈಲಾರ ದೇವತೆಯ ಬಗ್ಗೆ ಮೌನವಹಿಸಿವೆ.

ಇಲ್ಲಿ ಮೈಲಾರನ ದೇವಾಲಯ ಮತ್ತು ಆರಾಧನೆ ಆಚರಣೆ ಇತ್ತೇ ಎಂಬುವುದು ಜಿಜ್ಞಾಸೆಯನ್ನುಂಟುಮಾಡುತ್ತದೆ. ಪ್ರಾಚೀನ ಕಾಲದಲ್ಲಿದ್ದ ಭೈರವನ ಆರಾಧನೆ ವಿಜಯನಗರ ಕಾಲದಲ್ಲೂ ಮುಂದುವರೆಯುತ್ತದೆ. ಹಂಪೆಯಲ್ಲಿ ಅನೇಕ ಬಂಡೆಗಳ ಮೇಲೆ ಭೈರವನ ಶಿಲ್ಪಗಳು ಕಾಣುತ್ತವೆ. ಇದರೊಂದಿಗೆ ಮೈಲಾರನಿಗೆ ಸಂಬಂಧಿಸಿದ ಶಾಸನಗಳು ಅಲ್ಲಲ್ಲಿ ಕಂಡುಬರುತ್ತವೆ.

ಮೈಲಾರನ ಆರಾಧನೆ ಮಾಲ್ಯವಂತ ಪರ್ವತ, ಅದರ ಸುತ್ತಮುತ್ತಲಿದ್ದುದು ಶಾಸನಗಳು ಸ್ಪಷ್ಟಪಡಿಸುತ್ತವೆ. ಮಲಗು ಬಸವಣ್ಣ ದೇವಾಲಯದ ಉತ್ತರಕ್ಕೆ ಬಂಡೆಯ ಮೇಲೆ ಒಂದು ಶಾಸನದಲ್ಲಿ "ಮೈಲಾರ ದೇವರ ತೀರ್ಥ" ಎಂದೂ ಇನ್ನೊಂದರಲ್ಲಿ "ಮಾಲ್ಯವಂತ ಪರ್ವತದ ಶ್ರೀ ಮೈಲಾರ ದೇವರು" ಎಂದು ಕರೆದಿವೆ.[೨೮] ಅಲ್ಲಿರುವ ಇನ್ನೂ ಎರಡು ಶಾಸನಗಳಲ್ಲಿ ಮಾಲ್ಯವಂತ ತೀರ್ಥ ಎಂಬ ಉಲ್ಲೇಖಗಳಿವೆ.[೨೯] ಇದರಿಂದ ಮಾಲ್ಯವಂತ ಪರ್ವತ ಎರಡಿದ್ದವೆಂದು ವಿದ್ವಾಂಸರನ್ನು ಗೊಂದಲಕ್ಕೀಡುಮಾಡಿದ್ದುಂಟು.[೩೦] ಮಾಲ್ಯವಂತ ಎಂಬ ಹೆಸರು ಮಲಯವಂತ (ಶಿವ)ನಿಂದ ಬಂದಿರಬೇಕು. ಮಲೆಮಲ್ಲೇಶ್ವರ, ಮಲಯವಂತ, ಮಾಲ್ಯವಂತ ಎನ್ನುವುದು ಬೆಟ್ಟದಲ್ಲಿ ಆರಾಧನೆಗೊಳ್ಳುವ ಶಿವನ ಹೆಸರು. ಈಗಿನ ಮಾಲ್ಯವಂತ ಪರ್ವತದಲ್ಲಿ ರಘುನಾಥ ದೇವಾಲಯ ನಿರ್ಮಾಣವಾಗುವ ಮುಂಚೆಯೇ ಶೈವ ಆರಾಧನೆ ಇದ್ದದ್ದು ಅಲ್ಲಿಯ ಅವಶೇಷಗಳು ಸ್ಪಷ್ಟಪಡಿಸುತ್ತವೆ. ಅದರಲ್ಲೂ ಮಾಲ್ಯವಂತ ಪರ್ವತದ ಮೈಲಾರ ದೇವರೆನ್ನುವುದರಿಂದ ಇಲ್ಲಿ ಮೈಲಾರನ ಆರಾಧನೆ ಇರಬೇಕು.

ಹಂಪೆಯಲ್ಲಿರುವ ಮತಂಗ, ಅಂಜನಾದ್ರಿ, ಋಷ್ಯಮುಖ ಮೊದಲಾದ ಪರ್ವತಗಳಂತೆ ಮಾಲ್ಯವಂತ ಪರ್ವತವೂ ಒಂದು. ಉಳಿದ ಪರ್ವತಗಳು ಒಂದೊಂದಿದ್ದು ಈ ಹೆಸರಿನ ಎರಡು ಪರ್ವತಗಳಿರಲು ಕಾರಣವೇನು ಎನ್ನುವುದು ಸಂಶಯಕ್ಕೆಡೆ ಮಾಡುತ್ತದೆ. ಬೇರೆ ಸ್ಥಳದಲ್ಲಿ ಈ ಪರ್ವತದ ಹೆಸರಿನ ಶಾಸನಗಳು ಕಂಡುಬಂದರೆ ಅದು ಮಾಲ್ಯವಂತ ಪರ್ವತವೆಂದು ಕರೆಯುವುದು ಕೂಡ ಅಷ್ಟು ಸಮಂಜಸವೆನಿಸುವುದಿಲ್ಲ. ಇಲ್ಲಿರುವ ಒಂದೇ ಹೆಸರಿನ ದೇವತೆಗಳು ಬೇರೆಬೇರೆ ಸ್ಥಳದಲ್ಲಿರುವಂತೆ ಪರ್ವತಗಳು ಕಾಣಿಸುವುದಿಲ್ಲ. ಇದರಿಂದ ವಿರೂಪಾಕ್ಷ-ವೀರಭದ್ರ, ಆಂಜನೇಯನ ಹೆಚ್ಚಿನ ಸಂಖ್ಯೆಯಲ್ಲಿರುವಂತೆ ಮೈಲಾರನ ತೀರ್ಥ ಮತ್ತು ದೇವತೆಯನ್ನು ವಿವಿಧ ಸ್ಥಳಗಳಲ್ಲಿ ಆರಾಧಿಸುತ್ತಿರಬಹುದು. ಆದರೆ ಮಾಲ್ಯವಂತ ಪರ್ವತದ ಮೈಲಾರನೆ ಇಲ್ಲಿ ಪ್ರಮುಖನಾಗುತ್ತಾನೆ. ವಿರೂಪಾಕ್ಷನ ಹೆಸರಿನ ಶಾಸನಗಳು ಹಂಪೆ ಮತ್ತು ವಿವಿಧ ಸ್ಥಳಗಳಲ್ಲಿ ಕಂಡುಬರುತ್ತವೆ. ಅವು ಪಂಪಾತೀರ್ಥದ ವಿರೂಪಾಕ್ಷನೆಂದು ಸ್ಪಷ್ಟವಾಗಿ ಈಗಿನ ವಿರೂಪಾಕ್ಷನಿಗೆ ಕರೆದಿರುವಂತೆ ಮೈಲಾರನಿಗೂ ಇದೇ ರೀತಿಯಾಗಿರಲು ಸಾಧ್ಯತೆಗಳಿವೆ.

ಮಾಲ್ಯವಂತ ಪರ್ವತದ ಹತ್ತಿರದಲ್ಲಿ ಬಂಡೆಯ ಮೇಲೆ "ಶ್ರೀ ಹರವಿನ ಮಲ್ಲಯ್ಯ".... ಎಂದು ಉಲ್ಲೇಖಿಸುವ ಶಾಸನವಿದೆ.[೩೧] ಈ ಪರ್ವತದ ಮೇಲ್ಭಾಗ ನಂದಿ ಶಿವಲಿಂಗಗಳು, ಬೆಟ್ಟದ ಸುತ್ತಮುತ್ತಲೂ ಭೈರವ, ಶಿವ, ಗಣೇಶ ಮೊದಲಾದ ಶಿಲ್ಪಗಳು ಅಲ್ಲಲ್ಲಿ ಕಂಡುಬರುತ್ತವೆ. ಒಂದು ಗುಂಡಿನ ಮೇಲೆ ಕೈಗಳಲ್ಲಿ ತ್ರಿಶೂಲ, ಪಾನಪಾತ್ರೆ ಹಿಡಿದು ಕೆದರಿದ ಜಟೆ, ಆಭರಣಗಳನ್ನು ಧರಿಸಿದ ಶಿಲ್ಪವಿದೆ. ಮಂಜುನಾಥಯ್ಯ ಅವರು ಗುರುತಿಸಿದಂತೆ ಮೈಲಾರನದಾಗಿರಬಹುದು.[೩೨] ಏಣಿ ಆಂಜನೇಯ ದೇವಾಲಯದ ಗೋಡೆಗೆ ಇನ್ನೊಂದು ಸು. ೫ ಅಡಿ ಎತ್ತರದ ಶಿಲ್ಪವಿದೆ. ಇದು ಕೆದರಿದ ಜಟೆ, ರುಂಡಮಾಲಾ, ಪಾದರಕ್ಷೆಗಳನ್ನು ಧರಿಸಿ ಕೈಗಳಲ್ಲಿ ತ್ರಿಶೂಲ-ಡಮರು, ಖಡ್ಗ-ಪಾನಪಾತ್ರೆಗಳನ್ನು ಹಿಡಿದಿದೆ. ಪಾನಪಾತ್ರೆ ಕೆಳಗೆ ಇಳಿಬಿದ್ದ ರುಂಡವನ್ನು ನಾಯಿ ಹಿಡಿಯಲು ನೆಗೆಯುತ್ತಿರುವಂತಿದೆ. ಎಡಭಾಗದಲ್ಲಿ ಒಂದು ಚಿಕ್ಕಶಿಲ್ಪ, ಬಲಭಾಗ ಮತ್ತು ಮೇಲ್ಭಾಗ ಹಾವುಗಳು, ಪಾದದ ಕೆಳಗೆ ಒಂದು ದೊಡ್ಡ ಚೇಳು ಅದರ ಮುಂದೆ ಇನ್ನೊಂದು ಚಿಕ್ಕ ಚೇಳುಗಳಿವೆ. ಇದು ತಾಂತ್ರಿಕ ಇಲ್ಲವೆ ನಾಥಪಂಥಕ್ಕೆ ಸೇರಿದ ಭೈರವನ ಶಿಲ್ಪವೆಂದು ಗುರುತಿಸಿದರೂ ಕೆಲವು ಸಲ ಭೈರವನನ್ನು ಮೈಲಾರನೆಂದು ಆರಾಧಿಸುವ ಪರಿಪಾಟವಿತ್ತು. ಇದಕ್ಕೆ ಪೂರಕವೆಂಬಂತೆ ಈ ದೇವಾಲಯದ ಒಳಗೆ ನಾಗ, ಗಣೇಶ ಶಿಲ್ಪಗಳೊಂದಿಗೆ ತ್ರಿಶೂಲದ ಬಿಡಿ ಭಾಗವಿದೆ. ಈ ತ್ರಿಶೂಲ ಮೈಲಾರನ ಶಿಬಾರಕಟ್ಟೆಯ ಮೇಲಿರುವಂತದ್ದು. ಹತ್ತಿರದಲ್ಲಿ ಎಲ್ಲೋ ಶಿಬಾರಕಟ್ಟೆ ಇರಬೇಕು. ಅದು ಹಾಳಾದಾಗ ಅದರ ತ್ರಿಶೂಲವನ್ನು ದೇವಾಲಯದಲ್ಲಿ ತಂದಿರಿಸಿರುವಂತೆ ಕಾಣುತ್ತದೆ. ಈ ಎಲ್ಲ ಅವಶೇಷಗಳಿಂದ ಹಂಪೆಯಲ್ಲಿ ಮೊದಲು ಭೈರವ ನಂತರ ಮೈಲಾರನ ಆರಾಧನೆ ಪ್ರಮುಖವಾಗಿ ಗೋಚರಿಸುತ್ತದೆ.

ಮೇಲಿನ ಉಲ್ಲೇಖಗಳಿಂದ ಈ ಪರಿಸರದಲ್ಲಿ ೧೧ನೆಯ ಶತಮಾನದಲ್ಲಿ ಮೈಲಾರನ ಆರಾಧನೆ, ಉತ್ಸವ ಇದ್ದು ಎಕ್ಕೋಡಿ ಚಕ್ರವರ್ತಿಮಠ, ಅದರ ಅಧಿಪತಿಗಳಾದಂತ ಕಾಳಾಮುಖರಿಂದ ಪ್ರಚಾರ ಪಡೆಯಿತು. ಪಾಶುಪತ ಕಾಳಾಮುಖ ಪರಂಪರೆಗೆ ಸೇರಿದ ಅನೇಕ ಮಠಗಳಲ್ಲಿ ಮೈಲಾರ ಅಥವಾ ಎಕ್ಕೋಟಿ ಪಂಥವು ಒಂದೆಂಬುವುದು ಸ್ಪಷ್ಟವಾಗುತ್ತದೆ. ಅದರಲ್ಲೂ ತುಂಗಭದ್ರಾ ತೀರದುದ್ದಕ್ಕೂ ಈ ಸಂಪ್ರದಾಯ ಗೋಚರಿಸುತ್ತದೆ. ಈಗ ತಿಳಿದುಕೊಂಡಂತೆ ಹಿರೆಮೈಲಾರವೇ ಪ್ರಾಚೀನ ಕ್ಷೇತ್ರವಾಗಿತ್ತು. ಆದರೆ ಮಲ್ಲಯ್ಯನ ಗುಡ್ಡ, ಸಿಂದಗೆರೆಗಳು ಇದಕ್ಕಿಂತ ಪೂರ್ವದಲ್ಲಿಯೇ ಮೈಲಾರನ ಕ್ಷೇತ್ರಗಳಾಗಿದ್ದವು.

ಅಡಿಟಿಪ್ಪಣಿಗಳು

೧. Medawos Tylore, 1941, Megalithic Tombs and other Ancient Remains in the Deccan, Dept. of Archaeology and Museum, Govt. of Andhrapradesh. Hyderabad

೨. S.I.I.ix (i), 104, 1046, ಮೋರಗೆರೆ (ಹಗರಿಬೊಮ್ಮನಹಳ್ಳಿ)

೩. ಅದೆ iv, ೨೬೦, ೧೯೯, ಹಂಪೆ (ಹೊಸಪೇಟೆ ತಾ)

೪. ಅದೆ ix (i), ೭೯, ೧೦೧೪, ಹಾವಿನಾಳು (ಹೊಸಪೇಟೆ ತಾ)

೫. ರಾಮಚಂದ್ರರಾವ್, ಎಸ್.ಕೆ, ೧೯೭೫, ಮೂರ್ತಿ ಶಿಲ್ಪ ನೆಲೆ ಹಿನ್ನೆಲೆ, ಪು. ೨೦೬

೬. ಅದೆ

೭. ಅದೇ ಪು. ೨೦೭

೮. ರಾಜೇಗೌಡ, ಹ.ಕ, ೧೯೯೧, ದಕ್ಷಿಣ ಕರ್ನಾಟಕದಲ್ಲಿ ಮೈಲಾರಲಿಂಗ ಸಂಪ್ರದಾಯ, ಸಂಶೋಧನ (ಡಾ. ಎಂ.ಚಿದಾನಂದಮೂರ್ತಿ ಗೌರವ ಸಂಪುಟ) ಪು. ೩೦೦-೩೧೫

೯. ಅದೆ

೧೦. E.I.XV. ಪು. ೮೭, ೧೦೫೮, ಉಲ್ಲೇಖ ಚಿದಾನಂದಮೂರ್ತಿ ಎಂ, ಕ.ಶಾ.ಸಂ.ಅ, ಪು. ೨೧೮

೧೧. S.I.I.ix (i) ೧೫೯, ೧೦೯೧, ಸಿರುಗುಪ್ಪ (ಸಿರುಗುಪ್ಪ ತಾ)

೧೨. ಅದೆ, ಶಾ.ಸಂ.೫೯, ೧೦೧೭, ಮಲ್ಲಯ್ಯನಗುಡ್ಡ (ಸಿರುಗುಪ್ಪ ತಾ)

೧೩. ಕಲಬುರ್ಗಿ ಎಂ.ಎಂ, ೧೯೭೫, ಧಾರವಾಡ ಜಿಲ್ಲೆಯ ಶಾಸನಸೂಚಿ, ಪು. ೪೫

೧೪. S.I.I. ix (i), ೨೩೫, ೧೧೪೧, ಸಿಂದಗೆರೆ (ಬಳ್ಳಾರಿ ತಾ)

೧೫. ಕ.ವಿ.ವಿ.ಶಾ.ಸಂ.೧, ಶಾ.ಸಂ. ೨೮, ೧೧೧೩, ಕೊಟ್ಟೂರು (ಕೂಡ್ಲಿಗಿ ತಾ)

೧೬. ಅದೆ, xvii, ೪೫, ೧೨೧೦, ಕುಡತಿನಿ (ಬಳ್ಳಾರಿ ತಾ)

೧೭. ಅದೆ, ix(i), ೩೨೭, ೧೨೦೭, ಕುಡತಿನಿ (ಬಳ್ಳಾರಿ ತಾ)

೧೮. ಕ.ವಿ.ವಿ.ಶಾ.ಸಂ.೧, ಶಾ.ಸಂ.೨೦೧, ೧೨೮೦, ಬೆಣ್ಣೆಹಳ್ಳಿ (ಹರಪನಹಳ್ಳಿ ತಾ)

೧೯. ಅದೆ, ಶಾ.ಸಂ.೫೯, ೧೦೧೭, ಮಲ್ಲಯ್ಯನಗುಡ್ಡ (ಸಿರುಗುಪ್ಪ ತಾ)

೨೦. ಅದೆ, ಶಾ.ಸಂ.೬೧, ೧೫೩೮, ಮಲ್ಲಯ್ಯನಗುಡ್ಡ (ಸಿರುಗುಪ್ಪ ತಾ)

೨೧. ಅದೆ, ಶಾ.ಸಂ.೬೦, ಮಲ್ಲಯ್ಯನಗುಡ್ಡ (ಸಿರುಗುಪ್ಪ ತಾ)

೨೨. ಅದೆ, ಶಾ.ಸಂ.೫೮, ೧೭೦೧, ಮಲ್ಲಯ್ಯನಗುಡ್ಡ (ಸಿರುಗುಪ್ಪ ತಾ)

೨೩. ಅದೆ, ಶಾ.ಸಂ.೨೭, ೧೪೧೨, ಮೈಲಾರ (ಹಡಗಲಿ ತಾ)

೨೪. ಅದೆ, ಶಾ.ಸಂ.೨೯, ೧೪೪೬, ಮೈಲಾರ (ಹಡಗಲಿ ತಾ)

೨೫. ಅದೆ, ಶಾ.ಸಂ.೨೬, ೧೫೫೧, ಮೈಲಾರ (ಹಡಗಲಿ ತಾ)

೨೬. ಅದೆ, ಶಾ.ಸಂ.೩೦, ಮೈಲಾರ (ಹಡಗಲಿ ತಾ)

೨೭. ಅದೆ, ಶಾ.ಸಂ.೩೧, ಮೈಲಾರ (ಹಡಗಲಿ ತಾ)

೨೮. ಅದೆ, ಶಾ.ಸಂ.೩, ಶಾ.ಸಂ.೮೮, ಹಂಪಿ (ಹೊಸಪೇಟೆ ತಾ)

೨೯. ಅದೆ, ಶಾ.ಸಂ.೩, ಶಾ.ಸಂ.೮೯, ಹಂಪಿ (ಹೊಸಪೇಟೆ ತಾ)

೩೦. ಡಾ. ದೇವರಕೊಂಡಾರೆಡ್ಡಿ ೧೯೭೭, ಹಂಪೆಯ ಇನ್ನೊಂದು ಮಾಲ್ಯವಂತ, ವಿಜಯನಗರ ಅಧ್ಯಯನ, ಸಂ.೨, ಪು. ೧೦೮

೩೧. ಕ.ವಿ.ವಿ.ಶಾ.ಸಂ.೩, ಶಾ.ಸಂ.೩೬೨, ಹಂಪಿ (ಹೊಸಪೇಟೆ ತಾ)

೩೨. ಮಂಜುನಾಥಯ್ಯ ಟಿ.ಎಂ. ೧೯೯೯, ಮಾಲ್ಯವಂತ - ಒಂದು ಅಧ್ಯಯನ, ವಿಜಯನಗರ ಅಧ್ಯಯನ, ಸಂ.೪, ಪು. ೫೩

❖ ❖

೨೦

ಬಳ್ಳಾರಿಯ ಕೋಟೆ ಮಲ್ಲೇಶ್ವರ ದೇವಸ್ಥಾನದಲ್ಲಿರುವ

ಶಿವನ ವಿವಿಧ ಲೀಲೆಗಳ ಶಿಲ್ಪಗಳು

ವಿನೋದಾ ಪಾಟೀಲ

ದ್ವೈತವೆಂದರೆ ಎರಡು, ಅದ್ವೈತವೆಂದರೆ ಎರಡಲ್ಲದ್ದು ಎಂಬ ಅರ್ಥವಿದೆ. ಯಾವ ವಸ್ತು ತನಗಿಂತ ಭಿನ್ನವಾದ ಬೇರೊಂದು ವಸ್ತುವನ್ನು ಹೊಂದಿಲ್ಲವೊ ಅದೇ ಪರಮಾತ್ಮ. ಆ ವಸ್ತು ಸರ್ವವ್ಯಾಪಕವಾಗಿದ್ದುದರಿಂದ ಅದನ್ನು ಪರಮಾತ್ಮನೆಂದೂ, ಎಲ್ಲಕ್ಕೂ ದೊಡ್ಡದಾದ್ದರಿಂದ ಬ್ರಹ್ಮವೆಂದೂ ಕರೆಯಲ್ಪಡುತ್ತದೆ. ಇಂತಹ ವಸ್ತು ನಿರಾಕಾರ, ನಿರ್ಗುಣ, ನಿರ್ವಿಶೇಷವಾಗಿದೆ. ಇಂತಹ ಪರಮಾತ್ಮನು ಮಾಯೆಯಲ್ಲಿ ಪ್ರತಿಫಲಿಸಿ ಈಶ್ವರನೆನಿಸಿದರೆ, ಆ ವಿದ್ಯೆಯಲ್ಲಿ ಪ್ರತಿಬಿಂಬಿಸಿ ಜೀವವೆನಿಸಿದೆ.

ಆದಿ ಸೃಷ್ಟಿಯಲ್ಲಿ ಜೀವರೆಲ್ಲರೂ ಪರಮಾತ್ಮನ ಚೇತನಾಂಶರೇ ಆಗಿದ್ದರೂ, ದೇಹ, ಮನಸ್ಸು, ಬುದ್ಧಿ, ಇಂದ್ರಿಯಗಳ ಸಂಪರ್ಕದಿಂದ ಅವರು ದೇವಾಂಶರೆಂಬುದನ್ನು ಮರೆತು ಅಹಂಕಾರ, ಅಭಿಮಾನಗಳಿಂದ ವ್ಯವಹರಿಸುತ್ತ ಕರ್ಮದ ಸಂಕೋಲೆಯಿಂದ ತಮ್ಮನ್ನು ತಾವು ಬಂಧಿಸಿಕೊಳ್ಳುವರು. ಜೀವಿಗಳನ್ನು ಈ ಕರ್ಮಪಾಶದಿಂದ ವಿಮೋಚನೆಗೊಳಿಸಲು ಪರಮಾತ್ಮನು ಸಾಕಾರ ರೂಪದಿಂದ ಕಾಣಿಸಿಕೊಳ್ಳಬೇಕಾಯಿತು. ನಿರಾಕಾರ ಪರಮಾತ್ಮನು ನಿಷ್ಕಲ ಲಿಂಗವೆನಿಸಿದರೆ, ಸಾಕಾರ ಪರಮಾತ್ಮನು ದಿವ್ಯಮಂಗಳ ವಿಗ್ರಹನಾಗಿ ಶಿವನೆನಿಸಿ ಕೈಲಾಸದಲ್ಲಿ ನೆಲೆಸಿರುವನು ಆದರೆ ಪರಮಾತ್ಮನ ಈ ನಿರಾಕಾರ,

ಸಾಕಾರ ಸ್ಥಿತಿಗಳೆರಡೂ ಜೀವಿಯ ಉದ್ಧಾರಕ್ಕಾಗಿ ಅವಶ್ಯವಾಗಿ ಬೇಕಾಗಿದೆ. ಜೀವಿಯ ಉದ್ಧಾರಕ್ಕಾಗಿ ಶಿವನು ಅನೇಕ ಅವತಾರಗಳನ್ನು ತಾಳಬೇಕಾಯಿತು. ಈ ಅವತಾರಗಳನ್ನೇ ಶಿವನ ಲೀಲೆಗಳೆಂದು ಕರೆದಿರುವರು. ಶಿಲ್ಪಗಳಲ್ಲಿ ಶಿವನನ್ನು ಭಯಾನಕ, ಸಂಹಾರಕ ಮೂರ್ತಿಯನ್ನಾಗಿಯೂ ಮತ್ತು ಸೌಮ್ಯ, ಅನುಗ್ರಹ ಮೂರ್ತಿಯನ್ನಾಗಿಯೂ ಚಿತ್ರಿಸಿದ್ದಾರೆ. ಒಟ್ಟಿನಲ್ಲಿ ಶಿವನ ಐದು ಪ್ರಕಾರದ ಮೂರ್ತಿಗಳು ಕಂಡುಬರುತ್ತವೆ. ಅವು ಯಾವುವೆಂದರೆ ೧. ಸಂಹಾರಮೂರ್ತಿ ೨. ಅನುಗ್ರಹಮೂರ್ತಿ ೩. ದಕ್ಷಿಣಾಮೂರ್ತಿ ೪. ನೃತ್ಯ ಮೂರ್ತಿ ಮತ್ತು ೫ ಇತರ ಮೂರ್ತಿಗಳು.

ಶಿವನ ವಿವಿಧ ಲೀಲೆಗಳ ಶಿಲ್ಪಗಳು ಮತ್ತು ವಿಗ್ರಹಗಳು ಅನೇಕ ದೇವಸ್ಥಾನಗಳಲ್ಲಿ ಕಂಡುಬರುತ್ತವೆ. ಅಂತಹ ಕೆಲವೊಂದು ಲೀಲೆಗಳ ಶಿಲ್ಪಗಳು ಬಳ್ಳಾರಿಯ ಕೋಟೆಮಲ್ಲೇಶ್ವರ ದೇವಸ್ಥಾನದಲ್ಲಿವೆ. ಈ ದೇವಸ್ಥಾನದ ನಿರ್ಮಾಣ, ಕಾಲದ ಬಗ್ಗೆ ಯಾವುದೇ ಮಾಹಿತಿ ದೊರೆತಿಲ್ಲ. ಆದರೆ ದೇವಸ್ಥಾನದ ವಾಸ್ತು ಮತ್ತು ಅಲ್ಲಿರುವ ಶಿಲ್ಪಗಳ ಶೈಲಿಯಿಂದ ಇದು ವಿಜಯನಗರ ಕಾಲದ್ದೆಂದು ಹೇಳಬಹುದು. ದೇವಸ್ಥಾನದ ಪ್ರಾಕಾರದ ಗೋಡೆಯ ಒಳಭಾಗದಲ್ಲಿ ಅನೇಕ ಶಿಲ್ಪ ಪಟ್ಟಿಕೆಗಳಿವೆ. ಇಲ್ಲಿ ಪುರಾತನರ, ವೀರಶೈವ ಶರಣರ ಮತ್ತು ಶಿವನ ಲೀಲೆಗಳಿಗೆ ಮತ್ತು ಇತರ ಕಥೆಗಳಿಗೆ ಸಂಬಂಧಿಸಿದ ಶಿಲ್ಪಗಳನ್ನು ಒಟ್ಟಿಗೆ ಕೆತ್ತಿರುವರು. ಈ ಪ್ರಬಂಧದ ವಿಷಯ ಶಿವನಲೀಲೆಗಳಿಗೆ ಮಾತ್ರ ಸಂಬಂಧಿಸಿದ್ದರಿಂದ ಆ ಲೀಲೆಗಳ ಕಥೆಗಳನ್ನು ಮತ್ತು ಶಿಲ್ಪಗಳನ್ನು ಮಾತ್ರ ಇಲ್ಲಿ ವಿವರಿಸಲಾಗಿದೆ. ಇಲ್ಲಿ ಶಿವನ ಅನೇಕ ಶಿಲ್ಪಗಳಿವೆ. ಆದರೆ ಕೆಳಗೆ ವಿವರಿಸಿದ ಶಿಲ್ಪಗಳನ್ನು ಮಾತ್ರ ನಿಖರವಾಗಿ ಗುರುತಿಸಲಾಗಿದೆ.



೧. ಕಾಲಾರಿ ಮೂರ್ತಿ ೨. ತ್ರಿಪುರಾಂತಕ ಮೂರ್ತಿ ೩. ಕಿರಾತಾರ್ಜುನ ಲೀಲೆ

೧. ಕಾಲಾರಿ ಮೂರ್ತಿ : ಯಮನನ್ನು ಕೊಲ್ಲಲು ಶಿವನು ತಾಳಿದ ರೂಪವನ್ನು ಕಾಲಾರಿ ಮೂರ್ತಿ ಎಂದು ಕರೆಯುತ್ತಾರೆ. ಪುರಾಣಗಳಲ್ಲಿ ಈ ಕಥೆ ಕೆಳಗಿನಂತಿದೆ. ಮಾರ್ಕಂಡ ಋಷಿಗೆ ಅನೇಕ ವರ್ಷಗಳವರೆಗೆ ಸಂತಾನವಿರುವುದಿಲ್ಲ. ಸಂತಾನ ಪ್ರಾಪ್ತಿಗಾಗಿ ಶಿವನನ್ನು ಪ್ರಾರ್ಥಿಸಿದಾಗ ಶಿವನು ಪ್ರತ್ಯಕ್ಷನಾಗಿ ೧೬ ವರ್ಷ ಆಯಸ್ಸುಳ್ಳ ಬುದ್ಧಿವಂತ ಮಗ ಬೇಕೋ ಅಥವಾ ೧೦೦ ವರ್ಷ ಆಯಸ್ಸುಳ್ಳ ದಡ್ಡ ಮಗ ಬೇಕೋ ಎಂದು ಕೇಳಲು ಮಾರ್ಕಂಡ ಋಷಿಯು ೧೬ ವರ್ಷ ಆಯಸ್ಸುಳ್ಳ ಬುದ್ಧಿವಂತ ಮಗನನ್ನೇ ಕೇಳುತ್ತಾನೆ. ಸ್ವಲ್ಪ ಸಮಯದ ನಂತರ ಆತನ ಪತ್ನಿ ಗಂಡುಮಗುವಿಗೆ ಜನ್ಮ ನೀಡುತ್ತಾಳೆ. ಆತನಿಗೆ ಮಾರ್ಕಂಡೇಯ ಎಂದು

ಹೆಸರಿಡುತ್ತಾರೆ. ಮಗ ಬುದ್ಧಿವಂತನಾಗಿ ಬೆಳೆದಂತೆಲ್ಲ ತಂದೆ ತಾಯಿಗಳಿಗೆ ಮಗನ ಆಯಸ್ಸು ಕಡಿಮೆಯಾಗುತ್ತಾ ಹೋಗುತ್ತದಲ್ಲ ಎಂಬ ಚಿಂತೆ ಪ್ರಾರಂಭವಾಗುತ್ತದೆ. ತನಗೆ ೧೬ ವರ್ಷ ಮಾತ್ರ ಆಯಸ್ಸೆಂಬುದನ್ನು ತಿಳಿದ ಮಾರ್ಕಡೇಯನು ಹೆಚ್ಚು ಆಯಸ್ಸು ಪಡೆಯಲು ತೀರ್ಥಯಾತ್ರೆಗೆ ಹೊರಡುತ್ತಾನೆ. ಶಿವನನ್ನು ಒಲಿಸಿಕೊಳ್ಳಲು ಪೂಜೆ ಮಾಡುತ್ತಾ ತಿರುಕ್ಕಾಡ ಮಾರಿಗೆ ಬಂದು ಅಲ್ಲಿಯ ದೇವಾಲಯದಲ್ಲಿರುವ ಲಿಂಗವನ್ನು ಪೂಜಿಸುತ್ತಿರುತ್ತಾನೆ. ಅಲ್ಲಿರುವಾಗಲೇ ಆತನಿಗೆ ೧೬ ವರ್ಷ ಮುಗಿಯುತ್ತದೆ. ಯಮನ ಆಜ್ಞೆಯ ಮೇರೆಗೆ ಯಮದೂತರು ಮಾರ್ಕಂಡೇಯನನ್ನು ಕರೆದೊಯ್ಯಲು ಬರುತ್ತಾರೆ. ಯಮದೂತರು ಮಾರ್ಕಂಡೇಯನ ಆತ್ಮವನ್ನು ಎಳೆದೊಯ್ಯಲು ಎಷ್ಟೇ ಪ್ರಯತ್ನಿಸಿದರೂ ಅದು ಸಾಧ್ಯವಾಗುವುದಿಲ್ಲ. ಈ ವಿಷಯವನ್ನು ಯಮನಿಗೆ ತಿಳಿಸಲು ಆತ ತಾನೇ ಮಾರ್ಕಂಡೇಯನನ್ನು ಎಳೆದೊಯ್ಯಲು ಬರುತ್ತಾನೆ. ಆತನನ್ನು ಎಳೆದೊಯ್ಯಲು ಪಾಶವನ್ನು ಹಾಕಿದಾಗ ಶಿವನು ಕೋಪಗೊಂಡು ಲಿಂಗದಲ್ಲಿ ಮೂಡಿ ಯಮನ ಎದೆಗೆ ತ್ರಿಶೂಲದಿಂದ ಇರಿದು ಕೊಲ್ಲುತ್ತಾನೆ. ಮಾರ್ಕಂಡೇಯನಿಗೆ ಚಿರಂಜೀವಿಯಾಗಿರುವಂತೆ ಆಶೀರ್ವದಿಸುತ್ತಾನೆ.

ಶಿಲ್ಪ : ಇಲ್ಲಿ ಶಿವ ಮತ್ತು ಯಮನನ್ನು ಮಾತ್ರ ಚಿತ್ರಿಸಲಾಗಿದೆ. ಮಾರ್ಕಂಡೇಯನನ್ನು ಚಿತ್ರಿಸಿಲ್ಲ. ಯಮ ಕೋಣನ ಮೇಲೆ ಕುಳಿತಿದ್ದಾನೆ. ಶಿವನು ತ್ರಿಶೂಲದಿಂದ ಯಮನನ್ನು ಕೊಲ್ಲುತ್ತಿದ್ದಾನೆ.

೨. ತ್ರಿಪುರಾಂತಕ ಮೂರ್ತಿ: ತಾರಕಾಸುರನ ಮೂವರು ಮಕ್ಕಳಾದ ವಿದ್ಯುನ್ಮಾಲಿ, ತಾರಕಾಕ್ಷ ಮತ್ತು ಕಮಲಾಕ್ಷರನ್ನು ಕೊಲ್ಲುವುದಕ್ಕಾಗಿ ಶಿವನು ತಳೆದ ಅವತಾರವೇ ತ್ರಿಪುರಾಂತಕ ಮೂರ್ತಿ ಮಹಾಭಾರತದ ಕರ್ಣ ಪರ್ವದಲ್ಲಿ ಈ ಕಥೆ ಹೀಗೆ. ತಾರಕಾಸುರನ ಈ ಮೂವರು ಮಕ್ಕಳು ಕಠಿಣ ತಪಸ್ಸನ್ನಾಚರಿಸಿ ಬ್ರಹ್ಮನಿಂದ ಒಂದು ವರವನ್ನು ಪಡೆಯುತ್ತಾರೆ. ಅದೇನೆಂದರೆ ಮೂವರೂ ಒಂದೊಂದು ಲೋಹದ ಕೋಟೆಯನ್ನು ಪಡೆದು ಅದರಲ್ಲಿದ್ದು ತಾವು ಇಚ್ಛಿಸಿದ್ದಲ್ಲಿ ಆ ಕೋಟೆಗಳು ಕರೆದೊಯ್ಯಬೇಕು, ಸಾವಿರ ವರ್ಷಗಳ ನಂತರ ಈ ಮೂರೂ ಕೋಟೆಗಳು ಒಂದಾಗಿ ಒಂದೇ ಬಾಣದಿಂದ ಆ ಕೋಟೆ ನಾಶವಾಗಬೇಕು ಎಂಬ ವರವನ್ನು ಪಡೆಯುತ್ತಾರೆ. ಅಸುರರ ವಾಸ್ತುಶಿಲ್ಪಿಯಾದ ಮಾಯ ಎಂಬುವನು ಒಂದು ಚಿನ್ನದ ಕೋಟೆಯನ್ನು ಸ್ವರ್ಗದಲ್ಲಿ ಬೆಳ್ಳಿಯ ಕೋಟೆಯನ್ನು ಗಾಳಿಯಲ್ಲಿ, ಕಬ್ಬಿಣದ ಕೋಟೆಯನ್ನು ಭೂಮಿಯ ಮೇಲೆ ಕಟ್ಟುತ್ತಾನೆ. ಈ ಮೂರು ಕೋಟೆಗಳಲ್ಲಿ ಒಬ್ಬೊಬ್ಬ ಅಸುರರು ವಾಸಿಸಿ ತಮ್ಮ ಮನಸ್ಸಿಗೆ ಬಂದಲ್ಲಿ ವಿಹರಿಸಿ ಸುರರಿಗೆ ಹಿಂಸೆ ಕೊಡುತ್ತಿರುತ್ತಾರೆ. ಇವರ ಕಿರುಕುಳ ತಾಳಲಾರದೆ ಇಂದ್ರನು ತನ್ನ ವಜ್ರಾಯುಧದಿಂದ ಇವರನ್ನು ಸಂಹರಿಸಲು ಪ್ರಯತ್ನಿಸಿ ವಿಫಲನಾಗುತ್ತಾನೆ. ನಂತರ ದೇವತೆಗಳು ಬ್ರಹ್ಮನ ಹತ್ತಿರ ಹೋಗಿ ಈ ಅಸುರನನ್ನು ಕೊಲ್ಲುವ ಮಾರ್ಗ ಯಾವುದು ಎಂದು ಕೇಳಲು ಬ್ರಹ್ಮನು ಈ ಮೂವರು ಒಂದೇ ಬಾಣದಿಂದ ಕೊಲ್ಲಲ್ಪಡುವ ವರವನ್ನು ಪಡೆದಿದ್ದಾರೆ ಅಂಥ ಬಾಣವನ್ನು ಪ್ರಯೋಗಿಸಲು ಶಿವನಿಂದ ಮಾತ್ರ ಸಾಧ್ಯ ಆದ್ದರಿಂದ ನೀವು ಶಿವನ ಬಳಿಗೆ ಹೋಗಿ ಎಂದು

ಹೇಳುತ್ತಾನೆ. ದೇವತೆಗಳು ಶಿವನ ಹತ್ತಿರ ಹೋಗಿ ಈ ಕಾರ್ಯಕ್ಕೆ ಒಪ್ಪಿಸುತ್ತಾರೆ. ಆದರೆ ಶಿವನು ಎಲ್ಲ ದೇವತೆಗಳು ತಮ್ಮಲ್ಲಿರುವ ಅರ್ಧ ಶಕ್ತಿಯನ್ನು ತನಗೆ ಕೊಟ್ಟರೆ ಮಾತ್ರ ಈ ಕಾರ್ಯ ಸಾಧ್ಯವೆಂದು ಹೇಳಲು ವಿಷ್ಣು ಬಾಣವಾಗುತ್ತಾನೆ. ಅಗ್ನಿ ಆ ಬಾಣಕ್ಕೆ ತುದಿಯಾಗುತ್ತಾನೆ. ಯಮ ಆ ಬಾಣದ ರೆಕ್ಕೆಗಳಾಗುತ್ತಾನೆ. ಬ್ರಹ್ಮನು ರಥವಾಗುತ್ತಾನೆ. ನಂತರ ಶಿವನು ಸೋಮ, ಅಗ್ನಿ ಮತ್ತು ವಿಷ್ಣು ಎಂಬ ಮೂರು ತುದಿಗಳುಳ್ಳ ಬಾಣದಿಂದ ಮೂವರೂ ಅಸುರರನ್ನು ಕೊಲ್ಲುತ್ತಾನೆ.

ಬೇರೆ ಬೇರೆ ಸಾಹಿತ್ಯಗಳಲ್ಲಿ ತ್ರಿಪುರಾಂತಕ ಮೂರ್ತಿಯ ಕಥೆಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಆಗಮಗಳಲ್ಲಿ ತ್ರಿಪುರಾಂತಕ ಮೂರ್ತಿಯ ಸಂಪೂರ್ಣ ವಿವರಗಳು ದೊರೆಯುತ್ತವೆ.

ಶಿಲ್ಪ : ಇಲ್ಲಿ ಶಿವನು ರಥದ ಮೇಲೆ ನಿಂತಿದ್ದಾನೆ. ರಥದ ಎರಡು ಗಾಲಿಗಳು ಮಾತ್ರ ಇಲ್ಲಿ ಕಾಣುತ್ತಿವೆ. ಶಿವನು ಬಾಣ ಬಿಡುವ ಭಂಗಿಯಲ್ಲಿ ನಿಂತಿದ್ದಾನೆ. ಬಿಲ್ಲು ಸ್ಪಷ್ಟವಾಗಿ ಕಾಣುತ್ತಿದೆ. ಆದರೆ ಬಾಣವನ್ನು ಚಿತ್ರಿಸಿಲ್ಲ. ಶಿವನ ಹಿಂಭಾಗದ ಕೈಗಳಲ್ಲಿ ತ್ರಿಶೂಲ ಮತ್ತು ಡಮರುಗಳಿವೆ. ಪಕ್ಕದಲ್ಲಿ ಮೂವರು ಅಸುರರನ್ನು ಕೋಟೆಯಲ್ಲಿರುವಂತೆ ಚಿತ್ರಿಸಿದ್ದಾರೆ. ಕೆಳಗೆ ಇಬ್ಬರು ಅಸುರರು ತಮ್ಮ ಕೋಟೆಯಲ್ಲಿದ್ದಾರೆಂಬುದನ್ನು ತೋರಿಸಲು ಇಬ್ಬರೂ ಒಂದೊಂದು ಕಲ್ಲುಹಾಸಿನ ಮೇಲೆ ನಿಂತಿದ್ದಾರೆ. ಮೇಲೆ ಇನ್ನೊಬ್ಬ ಅಸುರನು ಕೋಟೆಯಲ್ಲಿ ಮಲಗಿರುವಂತೆ ಕಾಣುತ್ತಿದ್ದಾನೆ.

೩. ಕಿರಾತಲೀಲೆ : ಪಾಂಡವರು ರಾಜ್ಯ ಕಳೆದುಕೊಂಡು ಅರಣ್ಯ ವಾಸಿಗಳಾಗಿದ್ದಾಗ ವೇದವ್ಯಾಸರು ಅವರಿದ್ದೆಡೆಗೆ ಬಂದು ಧರ್ಮರಾಜನಿಗೆ "ಈಶ್ವರನಿಂದ ಪಾಶುಪತಾಸ್ತ್ರವನ್ನು ಪಡೆದರೆ ಅದರಿಂದ ಕೌರವರನ್ನು ಜಯಿಸಲು ಸಾಧ್ಯ, ಆದರೆ ಈ ಕೆಲಸ ಅರ್ಜುನನಿಂದ ಮಾತ್ರ ಸಾಧ್ಯವೆಂದು ಹೇಳುತ್ತಾರೆ. ಧರ್ಮರಾಯ ಅರ್ಜುನನಿಗೆ ಪಾಶುಪತಾಸ್ತ್ರವನ್ನು ಶಿವನಿಂದ ಪಡೆಯಲು ಹೇಳುತ್ತಾನೆ. ಅರ್ಜುನನು ಇಂದ್ರಕೀಲ ಪರ್ವತಕ್ಕೆ ಹೋಗಿ ಶಿವನನ್ನು ಕುರಿತು ತಪಸ್ಸನ್ನಾಚರಿಸುತ್ತಾನೆ. ಈತನ ಕಠೋರ ತಪಸ್ಸಿಗೆ ಬೆಚ್ಚಿದ ಋಷಿಗಳು ನಾರದರ ಹತ್ತಿರ ಹೇಳಲು ನಾರದರು ಈಶ್ವರನ ಹತ್ತಿರ ಬಂದು ಅರ್ಜುನನ ತಪಸ್ಸಿನಿಂದಾದ ತೊಂದರೆಯನ್ನು ತಿಳಿಸುತ್ತಾರೆ. ಆಗ ಶಿವನು ಬೇಡನ ವೇಷದಲ್ಲಿ ಗಣಸಮೂಹದೊಂದಿಗೆ ಇಂದ್ರಕೀಲ ಪರ್ವತಕ್ಕೆ ಬಂದು ಅಲ್ಲಿಯ ಘೋರಾರಣ್ಯದಲ್ಲಿ ಮೃಗಗಳ ಬೇಟೆಯಾಡುತ್ತಿರುವಾಗ ಇವರ ಅಬ್ಬರಕ್ಕೆ ಗುಹೆಯಲ್ಲಿರುವ ಒಬ್ಬ ರಾಕ್ಷಸನು ಹಂದಿಯ ರೂಪದಲ್ಲಿ ಹೊರಬೀಳುತ್ತಾನೆ. ಆ ಹಂದಿಯು ಅರಣ್ಯದಲ್ಲಿ ಅರ್ಭಟಿಸುತ್ತ ಪ್ರಾಣಿಗಳಿಗೆ ತೊಂದರೆ ಕೊಡುತ್ತಿರುವಾಗ ಶಿವನು ಅದರ ಮೇಲೆ ಒಂದು ಬಾಣವನ್ನು ಬಿಡುತ್ತಾನೆ. ಆಗ ಹಂದಿಯು ಬಾಣ ಸಮೇತ ಆ ತಪಸ್ಸಿಗೆ ಕುಳಿತ ಅರ್ಜುನನ ಮುಂದೆ ಬಂದು ಬೀಳುತ್ತದೆ. ಅರ್ಜುನನೂ ಆ ಹಂದಿಗೆ ಬಾಣ ಬಿಡಲು ಅದು ಪ್ರಾಣ ಬಿಡುತ್ತದೆ. ಬೇಡ ವೇಷದ ಶಿವನಿಗೂ, ಅರ್ಜುನನಿಗೂ ಆ ಹಂದಿಯ ವಿಷಯದಲ್ಲಿ ಜಗಳವಾಗಿ ಇಬ್ಬರ ಮಧ್ಯೆ

ಯುದ್ಧವಾಗುತ್ತದೆ. ಅರ್ಜುನನು ಸೋತು ನೆಲಕ್ಕುರುಳುತ್ತಾನೆ. ನಂತರ ಅರ್ಜುನನು ಶಿವನನ್ನು ಮೊರೆಹೋಗುವೆನೆಂದು ಮರಳಲಿಂಗವನ್ನು ಮಾಡಿ ತರತರದ ಹೂಗಳಿಂದ ಪೂಜಿಸುತ್ತಾನೆ. ಆದರೆ ಲಿಂಗಕ್ಕೇರಿಸಿದ ಹೂಗಳು ಬೇಡನ ಮಸ್ತಕದಲ್ಲಿ ರಾರಾಜಿಸುವುದನ್ನು ಕಂಡು ಆತನೇ ಶಿವನೆಂಬ ಅರಿವಾಗಿ ಚರಣಕ್ಕೆರುಗುತ್ತಾನೆ. ಶಿವನು ನಿಜರೂಪ ತೋರಿ ಅರ್ಜುನನು ಬೇಡಿದ ಪಾಶುಪತಾಸ್ತ್ರವನ್ನು ದಯಪಾಲಿಸುತ್ತಾನೆ.

ಶಿಲ್ಪ : ಇಲ್ಲಿ ಮೂರು ದೃಶ್ಯಗಳಿವೆ. ಮಧ್ಯದಲ್ಲಿ ಶಿವನು ಹಂದಿಯನ್ನು ಬಿಲ್ಲಿನಿಂದ ಹೊಡೆದು ಕೆಡವಿದ ದೃಶ್ಯವಿದೆ. ಇಲ್ಲಿ ಶಿವನು ಮುಂದಿನ ಎರಡೂ ಕೈಗಳಿಂದ ಬಿಲ್ಲನ್ನು ಹಿಡಿದು ಬಾಣ ಬಿಡುತ್ತಿರುವ ದೃಶ್ಯವಿದೆ. ಕೆಳಗೆ ಬಾಣ ನೆಟ್ಟಿರುವ ಹಂದಿ ಬಿದ್ದಿದೆ. ಈ ದೃಶ್ಯದ ಬಲಬದಿಯಲ್ಲಿ ಶಿವನು ನಾಟ್ಯಭಂಗಿಯಲ್ಲಿ ನಿಂತಿದ್ದು ಆತನ ಮುಂದೆ ಅರ್ಜುನನು ಕೈಮುಗಿದು ನಿಂತಿದ್ದಾನೆ. ಇದು ಶಿವನು ಅರ್ಜುನನಿಗೆ ನಿಜರೂಪ ತೋರಿದಾಗಿನ ದೃಶ್ಯ. ಎಡಬದಿಯಲ್ಲಿ ಶಿವನು ಒಬ್ಬ ಮನುಷ್ಯನನ್ನು ಖಡ್ಗದಿಂದ ಕೊಲ್ಲುತ್ತಿರುವ ದೃಶ್ಯವಿದೆ. ಬಹುಶಃ ಇದು ಅರ್ಜುನ ಮತ್ತು ಶಿವನ ಮಧ್ಯೆ ನಡೆದ ಯುದ್ಧದ ದೃಶ್ಯ.



೪. ಬ್ರಹ್ಮ ಶಿರಚ್ಛೇದನ ಮೂರ್ತಿ ೫. ಕಾಮದಹನಲೀಲೆ

೪. ಬ್ರಹ್ಮ ಶಿರಚ್ಛೇದನ ಮೂರ್ತಿ : ವರಾಹ ಪುರಾಣ ಮತ್ತು ಕೂಮ ಪುರಾಣಗಳಲ್ಲಿ ಬ್ರಹ್ಮ ಶಿರಚ್ಛೇದನ ಮೂರ್ತಿಯ ಕಥೆ ಬೇರೆ ಬೇರೆ ತೆರನಾಗಿದೆ. ವರಾಹ ಪುರಾಣದಲ್ಲಿ ಶಿವನು ಬ್ರಹ್ಮನ ಐದನೆಯ ತಲೆಯನ್ನು ಛೇದಿಸಿದ ಕಾರಣ ಕೆಳಗಿನಂತಿದೆ. ಬ್ರಹ್ಮನು ರುದ್ರನನ್ನು (ಶಿವನನ್ನು) ಸೃಷ್ಟಿಸಿ, ಆತನಿಗೆ ಕಪಾಲಿ ಎಂದು ಹೆಸರಿಟ್ಟು ಜಗತ್ತನ್ನು ಸಂರಕ್ಷಿಸುವ ಹೊಣೆ ವಹಿಸುತ್ತಾನೆ. ಆತನನ್ನು ಕಪಾಲಿಯೆಂದು ಕರೆದಿದ್ದರಿಂದ ಶಿವನು ಅವಮಾನದಿಂದ ಕೋಪಗೊಂಡು ಬ್ರಹ್ಮನ ಐದನೆಯ ತಲೆಯನ್ನು ತನ್ನ ಎಡಗೈಯ ಹೆಬ್ಬೆರಳಿನ ಉಗುರಿನಿಂದ ಕತ್ತರಿಸುತ್ತಾನೆ. ಆದರೆ ಆ ತಲೆಯು ಶಿವನ ಕೈಗೆ ಅಂಟಿಕೊಂಡಾಗ ಶಿವನು ಅದರಿಂದ ಹೇಗೆ ಮುಕ್ತಿ ಪಡೆಯಬೇಕೆಂದು ಬ್ರಹ್ಮನನ್ನೇ ಕೇಳುತ್ತಾನೆ. ಬ್ರಹ್ಮನು ನೀನು ೧೨ ವರ್ಷ ಕಾಪಾಲಿಕ ಜೀವನ ನಡೆಸಿದರೆ ತಲೆ ಕೆಳಗೆ ಬೀಳುತ್ತದೆ ಎಂದು ಹೇಳುತ್ತಾನೆ. ನಂತರ ಶಿವನು ಕೈಯಲ್ಲಿ ಕಾಪಾಲ (ತಲೆಬುರುಡೆ) ಹಿಡಿದು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸುತ್ತಾ ೧೨ ವರ್ಷ ಭೂಮಿಯ

ಮೇಲೆ ಸುತ್ತುತ್ತಾ ವಾರಣಾಸಿಗೆ ಬರುತ್ತಾನೆ. ಅಲ್ಲಿ ಕೆಲವು ಮುನಿಗಳು ಶಿವನ ಕೈಯ್ಯಲ್ಲಿದ್ದ ಬ್ರಹ್ಮನ ತಲೆಯನ್ನು ಬಿಡಿಸುತ್ತಾರೆ. ನಂತರ ಶಿವನು ಗಂಗೆಯಲ್ಲಿ ಸ್ನಾನ ಮಾಡಿ ಕೈಲಾಸಕ್ಕೆ ಹೋಗುತ್ತಾನೆ.

ಆದರೆ ಕೂರ್ಮ ಪುರಾಣದಲ್ಲಿ ಈ ಕಥೆ ಕೆಳಗಿನಂತಿದೆ. ಒಮ್ಮೆ ಋಷಿಗಳು ಬ್ರಹ್ಮನನ್ನು ಈ ಜಗತ್ತಿನ ಸೃಷ್ಟಿಕರ್ತನಾರು? ಎಂದು ಕೇಳಲು ಬ್ರಹ್ಮನು ಗರ್ವದಿಂದ ಈ ಜಗದ ಸೃಷ್ಟಿ, ಸ್ಥಿತಿ, ಪ್ರಳಯಗಳೆಲ್ಲ ನನ್ನ ಅಧೀನ, ನನಗಿಂತ ಅಧಿಕರಿಲ್ಲ ಎಂದು ಹೇಳುತ್ತಾನೆ. ಆಗ ಶಿವನು ಪ್ರತ್ಯಕ್ಷನಾಗಿ ತಾನೇ ಸೃಷ್ಟಿಕರ್ತನೆಂದು ಹೇಳುತ್ತಾನೆ. ಈ ವಿಷಯಕ್ಕೆ ಬ್ರಹ್ಮ ಮತ್ತು ಶಿವ ಇಬ್ಬರಲ್ಲಿ ಜಗಳವಾಗಲು ಆಕಾಶದಲ್ಲಿ ಒಂದು ದೊಡ್ಡ ಪ್ರಕಾಶಮಂಡಲ ಮೂಡಿ ಶಿವನು ಅದರಲ್ಲಿ ಗೋಚರಿಸಿ ಭೈರವನನ್ನು ಕರೆದು ತನಗೆ ಅಗೌರವ ತೋರಿದ ಬ್ರಹ್ಮನ ಐದನೆಯ ತಲೆಯನ್ನು ಕತ್ತರಿಸಲು ಹೇಳುತ್ತಾನೆ. ಆಗ ಬ್ರಹ್ಮನು ಶಿವನ ಶ್ರೇಷ್ಠತೆಯನ್ನು ಅರಿಯುತ್ತಾನೆ.

ಶಿಲ್ಪ : ಇಲ್ಲಿ ಎರಡು ದೃಶ್ಯಗಳಿವೆ. ಶಿಲ್ಪದ ಎಡಭಾಗದಲ್ಲಿ ಶಿವನು ಎಡಗೈಯ್ಯಲ್ಲಿ ಕಪಾಲ ಹಿಡಿದು ನಿಂತಿದ್ದಾನೆ. ಇದು ಆತ ಕಪಾಲದೊಡನೆ ೧೨ ವರ್ಷ ತೀರ್ಥಯಾತ್ರೆ ಮಾಡಿದ ದೃಶ್ಯ. ಬಲಭಾಗದಲ್ಲಿ ಬ್ರಹ್ಮನು ಕೈಮುಗಿದು ನಿಂತಿದ್ದಾನೆ. ಶಿವನು ತನ್ನ ಮುಂದಿನ ಬಲಗೈಯ್ಯಲ್ಲಿರುವ ಖಡ್ಗದಿಂದ (ಪರಶು) ಬ್ರಹ್ಮನ ತಲೆಯನ್ನು ಕತ್ತರಿಸುತ್ತಿದ್ದಾನೆ. ಮುಂದಿನ ಎಡಗೈಯ್ಯಲ್ಲಿ ಕಪಾಲ ಹಿಡಿದಿದ್ದಾನೆ. ಹಿಂದಿನ ಬಲ ಗೈಯಲ್ಲಿ ವಜ್ರ (ಆಯುಧ) ಮತ್ತು ಎಡಗೈಯಲ್ಲಿ ಡಮರುಗಳಿವೆ.

೫. ಕಾಮದಹನ ಲೀಲೆ : ತಾರಕಾಸುರನು ಉಗ್ರ ತಪಸ್ಸನ್ನಾಚರಿಸಿ ಬ್ರಹ್ಮನನ್ನು ಒಲಿಸಿಕೊಳ್ಳುತ್ತಾನೆ. ಬ್ರಹ್ಮನು ಯಾವ ವರ ಬೇಕೆಂದು ಕೇಳಲು ತನಗೆಂದಿಗೂ ಸಾವು ಬರಬಾರದೆಂದು ಕೇಳಲು ಬ್ರಹ್ಮನು ಹುಟ್ಟಿದವನಿಗೆ ಸಾವು ನಿಶ್ಚಿತವೆಂದು ಹೇಳುತ್ತಾನೆ. ತಾರಕಾಸುರನು "ಅಭಿವನ ವೀರ್ಯವನ್ನು ಹರಿಯಜ ಮುಂತಾದ ದೇವತೆಗಳು ಧರಿಸಿ ಆ ವೀರ್ಯದಿಂದ ಹುಟ್ಟಿದ ಏಳು ದಿನದ ಕುಮಾರನಿಂದ ಮಾತ್ರ ತನಗೆ ಸಾವು ಬರಲಿ" ಎಂಬ ವರವನ್ನು ಕೇಳಲು ಬ್ರಹ್ಮನು ಆ ವರವನ್ನು ದಯಪಾಲಿಸುತ್ತಾನೆ. ತಾರಕಾಸುರನು ತನ್ನ ಸಾವು ಸುಲಭವಲ್ಲ ಎಂಬ ಸೊಕ್ಕಿನಿಂದ ದೇವತೆಗಳನ್ನು ಪೀಡಿಸುತ್ತಿರಲು ದೇವತೆಗಳೆಲ್ಲ ಬ್ರಹ್ಮನ ಬಳಿ ಹೋಗಿ ರಕ್ಷಣೆ ಬೇಡಲು ಶಂಕರನು ಹೇಮಕೂಟ ಪರ್ವತದಲ್ಲಿ ತಪಸ್ಸನ್ನಾಚರಿಸುತ್ತಿದ್ದಾನೆ. ಗಿರಿಜೆಯು ಆತನ ಸೇವೆ ಮಾಡುತ್ತಿರುವಳು, ಅವರಿಬ್ಬರೂ ಒಂದಾಗದ ಹೊರತು ತಾರಕಾಸುರನ ವಧೆಯಾಗಲಾರದು. ಆದ್ದರಿಂದ ಅವರಿಬ್ಬರೂ ಒಂದಾಗುವ ಉಪಾಯವನ್ನು ವಿಷ್ಣುವಿನಲ್ಲಿ ವಿಚಾರಿಸೋಣವೆಂದು ಬ್ರಹ್ಮನು ದೇವತೆಗಳೊಂದಿಗೆ ವಿಷ್ಣುವಿನ ಬಳಿ ಹೋಗುತ್ತಾನೆ. ಶಿವನ ತಪಸ್ಸನ್ನು ಭಂಗ ಮಾಡುವ ಕಾರ್ಯ ಕಾಮನಿಂದ ಮಾತ್ರ ಸಾಧ್ಯವೆಂದು ವಿಷ್ಣು ಹೇಳಲು ದೇವತೆಗಳು ಕಾಮನಿಗೆ ಹರನ ತಪಸ್ಸನ್ನು ಭಂಗಗೊಳಿಸಿ ಪಾರ್ವತಿಯೊಂದಿಗೆ ಒಂದಾಗಿಸೆಂದು ಹೇಳುತ್ತಾರೆ. ಕಾಮನು

ಹೇಮಕೂಟಕ್ಕೆ ಬಂದು ಶಿವನ ತಪಸ್ಸನ್ನು ಭಂಗಗೊಳಿಸುತ್ತಾನೆ. ಶಿವನು ಕೋಪದಿಂದ ಹಣೆಗಣ್ಣನ್ನು ತೆರೆದು ಕಾಮನನ್ನು ಸುಡಲು ರತಿದೇವಿಯು ಶೋಕದಿಂದ ಪ್ರಲಾಪಿಸುತ್ತಿರುವಾಗ ಪಾರ್ವತಿಯು ರತಿಗೆ ಅಂಜಬೇಡ ನಿನ್ನ ಗಂಡನ ಪ್ರಾಣವ ದಾನವ ಕೊಡುವೆನೆಂದು ತಪಸ್ಸಾನ್ನಾಚರಿಸುತ್ತಾಳೆ. ಪಾರ್ವತಿಯ ತಪಸ್ಸಿಗೆ ಮೆಚ್ಚಿದ ಶಿವನು ವರವ ಕೇಳೆನಲು ಪಾರ್ವತಿಯು ಕಾಮನಿಗೆ ಪ್ರಾಣದಾನವನಿತ್ತು, ನನ್ನನ್ನು ಮದುವೆಯಾಗೆಂದು ಹೇಳುತ್ತಾಳೆ. ಅದರಂತೆ ಶಿವನು ಪಾರ್ವತಿಯನ್ನು ಮದುವೆಯಾಗುತ್ತಾನೆ. ಅವರಿಗೆ ಜನಿಸಿದ ಕುಮಾರನಿಂದ ತಾರಕಾಸುರನ ವಧೆಯಾಗುತ್ತದೆ.

ಶಿಲ್ಪ : ಇಲ್ಲಿ ಶಿವನು ಪೀಠದ ಮೇಲೆ ಬಲಗಾಲನ್ನು ಮುಂದೆ ಚಾಚಿಕೊಂಡು ಕುಳಿತಿದ್ದಾನೆ. ಹಿಂದಿನ ಬಲಗೈಯಲ್ಲಿ ತ್ರಿಶೂಲ ಮತ್ತು ಎಡಗೈಯಲ್ಲಿ ಡಮರು ಹಿಡಿದಿದ್ದಾನೆ. ಮುಂದಿನ ಬಲಗೈಯನ್ನು ನೆಲದ (ಪೀಠದ) ಮೇಲೆ ಊರಿ ಎಡಗೈಯನ್ನು ಎಡಗಾಲಿನ ಮೇಲೆ ಇಟ್ಟಿದ್ದಾನೆ. ತಾರಕಾಸುರನು ತಪಸ್ಸನ್ನು ಭಂಗಗೊಳಿಸಿದ್ದಕ್ಕೆ ಮುಖದ ಮೇಲೆ ಸಿಟ್ಟು ಸ್ಪಷ್ಟವಾಗಿ ತೋರುತ್ತಿದೆ. ಶಿವನ ಮುಂದೆ ಕಾಮನು ಎರಡೂ ಕೈಗಳಿಂದ ಬಿಲ್ಲನ್ನು ಹಿಡಿದು ನಿಂತಿದ್ದಾನೆ. ಆತನು ಬಾಣವನ್ನು ಬಿಡುತ್ತಿದ್ದಾನೆನೋ ಎನ್ನುವ ಭಂಗಿಯಲ್ಲಿ ನಿಂತಿದ್ದಾನೆ.



ಶರಭೇಶ ಮೂರ್ತಿ

೬. ಶರಭಾವತಾರಲೀಲೆ : ವಿಷ್ಣು ಹಿರಣ್ಯಕಶಿಪುನನ್ನು ಕೊಲ್ಲಲು ನರಸಿಂಹವತಾರವನ್ನು ತಾಳಿ ಮತ್ತೆ ಮೊದಲಿನ ರೂಪವನ್ನು ತಾಳದೆ ಜನರಿಗೆ ತೊಂದರೆಯನ್ನು ಕೊಡುತ್ತಿರುವಾಗ ಜನರನ್ನು ರಕ್ಷಿಸಲು ಶಿವನು ತಾಳಿದ ಅವತಾರವನ್ನು ಶರಭಾವತಾರಲೀಲೆ ಎಂದು ಕರೆಯುವರು. ಶರಭೇಷ ಮೂರ್ತಿಯ ವರ್ಣನೆ ಬೇರೆ ಬೇರೆ ಸಾಹಿತ್ಯದಲ್ಲಿ ಬೇರೆ ಬೇರೆ ತೆರನಾಗಿದೆ. ಇದು ಪೌರಾಣಿಕ ಪ್ರಾಣಿಯಾಗಿದ್ದು ಎರಡು ತಲೆ, ಎರಡು ರೆಕ್ಕೆಗಳು, ಚೂಪಾದ ಉಗುರುಗಳುಳ್ಳ ಸಿಂಹವಾಗಿದ್ದು ಎಂಟು ಕಾಲುಗಳು ಮತ್ತು ಒಂದು ಉದ್ದವಾದ ಬಾಲವನ್ನು ಹೊಂದಿರುತ್ತದೆ.

ಹಿರಣ್ಯಕಶಿಪು ತಪಸ್ಸನ್ನು ಮಾಡಿ ತನಗೆ ಮನೆಯೊಳಗೂ ಅಲ್ಲಿ ಹೊರಗೂ ಅಲ್ಲ, ಭೂಮಿಯಲ್ಲಲ್ಲ, ಆಕಾಶದಲ್ಲಲ್ಲ ಎಂಬಂತ ಸ್ಥಳದಲ್ಲಿ ಸಾವು ಬರಲಿ ಎಂಬ ವರವನ್ನು ಬ್ರಹ್ಮನಿಂದ ಪಡೆದಿರುತ್ತಾನೆ. ಈ ವರದಿಂದ ಸೊಕ್ಕಿದವನಾಗಿ ಸುರರನ್ನು ಪೀಡಿಸುತ್ತಿರುವಾಗ ಸುರರು ಶಿವನಿಗೆ ಮೊರೆಯಿಡುತ್ತಾರೆ. ಶಿವನು ವಿಷ್ಣುವನ್ನು ಕರೆದು ಹಿರಣ್ಯಕಶಿಪುವನ್ನು

ಕೊಲ್ಲೆಂದು ಕಳಿಸುತ್ತಾನೆ. ಆಗ ವಿಷ್ಣು ನರಸಿಂಹಾವತಾರವನ್ನು ತಾಳಿ ಆತನ ಮನೆಯ ಕಂಬದಲ್ಲಿ ಹುಟ್ಟಿ ಸಂಜೆಯ ಸಮಯದಲ್ಲಿ ಹೊಸ್ತಿಲ ಮೇಲೆ ಕುಳಿತು ತನ್ನ ತೊಡೆಯ ಮೇಲೆ ಕೆಡವಿಕೊಂಡು ಉಗುರು ಕೊನೆಗಳಿಂದ ಹೊಟ್ಟೆಯನ್ನು ಹರಿದು ರಕ್ತವನ್ನು ಕುಡಿಯುತ್ತಾನೆ. ಆತನ ಸಂಹಾರ ಮಾಡಿದ ನಂತರವೂ ವಿಷ್ಣು ತನ್ನ ಮೊದಲಿನ ರೂಪ ತಾಳದೆ ರಕ್ಕಸನ ರಕ್ತದಿಂದ ಮದೋನ್ಮತ್ತನಾಗಿ ಲೋಕವನ್ನು ಪೀಡಿಸಲು ಪ್ರಾರಂಭಿಸುತ್ತಾನೆ. ಇದರಿಂದ ಸುರರು ಬೇಸತ್ತು ಮತ್ತೆ ಕೈಲಾಸಕ್ಕೆ ಬಂದು ಶಿವನಿಗೆ ಅರಿಕೆ ಮಾಡಿಕೊಳ್ಳಲು ಶಿವನು ವೀರಭದ್ರನನ್ನು ಕರೆದು ನೀನು ಹರಿಗೆ ಬುದ್ಧಿ ಹೇಳಿ ಕರೆ, ಬಾರದಿದ್ದರೆ ಅವನ ದೇಹವನ್ನು ಬಿಚ್ಚಿ ಶಿರವನ್ನೂ ಚರ್ಮವನ್ನೂ ತಾ ಎಂದು ಹೇಳುತ್ತಾನೆ. ಅದರಂತೆ ವೀರಭದ್ರನು ವಿಷ್ಣುವಿಗೆ ಬುದ್ಧಿ ಹೇಳಿದರೂ ಆತನು ವೀರಭದ್ರನನ್ನೂ ಮತ್ತು ಶಿವನನ್ನು ಹಳಿಯಲು ವೀರಭದ್ರನು ಶರಭಾವತಾರ ತಾಳಿ ಚುಂಚುವಿನಿಂದ ನರಸಿಂಹನ ಕುತ್ತಿಗೆಯನ್ನು ಕಚ್ಚಿಕೊಂಡು ಶಿವನ ಹತ್ತಿರ ಬರುತ್ತಾನೆ. ಶಿವನು ಆತನ ಶಿರಸ್ಸಿಗೆ ಕೀರ್ತಿಮುಖವೆಂಬ ಹೆಸರಿಟ್ಟು ಅದನ್ನು ಧರಿಸಿ ಚರ್ಮವನ್ನು ಸಿಂಹಾಸನ ಮಾಡಿಕೊಳ್ಳುತ್ತಾನೆ.

ಶಿಲ್ಪ : ಈ ಚಿತ್ರದ ಬಲಬುದಿಯಲ್ಲಿ ವೀರಭದ್ರ ನಿಂತಿದ್ದಾನೆ. ಈತನ ತಲೆಯ ಮೇಲೆ ಕಿರೀಟವಿದೆ. ಎಂಟು ಕೈಗಳಿವೆ. ಎಂಟೂ ಕೈಗಳಗಲ್ಲಿ ವಿವಿಧ ಆಯುಧಗಳಿವೆ. ಚಿತ್ರದ ಎಡಬದಿಯಲ್ಲಿ ಶರಭೇಷ ಮೂರ್ತಿಯಿದೆ. ಈ ಮೂರ್ತಿಗೆ ಮಧ್ಯದಲ್ಲಿ ಮಾನವ ದೇಹವಿದ್ದು ಮೇಲೆ ಸಿಂಹದ ಎರಡು ಮುಖಗಳು ಮತ್ತು ಕೆಳಗೆ ಎರಡು ಸಿಂಹದ ದೇಹಗಳಿವೆ. ತಲೆಗಳ ಮೇಲೆ ಕಿರೀಟಗಳಿವೆ. ಹದಿನಾಲ್ಕು ಕೈಗಳಿದ್ದು ೧೨ ಕೈಗಳಲ್ಲಿ ವಿವಿಧ ಆಯುಧಗಳಿವೆ. ಮುಂದಿನ ಎರಡು ಕೈಗಳು ತೊಡೆಯ ಮೇಲಿವೆ. ಸಿಂಹದ ದೇಹಗಳೇ ಎರಡು ತೊಡೆಗಳಾಗಿವೆ.

ಅಡಿಟಿಪ್ಪಣಿಗಳು

೧. ಡಾ. ಟಿ.ಜಿ.ಸಿದ್ಧಪಾರಾಧ್ಯ, ೧೯೬೨, "ಶಕ್ತಿ ವಿಶಿಷ್ಟಾದ್ವೈತ ವೇದಾಂತ", ಮೈಸೂರು ವಿಶ್ವವಿದ್ಯಾಲಯ, ಮೈಸೂರು

೨. ಟಿ.ಎ.ಗೋಪಿನಾಥರಾವ್, ಎಲಿಮೆಂಟ್ಸ್ ಆಫ್ ಹಿಂದು ಐಕನಾಗ್ರಫಿ, ಸಂಪುಟ-II, ಭಾಗ-I

೩. ವಿರೂಪಾಕ್ಷ ಪಂಡಿತ ಕೃತ ಚನ್ನಬಸವ ಪುರಾಣ, ೧೯೩೪

೪. ಡಾ. ಆರ್.ಸಿ.ಹಿರೇಮಠ, ಡಾ. ಎಂ.ಎಸ್.ಸುಂಕಾಪುರ, ಶಾಂತಲಿಂಗೇಶ್ವರ ದೇಶೀಕೃತ ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರ ರತ್ನಾಕರ ಭಾಗ-೧, ೧೯೬೪, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

❖ ❖

೨೧

ಹಂಪೆಯ ಸ್ಮಾರಕಗಳಲ್ಲಿ ಗಜೇಂದ್ರಮೋಕ್ಷ ಅಥವಾ ವರದರಾಜನ ಶಿಲ್ಪಗಳು

ಡಾ. ಕೆ.ಎಂ.ಸುರೇಶ್

ವಿಶ್ವ ವಿಖ್ಯಾತವಾದ ಹಂಪಿಯು ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನಲ್ಲಿದ್ದು, ಹೊಸಪೇಟೆಯಿಂದ ಈಶಾನ್ಯದಿಕ್ಕಿಗೆ ಸುಮಾರು ೧೨ ಕಿ.ಮೀ. ದೂರಲ್ಲಿ ತುಂಗಭದ್ರಾ ನದಿಯ ಬಲಭಾಗದಲ್ಲಿ ನೆಲೆಗೊಂಡಿದೆ. (ಉತ್ತರ ಅಕ್ಷಾಂಶ ೧೫-೨೦ ಮತ್ತು ಪೂರ್ವ ರೇಖಾಂಶ ೭೦^{0}-೩೦^{0}) ಹಂಪೆಯನ್ನು ಈ ಮೊದಲು ಪಂಪಾಕ್ಷೇತ್ರ, ಪಂಪಾಪುರ, ಭಾಸ್ಕರಕ್ಷೇತ್ರ, ಪಂಪಾತೀರ್ಥ, ವಿರೂಪಾಕ್ಷಪುರ, ಹೊಸಪಟ್ಟಣ, ವಿದ್ಯಾನಗರ ಇತ್ಯಾದಿಯಾಗಿ ಕರೆಯಲಾಗಿದೆ. ಅಲ್ಲದೆ ಹಂಪೆಯನ್ನು ಉಲ್ಲೇಖಿಸುವ ಹಲವಾರು ಶಾಸನಗಳು, ತಾಮ್ರ ಪತ್ರಗಳು ದೊರಕುತ್ತವೆ.

ಪ್ರಾಗೈತಿಹಾಸಕಾಲದ ಮಾನವನ ನಿವಾಸವಾಗಿದ್ದ ಹಂಪೆಯು ಕರ್ನಾಟಕವನ್ನಾಳಿದ ಕದಂಬ, ಬಾದಾಮಿ ಚಾಳುಕ್ಯ, ರಾಷ್ಟ್ರಕೂಟ, ಕಲ್ಯಾಣ ಚಾಳುಕ್ಯ, ಹೊಯ್ಸಳ, ಕಲಚೂರ್ಯ, ಯಾದವರ ಆಡಳಿತ ವ್ಯಾಪ್ತಿಗೂ ಒಳಪಟ್ಟಿತ್ತು. ಮುಂದೆ ವಿಜಯನಗರದ ಅರಸರ ರಾಜಧಾನಿಯಾಗಿ ಮೆರೆಯಿತು. ಈ ಅವಧಿಯಲ್ಲಿ ವಿಜಯನಗರವು ರಾಜಕೀಯವಾಗಿ, ಆರ್ಥಿಕವಾಗಿ, ಧಾರ್ಮಿಕವಾಗಿ, ಶೈಕ್ಷಣಿಕವಾಗಿ ಸಮೃದ್ಧವಾಗಿತ್ತು. ಹಾಗಾಗಿ ಇಲ್ಲಿ ನೂರಾರು ದೇವಾಲಯಗಳು, ಸಾವಿರಾರು ಶಿಲ್ಪಗಳು ಜನ್ಮವೆತ್ತವು. ವಿಜಯನಗರದ ಆರಂಭದ ಅರಸರು ಶೈವ

ಆರಾಧಕರಾದರು. ವೈಷ್ಣವ ಮತಕ್ಕೂ ಪ್ರೋತ್ಸಾಹ ನೀಡಿದ್ದರು. ಶ್ರೀಕೃಷ್ಣದೇವರಾಯ ಮತ್ತು ನಂತರದ ಕೆಲ ಅರಸರು ಶ್ರೀವೈಷ್ಣವ ಮತಾವಲಂಬಿಗಳಾಗಿದ್ದರು. ಈ ಹಿನ್ನೆಲೆಯಲ್ಲಿ ಹಂಪೆಯಲ್ಲಿ ಶೈವ ಮತ್ತು ವೈಷ್ಣವ ದೇವಾಲಯಗಳು, ಮೂರ್ತಿಶಿಲ್ಪಗಳು ಬಹುದೊಡ್ಡ ಪ್ರಮಾಣದಲ್ಲಿ ನಿರ್ಮಾಣವಾದವು. ಅವುಗಳಲ್ಲಿ ಗಜೇಂದ್ರಮೋಕ್ಷನ ಶಿಲ್ಪವು ಒಂದು.

ಗಜೇಂದ್ರಮೋಕ್ಷ ಎಂಬುದು ವಿಷ್ಣುವಿನ ರೂಪಗಳಲ್ಲಿ ಒಂದು. ಗಜೇಂದ್ರಮೋಕ್ಷನು ವರದರಾಜನೆಂದು ಸಹ ಪ್ರಸಿದ್ಧನಾಗಿದ್ದನು. ವರದ ಎಂದರೆ ದಯಪಾಲಿಸು ಎಂದರ್ಥ. ವಿಷ್ಣುವನ್ನು ವರದರಾಜನೆಂದು ಕರೆಯಲು ಕಾರಣ ಅವನು ಆನೆಗಳ ಅರಸನಾದ ಗಜೇಂದ್ರನನ್ನು ರಕ್ಷಿಸುವುದರ ಜೊತೆಗೆ ವರವನ್ನು ದಯಪಾಲಿಸಿದ್ದನು. ಗಜೇಂದ್ರ ವಿಮೋಚನೆಗಾರನಾದ ವಿಷ್ಣುವಿನ ಈ ಅವತಾರದ ದೇವಾಲಯಗಳನ್ನು ದಕ್ಷಿಣಭಾರತದ ದಿವ್ಯಪ್ರಬಂಧ ಶ್ರೀ ವೈಷ್ಣವ ಸಂತ ಮತ್ತು ತಮಿಳುನಾಡಿನ ಕಂಚಿ ಪ್ರದೇಶದ ಸ್ವಾಮಿ ದೇವರಾಜದಲ್ಲಿ ಕಾಣಬಹುದು.

ಭಾಗವತ ಪುರಾಣದಲ್ಲಿ ಅನೇಕ ದಂತ ಕಥೆಗಳಿವೆ. ಈ ಕಥೆಗಳನ್ನು ಪ್ರತಿಬಿಂಬಿಸುವ ಶಿಲ್ಪಗಳು ದೇವಾಲಯಗಳ ಭಿತ್ತಿಗಳಲ್ಲಿ ಕಂಬಗಳಲ್ಲಿ ಮೂಡಿಬಂದಿವೆ. ಅದರಲ್ಲಿ ಬರುವ ದಂತಕಥೆಗಳಲ್ಲಿ "ಗಜೇಂದ್ರಮೋಕ್ಷ"ವು ಒಂದು.

ಈ ಕಥೆ ಹೀಗಿದೆ. ಒಮ್ಮೆ ಗಜೇಂದ್ರನು ತನ್ನ ಹೆಂಡತಿಯರೊಡನೆ ತ್ರಿಕೂಟ ಪರ್ವತದಲ್ಲಿರುವ ಸುಂದರವಾದ ಸರೋವರಕ್ಕೆ ವಿನೋದಕ್ಕಾಗಿ ಹೋಗುತ್ತಾನೆ. ಸರೋವರದಲ್ಲಿ ತನ್ನ ಕಾಲನ್ನು "ಗ್ರಹ" ಎಂಬ ಮೊಸಳೆ ಹಿಡಿದು ಒಳಗಡೆ ಎಳೆಯುತ್ತದೆ. ಅವನು ಎಷ್ಟೇ ಪ್ರಯತ್ನಿಸಿದರೂ ಅದರಿಂದ ಬಿಡಿಸಿಕೊಳ್ಳಲಾಗಲಿಲ್ಲ. ಕೊನೆಗೆ ಆ ಕ್ರೂರ ಪ್ರಾಣಿಯಿಂದ ಬಿಡಿಸುವಂತೆ ಭಗವಂತ ಶ್ರೀ ವಿಷ್ಣುವಿನಲ್ಲಿ ಪರಿ ಪರಿಯಾಗಿ ಪ್ರಾರ್ಥಿಸುತ್ತಾನೆ. ಆ ಸಮಯದಲ್ಲಿ ವಿಷ್ಣು ಗಜೇಂದ್ರನ ಮೊರೆಗೆ ಓಗೊಟ್ಟು ತನ್ನ ಗರುಡ ವಾಹನದ ಮೇಲೇರಿ ಬಂದು 'ಗ್ರಹ'ನನ್ನು ಚಕ್ರದಿಂದ ಕೊಲ್ಲುತ್ತಾನೆ. ನಿಜವಾಗಿ 'ಗ್ರಹ' ಬೇರೆ ಯಾರು ಆಗಿರದೆ ಸಂತದೇವನಿಂದ ಮೊಸಳೆ ರೂಪವಾಗುವಂತೆ ಶಪಿಸಿಕೊಂಡ ಗಂಧರ್ವರಾಜ "ಹುಹು" ಆಗಿದ್ದನು. ಮೊಸಳೆ ಸತ್ತ ನಂತರ "ಹುಹು" ಶಾಪದಿಂದ ಮುಕ್ತನಾಗಿ ಪುನಃ ತನ್ನ ನಿಜ ಸ್ವರೂಪ ಪಡೆದುಕೊಂಡನು. ಇಲ್ಲಿ ಗಜೇಂದ್ರನು ಅಗಸ್ತ್ಯನೆಂಬ ಮಹರ್ಷಿಯಿಂದ ಶಾಪಗ್ರಸ್ತನಾಗಿ ಆನೆಯಾಗಿದ್ದನು. ಹಿಂದೆ ಈತ ಇಂದ್ರದ್ಯುಮ್ನನೆಂದು ಕರೆಸಿಕೊಂಡು ಹಳೆ ಪಾಂಡ್ಯದ ರಾಜ್ಯವಾಳುತ್ತಿದ್ದನೆಂದು ಪುರಾಣ ಹೇಳುತ್ತದೆ. ಕೊನೆಗೆ ವಿಷ್ಣುವಿನ ಸ್ಪರ್ಷದಿಂದ ಆನೆಯ ರೂಪ ಕಳೆದುಕೊಂಡು ವಿಷ್ಣುವಿನ ಸೇವಕನಾದನು.

ಕ್ರಿ.ಶ. ೬ನೇ ಶತಮಾನದ ದೇವಗರ್ ದೇವಾಲಯದಲ್ಲಿ ಈ ಕಥೆಯನ್ನು ಬಿಂಬಿಸುವ ಶಿಲ್ಪಕೃತಿಗಳು ಕೆತ್ತಲ್ಪಟ್ಟಿವೆ. ಮುಂದೆ ವಿಜಯನಗರ ಕಾಲದ ತಮಿಳುನಾಡಿನ ಕಂಚಿಯಲ್ಲಿ 'ವರದರಾಜ' ಹೆಸರಿನಲ್ಲಿ ದೇವಾಲಯವನ್ನೇ ಕಟ್ಟಿಸಿರುವುದನ್ನು ನಾವು ಕಾಣುತ್ತೇವೆ. ಈ ಕಥೆಯನ್ನು ಬಿಂಬಿಸುವ ವೈಷ್ಣವ ಆಳ್ವಾರರುಗಳ ಹಾಡುಗಳು, ತಿರುಮಂಗೈ ಆಳ್ವರರ ದೇವರ

ಸ್ತೋತ್ರಗಳು ಮುಖ್ಯವಾಗಿವೆ. ಇವುಗಳಲ್ಲಿ ಕಥೆ ಈ ಕೆಳಗಿನಂತೆ ಮೂಡಿಬಂದಿದೆ. ಆನೆಯು ಕೊಳದಿಂದ ಹೂವುಗಳನ್ನು ಸಂಗ್ರಹಿಸುವದು, ಮೊಸಳೆಯಿಂದ ಕಾಲು ಹಿಡಿಯಲ್ಪಟ್ಟಿದ್ದು, ನಾರಾಯಣ - ವಿಷ್ಣುವಿನಲ್ಲಿ ಅವನು ಉದ್ರಿಕ್ತನಾಗಿ ಮೊರೆಯಿಡುವುದು, ದೇವರು ಅವನ ಸಹಾಯಕ್ಕಾಗಿ ತ್ವರೆಮಾಡಿದ್ದು ಮತ್ತು ತನ್ನ ಚಕ್ರದಿಂದ ಮೊಸಳೆಯನ್ನು ಕೊಂದಿದ್ದು ಎಲ್ಲವನ್ನೂ ವಿವರಿಸಲಾಗಿದೆ. ಗತ ಸ್ಥಳ ಪುರಾಣವಾದ ತಾಮ್ರ ಪರಣಿ ಮಹಾತ್ಮೆ ಸಹ ಈ ಕಥೆಯ ಬಗ್ಗೆ ವಿವರಣೆ ನೀಡುತ್ತಾನೆ.

ಗೋಪಿನಾಥರಾವ್ ಅವರು ಮಧ್ಯಕಾಲೀನ ವರದರಾಜನ ಎರಡು ಶಿಲ್ಪಕೃತಿಗಳ ಬಗ್ಗೆ ಹೇಳುತ್ತಾನೆ. ಒಂದು ಕರ್ನಾಟಕದಿಂದ ಮತ್ತೊಂದು ತಮಿಳುನಾಡಿನಿಂದ ವಿಷ್ಣುವಿನ ಬಗ್ಗೆ ಅವರು ಹೀಗೆ ವಿವರಿಸುತ್ತಾರೆ. ವಿಷ್ಣು, ಗರುಡನ ಭುಜಗಳ ಮೇಲೆ ಸವಾರಿ ಮಾಡುತ್ತಾ ತನ್ನ ಹಿಂದಿನ ಬಲಗೈಯಲ್ಲಿ ಚಕ್ರವನ್ನು ಹಿಡಿದು ಮೇಲಕ್ಕೆ ಎತ್ತಲ್ಪಟ್ಟು ಶಂಖವನ್ನು ಹಿಂದಿನ ಎಡಗೈಯಲ್ಲಿ ಮತ್ತು ಗದೆಯನ್ನು ಮುಂದಿನ ಬಲಗೈಯಲ್ಲಿ ಹಿಡಿದಂತೆ ಕಾಣುತ್ತಾನೆ. ಮೇಲಕ್ಕೆ ಎತ್ತಲ್ಪಟ್ಟ ಕೈ ಬಹುಶಃ ಚಕ್ರವನ್ನು ಗಜೇಂದ್ರನೆಂಬ ಆನೆಯ ಕಾಲನ್ನು ಹಿಡಿದಂತೆ ಮೊಸಳೆಯ ಕಡೆ ಎಸೆಯಲ್ಪಟ್ಟ ಅಭಿನಯವಾಗಿದ್ದು, ವಿಷ್ಣುವಿನ ಪಾದಗಳು ಗರುಡನ ಭುಜಗಳ ಮೇಲೆ ನಿಂತಿವೆ. ಗರುಡನ ಕೆಳಗೆ ದುಃಖಿತ ಗಜೇಂದ್ರ ತನ್ನ ಸೊಂಡಿಲಿನಲ್ಲಿ ಕಮಲ ಹಿಡಿದು ಮೇಲಕ್ಕೆತ್ತಿ ವಿಷ್ಣುವಿನಲ್ಲಿ ಮೊರೆಯಿಡುವುದು ಕಾಣಿಸುತ್ತದೆ. ಮೊಸಳೆಯು ತನ್ನ ಶಕ್ತಿಯುತವಾದ ಹಲ್ಲಿನಿಂದ ಗಜೇಂದ್ರನ ಕಾಲು ಹಿಡಿದು ಹೆದರಿಸಲ್ಪಟ್ಟಂತೆ ಕಾಣುತ್ತದೆ, ಹಾಗೂ ಅದರ ಕತ್ತಿನ ಮೇಲೆ ವಿಷ್ಣುವಿನ ಚಕ್ರದ ಆಕೃತಿ ಮತ್ತು ಒಬ್ಬ ಮನುಷ್ಯ ಕೈಗಳನ್ನು ಅಂಜಲಿ ಮುದ್ರ ಹಿಡಿದು ಕುಳಿತಿರುವ ದೃಶ್ಯವಿದೆ. ಮೊಸಳೆ ಬೆನ್ನ ಮೇಲೆ ಚಿತ್ರಿಸಿರುವ ಚಕ್ರವು ಮೊಸಳೆಯನ್ನು ಕೊಂದ ಬಗ್ಗೆ ತಿಳಿಸುವದಲ್ಲದೆ, ಮನುಷ್ಯ ಆಕೃತಿಯು ಮೊಸಳೆ ರೂಪದಿಂದ ವಿಮೋಚನೆಗೊಂಡ ಗಂಧರ್ವನನ್ನು ಬಿಂಬಿಸುತ್ತದೆ. ಕೊಳದಲ್ಲಿರುವ ನೀರನ್ನು ಅಲೆಗಳ ಮಾದರಿಯಲ್ಲಿರುವ ಗೆರೆಗಳು ತೋರಿಸುತ್ತವೆ.

ಈ ಸುಂದರವಾದ ಕಥೆಯು ವಿಷ್ಣುವಿನ ಕರಿವರದ ಅಥವಾ ಗಜೇಂದ್ರವರದನೆಂದು ತಿಳಿಸಿ, ಇದು ಒಂದು ಶಿಲ್ಪಕೃತಿಯಲ್ಲಿ ಅದ್ಭುತ ವಿಷಯವಸ್ತುವಾಗಿ ೬ನೇ ಶತಮಾನದಲ್ಲಿ ಗುಪ್ತ ದೇವಾಲಯ ದೇವಗರ್ ಎಂಬಲ್ಲಿ ಬಿಂಬಿಸಲಾಗಿದೆ. ಇಲ್ಲಿ ಗ್ರಹವು ಮೇಲೆ ಭಾಗವತ ಪುರಾಣದಲ್ಲಿ ತಿಳಿಸಿರುವಂತೆ ಮಕರ ಅಥವಾ ಮೊಸಳೆಯಾಗಿರದೆ ಅದು ಸೊಂಟದವರೆಗೆ ಮನುಷ್ಯ ರೂಪವಾಗಿದ್ದು, ಸೊಂಟದ ಕೆಳಗೆ ದೊಡ್ಡ ನಾಗರಹಾವು ಅಥವಾ ನಾಗರಾಜ ಸರ್ಪದಂತೆ ಸುತ್ತಿಕೊಂಡಿದೆ. ಸರ್ಪವು ದೈವಿಕ ಮತ್ತು ಸ್ವರ್ಗೀಯ ಹುಹುವಾಗಿದ್ದು, ಅರ್ಧಭಾಗ ಹೆಡೆಗಳ ರೂಪ ಮತ್ತು ಸರ್ಪದ ಸುತ್ತುವರಿಕೆಯಾಗಿದೆ.

ಗಜೇಂದ್ರಮೋಕ್ಷನ ಕಥೆಯನ್ನು ಶಿಲ್ಪಕೃತಿಯಲ್ಲಿ ತುಂಬಾ ಸ್ವಾರಸ್ಯವಾಗಿ ಬಾಗಲಕೋಟೆ ಜಿಲ್ಲೆಯ ಪಟ್ಟದಕಲ್ಲಿನಲ್ಲಿ ವಿವರಿಸಲಾಗಿದೆ. ಇಲ್ಲಿ ರಾಕ್ಷಸ ರೂಪದ ಪ್ರಾಣಿಯನ್ನು ಮೊಸಳೆ ಅಥವಾ ಸರ್ಪದ ಬದಲಾಗಿ ದೊಡ್ಡ ಆಮೆಯಾಗಿ ಬದಲಿಸಲಾಗಿದೆ. ಪುರಾಣದ ಪ್ರಕಾರ

ಆಮೆಯು ಸಹ ಬಲಿಷ್ಠವಾಗಿದ್ದು ಇಲ್ಲಿನ ಕಥೆಯಲ್ಲಿ ಆನೆ ಮತ್ತು ಆಮೆಯು ದೊಡ್ಡ ಸರೋವರದಲ್ಲಿ ಮಾರಕ ಕಾದಾಟಕ್ಕೆ ಇಳಿದಿದ್ದವು. ಆನೆ ಮತ್ತು ಆಮೆಯ ನಡುವಿನ ಕಾದಾಟದ ದಂತಕತೆಯು ರಾಮಾಯಣದ ಗ್ರಂಥದಲ್ಲಿ ತಿಳಿಸಲಾಗಿದ್ದು, ಒಂದು ಕೆರೆಗೂ ಇನ್ನೊಂದು ದಡಕ್ಕೆ ಒಂದಕ್ಕೊಂದು ಎಳೆಯಲು ಪ್ರಯತ್ನಿಸುತ್ತಿದ್ದವು.

ಇತ್ತೀಚೆಗೆ ಉಲ್ಲೇಖವಾದ ಆನೆಯು ರಾಕ್ಷಸ ಆಕಾರ ಪ್ರಾಣಿಯಿಂದ ಹಿಡಿಯಲ್ಪಟ್ಟ ಬಗ್ಗೆ ಪಾಲಿ ಸಾಹಿತ್ಯದ ಕಾಕ್ಕೇಟಜಾತಕ ಸಾಹಿತ್ಯದಲ್ಲಿ ಕಾಣಸಿಗುತ್ತದೆ. ಇದು ನಾಗ ಜಾತಕ ಎಂದು ಮಧ್ಯಪ್ರದೇಶದ ಬಾರುತ್ ಶಿಲ್ಪಕೃತಿಯ ಶೈಲಿಯಾಗಿದೆ. ಕಕ್ಕಾಟ ಜಾತಕ ಕಥೆಯು 2ನೇ ಶತಮಾನದ್ದಾಗಿದ್ದು, ಡೇವಿಡ್ಸ್ ಅವರ ಪ್ರಕಾರ ಬೌದ್ಧ ಕಥೆಗಳ ಜಾತಕ ನಂತರವಾದದ್ದು ತುಂಬಾ ಇತ್ತೀಚಿನ ಮತ್ತು ಬಾರೂತ್ ಶಿಲ್ಪಾಕೃತಿ ಕೆತ್ತಲ್ಪಟ್ಟ ವೇಳೆಯಲ್ಲಿ ತುಂಬಾ ಬದಲಾವಣೆ ಪಡೆದಿತ್ತು.

ಗಜೇಂದ್ರಮೋಕ್ಷ ಅಥವಾ ಕರಿವರದ ಕಥೆಯು ಹಂಪಿಯ (ಪಲಕ ನಂ. ೧,೨,೩) ತಿರುವೆಂಗಲನಾಥ ದೇವಾಲಯ (ಜನಪ್ರಿಯವಾಗಿ ಅಚ್ಯುತರಾಮ ದೇವಾಲಯವೆಂದು ಗುರುತಿಸಲ್ಪಡುತ್ತದೆ)ದ ಪಕ್ಕದಲ್ಲಿರುವ ಅಮ್ಮನ ದೇವಾಲಯದ ಮುಖಮಂಟಪದ ಕಂಬದ ಮೇಲೆ ಮೂರು ಭಾಗಗಳಲ್ಲಿ ಕೆತ್ತಲಾಗಿದೆ.

ಮೊದಲನೆಯ ಹಂತದಲ್ಲಿ ಆನೆ ತನ್ನ ಸೊಂಡಿಲಿನಲ್ಲಿ ಕಮಲವನ್ನು ಹಿಡಿದು ನೀರಿನಲ್ಲಿ ನಿಂತ ಭಂಗಿ, ಆನೆಯ ಹಿಂದಿನ ಭಾಗದಲ್ಲಿ ಮೊಸಳೆಯು ತನ್ನ ಬಲಿಷ್ಠವಾದ ಹಲ್ಲಿನಿಂದ ಆನೆಯ ಕಾಲನ್ನು ಹಿಡಿದಿದ್ದನ್ನು ತೋರಿಸಲಾಗಿದೆ. ಮೊಸಳೆಯು ಕೆರೆಯ ನೀರಿನಿಂದ ಹೊರಬರುವುದನ್ನು ಅಲೆಗಳಂತಿರುವ ಗೆರೆಗಳು, ಗಿಡಗಳ ಮುಖಾಂತರ ಸಾಂಪ್ರದಾಯಿಕವಾಗಿ ಚಿತ್ರಿಸಲಾಗಿದೆ. ಆನೆ ಮತ್ತು ಮೊಸಳೆಯ ಚಿತ್ರಗಳನ್ನು ಒಂದು ಕಂಬದ ಮುಖದ ಭಾಗದಲ್ಲಿ ತುಂಬಾ ಸುಂದರವಾಗಿ ಪ್ರದರ್ಶಿಸಲಾಗಿದೆ.



ಎರಡನೆಯ ಹಂತದಲ್ಲಿ ವಿಷ್ಣು ವರದರಾಜನ ರೂಪದಲ್ಲಿರುವ ತನ್ನ ವಾಹನ ಗರುಡನ ಮೇಲೆ ಸವಾರಿ ಮಾಡುವುದನ್ನು ತೋರಿಸಲಾಗಿದೆ. ವಿಷ್ಣು ಗರುಡನ ಬೆನ್ನಮೇಲೆ ಕುಳಿತಿದ್ದಾನೆ. ವಿಷ್ಣುವಿಗೆ ನಾಲ್ಕು ಕೈಗಳಿದ್ದು, ಕೆಳಗಿನ ಬಲ ಮತ್ತು ಎಡ ಕೈಗಳು ಅನುಕ್ರಮವಾಗಿ ಅಭಯ ಮತ್ತು ವರದ ಮುದ್ರೆಯನ್ನು ಹಿಡಿದಿವೆ. ಅವನು ಚಿಕ್ಕದಾದ ಕಿರೀಟಮುಕುಟ, ಕುಂಡಲಗಳನ್ನು ಹಾಗೂ ಸಾಮಾನ್ಯವಾಗಿ ವೈಷ್ಣವ ದೇವತೆಗಳು ಧರಿಸುವಂತ ಆಭರಣಗಳನ್ನು ಧರಿಸಿದ್ದನು. ಗರುಡನ ಮಂಡಿಯೂರಿರುವ ಮತ್ತು ಗಾಳಿಯಲ್ಲಿ ಹಾರುವ ದೃಶ್ಯಗಳನ್ನು ತೋರಿಸಲಾಗಿದೆ. ಅವನು ಚಿಕ್ಕದಾದ ಕರಂಡಮುಕುಟ ಮತ್ತು ರೂಢಿಯಲ್ಲಿ ರುವ ಬೇರೆ ಆಭರಣಗಳನ್ನು ತನ್ನ ದೇಹಕ್ಕೆ ಅಲಂಕರಿಸಿಕೊಂಡಿದ್ದನು. ಇನ್ನುಳಿದ ವಿವರಗಳನ್ನು ಸರಿಯಾಗಿ ಸ್ಪಷ್ಟಪಡಿಸಿಲ್ಲ.



ಮೂರನೆಯ ಹಂತದಲ್ಲಿ ವಿಷ್ಣುವನ್ನು ಆಯಾತಕಾರವಾದ ಆಧಾರಸ್ತಂಭದ ಮೇಲೆ ದ್ವಿಭಂಗ ಆಕಾರದಲ್ಲಿ ನಿಂತಿರುವ ವರದರಾಜನಂತೆ ತೋರಿಸಲಾಗಿದೆ. ಅವನಿಗೆ ನಾಲ್ಕು ಕೈಗಳಿದ್ದು, ಕೆಳಭಾಗದ ಬಲ ಮತ್ತು ಎಡ ಕೈಗಳು ಅವನ ಎದುರುಗಡೆ ನಿಂತಿರುವ ಆನೆಯ ತಲೆಯ ಮೇಲೆ ಇರಿಸಲಾಗಿದ್ದು, ಇದು ವರದರಾಜ ಮೊಸಳೆಯನ್ನು ಕೊಂದ ನಂತರ ಆನೆಯಾದ ಗಜೇಂದ್ರನಿಗೆ ಆಶೀರ್ವದಿಸುವುದನ್ನು ಸೂಚಿಸುತ್ತದೆ. ಮೇಲ್ಭಾಗದ ಬಲ ಮತ್ತು ಎಡ ಕೈಗಳು ಚಕ್ರ ಮತ್ತು ಶಂಖವನ್ನು ತನ್ನ ಮಧ್ಯ ಬೆರಳುಗಳ ನಡುವೆ ಹಿಡಿದಿವೆ. ಅವನು ಕಿರೀಟಮುಕುಟ, ಕುಂಡಲ ಧರಿಸುವದರ ಜೊತೆಗೆ ಬೇರೆ ರೂಢಿಯಲ್ಲಿರುವ ಆಭರಣಗಳನ್ನು ಸಹ ಅಲಂಕರಿಸಿಕೊಂಡಿದ್ದಾನೆ.



ಆನೆಯಾದ ಗಜೇಂದ್ರನನ್ನು ಅದೇ ಆಯಾತಕಾರವಾದ ಆಧಾರಸ್ತಂಭದ ಮೇಲೆ ನಿಂತಿರುವಂತೆ ಪ್ರದರ್ಶಿಸಲಾಗಿದೆ. ಆನೆಯ ತಲೆಯನ್ನು ಭಗವಂತನಿಂದ ಆಶೀರ್ವಾದ ಸ್ವೀಕರಿಸಲೆಂದು ವಿಷ್ಣುವಿನ ಮುಂದೆ ಬಾಗಿದಂತೆ ತೋರಿಸಲಾಗಿದೆ. ಗಜೇಂದ್ರಮೋಕ್ಷನ ಕಥೆಯನ್ನು ತುಂಬಾ ಸುಂದರವಾಗಿ ಕಂಬದ ಪ್ರತಿ ಮುಖದ ಮೇಲೆ ಒಂದರಂತೆ ಅನುಕ್ರಮವಾಗಿ ಮೂರರಲ್ಲಿ ಪ್ರದರ್ಶಿಸಲಾಗಿದೆ.

❖ ❖

೨೨

ವಿಜಯನಗರ ಕಾಲದ ರೇಖಾಚಿತ್ರ ಕಲೆ (ಶೈಲಿ) : ಒಂದು ಟಿಪ್ಪಣಿ

ಡಾ. ಎಚ್.ಆರ್.ರಘುನಾಥ ಭಟ್

ಜನಸಮುದಾಯದ ಸಮಗ್ರ ಜೀವನವನ್ನು ಕುರಿತು ಮತ್ತು ಜನಜೀವನದ ಎಲ್ಲ ಕ್ಷೇತ್ರಗಳಿಗೆ ಸಂಬಂಧಪಟ್ಟ ಸ್ಮರಣಾರ್ಹ ಸಂಗತಿಗಳ ವೈಜ್ಞಾನಿಕವಾದ ಹಾಗೂ ಅಧಿಕೃತವಾದ ನಿರೂಪಣೆ ಸಾಂಸ್ಕೃತಿಕ ಚರಿತ್ರೆಯಲ್ಲಿ ಪ್ರಮುಖವಾಗುತ್ತದೆ. ಅಂದರೆ ಜನ ಬದುಕಿದ ರೀತಿ, ಅವರ ನಡೆನುಡಿ, ಸಂಪ್ರದಾಯ, ಆಚಾರ, ಮತ-ಧರ್ಮ, ಬೆಳಗಿಸಿದ ಕಲೆ, ಸಾಹಿತ್ಯ, ಆರ್ಥಿಕ ವ್ಯವಸ್ಥೆ ಮುಂತಾದ ಸಕಲ ವ್ಯವಹಾರಗಳನ್ನು ಒಳಗೊಂಡಿರಬೇಕಾಗುತ್ತದೆ. ಮುಖ್ಯವಾಗಿ ಜನರು ಎತ್ತಿಹಿಡಿದ ಜೀವನ ಮೌಲ್ಯಗಳನ್ನೂ ಪ್ರತಿಬಿಂಬಿಸಬೇಕು. ಅವನು ಪ್ರಾಕೃತ ಮಟ್ಟದಿಂದ ಸಂಸ್ಕೃತಿಯ ಮಟ್ಟವನ್ನು ಏರುತ್ತ ಪ್ರಗತಿಪರವಾದ ಬಗೆಯನ್ನು ನಿರೂಪಿಸುವಂತಿರಬೇಕು.

ದೇಶದ ಸಕಲ ಸಂಪತ್ತು, ವ್ಯಾಪಾರ, ವ್ಯವಹಾರ, ವಿದ್ಯೆ, ಕಲಾಕುಶಲತೆ, ವಿಜ್ಞಾನಾಭಿವೃದ್ಧಿ, ಮತಾಚಾರ, ಧರ್ಮ, ಸಂಯಮ, ಯಂತ್ರ ಪರಿಶ್ರಮ, ಸಂಸ್ಕೃತಿ ಪ್ರಚಾರ ತತ್ವಶೋಧನೆ ಇವೆಲ್ಲವೂ ಜನಜೀವನದ ಮುಖ್ಯ ಲಕ್ಷಣಗಳಾದ್ದರಿಂದ, ಇವೆಲ್ಲವೂ ಚರಿತ್ರೆಯ ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳೆಂದು ಸಹಜವಾಗಿಯೇ ಪರಿಗಣಿತವಾಗಿದೆ.

ಒಂದು ದೇಶದ, ಕಾಲಘಟ್ಟದ ಚರಿತ್ರೆ "ಸಮಗ್ರ ಜೀವನದ ಪ್ರತಿಬಿಂಬ'' ಎಂಬುದನ್ನು ಒಪ್ಪಿಕೊಂಡಲ್ಲಿ ಅದನ್ನು

ಪಡಿಮೂಡಿಸುವಲ್ಲಿ ಮುಖ್ಯಪಾತ್ರ ವಹಿಸುತ್ತಿರುವ ಸಂಗತಿಗಳಲ್ಲಿ ಕಲೆ, ವಾಸ್ತುಶಿಲ್ಪ, ಚಿತ್ರ, ರೇಖಾಚಿತ್ರಕಲೆ ಅನನ್ಯವಾಗಿದೆ. ಕಲೆ ಒಂದು ಕಾಲದ, ಒಂದು ದೇಶದ, ಒಂದು ಜನಾಂಗದ ಹೃದಯವನ್ನು ಮಿಡಿಯುತ್ತದೆ. ಜನತೆಯ ಆಶೆ ಆಕಾಂಕ್ಷೆಗಳನ್ನು, ಮನೋಭಾವನೆಗಳನ್ನು ಅವರು ಬದುಕಿ ಬಾಳಿದ ರೀತಿಯನ್ನು ಬಿಂಬಿಸುತ್ತದೆ. ಅವರು ನಂಬಿದ್ದ ಜೀವನ ಮೌಲ್ಯಗಳನ್ನು ಸೂಚಿಸುತ್ತದೆ. ಕಲಾಕ್ಷೇತ್ರಕ್ಕೆ ವಿಜಯನಗರ ಸಾಮ್ರಾಜ್ಯದ ಕೊಡುಗೆ ಸಾಮಾನ್ಯವಾದುದೇನಲ್ಲ. ಆ ಕಲೆಯ ವಿವಿಧ ಪ್ರಕಾರಗಳು ಕುತೂಹಲಕಾರಿಯಾಗಿವೆ.

ಎರಡು ಶತಕಗಳಿಗೂ ಹೆಚ್ಚುಕಾಲ ಅಸ್ತಿತ್ವದಲ್ಲಿದ್ದು, ಆಗಿನ ಅಖಿಲ ದಕ್ಷಿಣಭಾರತದ ಒಂದು ಪ್ರಭಾವಶಾಲಿ ರಾಜಕೀಯ ಬಲವಾಗಿದ್ದುಕೊಂಡು ಜನತೆಗೆ ಶಾಂತಿ, ಸಂರಕ್ಷಣೆ ನೀಡಿದ್ದಲ್ಲದೆ, ಸಂಸ್ಕೃತಿಯನ್ನು ವೈವಿಧ್ಯಮಯಗೊಳಿಸಿದ ಖ್ಯಾತಿ ವಿಜಯನಗರ ಸಾಮ್ರಾಜ್ಯಕ್ಕಿದೆ. ಸಂಗಮ, ಸಾಳುವ, ತುಳುವ, ಅರವೀಡು ಮನೆತನಗಳ ಅಧಿಕಾರಾವಧಿಯಲ್ಲಿ ಹೊರಗಿನ ಶತ್ರುಗಳು ಹಾಗೂ ಒಳಜಗಳ ಕಾರಣದಿಂದ ಕಾಲಕಾಲಕ್ಕೆ ಹತಬಲವಾದರೂ ಹತಾಶವಾಗದೆ, ಬುಕ್ಕರಾಯ, ಪ್ರೌಢದೇವರಾಯ, ಕೃಷ್ಣದೇವರಾಯ, ರಾಮರಾಯರಂಥ ಶೂರರೂ, ಮುತ್ಸದ್ದಿಗಳೂ ಅದರ ಏಳಿಗೆಗೆ ಕಾರಣರಾದರು. ಕೃಷ್ಣದೇವರಾಯನಂತೂ ಆ ಸಾಮ್ರಾಜ್ಯದ ವೈಭವದ ಮುಕುಟಮಣಿಯಂತಿದ್ದ ಆ ರಾಯನ ದಕ್ಷತೆ, ಸಾಹಸ, ವೈಭವ, ದೈವಭಕ್ತಿ, ಧರ್ಮಶ್ರದ್ಧೆ, ಜನತಾ ವಾತ್ಸಲ್ಯ, ಸಮತಾ ದೃಷ್ಟಿ, ಕಲಾಭಿಮಾನ, ರಸಿಕತೆ, ವಿದ್ಯಾಭಿಮಾನವೇ ಮುಂತಾದವು ಪ್ರಶಂಸೆಗೆ ಅರ್ಹವಾದ ಸಂಗತಿಗಳಾಗಿವೆ. ತುಂಗಭದ್ರೆಯ ಮಹಾಪೂರದಂತೆ ವಿಜಯನಗರ ಸಾಮ್ರಾಜ್ಯದಲ್ಲಿ ಮುಖ್ಯವಾಗಿ ರಾಜಧಾನಿಯಲ್ಲಿ ಧನ-ಧಾನ್ಯ-ಜಯ-ಸುಖ-ಧರ್ಮ ತುಂಬಿ ತುಳುಕುತ್ತಿತ್ತೆಂದು ದೇಶ-ವಿದೇಶದವರು ಹೊಗಳಿದ್ದಾರೆ. ಕೆಲವೊಮ್ಮೆ ವಿಮರ್ಶಕರು ಇವೆಲ್ಲ ಕೇವಲ ಕಾಲ್ಪನಿಕ ವರ್ಣನೆಗಳಿಂದ ಕೂಡಿದ ಅಸಂಬದ್ಧ ಪ್ರಲಾಪ, ಉತ್ಪ್ರೇಕ್ಷೆ, ಅತ್ಯುಕ್ತಿ, ಅತಿಶಯೋಕ್ತಿಗಳಿಂದ ಕೂಡಿದ ಅಪಲಾಪ ಎಂದು ಟೀಕಿಸಿದ್ದುಂಟು.

ಕೃಷ್ಣದೇವರಾಯನ ನಂತರ ಬಂದವರು ಅಷ್ಟೇನೂ ದಕ್ಷರಾಗಿರಲಿಲ್ಲ. ತುಂಗಭದ್ರೆಯ ಪ್ರವಾಹ ಬಂದಿಳಿದಂತೆ ಆ ರಾಜ್ಯದ ಸಂಪತ್ತು, ವೈಭವ ಇಳಿಮುಖವಾಗತೊಡಗಿತು. ಕೊಂಚ ಧರ್ಮಚ್ಯುತಿಯಾಗತೊಡಗಿತು. ಕ್ಷುಲ್ಲಕ ರಾಜಕಾರಣದಿಂದ ಸಾಮ್ರಾಜ್ಯದ ಸ್ವರ್ಣಸ್ವಪ್ನ ಕೆಲಮಟ್ಟಿಗೆ ಪುಡಿಯಾಯಿತು. ಹೊರ ವಿಘಾತಶಕ್ತಿ ಅಂತಃಕಲಹ ಪ್ರವೃತ್ತಿಗಳು ಸಾಮ್ರಾಜ್ಯದ ಶಕ್ತಿಹೀನತೆಗೆ ಕಾರಣಗಳಾದವು. ವಿಜಯನಗರದ ಇನ್ನೂರು ವರ್ಷದ ಸಾಹಿತ್ಯ, ಕಲೆ, ಸಂಸ್ಕೃತಿಯನ್ನು ವಿಶ್ಲೇಷಿಸಿದರೆ ಆ ಪರಿಸರದ ಪ್ರಜ್ಞೆ ಮೂಡಿತು. ಸಂಕೀರ್ಣತೆಯೇ ಈ ಯುಗದ ಆಂದೋಲನವನ್ನು ನಡೆಸಿತು. ವೀರಶೈವ ವಾಙ್ಮಯದ ಪುನರುಜ್ಜೀವನವೂ ಒಂದೆಡೆ ಮುನ್ನಡೆಯಿತು. ದೇಶೀಯತೆಯೂ ಹಲವೆಡೆ ದಿಗ್ವಿಜಯ ಸಾರಿದ್ದುಂಟು.

"ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತ ಸಂಸ್ಕೃತಿಯ ರೂಪಕ" ಎಂದು ಬಾರ್ಬೋಸ್ ಹೇಳಿದ್ದು ಪ್ರಾಚೀನ ಸಂಪ್ರದಾಯಗಳ ಪೋಷಣೆಯ ದೃಷ್ಟಿಯಿಂದ ತುಸು ಸತ್ಯವೆನಿಸುತ್ತದೆ.

ಅದರ ಪ್ರಮುಖ ಅರಸರು ನಿಜಕ್ಕೂ ಕೊಡುಗೈ ದೊರೆಗಳಾಗಿದ್ದರಿಂದ ಸಾಹಿತ್ಯ-ಸಂಗೀತ-ನೃತ್ಯ-ಶಿಲ್ಪಕಲೆ ವೈವಿಧ್ಯಮಯವಾಗಿ ಬೆಳೆದವು. ಈ ಹಿನ್ನಲೆಯಲ್ಲಿ ವಿಜಯನಗರ ಕಾಲದ ರೇಖಾಚಿತ್ರಕಲೆಯ ಕೆಲಸಂಗತಿಗಳನ್ನು ಕುರಿತು ಒಂದು ಚಿಂತನೆಯನ್ನು ಈ ಲೇಖನದಲ್ಲಿ ಮಾಡಲು ಪ್ರಯತ್ನಿಸಲಾಗಿದೆ.

ಗೆರೆ, ಗೀಟು, ರೇಖೆ ಮನುಕುಲದಷ್ಟೇ ಪ್ರಾಚೀನವಾದರೂ, ಆ ಮೂಲಕ ಮಾನವ ಕಲಾತ್ಮಕ ಸಂವಹನ ಮಾಡುತ್ತ ಬಂದಿರಬಹುದಾದರೂ ಹದಿನೈದನೆಯ ಶತಮಾನದಿಂದ ಶುದ್ಧ ಕಲೆಯಾಗಿ ಇದು ಜಗತ್ತಿನ ಹಲವೆಡೆ ಜನಪ್ರಿಯವಾಗಿರುವುದು ಕುತೂಹಲಕಾರಿ ಸಂಗತಿ. ರೇಖೆಯ ಗುಣ ಕೇವಲ ಎಲ್ಲೆ ತೋರಿಸುವುದಕ್ಕೆ ಸೀಮಿತವಾಗಿಲ್ಲ. ಇದಕ್ಕೂ ಮೀರಿದ ಸತ್ವ ಗುಣಗಳು ಇದರಲ್ಲಿವೆ. ಅದರ ಚಾಲನೆಯಲ್ಲಿ ಒಂದು ಅಂತರ್ಗತ ಚೈತನ್ಯವಿದೆ. ಇದರಿಂದ ಒಂದು ಸಂಗತಿ ಸ್ಪಷ್ಟ. ಸಾಧಾರಣವೆನಿಸುವ ಒಂದು ಗೀರು, ರೇಖೆ, ಪಳಗಿದ ಕೈಯಲ್ಲಿ ಎಷ್ಟು ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮವಾಗುತ್ತದೆ ಎಂಬುದನ್ನು ಪ್ರತ್ಯಕ್ಷ ನೋಡಿಯೇ ಅರಿಯಬೇಕು. ಮನದಾಳದ ನೈಜ-ಭ್ರಾಮಕ ಕಲ್ಪನೆಗಳಿಗೆಲ್ಲ ಒಂದು ರೂಪುಕೊಡುವ ಶಕ್ತಿಯಿದೆ. ಈ ರೇಖೆಗೆ ಚಿತ್ರ, ಶಿಲ್ಪ ಮೂಲತಃ ರೂಪತಾಳುವುದೇ ಈ ರೇಖೆಯಿಂದ. ಅದರ ಒಳವಿವರಗಳು ಎದ್ದುಕಾಣುವುದೂ ರೇಖೆಯ ಮೂಲಕವೇ. ಭಾರತೀಯ ಕಲೆಯಲ್ಲಿ ರೇಖೆಗೆ ಬಹು ಮಹತ್ವವಿದೆ. 'ರೇಖಾಂಪ್ರಶಂಸಾತ್ಯಾಚಾರ್ಯ', 'ರೇಖಾಂ ಪ್ರಶಂಸಂತಿ ಆಚಾರ್ಯಃ (ವಿಷ್ಣುಧರ್ಮೋತ್ತರಂ)', ''ಡ್ರಾಯಿಂಗ್ ದಿ ಪಾದರ್ ಆಫ್ ಪೇಟಿಂಗ್'' (ಪಸ್ಸೆರಿ, ೧೭೭೨) ಎಂಬ ಹೇಳಿಕೆ ಚಿತ್ರಕನ ರೇಖಾ ಸಿದ್ಧಿಯನ್ನು ಪ್ರಶಂಸಿದ ಸಂದರ್ಭಸೂಚಿ. 'ಎನ್‌ಗ್ರೇವಿಂಗ್ಸ್' ಅಥವಾ ಅಚ್ಚು ಚಿತ್ರಕಲೆ ಹೆಚ್ಚು ಪ್ರಚಾರಗೊಂಡ ಕಾಲಘಟ್ಟ ವಿಜಯನಗರ ಸಾಮ್ರಾಟರದ್ದು. ಅದರ ಹೊಸ ಸಾಧ್ಯತೆಗಳನ್ನು ಈ ಕಾಲ ತೋರಿಸಿ ಕೊಟ್ಟಿದೆ. ನಿಯತಕ್ರಮ ಅನುಸರಿಸಿ ನಿಷ್ಕೃತ ವಸ್ತುನಿರೂಪಣೆ ಮಾಡುತ್ತಿದ್ದ ಕಡೆ ಈ ರೇಖೆ ಹೊಸ ಹೊಸ ರಚನೆಗಳನ್ನು ಸೃಷ್ಟಿಸಲು ಕಾರಣವಾಯಿತು. ರೇಖಾಚಿತ್ರವೆಂದರೆ ಮೂಲಚಿತ್ರದ ಒಂದು ಕರಡುಪ್ರತಿ ಎಂಬ ಭಾವನೆ ಮೀರಿಸಿದ ಈ ಕಾಲದಲ್ಲಿ ರೇಖಾಚಿತ್ರಕಲೆ ಒಂದು ಸ್ವಯಂ ಪೂರ್ಣ ಕಲೆಯಾಗಿಯೂ ಬೆಳೆದುಬಂದಿದೆ. ರೇಖೆಯೇ ರೇಖಾಚಿತ್ರವಾಗಿದ್ದನ್ನು ಗಮನಿಸಬೇಕು. ರೇಖಾಚಿತ್ರ ರೇಖೆಗಳಿಂದ ಮೂಡಿಸಿದ ಚಿತ್ರವಷ್ಟೆ. ಅದು ಗೆರೆಯಾಗಿರಬಹುದು; ಕೊರೆದಿದ್ದಿರಬಹುದು; ಗೀರಿದಿದ್ದಿರಬಹುದು. ಬಹುತೇಕವಾಗಿ ಸರಳತೆಗಿಳಿಸಿದ ಆದರ್ಶೀಕೃತ ರೂಪ. ರೇಖಾಚಿತ್ರ ಮತ್ತು ಲಿಪಿಲೇಖನ ಕಲೆ ಜೊತೆ ಜೊತೆಗೆ ಬಂದದ್ದನ್ನು ಈ ಕಾಲದಲ್ಲಿ ಹೆಚ್ಚಾಗಿ ನೋಡಬಹುದು. ಸಮತಲ ಶಿಲೆಯ ಮೇಲೆ ಲೋಹದ ತಗಡಿನ ಮೇಲೆ ಮೂರು ಆಯಾಮಗಳ ಸೂಚನೆಯಿಲ್ಲದೆ ರೂಪತಾಳಿದ್ದನ್ನು ಗಮನಿಸಬಹುದು. ಇದು ದಪ್ಪ, ತೆಳು, ಕೆಲವೊಮ್ಮೆ ನವಿರಾಗಿರುತ್ತದೆ. ರೇಖಾಚಿತ್ರ ರಚಿಸಿದ ಆ ಕಾಲದ ಕಲಾವಿದನ ಮನಸ್ಥಿತಿ, ಚಿತ್ತವೃತ್ತಿ, ಭಾವನೆ ಆ ಕಲೆಯಿಂದ ಗೊತ್ತಾಗುತ್ತದೆ. ವಿಜಯನಗರ ವರ್ಣಚಿತ್ರದಲ್ಲೂ ರೇಖಾಕೌಶಲ್ಯ ಎದ್ದುಕಾಣುತ್ತದೆ. ಈ ಕಲೆಯಲ್ಲಿ

ಕಂಡುಬರುವಂತೆ ಆಕಾರ ನಿರೂಪಣೆಯಲ್ಲಿ ರೇಖೆಯೇ ಪ್ರಧಾನವಾಗಿರುತ್ತದೆ. ನಾವೀಗ ಕೈಗೆತ್ತಿಕೊಂಡಿರುವುದು ವರ್ಣಲೇಪವಿಲ್ಲದ ಶುದ್ಧರೇಖಾಚಿತ್ರಕಲೆ, ನಿಶ್ಚಿತರೂಪವನ್ನು ವ್ಯಕ್ತಪಡಿಸಲು ಅರ್ಥಪೂರ್ಣವಾಗಿ ಬಳಸಿದ ರೇಖೆ-ಚಿತ್ರ ಮಾತ್ರ.

ಶಿಲ್ಪ ಚಿತ್ರಕ್ಕೆ ಪ್ರಾಥಮಿಕ ಪೂರ್ವಸಿದ್ಧತೆಯಾಗಿ ಕೆಲವಡೆ ರೇಖಾಚಿತ್ರಗಳಿವೆ. ಶಿಲ್ಪ, ವರ್ಣಚಿತ್ರಕಲೆಗೆ ಪೂರ್ವಭಾವಿಯಾಗಿ ರೇಖೆ, ಕೊರೆದ, ಬರೆದ ಕುರುಹುಗಳೂ ಇವೆ. ಶಾಸನಶಿಲಾ ಪಲಕ, ಮೇರೆ, ಸೀಮ್ಮಾ, ಗಡಿಕಲ್ಲುಗಳಲ್ಲಿ, ವರ್ಣಚಿತ್ರ ಪಟ್ಟಿಕೆಗಳಲ್ಲಿ ಇದನ್ನು ಗಮನಿಸಬಹುದು. ಇವು ಒಂದು ರೀತಿಯ ಆಧಾರ ರೇಖಾಚಿತ್ರ (ಅಂಡರ್ ಡ್ರಾಯಿಂಗ್ಸ್). ಮೊದಲಿಗೆ ಹಾಕುವ ಕರಡುನಕ್ಷೆಗೆ 'ಆಕಾರ ಮಾತೃಕಾ ಲೇಖ' ಎಂದು ಮಾನಸೋಲ್ಲಾಸಕಾರ ಕರೆದಿದ್ದು ಬಣ್ಣತುಂಬಿದ ನಂತರವೂ ಅಂತಿಮದಲ್ಲಿ ಹಾಕುವ ರೇಖೆ 'ಆಕಾರ ಜಾನಿಕಾ ಲೇಖ' ಎಂದೆನಿಸಿಕೊಳ್ಳುತ್ತದೆ. ಕಾವ್ಯಗಳಲ್ಲಿ ಇದನ್ನು ಲಾಕ್ಷಾರಸ ರೇಖಾಶುದ್ದಿ' ಎಂದು ಕರೆಯಲಾಗಿದೆ.

ಆಶ್ಚರ್ಯ ಎಂದರೆ ೧೫ನೆಯ ಶತಮಾನದಲ್ಲಿ ರೇಖಾಚಿತ್ರ ಹೆಚ್ಚು ಜನಪ್ರಿಯವಾಯಿತು. ಜೊತೆಗೆ ಕೆಲವು ಜಟಿಲತಂತ್ರಗಳ ಅನುಸರಣೆಯೂ ಆರಂಭವಾಯಿತು. ಲೋಹದ ಮೊನೆಯಲ್ಲಿ ಕೊರೆದು ರೇಖಿಸುವುದು ಸಾಮಾನ್ಯವಾದಂತೆ ಕೆಂಪು 'ಆಕರ್' ವರ್ಣದಲ್ಲಿ ಅಂಚುಗೆರೆ ಬರೆಯುವುದೂ ಸರ್ವೇಸಾಮಾನ್ಯವಾಯಿತು. ಈ ಬಗೆಯ ಚಿತ್ರ ಶಿಲ್ಪಕಲೆಗಳ ಚೆಂದ ಅದರ ಮೂಲಮಾನದ ರೇಖೆಯನ್ನೇ ಅವಲಂಬಿಸಿರುವುದು ಸ್ಪಷ್ಟ. ರೇಖೆಯ ಮೇಲಣ ಹಿಡಿತ, ಕೆಲವೊಮ್ಮೆ ಬೆರಗು ಹುಟ್ಟಿಸುವಂತಹದು. ಕೊರೆದ 'ಕಾವಿಕಲೆ'ಯಲ್ಲಿ ಇದನ್ನು ಮುಖ್ಯವಾಗಿ ಗಮನಿಸಬೇಕು. ವಿಜಯನಗರ ಕಾಲದ ಇನ್ನೊಂದು ಬೆಳವಣಿಗೆಯೆಂದರೆ Portraiture 'ಸಾದೃಶ್ಯ ಪ್ರತಿಕೃತಿ'. ಇದನ್ನು ಶಿಲ್ಪಶಾಸ್ತ್ರದಲ್ಲಿ 'ವಿದ್ದಚಿತ್ರ' ಎಂದಿದೆ. ಈ ಕಾಲದಲ್ಲಿ ವಿದ್ಧ ಸಾಲಭಂಜಿಕೆಗಳು ಸಾಕಷ್ಟಿವೆ. ಇದನ್ನು "Portrait Statuette" ಎನ್ನುತ್ತಾರೆ. ಈ ತರಹದ ವಿದ್ಧ ಸಾಲಬಂಜಿಕೆಗಳು ಸಾಕಷ್ಟಿವೆ. ಈ ತರಪದ ವಿದ್ಧ ಸಾಲಭಂಜಿಕೆಯರನ್ನು ನಿಜಜೀವನದ 'ಮಾಡೆಲ್'ಗಳಿಂದ ಆಯ್ದು ನಿರ್ಮಿಸುತ್ತಿದ್ದರು. ಹೀಗಾಗಿ ಕಲಾವಿದನ ಪ್ರತಿಭೆ, ಜಾಣ್ಮೆ, ಕೌಶಲ್ಯ ಎದ್ದು ಕಾಣುತ್ತದೆ. ಶಿಲಾಶಿಲ್ಪ, ವರ್ಣಚಿತ್ರಗಳಿರುವಂತೆ ಲೋಹಕರ್ಮದಲ್ಲೂ "ಪೋರ್ಟ್ರೇಟ್ ಫಿಗರ್ಸ್" ರಚಿಸುವುದು ಇಲ್ಲಿ ಗಮನಾರ್ಹ. ಶ್ರೀ ಕೃಷ್ಣದೇವರಾಯನ ಲೋಹಶಿಲ್ಪ ಪತ್ನಿ ಸಮೇತರಾಗಿರುವುದನ್ನು ತಿರುಪತಿಯಲ್ಲಿ ನೋಡಬಹುದಷ್ಟೆ. ರಾಜಮಹಾರಾಜರಲ್ಲದೆ, ಅಮಾತ್ಯ, ನಾಯಕ, ಭಕ್ತ, ಮುನಿ, ಸಾಧಕರ ರೇಖಾ ಶಿಲ್ಪಕಲಾಕೃತಿಗಳೂ ಅಧಿಕವಾಗಿ ಕಾಣಸಿಗುತ್ತವೆ. ಇವೆಲ್ಲ ವಿಜಯನಗರ ಶಿಲ್ಪ ಮೊದಲು ರೇಖಾಚಿತ್ರಕಾರನಾಗಿರುವುದು ನಮ್ಮ ನಜರಿಗೆ ಬರುತ್ತದೆ. ರಸ್ಕಿನ್ ಗುರುತಿಸಿದಂತೆ ಈ ಕಾಲದಲ್ಲಿ ಮೂರು ಬಗೆಯ ರೇಖಾಚಿತ್ರಗಳನ್ನು ನೋಡಬಹುದು. ಎಕ್ಸ್ ಪೆರಿಮೆಂಟಲ್ (ಪ್ರಯೋಗಾತ್ಮಕ) ಡಿಟರಮಿನೆಂಟ್ (ಸೂತ್ರಪಾತ್ರ) ರೇಖಾ ಮತ್ತು 'ಕಮೆಮೊರೇಟಿವ್' ಶುಭವಾರ್ತಿರೇಖಾ, ಬನವಾಸಿಯ ಮಧುಕೇಶ್ವರಾಲಯದ ಆವರಣದಲ್ಲಿಟ್ಟಿರುವ ಒಂದು

ಶಿಲಾಶಾಸನದ ಶಿರೋಭಾಗದಲ್ಲಿರುವ ರೇಖಾಚಿತ್ರ ಸಂಯೋಜನೆಯನ್ನು ಇಲ್ಲಿ ನಮ್ಮ ವಿಶ್ಲೇಷಣೆಗೆ ಎತ್ತಿಕೊಳ್ಳೋಣ. ೧೫೫೨ರ ಜುಲೈ ೨೨, ಶುಕ್ರವಾರದಂದು ಹೊರಡಿಸಿದ ೨೪ ಸಾಲುಗಳ ಈ ಶಾಸನದ ಪಾಠದಷ್ಟೇ ಅಥವಾ ಅದಕ್ಕಿಂತ ಆಕರ್ಷಕವಾದದ್ದು ಈ ರೇಖಾಚಿತ್ರಕಲೆ ಎಂಬುದು ಹಲವರ ಗಮನಕ್ಕೆ ಬಾರದಿದ್ದರಿಂದ ಶಾಸನತಜ್ಞರಂತೂ ಇದರ ಬಗ್ಗೆ ಒಂದು ಪುಟ್ಟ ವಾಕ್ಯದಲ್ಲಿ ಹೇಳಿ ಕೈಬಿಟ್ಟಿದ್ದರಿಂದ ಇದನ್ನಿಲ್ಲಿ ಪ್ರತ್ಯೇಕವಾಗಿ ಹೆಸರಿಸುತ್ತಿದ್ದೇನೆ. ವಿಜಯನಗರದ ಅರವೀಡು (ಅರವೀಟಿ) ವಂಶದ ರಂಗರಾಜಯ್ಯ ವಿದ್ಯಾನಗರಿ (ವಿಜಯನಗರ)ಯಲ್ಲಿ ರಾಜ್ಯಭಾರ ಮಾಡುತ್ತಿದ್ದಾಗ ಅವನ ಮಕ್ಕಳಾದ ರಾಮರಾಜಯ್ಯ ತಿರುಮಲರಾಜಯ್ಯ ಮತ್ತು ವೆಂಕಟಾದ್ರಿ ರಾಜಯ್ಯ ಮಹಾಮಂಡಲೇಶ್ವರರಾಗಿ ಚಂದ್ರಗುತ್ತಿ ದುರ್ಗದಲ್ಲಿ ಆಳುತ್ತಿದ್ದರು. ಆಗ ಅವರ ಊಳಿಗದ ಪಡುಮಪ್ಪ ಅವ ಆಜ್ಞಾನುಸಾರ ಬನವಾಸಿಯ ಮಧುಕೇಶ್ವರ ದೇವಾಲಯ ಸಮುಚ್ಚಯದಲ್ಲಿ ಎರಡು ರಂಗಮಂಟಪಗಳನ್ನು ಕಟ್ಟಿಸಿದ. ಒಂದು ಪಾರ್ವತಿಗುಡಿಗೆ, ಇನ್ನೊಂದು ನರಸಿಂಹ ಗುಡಿಗೆ. ಆ ವಂಶದವರ ಆಯುರಾರೋಗ್ಯ ಐಶ್ವರ್ಯಾಭಿವೃದ್ಧಿ, ಪುತ್ರಪ್ರಪೌತ್ರಾಭಿವೃದ್ಧಿಗಾಗಿ, ಧನಧಾನ್ಯಾಧಿ-ವಸ್ತುವಾಹನಾದಿಗವಾಶಪಶು ಹಿರಣ್ಯಾಭಿವೃದ್ಧಿಗಾಗಿ, ದೇವಬ್ರಹ್ಮರ ವೇದೋಕ್ತ ಆಶೀರ್ವಚನದಿಂದ, ಧರ್ಮಾರ್ಥ ಕಾಮಮೋಕ್ಷ ಚತುರ್ವಿದ ಪುರುಷಾರ್ಥ ಸಿದ್ಧಿಸಲು, ಅವರ ಉನ್ನತ ಪರಂಪರೆಯು ಆ ಚಂದ್ರಾರ್ಕ ಸ್ಥಾಯಿಯಾಗಿ ಆದಿತ್ಯ ನವಗ್ರಹರು ಅನುಗ್ರಹಿಸಬೇಕೆಂದು ಬರೆಸಿದ ಶಿಲಾಶಾಸನದ ಜೊತೆಗೆ ಆ ಕುಟುಂಬದವರ ರೇಖಾಚಿತ್ರಣವನ್ನು ಅವರ ಹೆಸರಿನೊಟ್ಟಿಗೇ ಕೊರೆಸಿದ್ದು ಬೆರಗು ಹುಟ್ಟಿಸುತ್ತದೆ.

'ಬನವಾಸಿ ೫೧' ಎಂದು ದಾಖಲಾಗಿರುವ ಈ ಶಾಸನಶಿಲೆ (೧೯೪ x ೫೬ ಸೆಂ.ಮೀ)ಯ ಗಣನೀಯಭಾಗ (೫೮ x ೨೮ ಸೆಂ.ಮೀ) ಈ ರೇಖಾಚಿತ್ರ ಸಂಯೋಜನೆಗಾಗಿಯೇ ಮೀಸಲು. ಸಾಂಪ್ರದಾಯಿಕವಾಗಿ ಬಲ ಮೇಲ್ಮೂಲೆಯಲ್ಲಿ ಚೌತಿಚಂದ್ರ ಎಡ ಮೇಲ್ಮೂಲೆಯಲ್ಲಿ ಸೂರ್ಯನನ್ನು ರೇಖಿಸಿದ್ದಾಗಿದೆ. ಚಿತ್ರಕಾರನು ಅದೇ ಸಾಲಲ್ಲಿ ಬಲಬದಿಗೆ ರಾಮ-ಲಕ್ಷ್ಮಣ-ಸೀತೆ, ಹನುಮಂತರನ್ನು ಸಾಲಾಗಿ ಚಿರಣೆರೇಖಾಕೃತಿಯಲ್ಲಿ ಕೊರೆದಿದ್ದಾನೆ. ಎಡಬದಿಗೆ ಚಕ್ರ-ಸಿಂಹಮುಖ-ಶಂಖ, ದರ್ಪಣ(?), ಪುಟ್ಟ ಗಣಪತಿ ಮೂರ್ತಿಯನ್ನು ರೇಖಿಸಲಾಗಿದೆ. ಇವಿಷ್ಟೂ ಮೊದಲ ಸಾಲಲ್ಲಿ ಒಂದು ಪಟ್ಟಿಕೆಯಾಗಿ ಸಂಯೋಜಿಸಲಾಗಿದೆ. ಇದರ ಕೆಳಭಾಗದಲ್ಲಿ ಬಲಬದಿಯಲ್ಲಿ ಎಡಕ್ಕೆ ಮುಖಮಾಡಿದ ಅಶ್ವಾರೋಹಿ ದೇವದಂಪತಿ (ಚತುರ್ಮುಖದೇವ) ಹಾಗೂ ದ್ವಿಭುಜನರಸಿಂಹರು ಉನ್ನತ ಪೀಠದ ಮೇಲಿರುವಂತೆ ಚಿತ್ರಿತರಾಗಿದ್ದಾರೆ. ನರಸಿಂಹನ ಪೀಠದ ಮೇಲೆ ಗರುಡನಿದ್ದಂತೆ, ಆತನ ಎಡಬುಜಬದಿಗೆ ಬಾಲ ಮೇಲೆತ್ತಿ ಸುರುಳಿ ಮಾಡಿಕೊಂಡು ಅಂಜಲಿಮುದ್ರೆಯಲ್ಲಿರುವ ಹನುಮಂತನ ಕಿರುಚಿತ್ರಗಳಿವೆ. ಇವುಗಳ ಎಡಬಾಹುವಿನಲ್ಲಿ ಸಾಲಾಗಿನಿಂತ ಮಹಾಮಂಡಲೇಶ್ವರ ಕುಮಾರರ ರೇಖಾಚಿತ್ರಗಳು ಸೊಗಸಾಗಿ ಮೂಡಿಬಂದಿವೆ. ನರಸಿಂಹದೇವರತ್ತ ಭಕ್ತಿಭಾವದಿಂದ

ಮುಖಮಾಡಿ ಕರಜೋಡಿಸಿ ನಿಂತ ರಾಮರಾಜಯ್ಯ, ತಿರುಮಲ ರಾಜಯ್ಯ ಹಾಗೂ ವೆಂಕಟಾದ್ರಿರಾಜಯ್ಯರ ಮೈಮಾಟ, ಉದ್ದನೆಯ ಕಿರೀಟ, ವೇಷಭೂಷಣ ರಾಜಠೀವಿಗೆ ತಕ್ಕಂತಿದೆ. ಜೊತೆಗೆ ಅವರವರ ಆಪ್ತ ಅಧಿಕಾರಿ ಪ್ರಮುಖರೂ ನಿಂತಿರುವುದು ಗಮನಾರ್ಹ. ಇದಕ್ಕಿಂತ ಕುತೂಹಲಕರ ಸಂಗತಿಯೆಂದರೆ ಶ್ರೀರಂಗರಾಜಯ್ಯದೇವ ಮಹಾ ಅರಸುಗಳ ಕುಮಾರರ ವ್ಯಕ್ತಿನಾಮ ಅನುಕ್ರಮವಾಗಿ ರಾಮರಾಜಯ್ಯ, ತಿರುಮಲರಾಜಯ್ಯ ಹಾಗೂ ವೆಂಕಟಾದ್ರಿರಾಜಯ್ಯ ಎಂಬುದಾಗಿ ಶಿರೋಭಾಗದಲ್ಲಿ ಶಾಸನವಾಗಿ ಕಂಡರಿಸಿರುವುದು. ಕೊನೆಯಲ್ಲಿ ಕರಜೋಡಿಸಿ ನಿಂತ ಊಳಿಗದ ಪದುಮಪ್ಪನಿದ್ದಾನೆ. ಆತನೂ ಸರ್ವಾಲಂಕಾರ ಭೂಷಿತವಷ್ಟೇ ಅಲ್ಲ, ತುಸು ಮುಂಭಾಗದ ಟೋಪಿ ಕಿರೀಟದಂತಿರುವ ಶಿರಸ್ತ್ರಾಣಧಾರಿ ಇವರೆಲ್ಲರನ್ನೂ ಸಮಾನಪಾತಳಿಯ ಮೇಲೆ ನಿಂತಂತೆ ರೇಖಾತ್ಮಕವಾಗಿ ಚಿತ್ರಿಸಲಾಗಿದೆ.

ಸ್ವಾರಸ್ಯದ ಸಂಗತಿಯೆಂದರೆ ಈ ರೇಖಾಚಿತ್ರ ಸಂಯೋಜನೆಯಲ್ಲಿ ಸೂಕ್ಷ್ಮತರತಮ ಭಾವ ಅಂತಸ್ತಿನ ನಿರೂಪಣೆಯು ಚೆನ್ನಾಗಿದೆ. ("ಥಿಯರಿ ಆಫ್ ಸೆಂಟ್ರಿಪುಗ್ಯಾಲಿಟಿ" ಎನ್ನುವ ತತ್ವಾನುಸರಣೆ? ಅಂದರೆ ರಾಮರಾಜಯ್ಯನನ್ನು ಮೊದಲಿಗೆ ತೋರಿಸಿದ್ದು ಆತ ಉಳಿದವರೆಲ್ಲರಿಗಿಂತ ಹೆಚ್ಚು ಎತ್ತರದವನಾಗಿ ನಂತರ ತಿರುಮಲರಾಜಯ್ಯ ತುಸು ಕಡಿಮೆ ಎತ್ತರದವನಾಗಿ ಅವನಿಗಿಂತ ತುಸು ಕಡಿಮೆ ಎತ್ತರದವನಾಗಿ ವೆಂಕಟಾದ್ರಿ ರಾಜಯ್ಯನು ಚಿತ್ರಿತನಾಗಿದ್ದಾನೆ. ಇವರ ಜೊತೆಗಿದ್ದ ಆಪ್ತ ಅಧಿಕಾರಿಗಳ ಎತ್ತರದಲ್ಲೂ ಕ್ರಮಾನುಸಾರ ಎತ್ತರದಲ್ಲಿ ತಾರತಮ್ಯ ಸಂಗತಿಯನ್ನು ಗಮನಿಸಬಹುದು. ಈ ಮೂವರೂ ಮಹಾಮಂಡಳೇಶ್ವರರ ನಂತರ ಅವರ ಹಿಂಗಡೆಯಲ್ಲಿ ನಿಂತ ಊಳಿಗದ ಪದುಮಪ್ಪ ಇನ್ನೂ ಕಿರಿಯವ ಎಂಬುದು ಆತನ ಎತ್ತರದಲ್ಲಿ ಸೂಚಿತವಾಗಿದೆ. ಇದು ಒಂದು ರೀತಿಯಲ್ಲಿ ನಮ್ಮ ಸಾಮಾಜಿಕ ಕೌಟುಂಬಿಕ ಪರಂಪರಾನುಗತವಾಗಿದೆ. ಒಂದು "ಹೈಯರಾರ್ಕಿಕಲ್ ಆರ್ಡರ್ " ತತ್ವಾನುಸಾರವಾಗಿದೆ ಎನ್ನಬಹುದು. ನಿಶ್ಚಿತಕಾಲವಿವರುವುಳ್ಳ ಶಾಸನ ಸಹಿತ ಇರುವ ಈ ರೇಖಾಚಿತ್ರಕಲೆಯಲ್ಲಿ "ವಿಜಯನಗರ ಶೈಲಿ" ಎಂದು ಸ್ಪಷ್ಟವಾಗಿ ಗುರುತಿಸಬಲ್ಲ ಕೆಲ ಲಕ್ಷಣಗಳಿವೆ. ಅವು ಈ ಕೆಳಗಿನಂತಿವೆ:

೧. ದೇವಾನುದೇವ ಅರಸರನ್ನು ಉನ್ನತ ವ್ಯಕ್ತಿತ್ವದವರಾಗಿ, ಹಿತಮಿತದಪ್ಪದವರಾಗಿ ಚಿತ್ರಿಸುವುದು. ಇಲ್ಲಿ Stylisation ಸ್ವಲ್ಪ ರೂಢಿಮೂಲವಾಗಿ, ಸಂಪ್ರದಾಯಸ್ಥವಾಗಿ, ಸರಳೀಕರಿಸಿರುವುದು ಕಂಡುಬರುತ್ತದೆ.

೨. ವರ್ಣ ಚಿತ್ರಕಲೆಯಲ್ಲಿ ಕಾಣುವಂತೆ, ರೇಖಾಚಿತ್ರದಲ್ಲೂ 'ಪ್ರೊಫೈಲ್' ಆಗಿ ಪಾರ್ಶ್ವನೋಟದವರಾಗಿಯೇ ಚಿತ್ರಿಸಿರುವುದು. ಅಂದರೆ ಮುಖವನ್ನು ಹೊರತುಪಡಿಸಿ ಉಳಿದಭಾಗ ನಮಗೆದುರು ನಿಂತಾಗ ಕಾಣುವಂತೆ ಚಿತ್ರಿಸಿ, ಮುಖಮಾತ್ರ ಬಲಬದಿಗೆ ಹೊರಳಿಸಿದಂತಿರುತ್ತದೆ. ಕೋಲುಮುಖ, ಚೂಪುಮೂಗು, ಲಂಬಾಂತರದ ಉದ್ದನೆಯ ಕಿರೀಟಧರಿಸಿದ ಈ ರಾಜಮುಖದಲ್ಲಿ ಬದಿನೋಟದಲ್ಲಿ ಸಾಮಾನ್ಯವಾಗಿ ಒಂದೇ ಕಣ್ಣು ನೋಟಕನಿಗೆ ಕಾಣುವುದು ಸಹಜ. ಆದರೆ ಈ ಶೈಲಿಯಲ್ಲಿ ಪ್ರಜ್ಞಾಪೂರ್ವಕವಾಗಿ ಎರಡೂ

ಕಣ್ಣುಗಳನ್ನೂ ತೋರಿಸಿರುತ್ತಾರೆ. 'ಪ್ರೊಫೈಲ್ ಸ್ಟಡಿ'ಯಲ್ಲಿ ವಾಸ್ತವವಾಗಿ ಕಾಣಬಾರದ ಈ ಲಕ್ಷಣ ಇಷ್ಟೇಕೆ ಎದ್ದು ಕಾಣಬೇಕು? ಅರ್ಥವಾಗುವುದಿಲ್ಲ. ಇದೊಂದು ತಪ್ಪದೇ ಗಮನಿಸಬೇಕಾದ ಗುಣಲಕ್ಷಣ ಎಂದು ಮಾತ್ರ ಇಲ್ಲಿ ಹೇಳಬಲ್ಲೆ. ಈ ಲಕ್ಷಣ ವಿಜಯನಗರೋತ್ತರದಲ್ಲೂ ಮುಂದುವರೆದದ್ದು ಕಂಡುಬಾರದಿರದು.

೩. ವ್ಯಕ್ತಿ ಚಿತ್ರಣದಲ್ಲಿ ಮೂಗು ಚೂಪು ಮಾತ್ರವಲ್ಲ, ಎದ್ದು ಕಾಣುವಂತೆ ಪ್ರಧಾನವಾಗಿ ಇರುವುದು. ಅಂತೂ ಇವರೆಲ್ಲ ದೊಡ್ಡ ಮೂಗಿನ ದೊಡ್ಡ ಜನರಾಗಿ ಕಾಣುತ್ತಾರೆ.

೪. ಉಟ್ಟಪಂಜೆಯ ನೆರಿಗೆ ತುಂಬ ಸಂಪ್ರದಾಯಸ್ಥರಾಗಿ, ಕ್ರಮ ಕ್ರಮವಾಗಿ ಮಡಚಿಟ್ಟಂತೆ ತುಸು ಕೃತಕವಾಗಿ ಕಂಡುಬರುತ್ತಿದೆ (ಅಚ್ಯುತದೇವರಾಯರುಟ್ಟ ಪಂಜೆ ಗಮನಿಸಿ). ಉದ್ದನೆಯ, ಎತ್ತರದ ನಿಲುವಿನಲ್ಲಿರುವ ಆಳುವ ಅರಸನನ್ನೂ ಚಿತ್ರಿಸಿರುವುದು ಸಾಮಾನ್ಯ ಲಕ್ಷಣ. ಇದೂ ತುಸು ಕೃತಕವಾಗಿ ಕಾಣುತ್ತದೆ.

೫. ನಾಟಕೀಯತೆ ರಾಜ್ಯ ಠೀವಿಯಲ್ಲಿ, ಭಕ್ತಿಸೂಚನೆಯಲ್ಲಿ ನಿಲುವಿನಲ್ಲಿ ಸ್ಪಷ್ಟವಾಗಿ ಕಂಡುಬರುತ್ತಿದೆ. ಬುದ್ಧಿಪೂರ್ವಕವಾಗಿ ಅಥವಾ ಪ್ರಜ್ಞಾಪೂರ್ವಕವಾಗಿ ಒಂದು ಸಂಪ್ರದಾಯಸ್ಥ ಸಾಂಸ್ಕೃತಿಕ ಪರ್ಯಾವರಣದಲ್ಲೇ ಇರುವವರಂತೆ ಚಿತ್ರಿತರಾಗಿರುವುದು ನಮ್ಮ ಗಮನಕ್ಕೆ ಬರುತ್ತದೆ. ಇದನ್ನು ಕೆಲವರು 'ಟ್ರೀಟ್ ಮೆಂಟ್ ಇಜ್‌ಸ್ಟಾಟಿಕ್ ಮತ್ತು ಕ್ರೂಡ್' ಎಂದು ಟೀಕಿಸಿದ್ದುಂಟು.

ಈ ಹಿಂದಿದ್ದ ಸಹಜ ಸೊಬಗು, ನವಿರಾದ ಸೂಚ್ಯಭಾವ ಬದಿಸರಿದು, ಕೃತಕತೆ, ಡಾಂಬಿಕತೆ, ನಾಟಕೀಯತೆ ಮುಂದಾಗಿರುವುದರಿಂದ ನಿಜ ಸೌಂದರ್ಯ ಮೀಮಾಂಸೆಯ ದೃಷ್ಟಿಯಿಂದ ಇದು ಅವನತಿಯ ಸೂಚನೆಯೆಂದೂ ವಿಮರ್ಶಿಸಿದ್ದಾರೆ. ಆದರೆ ಕಲೆ ಕಾಲಧರ್ಮಾನುಸಾರಿಣಿ ಸಮಕಾಲೀನ ಸಂಸ್ಕೃತಿಯ ಪ್ರತಿಬಿಂಬ ಎನ್ನುವುದಾದರೆ ವಿಜಯನಗರ ಕಾಲದ ಗುಣ ಮಹಿಮೆ ಸಹಜವಾಗಿಯೇ ಅವರ ಈ ರೇಖಾ ಕಲೆಯಲ್ಲೂ ಧ್ವನಿತವಾಗಿದೆ ಎಂದು ಹೇಳಿಬಿಡಬಹುದು.

ಉಳಿದ ಕಲೆಯಂತೆ ರೇಖಾಚಿತ್ರಕಲೆಯಲ್ಲೂ ಮತಧರ್ಮಭಾವ ಪ್ರಭಾವ ಪ್ರಧಾನವಾಗಿವೆಯೆನ್ನಬಹುದಾದರೂ ಲೌಕಿಕ ವಸ್ತುವಿಷಯ ಇಲ್ಲಿಯ ಕಲಾವಿದರನ್ನು ಆಕರ್ಷಿಸದೆ ಬಿಡಲಿಲ್ಲ. 'ಪೋರ್‌ಟ್ರೇಟ್ ಫಿಗರ್ಸ್' ಈ ಕಾಲಘಟ್ಟದಲ್ಲಿ ಮತ್ತು ಅನಂತರದಲ್ಲಿ ಹೆಚ್ಚು ಜನಪ್ರಿಯವಾಯಿತು. ದೇವಾಲಯಗಳ ಸಭಾಮಂಟಪದಲ್ಲಿ ಮುಖ್ಯವಾಗಿ ರಂಗಮಂಟಪದಲ್ಲಿ ಹಾಸುಗಲ್ಲಿನ ಮೇಲೆ ಸಾಷ್ಟಾಂಗ ನಮಸ್ಕಾರದಲ್ಲಿರುವಂತೆ ರೇಖಿಸಿದ ಈ ಚಿತ್ರಗಳ ದೊಡ್ಡಪಟ್ಟಿಯನ್ನೇ ನಾವು ಮಾಡಬಹುದು. ಇವೆಲ್ಲ ಒಂದೇ ಕಾಲಘಟ್ಟದವಲ್ಲ ನಿಜ. ಆದರೆ ಆ ಕಾಲದ ಒಟ್ಟಾರೆ ಶೈಲಿಯಲ್ಲಿವೆ ಎಂಬುದು ವಾಸ್ತವ. ಗುಣಮಟ್ಟದಲ್ಲೂ ತರತಮವಾಗಿವೆ ನಿಜ. ಹಂಪಿ ವಿರೂಪಾಕ್ಷಮಂದಿರ ಒಂದರಲ್ಲೇ ಇಂಥ ಸುಮಾರು ನೂರೈವತ್ತು ರೇಖಾ ಚಿತ್ರಗಳನ್ನು ಗುರುತಿಸಬಹುದು. ಲೇಪಾಕ್ಷಿಯಲ್ಲೂ ಈ ಬಗೆಯ ರೇಖಾಚಿತ್ರಗಳು ಸಾಕಷ್ಟಿವೆ. ಬನವಾಸಿ, ಕೆಳದಿ, ಕೊಲ್ಲೂರು, ಇಟಗಿ

ಮುಂತಾದೆಡೆಗಳಲ್ಲಿ ವಿಜಯನಗರೋತ್ತರ ಕಾಲದಲ್ಲೂ ಈ ಬಗೆಯ ರೇಖಾಚಿತ್ರ ಸಂಪ್ರದಾಯ ಮುಂದುವರೆದಿರುವುದನ್ನು ಗಮನಿಸಬಹುದು. ಇವುಗಳಲ್ಲಿ ಕೆಲವು ಶಾಸನಸಹಿತ, ಹಲವು ಶಾಸನ ರಹಿತವಾಗಿವೆ. ಈ ಚಿತ್ರಣದಲ್ಲೂ ಒಂದು ಸಂಪ್ರದಾಯವಿದೆ. ದೇವರಿಗೆ ನೇರವಾಗಿ ಎದುರಾಗಿ ನಮಸ್ಕರಿಸದೇ ತುಸು ಕೋನ ಅಂದರೆ ಬದಿಯಿಂದ ಸಾಷ್ಟಾಂಗ ನಮಸ್ಕರಿಸುವಂತೆ ಚಿತ್ರಿಸಲಾಗಿದೆ. ಇದು ನಮ್ಮ ಸಂಪ್ರದಾಯ. ಒಟ್ಟಿನಲ್ಲಿ 'ಸಂಪ್ರದಾಯ ಶರಣತೆ' ಪ್ರತಿ ಹಂತದಲ್ಲೂ ಈ ಕಾಲಘಟ್ಟದಲ್ಲಿ ನಮ್ಮ ಜನರಿಗೆ ಬಾರದೆ ಇರದು.

ವಿಜಯನಗರ ಕಾಲದ ರೇಖಾಚಿತ್ರಕಲೆಯಲ್ಲಿ ಹೂಬಳ್ಳಿ, ಜ್ಯಾಮಿತಿ ವಿನ್ಯಾಸ, ಪ್ರಾಣಿ, ಪಕ್ಷಿ ವಿನ್ಯಾಸಗಳೂ ಈ ಚೌಕಟ್ಟಿನಲ್ಲೇ ಕಾಣಸಿಗುತ್ತವೆ. ಹಂಪಿಯ ಶ್ರೀ ಕೃಷ್ಣದೇವಾಲಯದಲ್ಲಿ ಮಹಾದ್ವಾರದ ಬಲಗೋಡೆ (ಮೀನ), ಹೊಸ್ತಿಲಮೇಲೆ (ಪದ್ಮ ವಿನ್ಯಾಸ), ಅಂತರಾಳದ ಪ್ರವೇಶದ್ವಾರ (ಬೇರೆ ಪದ್ಮವಿನ್ಯಾಸ)ದಲ್ಲಿರುವಂತೆ. ಕಮಲಮಹಲಿನಲ್ಲಿ ಅದರ ಚಿಕಣಿ ರೇಖಾಚಿತ್ರ, ಕೋದಂಡರಾಮ ದೇಗುಲದೆದುರಿನ ಬಂಡೆಗಲ್ಲಿನ ಮೇಲೆ (ಚಕ್ರತೀರ್ಥದ ಬಳಿ) ಲಕ್ಷ್ಮೀನರಸಿಂಹನ ರೇಖಾಚಿತ್ರಗಳೂ ನಮ್ಮನ್ನು ಆಕರ್ಷಿಸುತ್ತವೆ (ಇವುಗಳ ಅಧ್ಯಯನದಲ್ಲಿ ಡಾ. ಎಸ್.ಕೆ.ಜೋಶಿಯವರ ನೆರವನ್ನು ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ).

ಇನ್ನು ಶಾಸನದ ಕೊನೆ ಭಾಗದಲ್ಲಿ ಶಾಪಾಶಯ ಪಾಠವನ್ನು ಚಿತ್ರೀಕರಿಸಲು ರೇಖಚಿತ್ರ ಬಳಸಿರುವುದುಂಟು. ಬಳ್ಳಿಗಾವೆಯ ಶಾಸನದ ಕೊನೆಯಲ್ಲಿ ಪ್ರಾಣಿ-ಮಾನವ ಸಂಭೋಗ ಚಿತ್ರ ಕುತೂಹಲಕಾರಿ; ಹಾಗೆಯೇ ಬನವಾಸಿ ಮಧುಕೇಶ್ವರ ಗುಡಿಯ ಪ್ರಾಕಾರಕ್ಕೆ ಜೋಡಿಸಿಟ್ಟ ಶಿಲೆಯೊಂದರಲ್ಲಿ ಸ್ತ್ರೀಯೋರ್ವಳನ್ನು ಪ್ರಾಣಿ ಸಂಭೋಗಿಸುತ್ತಿರುವ ಚಿತ್ರವೂ ಅಷ್ಟೇ ಕುತೂಹಲಕಾರಿಯಾಗಿದೆ. ಇನ್ನು ಊರೂರಲ್ಲಿ ಕಾಣಸಿಗುವ ನಾಗರಕಲ್ಲುಗಳ ಜೊತೆಗೆ ಹಲವೆಡೆ ಇರುವ ಗಡಿಕಲ್ಲುಗಳ ಮೇಲೆ ಲಿಂಗಮುದ್ರೆ, ವಾಮನಮುದ್ರೆ, ಹನುಮಂತ ಮುಂತಾದವನ್ನು ರೇಖಾಕೃತಿಯಾಗಿ ಕೊರೆದಿರುವುದು ವಿಜಯನಗರ ಕಾಲೋತ್ತರದಲ್ಲಿ ಸಾಮಾನ್ಯವಾಗಿದೆ. ತಾಮ್ರಪತ್ರ, ಲೋಹದಕಲಶ, ದೇಗುಲದ ಕೆಲವು ಪೂಜಾ ಸಾಮಗ್ರಿಗಳ ಮೇಲೆ ಸೂಕ್ಷ್ಮ ರೇಖಾಚಿತ್ರ ವಿನ್ಯಾಸಗಳಿರುವುದನ್ನು ನಾವು ಅಲಕ್ಷಿಸುವಂತಿಲ್ಲ. ಈ ಕಾಲಘಟ್ಟದ ನಾಣ್ಯಗಳ ಮೇಲಣ ಚಿಕಣಿ ಚಿತ್ರಗಳೂ ರೇಖಾಪ್ರಧಾನವಾಗಿರುತ್ತವೆ. ತಂತ್ರಗಾರಿಕೆಯ ದೃಷ್ಟಿಯಿಂದ ಇವು ತುಸು ಭಿನ್ನವಾಗಿವೆ. ಇವೆಲ್ಲವನ್ನೂ ವಿವರವಾಗಿ ಅಧ್ಯಯನ ಮಾಡಿದಂತೆಲ್ಲ ವಿಜಯನಗರ ಕಾಲದಲ್ಲಿ 'ರೇಖಾಚಿತ್ರಕಲೆ' ಹೆಚ್ಚು ಜನಪ್ರಿಯವಾಗಿ ಬೆಳೆದಂತೆ, ಸಂಕೀರ್ಣವಾಗಿದ್ದೂ ಕಂಡುಬರುತ್ತದೆ.

ಜಾಗತಿಕವಾಗಿ ಹದಿನೈದನೆಯ ಶತಮಾನದಲ್ಲಿ ರೇಖಾಚಿತ್ರಕಲೆ ಹೆಚ್ಚು ಪ್ರಚಾರಕ್ಕೆ ಬಂದದ್ದನ್ನು ನೆನೆದರೆ ನಮ್ಮಲ್ಲಿ ಮೊದಲಿಂದಲೂ ಇದ್ದ ಈ ಕಲೆ ಈ ಕಾಲಘಟ್ಟದಲ್ಲಿ ಹೆಚ್ಚು ಜನಜನಿತ ಏಕೆ ಹೇಗಾಯಿತು? ಎಂಬುದು ಅರ್ಥವಾದೀತು. ಶಿಲೆಯ ಅರಿವಿನ

ಜೊತೆಗೆ, ಲೋಹಗಾರಿಕೆ ತಂತ್ರಜ್ಞಾನದ ಬೆಳವಣಿಗೆ ಕೂಡ ಸೇರಿಕೊಂಡು, ಕಸುಬುದಾರರ ಕೈಚಳಕ ಚಿಮ್ಮತೊಡಗಿದ್ದು ಸುಸ್ಪಷ್ಟ. ಅಂತೆಯೇ ವಿಜಯನಗರ ಕಲೆಯ ಸಮಗ್ರ ಅಧ್ಯಯನದ ಹುನ್ನಾರದಲ್ಲಿ ಈ ರೇಖಾಚಿತ್ರ ಭಾಗವನ್ನು ನಾವು ತಪ್ಪದೆ ಗಮನಿಸಬೇಕು ಎಂಬುದೇ ಈ ಸಂಪ್ರಬಂಧದ ಒಟ್ಟು ಆಶಯ.

ಆಯ್ದ ಆಧಾರ ಗ್ರಂಥಗಳು

೧. Vijayanagara sex centenary Volume, Dharwad, ೧೯೩೬

೨. Gopalakrishna Murthy S. The Art of Lepakshi Hyderabad, ೧೯೬೩

೩. C.Sivaramamurti, The Art of India, Bombay, ೧೯೭೭

೪. C.Sivaramamurti, Indian Painting, N. Delhi, ೧೯೬೮

೫. C.Sivaramamurti, South Indian Painting, New Delhi, ೧೯೬೮

೬. D.V.Devaraj, C.S.Patil (eds) Art and Architecture in Karnataka, Mysore, ೧೯೯೬

೭. ಹಾ.ಮಾ.ನಾಯಕ (ಸಂ) ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ, ಮೈಸೂರು, ೧೯೭೯

❖ ❖

೨೩

ವಿಜಯನಗರ ಕಾಲದ ಕಲೆಯ ಬೆಳವಣಿಗೆಯ ಕೆಲವು ವಿಚಾರಗಳು

ಡಾ. ಆರ್.ಎಚ್.ಕುಲಕರ್ಣಿ

ವಿಜಯನಗರದ ಕಾಲದ ಕಲೆಯನ್ನು ಕುರಿತಂತೆ ಮತ್ತು ಅದರ ಬೆಳವಣಿಗೆಯನ್ನು ಹಾಗೂ ಪ್ರಾರಂಭದ ಕಾಲದಲ್ಲಿನ ಕಲಾ ಚಟುವಟಿಕೆಗಳನ್ನು ಕುರಿತಂತೆ ವಿದ್ವಾಂಸರಲ್ಲಿ ಇದುವರೆಗೂ ಸ್ಪಷ್ಟ ನಿಲುವುಗಳಿಲ್ಲ. ವಿಜಯನಗರದ ಕಲೆಯು ಯಾವ ಮೂಲದಿಂದ ಬೆಳವಣಿಗೆಯಾಯಿತು, ಅದರ ಸೆಲೆ, ನೆಲೆಯನ್ನು ಗುರುತಿಸುವ ಪ್ರಯತ್ನ ಅವಶ್ಯವಾಗಿ ಆಗಬೇಕಾಗಿದೆ. ಆ ಕಾಲದ ಯಾವುದೇ ಒಂದು ದೇವಾಲಯವನ್ನು ಅಥವಾ ದೇವಾಲಯ ಶಿಲ್ಪಗಳನ್ನು ಗಮನಿಸಿದಾಗ ಪ್ರಾಯಶ: ಅವುಗಳ ಶೈಲಿಯ ಕುರಿತಂತೆ ಅವುಗಳಿಗೆ ಪ್ರೇರಕವಾದ ಶಿಲ್ಪಶೈಲಿಗಳ ಬಗ್ಗೆ ಹಲವಾರು ಪ್ರಶ್ನೆಗಳು ಬರುತ್ತವೆ. ಇವುಗಳ ಜೊತೆಗೆ ಅವರ ವಾಸ್ತುಕಲಾ ಚಟುವಟಿಕೆ ಹಾಗೂ ವಿಕಾಸ; ಇದೂ ಕೂಡಾ ಶಿಲ್ಪಕಲಾ ಬೆಳವಣಿಗೆಗೆ ಪೂರಕವಾಗಿ ನಡೆಯುತ್ತದೆ. ಇಲ್ಲಿ ಪ್ರಮುಖ ಮೂರ್ತಿಶಿಲ್ಪ ದೇವಾಲಯದ ಅವಿಭಾಜ್ಯ ಅಂಗ. ದೇವಾಲಯವಿಲ್ಲದೇ ಶಿಲ್ಪದ ಇರುವಿಕೆ ಅರ್ಥಪೂರ್ಣವಾಗದು. ಹಾಗಾದರೆ, ದೇವಾಲಯಗಳ ಜೊತೆಜೊತೆಯಲ್ಲಿಯೇ ಶಿಲ್ಪಕಲೆ ಕೂಡಾ ಅವುಗಳ ಒಂದು ಭಾಗವಾಗಿ ಬೆಳೆಯತೊಡಗಿತು ಎಂದು ಹೇಳಬಹುದು.

ವಿಜಯನಗರದ ಕಲೆಯ ಉಗಮವನ್ನು ಕುರಿತಂತೆ ಜಿಜ್ಞಾಸೆ ನಡೆಸಿದಾಗ, ಅವರ ಕಾಲದ ಕಲೆಯಲ್ಲಿ ಹಲವಾರು ಕಲಾತ್ಮಕ

ಅಂಶಗಳು ಗಮನ ಸೆಳೆಯುತ್ತವೆ. ಗಟ್ಟಿಯಾದ ಕಣಶಿಲೆಯಲ್ಲಿ ಕೆತ್ತಿದ ಶಿಲ್ಪಗಳಲ್ಲಿ ನಾಜೂಕಾದ ಗುಣಲಕ್ಷಣಗಳು ಕಂಡುಬರದೇ ಇದ್ದರೂ, ಶಿಲ್ಪಗಳನ್ನು ತೋರಿಸಿರುವ, ಅವುಗಳ ಬಾಹ್ಯ ಲಕ್ಷಣಗಳು ಹಾಗೂ ಅವುಗಳನ್ನು ಹಂತ ಹಂತಗಳಲ್ಲಿ ಒಂದೇ ತಳಹದಿಯ ಮೇಲೆ ನಿಲ್ಲಿಸಿರುವ ಅಥವಾ ಕೂಡಿಸಿರುವ ಪದ್ಧತಿ ಇಲ್ಲಿ ಹಿಂದಿನ ಹಲವಾರು ಕಲಾ ಸಂಪ್ರದಾಯಗಳ ದಟ್ಟವಾದ ಛಾಯೆ ಕಂಡುಬರುತ್ತದೆ.

ಐತಿಹಾಸಿಕವಾಗಿ, ವಿಜಯನಗರದ ರಾಜ್ಯಸ್ಥಾಪನೆಯ ಸನ್ನಿವೇಶವನ್ನು ಗಮನಿಸಿದಾಗ ಆ ಕಾಲದಲ್ಲಿ ಇದ್ದಂತಹ ಪ್ರಮುಖ ಕಲಾ ಚಟುವಟಿಕೆಗಳನ್ನು ಕುರಿತು ತಿಳಿಯಲು ಸಹಕಾರಿಯಾಗುತ್ತದೆ. ವಿಜಯನಗರದ ಅರಸರಿಗೂ ಹಳೇಬೀಡಿನ ಹೊಯ್ಸಳ ಸಾಮ್ರಾಜ್ಯದ ಹಲವಾರು ಭಾಗಗಳಿಗೆ ನೇರವಾದ ಸಂಪರ್ಕ ಇದ್ದ ಬಗ್ಗೆ ಆ ಭಾಗದಲ್ಲಿ ದೊರೆತ ವಿಜಯನಗರ ಅರಸರ ಹಲವಾರು ಶಾಸನಗಳೇ ಆಧಾರವಾಗಿವೆ. ಐತಿಹಾಸಿಕವಾಗಿ ಹಳೇಬೀಡಿನ ಹೊಯ್ಸಳರು, ಕ್ರಿ.ಶ. ೧೩೩೬ರ ಹೊತ್ತಿಗೆ ರಾಜಕೀಯವಾಗಿ ಅಧಃ ಪತನದಲ್ಲಿದ್ದರು. ಮೂರನೆಯ ವೀರಬಲ್ಲಾಳನೇ ಐತಿಹಾಸಿಕವಾಗಿ ಹೊಯ್ಸಳರ ಕೊನೆಯ ದೊರೆಯಾಗುತ್ತಾನೆ. ತನ್ನ ಕಾಲಾವಧಿಯಲ್ಲಿ ಸಾಮ್ರಾಜ್ಯದ ಉಳಿವಿಗೆ ಶಕ್ತಿಮೀರಿ ಪ್ರಯತ್ನಿಸಿದರೂ ಅಂದಿನ ಪರಿಸ್ಥಿತಿಗಳು ಎಡೆಮಾಡಿಕೊಡಲಿಲ್ಲ. ಹೀಗಾಗಿ ದೆಹಲಿ ಸುಲ್ತಾನರ ದಾಳಿಯಿಂದ ತತ್ತರಿಸಿದ ಹೊಯ್ಸಳ ಸಾಮ್ರಾಜ್ಯ ಮುಂದಿನ ಎರಡು ದಶಕಗಳಲ್ಲಿಯೇ ಇತಿಹಾಸದಲ್ಲಿ ಲೀನವಾಗಿ ಹೋಯಿತು.

ಇದೇ ಸಂದರ್ಭದಲ್ಲಿ ಇತ್ತ ತುಂಗಭದ್ರಾ ನದಿ ದಡದ ಹಂಪೆಯ ಪರಿಸರದಲ್ಲಿ ಉದಯಿಸಿದ ವಿಜಯನಗರ ಸಾಮ್ರಾಜ್ಯ ಇಡೀ ಕರ್ನಾಟಕದಲ್ಲಿ ರಾಜಕೀಯವಾಗಿ ಸದೃಢ ಶಕ್ತಿಯಾಗಿ ಬೆಳೆಯತೊಡಗಿತ್ತು. ಈ ಅರಸರ ಅದರಲ್ಲೂ ಪ್ರಾರಂಭಿಕ ಅರಸರ ಹಲವಾರು ಶಾಸನಗಳು ಬೇಲೂರಿನ ಚೆನ್ನಕೇಶವ ದೇವರನ್ನು ಅಂದರೆ ಹೊಯ್ಸಳ ವಿಷ್ಣುವರ್ಧನ ನಿರ್ಮಿಸಿ ಸ್ಥಾಪಿಸಿದ ಬೇಲೂರಿನ ಕೇಶವ ದೇವಾಲಯದ ಮುಖ್ಯ ದೈವವಾದ ವಿಜಯನಾರಾಯಣ ದೇವರನ್ನು ಉಲ್ಲೇಖಿಸುತ್ತವೆ. ಅಲ್ಲದೇ ಈ ಭಾಗದಲ್ಲಿ ಹೊಯ್ಸಳರ ಬಹುತೇಕ ದೇವಾಲಯಗಳನ್ನು ಜೀರ್ಣೋದ್ಧಾರ ಮಾಡಿಸುವ ಕೆಲಸವನ್ನೂ ದೇವಾಲಯಗಳ ದೈನಂದಿನ ಪೂಜಾ ಕೈಂಕರ್ಯಗಳನ್ನು ಮುಂದುವರಿಸಿಕೊಂಡು ಹೋಗಲು ಅನುವಾಗುವಂತಹ ದಾನದತ್ತಿಗಳನ್ನು ಹೇರಳವಾಗಿ ನೀಡಿದರು. ಅಲ್ಲದೇ ನಂತರದ ಕಾಲಗಳಲ್ಲಿ ಹೊಯ್ಸಳ ನಿರ್ಮಿತ ದೇವಾಲಯಗಳಿಗೆ ಪ್ರಾಕಾರ, ದ್ವಾರಮಂಟಪ, ರಾಯಗೋಪುರ ಹಾಗೂ ಕಲ್ಯಾಣಮಂಟಪಗಳನ್ನು ಸಹ ನಿರ್ಮಿಸಿದರು. ದೇವಾಲಯಗಳ ಹೊರ ಮುಂಭಾಗದಲ್ಲಿ ಗಗನದೆತ್ತರಕ್ಕೆ ಚಾಚಿರುವ ಧ್ವಜಸ್ತಂಭಗಳ ನಿರ್ಮಾಣವು ಸಹ ಇಲ್ಲಿ ಸೇರುತ್ತದೆ. ವಿಜಯನಗರ ಅರಸರ ಹಾಗೂ ಈ ಹೊಯ್ಸಳ ರಾಜ್ಯದ ಸಂಬಂಧ ವಿಜಯನಗರದಲ್ಲಿ ಕಲಾ ಚಟುವಟಿಕೆಗಳಿಗೆ ಒಂದು ಹೊಸ ಆಯಾಮವನ್ನು ಸೃಷ್ಟಿಸಿತು. ಹೊಯ್ಸಳ ರಾಜ್ಯಭಾಗದಲ್ಲಿ ವಿಜಯನಗರದ ಅರಸರು ಹಿಂದಿನ ಕಾಲದ ದೇವಾಲಯಗಳಿಗೆ ಹೊಸ

ಭಾಗಗಳನ್ನು ಜೋಡಿಸಿದಾಗ ವಿಶೇಷತಃ ಕಣಶಿಲೆಯನ್ನೇ ಉಪಯೋಗಿಸಿರುವುದು ಕಂಡುಬರುತ್ತದೆ. ಉದಾಹರಣೆಗೆ ತಲಕಾಡಿನ ಕೀರ್ತಿನಾರಾಯಣ ದೇವಾಲಯದ ಪ್ರಾತೋಳಿ ಅಥವಾ ದ್ವಾರಮಂಟಪ ಇದಕ್ಕೊಂದು ಉತ್ತಮ ಉದಾಹರಣೆ. ಅಲ್ಲದೇ, ನಾಗಮಂಡಲದ ಸೌಮ್ಯಕೇಶವ, ಬೆಳ್ಳೂರಿನ ಆದಿಮಾಧವ ಮಾರೇಹಳ್ಳಿಯ ಲಕ್ಷ್ಮೀನರಸಿಂಹ ಉಮ್ಮತ್ತೂರಿನ ಭುಜಂಗೇಶ್ವರ ಹಾಗೂ ವೇಣುಗೋಪಾಲ, ಹರದನಹಳ್ಳಿಯ ಈಶ್ವರ, ತೆರಕಣಾಂಬಿಯ ಲಕ್ಷ್ಮೀನರಸಿಂಹ ಹೀಗೆ ಅವರು ನಿರ್ಮಿಸಿದ ದೇವಾಲಯಗಳ ಸಂಖ್ಯೆ ಬೆಳೆಯುತ್ತ ಹೋಗುತ್ತದೆ. ಈ ಮೇಲೆ ಹೆಸರಿಸಿದ ದೇವಾಲಯಗಳೆಲ್ಲವೂ ಹೊಯ್ಸಳ, ಚೋಳ ಹಾಗೂ ಗಂಗರ ಕಾಲದಲ್ಲಿ ನಿರ್ಮಿಸಿದವು. ಇಲ್ಲಿ ನಮ್ಮ ಮುಖ್ಯ ಉದ್ದೇಶವಿಷ್ಟೆ ವಿಜಯನಗರದ ಅರಸರಲ್ಲಿ ಶ್ರೀಮಂತರಾದ ಹೊಯ್ಸಳ, ಚೋಳ, ಗಂಗ ಕಲಾಪ್ರಕಾರಗಳೊಂದಿಗೆ ನಿಕಟ ಸಂಪರ್ಕ ಹೊಂದಿರುವುದು ಇಲ್ಲಿ ಸ್ಪಷ್ಟವಾಗುತ್ತದೆ. ಈ ಅವರ ಸಂಪರ್ಕ ಹೊಯ್ಸಳೋತ್ತರ ಕಾಲದ ಕಲಾಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದಕ್ಕೆ ಒಂದು ರೀತಿಯ ಪ್ರೇರಣೆಗೆ ಕಾರಣವಾಯಿತು ಎನ್ನಬಹುದು.

ಹೊಯ್ಸಳರ ಶಿಲ್ಪಕಲೆಯಂತೆಯಾಗಲೀ, ಅವರ ದೇವಾಲಯುಗಳಂತೆ ವಿಜಯನಗರಕಾಲದ ದೇವಾಲಯಗಳು ಕುಸುರಿ ಕಲೆಯಿಂದ ಶಿಲ್ಪಗಳ ಶ್ರೀಮಂತಿಕೆಯ ದಾಖಲೆಗಳು ಕಂಡುಬರುವುದಿಲ್ಲ. ಇಲ್ಲಿ ಮುಖ್ಯವಾಗಿ ಸರಳವಾದ, ಜಾನಪದೀಯ ಅಂಶಗಳನ್ನುಳ್ಳ ಶಿಲ್ಪ ಲಕ್ಷಣಗಳೇ ಪ್ರಮುಖವಾಗಿ ಕಾಣಬರುವುದು. ಆದರೆ ಇಲ್ಲಿ ನಾವು ಗಮನದಲ್ಲಿಡಬೇಕಾದ ಒಂದು ಬಹುಮುಖ್ಯವಾದ ಅಂಶವೆಂದರೆ ಇಲ್ಲಿ ಹೊಯ್ಸಳ ಶಿಲ್ಪಗಳನ್ನು ಕೆತ್ತಲು ಉಪಯೋಗಿಸಿದ ಮೃದುವಾದ ಬಳಪದ ಕಲ್ಲನ್ನು ಉಪಯೋಗಿಸದೇ ಇರುವುದು. ವಿಜಯನಗರದ ಬಹುತೇಕ ದೇವಾಲಯಗಳೆಲ್ಲವೂ ದೇವಾಲಯ ಶಿಲ್ಪಗಳೆಲ್ಲವೂ ಕಣ ಶಿಲೆಯಲ್ಲಿಯೇ ರಚನೆಯಾಗಿವೆ. ಸ್ವಭಾವತಃ ಕಣಶಿಲೆ ತೀರ ಗಟ್ಟಿಗುಣವುಳ್ಳದ್ದಾಗಿದೆ. ಇದರಲ್ಲಿ ನಾಜೂಕಿನ ಅಥವಾ ಸೂಕ್ಷ್ಮವಾದ ಕೆತ್ತನೆಗಳನ್ನು ಮಾಡುವುದು ತೀರ ಕಷ್ಟದ ಕೆಲಸ. ಆದಾಗ್ಯೂ ಕೂಡಾ ವಿಜಯನಗರದ ಕಾಲದ ಶಿಲ್ಪಗಳು ತಮ್ಮಲ್ಲಿನ ಕಲಾ ಪೌಢಿಮೆಯನ್ನು ಮೆರೆಯಲು ಪ್ರಯತ್ನಿಸಿರುವುದು ಸ್ಪಷ್ಟವಾಗಿ ಕಂಡುಬರುತ್ತವೆ. ಇದಕ್ಕೆ ಹಲವಾರು ಪೂರಕವಾದ ಸನ್ನಿವೇಶಗಳನ್ನು ನಾವು ತುಸು ಹಿಂದೆ ಹೋಗಿ ನೋಡಬೇಕಾದ ಅವಶ್ಯಕತೆ ಇದೆ. ಹೊಯ್ಸಳರ ಕಲೆಯೇ ವಿಜಯನಗರ ಕಲಾ ಚಟುವಟಿಕೆಗಳಿಗೆ ಒಂದು ರೀತಿಯ ಪ್ರೇರಣೆ ನೀಡಿತು ಎಂದು ಹೇಳಬಹುದು. ಈ ಮೇಲೆ ಹೇಳಿದ ತೆರದಲ್ಲಿ ವಿಜಯನಗರ ಕಲೆಯಲ್ಲಿ ಶಿಲ್ಪಗಳು ಕುಸುರಿನಿಂದ ಕೂಡಿದ ಅಂಶಗಳನ್ನು ಮೈಗೂಡಿಸಿಕೊಳ್ಳದೇ ಬೆಳೆದರೂ ಅವುಗಳಲ್ಲಿ ಹೊಯ್ಸಳ ಚೋಳರ ಕಲೆಯ ಛಾಯೆ ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಉದಾಹರಣೆಗೆ ಶಿಲ್ಪಗಳಲ್ಲಿನ ಆಭರಣಗಳನ್ನು ತೋರಿಸುವ ಬಗೆ ಆ ಕೃತಿಗಳು ನಿಂತ ಹಾಗೂ ಚಾಲನಾ ಭಾವ-ಭಂಗಿಗಳನ್ನು ಇಲ್ಲಿ ಹೆಸರಿಸಬಹುದು. ಇನ್ನೂ ನಾವು ಗಮನಿಸುವುದಾದರೆ ವಿಜಯನಗರದ ಕಲೆಯಲ್ಲಿ ಬಹುವಾಗಿ

ಕಂಡುಬರುವ ಹನುಮಂತ, ನರಸಿಂಹ, ಕೋದಂಡರಾಮ, ಅರ್ಜುನನ ಶಿಲ್ಪಗಳನ್ನು ಒಂದು ಕ್ಷಣ ವಿಶೇಷವಾಗಿ ಗಮನವಿಟ್ಟು ನೋಡಿದಾಗ ಇವುಗಳ ಮೂಲರೂಪಗಳು ಹೊಯ್ಸಳ-ಚೋಳ ಕಲೆಯಲ್ಲಿ ವಿಪುಲ ಉದಾಹರಣೆಗಳಾಗಿ ದೊರೆಯುತ್ತವೆ. ಈ ಎಲ್ಲ ಅಂಶಗಳನ್ನು ಗಮನಿಸುತ್ತ ವಿಜಯನಗರ ಕಾಲದ ಮುಂದುವರೆದ ಕಲೆಯನ್ನು ನಾವು ಗಾರೆಕಲೆಯಲ್ಲಿ ಗಮನಿಸಬಹುದು. ವಿಜಯನಗರದ ಗಾರೆಕಲೆಯನ್ನು ಕುರಿತು ಈ ಹಿಂದೆ ಚರ್ಚಿಸಲಾಗಿದ್ದರೂ ಅಲ್ಲಿ ಕೆಲವೇ ಕೆಲವು ವಿಷಯಗಳಿಗೆ ಸೀಮಿತಗೊಳಿಸಲಾಗಿದೆ. ನಾವು ಶಿಲ್ಪಕಲೆಯ ಬೆಳವಣಿಗೆಯ ದೃಷ್ಟಿಯಿಂದ ವಿಜಯನಗರದ ಗಾರೆಕಲೆಯನ್ನು ಗಮನಿಸಿದಾಗ ಸ್ಪಷ್ಟವಾಗಿ ಹೊಯ್ಸಳ-ಚೋಳ ಕಾಲದ ಶಿಲ್ಪಕಲಾ ಲಕ್ಷಣಗಳು ಮೂಡಿಬಂದಿರುವುದನ್ನು ಗಮನಿಸಬಹುದು. ಗಾರೆ ಕಲೆಯಲ್ಲಿ ಸೂಕ್ಷ್ಮವಾದ ಕುಸುರಿಯಿಂದ ಕೂಡಿದ ವಿವರಗಳನ್ನು ಗಾರೆ ಕಲಾವಿದ ತೋರಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ. ಕೆಲಸ ಮಾಡುವ ಮಾಧ್ಯಮ ಬೇರೆಯಾದರೂ ಕಲಾವಿದರಿಗೆ ಅಂದಿನ ಕಲಾ ಸಂವೇದನೆಗಳನ್ನು ಮೈಗೂಡಿಸಿಕೊಂಡು ತಮ್ಮ ಕ್ರಿಯಾತ್ಮಕವಾದ ಶಿಲ್ಪಕಲಾ ಅಭಿವ್ಯಕ್ತಿಯಲ್ಲಿ ಪ್ರತಿರೂಪಿಸುವುದು ಸಾಧ್ಯವಾಯಿತು. ಗಾರೆಕಲೆಯಲ್ಲಿ ಕುಸುರಿನಿಂದ ಕೂಡಿದ ಅಂಶಗಳನ್ನು ಸೋಗಸಾಗಿ ಹಾಗೂ ಆಕರ್ಷಕವಾಗಿ ತೋರಿಸುವ ಪ್ರಯತ್ನಗಳನ್ನು ನಾವು ಗಮನಿಸಬಹುದು. ವಿಜಯನಗರ ಕಾಲದ ಕಲಾವಿದನಿಗೆ ತನ್ನ ಕಲಾ ನೈಪುಣ್ಯತೆಯನ್ನು ತೋರಿಸಲು ಗಾರೆ ಸರಿಯಾದ ಮಾಧ್ಯಮವಾಗಿತ್ತು. ಆದುದರಿಂದಲೇ ಅಂದಿನ ಕಲಾವಿದನಿಗೆ ಕೆಲವೇ ಕಾಲದಲ್ಲಿ ಅಷ್ಟೊಂದು ದೇವಾಲಯಗಳನ್ನು ನಿರ್ಮಿಸಲು ಮತ್ತು ಶಿಲ್ಪಗಳಿಂದ ಅಲಂಕರಿಸಲು ಸಾಧ್ಯವಾಯಿತು ಎಂದು ಹೇಳಬಹುದು.

ವಿಜಯನಗರ ಕಾಲದ ಕಲೆಗೆ ಹೊಯ್ಸಳ-ಚೋಳರ ಪ್ರಭಾವ ಕೇವಲ ಒಂದು ಮೂಲ ಮಾತ್ರ. ಬಾದಾಮಿ ಚಾಲುಕ್ಯ-ಚಾಲುಕ್ಯ ನಂತರದಲ್ಲಿ ಆ ಭಾಗದಲ್ಲಿನ ಶಿಲ್ಪಕಲಾ ಚಟುವಟಿಕೆಗಳೂ ಕೂಡಾ ಪೂರಕವಾಗಿದ್ದವು ಎಂದೂ ಸಹ ಹೇಳಬಹುದು. ವಿಜಯನಗರದ ಕಾಲದ ಕಲೆ ಒಟ್ಟಾರೆಯಾಗಿ ೧೩೩೦ರಿಂದ ಪ್ರಾರಂಭಗೊಂಡು ವಿಜಯನಗರ ಕಾಲದ ಕಲೆ ನಿರಂತರವಾಗಿ ಹೊಸದನ್ನು ಮೈಗೂಡಿಸಿಕೊಳ್ಳುತ್ತಾ ತನ್ನ ಕಲಾವ್ಯಾಪ್ತಿಯನ್ನು ಪಸರಿಸಿಕೊಳ್ಳುತ್ತ ಬೆಳೆದು ಬಂದಿರುವುದಕ್ಕೆ ಅವರ ದೇವಾಲಯಗಳು ಸಾಕ್ಷಿ ರೂಪಗಳಾಗಿವೆ.

❖ ❖

೨೪

ಶಿವಮೊಗ್ಗ ಪ್ರದೇಶದ ವಿಜಯನಗರ ಮತ್ತು ವಿಜಯನಗರೋತ್ತರದ ಕೆಲವು ಮಾಸ್ತಿ ಶಿಲ್ಪಗಳು

ಡಾ. ರು.ಮ.ಷಡಕ್ಷರಯ್ಯ

ಕರ್ನಾಟಕದ ಅನೇಕ ಅರಸು ಮನೆತನಗಳ ಕೈವಶದಲ್ಲಿ ಶಿವಮೊಗ್ಗ ಪ್ರದೇಶವೂ ಒಳಗೊಂಡಿದ್ದಿತು. ಹಾಗೂ ವಿಜಯನಗರೋತ್ತರದಲ್ಲೂ ಈ ಪ್ರದೇಶವು ಇಕ್ಕೇರಿ ಕೆಳದಿ ನಾಯಕರ ಅಧೀನದಲ್ಲಿತ್ತು.

ಈ ಕಾರಣದಿಂದ ಪ್ರಾಚೀನ ಕಾಲದಿಂದ ವಿಜಯನಗರೋತ್ತರ ಕಾಲಾವಧಿಯವರೆಗಿನ ವಿಭಿನ್ನ ಶಾಸನಗಳು, ಸ್ಮಾರಕಗಳು, ಶಿಲ್ಪಕಲೆ ಇತ್ಯಾದಿ ಅಲ್ಲಿಯೂ ಕಾಣಸಿಗುತ್ತವೆ. ಪ್ರಸ್ತುತ ಅಧ್ಯಯನಕ್ಕೆ ಸೀಮಿತವಾಗಿ ಈ ಪ್ರದೇಶದಲ್ಲಿರುವ ಅನೇಕ ಮೂರ್ತಿಶಿಲ್ಪಗಳು ವಿಭಿನ್ನ ಲೇಖನ, ಕೃತಿ ಮತ್ತು ವರದಿಗಳಲ್ಲಿವೆ. ಅವುಗಳಲ್ಲಿ ಎಂ.ಎ.ಆರ್[೧] ವರದಿಗಳು, ಡಾ. ಶೇಠ್[೨] ಅವರ "ಕರ್ನಾಟಕದಲ್ಲಿ ಮಾಸ್ತಿ ಪದ್ಧತಿ" ಡಾ. ಭಟ್‌ಸೂರಿ[೩] ಅವರ 'Catalogue of Shimoga Musium Antiquities' ಎಂ.ಎಂ.ಕಲಬುರ್ಗಿ[೪] ಅವರ (೧೯೮೦) "ಸಮಾಧಿ-ಬಲಿದಾನ ವೀರಮರಣ ಸ್ಮಾರಕಗಳು", ಬಸವರಾಜ್[೫] ಕಲ್ಗುಡಿ ಅವರ 'ಮಹಾಸತಿ ಆಚರಣೆ ಒಂದು ಅಧ್ಯಯನ" (೧೯೮೬) ಡಾ. ಎಂ. ಚಿದಾನಂದಮೂರ್ತಿ[೬] ಅವರ (೧೯೮೪) 'ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು', ಡಾ. ಡಿ.ವಿ.ಪರಮಶಿವಮೂರ್ತಿ (೧೯೯೯) ಅವರ "ಕನ್ನಡ ಶಾಸನ

ಶಿಲ್ಪ" ಇತ್ಯಾದಿ ಮುಖ್ಯವೆನಿಸಿವೆ. ಆದರೆ ಈ ಎಲ್ಲ ಕೃತಿ, ಲೇಖನ ಮತ್ತು ವರದಿಗಳಲ್ಲಿ ಈ ಪ್ರದೇಶದ ವಿಜಯನಗರ ಮತ್ತು ವಿಜಯ ನಗರೋತ್ತರ ಕಾಲದ ಮಾಸ್ತಿ ಶಿಲ್ಪಗಳ ಬಗ್ಗೆ ಪ್ರತ್ಯೇಕ ಅಧ್ಯಯನ ಒಂದೆಡೆ ಕಾಣುವುದಿಲ್ಲ. ಈ ಕಾಲಾವಧಿಯ ಮಾಸ್ತಿಶಿಲ್ಪಗಳೂ ಈ ಪ್ರದೇಶದಲ್ಲಿ ಹೇರಳವಾಗಿವೆ. ಮತ್ತು ವೈವಿಧ್ಯಮಯವಾಗಿವೆ. ಹೀಗಾಗಿ ಪ್ರಸ್ತುತ ಅಧ್ಯಯನಕ್ಕೆ ಕೇವಲ ಕರ್ನಾಟಕ ರಾಜ್ಯ ಸರ್ಕಾರದ ಪುರಾತತ್ವ ಮತ್ತು ವಸ್ತು ಸಂಗ್ರಹಾಲಯ ವಿಭಾಗದ ಶಿವಮೊಗ್ಗ ವಸ್ತು ಸಂಗ್ರಹಾಲಯ, ಪೊಲೀಸ್ ಹೆಡ್ ಕ್ವಾರ್ಟರ್ಸ್‌ಮುಂದಿನ ಮಾಸ್ತಿಶಿಲ್ಪ ಮತ್ತು ಭಾರತೀಯ ಪುರಾತತ್ವ ಇಲಾಖೆಯ ಬಳ್ಳಿಗಾವೆಯ ವಸ್ತು ಸಂಗ್ರಹಾಯಲಯದ ಮಾಸ್ತಿಶಿಲ್ಪಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಕಾಲದ ಮಾಸ್ತಿಶಿಲ್ಪಗಳ ಕುರಿತು ಹೆಚ್ಚಿನ ಸಾಂಸ್ಕೃತಿಕ ವಿವರಗಳು ಪ್ರಥಮಬಾರಿಗೆ ದೇಶಿಯ ಮತ್ತು ವಿದೇಶಿಯ ಸಾಹಿತ್ಯದಲ್ಲಿ ಹಾಗೂ ಶಾಸನಗಳಲ್ಲಿವೆ.

ಬಳ್ಳಿಗಾವಿ

ಬಳ್ಳಿಗಾವೆ ದಾರಿಯ ಬದಿಯಲ್ಲಿರುವ ಶಿಲ್ಪದಲ್ಲಿ ಗಂಡನ ಬಲಗಡೆ ಬಲತೋಳುಗೈಯನ್ನು ಎತ್ತಿ ಸತಿ ನಿಂತಿದ್ದಾಳೆ. ಕೈಮಧ್ಯೆ ಲಿಂಬೆಹಣ್ಣಿನ ಚಿತ್ರವಿದೆ. ಎಡಗೈಯನ್ನು ಇಳಿಬಿಟ್ಟಿದ್ದಾಳೆ. ಗಂಡ ಕೈಮುಗಿದು ಕುಳಿತಿರುವನು. ಆತನನ್ನು ಸ್ವಲ್ಪ ಕಿರಿದಾಗಿ ಚಿತ್ರಿಸಲಾಗಿದೆ.

ಬಳ್ಳಿಗಾವೆಯಲ್ಲಿ ದಂಪತಿಗಳುಳ್ಳ ಮಾಸ್ತಿಶಿಲ್ಪದಲ್ಲಿ ಇಬ್ಬರನ್ನು ಮನುಷ್ಯೆತ್ತರದಲ್ಲಿ ಚಿತ್ರಿಸಲಾಗಿದೆ. ಗಂಡು ಮುಗಿದುಕೊಂಡು ನಿಂತಿದ್ದರೆ ಸತಿ ಬಲ ತೋಳುಗೈಯನ್ನು ಎತ್ತಿಹಿಡಿದಿದ್ದಾಳೆ. ಬೆರಳುಗಳಲ್ಲಿ ಲಿಂಬೆಹಣ್ಣು ಹಿಡಿದಿರುವನು. ಇಳಿಬಿಟ್ಟ ಎಡಗೈಯಲ್ಲಿ ಕಮಂಡಲವಿದೆ. ಗಂಡನ ಕೇಶವನ್ನು ಮೇಲಕ್ಕೆಳೆದು ಕಟ್ಟಿರುವುದು ಬುದ್ಧನ ಉಷ್ಣೀಶದಂತಿದೆ. (ಬಳ್ಳಿಗಾವಿಯು ಕ್ರಿ.ಶ. ೧೨ನೇ ಶತಮಾನದಲ್ಲಿ ಬೌದ್ಧಕೇಂದ್ರವೂ ಆಗಿತ್ತು) ಆತನು ಸೊಂಟಕ್ಕೆ ಕಚ್ಚೆಯನ್ನು ಬಿಗಿದಿದ್ದಾನೆ. ಸತಿಯು ಕಟ್ಟಿಕೊಂಡ ತುರುಬು ಸ್ವಲ್ಪ ಬಲಕ್ಕಿದೆ. ತಲೆಯ ಸುತ್ತಲಿನ ಪ್ರಭಾಮಂಡಲದಲ್ಲಿ ಕೇದಿಗೆಗಳ ಅಲಂಕಾರಣವಿದೆ. ಸತಿಯು ಸೊಂಟದಿಂದ ಪಾದದವರೆಗೆ ಇಳಿಬಿಟ್ಟ ಸೀರೆಯನ್ನು ಧರಿಸಿದ್ದು ತೋಳಲ್ಲಿ ಮತ್ತು ಕೈಗಳಲ್ಲಿಬ್ಬರು ಬಳೆಗಳನ್ನು ತೊಟ್ಟಿರುವರು.

ಬಳ್ಳಿಗಾವೆಯಲ್ಲಿ ಇನ್ನೊಂದು ಮಾಸ್ತಿಶಿಲ್ಪವಿದ್ದು ಅದರಲ್ಲಿ ಬಲತೋಳುಗೈ ಚಿತ್ರವಿದೆ. ತೋಳಿನ ಮೇಲೆ ಚೌಕಾಕಾರದ ಪಟ್ಟಿಕೆಯುಳ್ಳ ಗೂಡಿನಲ್ಲಿ ದಂಪತಿಗಳು ಕೈಮುಗಿದು ಕುಳಿತಿರುವರು. ಅದರ ಮೇಲೆ ಶಿಖರ ನಮೂನೆಯನ್ನು ಗಿಂಡಿಯಂತೆ ಚಿತ್ರಿಸಲಾಗಿದೆ. ಅದರ ಬದಿಗಳಲ್ಲಿ ಚಂದ್ರ-ಸೂರ್ಯರಿದ್ದಾರೆ. ಇದೇ ರೀತಿಯಲ್ಲಿ ಬಳ್ಳಿಗಾವಿ ಬಳಿಯ ಶಿರಾಳಕೊಪ್ಪದ ಮಾಸ್ತಿಶಿಲ್ಪವಿದೆ. ಆದರೆ ಅಲ್ಲಿ ಗೂಡಿನ ಚೌಕಾದ ಪಟ್ಟಿಕೆಯಿಲ್ಲ.

ಶೈಲಿಯ ದೃಷ್ಟಿಯಿಂದ ಈ ಎಲ್ಲಾ ಶಿಲ್ಪಗಳ ಕಾಲ ಸುಮಾರು ಕ್ರಿ.ಶ. ೧೬ನೇ ಶತಮಾನ.

ಬಳ್ಳಿಗಾವಿಯ ಪರಿಸರ ಮತ್ತು ಅದರ ವಸ್ತು ಸಂಗ್ರಹಾಲಯದಲ್ಲಿ (ಹೊರಗಡೆ ಪೂರ್ವಕ್ಕೆ ಮುಖ ಮಾಡಿ) ಈ ಕಾಲದ ಮಾಸ್ತಿ ಶಿಲ್ಪಗಳಿವೆ. ಅಲ್ಲಿಯ ವಸ್ತು ಸಂಗ್ರಹಾಯಲದ ಎರಡು ಶಿಲ್ಪಗಳಲ್ಲಿ ಒಂದು ಸ್ವತಂತ್ರವಾಗಿ ನಿಂತ ಮಾಸ್ತಿ, ಇನ್ನೊಂದು ಪತಿ-ಸತಿಯರ ಶಿಲ್ಪಗಳಾಗಿವೆ.

ಮೊದಲನೇ ಶಿಲ್ಪದಲ್ಲಿ ಸತಿಹೋದವಳು ಮನುಷ್ಯನೆತ್ತರದಲ್ಲಿ ನಿಂತಿರುವಳು. ತನ್ನ ಬಲತೊಳಗೈಯನ್ನು ಮೇಲಕ್ಕೆತ್ತಿ ("V") ಹಿಡಿದಿರುವಳು. ಕೆಳಗಡೆ ಇಳಿಬಿಟ್ಟ ಎಡಗೈ ಭಾಗ ಶಿಥಿಲವಾಗಿದೆ. ತನ್ನ ಪತಿಯ ಕಿರು ಚಿತ್ರವನ್ನು ಆಕೆಯ ಬಲ ತೊಡೆಯ ಬದಿಯಲ್ಲಿ ಕಿರುಗೂಡಿನಲ್ಲಿ ತೋರಿಸಲಾಗಿದೆ. ಆಕೆಯು ತಲೆಯ ಕೇಶದ ತುರುಬಿನ ಸುತ್ತ ಕೇದಿಗೆಯನ್ನು ಸುಂದರವಾಗಿ ಕಟ್ಟಿಕೊಂಡಿರುವಳು. ಕಿವಿಯಲ್ಲಿ ಓಲೆಗಳಿವೆ. ಕುತ್ತಿಗೆಯಲ್ಲಿ ನಾಲ್ಕು ಮಣಿಗಳುಳ್ಳ ಸರಗಳಿವೆ. ಸೊಂಟಕ್ಕೆ ಪಟ್ಟಿ ಧರಿಸಿದ್ದಾಳೆ. ಸೀರೆಯನ್ನು ಸೊಂಟದಿಂದ ಪಾದದವರೆಗೆ ಇಳಿಬಿಟ್ಟು ಉಟ್ಟಿರುವಳು. ಸೀರೆಯ ಅನೇಕ ಮಡಿಕೆಗಳು ಎದ್ದು ಕಾಣುತ್ತವೆ. ಇನ್ನೊಂದು ಶಿಲ್ಪದಲ್ಲಿ ಮನುಷ್ಯೆತ್ತರ ಮಾಸ್ತಿ ಪತಿಯರಿದ್ದಾರೆ. (ದಂಪತಿಗಳು) ಇಬ್ಬರೂ ಸಮಾಂತರವಾಗಿ ನಿಂತಿರುವರು. ವೀರನು ಕೈಮುಗಿದುಕೊಂಡು ನಿಂತಿರುವನು. ಸತಿಯು ತನ್ನ ಬಲಗೈಯನ್ನು ಮೇಲಕ್ಕೆತ್ತಿ ಹಿಡಿದು ನಿಂತಿರುವಳು. ಎಡಗೈಯಲ್ಲಿ ಕಮಂಡಲವನ್ನು ಹಿಡಿದು ಇಳಿಬಿಟ್ಟಿರುವಳು. ತಲೆಯ ತುರುಬು ಬಲಬದಿಗಿದ್ದು ಅದಕ್ಕೆ ಕೇದಿಗೆಯ ಅಲಂಕರಣವಿದೆ. ಈ ಶಿಲ್ಪದ ಮೇಲೆ ಸೂರ್ಯ-ಚಂದ್ರರ ಮಧ್ಯ ಶಿವಲಿಂಗವಿದೆ.

ಶಿವಮೊಗ್ಗ ವಸ್ತು ಸಂಗ್ರಹಾಲಯ ಮತ್ತು ಪೊಲೀಸ್ ಹೆಡ್ ಕ್ವಾರ್ಟರ್ಸ್‌ನ ಸತಿ ಶಿಲ್ಪಗಳು

ವಸ್ತು ಸಂಗ್ರಹಾಲಯ ಮತ್ತು ಪೊಲೀಸ್ ಹೆಡ್ ಕ್ವಾಟರ್ಸ್ ಮುಂದೆ ಈ ಕಾಲದ ಒಟ್ಟು ೪೭ ಮಾಸ್ತಿ ಶಿಲ್ಪಗಳನ್ನು ಪ್ರದರ್ಶಿಸಲಾಗಿದೆ. ಈ ಶಿಲ್ಪಗಳಲ್ಲಿ ಕಾಣುವ ವಿವಿಧ ಲಕ್ಷಣಗಳಿಂದ ಅವುಗಳನ್ನು ಈ ಕೆಳಗಿನಂತೆ ಏಳು ಭಾಗಗಳಾಗಿ ವರ್ಗೀಕರಿಸಬಹುದು.

೧. ತೋಳುಗೈವುಳ್ಳ ಶಿಲ್ಪಗಳು - ೨
   ಅ. ನಿಶಾನೆ ಆಕಾರದ ತೋಳುಗೈ ಶಿಲ್ಪಗಳು - ೫
   ಆ. ವಿವಿಧ ಹಂತಗಳುಳ್ಳ ತೋಳುಗೈ ಶಿಲ್ಪಗಳು - ೩
೨. ಮನುಷ್ಯೆತ್ತರದ ಸತಿ-ಕಿರುಗಾತ್ರದ ಪತಿ ಶಿಲ್ಪಗಳು - ೯
೩. ಮನುಷ್ಯೆತ್ತರದ ಸತಿ ಶಿಲ್ಪಗಳು - ೫
೪. ಮನುಷ್ಯೆತ್ತರದ ಸತಿ-ಪತಿ (ದಂಪತಿಗಳ) ಶಿಲ್ಪಗಳು - ೧೬
೫. ಮನುಷ್ಯೆತ್ತರ ಸತಿ-ಪತಿ ಇನ್ನಿತರ ಶಿಲ್ಪಗಳು - ೨
೬. ಒಂದಕ್ಕಿಂತ ಹೆಚ್ಚು ಸತಿಯುಳ್ಳ ಚಿತ್ರಗಳು - ೨
೭. ವಿವಿಧ ಹಂತಗಳುಳ್ಳ ಸತಿ ಶಿಲ್ಪಗಳು - ೩

೧. ತೋಳುಗೈಯುಳ್ಳ ಶಿಲ್ಪಗಳು

ಈ ಮಾದರಿಯ ಎರಡು ಶಿಲ್ಪಗಳು ವರಾಹಿ ಪ್ರಾಜೆಕ್ಟ್‌ನಿಂದ ಸಂಗ್ರಹಿಸಿ ವಸ್ತು ಸಂಗ್ರಹಾಲಯದಲ್ಲಿ ಪ್ರದರ್ಶಿಸಲಾಗಿದೆ. ಈ ಶಿಲ್ಪಗಳ ಮೇಲ್ಭಾಗ ಅರ್ಧ ವೃತ್ತಾಕಾರದಲ್ಲಿವೆ. "L" ಆಕಾರದ ಬಲತೋಳುಗೈ ಈ ಶಿಲ್ಪಗಳಲ್ಲಿ ಎದ್ದುಕಾಣುತ್ತಿವೆ. ಹೆಬ್ಬೆರಳು ಮತ್ತು ತೋರಬೆರಳ ಮಧ್ಯೆ ಲಿಂಬೆಹಣ್ಣಿದೆ. ಕೈಗೆ ಬಳೆಗಳನ್ನು ಧರಿಸಲಾಗಿದೆ. ಒಂದರಲ್ಲಿ ತೋಳಿಗೆ ಸಂಧಿಸಿ ಅದರ ಮೇಲೆ ಚೌಕಪಟ್ಟಿಕೆಯುಳ್ಳ ಗೂಡಿದ್ದು ಒಳಗಡೆ ದಂಪತಿಗಳು ಕೈಮುಗಿದು ಕುಳಿತಿರುವರು. ಈ ಗೂಡಿನ ಪಟ್ಟಿಕೆಯ ಮೇಲ್ಗಡೆ ಮತ್ತೊಂದು ಅಡ್ಡಪಟ್ಟಿಕೆಯಿದ್ದು ಅದರ ಮೇಲಿರುವ ಶಿವಲಿಂಗವನ್ನು (ಚಿತ್ರ ನಂ-೧) ಬಲಕ್ಕೆ ನಿಂತ ಯತಿ ಪೂಜಿಸುತ್ತಿರುವನು.

ಈ ಶಿಲ್ಪದ ಬದಿಗಿನ ಅಲ್ಲಿಯ ಇನ್ನೊಂದು ಶಿಲ್ಪದಲ್ಲಿ ಇದೇ ರೀತಿಯ ಚಿತ್ರಗಳಿವೆ. ಆದರೆ ಅದರಲ್ಲಿ ಕೆಲವು ಭಿನ್ನ ಲಕ್ಷಣಗಳಿವೆ. ಚೌಕಪಟ್ಟಿಕೆಯುಳ್ಳ ಗೂಡಿನ ಬುಡವು ತೋಳಿನ ಜ್ಯಾಂದ ಭಾಗಕ್ಕೆ ಹೊಂದಿಸಿ ರಚಿಸಲಾಗಿದೆ. ದಂಪತಿಗಳ ಕಾಲುಗಳು ಕೈಗಳಂತೆ ನಮಸ್ಕರಿಸುವ ರೀತಿಯಲ್ಲಿವೆ. ಕೈ ಮತ್ತು ಚೌಕ ಬಲಪಟ್ಟಿಕೆಯ ಮಧ್ಯ ಸೂರ್ಯನ ಚಿನ್ಹೆಯಿದೆ ತೋಳಿನಲ್ಲೂ ಬಳೆಗಳಿವೆ. ಶಿವಲಿಂಗ ಮತ್ತು ಪೂಜಿಸುವ ಯತಿ ಮತ್ತು ನಂದಿಗಳ ಚಿತ್ರಗಳ ಶೈಲಿ ಮೊದಲಿನದಕ್ಕಿಂತ ಭಿನ್ನವಾಗಿವೆ. (ಚಿತ್ರ-೨) ಈ ಎರಡರ ಕಾಲ ಸುಮಾರು ಕ್ರಿ.ಶ. ೧೬ ಮತ್ತು ೧೭ನೇ ಶತಮಾನ.

೧. ಅ. ಹಾರಿಸಿದ ನಿಶಾನೆ ಆಕಾರದ ತೋಳುಗೈವುಳ್ಳ ಶಿಲ್ಪಗಳು

ಈ ಮಾದರಿಯ ಐದು ಶಿಲ್ಪಗಳನ್ನು ಈ ಭಾಗದ ಐದು ಕಡೆಗಳಿಂದ ಸಂಗ್ರಹಿಸಿ ಅಲ್ಲಿಯ ವಸ್ತು ಸಂಗ್ರಹಾಯದಲ್ಲಿಡಲಾಗಿದೆ. (ತವನಂದ ಅರಣ್ಯ ಮತ್ತು ಇನ್ನಿತರ ಸ್ಥಳಗಳು) ಇವು ಏಕಶಿಲೆಯಲ್ಲಿವೆ. ಕಿರು ಎತ್ತರದ ಕಂಬದ ಮೇಲ್ಭಾಗಕ್ಕೆ ಜೋಡಿಸಿ ನಿಶಾನೆಯಂತೆ ಕಾಣುತ್ತವೆ. ಇದನ್ನು ಕಂಬದ ಉದ್ದಪಟ್ಟಿಕೆಯಲ್ಲಿ ಮೇಲಿನ ಬಲಭಾಗದಿಂದ ಹೊರ ಆಯತಾಕಾರ ಪಟ್ಟಿಕೆಯನ್ನು ಕಂಡರಿಸಲಾಗಿದೆ. ಈ ಆಯಾತಾಕಾರ ಪಟ್ಟಿಕೆಯಲ್ಲಿ ಬಲತೋಳುಗೈಯ ಉಬ್ಬುಶಿಲ್ಪವಿದ್ದು ಅದರ ತೋಳಿನ ತುದಿಯನ್ನು ಉದ್ದವಾದ ಕಂಬದ ಮಧ್ಯಭಾಗದಲ್ಲಿ ಜೋಡಿಸಲಾಗಿದೆ. ಈ ಕಂಬದಲ್ಲಿ ಸಾಮಾನ್ಯವಾಗಿ ಎರಡು ಹಂತಗಳಿರುತ್ತವೆ. ಕೆಳಗಿನ ಹಂತದಲ್ಲಿ ಮಡಿದ ವೀರನು ಆಯುಧಗಳನ್ನು ಹಿಡಿದು ನಿಂತರೆ, ಮೇಲಿನ ಹಂತದಲ್ಲಿ ವೀರ ತನ್ನ ಸತಿ ಸಂಗಡ ಕೈಮುಗಿದು ಕುಳಿತಿರುತ್ತಾರೆ. ಈ ಹಂತದ ಮೇಲಿನ ಪಟ್ಟಿಕೆಯ ಮೇಲೆ ಶಿವಲಿಂಗ, ಯತಿ, ಸೂರ್ಯ, ಚಂದ್ರರ ಚಿತ್ರಗಳಿರುತ್ತವೆ. ಕಂಬದ ತುದಿಭಾಗ ತ್ರಿಕೋನಾಕೃತಿಯಲ್ಲಿ ಕಂಡರಿಸಲಾಗಿರುತ್ತದೆ. ಈ ಲಕ್ಷಣವುಳ್ಳ ಒಂದನೇ ಶಿಲ್ಪದಲ್ಲಿ ವೀರನು ಕೈಯಲ್ಲಿ ಗುರಾಣಿ ಮತ್ತು ಕತ್ತಿಯನ್ನಿಡಿದು ಯುದ್ಧಕ್ಕೆ ಹೊರಟಿರುವ ರೀತಿಯಲ್ಲಿ ನಿಂತಿದ್ದಾನೆ. ಈ ಶಿಲ್ಪದಲ್ಲಿ ಸತಿಪತಿಯರು ತಮ್ಮ ತಲೆಯ ಕೇಶದ ತುರುಬುಗಳನ್ನು ಎಡಗಡೆಗೆ ಕಟ್ಟಿದ್ದಾರೆ. ಬಲ ತೋಳುಗೈಯಲ್ಲಿ ಲಿಂಬೆಹಣ್ಣಿದೆ. ಬಳೆ ತೋಳ್ಬಳೆಗಳನ್ನು ಧರಿಸಲಾಗಿದೆ. ಈ ತೋಳಗೈ

ಪಟ್ಟಿಕೆಯ ಕೆಳ ಮತ್ತು ಮೇಲಿನ ಭಾಗಗಳನ್ನು ಅಡ್ಡವಾಗಿ ಕಂಡರಿಸಲಾಗಿದೆ(ಚಿತ್ರ ನಂ-೩).

ಇದೇ ಲಕ್ಷಣವುಳ್ಳ ಮೂರನೇ ಶಿಲ್ಪವಿದ್ದು ಚಿತ್ರಗಳ ಶೈಲಿಯಲ್ಲಿ ಮಾತ್ರ ಅಲ್ಪ ಭಿನ್ನತೆಯಿದೆ. (ಚಿತ್ರ ನಂ-೪) ವೀರನನ್ನು ಹನುಮನಾಕಾರದಂತೆ ಚಿತ್ರಿಸಲಾಗಿದೆ. ಇನ್ನುಳಿದ ಎರಡು ಶಿಲ್ಪಗಳಲ್ಲಿ ಇದೇ ರೀತಿಯಲ್ಲಿವೆ. ಈ ಶಿಲ್ಪಗಳ ಕಾಲ ಸುಮಾರು ಕ್ರಿ.ಶ. ೧೬-೧೭ನೇ ಶತಮಾನ ಈ ರೀತಿಯ ಶಿಲ್ಪಗಳು ಕೇವಲ ಶಿವಮೊಗ್ಗ ಜಿಲ್ಲೆಯ ಪಶ್ಚಿಮಭಾಗ ಮತ್ತು ಉತ್ತರಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಹೆಚ್ಚಿರುವುದು ಗಮನೀಯ. ಕಾರವಾರ ತಾಲೂಕು, ಬೀಳಗಿ ತಾಲೂಕಿನ ಐಸೂರು ಮುಂತಾದ ಕಡೆ ಕಾಣಿಸಿದ್ದು ನಿಶಾನೆ ಪಟಗಳಲ್ಲಿ ಬಲ ತೋಳುಗೈಯ ಒಳಭಾಗದಲ್ಲಿ ದಂಪತಿಗಳ ಚಿತ್ರಗಳಿವೆ.

೧. ಆ. ವಿವಿಧ ಹಂತಗಳುಳ್ಳ ತೋಳುಗೈ ಶಿಲ್ಪಗಳು

ಎತ್ತರದ ಶಿಲ್ಪಗಳಲ್ಲಿ ವಿವಿಧ ಹಂತಗಳಿದ್ದು ಅಲ್ಲಿ ಬಲ ತೋಳಗೈಯ ಚಿನ್ಹೆಯನ್ನು ಎದ್ದುಕಾಣುವಂತೆ ಚಿತ್ರಿಸಿರುವುದು ಸಾಮಾನ್ಯ. ಈ ಲಕ್ಷಣದ ಮೂರು ಶಿಲ್ಪಗಳಿದ್ದು ಒಂದು ವಸ್ತು ಸಂಗ್ರಹಾಲಯದಲ್ಲಿದೆ. ಉಳಿದೆರಡು ಪೊಲೀಸ್ ಹೆಡ್ ಕ್ವಾರ್ಟರ್ಸ್‌ನಲ್ಲಿವೆ. ವಸ್ತು ಸಂಗ್ರಹಾಲಯದಲ್ಲಿರುವ ಶಿಲ್ಪ ಅಪರೂಪದ್ದು. ಅದರಲ್ಲಿ ಮೂರು ಹಂತಗಳಿವೆ. ಮೊದಲನೇ ಹಂತದಲ್ಲಿ ಮಧ್ಯ ಚಿತೆ (ದೇವಾಲಯ ಸ್ತೂಪಿ ಭಾಗ) ಯಿದ್ದು, ಬದಿಗಳಲ್ಲಿಬ್ಬರು ನಿಂತು ಚಿತೆಯ ಕಡೆಗೆ ಮುಖಮಾಡಿ ತುತ್ತೂರಿಗಳನ್ನು ಊದುತ್ತಿರುವ ದೃಶ್ಯ ಮನಮೋಹಕವಾಗಿದೆ. ಎರಡನೇ ಹಂತ ವಿಶಾಲವಾಗಿದೆ. ಅದರ ಮಧ್ಯದಲ್ಲಿ ಎತ್ತಿದ ಬಲತೋಳುಗೈಯಿದೆ. ತೋಳಿನಪಟ್ಟಿ ಮಧ್ಯ ಅರ್ಧಭಾಗದವರೆಗೆ ಚಿತ್ರಿಸಿದ್ದು ಕೈಭಾಗ ಈ ಹಂತದ ಅಂಚಿನಗುಂಟ ಮೂರನೇ ಫಲಕದ ಬುಡಪಟ್ಟಿಕೆವರೆಗೆ ವಿಸ್ತರಿಸಲಾಗಿದೆ. ಹೆಬ್ಬೆರಳು ಮತ್ತು ತೋರ್ ಬೆರಳುಗಳಲ್ಲಿ ಲಿಂಬೆಹಣ್ಣಿದೆ. ಸರಳ ಬಳೆಗಳಿವೆ. ಈ ತೋಳಿನ ಕೆಳಭಾಗದಲ್ಲಿ ಯುದ್ಧ ದೃಶ್ಯವಿದ್ದು ಬಲಗಡೆ ಸತಿ ನಿಂತಿದ್ದಾಳೆ. ಎಡಗಡೆಗೆ ವೀರನೊಬ್ಬ ನಿಂತು ಕುದುರೆ ಸವಾರಿ ಮಾಡುವ ವೈರಿ ಸಂಗಡ ಯುದ್ಧ ಮಾಡುತ್ತಿರುವನು. ವೀರನಿಗೆ ವೈರಿ ತನ್ನ ಕತ್ತಿಯಿಂದ ತಿವಿಯುತ್ತಿದ್ದು ವೀರಗುರಾಣಿ ಹಿಡಿದು ಅದನ್ನು ವಿರೋಧಿಸುತ್ತಿರುವನು. ಈ ಗುರಾಣಿ ಮತ್ತು ವೈರಿಯ ತಲೆಭಾಗ ಬಿಡಿಸಲು ತೋಳಿನ ಬಲಭಾಗದಲ್ಲಿ ಸ್ವಲ್ಪ ಭಾಗವನ್ನು ಕಂಡರಿಸಲಾಗಿದೆ. ಈ ತೋಳಿನ ಮೇಲ್ಭಾಗದಲ್ಲಿ ಬಲಗಡೆ ಅರಳಿದ ಕಮಲ ಎಡಗಡೆ ಪೀಠದ ಮೇಲೆ ದಂಪತಿಗಳು ಕೈಮುಗಿದು ಕುಳಿತಿರುವರು. ಮೂರನೇ ಹಂತದಲ್ಲಿ ಕುಳಿತ ನಂದಿ, ಶಿವಲಿಂಗ ಮತ್ತು ಮನುಷ್ಯ ಪ್ರಾಣಿ ರೂಪದ ಯತಿ ಎಡಕ್ಕೆ ನಿಂತು ಪೂಜಿಸುತ್ತಿರುವನು. ಅದರ ಮೇಲೆ ಸೂರ್ಯ ಮತ್ತು ಚಂದ್ರರ ನಡುವೆ ಸ್ವಲ್ಪ ಮೇಲೆ ಕೀರ್ತಿಮುಖ ಚಿತ್ರಗಳಿವೆ. ಈ ಭಾಗವು ತ್ರಿಕೋನಾಕಾರದಲ್ಲಿದೆ. ಕಾಲ ಸುಮಾರು ಕ್ರಿ.ಶ. ೧೬ನೇ ಶತಮಾನ(ಚಿತ್ರ-೫).

ಅಲ್ಲಿಯ ಪೊಲೀಸ್ ಹೆಡ್ ಕ್ವಾರ್ಟರ್ಸ್‌ನ ಒಂದು ಶಿಲ್ಪದಲ್ಲಿ ಮೂರು ಹಂತಗಳಿವೆ. ಕೆಳಗಿನ ಮೊದಲನೇ ಹಂತದ ಅರ್ಧಭಾಗ ನೂತನ ಪೀಠದಲ್ಲಿ ಮುಚ್ಚಿದೆ.

ಉಳಿದರ್ಧಭಾಗದಲ್ಲಿ ವೀರ ಪಲ್ಲಕ್ಕಿಯಲ್ಲಿ ಮಲಗಿದ್ದು ಅದನ್ನು ಜಟ್ಟಿಗಳಿಬ್ಬರು ಹೊತ್ತು ಒಯ್ಯುವಂತೆ ಚಿತ್ರಿಸಲಾಗಿದೆ. ಎರಡನೇ ಹಂತದ ಕೆಳಪಟ್ಟಿಯ ಬಲ ಅರ್ಧಭಾಗದವರೆಗೆ ಮತ್ತು ಬಲ ಅಂಚಿನ ಮೇಲ್ಭಾಗದ ಉದ್ದಕ್ಕೂ ಬಲತೋಳಗೈಯನ್ನು ಎದ್ದುಕಾಣುವಂತೆ ಚಿತ್ರಿಸಲಾಗಿದೆ. ತೋಳಿನ ಕೈಯಲ್ಲಿ ಬಳೆಗಳು, ಹೆಬ್ಬೆರಳು ಮತ್ತು ತೋಳ್ಬೆರಳಲ್ಲಿ ಲಿಂಬೆಹಣ್ಣಿದೆ. ತೋಳಿನ ಎಡತುದಿಗೆ ಹೊಂದಿಕೊಂಡು ಪಟ್ಟಿಯ ಮೇಲೆ ವೃತ್ತಾಕಾರದ ಕಮಲದ ಅಲಂಕಾರಣವಿದೆ. ಇದೇ ರೀತಿಯ ಅಲಂಕರಣ ಎರಡನೇ ಹಂತದ ಮೇಲಿನ ಪಟ್ಟಿಕೆಯ ಮೇಲಿದೆ. ಎರಡನೇ ಹಂತದಲ್ಲಿ ಚೌಕಾಕಾರದ ವಿಮಾನವುಳ್ಳ ಗೂಡಿನಲ್ಲಿ ದಂಪತಿಗಳು ಕೈಮುಗಿದು ಕುಳಿತಿದ್ದಾರೆ. ಗಂಡನ ತುರುಬು ಬಲಕ್ಕೆ, ಸತಿಯ ತುರುಬು ಎಡಕ್ಕೆ ಕಟ್ಟಲಾಗಿದೆ. ವಿಮಾನದ ಒಳಭಾಗದಲ್ಲಿ ಸಮಾಂತರವಾಗಿ ದಳಗಳಿಂದ ಅಲಂಕರಣಗೊಳಿಸಲಾಗಿದೆ. ಈ ವಿಮಾನದ ಎಡ ಬಲಗಳಲ್ಲಿ ಸೇವಕರು(?) ನಿಂತಿದ್ದಾರೆ. ಬಲಗಡೆ ನಿಂತ ಸೇವಕನ ಹೆಗಲ ಮೇಲೆ ವಸ್ತ್ರವನ್ನು ಹಾಕಿಕೊಂಡು ಬಲಗೈಯನ್ನು ತನ್ನ ಎದೆಯವರೆಗೆ ಎತ್ತಿ ಹಿಡಿದಿದ್ದು ಇಳಿಬಿಟ್ಟ ಬಲಗೈಯಲ್ಲಿ ಗಿಂಡಿ (ಕಮಂಡಲ)ವನ್ನು ಹಿಡಿದಿದ್ದಾನೆ. ಆತನ ಮುಖ ಮಾರುತಿಯಂತಿದೆ. ಎಡಗಡೆಯಲ್ಲಿ ನಿಂತ ಸೇವಕನು ಬಲಗೈಯಲ್ಲಿ ಚಾಮರ ಹಿಡಿದು ಮೇಲೆತ್ತಿದ್ದಾನೆ. ಮೂರನೇ ಹಂತದಲ್ಲಿ ಮಡಿದ ವೀರ ಕೈಮುಗಿದು ಕುಳಿತಿದ್ದಾನೆ. ಬದಿಗೆ ಶಿವಲಿಂಗವನ್ನು ಪೂಜಿಸುತ್ತ ಜಡೆಕಟ್ಟಿದ ಯತಿ ನಿಂತಿರುವನು. ಎಡಕ್ಕೆ ನಿಂತ ನಂದಿ ಇದೆ. ಶಿವಲಿಂಗದ ಮೇಲ್ಭಾಗದಲ್ಲಿ ಕೀರ್ತಿಮುಖದ ಅಲಂಕರಣವಿದೆ. ಈ ಭಾಗವೂ ತ್ರಿಕೋನಾಕಾರದಲ್ಲಿದೆ. ಕಾಲ ಸುಮಾರು ಕ್ರಿ.ಶ. ೧೬ನೇ ಶತಮಾನ. (ಚಿತ್ರ-೬)

ಈ ಮೇಲಿನ ಶಿಲ್ಪದ ಹತ್ತಿರವಿರುವ ಮತ್ತೊಂದು ಶಿಲ್ಪದಲ್ಲಿ ಮೂರು ಹಂತಗಳಿವೆ. ಅದರ ಮಧ್ಯದಲ್ಲಿ ಬಲ ತೋಳುಗೈಯನ್ನು ಅಲಂಕರಿಸಲಾಗಿದೆ. ತೋಳಿನ ಪಟ್ಟಿಕೆಯ ಎಡ ತುದಿಯ ಮೇಲೆ ಕಮಲದ ಅಲಂಕಾರ ಬಲ ಕೈಯನ್ನು ಇಲ್ಲಿಯೂ ಶಿಲ್ಪದ ಅಂಚಿನಗುಂಟ ಮೇಲಕ್ಕೆ ಚಿತ್ರಿಸಲಾಗಿದೆ. ಲಿಂಬೆಹಣ್ಣು ಅಸ್ಪಷ್ಟವಾಗಿದೆ. ಎರಡನೇ ಹಂತದಲ್ಲಿ ಈ ತೋಳಿನ ಕಮಲ ಪಟ್ಟಿಕೆಯ ಒಂದೇ ಸಾಲಿನಲ್ಲಿ ಯತಿ, ಶಿವಲಿಂಗ ಕುಳಿತ ನಂದಿಯಿದ್ದರೆ ಬಲಗಡೆ ದಂಪತಿಗಳು ಕೈಮುಗಿದು ಕುಳಿತಿರುವರು. ಈ ಹಂತದ ಮೇಲ್ಭಾಗದಲ್ಲಿ ದೇವಾಲಯದ ನಮೂನೆಯಿದ್ದು ಅದರ ಬುಡದಲ್ಲಿ ಸೂರ್ಯ ಮತ್ತು ಚಂದ್ರರ ಚಿನ್ಹೆಗಳಿವೆ. ಕಾಲ ಸುಮಾರು ಕ್ರಿ.ಶ. ೧೬ನೇ ಶತಮಾನ(ಚಿತ್ರ-೭).

೩. ಮನುಷ್ಯನೆತ್ತರದ ಸತಿ ಶಿಲ್ಪಗಳು

ಅಲ್ಲಿ ಮನುಷ್ಯನೆತ್ತರದ ಐದು ಸತಿಯರ ಸುಂದರ ಉಬ್ಬುಶಿಲ್ಪಗಳಿವೆ. ದೇಹಾಂಗದ ಮೇಲ್ಭಾಗವನ್ನು ನಯಗೊಳಿಸಿ ಆಕರ್ಷಣೀಯವಾಗಿ ಕಾಣುವಂತೆ ಮಾಡಲಾಗಿದೆ. ಈ ಮಾದರಿಯಲ್ಲಿ ಸತಿಯು ತನ್ನ ಬಲತೋಳಗೈಯನ್ನು ಎತ್ತಿಹಿಡಿದು ನಿಂತಿದ್ದಾಳೆ. ಇಳಿಬಿಟ್ಟ ಎಡಗೈಯಲ್ಲಿ ಮಂಗಳ ವಸ್ತುವಿರುತ್ತದೆ. ವಸ್ತ್ರಾಭರಣಗಳನ್ನು ಧರಿಸಿರುವಳು. ಸೀರೆಯನ್ನು

ಸೊಂಟದಿಂದ ಪಾದದವರೆಗೆ ಇಳಿಬಿಟ್ಟು ಧರಿಸಲಾಗಿದೆ. ಅದರಲ್ಲಿ ಉದ್ದಗಲಕ್ಕೂ ಅನೇಕ ಮಡಿಕೆಗಳಿವೆ. ತಲೆಯ ಕೇಶದ ತುರುಬಿನ ಸುತ್ತಲಿನ ಪ್ರಭಾವಳಿಯಲ್ಲಿ ಅರ್ಧ ವೃತ್ತಾಕಾರದಲ್ಲಿ ಕೇದಿಗೆಗಳ ಅಲಂಕರಣವಿದೆ. ಓಲೆ, ಸರ, ಬಳೆಗಳನ್ನು ಧರಿಸಲಾಗಿದೆ. ಈ ಲಕ್ಷಣವುಳ್ಳ ವಸ್ತು ಸಂಗ್ರಹಾಲಯದಲ್ಲಿರುವ ಒಂದನೇ ಶಿಲ್ಪದ ಕೆಳಗಡೆ ಇಳಿಬಿಟ್ಟು, ಎಡಗೈಯಲ್ಲಿ ಕಮಂಡಲ (ಗಿಂಡಿ) ಮೇಲೆತ್ತಿ ಹಿಡಿದ ಬಲಗೈಯಲ್ಲಿ ಯಾವ ಮಂಗಳ ವಸ್ತುವಿಲ್ಲ. ವಿಭಿನ್ನ ವಸ್ತ್ರಾಭರಣಗಳನ್ನು ಧರಿಸಿರುವಳು. ಮೇಲ್ಭಾಗ ಅರ್ಧ ವೃತ್ತಾಕಾರದಲ್ಲಿದ್ದು ಆ ಭಾಗದಲ್ಲಿ ಸುರುಳಿ ಆಕಾರದ ತೋರಣವಿದೆ. ಕಾಲ ಸುಮಾರು ಕ್ರಿ.ಶ. ೧೬ನೇ ಶತಮಾನ (ಚಿತ್ರ-೮).

ಈ ಮೇಲಿನ ಶಿಲ್ಪದ ಹತ್ತಿರವಿರುವ ಮತ್ತೊಂದು ಶಿಲ್ಪ ಇದೇ ರೀತಿಯಲ್ಲಿದೆ. ಆದರೆ ಆಕೆಯು ಎಡಗೈಯಲ್ಲಿ ಕನ್ನಡಿಯನ್ನು ಹಿಡಿದಿರುವಳು. ಈ ಶಿಲ್ಪದ ಮೇಲ್ಭಾಗದಲ್ಲಿ ದಂಪತಿಗಳು ಕೈಮುಗಿದು ಶಿವಲಿಂಗದ ಎದುರು ಕುಳಿತಿದ್ದು ಲಿಂಗವನ್ನು ಯತಿಯೊಬ್ಬ ಪೂಜಿಸುತ್ತಿರುವನು. ಬದಿಗೆ ಕುಳಿತ ನಂದಿಯಿದೆ.

ಪೊಲೀಸ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಈ ರೀತಿಯ ಎರಡು ಶಿಲ್ಪಗಳಲ್ಲಿ ಒಬ್ಬಳ ಎಡಗೈಯಲ್ಲಿ ಲಿಂಬೆಹಣ್ಣಿದೆ. (ಚಿತ್ರ-೯) ಆಕೆಯ ಪ್ರಭಾವಳಿಯು ಸರಳವಾಗಿದೆ. ಇನ್ನೊಬ್ಬಳ ಬಲಗೈಯಲ್ಲಿ ಲಿಂಬೆಹಣ್ಣು ಎಡಗೈಯಲ್ಲಿ ಕಮಂಡಲ (ಗಿಂಡಿ) ಇದೆ. ಈಕೆಯ ಬಲಗಡೆಯ ಎಡಪಕ್ಕದಲ್ಲಿ ಕಿರುದಾಗಿ ದಂಪತಿಗಳು ಕೈಮುಗಿದು ಕುಳಿತಿರುವುದನ್ನು ಚಿತ್ರಿಸಲಾಗಿದೆ. ಒಂದು ಸರಕ್ಕೆ ಲಿಂಗವನ್ನು ಕಟ್ಟಿದಂತಿದೆ. ಸೊಂಟಕ್ಕೆ ಬಿಗಿದ ಸೀರೆಯ ಒಂದು ತುದಿಭಾಗ ಬಲಗಡೆಗೆ ಇಳಿಬಿಟ್ಟಿದೆ. (ಚಿತ್ರ-೧೦) ಮೇಲ್ಭಾಗದಲ್ಲಿ ದಂಪತಿಗಳ ಕಿರುಚಿತ್ರವಿದೆ.

೩. ಮನುಷ್ಯನೆತ್ತರದ ಸತಿ - ಕಿರುಗಾತ್ರದ ಪತಿ ಶಿಲ್ಪಗಳು

ಅಲ್ಲಿ ಒಂಭತ್ತು ಈ ಲಕ್ಷಣ ಶಿಲ್ಪಗಳಿವೆ. ಸತಿಯ ಮನುಷ್ಯನೆತ್ತರದ ಉಬ್ಬುಶಿಲ್ಪದಲ್ಲಿ ಈ ಮೇಲೆ ತಿಳಿಸಿದ ರೀತಿಯಲ್ಲಿವೆ. ಸತಿಯರ ಸಂಗಡ ಪತಿಯನ್ನು ಕಿರುಗಾತ್ರದಲ್ಲಿ ಚಿತ್ರಿಸಲಾಗಿದೆ. ವಸ್ತು ಸಂಗ್ರಹಾಯಲದ ಒಂದು ಶಿಲ್ಪದಲ್ಲಿ ಬಲತೋಳುಗೈ ಎತ್ತಿನಿಂತ ಸತಿಯ ಚಿತ್ರದಲ್ಲಿ ಕೈ (ಪಾರ್ವ) ಯಲ್ಲಿ ಬಳ್ಳಿಯ ಅಲಂಕರಣವಿದೆ. ಎಡಗೈಯಲ್ಲಿ ನಿಂಬೆಹಣ್ಣಿದೆ. ತಲೆಯ ತುರುಬಿನ ಸುತ್ತ ಕೇದಿಗೆಯನ್ನು ಅರ್ಧ ವೃತ್ತಾಕಾರದಲ್ಲಿ ಅಲಂಕರಣ ಮಾಡಲಾಗಿದೆ. ಆಕೆಯ ಬಲ ಸೊಂಟದ ಪಕ್ಕದಲ್ಲಿ ತನ್ನ ಪತಿಯನ್ನು ಕಿರುಗಾತ್ರದಲ್ಲಿ ಚಿತ್ರಿಸಿದ್ದು ಆತನು ಕೈಮುಗಿದು ಕುಳಿತಿರುವನು (ಚಿತ್ರ-೧೧).

ಈ ಮೇಲಿನ ಶಿಲ್ಪದ ಸಮೀಪದ ಸತಿಶಿಲ್ಪದಲ್ಲಿ ಇದೇ ರೀತಿಯ ಲಕ್ಷಣಗಳಿವೆ. ಆದರೆ ಬಲಗೈಯಲ್ಲಿ ಹೂ, ಎಡಗೈಯಲ್ಲಿ ಕಮಂಡಲ (ಗಿಂಡಿ) ಯಿದೆ. ಆಕೆಯ ಮೇಲ್ಗಡೆ ಕುಳಿತ ಗಂಡನ ಕಿರುಚಿತ್ರವಿದೆ. ಬದಿಗೆ ಕತ್ತಿ, ಸೂರ್ಯ, ಚಂದ್ರರ ಚಿನ್ಹೆಗಳಿವೆ. ಅಲ್ಲಿಯ ಮತ್ತೊಂದು ಶಿಲ್ಪದಲ್ಲಿ ಪತಿಯು ಸತಿ ಬಲಗಡೆ ನಿಂತಿದ್ದಾನೆ. ಆತನನ್ನು ಕಿರುದಾಗಿ ಚಿತ್ರಿಸಲಾಗಿದೆ. ಮೇಲ್ಗಡೆ ದಂಪತಿಗಳು, ಸೂರ್ಯ-ಚಂದ್ರರ ಚಿತ್ರಗಳಿವೆ.

ಅಲ್ಲಿಯ ಇನ್ನೊಂದು ಶಿಲ್ಪದಲ್ಲಿ ಸತಿಯ ಬಲಗಡೆ ಪತಿಯನ್ನು ಕಿರಿದಾಗಿ ಚಿತ್ರಿಸಲಾಗಿದೆ. ಮತ್ತೊಂದು ಈ ರೀತಿಯ ಶಿಲ್ಪದಲ್ಲಿ ಪತಿ ಬಿಲ್ಲನ್ನು ಹಿಡಿದಿದ್ದಾನೆ. ಸತಿಯು ಎಡಗೈಯಲ್ಲಿ ಕಮಂಡಲ (ಗಿಂಡಿ) ಹಿಡಿದಿದ್ದಾಳೆ. ಆದರೆ ಅಲ್ಲಿಯ ಮತ್ತೊಂದು ಶಿಲ್ಪದಲ್ಲಿ ಇಬ್ಬರು ಸತಿಯರ ಮನುಷ್ಯನೆತ್ತರದ ಉಬ್ಬುಶಿಲ್ಪಗಳ ಮಧ್ಯ ಪೀಠದ ಮೇಲೆ ಪತಿಯ ಚಿತ್ರವಿದೆ. ಆತ ಕೈಮುಗಿದು ಕುಳಿತಿರುವನು. ಸತಿಯರ ತಲೆಗೆ ಕಿರೀಟಧಾರಣೆ (?) ಮಾಡಿದ್ದು ಗಮನೀಯ. ಇಬ್ಬರೂ ಸತಿಯರು ತಮ್ಮ ಬಲತೋಳಗೈಗಳನ್ನು ಎತ್ತಿ ಹಿಡಿದಿರುವರು (ಚಿತ್ರ-೧೨) ಪೊಲೀಸ್ ಹೆಡ್ ಕ್ವಾರ್ಟರ್ಸ್‌ನಲ್ಲಿ ಈ ರೀತಿಯ ಇಬ್ಬರು ಸತಿ ನಿಂತ ಒಂದು ಶಿಲ್ಪದಲ್ಲಿ ಲಿಂಬೆಹಣ್ಣು ಮತ್ತು ಕಮಂಡಲ ಹಿಡಿದು ನಿಂತಿದ್ದಾನೆ. ಮೇಲ್ಭಾಗದಲ್ಲಿ ಪತಿಯು ಕೈಮುಗಿದು ಕುಳಿತ ಕಿರು ಚಿತ್ರವಿದೆ. (ಚಿತ್ರ-೧೩) ಅಲ್ಲಿಯ ಮತ್ತೊಂದು ಶಿಲ್ಪದಲ್ಲಿ ಇಬ್ಬರು ಆಳೆತ್ತರದಲ್ಲಿ ಸತಿಯರು ಬಲಗೈಯಲ್ಲಿ ಹೂಗೊಂಚಲನ್ನಿಡಿದು ಎತ್ತಿ ನಿಂತಿದ್ದಾರೆ. ಎಡಗೈಯಲ್ಲಿ ಕಮಲಗಳಿವೆ. ಅವರ ಮೇಲ್ಭಾಗದಲ್ಲಿ ಪತಿಯ ಕಿರು ಚಿತ್ರವಿದೆ. ಇದೊಂದು ಅಪರೂಪದ ಶಿಲ್ಪ. ಕಾಲ ಸುಮಾರು ೧೬ನೇ ಶತಮಾನ (ಚಿತ್ರ-೨೪).

೪. ಮನುಷ್ಯನೆತ್ತರದ ಸತಿ-ಪತಿಯರ ಶಿಲ್ಪಗಳು

ಅಲ್ಲಿ ಈ ಲಕ್ಷಣದ ಹೆಚ್ಚಿನ ಶಿಲ್ಪಗಳಿವೆ. ಒಟ್ಟು ಹದಿನಾರು. ಅವುಗಳಲ್ಲಿ ಹದಿನಾಲ್ಕು ಶಿಲ್ಪಗಳು ವಸ್ತು ಸಂಗ್ರಹಾಲಯದಲ್ಲಿವೆ. ಉಳಿದೆರಡು ಶಿಲ್ಪಗಳು ಪೊಲೀಸ್ ಹೆಡ್ ಕ್ವಾರ್ಟರ್ಸ್‌ನಲ್ಲಿವೆ. ಈ ಶಿಲ್ಪಗಳಲ್ಲಿ ಸತಿ-ಪತಿಯರನ್ನು ಸಮಾನ ಎತ್ತರದಲ್ಲಿ ಚಿತ್ರಿಸಲಾಗಿದೆ. ಅದರ ಸುತ್ತ ಅರ್ಧ ವೃತ್ತಾಕಾರ ಪಟ್ಟಿಕೆಯಿದೆ. ಸತಿ ಬಲ ತೋಳಗೈಯನ್ನು ಎತ್ತಿ ಹಿಡಿದು ಎಡಗೈ ಇಳಿಬಿಟ್ಟಿದ್ದಾಳೆ. ಅಲ್ಲಿಯ ಆನಂದಪುರದ ಶಿಲ್ಪದಲ್ಲಿ ದಂಪತಿಗಳು ನಿಂತಿದ್ದಾರೆ. ಸತಿ ತನ್ನ ಎರಡೂ ಕೈಗಳನ್ನು ಎತ್ತಿ ಹಿಡಿದಿರುವುದು ಗಮನೀಯ. ಒಂದು ಕೈಯಲ್ಲಿ ಗಧೆ (?) ಇನ್ನೊಂದು ಕೈಯಲ್ಲಿ ಲಿಂಬೆಹಣ್ಣಿರುವುದು ವಿಶಿಷ್ಟ. ನಿಂತ ಪತಿ ಬಲಗೈಯನ್ನು ಸೊಂಟಕ್ಕೆ ಇಳಿಬಿಟ್ಟಿದ್ದಾನೆ. ಸತಿಯ ತುರುಬಿನಲ್ಲಿ ಕೇದಿಗೆಯ ಅಲಂಕಾರವಿದೆ. ತಲೆಯ ಮೇಲೆ ಚಂದ್ರ ಮತ್ತು ಸೂರ್ಯ ಚಿನ್ಹೆಗಳಿವೆ. ಕಾಲ ಸುಮಾರು ಕ್ರಿ.ಶ. ೧೭ನೇ ಶತಮಾನ. (ಚಿತ್ರ-೧೪) ಅಲ್ಲಿಯ ಇನ್ನೊಂದು ಈ ರೀತಿಯ ಶಿಲ್ಪವನ್ನು ಮಂಡಲಿಯಿಂದ ಸಂಗ್ರಹಿಸಲಾಗಿದೆ. (ಚಿತ್ರ-೧೫) ನಿಂತ ಪತಿ ಗಡ್ಡಧಾರಿ. ಕೈಗಳಲ್ಲಿ ಕತ್ತಿ ಮತ್ತು ಡ್ಯಾಗರ್‌ಗಳಿವೆ. ಸತಿಯ ಬಲಗೈ ಇಳಿಬಿಟ್ಟು ಲಿಂಬೆಹಣ್ಣು ಹಿಡಿದಿರುವುದು ವಿಶೇಷ. ಎಡಗೈಯನ್ನು ಮಡಚಿ ದೇಹದ ಎಡಕುಚದ ಪಕ್ಕ ಇಟ್ಟಿದ್ದಾಳೆ. ತಲೆ ತುರುಬಿನ ಸುತ್ತ ಅರ್ಧ ವೃತ್ತಾಕಾರದಲ್ಲಿ ಕೇದಿಗೆಯ ಅಲಂಕರಣವಿದೆ. ಸೀರೆಯನ್ನು ಈಕೆಯು ಸೊಂಟದಿಂದ ಪಾದದವರೆಗೆ ಇಳಿಬಿಟ್ಟು ಧರಿಸಿದ್ದಾಳೆ. ಕಾಲ ಸುಮಾರು ಕ್ರಿ.ಶ. ೧೬ನೇ ಶತಮಾನ. ಪೊಲೀಸ್ ಹೆಡ್ ಕ್ವಾರ್ಟರ್ಸ್‌ನಲ್ಲೂ ಗಡ್ಡಧಾರಿಯುಳ್ಳ ಪತಿಯ ಈ ರೀತಿಯ ಒಂದು ಶಾಸನವುಳ್ಳ ಶಿಲ್ಪವಿದೆ.

ಆ ಶಾಸನದಲ್ಲಿ "ಕುಕಸಾವಲು ಬಾಸಿಪರು ಮೇಗಾರ ದೆಮಾಜಿ ಮಗ ಕೈಮೋಜ

ಹೆಂಡತಿ... ಭು" ವಿವರವಿದೆ. ಪತಿಯ ಕೈಯಲ್ಲಿ ಕತ್ತಿ ಮತ್ತು ಡ್ಯಾಗರ್‌ಗಳಿವೆ. ಓಲೆ, ಸರ, ಬಳೆ, ಕಡಗಳಲ್ಲದೆ ದೇಹಕ್ಕೆ ಅಡ್ಡವಾಗಿ ಪಟ್ಟಿಯನ್ನು ಧರಿಸಿರುವುದು ಗಮನೀಯ. ನಿಂತ ಸತಿಯ ಎತ್ತಿದ ತೋಳ ಬಲಗೈಯಲ್ಲಿ ಲಿಂಬೆಹಣ್ಣು, ಇಳಿಬಿಟ್ಟ ಎಡಗೈಯಲ್ಲಿ ಗಿಂಡಿಯಿದೆ. ತಲೆಯ ಮೇಲೆ ಎರಡು ಸಾಲಿನಲ್ಲಿ ಅರ್ಧವೃತ್ತಾಕಾರವಾಗಿ ಕೇದಿಗೆಯ ಅಲಂಕರಣವಿದೆ (ಚಿತ್ರ-೧೬).

ವಸ್ತು ಸಂಗ್ರಹಾಯಲದ ಈ ಮಾದರಿಯ ಒಂದು ಶಿಲ್ಪ ಸಾಮಾನ್ಯ ಲಕ್ಷಣವಿದ್ದು, ಅದನ್ನು ಬೆಳಗುತ್ತಿಯಿಂದ ಸಂಗ್ರಹಿಸಲಾಗಿದೆ. ಅಲ್ಲಿಯ ಇನ್ನೊಂದು ಈ ಲಕ್ಷಣದ ಶಿಲ್ಪ ಕರೆಗುಡ್ಡ ಅರಣ್ಯದ್ದಾಗಿದೆ. ಅದರಲ್ಲಿ ದಂಪತಿಗಳು ನಿಂತಿದ್ದಾರೆ. ಸತಿ ಬಲ ತೋಳುಗೈಯನ್ನು ಎತ್ತಿ ಹಿಡಿದಿರುವಳು. ಅಲ್ಲಿಯ ಆನಂದಪುರದ ಒಂದು ಶಿಲ್ಪ ಈ ಮಾದರಿಯದ್ದಾಗಿದೆ. ಪತಿ ಕತ್ತಿ ಮತ್ತು ಗುರಾಣಿ ಹಿಡಿದು ನಿಂತಿದ್ದಾನೆ. ಸತಿಯ ಬಲಗೈಯಲ್ಲಿ ಲಿಂಬೆಹಣ್ಣಿದೆ. ಅಲ್ಲಿಯ ಕರೆಗುಡ್ಡದ ಈ ರೀತಿಯ ಮತ್ತೊಂದು ಶಿಲ್ಪದಲ್ಲಿ ಸತಿಯು ಎರಡೂ ಕೈಗಳನ್ನು ಮೇಲಕ್ಕೆತ್ತಿ ನೃತ್ಯ ಮಾಡುತ್ತಿರುವುದು ಗಮನೀಯ. ಅಲ್ಲಿಯ ಕರೆಗುಡ್ಡ ಅರಣ್ಯದ ಮತ್ತೆರಡು ಶಿಲ್ಪಗಳಲ್ಲಿ ಈ ಮಾದರಿಯ ಸಾಮಾನ್ಯ ಲಕ್ಷಣವಿದೆ. ಸತಿ ಬಲತೋಳಗೈಯನ್ನು ಎತ್ತಿದ್ದಾಳೆ.

ಈ ವಸ್ತು ಸಂಗ್ರಹಾಲಯದ ಈ ಮಾದರಿಯ ಎರಡೂ ಶಿಲ್ಪಗಳಲ್ಲಿ ಸತಿಯ ಎರಡೂ ಕೈಗಳನ್ನು ಮೇಲಕ್ಕೆತ್ತಿ ಹಿಡಿದಿದ್ದಾಳೆ. (ಕಾಲ ಕ್ರಿ.ಶ. ೧೮-೧೯ನೇ ಶತಮಾನ) ಇನ್ನೊಂದಕ್ಕೆ ಸಾಮಾನ್ಯ ಲಕ್ಷಣವಿದೆ. ಮತ್ತೊಂದರಲ್ಲಿ ಈ ರೀತಿಯ ಸಾಮಾನ್ಯ ಲಕ್ಷಣದ ಜತೆ ನಿಂತ ಸತಿಯ ಎಡಗಡೆಗೆ ಒಂದರ ಮೇಲೆ ಒಂದರಂತೆ ಆರು ವಾಗಿಗಳನಿಟ್ಟಿರುವುದು ವಿಶೇಷ ಗಮನವನ್ನು ಸೆಳೆಯುತ್ತದೆ. ಅಲ್ಲಿಯ ಮತ್ತೊಂದು ಈ ರೀತಿಯ ಶಿಲ್ಪದಲ್ಲಿ ಸತಿ-ಪತಿಯರಿಬ್ಬರೂ ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿ ನಿಂತಿರುವುದು ವಿಶೇಷವಾಗಿದೆ.

ಅಲ್ಲಿಯ ಕರೆಗುಡ್ಡದ ಒಂದು ಶಿಲ್ಪದಲ್ಲಿ ಸತಿಯು ಎರಡು ಕೈಗಳಲ್ಲಿ ಕನ್ನಡಿ ಹಿಡಿದು ಸ್ವಲ್ಪ ಮೇಲೆತ್ತಿದ್ದಾಳೆ. ಸತಿ-ಪತಿಯರ ಮಧ್ಯ ಕೆಳಗಡೆ ಸಿಂಬೆ ಸುತ್ತಿದ ಹಾವಿದೆ. ಮೇಲೆ ಸೂರ್ಯ-ಚಂದ್ರರ ಚಿನ್ಹೆಗಳಿವೆ. ಇವರ ತಲೆಗಳ ಮಧ್ಯೆ ಪೈನಿಕ್ಸ್‌ಗಳಿವೆ. (ಚಿತ್ರ-೧೭) ಈ ರೀತಿಯ ಸಾಮಾನ್ಯ ಲಕ್ಷಣವುಳ್ಳ ಪೊಲೀಸ್ ಹೆಡ್ ಕ್ವಾರ್ಟರ್ಸ್‌ನ ಶಿಲ್ಪದಲ್ಲಿ ಪತಿಯ ಕೈಗಳಲ್ಲಿ ಕತ್ತಿ-ಗುರಾಣಿ ಸತಿ ಬಲಕೈಯಲ್ಲಿ ನಿಂಬೆಹಣ್ಣಿದೆ. ಮೇಲೆ ಅರ್ಧವೃತ್ತಾಕರ ಸತಿ ತಲೆಯ ಮೇಲೆ ದುಂಡಾಕೃತಿಯಲ್ಲಿ ಕೇದಿಗೆ ಅಲಂಕರಣವಿದೆ (ಚಿತ್ರ-೧೮).

೫. ಮನುಷ್ಯನೆತ್ತರದ ಸತಿ-ಪತಿ ಇನ್ನಿತರ ಶಿಲ್ಪಗಳು

ಈ ಲಕ್ಷಣದ ಸೂಳೆಕೆರೆಯ ಎರಡು ಶಿಲ್ಪಗಳು ಅಲ್ಲಿಯ ವಸ್ತು ಸಂಗ್ರಹಾಲಯದಲ್ಲಿದೆ. ಇಬ್ಬರು ಸತಿ-ಪತಿಯರಲ್ಲದೆ ಇನ್ನೊಬ್ಬ ವೀರನೂ ಜತೆಯಲ್ಲಿರುವನು. ಈ ಎರಡೂ ಶಿಲ್ಪಗಳಲ್ಲಿ ಸತಿಯು ತನ್ನ ಎರಡೂ ಕೈಗಳನ್ನು ಎತ್ತಿ ನೃತ್ಯ ಮಾಡುತ್ತಿರುವುದು ಗಮನೀಯ. ಈ ಇಬ್ಬರ ಸತಿಯರ ಕೈಗಳಲ್ಲಿ ನಿಂಬೆಹಣ್ಣುಗಳಿವೆ.

ಒಂದು ಶಿಲ್ಪದಲ್ಲಿ ಸತಿ ಬಲಕ್ಕೆ ಪತಿ ಕತ್ತಿ ಮತ್ತು ಡ್ಯಾಗರ್ ಹಿಡಿದಿದ್ದರೆ, ಈತನ ಬದಿಗೆ ನಿಂತ ವ್ಯಕ್ತಿ ಇಷ್ಟಲಿಂಗವುಳ್ಳ ಚೌಕವನ್ನೂ ಧರಿಸಿರುವನು. (ಚಿತ್ರ-೧೯) ಇನ್ನೊಂದರಲ್ಲಿ ಪತಿಯು ಅದೇ ಆಯುಧಗಳನ್ನು ಸತಿ ಎಡಕ್ಕೆ ಒಬ್ಬ ವ್ಯಕ್ತಿ ಉದ್ದ ಕತ್ತಿ (?) ಹಿಡಿದು ನಿಂತಿರುವರು (ಚಿತ್ರ-೨೦).

೬. ಒಂದಕ್ಕಿಂತ ಹೆಚ್ಚು ಸತಿಯರುಳ್ಳ ಶಿಲ್ಪಗಳು

ಈ ಮಾದರಿಯ ಒಂದು ಶಿಲ್ಪವಿದೆ. ಅದರಲ್ಲಿ ಸತಿಯರಿಬ್ಬರು ನಿಂತಿದ್ದಾರೆ. ಕೆಳಗಡೆ ಇಳಿಬಿಟ್ಟ ಬಲಗೈಗಳಲ್ಲಿ ನಿಂಬೆಹಣ್ಣು ಮತ್ತು ಸ್ವಲ್ಪ ಎತ್ತರ ಎಡಗೈಗಳಲ್ಲಿ ಕಮಲಗಳಿವೆ. ತಲಾ ಒಬ್ಬೊಬ್ಬರಿಗೆ ಅರ್ಧ ವೃತ್ತಾಕಾರದ ತೋರಣಗಳಿವೆ. ಓಲೆ, ಸರ, ಬಳೆ, ಸೀರೆಗಳಲ್ಲದೆ ಹಾರಗಳನ್ನು ಧರಿಸಿದ್ದಾರೆ. ಕಾಲ ಸುಮಾರು ಕ್ರಿ.ಶ. ೧೬ನೇ ಶತಮಾನ (ಚಿತ್ರ-೨೧).

೭. ವಿವಿಧ ಹಂತಗಳುಳ್ಳ ನಿಂತ ಸತಿ ಶಿಲ್ಪಗಳು

ಈ ಮಾದರಿಯ ಮೂರು ಶಿಲ್ಪಗಳಲ್ಲಿ ಎರಡು ವಸ್ತು ಸಂಗ್ರಹಾಲಯದಲ್ಲಿ ಒಂದು ಪೊಲೀಸ್ ಹೆಡ್ ಕ್ವಾರ್ಟರ್ಸ್‌ನಲ್ಲಿವೆ. ವಸ್ತು ಸಂಗ್ರಹಾಲಯದ ಒಂದು ಶಿಲ್ಪದಲ್ಲಿ ಎರಡು ಹಂತಗಳಿವೆ. ಕೆಳಗಿನ ಹಂತ ದೊಡ್ಡದಿದ್ದು ಹೋರಾಟದ ದೃಶ್ಯ ಸಂಗಡ ಬಲ ಅಂಚಿನಲ್ಲಿ ಆಳೆತ್ತರದ ಸತಿ ಬಲಗೈ ಎತ್ತಿ ನಿಂತಿರುವಳು. ವಸ್ತ್ರಾಭರಣ ಧರಿಸಿರುವಳು. ಪತಿಯ ಉದ್ದವಾದ ಚಿತ್ರದಲ್ಲಿ ಆತ ಎದುರಿನ ಎಡಗಡೆ ಅಂಚಿನಲ್ಲಿರುವ ಮೂವರು ಕುದುರೆ ಸವಾರರನ್ನು ಡ್ಯಾಗರ್ ಹಿಡಿದು ಎದುರಿಸುವಂತೆ ನಿಂತಿರುವನು. ಈ ಕುದುರೆ ಸವಾರರನ್ನು ಅಡ್ಡವಾಗಿ ಒಬ್ಬರ ಮೇಲೊಬ್ಬರಂತೆ ಚಿತ್ರಿಸಲಾಗಿದೆ. ಕೈಗಳಲ್ಲಿ ಉದ್ದವಾದ ಈಟಿಗಳಿವೆ. ಮೇಲಿನ ಎರಡನೇ ಹಂತದಲ್ಲಿ ಲಿಂಗ, ಮನುಷ್ಯ-ಪ್ರಾಣಿ ದೇಹವುಳ್ಳವನು. ಲಿಂಗ ಪೂಜಿಸುತ್ತಿರುವನು. ಮತ್ತು ಚಂದ್ರ ಚಿನ್ಹೆಗಳಿವೆ. (ಚಿತ್ರ-೨೨) ಕಾಲ ಸುಮಾರು ಕ್ರಿ.ಶ. ೧೫ನೇ ಶತಮಾನ. ಅಲ್ಲಿಯ ಇನ್ನೊಂದು ಶಿಲ್ಪದಲ್ಲಿ ಕುದುರೆ (ಗೂಳಿ) ಸವಾರನ ಮುಂದೆ ಸತಿ ಬಲಗೈ ಎತ್ತಿ ನಿಂತಿದ್ದಾಳೆ. ಮೇಲ್ಗಡೆ ಲಿಂಗ, ಸೂರ್ಯ, ಚಂದ್ರ ಚಿತ್ರಗಳಿವೆ.

ಪೊಲೀಸ್ ಹೆಡ್ ಕ್ವಾರ್ಟರ್ಸ್‌ನ ಈ ಮಾದರಿಯ ಒಂದು ಶಿಲ್ಪದಲ್ಲಿ ಮೂರು ಹಂತಗಳಿವೆ. ಕೆಳಗಡೆ ಯುದ್ಧ ದೃಶ್ಯ ಎರಡನೇ ಹಂತ ವಿಶಾಲ ಆಯತಾಕಾರವಿದ್ದು, ಅದರಲ್ಲಿ ನಿಂತ ಸತಿ ಬಲಗೈಯನ್ನು ಎತ್ತಿ ಹಿಡಿದಿದ್ದಾಳೆ. ಮೇಲಿನ ಮೂರನೇ ಕಿರು ಹಂತದಲ್ಲಿ ದಂಪತಿಗಳು ಯತಿ ಪೂಜಿಸುವ ಶಿವಲಿಂಗದ ಕಡೆ ಮುಖಮಾಡಿ ನಿಂತಿರುವರು. ಎಡಕ್ಕೆ ನಿಂತ ನಂದಿಯಿದೆ. ಕಾಲ ಸುಮಾರು ಕ್ರಿ.ಶ. ೧೭ನೇ ಶತಮಾನ (ಚಿತ್ರ-೨೩) ಈ ಎಲ್ಲಾ ಶಿಲ್ಪಗಳಿಗೆ ಬಳಸಿದ ಶಿಲೆ ಡಾಲರೈಟ್ /ಕ್ಲೋರೆಟ್‌ಸಿಸ್ಟ್ ಕೆಲವು ಗ್ರಾನೈಟ್‌ದ್ದಾಗಿವೆ.

ಒಟ್ಟಾರೆ ಈ ಅಧ್ಯಯನದಿಂದ ಕೇವಲ ಬಳ್ಳಿಗಾವಿ ಮತ್ತು ಶಿವಮೊಗ್ಗದ ವಸ್ತು ಸಂಗ್ರಹಾಲಯದಲ್ಲಿರುವ ಈ ಕಾಲದ ಸತಿಶಿಲ್ಪಗಳ ವೈವಿಧ್ಯಮಯ ಕಲಾತ್ಮಕ ಅಂಶಗಳು

ತಿಳಿಯಬರುತ್ತವೆ. ಈ ರೀತಿಯ ವ್ಯವಸ್ಥಿತ ಅಧ್ಯಯನ ಕ್ರಮವಾಗಿ ಮುಂದುವರೆದರೆ, ಕರ್ನಾಟಕದ ಸತಿಕಲ್ಲುಗಳ ಸಮಗ್ರ ಕಲಾತ್ಮಕ ಇತಿಹಾಸ ಪುನರ್ರಚಿಸಲು ನೆರವಾಗುವುದು.

ಮಹಾಸತಿ ಶಿಲ್ಪಗಳು



ಚಿತ್ರ ೧




ಚಿತ್ರ ೨



ಚಿತ್ರ ೩



ಚಿತ್ರ ೪




ಚಿತ್ರ ೫



ಚಿತ್ರ ೬



ಚಿತ್ರ ೭



ಚಿತ್ರ ೮



ಚಿತ್ರ ೯



ಚಿತ್ರ ೧೦



ಚಿತ್ರ ೧೧



ಚಿತ್ರ ೧೨



ಚಿತ್ರ ೧೩



ಚಿತ್ರ ೧೪



ಚಿತ್ರ ೧೫



ಚಿತ್ರ ೧೬



ಚಿತ್ರ ೧೭



ಚಿತ್ರ ೧೮



ಚಿತ್ರ ೧೯



ಚಿತ್ರ ೨೦



ಚಿತ್ರ ೨೧



ಚಿತ್ರ ೨೨



ಚಿತ್ರ ೨೩



ಚಿತ್ರ ೨೪

ಅಡಿಟಿಪ್ಪಣಿಗಳು

೧. ಎಂ.ಎ.ಆರ್. (ಮೈಸೂರು ಆರ್ಕ್ಯಾಲಾಜಿಕಲ್ ರಿಪೋರ್ಟ್ಸ್)

೨. ಶೇಠೆ, "ಕರ್ನಾಟಕದ ಮಾಸ್ತಿ ಪದ್ಧತಿ", ಬೆಳಗಾಂ

೩. ಭಟ್‌ಸೂಗಿ ಕೆ.ಜಿ, "ಕೆಟಲಾಗ್ ಆಫ್ ಶಿವಮೊಗ್ಗ ಮ್ಯೂಜಿಯಂ ಎಂಟಿಕ್ವಿಟೀಸ್", ಮೈಸೂರು

೪. ಎಂ.ಎಂ.ಕಲಬುರ್ಗಿ, ೧೯೮೦, "ಸಮಾಧಿ ಬಲಿದಾನ ವೀರಮರಣ ಸ್ಮಾರಕಗಳು", ಗದಗ

೫. ಎಂ.ಚಿದಾನಂದಮೂರ್ತಿ, ೧೯೮೪, 'ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು", ಬೆಂಗಳೂರು

೬. ಬಸವರಾಜ ಕಲ್ಗುಡಿ, ೧೯೮೫, "ಮಹಾಸತಿ ಆಚರಣೆ ಒಂದು ಅಧ್ಯಯನ", ಬೆಂಗಳೂರು

೭. ಡಿ.ವಿ.ಪರಮಶಿವಮೂರ್ತಿ, ೧೯೯೯, "ಕನ್ನಡ ಶಾಸನ ಶಿಲ್ಪ", ಹಂಪಿ

ಕೃತಜ್ಞತೆಗಳು

೧. ಸ್ಮಾರಕಶಿಲ್ಪಗಳ ಅಧ್ಯಯನಕ್ಕೆ ಹಣಕಾಸು ನೆರವು ನೀಡಿದ ICHR ಅಧ್ಯಕ್ಷರಿಗೆ

೨. ವಸ್ತುಸಂಗ್ರಹಾಲಯಗಳ ಸ್ಮಾರಕ ಶಿಲ್ಪಗಳನ್ನು ಅಭ್ಯಾಸ ಮಾಡಲು ಪರವಾನಗಿ ನೀಡಿದ ರಾಜ್ಯ ಸರಕಾರದ ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳ ನಿರ್ದೇಶನಾಲಯದ ನಿರ್ದೇಶಕರಿಗೆ ಹಾಗೂ ಸಹಕಾರ ನೀಡಿದ ಅಪರ ನಿರ್ದೇಶಕರಾದ ಡಾ. ಆರ್.ಗೋಪಾಲ್ ಅವರಿಗೂ

೩. ವಸ್ತುಸಂಗ್ರಹಾಲಯಗಳ ಸ್ಮಾರಕ ಶಿಲ್ಪಗಳನ್ನು ಅಧ್ಯಯನ ಮಾಡಲು ಪರವಾನಗಿ ನೀಡಿದ ಭಾರತೀಯ ಪುರಾತತ್ವ ಇಲಾಖೆಯ ಬೆಂಗಳೂರು ವಲಯದ ಸೂಪರಿಂಟೆಂಡಿಂಗ್ ಆರ್ಕಿಯಾಲಜಿಸ್ಟ್ ಹಾಗೂ ಕೆಲವು ಛಾಯಾಚಿತ್ರಗಳನ್ನು ಒದಗಿಸಿದ ಗುರುಗಳಾದ ಅ.ಸುಂದರ್ ಅವರಿಗೂ ಕೃತಜ್ಞತೆಗಳು.

❖ ❖

೨೫

ದಶಕದಲ್ಲಿ ವಿಜಯನಗರ ಕನ್ನಡ ಶಾಸನ ಸಂಪಾದನೆ (೧೯೯೨-೨೦೦೧)

ಡಾ. ಕೆ.ಜಿ.ಭಟ್‌ಸೂರಿ

ಇತಿಹಾಸ ರಚನೆಗೆ ಶಾಸನಗಳು ಪ್ರಮುಖ ಆಕರ. ೧೮೮೬ ರಿಂದ ೧೯೦೬ರವರೆಗೆ ಪ್ರಕಟಣೆಗೊಂಡ ಬಿ.ಎಲ್.ರೈಸ್ ರವರ ಎಪಿಗ್ರಫಿಯ ಕರ್ನಾಟಕದ ೧೨ ಶಾಸನ ಸಂಪುಟಗಳು ಕೇವಲ ದಕ್ಷಿಣ ಕರ್ನಾಟಕಕ್ಕೆ ಸೀಮಿತವಾಗಿವೆ. ಅನಂತರದ ಐದು ದಶಕಗಳಲ್ಲಿ ಸುಮಾರು ೫ ಸಾವಿರದಿಂದ ೬ ಸಾವಿರದ ಶಾಸನಗಳು ಮೈಸೂರು ಪುರಾತತ್ವ ವಾರ್ಷಿಕ ವರದಿಯಲ್ಲಿ ಮತ್ತು ಅನುಬಂಧ ಸಂಪುಟಗಳಲ್ಲಿ ಪ್ರಕಟಗೊಂಡವು ಪ್ರಸ್ತುತ ಅಧ್ಯಯನ ದಶಕದಲ್ಲಿ (೧೯೯೨-೨೦೦೧) ವಿಜಯನಗರ ಕಾಲಕ್ಕೆ ಸೀಮಿತವಾಗಿದ್ದರಿಂದ ಈವರೆಗೆ ಆದ ಶಾಸನ ಸಂಪಾದನೆಯ ಸ್ಥೂಲ ಚಿತ್ರಣವನ್ನು ಇಲ್ಲಿ ಮಾಡಲಾಗಿದೆ. ದಶಕದಲ್ಲಿ ನಡೆದ ಶಾಸನ ಸಂಪಾದನೆಯನ್ನು ಅಧ್ಯಯನದ ಹಿತದೃಷ್ಟಿಯಿಂದ ಮೂರು ವಿಧದಲ್ಲಿ ವಿಂಗಡಿಸಲಾಗಿದೆ. ೧. ಕರ್ನಾಟಕದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಪ್ರಕಟಣೆಗಳು ೨. ಕೇಂದ್ರ ಪುರಾತತ್ವ ಇಲಾಖೆಯ ಶಾಸನ ವಿಭಾಗದ ವಾರ್ಷಿಕ ವರದಿಗಳು ೩. ವಿಶ್ವವಿದ್ಯಾಲಯದ ಪ್ರಕಟಣೆಗಳು.

ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಯಲದ ನಿರ್ದೇಶನಾಲಯ ೧೯೮೫ರಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣಕ್ಕೆ ಸಂಬಂಧಿಸಿದಂತೆ ೩ ಸಂಪುಟಗಳು ಹೊರಬಂದವು. ೧೯೯೬ರಲ್ಲಿ ಶಾಸನಶಾಸ್ತ್ರ ನಾಣ್ಯಶಾಸ್ತ್ರ ಮತ್ತು ಸಂಸ್ಕೃತಿಗೆ ಸಂಬಂಧಿಸಿದ

ಲೇಖನಗಳು ಸಂಪುಟ-III, ಡಿ.ವಿ.ದೇವರಾಜ ಮತ್ತು ಚನ್ನಬಸಪ್ಪ ಎಸ್.ಪಾಟೀಲ್ ರವರ ಸಂಪಾದಕತ್ವದಲ್ಲಿ ಹೊರತರಲಾಯಿತು. ಈ ಸಂಪುಟ ವಿಜಯನಗರ ಶಾಸನಗಳ ಆಕರಗಳನ್ನು ಒಳಗೊಂಡು ಹಲವಾರು ಲೇಖನಗಳನ್ನು ಒಳಗೊಂಡಿವೆ. ಕರ್ನಾಟಕ ಪ್ರಾಚ್ಯವಸ್ತು ಇಲಾಖೆ ೧೯೮೫ ರಿಂದಲೂ ಬಿ.ಆರ್.ಗೋಪಾಲರವರ ಸಂಪಾದಕತ್ವದಲ್ಲಿ ಟೋಪೋಗ್ರಫಿಕಲ್ ಲೀಸ್ಟ್ ಆಫ್ ವಿಜಯನಗರ ಸಂಪುಟಗಳನ್ನು ಹೊರತಂದು ಕರ್ನಾಟಕ ಪ್ರಾಚ್ಯವಸ್ತು ಇಲಾಖೆ ತನ್ನ ಗರಿಮೆಯನ್ನು ಹೆಚ್ಚಿಸಿಕೊಂಡಿತು. ೧೯೯೬ರಲ್ಲಿ ಪ್ರಕಟವಾದ ನಾಲ್ಕನೇ ಸಂಪುಟ ಆಂಧ್ರಪದೇಶಕ್ಕೆ ಸೇರಿದ್ದು. ಆಂಧ್ರಪ್ರದೇಶಕ್ಕೆ ಸೇರಿದರೂ ವಿಜಯನಗರ ಶಾಸನಗಳನ್ನೊಳಗೊಂಡು ಕನ್ನಡ ಶಾಸನಗಳನ್ನು ಇದು ಒಳಗೊಂಡಿದೆ. ಈ ಶಾಸನಗಳು ಹಲವು ನಿಯತಕಾಲಿಕೆಗಳಲ್ಲಿ ಪ್ರಕಟವಾದರೂ ಕೂಡ ಎಲ್ಲಾ ಶಾಸನಗಳನ್ನು ಒಂದೆಡೆ ಸೇರಿಸುವ ದೃಷ್ಠಿಯಿಂದ ಇದು ಮಹತ್ವದ್ದಾಗಿದೆ. ಇಲ್ಲಿನ ಶಾಸನಗಳು ವಿಜಯನಗರ ಒಂದನೆ ಹರಿಹರ, ಬುಕ್ಕ, ಇಮ್ಮಡಿ ಹರಿಹರ, ಪ್ರೌಢದೇವರಾಯ, ಸಾಳ್ವ ನರಸಿಂಹ, ತುಳುವಂಶದ ಕೃಷ್ಣದೇವರಾಯ, ಅಚ್ಯುತ ದೇವರಾಯ, ಶ್ರೀರಂಗ, ರಾಮರಾಜ ಹಾಗೂ ವೆಂಕಟಪತಿಯವರ ಕಾಲಕ್ಕೆ ಸೇರಿದೆ. ಪ್ರಸ್ತಾವನೆ ಈ ಸಂಪುಟದಲ್ಲಿ ವಿವರವಾಗಿದ್ದು, ಪೀಠಿಕಾಭಾಗದಲ್ಲಿ ಶಾಸನಗಳ ಮಹತ್ವವನ್ನು ಹೇಳಲಾಗಿದೆ. ಶಾಸನಗಳ ಸ್ಥಳ, ಭಾಷೆ ಮತ್ತು ಸಾರಾಂಶಗಳ ವಿವರಣೆ ನೀಡಲಾಗಿದೆ.

ಈ ನಿಟ್ಟಿನಲ್ಲಿ ೧೯೯೫-೯೬ರಲ್ಲಿ ಚನ್ನಬಸಪ್ಪ, ಎಸ್.ಪಾಟೀಲ್ ಮತ್ತು ವಿನೋದ ಪಾಟೇಲ್ ರವರ ಸಂಪಾದಕತ್ವದಲ್ಲಿ ವಿಜಯನಗರದ ಶಾಸನಗಳ (ವಿಜಯನಗರದ ಹಂಪೆಯ ಶಾಸನಗಳು) ಕುರಿತಂತೆ ಮೊದಲು ಆಂಗ್ಲಭಾಷೆಯಲ್ಲಿ ನಂತರ ಕನ್ನಡದಲ್ಲಿ ಪ್ರಟಕಣೆಗಳು ಹೊರಬಂದವು. ಈ ಶಾಸನ ಸಂಪುಟ ಒಟ್ಟು ೪೭೧ ಶಾಸನಗಳನ್ನು ಒಳಗೊಂಡಿದ್ದು ಈ ಸಂಪುಟದ ಪೀಠಿಕಾ ಭಾಗದಲ್ಲಿ ರಾಜಕೀಯ ಚರಿತ್ರೆ, ಧಾರ್ಮಿಕ, ಆರ್ಥಿಕ ಸ್ಥಿತಿಗತಿಗಳನ್ನು ರಕ್ಷಣಾ ವ್ಯವಸ್ಥೆ ಕುರಿತು ಶಾಸನಗಳ ಆಕರಗಳನ್ನು ಇಲ್ಲಿ ಒತ್ತಿ ಹೇಳಲಾಗಿದೆ. ಹಂಪೆಯಲ್ಲಿ ದೊರೆತ ವಿಜಯನಗರದ ಶಾಸನಗಳ ಜೊತೆಗೆ ಪೂರ್ವ ವಿಜಯನಗರದ ಶಾಸನಗಳನ್ನು ಇಲ್ಲಿ ದಾಖಲಿಸಲಾಗಿದೆ. ಶಾಸನ ಇರುವ ಸ್ಥಳ, ವಂಶ ಅರಸನ ಹೆಸರು, ಶಾಸನದ ಕಾಲ, ಭಾಷೆ, ಲಿಪಿ ಮತ್ತು ಶಾಸನ ಸಾರಾಂಶವನ್ನು ಈ ಸಂಪುಟದಲ್ಲಿ ಅಳವಡಿಸಲಾಗಿದೆ. ೧೯೯೭ರಲ್ಲಿ ಬಳ್ಳಾರಿ ಜಿಲ್ಲಾ ಶಾಸನ ಸಂಪುಟ-II ಚನ್ನಬಸಪ್ಪ ಎಸ್.ಪಾಟೀಲ್ ಮತ್ತು ವಿನೋದ ಪಾಟೀಲ್ ರವರ ಸಂಪಾದಕತ್ವದಲ್ಲಿ ಹೊರಬಂದಿತು. ಈ ಶಾಸನ ಸಂಪುಟದಲ್ಲಿ ಇರುವ ವಿಜಯನಗರದ ಶಾಸನಗಳು ಬುಕ್ಕ, ಮೊದಲನೇ ದೇವರಾಯ ಅಚ್ಯುತರಾಯ, ಸದಾಶಿವರಾಯ, ಶ್ರೀರಂಗ, ರಾಮರಾಜಯ್ಯ, ತಿರುಮಲರಾಜಯ್ಯ, ವೆಂಕಟಪತಿರಾಯರ ಕಾಲಕ್ಕೆ ಸೇರಿದೆ. ೧೯೯೭ರಲ್ಲಿ ಇದೇ ನಿರ್ದೇಶನಾಲಯದಿಂದ ಬಿ.ಆರ್.ಗೋಪಾಲ್ ರವರ ಮುಖ್ಯ ಸಂಪಾದಕತ್ವ ಮತ್ತು ಶ್ರೀನಿವಾಸ ಹಾವನೂರ್ ಮತ್ತು ಎಚ್.ಎಸ್. ಗೋಪಾಲರಾವ್ ಅವರ ಸಂಪಾದಕತ್ವದಲ್ಲಿ ಎಫಿಗ್ರಫಿಕಲ್ ಸ್ಟಡೀಸ್ ಎಂಬ ಪುಸ್ತಕ

ಪ್ರಕಟಣೆಯಾಯಿತು. ಈ ಗ್ರಂಥ ಶ್ರೀ ಎನ್.ಎಲ್.ಲಕ್ಷ್ಮೀ ನಾರಾಯಣರಾವ್‌ರವರ ಸಂಶೋಧನಾ ಲೇಖನಗಳ ಸಂಗ್ರಹಗಳನ್ನು ಒಳಗೊಂಡಿದೆ. ಇದು ನೇರವಾಗಿ ವಿಜಯನಗರ ಶಾಸನಗಳನ್ನು ಒಳಗೊಳ್ಳದಿದ್ದರೂ ವಿಜಯನಗರ ಶಾಸನಗಳ ಉಲ್ಲೇಖಗಳನ್ನು ಒಳಗೊಂಡಿದೆ. ಇದೇ ವರ್ಷದಲ್ಲಿ ಎಮ್.ಎಸ್.ನಾಗರಾಜರಾವ್ ಮತ್ತು ಕೆ.ವಿ.ರಮೇಶ್ ರವರ ನಾಯಕತ್ವದಲ್ಲಿ. "Copper plate Inscriptions from Karnataka" ಎಂಬ ಪ್ರಕಟಣೆ ಹೊರಬಂದಿತು. ಈ ಪ್ರಕಟಣೆ ಆನೆಗೊಂದಿಯಲ್ಲಿನ ತಾಮ್ರಶಾಸನ, ವಿಜಯನಗರೋತ್ತರ ಶಾಸನಗಳನ್ನು ಒಳಗೊಂಡಿದೆ. ೨೦೦೦ರಲ್ಲಿ ಕರ್ನಾಟಕ ಪ್ರಾಚ್ಯವಸ್ತು ಸಂಗ್ರಹಾಯಲ ನಿರ್ದೇಶನಲಯದ ಇನ್ನೊಂದು ಮಹತ್ವದ ಪ್ರಕಟಣೆ ಪ್ರಾಚೀನ ಕರ್ನಾಟಕ ಆಡಳಿತ ಪರಿಭಾಷಾಕೋಶ ಇದರ ಸಂಪಾದಕರು ಶ್ರೀನಿವಾಸರಿತ್ತಿ ಸಹಸಂಪಾದಕರು, ಹುಚ್ಚುರಾವ್ ಬೆಂಗೇರಿ ಸದಾನಂದ ನಾಯಕ್, ಎಸ್.ಎಲ್.ಶಾಂತಕುಮಾರಿ ಈ ಪ್ರಕಟಣೆ ಪ್ರಾಚೀನ ಆಡಳಿತಕ್ಕೆ ಸಂಬಂಧಿಸಿದ ತಾಂತ್ರಿಕ ಶಬ್ದಗಳ ಕೋಶಗಳನ್ನು ಒಳಗೊಂಡಿದೆ. ಆಡಳಿತ ಪದ್ಧತಿ ಆರ್ಥಿಕ ಜೀವನಕ್ಕೆ ಸಂಬಂಧಿಸಿದ ಪದಕೋಶ ಇದಾಗಿದೆ. ಪ್ರಾಚೀನ ಕಾಲದಿಂದ ವಿಜಯನಗರದ ವರೆಗಿನ ಶಾಸನಗಳನ್ನು ಆಧರಿಸಿ ಈ ಆಡಳಿತ ಪರಿಭಾಷಾಕೋಶವನ್ನು ರಚಿಸಲಾಗಿದೆ. ೧೯೯೮ರಲ್ಲಿ ಕರ್ನಾಟಕ ಶಾಸನ ಸಂಪುಟ-೩ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ್ದು, ಚನ್ನಬಸಪ್ಪ, ಎಸ್.ಪಾಟೀಲ್ ಮತ್ತು ವಿನೋದ ಪಾಟೀಲರವರ ಸಂಪಾದಕತ್ವದಲ್ಲಿ ಪ್ರಕಟಣೆಯಾಯಿತು. ಈ ಸಂಪುಟ ವಿಜಯನಗರ ಶಾಸನದ ಜೊತೆಗೆ ಉಳಿದ ಶಾಸನಗಳನ್ನು ಒಳಗೊಂಡಿದೆ. ಈ ಶಾಸನ ಸಂಪುಟ ಗಂಗಾವತಿ, ಕೊಪ್ಪಳ, ಕುಷ್ಟಗಿ, ಸಿಂಧನೂರು ತಾಲೂಕುಗಳ ಶಾಸನಗಳನ್ನು ಒಳಗೊಂಡಿದೆ. ಪೀಠಿಕೆಯಲ್ಲಿ ರಾಜಕೀಯ ಭೌಗೋಳಿಕ ಭಾಗಗಳು ಆರ್ಥಿಕ, ಸಾಮಾಜಿಕ ಮತ್ತು ಧಾರ್ಮಿಕ ಸ್ಥಿತಿಯನ್ನು ಅಳವಡಿಸಿದೆ. ವಿಜಯನಗರದ ಶಾಸನಗಳೂ ಈ ಸಂಪುಟದಲ್ಲಿ ಒಳಗೊಂಡಿವೆ. ೧೯೭೪ ರಿಂದ ೧೯೯೧-೯೨ರವರೆಗೂ ಕರ್ನಾಟಕ ಪುರಾತತ್ವ ನಿರ್ದೇಶನಾಯಲಯದ ವಾರ್ಷಿಕ ವರದಿಗಳಲ್ಲೂ ಹೊಸತು ಹೊಸತು ಸಂಶೋಧನೆಗಳೊಂದಿಗೆ ಹೆಚ್ಚಿನ ಮಟ್ಟಿಗೆ ವಿಜಯನಗರದ ಹೊಸ ಹೊಸ ಶಾಸನಗಳ ಶೋಧಗಳನ್ನು ಅಳವಡಿಸಲಾಗಿದೆ. ವಿಜಯನಗರ ಅಧ್ಯಯನ ಸಂಪುಟಗಳು ಕರ್ನಾಟಕ ಪುರಾತತ್ವ ನಿರ್ದೇಶನಾಲಯದ ಇನ್ನೊಂದು ಮಹತ್ವಪೂರ್ಣ ಕೊಡುಗೆ. ೧೯೯೬ರಲ್ಲಿ ಸಂಪುಟ-Iನ್ನು ಡಿ.ವಿ.ದೇವರಾಜ್ ಮತ್ತು ಚನ್ನಬಸಪ್ಪ ಪಾಟೀಲ್ ರವರ ಸಂಪಾದಕತ್ವದಲ್ಲಿ ಹೊರತರಲಾಯಿತು. ಈ ಸಂಪುಟದಲ್ಲಿ ವಿಜಯನಗರದ ಶ್ರೀರಂಗನ ಅಪ್ರಕಟಿತ ಶಾಸನ ಬಾದಾಮಿ ಪರಿಸರದ ವಿಜಯನಗರದ ಶಾಸನಗಳಲ್ಲಿ ವಿಜಯನಗರ ಪಟ್ಟಣದ ನೀರಿನ ವ್ಯವಸ್ಥೆ, ವಿಜಯನಗರದ ಶಾಸನಗಳಲ್ಲಿ ಮಹಿಳೆ ಇವು ಮಹತ್ವದ ಸಂಶೋಧನಾ ಲೇಖನಗಳಾಗಿವೆ. ಸಂಪುಟ-೨, ಎಂ.ಎಲ್.ಶಿವಶಂಕರ್ ಮತ್ತು ಚನ್ನಬಸಪ್ಪ ಎಸ್.ಪಾಟೀಲ್‌ರವರ ಸಂಪಾದಕತ್ವದಲ್ಲಿ ೧೯೯೭ರಲ್ಲಿ ಪ್ರಕಟವಾಯಿತು. ಚಾಲುಕ್ಯರ ಶಾಸನಗಳು ಮತ್ತು ಹಂಪಿ, ಆನೆಗೊಂದಿಯ ತಾಮ್ರಪಟ ಶಾಸನ ಮರುನೋಟ,

ಲೇಖನಗಳನ್ನು ಅಳವಡಿಸಲಾಗಿದೆ. ಸಂಪುಟ-೩, ೧೯೯೮ರಲ್ಲಿ ಎಂ.ಎಲ್.ಶಿವಶಂಕರ್ ಮತ್ತು ಚನ್ನಬಸಪ್ಪ ಪಾಟೀಲ್ ರವರ ಸಂಪಾದಕತ್ವದಲ್ಲಿ ಪ್ರಕಟಣೆಯಾಯಿತು. ವಿಜಯನಗರ ಕಾಲದ ಕರ್ನಾಟಕದ ಕರಾವಳಿ ಶಾಸನಗಳು, ಹಂಪಿಯ ರತ್ನಕೂಟದಲ್ಲಿ ಪರ್ವತದಲ್ಲಿನ ಶಾಸನಗಳನ್ನು ಒಳಗೊಂಡಿದೆ. ೧೯೯೯ರಲ್ಲಿ ಪ್ರಕಟವಾದ ವಿಜಯನಗರ ಸಂಪುಟ-೪ ಇದರ ಸಂಪಾದಕರು ಎಂ.ವಿ.ಕೃಷ್ಣಪ್ಪ ಮತ್ತು ಚನ್ನಬಸಪ್ಪ ಪಾಟೀಲ್ ಇಮ್ಮಡಿ ಹರಿಹರನ ಶಾಸನ, ವಿಜಯನಗರಕಾಲದ ಶಿಲಾಶಾಸನ ಶೋಧ, ಬಾರಕೂರು ಶಾಸನ ಒಂದು ಅಧ್ಯಯನ, ವಿಜಯನಗರ ಬೊಕ್ಕಸದ ಚಿನ್ನಭಂಡಾರದ, ನಾರಾಯಪ್ಪನವರ ವಂಶಿಗರ ಅಪ್ರಕಟಿತ ಶಾಸನ ಲೇಖನಗಳು ಈ ಸಂಪುಟದಲ್ಲಿದೆ.

ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆಯ ಪ್ರಕಟಣೆಗಳು

ಕೇಂದ್ರ ಪುರಾತತ್ವ ಸರ್ವೇಕ್ಷಣಾ ಇಲಾಖೆ ಪ್ರತಿವರ್ಷ ವಾರ್ಷಿಕ ವರದಿಯನ್ನು ತರುತ್ತಲಿದೆ. ೧೯೯೨-೯೩ರ ಭಾರತೀಯ ಶಾಸನ ಶಾಸ್ತ್ರದ ಇಲಾಖೆಯ ವಾರ್ಷಿಕ ವರದಿ ೧೯೯೮ರಲ್ಲಿ ಮಾಧವ ಎನ್.ಕಟ್ಟಿಯವರ ಸಂಪಾದಕತ್ವದಲ್ಲಿ ಹೊರಬಂದಿತು. ಇದು ದೇಶದ ಎಲ್ಲಾ ರಾಜ್ಯಗಳ ಶಾಸನ ಸಂಗ್ರಹಗಳ ವರದಿಯಾದರೂ ಕರ್ನಾಟಕ ರಾಜ್ಯಕ್ಕೆ ಸಂಬಂಧಿಸಿದಂತೆ ಬೆಳಗಾಂ ಬಿಜಾಪುರ, ಗುಲ್ಬರ್ಗಾ, ಹಾಸನ, ಮೈಸೂರು ಹಾಗೂ ತುಮಕೂರು ಜಿಲ್ಲಾ ಶಾಸನಗಳನ್ನು ಒಳಗೊಂಡಿದೆ. ಆದಿ ವಿಜಯನಗರ ಕಾಲದ ಶಾಸನಗಳೂ ಈ ಸಂಪುಟದಲ್ಲಿ ಅಡಕವಾಗಿದೆ.

ವಿಶ್ವವಿದ್ಯಾಲಯದ ಪ್ರಕಟಣೆಗಳು

ಎಪಿಗ್ರಫಿಯ ಕರ್ನಾಟಕ ಕಳೆದ ಅನೇಕ ದಶಮಾನಗಳಿಂದ ಲಭ್ಯವಾಗುತ್ತಿರಲಿಲ್ಲ. ಸಂಶೋಧಕರಿಗೆ ವಿದ್ಯಾರ್ಥಿಗಳಿಗೆ ಇದೊಂದು ಆಕರ ಗ್ರಂಥ. ಈ ದಿಸೆಯಲ್ಲಿ ಕರ್ನಾಟಕ ಸರ್ಕಾರ ೧೯೭೨ರಲ್ಲಿ ಎಪಿಗ್ರಫಿಯ ಕರ್ನಾಟಕದ ಪರಿಷ್ಕರಣದ ಜವಾಬ್ದಾರಿಯನ್ನು ಮೈಸೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಸಂಸ್ಥೆಗೆ ವಹಿಸಿಕೊಟ್ಟಿತು. ಅಂದಿನಿಂದ ಇಂದಿನವರೆಗೆ ಒಟ್ಟು ೧೧ ಸಂಪುಟಗಳು ಹೊರಬಂದಿವೆ. ೧೯೭೧ ರಿಂದ ೨೦೦೨ರವರೆಗೆ ಸಂಪುಟಗಳು ಹೊರಬಂದವು. ೧೨ನೇ ಸಂಪುಟದ ಕಾರ್ಯ ನಡೆಯುತ್ತಲಿದೆ. ಎಪಿಗ್ರಫಿಯ ಕರ್ನಾಟಕದ ೧೦ನೇ ಸಂಪುಟ ೧೯೭೭ರಲ್ಲಿ ಡಾ. ಎ.ವಿ.ನರಸಿಂಹಮೂರ್ತಿಯವರ ಸಂಪಾದಕತ್ವದಲ್ಲಿ ಹೊರಬಂದಿತು. (ಶಾಸನ ಸಹಾಯಕರು ಎನ್.ಎಸ್.ಜಹಗೀರ್‌ದಾರ್ ೨೨.೭.೯೩ರವರೆಗೆ, ಎಚ್.ಎಂ.ನಾಗರಾಜರಾವ್, ಕೆ.ಮಹಮ್ಮದ್ ಷರೀಫ್ ಕೃಷ್ಣವೇಣಿ) ಈ ಶಾಸನ ಸಂಪುಟ ಶಾಸನ ಜಿಲ್ಲೆಗೆ ಸಂಬಂಧಿಸಿದೆ. ಹೆಚ್ಚಿನ ಶಾಸನಗಳು ಹೊಯ್ಸಳರ ಕಾಲಕ್ಕೆ ಸೇರಿದ್ದರೂ ವಿಯನಗರದ ಶಾಸನಗಳು ಈ ಶಾಸನ ಸಂಪುಟದಲ್ಲಿ ಅಡಕವಾಗಿವೆ. ಈ ಸಂಪುಟ ವಿವರವಾದ ಪೀಠಿಕೆ ಮತ್ತು ಪದಸೂಚಿಯನ್ನು ಒಳಗೊಂಡಿದೆ. ತೂಕ, ಅಳತೆ ತೆರಿಗೆಗಳ ಆಡಳಿತ ವಿಭಾಗಗಳ ಇಂತಹ ಮಾಹಿತಿಗಳನ್ನು ಇಲ್ಲಿ ಅಳವಡಿಸಲಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪಾದಿತ ಪ್ರಕಟಣೆಗಳು

ದಕ್ಷಿಣ ಕರ್ನಾಟಕದಲ್ಲಿ ಬಿ.ಎಲ್.ರೈಸ್‌ರವರ ಎಫಿಗ್ರಫಿಯಾ ಕರ್ನಾಟಕ ಪ್ರಕಟಣೆಯಾದಂತೆ, ಉತ್ತರ ಕರ್ನಾಟಕದಲ್ಲಿ ವಿವರವಾದ ಅಧ್ಯಯನ ನಡೆದಿಲ್ಲ. ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದಂತೆ ಹಲವಾರು ಸಂಶೋಧನಾ ಲೇಖನಗಳು, ಹಲವಾರು ಶಾಸನಗಳು, ಹಲವಾರು ನಿಯತಕಾಲಿಕೆಗಳಲ್ಲಿ ಪ್ರಕಟವಾಗಿದ್ದರೂ ಇನ್ನೂ ಕೆಲವು ಪ್ರದೇಶಗಳು ಅನ್ವೇಷಣೆಯಾಗದೇ ಉಳಿದಿವೆ. ಇದನ್ನು ಮನಗಂಡು ಉತ್ತರ ಕರ್ನಾಟಕದ ಎಲ್ಲಾ ಜಿಲ್ಲೆಗಳ ಶಾಸನಗಳ ಅನ್ವೇಷಣೆ ಹಾಗೂ ಹೊರನಾಡಿನ ಕನ್ನಡ ಶಾಸನಗಳ ಪ್ರಕಟಣಾ ಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗ ಯೋಜನೆಯನ್ನು ಹಮ್ಮಿಕೊಂಡಿರುವುದು ಸ್ತುತ್ಯಾರ್ಹ. ಈ ದಿಸೆಯಲ್ಲಿ ಕನ್ನಡ ವಿಶ್ವವಿದ್ಯಾಲಯದ ಶಾಸನ ಶಾಸ್ತ್ರ ವಿಭಾಗದಿಂದ ಪ್ರಥಮವಾಗಿ ಬಂದ ಶಾಸನ ಸಂಪುಟವೇ ಬಳ್ಳಾರಿ ಜಿಲ್ಲೆಯದು. ಡಾ. ದೇವರಕೊಂಡಾರೆಡ್ಡಿಯವರು ಸಂಪಾದಕರಾಗಿ, ಕೆ.ಜಿ.ಭಟ್‌ಸೂರಿ, ಕಲವೀರ ಮನ್ನಾಚಾರ್, ಡಿ.ವಿ.ಪರಮಶಿವಮೂರ್ತಿರವರು ಸಹ ಸಂಪಾದಕರಾಗಿ ಕೆಲಸ ನಿರ್ವಹಿಸಿದ್ದಾರೆ. ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟ ಎಂಟು ತಾಲೂಕುಗಳ ಶಾಸನವನ್ನೊಳಗೊಂಡಿದ್ದು, ಒಟ್ಟು ೬೩೫ ಶಾಸನಗಳು ಈ ಸಂಪುಟದಲ್ಲಿವೆ. ಕೇಂದ್ರ ಪುರಾತತ್ವ ಇಲಾಖೆಯ ವಾರ್ಷಿಕ ವರದಿಯಲ್ಲಿ ಕೆಲವು ಶಾಸನಗಳು ಪ್ರಕಟವಾಗಿದ್ದರೂ ಕೆಲವೊಂದು ಶಾಸನ ಪಾಠ ಇಲ್ಲಿ ಪ್ರಥಮವಾಗಿ ಪ್ರಕಟಿಸಿದ್ದರಿಂದ ಇವುಗಳನ್ನು ಹೊಸ ಶಾಸನಗಳ ಪಟ್ಟಿಗೆ ಸೇರಿಸಲಾಗಿದೆ. ಈ ಶಾಸನ ಸಂಪುಟದ ಗ್ರಾಮವಾರು ಶಾಸನ ಸೂಚಿ ಪ್ರಸ್ತಾವನೆಯಲ್ಲಿ ರಾಜಕೀಯ, ಸಾಮಾಜಿಕ, ಧಾರ್ಮಿಕ ಸ್ಥಿತಿಗತಿಗಳನ್ನು ಹೇಳಲಾಗಿದೆ. ಶಾಸನದಲ್ಲಿ ಬರುವ ವಂಶಾವಳಿಗಳು, ರಾಜಧಾನಿಗಳು, ಶಾಸನ ಕವಿಗಳ ಮತ್ತು ಕಂಡರಣೆಕಾರರ ಪಟ್ಟಿಯನ್ನು ಕೊಟ್ಟಿರುವುದು ಈ ಸಂಪುಟದ ಇನ್ನೊಂದು ವಿಶೇಷತೆ. ಶಾಸನ ಸಿಕ್ಕ ಸ್ಥಳ ಪ್ರಕಟಣೆಯ ಉಲ್ಲೇಖ ಆಂಗ್ಲ ಮತ್ತು ಕನ್ನಡ ಭಾಷೆಯಲ್ಲಿ ಸಾರಾಂಶ ಮತ್ತು ಶಾಸನ ಪಾಠವನ್ನು ಅಳವಡಿಸಲಾಗಿದೆ. ಅನುಬಂಧದಲ್ಲಿ ಇಡಲ್ಪಟ್ಟ ಕೆಲವು ಶಾಸನಗಳು ಪುಸ್ತಕ ಪ್ರಕಟಣೆಯ ಕಾಲದಲ್ಲಿ ಹೊಸದಾಗಿ ದೊರೆತಂತಹ ಶಾಸನಗಳಾಗಿವೆ. ಪದಸೂಚಿ ಹಾಗೂ ಸಂಪುಟದ ಕೊನೆಯ ಭಾಗದಲ್ಲಿದ್ದ ಶಾಸನದ ಛಾಯಚಿತ್ರಗಳು ಈ ಸಂಪುಟದ ಮೆರಗನ್ನು ಹೆಚ್ಚಿಸಿವೆ. ಈ ಶಾಸನ ಸಂಪುಟ ಬಳ್ಳಾರಿ ಜಿಲ್ಲೆಯಲ್ಲಿ ದೊರೆತ ಎಲ್ಲಾ ಶಾಸನಗಳನ್ನು ಒಳಗೊಂಡಿದೆ. ವಿಜಯನಗರ ಕಾಲಕ್ಕೆ ಸಂಬಂಧಿಸಿದಂತೆ ಬುಕ್ಕರಾಯ ಕೃಷ್ಣದೇವರಾಯ ಮತ್ತು ಪ್ರತಾಪ ದೇವರಾಯನ ಕಾಲಕ್ಕೆ ಸೇರಿದ ಹೆಚ್ಚಿನ ಶಾಸನಗಳು ಇಲ್ಲಿವೆ. ಅರವೀಡು ವಂಶದ ಶಾಸನಗಳು ಇಲ್ಲಿ ಕಡಿಮೆ ಕಾಣಬರುತ್ತದೆ.

ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದಂತೆ ಇಲ್ಲಿ ಮೇಲೆ ಹೇಳಿದ ಸಂಪಾದಕತ್ವದಲ್ಲೇ ೧೯೯೮ರಲ್ಲಿ ಶಾಸನಸಂಪುಟ-೨ ಹೊರತರಲಾಗಿದೆ. ಕ್ರಿ.ಪೂರ್ವ ಮೂರನೇ ಶತಮಾನದಿಂದಲೇ ಶಾಸನಗಳು ದೊರೆತಿವೆ. ಕೊಪ್ಪಳ ಜಿಲ್ಲೆಯಲ್ಲಿ ೩೭೮ ಶಾಸನಗಳಲ್ಲಿ ಹೊಸತಾಗಿ ದೊರಕಿರುವ

ಶಾಸನಗಳು ೧೭೮. ಅಶೋಕನ ಕಾಲದಿಂದ ವಿಜಯನಗರದ ಕಾಲದವರೆಗೆ ದೊರೆತ ಶಾಸನಗಳು ಈ ಸಂಪುಟದಲ್ಲಿವೆ. ಮೊದಲು ಕೊಪ್ಪಳ, ರಾಯಚೂರು ಜಿಲ್ಲೆಯ ತಾಲೂಕೂ ಕೇಂದ್ರವಾಗಿದ್ದು, ಇಂದು ಕೊಪ್ಪಳ ಜಿಲ್ಲೆಯಾಗಿ ಪರಿವರ್ತನೆಯಾಗಿದೆ. ಕೊಪ್ಪಳ ಜಿಲ್ಲೆ ಒಟ್ಟು ನಾಲ್ಕು ತಾಲೂಕುಗಳನ್ನು ಒಳಗೊಂಡಿದೆ. ಅವು ಕೊಪ್ಪಳ, ಕುಷ್ಟಗಿ, ಗಂಗಾವತಿ ಮತ್ತು ಯಲಬುರ್ಗಾ ತಾಲೂಕುಗಳು ಒಳಗೊಂಡಿವೆ. ಕೊಪ್ಪಳ ಒಂದು ಕಾಲದಲ್ಲಿ ಬೌದ್ಧ ಧರ್ಮದ ನೆಲೆಯೂ ಹೌದು. ಜೈನಧರ್ಮ ಕಾಳಮುಖ ಮತ್ತು ಶೈವಧರ್ಮ, ವೈದಿಕ ಧರ್ಮ, ವೀರಶೈವ ಧರ್ಮ, ದೇವಿ ಉಪಾಸನೆ ಕುರಿತು ಶಾಸನಗಳ ಆಧಾರದಲ್ಲಿ ವಿಸ್ತುತವಾಗಿ ಹೇಳಲ್ಪಟ್ಟಿದೆ. ಜಾತಿ, ವ್ಯಾಪಾರಿ ಸಂಘ, ವಂಶಾವಳಿ, ನೀರಾವರಿ, ಅಳತೆಗಳ ಉಲ್ಲೇಖವನ್ನು ಇಲ್ಲಿ ಮಾಡಲಾಗಿದೆ. ಬಳ್ಳಾರಿ ಜಿಲ್ಲೆಯ ಸಂಪುಟದ ಮಾದರಿಯನ್ನೇ ಇಲ್ಲಿ ಅಳವಡಿಸಲಾಗಿದೆ. ಅನುಬಂಧದಲ್ಲಿ ಈ ಸಂಪುಟ ಮುದ್ರಣಾಲಯದಲ್ಲಿದ್ದಾಗ ಅನ್ವೇಷಣೆ ಮಾಡಿ ಲಭ್ಯವಾದ ಹೊಸ ಶಾಸನಗಳ ಪಾಠವನ್ನು ಸೇರಿಸಲಾಗಿದೆ. ಸಂಪುಟದ ಕೊನೆಯಲ್ಲಿ ಕೊಪ್ಪಳ ಜಿಲ್ಲೆಯ ಮಹತ್ವದ ಶಾಸನಗಳ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ.

ವಿಜಯನಗರದ ಕಾಲಕ್ಕೆ ಸಂಬಂಧಿಸಿದಂತೆ ಮೊದಲನೆ ಬುಕ್ಕ, ಇಮ್ಮಡಿ ಹರಿಹರ, ಮೊದಲನೇ ದೇವರಾಯ, ಇಮ್ಮಡಿ ದೇವರಾಯ, ನರಸನಾಯಕ, ಕೃಷ್ಣದೇವರಾಯ, ಅಚ್ಯುತ ದೇವರಾಯ, ಸದಾಶಿವರಾಯನ ಮತ್ತು ಹಂಡೆಯ ಪಾಳೆಗಾರರ ಕಾಲಕ್ಕೆ ಸೇರಿವೆ. ಪ್ರಸ್ತಾವನೆಯಲ್ಲಿ ವಿಜಯನಗರ ಸಾಮ್ರಾಜ್ಯ ಸ್ಥಾಪನೆ, ವಿದ್ಯಾರಣ್ಯರ ಗುರುಪರಂಪರೆ ಕುರಿತು ಹೇಳಲಾಗಿದೆ. ಶೈವ ವೈಷ್ಣವ ಗಾಣಪತ್ಯ, ವೀರಶೈವ ಜೈನಧರ್ಮಗಳ ಸ್ಥಿತಿಗತಿಗಳನ್ನು ಹೇಳಿ ನೀರಾವರಿ ಅರವಟ್ಟಿಗೆಗಳ ಉಲ್ಲೇಖಗಳನ್ನು ಇಲ್ಲಿ ಮಾಡಲಾಗಿದೆ. ಅನುಬಂಧದಲ್ಲಿ ಬಳ್ಳಾರಿ ಜಿಲ್ಲೆಯ ಶಾಸನ ಸಂಪುಟದಲ್ಲಿ ಸೇರಿಸದ ಕೆಲವು ಶಾಸನಗಳನ್ನು ಈ ಸಂಪುಟದಲ್ಲಿ ಸೇರಿಸಲಾಗಿದೆ. ಅಂದ್ರಾಳು, ನಾಗರಾಳು, ರಾವಿಹಾಳ, ನಂದಿಬಂಡೆ, ಹರಾಳು, ಅಮ್ಮನಕೆರೆ, ಜೋಗ, ಹುಡೇವು, ಗುಡೇಕೋಟೆ, ಮಗಿ ಮಾವಿನಹಳ್ಳಿ, ಅಂಬಳಿ, ಯರಬಳ್ಳಿ ಈ ಗ್ರಾಮಗಳ ಶಾಸನಗಳನ್ನು ಸೇರಿಸಿ ಬಳ್ಳಾರಿ ಜಿಲ್ಲೆಯ ಶಾಸನ ಸಂಪತ್ತನ್ನು ಹೆಚ್ಚಿಸಲಾಗಿದೆ. ದೊರೆತ ಹೆಚ್ಚಿನ ಶಾಸನಗಳು ವಿಜಯನಗರ ಕಾಲಕ್ಕೆ ಸೇರಿದವು.

೨೦೦೧ರಲ್ಲಿ ಮೇಲೆ ಹೇಳಿದ ಸಂಪಾದಕತ್ವದಲ್ಲಿ ೨೦೦೦ನೇ ವರ್ಷದಲ್ಲಿ ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ-೩ (ಹಂಪಿ ಶಾಸನಗಳು) ಹೊರಬಂದಿತ್ತು. ಹಂಪಿ ಬಳ್ಳಾರಿ ಜಿಲ್ಲೆಗೆ ಸಂಬಂಧಿಸಿದರೂ ಬಳ್ಳಾರಿ ಜಿಲ್ಲಾ ಶಾಸನ ಸಂಪುಟದಲ್ಲಿ ಹಂಪಿಯನ್ನು ಹೊರತುಪಡಿಸಿ ಶಾಸನಗಳು ಪ್ರಕಟವಾಗಿವೆ. ಅಲ್ಲದೇ ಹಂಪೆಯ ಪರಿಸರ ವಿಶ್ವಮಾನ್ಯತೆ ಪಡೆದ ಸ್ಥಳ. ಇಲ್ಲಿ ದೊರೆತ ಶಾಸನಗಳೆಲ್ಲವೂ ಹೆಚ್ಚಿನ ಮಟ್ಟಿಗೆ ವಿಜಯನಗರ ಕಾಲಕ್ಕೆ ಸೇರಿವೆ. ಇಲ್ಲಿಯ ಶಾಸನಗಳು ಸೌತ್ ಇಂಡಿಯನ್ ಇನ್‌ಸ್ಕ್ರಿಪ್‌ಷನ್ಸ್ ಇಂಡಿಯನ್ ಆಂಟಿಕ್ವೆರಿ, ಎಫಿಗ್ರಾಫಿಯಾ ಇಂಡಿಕಾ ಮತ್ತು ವಿಜಯನಗರ ಪ್ರೋಗ್ರೆಸ್ ಆಫ್ ರೀಸರ್ಚ್ ಮೊದಲಾದ ಸಂಪುಟಗಳಲ್ಲಿ ಪ್ರಕಟವಾಗಿದ್ದರೂ ಹಂಪಿಯ ಸುತ್ತಮುತ್ತ ಇನ್ನೊಮ್ಮೆ ಸರ್ವೇಕ್ಷಣೆ ಮಾಡಿ ಸಂಪುಟದ ಪ್ರಕಟಣೆ ಮಾಡಲಾಗಿದೆ.

ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗದಿಂದ ೨೦೦೦ರಲ್ಲಿ ಶ್ರೀನಿವಾಸ ರಿತ್ತಿ ಮತ್ತು ಅನಂತ್ ಬಿ. ಕರ್‌ವೀರ್‌ಕರ್‌ರವರ ಸಂಪಾದಕತ್ವದಲ್ಲಿ ಕೊಲ್ಲಾಪುರ ಜಿಲ್ಲೆಯ ಶಾಸನಗಳು (Inscriptions from Kolhapur District) ಪ್ರಕಟವಾಯಿತು. ಶಾಸನ ದೊರೆತ ಸ್ಥಳಗಳು, ಅರಸು ಮನೆತನಗಳು ಮತ್ತು ಅರಸರು, ಪ್ರಸ್ತಾವನೆಯಲ್ಲಿ ಮೊದಲು ಹೇಳಲಾಗಿದೆ. ಪೀಠಿಕೆ ಭಾಗದಲ್ಲಿ ಶಾಸನಗಳ ಮಹತ್ವದ ಅಂಶಗಳ ವಿಮರ್ಶಾತ್ಮಕ ವಿವರಣೆ ಇವೆ. ಅನುಬಂಧದಲ್ಲಿ ಕನ್ನಡ, ನಾಗರಿ ಎಂಬ ಶಾಸನಗಳ ಈ ಸಂಪುಟದ ಹೊರತಾಗಿ ಇರುವ ಶಾಸನ ಪಟ್ಟಿ ಕೊಡಲಾಗಿದೆ. ಕನ್ನಡ ಮತ್ತು ಆಂಗ್ಲ ಭಾಷೆಯ ಪದಸೂಚಿಯೂ ಇಲ್ಲಿದೆ. ನೇರವಾಗಿ ವಿಜಯನಗರದ ಹೆಚ್ಚಿನ ಶಾಸನಗಳನ್ನು ಇದು ಒಳಗೊಳ್ಳದಿದ್ದರೂ ಈ ಶಾಸನ ಪ್ರಕಟಣೆ ಒಂದು ಮಾದರಿಯಾಗಿದೆ.

ಜಿ.ಎನ್.ಉಪಾಧ್ಯ ಮತ್ತು ದೇವರಕೊಂಡಾರೆಡ್ಡಿಯವರ ಸಂಪಾದಕತ್ವದಲ್ಲಿ ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ-೬, ೨೦೦೧ರಲ್ಲಿ ಪ್ರಕಟವಾಯಿತು. ಆಕರಗಳು ಇತಿಹಾಸವನ್ನು ಕಟ್ಟುವ ಮೂಲ ಸಾಮಗ್ರಿ. ಮಹಾರಾಷ್ಟ್ರದ ಕನ್ನಡ ಶಾಸನಗಳು ಈ ದಿಸೆಯಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಈ ಶಾಸನ ಸಂಪುಟ ಉಸ್ಮಾನಾಬಾದ್, ಔರಂಗಾಬಾದ್, ಕೊಲ್ಲಾಪುರ, ನಾಂದೇಡ್, ಪರಭಣಿ, ಬೀಡ್, ಮುಂಬಯಿ ನಗರ, ಲಾತೂರ್, ಸಾಂಗ್ಲಿ, ಸೊಲ್ಲಾಪುರ ಜಿಲ್ಲೆಯ ಶಾಸನಗಳನ್ನು ಒಳಗೊಂಡಿದೆ. ಉಳಿದ ಶಾಸನ ಸಂಪುಟಗಳ ಮಾಲಿಕೆಯ ಮಾದರಿಯನ್ನೇ ಇಲ್ಲಿ ಅಳವಡಿಸಲಾಗಿದೆ. ವಿಜಯನಗರದ ಶಾಸನಗಳು ಇಲ್ಲಿ ನೇರವಾಗಿ ಒಳಪಡದಿದ್ದರೂ ಉಲ್ಲೇಖಿತ ಶಾಸನಗಳ ಕನ್ನಡ ಮಾಹಿತಿಯ ದೃಷ್ಟಿಯಿಂದ ಇದು ಮಹತ್ವದ್ದಾಗಿದೆ.

ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದಿಂದ ೧೯೯೯ರಲ್ಲಿ ಸಿ.ಎಸ್.ವಾಸುದೇವನ್ ರವರ ಸಂಪಾದಕತ್ವದಲ್ಲಿ ಆಂಧ್ರಪ್ರದೇಶದಲ್ಲಿನ ಕನ್ನಡ ಶಾಸನಗಳು ಕುರಿತಂತೆ ಆಂಗ್ಲ ಭಾಷೆಯಲ್ಲಿ ಪ್ರಕಟವಾಯಿತು. (Karnataka Inscriptions of Andhra Pradesh) ಅದಿಲಾಬಾದ್, ಅನಂತಪುರ, ಚಿತ್ತೂರು, ಕಡಪ, ಪೂರ್ವ ಗೋದಾವರಿ, ಗುಂಟೂರು, ಹೈದ್ರಾಬಾದ್, ಕರೀಂನಗರ, ಖಮಂ, ಕೃಷ್ಣ, ಕರ್ನೂಲ್, ಮಹಬೂಬ್ ನಗರ, ಮೇದಕ, ನಾಗಗೊಂದಾ, ನೆಲ್ಲೋರ್ ನಿಜಮಾಬಾದ್, ಶ್ರೀಕಾಕುಲಂ, ವಿಶಾಖಪಟ್ಟಣ, ವಾರಂಗಲ್ ಜಿಲ್ಲೆಯ ಶಾಸನಗಳು ಈ ಪ್ರಕಟಣೆಯಲ್ಲಿ ಒಳಗೊಂಡಿದೆ. ಜಿಲ್ಲಾವಾರು, ತಾಲೂಕುವಾರು, ಗ್ರಾಮವಾರು ಶಾಸನಗಳು ಇಲ್ಲಿ ಅಳವಡಿಸಲ್ಪಟ್ಟಿವೆ. ವಿವರವಾದ ಪೀಠಿಕೆಯಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ವಿಷಯಗಳಿವೆ. ಶಾಸನ ಸ್ಥಳ, ಸಿಕ್ಕ ಸ್ಥಳ, ರಾಜವಂಶ, ರಾಜ, ಕಾಲ, ಸಾರಾಂಶ ಮತ್ತು ಪ್ರಕಟಣಾ ಉಲ್ಲೇಖಗಳನ್ನೊಳಗೊಂಡಿದೆ. ಶಾಸನಗಳು ಹಲವಾರು ವಾರ್ಷಿಕ ವರದಿಗಳಲ್ಲಿ ಪ್ರಕಟವಾಗಿದ್ದರೂ ಈ ಪ್ರಕಟಣೆಯಲ್ಲಿ ಒಂದೆಡೆ ಸೇರಿಸುವ ಪ್ರಯತ್ನ ಇದಾಗಿದೆ. ಪಂಪನ ಮೇಲೆ ಬೆಳಕು ಚೆಲ್ಲಿದ ರುರಿಖ್ಯಾಲದ ಶಾಸನವೂ ಇಂತಹ ಪ್ರಕಟಣೆಯ ದೃಷ್ಟಿಯಿಂದ ಮಹತ್ವದ್ದಾಗಿದೆ. ತಮಿಳುನಾಡಿನ ಕನ್ನಡ ಶಾಸನಗಳು ಕನ್ನಡ ವಿಶ್ವವಿದ್ಯಾಲಯ

ಶಾಸನ ಸಂಪುಟ-೪ರಲ್ಲಿ ಪ್ರಕಟವಾಗಿದೆ. ೨೦೦೦ನೇ ಸಾಲಿನಲ್ಲಿ ಬಿ.ಆರ್.ಗೋಪಾಲ, ಎಚ್.ಎಸ್.ಗೋಪಾಲರಾವ್ ಮತ್ತು ಪಿ.ವಿ.ಕೃಷ್ಣಮೂರ್ತಿಯವರ ಸಂಪಾದಕತ್ವದಲ್ಲಿ ಈ ಪ್ರಕಟಣೆ ಹೊರಬಂದಿದೆ. ಈರೋಡ್, ಕಡಲೂರ, ಕಾಂಜೀವರಂ, ಚೆನ್ನೈ, ತಿರುಚಾನಪಳ್ಳಿ, ತಿರುವಲ್ಲಂ, ಧರ್ಮಪುರಿ, ಸೇಲಂ ಮತ್ತು ವೆಲ್ಲೂರು ಜಿಲ್ಲೆಯ ಶಾಸನಗಳು ಈ ಸಂಪುಟದಲ್ಲಿವೆ. ರಾಜ ವಂಶೀಯ ಪಟ್ಟಿಯಲ್ಲಿ ಬಾದಾಮಿ ಚಾಲುಕ್ಯರು, ಬಾಣರ, ಗಂಗರ, ನೊಳಂಬರ, ರಾಷ್ಟ್ರಕೂಟರ, ಚೋಳರ, ಕಲ್ಯಾಣ ಚಾಲುಕ್ಯರ, ಕಳಚೂರ್ಯರ ಶಾಸನಗಳು ಒಳಗೊಂಡಿದ್ದರೂ ಹೆಚ್ಚಿನ ಶಾಸನಗಳು ವಿಜಯನಗರದ ಕಾಲಕ್ಕೆ ಸೇರಿವೆ. ಪ್ರಸ್ತಾವನೆಯಲ್ಲಿ ಬಾದಾಮಿ ಚಾಲುಕ್ಯರಿಂದ ಹಿಡಿದು ಆಧುನಿಕ ಕಾಲದವರೆಗಿನ ರಾಜಕೀಯ ಚರಿತ್ರೆಯನ್ನು ಇಲ್ಲಿ ಸೆರೆ ಹಿಡಿಯಲಾಗಿದೆ. ಆಡಳಿತ ವಿಭಾಗಗಳು ಧರ್ಮ, ಕೆರೆಗಳು ಮತ್ತು ತೆರಿಗೆಗಳು, ವೀರಗಲ್ಲುಗಳು, ಲಿಪಿಕಾರರನ್ನು ಕುರಿತು ಪ್ರಸ್ತಾವನೆ ಮಾಡಲಾಗಿದೆ. ವಿವರವಾದ ಪದಸೂಚಿ ಸಂಪುಟದ ಕೊನೆಯ ಭಾಗದಲ್ಲಿದೆ. ೨೦೦೧ನೇ ಸಾಲಿನಲ್ಲಿ ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ-೧ ಮತ್ತು ಭಾಗ-೨ ಕೆ.ಆರ್.ಗಣೇಶ ಮತ್ತು ಆರ್.ಶೇಷಶಾಸ್ತ್ರಿಯವರ ಸಂಪಾದಕತ್ವದಲ್ಲಿ ಪ್ರಕಟಣೆ ಹೊರಬಂದಿತು.

ಭಾಗ-೧ ಅನಂತಪುರ ಜಿಲ್ಲೆ, ಚಿತ್ತೂರು ಜಿಲ್ಲೆ, ಕರ್ನೂಲ್ ಜಿಲ್ಲೆಯ ಶಾಸನಗಳನ್ನೊಳಗೊಂಡಿದೆ. ಇಲ್ಲಿನ ಹೆಚ್ಚಿನ ಶಾಸನಗಳು ಸಂಗಮವಂಶ, ತುಳುವಂಶ, ಅರವೀಡು ವಂಶಕ್ಕೆ ಸೇರಿದ ಶಾಸನಗಳಾಗಿವೆ. ರಾಜಕೀಯ ಚರಿತ್ರೆ, ಸ್ಮಾರಕ ಶಿಲಾ ಶಾಸನಗಳಾದ ವೀರಗಲ್ಲುಗಳು, ಮಹಾಸತಿ ಕಲ್ಲುಗಳು, ಕಾಳಮುಖ ಗುರುಗಳು, ಸ್ಮಾರಕ ಶಿಲ್ಪಗಳು, ಆತ್ಮ ಬಲಿದಾನ ಸ್ಮಾರಕ ಶಿಲ್ಪಗಳು, ನಿಷಿಧಿ ಶಾಸನಗಳು ಕುರಿತು ಜೈನಧರ್ಮ, ಶೈವಧರ್ಮ, ವೀರ ಮಹೇಶ್ವರ ಧರ್ಮ, ವೈಷ್ಣವಧರ್ಮ, ದೇವಾಲಯಗಳು, ವಿದ್ಯಾಕೇಂದ್ರಗಳ ಗ್ರಾಮನಾಮಗಳು, ನಾಡು ಸೀಮೆಗಳ ವಿವರವಾದ ಪ್ರಸ್ತಾವನೆ ಈ ಸಂಪುಟದಲ್ಲಿದೆ. ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ-೨, ಕಡಪ ಜಿಲ್ಲೆ ಕರೀಮ್ ನಗರ ಜಿಲ್ಲೆ, ವಾರಂಗಲ್ ಜಿಲ್ಲೆ, ಮೆಹಬೂಬ್ ನಗರ, ನಲ್ಗೊಂಡ, ಮೇದಕ್, ಗುಂಟೂರು, ವಿಜಯನಗರ, ನಿಜಾಮಬಾದ್, ಪೂರ್ವ ಗೋದಾವರಿ, ನೆಲ್ಲೂರು, ಅದಿಲಾಬಾದ್ ಜಿಲ್ಲೆಗಳ ಶಾಸನಗಳು ಈ ಸಂಪುಟದಲ್ಲಿವೆ. ಬಾದಾಮಿ ಚಾಲುಕ್ಯರಿಂದ ಹಿಡಿದು ವಿಜಯನಗರದ ಕಾಲದವರೆಗೆ ಶಾಸನಗಳು ದೊರೆತಿವೆ. ವಿಜಯನಗರ ಕಾಲದ ಶಾಸನಗಳು ಬುಕ್ಕದೇವರಾಯ, ಪ್ರತಾಪದೇವರಾಯ, ಕೃಷ್ಣದೇವರಾಯ ಹಾಗೂ ವಿಜಯನಗರ ಕಾಲದ ಮಹಾ ಸಾಮಂತ ಮಂಡಳೇಶ್ವರರಿಗೆ ಸಂಬಂಧಿಸುದುದಾಗಿದೆ. ಎರಡು ಸಂಪುಟಗಳ ಪ್ರಸ್ತಾವನೆಯನ್ನು ಮೊದಲನೇ ಸಂಪುಟದಲ್ಲೇ ಮಾಡಲಾಗಿದ್ದು, ಈ ಸಂಪುಟದ ಕೊನೆಯ ಭಾಗದಲ್ಲಿ ಪದಕೋಶ ಮತ್ತು ಶಾಸನಗಳ ಛಾಯಾಚಿತ್ರಗಳನ್ನು ಅಳವಡಿಸಲಾಗಿದೆ. ಆಂಧ್ರಪ್ರದೇಶದ ಕನ್ನಡದ ಶಾಸನಗಳಲ್ಲಿ ಇದೊಂದು ಮಹತ್ವದ ಕೊಡುಗೆ.

ರಾಜ್ಯ ಪುರಾತತ್ತ್ವ ನಿರ್ದೇಶನಾಲಯ, ಕರ್ನಾಟಕ ಪುರಾತತ್ತ್ವ ಇಲಾಖೆ, ವಿಶ್ವವಿದ್ಯಾಲಯಗಳ ಸಂಪಾದನೆಯ ಕಾರ್ಯಗಳ ಜೊತೆಗೆ ವೈಯಕ್ತಿಕ ಪ್ರಟಕಣೆಗಳೂ ಹೊರಬಂದಿವೆ. ಈ ದಿಸೆಯಲ್ಲಿ ಹಂಪ ನಾಗರಾಜ, ರಘುನಾಥ ಭಟ್, ವಸಂತ ಮಾಧವ, ಚನ್ನಬಸಯ್ಯ ಹಿರೇಮಠ, ಹನುಮಾಕ್ಷಿ ಗೋಗಿ, ರಾಜಶೇಖರಪ್ಪ ಮುಂತಾದ ವಿದ್ವಾಂಸರುಗಳು ಶಾಸನ ಸಂಶೋಧನಾ ಕಾರ್ಯವನ್ನು ಮಾಡುತ್ತಿದ್ದಾರೆ. ಹಲವಾರು ಸಂಶೋಧನಾ ಲೇಖನಗಳನ್ನು ಹಲವಾರು ನಿಯತಕಾಲಿಕೆಗಳಲ್ಲಿ ಉದಾಹರಣೆಗೆ ಮಿಥಿಕ್ ಸೊಸೈಟಿ ಜರ್ನಲ್ ಮತ್ತು ಭಾರತೀಯ ಶಾಸನ ಮಂಡಳಿಗಳ ಜರ್ನಲ್‌ಗಳಲ್ಲಿ ಪ್ರಕಟವಾಗಿವೆ. ಪ್ರಸ್ತುತ ನನಗೆ ಲಭ್ಯವಾದ ಗ್ರಂಥಗಳ ಆಧಾರದಲ್ಲಿ ರಚಿಸಲಾದ ವಿಜಯನಗರ ಕನ್ನಡ ಶಾಸನ ಸಂಪಾದನೆಯ ಕಿರುನೋಟದ ಚಿತ್ರಣ ಇದು.

ಆಧಾರ ಗ್ರಂಥಗಳು

೧. ಉಪಾಧ್ಯ ಜಿ.ಎನ್. (ಸಂ), ದೇವರಕೊಂಡಾರೆಡ್ಡಿ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೬, ಮಹಾರಾಷ್ಟ್ರದ ಕನ್ನಡ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೨. ಕೃಷ್ಣಪ್ಪ ಎಂ.ವಿ, ಚೆನ್ನಬಸಪ್ಪ ಎಸ್.ಪಾಟೀಲ್, ೧೯೯೯, ವಿಜಯನಗರ ಅಧ್ಯಯನ, ಸಂಪುಟ-೪

೩. ಕೃಷ್ಣಪ್ಪ ಎಂ.ವಿ, ಚೆನ್ನಬಸಪ್ಪ ಎಸ್.ಪಾಟೀಲ್, ೨೦೦೦, ವಿಜಯನಗರ ಅಧ್ಯಯನ, ಸಂಪುಟ-೫

೪. ಕೃಷ್ಣಪ್ಪ ಎಂ.ವಿ, ತಳವಾರ ಹೆಚ್.ಟಿ. ೨೦೦೧, ವಿಜಯನಗರ ಅಧ್ಯಯನ, ಸಂಪುಟ-೬

೫. ಗಣೇಶ ಕೆ.ಆರ್. (ಸಂ), ಶೇಷಶಾಸ್ತ್ರಿ ಆರ್, ೨೦೦೧, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫, ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ ೧ ಮತ್ತು ೨, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೬. ಗೋಪಾಲ್ ಬಾ.ರಾ, ೧೯೯೬, ವಿಜಯನಗರದ (ಹಂಪೆಯ) ಶಾಸನಗಳು, ಸಂ.೧, ಕರ್ನಾಟಕ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

೭. ಗೋಪಾಲ ಬಾ.ರಾ. (ಸಂ), ಗೋಪಾಲರಾವ್ ಎಚ್.ಎಸ್, ಕೃಷ್ಣಮೂರ್ತಿ ಪಿ.ವಿ, ೨೦೦೦, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೪, ತಮಿಳುನಾಡಿನ ಕನ್ನಡ ಶಾಸನಗಳು, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೮. ದೇವರಕೊಂಡಾರೆಡ್ಡಿ (ಸಂ), ಕೆ.ಜಿ.ಭಟ್‌ಸೂರಿ, ಕಲವೀರ ಮನ್ವಾಚಾರಿ, ಡಿ.ವಿ.ಪರಮಶಿವಮೂರ್ತಿ (ಸಹಸಂಪಾದಕರು), ೨೦೦೦, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೩, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೯. ದೇವರಕೊಂಡಾರೆಡ್ಡಿ (ಸಂ), ಕೆ.ಜಿ.ಭಟ್‌ಸೂರಿ, ಕಲವೀರ ಮನ್ವಾಚಾರಿ, ಡಿ.ವಿ.ಪರಮಶಿವಮೂರ್ತಿ (ಸಹಸಂಪಾದಕರು), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨ ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೦. ದೇವರಕೊಂಡಾರೆಡ್ಡಿ (ಸಂ), ಕೆ.ಜಿ.ಭಟ್‌ಸೂರಿ, ಕಲವೀರ ಮನ್ವಾಚಾರಿ, ಡಿ.ವಿ.ಪರಮಶಿವಮೂರ್ತಿ (ಸಹಸಂಪಾದಕರು), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೧ ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೧. ದೇವರಾಜ ಡಿ.ವಿ, ಚೆನ್ನಬಸಪ್ಪ ಎಸ್.ಪಾಟೀಲ, ೧೯೯೬, ವಿಜಯನಗರ ಅಧ್ಯಯನ, ಸಂಪುಟ-೧

೧೨. ರಾಮಕೃಷ್ಣ ಕೆ.ಆರ್. ಗಂಗಾಧರ ಟಿ.ಎಸ್. ಮಂಜುನಾಥಯ್ಯ ಟಿ.ಎಂ. ೨೦೦೩, ವಿಜಯನಗರ ಅಧ್ಯಯನ, ಸಂಪುಟ-೭

೧೩. ಶಿವಶಂಕರ ಎಂ.ಎಲ್, ಚನ್ನಬಸಪ್ಪ ಎಸ್.ಪಾಟೀಲ್, ೧೯೯೨, ವಿಜಯನಗರ ಅಧ್ಯಯನ, ಸಂಪುಟ-೨

೧೪. ಶಿವಶಂಕರ ಎಂ.ಎಲ್. ಚನ್ನಬಸಪ್ಪ ಎಸ್.ಪಾಟೀಲ್, ೧೯೯೮, ವಿಜಯನಗರ ಅಧ್ಯಯನ-೩

೧೫. ಶ್ರೀನಿವಾಸ ರಿತ್ತಿ (ಸಂ), ಅನಂತ್ ಬಿ.ಕರ್‌ವೀರ್‌ಕರ್, ಕೊಲ್ಹಾಪುರ ಜಿಲ್ಲೆಯ ಶಾಸನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ

೧೬. ಶ್ರೀನಿವಾಸ ರಿತ್ತಿ, ೨೦೦೦, ಪ್ರಾಚೀನ ಕರ್ನಾಟಕದ ಆಡಳಿತ ಪರಿಭಾಷಾ ಕೋಶ, ಕರ್ನಾಟಕ ಪ್ರಾಚ್ಯ ವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು

ಆಂಗ್ಲಭಾಷೆಯ ಗ್ರಂಥಗಳು

17. Vasudevan C.S, Kannada Inscriptions of Andhra Pradesh, Prasaranga, Kannada University, Hampi

18. Channabasappa S. Patil, Vinoda Patil, 1998, Inscriptions of Karnataka Vol. iv, Inscriptions of Raichur District, Directorate of Archaeology and Museums, Mysore

19. Channabasappa S. Patil, Vinoda Patil, 1997, Inscriptions of Karnataka Vol. ii, Inscriptions of Bellary District, Directorate of Archaeology and Museums, Mysore

20. Channabasappa S. Patil, Vinoda Patil, 1995, Inscriptions of Karnataka Vol. i, Inscriptions of Vijayanagara (Hampi), Directorate of Archaeology and Museums, Mysore

21. Devaraj D.V, Channabasappa S. Patil, 1996, Vijayanagara Progress of Research, 1988-91

22. Devaraj D.V, Channabasappa S. Patil, 1995, Epigraphy, Numismatics and Culture, Directorate of Archaeology and Museums, Mysore

23. B.R.Gopal, 1996, Vijayanagara Inscriptions in Karnataka, Vol. iv

24. Gopal B.R, 1997, Inscriptions of Karnataka Vol. ii, Inscriptions of Bellary District, Directorate of Archaeology and Museums, Mysore

25. Shrinivasa Rao, Gopal Rao H.S, 1997, Epigraphical Studies, Directorate of Archaeology and Museums, Mysore

26. Nagaraj Rao M.S, Ramesh K.V, 1997, Copper Plate Inscriptions from Karnataka, Directorate of Archaeology and Museums, Mysore

❖ ❖

೨೬

ಮಾತಂಗ ಪರ್ವತ : ಒಂದು ಅಧ್ಯಯನ

ಟಿ.ಎಂ.ಮಂಜುನಾಥಯ್ಯ

ಮಾತಂಗ ಪರ್ವತ ಹಂಪೆಯ ವಿರೂಪಾಕ್ಷ ದೇವಾಲಯದ ಪೂರ್ವದಿಕ್ಕಿನಲ್ಲಿ ತೇರುಬೀದಿಯ ತುದಿಯಲ್ಲಿರುವುದು. ಮಾತಂಗ ಪರ್ವತ ಹಂಪೆಯ ಐದು ಪವಿತ್ರ ಪರ್ವತಗಳಲ್ಲಿ ಒಂದು ಎಂದು ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಉಲ್ಲೇಖವಿದೆ. ಹೇಮಕೂಟ, ಮಾತಂಗ, ಮೌಲ್ಯವಂತ, ಋಷ್ಯಮುಖ ಪರ್ವತಗಳಿರುವ ಈ ಪರಿಸರ ಮಹತ್ತರವಾದದ್ದು. ಮಾತಂಗ ಮಹೀಧರವೆಂದು ಈ ಕಾವ್ಯದಲ್ಲಿ ವ್ಯಕ್ತವಾಗಿದೆ. ಹೀಗೆ ಮಾತಂಗ ಪರ್ವತವನ್ನು ಕುರಿತು ಪವಿತ್ರಗ್ರಂಥಗಳಿಂದ ರಾಮಾಯಣ ಮತ್ತು ಮಹಾಭಾರತ ಹಾಗೂ ಇತರೆ ಸಾಹಿತ್ಯಿಕ ಗ್ರಂಥಗಳು ಮತ್ತು ಅನೇಕ ಶಾಸನಗಳು ಈ ಪರ್ವತವನ್ನು ಉಲ್ಲೇಖಿಸುತ್ತವೆ. ಈ ಪರ್ವತದಲ್ಲಿ ದೇವಾಲಯುಗಳು, ಮಂಟಪಗಳು, ಗುಹೆಗಳು, ಬಾವಿಗಳು, ಶಿಲ್ಪಗಳು, ಶಿವಲಿಂಗಗಳು, ಕೋಟೆ ಹಾಗೂ ದಿಡ್ಡಿ ಮುಂತಾದ ಪುರಾತತ್ವ ಅವಶೇಷಗಳು ಮಾತಂಗ ಪರ್ವತದಲ್ಲಿವೆ. ಶಾಸನಗಳಲ್ಲಿ ಮಾತಂಗ ಪರ್ವತವನ್ನೇರಿ ವಿರೂಪಾಕ್ಷ ಶಿಖರ ದರ್ಶನ ಮಾಡಿದರೆ ಕೃತಾರ್ಥರಾಗುವರೆಂಬ ಪ್ರತೀತಿಯೂ ಇದ್ದು, ಇಲ್ಲಿನ ಶಾಸನಗಳು ಮಾತಂಗ ಪರ್ವತದ ಪವಿತ್ರತೆಯನ್ನು ಎತ್ತಿಹಿಡಿದಿವೆ.[1]

ಮಾತಂಗನೆಂಬ ಋಷಿ ಈ ಪರ್ವತದಲ್ಲಿ ತಪಸ್ಸನ್ನು ಆಚರಿಸಿದನೆಂದು ಇಲ್ಲಿನ ಗುಹೆಯೊಂದರಲ್ಲಿ ಈತನ

ಆಶ್ರಮವಿತ್ತೆಂದು ರಾಮಾಯಣದಲ್ಲಿ ಉಲ್ಲೇಖವಿದೆ. ಮಾತಂಗ ಋಷಿಯ ಹೆಸರಿನಲ್ಲಿ ಈ ಪರ್ವತಕ್ಕೆ ಮಾತಂಗ ಪರ್ವತವೆಂದು ಹೆಸರು ಬಂದಿದೆ.

ರಾಮಾಯಣದ ಕಿಷ್ಕಿಂದ ಮತ್ತು ಅರಣ್ಯಕಾಂಡಗಳಲ್ಲಿ ಮಾತಂಗ ಪರ್ವತ ಹಾಗೂ ಋಷ್ಯಮುಖ ಪರ್ವತಗಳ ಉಲ್ಲೇಖವಿದೆ. ಶ್ರೀರಾಮಚಂದ್ರ ಮತ್ತು ಲಕ್ಷ್ಮಣರು ಮಾತಂಗ ಪರ್ವತದಲ್ಲಿ ಮಾತಂಗ ಋಷಿಯ ಆಶ್ರಮದಲ್ಲಿದ್ದ ಮಾತಂಗ ಋಷಿಯ ಶಿಷ್ಯರು ಇವರನ್ನು ಉಪಚರಿಸಿದ್ದು, ಸುಗ್ರೀವ, ಹನುಮಂತರನ್ನು ಈ ಪರ್ವತದಲ್ಲಿ ಭೇಟಿಯಾದದ್ದು ಮತ್ತು ರಾಮನ ಪರಮಭಕ್ತೆ ಶಬರಿ ರಾಮ ಲಕ್ಷ್ಮಣರನ್ನು ಈ ಪರ್ವತದಲ್ಲಿ ಉಪಚರಿಸಿ ಪಾವನರಾದದ್ದು ಈ ಪರ್ವತದಲ್ಲೆಂದು ಈ ಪರಿಸರವೆಲ್ಲ ಸಂಗೀತಮಯವಾಗಿತ್ತೆಂದು ತಿಳಿದುಬರುತ್ತದೆ.[೨]

ವ್ಯಾಸ ಮಹಾಭಾರತದ ಆದಿ ಪರ್ವದಲ್ಲಿ ಮಾತಂಗ ಋಷಿಯ ಜನನ ಹಾಗೂ ಆತನ ಕಠಿಣ ಸಾಧನೆಯಿಂದ ಬ್ರಹ್ಮರ್ಷಿ ಆದನೆಂಬ ಕುರಿತಾಗಿ ಉಲ್ಲೇಖವಿದೆ.[೩]

ಕಾಳಿದಾಸನ ರಘುವಂಶ ಕಾವ್ಯದಲ್ಲಿ ಮಾತಂಗನನ್ನು ಪರೋಕ್ಷವಾಗಿ ಉಲ್ಲೇಖಿಸಲಾಗಿದೆ ಹಾಗೂ ದೇವಿ ಸ್ತುತಿಯಲ್ಲಿ ಕಾಳಿಯನ್ನು ಮಾತಂಗ ಋಷಿಯ ಮಾನಸ ಪುತ್ರಿಯೆಂದು "ಮಾತಂಗ ಕನ್ಯಾ ಮನಸಾ ಸ್ಮರಾಮಿ" ಎಂದಿದೆ. ಇದರಿಂದ ಕಾಳಿಯು ಮಾತಂಗ ಋಷಿಯ ಮಗಳೆಂದು ಕರೆಯಲಾಗಿದೆ. ಸ್ವತಃ ಮಾತಂಗ ಮುನಿಯು ರಚಿಸಿದ ಯಾಷ್ಟಿಕ ಮತವೆಂಬ ಗ್ರಂಥದಲ್ಲಿ 'ಹರ ವಿಲಾಸ'ವೆಂಬ ಪ್ರಬಂಧವನ್ನು ರಚಿಸಿದ್ದಾನೆ. ಮಾತಂಗಮುನಿ ಸಂಗೀತ ಪಿತಾಮಹನೂ ಆಗಿರುವನು. ಪಾರ್ವತಿಯೂ ಶಿವನನ್ನು ಒಲಿಸಿಕೊಳ್ಳಲು ತನ್ನ ಸಾಕು ತಂದೆ ಮಾತಂಗನನ್ನು ಸಂಗೀತ ನೃತ್ಯವಿದ್ಯೆಯನ್ನು ಹೇಳಿಕೊಡಲು ಕೇಳಿದಾಗ ಅದಕ್ಕಾಗಿ ಸಂಗೀತ ವಿದ್ಯೆಯನ್ನು ರಚಿಸಿದವನು ಈತನೆ ಎಂದು ಬೃಹದ್ದೇಶಿ ಗ್ರಂಥವು ಉಲ್ಲೇಖಿಸುವುದು.[೪]

ಜೈನ ಪುರಾಣಗಳಲ್ಲಿ ಮಾತಂಗ ಪರ್ವತದ ಕುರಿತಾಗಿ ಉಲ್ಲೇಖವಿದೆ. ಜಂಬೂದ್ವೀಪದ ವಿಜಯಾರ್ಧ ಪರ್ವತದ ಉತ್ತರಕ್ಕೆ ಅರವತ್ತು (೬೦) ನಗರಗಳು ಮತ್ತು ದಕ್ಷಿಣ ದಿಕ್ಕಿಗೆ ಐವತ್ತು (೫೦) ನಗರಗಳು ಇರುತ್ತವೆ ಎಂದಿದೆ.[೫] ಜೈನ ಪುರಾಣಗಳಲ್ಲಿ ಮಾತಂಗನೆಂಬ ಯಕ್ಷನು ಅತ್ಯಂತ ಪ್ರಸಿದ್ಧಿಯನ್ನು ಪಡೆದವನು. ಬೌದ್ಧ ಗ್ರಂಥಗಳಲ್ಲಿಯೂ ಮಾತಂಗ ಋಷಿಯ ಉಲ್ಲೇಖವಿದೆ.[೬]

ರಾಘವಾಂಕನ ಹರಿಶ್ಚಂದ್ರ ಕಾವ್ಯದಲ್ಲಿ ಹಂಪೆಯ ಪರಿಸರದಲ್ಲಿನ ಐದು ಪರ್ವತಗಳು ಹೇಮಕೂಟ, ಮಾತಂಗ, ಮೌಲ್ಯವಂತ ಋಷಿಮುಖ, ಕಿಷ್ಕಿಂದ ಮತ್ತು ಮಾತಂಗ ಮಹೀಧರವೆಂದು ಉಲ್ಲೇಖಿತವಾಗಿದೆ.[೭]

ಪಂಪಾ ಮಹಾತ್ಮೆ ಗ್ರಂಥದಲ್ಲಿ ಮಾತಂಗ ಪರ್ವತದ ಮಹಿಮೆಯನ್ನು ಕುರಿತು ಸತ್ಯವಸು ಎಂಬ ಮುನಿ ತನ್ನ ಎರಡನೇ ಜನ್ಮದಲ್ಲಿ ಮಾತಂಗನೆಂಬ ಹೆಸರಿನಿಂದ ಈ ಪರ್ವತದಲ್ಲಿ ಶ್ರೀ ಪಂಪಾವಿರೂಪಾಕ್ಷನ ಕುರಿತು ತಪಸ್ಸು ಮಾಡಿದ್ದರಿಂದ ಈ ಪರ್ವತಕ್ಕೆ ಮಾತಂಗ

ಪರ್ವತವೆಂಬ ಹೆಸರು ಬಂದಿದೆ. ಇಲ್ಲಿನ ಗುಹೆಯೊಂದರಲ್ಲಿ ತಪಸ್ಸನ್ನಾಚರಿಸಿದನೆಂದು ಉಲ್ಲೇಖವಿದೆ.[೮]

ಅಹೋಬಲನ "ವಿರೂಪಾಕ್ಷ ವಸಂತೋತ್ಸವ ಚಂಪೂ" ಗ್ರಂಥದಲ್ಲಿ ಮಾತಂಗ ಪರ್ವತದ ಉಲ್ಲೇಖವಿದೆ. ವಿರೂಪಾಕ್ಷ ದೇವರ ರಥೋತ್ಸವ ಸಂದರ್ಭದಲ್ಲಿ ಜನರಿಗೆ ಇಲ್ಲಿನ ಜಾಗ ಸಾಲದೆ ಹೇಮಕೂಟ ಮತ್ತು ಮಾತಂಗ ಪರ್ವತದ ಬಂಡೆಗಳ ಮೇಲೆ ನಿಂತು ರಥೋತ್ಸವವನ್ನು ವೀಕ್ಷಿಸುತ್ತಿದ್ದಾರೆಂದಿದೆ.[೯]

ಕರಸ್ಥಲ ನಾಗಲಿಂಗನ ಚರಿತ್ರೆಯಲ್ಲಿ ಮಾತಂಗ ಪರ್ವತದ ವರ್ಣನೆ ಇದೆ. ಋಷಿಶೃಂಗ, ಮಾತಂಗ ಮೌಲ್ಯವಂತ, ಹೇಮಾದ್ರಿ ಮತ್ತು ಕಿಷ್ಕಿಂದ ಪರ್ವತಗಳನ್ನೊಳಗೊಂಡ ಪ್ರದೇಶ ಪುಣ್ಯಕ್ಷೇತ್ರವೆಂದು ಕರೆಯಲಾಗಿದೆ. ಈ ರೀತಿಯಾಗಿ ಮಾತಂಗ ಪರ್ವತದ ಉಲ್ಲೇಖವನ್ನು ಹಲವು ಸಾಹಿತಿಕ ಗ್ರಂಥಗಳು ಒಳಗೊಂಡಿವೆ.[೧೦]

ಕ್ರಿ.ಶ. ೧೬ನೇ ಶತಮಾನದ ತೆಲುಗು ಭಾಷೆಯ "ರಾಯವಾಚಕಮು" ಗ್ರಂಥದಲ್ಲಿ ವಿಜಯನಗರದ ಪಟ್ಟಣದ ಮಾತಂಗ ಪರ್ವತದ ಪ್ರಾಮುಖ್ಯತೆಯನ್ನು ಮತ್ತು ವಿದ್ಯಾರಣ್ಯ ಯತಿಗಳು ಹಂಪೆಗೆ ಬಂದು ಮಾತಂಗ ಪರ್ವತವನ್ನೇರಿದಾಗ ಈ ಪರ್ವತದಲ್ಲಿ ಮೊಲವು ನಾಯಿಯನ್ನು ಓಡಿಸಿಕೊಂಡು ಹೋಗುವ ವಿಸ್ಮಯವನ್ನು ಗಮನಿಸಿ ಸ್ಥಳೀಯರೊಂದಿಗೆ ಚರ್ಚಿಸಿದಾಗ ವಾನರ ರಾಜ ವಾಲಿಯಿಂದ ಧಿಕ್ಕರಿಸಿದ ಸುಗ್ರೀವ ಹನುಮಂತರು ಇಲ್ಲಿ ವಾಸವಾಗಿದ್ದರೆಂದು ಹೇಳಿ ಪರ್ವತದ ಪರಿಸರದ ಗುಣವನ್ನರಿತು ಈ ಪರಿಸರದಲ್ಲಿ ವಿಜಯನಗರ ಪಟ್ಟಣವನ್ನು ಸ್ಥಾಪಿಸಲಾಯಿತೆಂದು ತಿಳಿದುಬರುವುದು.

ಭೌಗೋಳಿಕವಾಗಿ ಮಾಲ್ಯವಂತ ಮಾತಂಗ ಮತ್ತು ವಿರೂಪಾಕ್ಷ ದೇವಾಲಯಗಳು ಪೂರ್ವ-ಪಶ್ಚಿಮವಾಗಿ ಒಂದೇ ಸರಳ ರೇಖೆಯಲ್ಲಿ ಇವೆ ಎಂದು ತಿಳಿದುಬಂದಿದೆ.[೧೧]

ಹಲವಾರು ಶಾಸನಗಳಲ್ಲಿ ಮಾತಂಗ ಪರ್ವತದ ಉಲ್ಲೇಖ ಹಾಗೂ ಮಹತ್ವವನ್ನು ಅರಿಯಲು ಸಹಕಾರಿಯಾಗಿವೆ. ಸುಮಾರು ೨೫ಕ್ಕಿಂತ ಹೆಚ್ಚು ಶಾಸನಗಳು ಮಾತಂಗ ಪರ್ವತದಲ್ಲಿವೆ. ಇವುಗಳು ಕನ್ನಡ, ನಾಗರಿ ಮತ್ತು ತಮಿಳು ಲಿಪಿಯಲ್ಲಿವೆ. ಹಾಗೂ ಇತರೆ ಶಾಸನಗಳಲ್ಲಿ ಮಾತಂಗ ಪರ್ವತದ ಉಲ್ಲೇಖವಿದೆ.

ಕ್ರಿ.ಶ. ೧೧೯೦ರಲ್ಲಿನ ಚನ್ನರಾಯಪಟ್ಟಣ ನಂ. ೧೭೫ರ ಶಾಸನದಲ್ಲಿ ಈ ಪ್ರದೇಶವನ್ನು ಮಾತಂಗ ಬೂಧರವೆಂದು ಉಲ್ಲೇಖಿಸಲಾಗಿದೆ. ವಿರಾಟ ರಾಜನಗರ ಕುರುಗೋಡು ಮತ್ತು ದೊರವದಿ (ದರೋಜಿ) ಪ್ರದೇಶಗಳು ಮಾತಂಗ ಬೂಧರದಲ್ಲಿದ್ದವೆಂದು ಈ ಪ್ರದೇಶವನ್ನು ಹೊಯ್ಸಳ ಬಲ್ಲಾಳನು ಯುದ್ಧಮಾಡಿ ಗೆದ್ದನೆಂದು ತಿಳಿದುಬರುತ್ತದೆ.[೧೨]

ಹಂಪೆಯ ದುರ್ಗದೇವಿಯ ದೇವಾಲಯದ ಬಳಿಯಿರುವ ಶಾಸನ ಕ್ರಿ.ಶ. ೧೧೯೯ರಲ್ಲಿ ಕುರುಗೋಡಿನ ಸಿಂದರ ಸಾಮಂತಾಧಿಕಾರಿಯವರಾಗಿ ಮಾದೆಯ ನಾಯಕ ಲಖ್ಖೆಯ ನಾಯಕರು ಮಾತಂಗ ಪರ್ವತದಿಂದ ವಿರೂಪಾಕ್ಷ ತೀರ್ಥದ ರಕ್ಷಣೆಯನ್ನು

ಮಾಡುತ್ತಿದ್ದರೆಂದು ವ್ಯಕ್ತವಾಗುತ್ತದೆ.[೧೩] ಕ್ರಿ.ಶ. ೧೫೪೫ರ ಜೋಗದ ತಾಮ್ರ ಶಾಸನದಲ್ಲಿ ಮಾತಂಗ ಪರ್ವತದ ಉಲ್ಲೇಖವಿರುವುದು.[೧೪]

ಮಾತಂಗ ಪರ್ವತದಲ್ಲಿರುವ ೨೫ಕ್ಕೂ ಹೆಚ್ಚು ಶಾಸನಗಳು ಮಾತಂಗ ಪರ್ವತದ ಮಹತ್ವವನ್ನು ತಿಳಿಸುವುವು. ವಿರೂಪಾಕ್ಷ ದೇವರ ಭಕ್ತರು ಮಾತಂಗ ಪರ್ವತವನ್ನೇರಿ ವಿರೂಪಾಕ್ಷ ದೇವಾಲಯದ ಶಿಖರವನ್ನು ನೋಡಿ ಕೃತಾರ್ಥರಾದರೆಂದು ಇದರಿಂದ ಮಾತಂಗ ಪರ್ವತ ಹಾಗೂ ವಿರೂಪಾಕ್ಷ ದೇವಾಲಯಕ್ಕೂ ಇರುವ ಮಹತ್ವವನ್ನು ಈ ಶಾಸನಗಳು ದೃಢೀಕರಿಸುತ್ತವೆ. "ಮಾತಂಗೇಶ್ವರ ದೇವರ ದಿಡ್ಡಿ" ಎಂದು ಉಲ್ಲೇಖಿಸುವ ಶಾಸನ ಹಾಗೂ ಚಿಕ್ಕಬಾಗಿಲು ಈ ಪರ್ವತದ ದಕ್ಷಿಣ ಭಾಗದಲ್ಲಿದೆ. ಮಾತಂಗ ಪರ್ವತಕ್ಕೆ ಪ್ರತ್ಯೇಕ ದ್ವಾರವಿರುವುದು ಇದರಿಂದ ವ್ಯಕ್ತವಾಗುವುದು. ಅರವೀಟಿ ಕೊಂಡರಾಜ ಎಂಬುವರು ಮಾತಂಗ ವೀರಭದ್ರ ದೇವರಿಗೆ ದಾನಗಳನ್ನು ಬಿಟ್ಟಿರುವರು. ವೀರಹರಿಹರನ ಕಾಲದಲ್ಲಿ ಗೋದೇವಿ ಮತ್ತು ಮಾದೇವಿಯರ ಶಾಸನವೂ ಇಲ್ಲಿದೆ. ಸಾಯಣ (ವಿದ್ಯಾರಣ್ಯ) ಎಂಬುವರು ಮಾತಂಗ ಪರ್ವತದಿಂದ ವಿರೂಪಾಕ್ಷದೇವರ ದರ್ಶನ ಮಾಡಿದರೆಂದು ಮತ್ತು ಸಾವಣ್ಣ-ಮಂಚೆಯವ್ವೆಯರ ಪುತ್ರನೆಂದು ಉಲ್ಲೇಖವಿದೆ. ರಾಮಯ್ಯನ ಮಗ ಪಿರಿಯನಾಗಣ್ಣ, ಕಂಪಣನ ಮಗ ಮಾಳಪ್ಪ ಮತ್ತರಸರ ಮಗಳು ರಾಮಾಯಿ, ರಾಯಣ್ಣಮಯಿನಪ್ಪ ಇವರು ದೂಬಪ್ಪ ಮತ್ತು ಸಾತಾಯಿಯ ಮಕ್ಕಳು ಮಯಿಲಪ್ಪ, ವೂಲಪ್ಪ, ಪೂವಾಯಿ- ಮಾಯಕ್ಕನ ಮಗಳು ಕಲ್ಲಾಯಿ ಮತ್ತು ನಿಟ್ಟೂರು ದೇವಣ್ಣ ಲೊಂಬೆರಾಜನ ಮಗ ಅನಂತಪ್ಪ, ಕೇತಪ್ಪನ ಮಗ ಮಾರಣ್ಣ ಬಾಗೇಹಳ್ಳಿಯ ಹರಿಯಪ್ಪನ ಮಗ ನಾಗಪ್ಪ, ನಾಗಾಯಿ ಮಗ ಮಯಿಲಣ್ಣ ಮುಂತಾದವರ ಹೆಸರುಗಳಾಗಿವೆ. ಮಾತಂಗೇಶ್ವರನೆಂಬ ಹೆಸರನ್ನು ಈ ಶಾಸನಗಳು ಸೂಚಿಸುತ್ತವೆ.[೧೫]

ಕ್ರಿ.ಶ. ೧೫೩೨ರಲ್ಲಿ ಅಚ್ಯುತರಾಯ ಮಹಾರಾಯನು ಮಾತಂಗ ಪರ್ವತದ ವೀರೇಶ್ವರ (ವೀರಭದ್ರ) ದೇವರಿಗೆ ಮುಹಾನಾಡಿನ ಎಲೆ ಸೇರುಗಳಿಂದ ಬರುವ ಆದಾಯವನ್ನು ಮತ್ತು ಪ್ರತಿ ಮಂಗಳವಾರ ಕೃಷ್ಣಾಪುರದಲ್ಲಿ ನಡೆಯುವ ಸಂತೆಯಲ್ಲಿ ಅಂಗಡಿಗೆ ಒಂದು ಕಾಸಿನಂತೆ ತೆರಿಗೆಯನ್ನು ಬಿಟ್ಟಿರುವನೆಂದಿದೆ.[೧೬]

ಇನ್ನೊಂದು ಶಾಸನದಲ್ಲಿ ಮಾತಂಗ ಪರ್ವತದ ಮೇಲಿನ ವೀರಭದ್ರ ದೇವರ ಅಮೃತಪಡಿ ನೈವೇದ್ಯಕ್ಕೆ ಅರವೀಟಿ ಕೊಂಡರಾಜಯ್ಯನವರು ಭೂಮಿಯನ್ನು ಕೊಟ್ಟಿರುವರು.[೧೭]

ಮಾತಂಗ ಪರ್ವತದಲ್ಲಿ ಈಶ್ವರ, ಗಣೇಶ, ಸ್ಕಂದ ಮತ್ತು ವೀರಭದ್ರ ದೇವಾಲಯಗಳಿರುವುದನ್ನು ಈ ಪರ್ವತದ ಮಹತ್ವವನ್ನು ಈ ಶಾಸನಗಳು ಉಲ್ಲೇಖಿಸುವವು.

ಹಂಪೆಯ ಬಾಲಕೃಷ್ಣ ದೇವಾಲಯದ ಹಿಂಭಾಗದಲ್ಲಿರುವ ಶಾಸನದಲ್ಲಿ ಪಟ್ಟಣ ಸ್ವಾಮಿಗಳು ಹಾಗೂ ಪಟ್ಟಣ ಶೆಟ್ಟಿಗಳು ಪರ್ವತ ದೇವರ ದರ್ಶನ ಮಾಡಿ ಕೃತಾರ್ಥರಾದರೆಂದು ಉಲ್ಲೇಖವಿದೆ. ಮಾತಂಗ ಪರ್ವತದ ಮೇಲಿರುವ ದೇವಾಲಯದಲ್ಲಿ

ಮೂರು ದೇವಾಲಯಗಳ ಗರ್ಭಗೃಹವನ್ನೊಳಗೊಂಡಂತೆ ಒಂದೇ ಶಿಖರವಿದೆ. ಶಿಖರವನ್ನು ಸುಟ್ಟ ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಿಸಲಾಗಿದೆ. ಶಿಖರತ್ರಿ ತಳಗಳನ್ನೊಳಗೊಂಡಿದೆ. ದೇವಕೋಷ್ಠಗಳು ಹಾಗೂ ದೇವತೆಗಳ ವಿಗ್ರಹಗಳಿವೆ.

ಒಟ್ಟಾರೆ ಈ ದೇವಾಲಯ ಒಂದು ದೊಡ್ಡ ಆವರಣವಾಗಿದೆ. ಆಗ್ನೇಯ ದಿಕ್ಕಿನಲ್ಲಿ ಹನ್ನೆರಡು ಸ್ತಂಬಗಳ ಮಂಟಪ, ದಕ್ಷಿಣದಲ್ಲಿ ಆ ಹನ್ನೆರಡು ಸ್ತಂಬಗಳ ಮಂಟಪ, ವಾಯುವ್ಯ ದಿಕ್ಕಿನಲ್ಲಿ ಹದಿನೈದು ಸ್ತಂಬಗಳ ಮಂಟಪ, ಪಶ್ಚಿಮ ದಿಕ್ಕಿನಲ್ಲಿ ನಾಲ್ಕು ಸ್ತಂಬಗಳ ಮಂಟಪವಿದೆ. ದೇವಾಲಯದ ದಕ್ಷಿಣಭಾಗದಲ್ಲಿ ಎರಡು ದೀಪಸ್ತಂಬಗಳು, ಮುಂದಿನ ಭಾಗದಲ್ಲಿ ಒಂದು ದೀಪಸ್ತಂಬವಿದೆ. ದೇವಾಲಯಕ್ಕೆ ಉತ್ತರ ಮತ್ತು ದಕ್ಷಿಣ ದ್ವಾರಗಳಲ್ಲಿ ಒಂದೊಂದು ದೀಪಸ್ತಂಬಗಳಿವೆ. ಈ ದೇವಾಲಯವನ್ನು ಪರ್ವತದ ತುದಿಯಲ್ಲಿ ನಿರ್ಮಾಣ ಮಾಡಿದೆ ಹಾಗೂ ಈ ಸ್ಥಳದಿಂದ ಹಂಪೆಯ ಪರಿಸರವೆಲ್ಲವನ್ನು ವೀಕ್ಷಿಸಬಹುದು. ಇದು ಈ ಪರಿಸರದಲ್ಲಿನ ಅತ್ಯಂತ ಎತ್ತರವಾದ ಪರ್ವತವೂ ಹೌದು ಉತ್ತುಂಗಶಿಖರವೂ ವಿಜಯನಗರ ಕಾಲದಲ್ಲಿ ಇದನ್ನು ಒಂದು ಕೊತ್ತಳವಾಗಿಯೂ ಉಪಯೋಗಿಸಿರುವ ಸಾಧ್ಯತೆಗಳಿವೆ.

ದೇವಾಲಯದ ಸ್ತಂಬಗಳಲ್ಲಿ ಕೆಲವು ಚತುರಾಶ್ರ-ಅಷ್ಟಾಶ್ರ-ಚತುರಾಶ್ರ, ಅರ್ದಘಟಾಕಾರ, ಚಕ್ರಬೋದಿಗೆ, ಘಂಟಾಬೋದಿಗೆ, ಚತುರ್ಮುಖ ಬೋದಿಗೆಗಳನ್ನು ಹೊಂದಿವೆ. ಇನ್ನೊಂದು ವಿಧದ ಸ್ತಂಬಗಳು ಚತುರಾಶ್ರವಾಗಿದ್ದು ಸರಳವಾಗಿವೆ. ದೇವಾಲಯದ ಎಲ್ಲಾ ದಿಕ್ಕುಗಳಲ್ಲಿ ಮಂಟಪಗಳನ್ನು ನಿರ್ಮಿಸಲಾಗಿದೆ. ದೇವಾಲಯದ ಶಿಖರ ಇಡೀ ದೇವಾಲಯದ ಮಧ್ಯಭಾಗದಲ್ಲಿದೆ. ಪರ್ವತದ ಕೆಳಭಾಗದಿಂದ (ದೂರದಿಂದ) ನೋಡಿದಾಗ ದೇವಾಲಯವೇ ಲಿಂಗಾಕಾರದಲ್ಲಿ ಕಾಣುತ್ತದೆ. ದೇವಾಲಯ ಪೀಠಾಕಾರದಲ್ಲಿದ್ದರೆ ಹಾಗೂ ಶಿಖರ ಲಿಂಗಾಕಾರದಲ್ಲಿದೆ ಎಂಬ ಭಾವನೆ ಬರುತ್ತದೆ. ದೇವಾಲಯದ ಉತ್ತರ ದ್ವಾರದಲ್ಲಿ ಪ್ರಥಮವಾಗಿ ಭೈರವಮೂರ್ತಿ ಮತ್ತು ಸ್ಕಂದನ ದೇವಾಲಯ ಹಾಗೂ ಪ್ರವೇಶ ದ್ವಾರದಲ್ಲಿ ಮಂಟಪವಿದ್ದು ಕಕ್ಷಾಸನವಿದೆ. ದಕ್ಷಿಣ ದ್ವಾರದಲ್ಲಿ ಮಂಟಪದ ದ್ವಾರವಿದ್ದು, ಎರಡೂ ಬದಿಯಲ್ಲಿ ಕಟ್ಟೆಗಳಿವೆ. ದ್ವಾರದ ಒಳಭಾಗದಲ್ಲಿ ಒಂದು ಮಂಟಪ ಮತ್ತು ದೀಪಸ್ತಂಬವಿದೆ. ಮಂಟಪದ ಮೇಲೆ ದ್ರಾವಿಡ ವಿಮಾನ ಶೈಲಿಯ ಶಿಖರವಿದೆ.

ಈ ದೇವಾಲಯದಲ್ಲಿ ಗಣೇಶ, ಮಾತಂಗೇಶ್ವರ, ಈಶ್ವರ ವೀರಭದ್ರ ಮತ್ತು ಭದ್ರಕಾಳಿ ದೇವಾಲಯ ಹಾಗೂ ಕೆಳಭಾಗದಲ್ಲಿ ಸ್ಕಂದನ ದೇವಾಲಯವಿದೆ. ಈ ದೇವಾಲಯಗಳು ವಿಜಯನಗರ ಪೂರ್ವಕಾಲದಲ್ಲಿ ನಿರ್ಮಾಣವಾದವುಗಳೆಂದು ದೇವಾಲಯಗಳ ವಾಸ್ತುಶೈಲಿಯಿಂದ ತಿಳಿದುಬರುತ್ತದೆ. ಶಿಖರಗಳು ಮಾತ್ರ ವಿಜಯನಗರ ಕಾಲದಲ್ಲಿ ನಿರ್ಮಿಸಿದವುಗಳಾಗಿವೆ. ಈ ಅಂಶವನ್ನು ಡಾ. ಜಾನ್ ಎಂ.ಫ್ರಿಟ್ಜರವರೂ ಉಲ್ಲೇಖಿಸಿದ್ದಾರೆ. VPR. ೧೯೮-೯೧, P. ೪-೪೭

ಮಾತಂಗೇಶ್ವರ ದೇವಾಲಯ

ಮಾತಂಗ ಪರ್ವತದ ಶಿಖರಾಗ್ರದಲ್ಲಿ ಮಾತಂಗೇಶ್ವರ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ. ದೇವಾಲಯದ ನಿರ್ಮಾಣಕ್ಕೆ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಉತ್ತರಾಭಿ ಮುಖವಾಗಿರುವ ದೇವಾಲಯದಲ್ಲಿ ನಾಲ್ಕು ಗರ್ಭಗೃಹಗಳಿವೆ. ಪ್ರತಿ ದೇವಾಲಯವು ನವರಂಗ, ಅಂತರಾಳ, ಗರ್ಭಗೃಹಗಳನ್ನೊಳಗೊಂಡಿವೆ. ಪೂರ್ವಭಾಗದಲ್ಲಿ ಗಣೇಶ ದೇವಾಲಯ ಮಧ್ಯದಲ್ಲಿ ಈಶ್ವರ ದೇವಾಲಯ, ಪಶ್ಚಿಮದಲ್ಲಿ ವೀರಭದ್ರ ಹಾಗೂ ವೀರಭದ್ರ ದೇವಾಲಯುದ ನವರಂಗಕ್ಕೆ ಹೊಂದಿಕೊಂಡಂತೆ ಭದ್ರಕಾಳಿಯ ದೇವಾಲಯಗಳಿವೆ. ದೇವಾಲಯಗಳ ದ್ವಾರಗಳು ಸರಳ ರೇಖೆಗಳಿಂದ ಕೂಡಿದ್ದು, ಅಲಂಕೃತವಾಗಿಲ್ಲ. ವೀರಭದ್ರ ದೇವಾಲಯದ ಮುಖದ್ವಾರ ಗಾರೆಯಿಂದ ಅಲಂಕೃತವಾಗಿದೆ.

ಗಣೇಶ ದೇವಾಲಯ : ಗಣೇಶನ ದೇವಾಲಯ ಪಶ್ಚಿಮಾಭಿಮುಖವಾಗಿದೆ. ಗಣೇಶ ಮತ್ತು ಈಶ್ವರ ದೇವಾಲಯಕ್ಕೂ ಒಂದೇ ನವರಂಗವಿದೆ. ಅಂತರಾಳ ಮತ್ತು ಗರ್ಭಗೃಹದ ದ್ವಾರಗಳು ಸರಳ ಶಾಖೆಗಳನ್ನೊಲಗೊಂಡಿವೆ. ಗರ್ಭಗೃಹದ ಬಿತ್ತಿಯಲ್ಲಿ ಶಿಲಾಪಟ್ಟಿಕೆ ಮುಂಚಾಚಿದೆ. ಅಂತರಾಳ ಮತ್ತು ಗರ್ಭಗೃಹದ ಛತ್ತಿನ (ಒಳಮಾಳಿಗೆ)ಲ್ಲಿ ಅಷ್ಟಾಶ್ರಕೋನದಲ್ಲಿರುವ ಪದ್ಮಗಳಿವೆ. ಗರ್ಭಗೃಹದಲ್ಲಿ ಭಗ್ನವಾದ ಗಣೇಶನಶಿಲ್ಪ ಹಾಗೂ ನವರಂಗದಲ್ಲಿ ಮೂಷಕ ಶಿಲ್ಪವಿದೆ.

ಈಶ್ವರ ದೇವಾಲಯ

ಈಶ್ವರ ದೇವಾಲಯ ಉತ್ತರಾಭಿ ಮುಖವಾಗಿದೆ. ಮುಖ ಮಂಟಪ, ನವರಂಗ ಮತ್ತು ಗರ್ಭಗೃಹಗಳನ್ನೊಳಗೊಂಡಿದೆ. ದ್ವಾರಗಳು ಸರಳವಾದ ಶಾಖೆಗಳನ್ನೊಳಗೊಂಡಿವೆ. ಛತ್ತಿನಲ್ಲಿ ಅಷ್ಟಾಶ್ರಕೋನದಲ್ಲಿ ಪದ್ಮಗಳಿವೆ. ಗರ್ಭಗೃಹದಲ್ಲಿ ಶಿವಲಿಂಗದ ಪೀಠವಿದೆ. ಈ ಪೀಠ ಚತುರಾಶ್ರವಾಗಿದ್ದು ಪ್ರಣಾಳವಿದೆ. ಪೀಠದಲ್ಲಿ ವೃತ್ತಾಕಾರದ ರಂದ್ರವಿದ್ದು, ಲಿಂಗ ಭಗ್ನವಾಗಿದೆ. ನವರಂಗದಲ್ಲಿ ನಂದಿಯ ಶಿಲ್ಪವಿದೆ. ನಂದಿಯು ಮಲಗಿರುವ ಭಂಗಿಯಲ್ಲಿದ್ದು ಬಲಗಾಲನ್ನು ಮುಂದೆ ಇಟ್ಟಿರುವುದು.

ವೀರಭದ್ರ ದೇವಾಲಯ

ವೀರಭದ್ರ ದೇವಾಲಯವು ಈಶ್ವರ ದೇವಾಲಯದ ಪಶ್ಚಿಮಭಾಗದಲ್ಲಿದೆ. ಉತ್ತರಾಭಿಮುಖವಾಗಿರುವ ಈ ದೇವಾಲಯ ಮುಖಮಂಟಪ, ನವರಂಗ ಹಾಗೂ ಗರ್ಭಗೃಹಗನ್ನೊಳಗೊಂಡಿದೆ. ಮುಖಮಂಟಪದಲ್ಲಿ ಒಂದಂಕಣದ ಗೃಹದಲ್ಲಿ ಭದ್ರಕಾಳಿಯ ಶಿಲ್ಪವನ್ನು ಸ್ಥಾಪಿಸಲಾಗಿದೆ. ದ್ವಾರಗಳು ಸರಳಶಾಖೆಗಳಿಂದ ಕೂಡಿವೆ. ಛತ್ತಿನಲ್ಲಿ ಪದ್ಮಗಳಿವೆ. ವೀರಭದ್ರ ದೇವಾಲಯ ಗರ್ಭಗೃಹದಲ್ಲಿ ಎರಡು ವೀರಭದ್ರನ ಶಿಲ್ಪಗಳಿವೆ. ಸದ್ಯದಲ್ಲಿ ಪೂಜೆಗೊಳ್ಳುತ್ತಿರುವುದು ಮತ್ತು ವಿಜಯನಗರದ ಪೂರ್ವ ಕಾಲದ ಭಗ್ನವಾದ ಮೂಲ ಶಿಲ್ಪವನ್ನು ಬದಿಯಲ್ಲಿ ಇರಿಸಲಾಗಿದೆ. ನವರಂಗದಲ್ಲಿ ಮಲಗಿರುವ ನಂದಿಯ ಶಿಲ್ಪವಿದೆ.

ಭದ್ರಕಾಳಿ ದೇವಾಲಯ

ವೀರಭದ್ರ ದೇವಾಲಯದ ಮುಖಮಂಪಟದಲ್ಲಿ ಎಡಭಾಗದಲ್ಲಿ ಒಂದಂಕಣದ ದೇವಾಲಯವಿದೆ. ಈ ದೇವಾಲಯದಲ್ಲಿ ಭದ್ರಕಾಳಿಯನ್ನು ವೀರಭದ್ರನಿಗೆ ಎದುರಾಗಿ (ದಕ್ಷಿಣ ಮುಖವಾಗಿ) ಸ್ಥಾಪಿಸಲಾಗಿದೆ. ವೀರಭದ್ರನಂತೆ ಭದ್ರಕಾಳಿಯನ್ನು ತ್ರಿಭಂಗದಲ್ಲಿ ನಿರ್ಮಿಸಲಾಗಿದೆ. ಭದ್ರಕಾಳಿಗೆ ಚತುರ್ಭುಜಗಳಿವೆ. ಕೈಗಳಲ್ಲಿ ಬಾಣ-ಬಿಲ್ಲು, ಖಡ್ಗ-ಗುರಾಣಿಗಳಿವೆ. ಶಿಲ್ಪದ ಮೇಲ್ಭಾಗದಲ್ಲಿ ಪ್ರಭಾವಳಿ ಇದ್ದು, ಮಕರವಿದೆ. ತಲೆಯ ಮೇಲೆ ಕಿರೀಟವಿದೆ. ಕಿರೀಟದಲ್ಲಿ ಶಿವಲಿಂಗವಿದೆ. ಕರ್ಣಾಭರಣಗಳು ವಿವಿಧ ಬಗೆಯ ಕಂಠಾಭರಣಗಳು, ಭುಜಕೀರ್ತಿಗಳು ಹಾಗೂ ಹಣೆಯಲ್ಲಿ ತ್ರಿನೇತ್ರವಿದೆ. ದೊಡ್ಡದಾದ ರುಂಡ ಮಾಲೆಯನ್ನು ಧರಿಸಲಾಗಿದೆ. ಮುಂಗಾಲು, ಮುಂಗೈ ಹಾಗೂ ಕೈತೋಳುಗಳಲ್ಲಿ ಜೋಡಿ ಕಡಗಗಳ (ಗಗ್ಗರಗಳ)ನ್ನು ಧರಿಸಲಾಗಿದೆ. ಕಾಲುಗಳಲ್ಲಿ ಪಾದರಕ್ಷೆಗಳನ್ನು ಧರಿಸಿರುವಳು.

ವೀರಭದ್ರ

ವೀರಭದ್ರ ದೇವಾಲಯದ ಗರ್ಭಗೃಹದಲ್ಲಿ ಎರಡು ವೀರಭದ್ರದೇವರ ಶಿಲ್ಪಗಳಿವೆ. ಮೂಲಶಿಲ್ಪವನ್ನು ಪ್ರಸಕ್ತ ಸ್ಥಾಪಿಸಲಾಗಿರುವ ಶಿಲ್ಪದ ಬಳಿ ನಿಲ್ಲಿಸಲಾಗಿದೆ.

ವೀರಭದ್ರನ ಶಿಲ್ಪ

ಮೂಲ ವೀರಭದ್ರ ಶಿಲ್ಪ ತ್ರಿಭಂಗದಲ್ಲಿ ನಿಂತಿದ್ದು, ಚತುರ್ಭುಜಗಳಿವೆ. ಕೈಗಳಲ್ಲಿ ಬಾಣ-ಬಿಲ್ಲು, ಖಡ್ಗ-ಗುರಾಣಿಗಳಿವೆ. ವೀರಭದ್ರನ ತಲೆಯಮೇಲಿನ ಮಕುಟದಲ್ಲಿ ಶಿವಲಿಂಗವಿದೆ. ಹಣೆಯಲ್ಲಿ ತ್ರಿನೇತ್ರವಿದೆ. ಕರ್ಣಾಭರಣಗಳಿವೆ. ಕಂಠಭರಣ ಹಾಗೂ ರುಂಡಮಾಲೆಯನ್ನು ಧರಿಸಲಾಗಿದೆ. ಮುಂಗಾಲು ಹಾಗೂ ಮುಂಗೈಗಳಲ್ಲಿ ಜೋಡಿ ಕಡಗಾಭರಣಗಳಿವೆ. ವೀರಭದ್ರನ ಮುಖ ರೌದ್ರಾಕಾರವಾಗಿದೆ. ವೀರಭದ್ರನ ಬಲಭಾಗದಲ್ಲಿ ದಕ್ಷಬ್ರಹ್ಮನ ಶಿಲ್ಪವಿದ್ದು, ಅಂಜಲಿಮುದ್ರೆಯಲ್ಲಿದೆ.

ವೀರಭದ್ರ

ಪ್ರಸಕ್ತ ಪೂಜೆಗೊಳ್ಳುತ್ತಿರುವ ವೀರಭದ್ರ ದೇವರ ಶಿಲ್ಪವನ್ನು ಷಷ್ಠಾಶ್ರ ಪೀಠದ ಮೇಲೆ ಸ್ಥಾಪಿಸಲಾಗಿದೆ. ತ್ರಿಭಂಗದಲ್ಲಿ ನಿಂತಿದ್ದು, ಚತುರ್ಭುಜಗಳಿವೆ. ಕೈಗಳಲ್ಲಿ ಬಾಣ-ಬಿಲ್ಲು, ಖಡ್ಗ-ಗುರಾಣಿಗಳಿವೆ. ಹಣೆಯಲ್ಲಿ ತ್ರಿನೇತ್ರವಿದೆ. ಉದ್ದನೆಯ ಕಿರೀಟವನ್ನು ತಲೆಯಲ್ಲಿ ಧರಿಸಿದೆ. ಕಿರೀಟದಲ್ಲಿ ಶಿವಲಿಂಗದ ಶಿಲ್ಪವಿದೆ. ಶಿಲ್ಪದ ಮೇಲೆ ಪ್ರಭಾವಳಿ ಇದೆ. ಪ್ರಭಾವಳಿಯು ಎರಡು ಸ್ತಂಬಗಳ ಮೇಲೆ ಸ್ಥಾಪಿತವಾಗಿವೆ. ವೀರಭದ್ರನ ಬಲಭಾಗದಲ್ಲಿ ಕೈಮುಗಿದು ಕುಳಿತಿರುವ ದಕ್ಷಬ್ರಹ್ಮನ ಶಿಲ್ಪವಿದೆ. ನವರಂಗದಲ್ಲಿ ಮಲಗಿರುವ ನಂದಿ ಶಿಲ್ಪವಿದೆ.

ಸ್ಕಂದ (ಷಣ್ಮುಖ) ದೇವಾಲಯ

ಮಾತಂಗೇಶ್ವರ ದೇವಾಲಯದ ಉತ್ತರ ದಿಕ್ಕಿನ ಸ್ವಲ್ಪ ಕೆಳಭಾಗದಲ್ಲಿ ಸ್ಕಂದನ ದೇವಾಲಯವಿದೆ. ಈ ದೇವಾಲಯದ ಮುಕ್ಕಾಲು ಭಾಗ ಗುಹೆಯ ಒಳಭಾಗದಲ್ಲಿ ಚಿಕ್ಕದಾದ ದೇವಾಲಯುವಿದೆ. ದೇವಾಲಯುವು ಮುಖಮಂಟಪ, ನವರಂಗ ಹಾಗೂ ಗರ್ಭಗೃಹವನ್ನೊಳಗೊಂಡಿದೆ. ನವರಂಗದಲ್ಲಿ ಪೀಠವಿದ್ದು, ನಿಧಿಗಳ್ಳರ ಹಾವಳಿಯಿಂದ ಬೋರಲಾಗಿ ಬಿದ್ದಿದೆ. ಇಲ್ಲಿದ್ದ ಶಿಲ್ಪವನ್ನು ಕಡೆರಾಂಪುರದ ಮರುಗನ್ ದೇವಾಲಯದಲ್ಲಿ ಇತ್ತೀಚೆಗೆ ಸ್ಥಾಪಿಸಲಾಗಿದೆ ಎಂದು ಸ್ಥಳೀಯರು ಹೇಳುತ್ತಾರೆ. ಈ ದೇವಾಲಯದ ದ್ವಾರಗಳು ಸರಳವಾದ ದ್ವಿಶಾಖೆಗಳಿಂದ ಕೂಡಿವೆ. ದೇವಾಲಯದ ಒಳಭಾಗದಲ್ಲಿ ತ್ರಿವೃತ್ತ ಕಮಲದ ಶಿಲ್ಪವಿದೆ.

ಕಾಲಭೈರವ

ಸ್ಕಂದ ದೇವಾಲಯದ ದ್ವಾರದ ಬಳಿ ಗುಂಡಿನ ಮೇಲೆ ಭೈರವ ಮೂರ್ತಿಯ ಶಿಲ್ಪವನ್ನು ನಿರ್ಮಿಸಲಾಗಿದೆ. ಶಿಲ್ಪ ಪೂರ್ವಾಭಿಮುಖವಾಗಿದೆ. ತ್ರಿಭಂಗದಲ್ಲಿ ನಿಂತಿರುವ ಭೈರವ ಶಿಲ್ಪದ ಬೆತ್ತಲೆಯಾಗಿದೆ. ಚತುರ್ಭುಜಗಳಿವೆ. ಕೈಗಳಲ್ಲಿ ಖಡ್ಗ, ಡಮರು, ತ್ರಿಶೂಲ ಮತ್ತು (ಕಪಾಲಪಾತ್ರೆ ಭಗ್ನವಾಗಿದೆ) ಮುಂಗೈಯಲ್ಲಿ ರುಂಡವನ್ನು ಕಟ್ಟಲಾಗಿದೆ. ರುಂಡದಿಂದ ವಸರುವ ರಕ್ತವನ್ನು ನಾಯಿ ತನ್ನ ನಾಲಿಗೆಯಿಂದ ನೆಕ್ಕುತ್ತಿದೆ. ಈ ನಾಯಿ ತನ್ನ ಹಿಂದಿನ ಎರಡು ಕಾಲುಗಳ ಮೇಲೆ ನಿಂತಿದೆ. ಕೋನಾಕೃತಿಯಲ್ಲಿ ಶಿಲೆಯನ್ನು ನಯಗೊಳಿಸಿ ಅದರಲ್ಲಿ ಶಿಲ್ಪವನ್ನು ನಿರ್ಮಿಸಲಾಗಿದೆ. ಭೈರವನ ತಲೆಯಲ್ಲಿನ ಗುಂಗುರು ಕೂದಲುಗಳನ್ನು ಮಣಿಪಟ್ಟಿಯಿಂದ ಕಟ್ಟಲಾಗಿದೆ. ತಲೆಯಲ್ಲಿ ಶಿವಲಿಂಗದ ಶಿಲ್ಪವಿದೆ. ಹಣೆಯಲ್ಲಿ ತ್ರಿನೇತ್ರ, ಕಿವಿಗಳಲ್ಲಿ ಮಕರ ಮತ್ತು ಸರ್ಪ ಕುಂಡಲಗಳಿವೆ. ವಿವಿಧ ಗಾತ್ರದ ಕಂಠಾಭರಣಗಳಿವೆ. ಭುಜಗಳಲ್ಲಿ ಆಭರಣಗಳು, ತೋಳು ಮತ್ತು ಮುಂಗೈಗಳಲ್ಲಿ ಕಡಗಗಳಿವೆ. ಕಂಠಾಭರಣದಲ್ಲಿ ಸಿಂಗಿ ನಾದವೂ ಇದೆ. ಹೃದಯಬಂಧ ಹಾಗೂ ಯಜ್ಞೋಪವೀತವಿದೆ. ಕಟೀಬಂದದಲ್ಲಿ ಗೆಜ್ಜೆಗಳಿವೆ (ಗೆಜ್ಜೆ ಉಡಿದಾರ) ತೊಡೆಗಳನ್ನು ಸರ್ಪವೊಂದು ಸುತ್ತಿಕೊಂಡಿದೆ. ಮುಂಗಾಲುಗಳಲ್ಲಿ ಚಿಕ್ಕ ಸರ್ಪಗಳನ್ನು ಹಾಗೂ ಕಡಗಾಭರಣಗಳನ್ನು ಪಾದದಲ್ಲಿ ಧರಿಸಲಾಗಿದೆ. ಎಡ ಪಾದದಲ್ಲಿ ಗಗ್ಗರವಿದೆ. ಎತ್ತರವಾದ ಪಾದರಕ್ಷೆಗಳನ್ನೂ ಧರಿಸಲಾಗಿದೆ. ಎಡಬದಿಯಲ್ಲಿ ಸರ್ಪವಿದೆ. ಸರ್ಪದ ಕುತ್ತಿಗೆಯಲ್ಲಿ ಕಂಠಾಭರಣವಿದೆ. ಶಿಲ್ಪದ ಕೆಳಭಾಗದಲ್ಲಿ ವೃಶ್ಚಿಕವಿದೆ. ಶಿಲ್ಪದ ಮೇಲ್ಭಾಗದಲ್ಲಿ ಮೂರು ಚೌಕಾಕಾರದ ರಂಧ್ರಗಳಿರುವವು.

ಶಿಖರಗಳು

ಮಾತಂಗೇಶ್ವರ ದೇವಾಲಯದ ಆವರಣದಲ್ಲಿ ಎರಡು ಶಿಖರಗಳಿವೆ. ದಕ್ಷಿಣ ದ್ವಾರದಲ್ಲಿ ಮಂಟಪವಿದೆ. ಮಂಟಪದ ಮೇಲೆ ದ್ರಾವಿಡ ವಿಮಾನ ಶೈಲಿಯ ಶಿಖರವಿದೆ. ಈ ಶಿಖರವನ್ನು

ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದ್ದು, ಇದರಲ್ಲಿ ಗಾರೆಯ ಶಿಲ್ಪಗಳಿವೆ. ಶಿಖರದ ಅಂಡಭಾಗದಲ್ಲಿ ಮಕರ ಫಲಕಗಳಿವೆ. ಕೆಳಭಾಗದಲ್ಲಿ ದೇವಕೋಷ್ಟಗಳು, ಕೋಷ್ಟಕಗಳಲ್ಲಿ ದೇವದೇವತೆಗಳು ಮತ್ತು ಕೈಮುಗಿದು ನಿಂತಿರುವ ಭಕ್ತರ ಶಿಲ್ಪಗಳಿವೆ.

ವೀರಭದ್ರ ದೇವಾಲಯ ಗರ್ಭಗೃಹದ ಮೇಲೆ ತ್ರಿತಳ ಶಿಖರವಿದೆ. ಈ ಶಿಖರವನ್ನು ಇಟ್ಟಿಗೆ ಗಾರೆಯಿಂದ ನಿರ್ಮಿಸಲಾಗಿದೆ. ದೇವಕೋಷ್ಟಗಳು ಹಾಗೂ ದೇವ ದೇವತೆಗಳ ಶಿಲ್ಪಗಳಿರುವವು. ಶಿಖರ ಭಾಗಶಃ ಜೀರ್ಣವಾಗಿದೆ.

ದೀಪ ಸ್ತಂಭಗಳು

ಈ ದೇವಾಲಯಕ್ಕೆ ಸಂಬಂಧಿಸಿದಂತೆ ಒಟ್ಟು ಐದು ದೀಪಮಾಲೆ ಸ್ತಂಭಗಳಿರುವವು. ದೇವಾಲಯದಲ್ಲಿ ಮೂರು ಸ್ತಂಭಗಳು, ಉತ್ತರ ದ್ವಾರದಲ್ಲಿನ ಸ್ತಂಭ ಬಿದ್ದು ಹೋಗಿದೆ. ದಕ್ಷಿಣ ದ್ವಾರದಲ್ಲಿನ ಸ್ತಂಭ ಸುಸ್ಥಿತಿಯಲ್ಲಿದೆ. ಈ ಸ್ತಂಭದಲ್ಲಿ ಭಕ್ತನ ಶಿಲ್ಪವಿದೆ.

ಶಾಸನಗಳು

ಮಾತಂಗ ಪರ್ವತ ಮತ್ತು ದೇವಾಲಯಕ್ಕೆ ಸಂಬಂಧಿಸಿದಂತೆ ಶಾಸನಗಳ ಸಮೂಹವೇ ಇಲ್ಲಿದೆ. ಸುಮಾರು ೨೫ಕ್ಕಿಂತಲೂ ಹೆಚ್ಚು ಶಾಸನಗಳಿವೆ. ಈ ಪರಿಸರದಲ್ಲಿ ಇಷ್ಟೊಂದು ಶಾಸನಗಳು ಒಂದೇ ಸ್ಥಳದಲ್ಲಿರುವುದು ಇದೊಂದೆ ಪರ್ವತವೆಂದು ಹೇಳಿದರೆ ತಪ್ಪಾಗಲಾರದು. ಇವುಗಳಲ್ಲಿ ಕನ್ನಡ, ನಾಗರಿ ಹಾಗೂ ತಮಿಳು ಲಿಪಿಯ ಶಾಸನಗಳಿವೆ.

ಪೂರ್ವ

ಮಾತಂಗ ಪರ್ವತದ ಪೂರ್ವದಿಕ್ಕಿನ ನೆಲಮಟ್ಟದಲ್ಲಿ ಪರ್ವತವನ್ನೇರಲು ಸೋಪಾನಗಳಿವೆ. ಈ ಸೋಪಾನದ ದಕ್ಷಿಣಕ್ಕೆ ಮೂರು ಮಂಟಪಗಳಿವೆ. ಈ ಮಂಟಪಗಳನ್ನು ಪ್ರಾಕೃತಿಕ ಗುಹೆಗೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಈ ಮಂಟಪಗಳ ಮುಂದೆ ಗಣೇಶ, ದೇವಿ, ನಾಗ ಮತ್ತು ಭಕ್ತದಂಪತಿಗಳ ಶಿಲ್ಪಗಳು ಹಾಗೂ ಗುಂಡಿನ ಮೇಲೆ ಶಿವಲಿಂಗವಿದೆ.

ಗಣೇಶ ಶಿಲ್ಪಗಳು

ಮುಖ್ಯವಾಗಿ ದೇವಿಯ ಶಿಲ್ಪದ ಎರಡೂ ಬದಿಗಳಲ್ಲಿ ಗಣೇಶನ ಶಿಲ್ಪಗಳಿವೆ. ಗಣೇಶ ಲಲಿತಾ ಸನದಲ್ಲಿ ಕುಳಿತಿದ್ದು ಅಂಕುಶ, ದಂತ, ಪಾಶ, ಮೊದಕಗಳನ್ನು ಕೈಗಳಲ್ಲಿ ಹೊಂದಿದ್ದು, ತಲೆಯಲ್ಲಿ ಕರಂಡ ಮಕಟವಿದೆ.

ದೇವಿಯ (ಕಾಳಿ) ಶಿಲ್ಪ

ಪೂರ್ವಾಭಿಮುಖವಾಗಿರುವ ದೇವಿ ಶಿಲ್ಪವನ್ನು ಪ್ರಾಕೃತಿಕ ಗುಂಡಿನ ಮೇಲೆ ನಿರ್ಮಿಸಲಾಗಿದೆ. ಶಿಲ್ಪದ ಮೇಲ್ಭಾಗದಲ್ಲಿ ಪ್ರಭಾವಳಿ ಇದ್ದು, ಮಕರವಿದೆ. ದೇವಿಯು

ಶಿಲ್ಪ ತ್ರಿಭಂಗದಲ್ಲಿ ನಿಂತಿದ್ದು, ದಶಭುಜಗಳಿವೆ. ದೇವಿಯು ಹತ್ತು ಕೈಗಳಲ್ಲಿ ವಿವಿಧ ಆಯುಧಗಳಾದ ಖಡ್ಗ-ಬಿಲ್ಲು-ಬಾಣ, ತ್ರಿಶೂಲ, ಡಮರು, ಪರಶು ಮುಂತಾದ ಆಯುಧಗಳನ್ನು ಹಿಡಿದಿರುವಳು. ಹಣೆಯಲ್ಲಿ ತ್ರಿನೇತ್ರವಿದೆ. ಕರ್ಣ ಕುಂಡಲಗಳು, ವಿವಿಧ ಕಂಠಾಭರಣಗಳನ್ನು ಧರಿಸಲಾಗಿದೆ. ತಲೆಯಲ್ಲಿ ಕರಂಡ ಮಕುಟವಿದೆ. ರುಂಡಮಾಲೆಯನ್ನು ಧರಿಸಿರುವಳು. ಹಾಗೂ ಪ್ರಭಾವಲಯವಿದೆ.[೨೧] ಕರಂಡ ಮುಕುಟದಲ್ಲಿ ಶಿವಲಿಂಗವಿದೆ. ರುಂಡಮಾಲೆ, ಕೈಗಳಲ್ಲಿ ಬಳೆಗಳು, ಕಟಿಹಾರ, ವಿವಿಧ ನೆರಿಗೆಗಳುಳ್ಳ ಸೀರೆಯನ್ನು ಧರಿಸಿರುವಳು, ಕಾಲ್ಗಡಗಳಿವೆ, ದೇವಿಯ ಶಿಲ್ಪವನ್ನು ಮಂಟಪದಲ್ಲಿ ನಿರ್ಮಿಸಲಾಗಿದೆ. ಭುಜದ ಎಡಭಾಗದಲ್ಲಿ ನಾಗಶಿಲ್ಪವಿದೆ. ದೇವಿಯ ಮುಖ ರೌದ್ರ ರೂಪದಲ್ಲಿದೆ ಹಾಗೂ ವೀರಾಸನದಲ್ಲಿ ನಿಂತಿರುವಳು. ನಾಗಶಿಲ್ಪ ಅರ್ಧ ಮಾನವ ಹಾಗೂ ಕೆಳ ಅರ್ಧಭಾಗ ಸರ್ಪದ ರೂಪದಲ್ಲಿದ್ದು, ಅಂಜಲಿ ಮುದ್ರೆಯಲ್ಲಿ ದೇವಿಗೆ ಕೈಮುಗಿತ್ತಿರುವಂತೆ ನಿರ್ಮಿಸಲಾಗಿದೆ. ಸ್ಥಳೀಯರು ದೇವಿಯನ್ನು ಹತ್ತು ಕೈ ಅಮ್ಮ ಎಂದು ಕರೆಯುತ್ತಾರೆ.

ಭಕ್ತ ದಂಪತಿಗಳ ಶಿಲ್ಪಗಳು

ಎರಡು ಭಕ್ತದಂಪತಿಗಳ ಶಿಲ್ಪಗಳಿದ್ದು, ದೇವಿಗೆ ಕೈಮುಗಿಯುವ ಭಂಗಿಯಲ್ಲಿದ್ದಾರೆ. ಒಂದು ಶಿಲ್ಪದಲ್ಲಿ ದಂಪತಿಗಳು ಸಮಭಂಗದಲ್ಲಿದ್ದು, ಅಂಜಲಿ ಮುದ್ರೆಯಲ್ಲಿ ನಿಂತಿರುವರು. ಇನ್ನೊಂದು ಶಿಲ್ಪದಲ್ಲಿ ದಂಪತಿಗಳು ಪದ್ಮಾಸನದಲ್ಲಿ ಕುಳಿತು, ಅಂಜಲಿ ಮುದ್ರೆಯಲ್ಲಿರುವರು.

ಶಿವಲಿಂಗ

ದೇವಿಯ ಶಿಲ್ಪದ ಸಮೀಪ ಉತ್ತರಕ್ಕೆ ಪ್ರಾಕೃತಿಕ ಗುಂಡಿನ ಮೇಲೆ ಶಿವಲಿಂಗವನ್ನು ನಿರ್ಮಿಸಲಾಗಿದೆ. ಚತುರಾಶ್ರಾಕಾರದ ಪೀಠದಲ್ಲಿ ಲಿಂಗವಿದೆ. ಈ ರೀತಿಯ ಲಿಂಗಗಳು ಉತ್ತರ, ದಕ್ಷಿಣ ಮತ್ತು ಪಶ್ಚಿಮ ದಿಕ್ಕಿನಲ್ಲಿವೆ.

ಪೂರ್ವ ದಿಕ್ಕಿನಲ್ಲಿ ಪರ್ವತಕ್ಕಿರುವ ಮಾರ್ಗ ಮಧ್ಯದಲ್ಲಿ ಮಂಟಪವಿದೆ. ಈ ಮಂಟಪದ ಬಳಿಯಲ್ಲಿ ಪ್ರಾಕೃತಿಕ ಗುಹೆ ಇದೆ. ಈ ಗುಹೆಯ ಒಳಭಾಗ ವಿಶಾಲವಾಗಿದೆ. ಇದರಲ್ಲಿರುವ ಗುಂಡಿನಮೇಲೆ ನಂದಿಯ ಮುಖದ ಶಿಲ್ಪವನ್ನು ನಿರ್ಮಿಸಲಾಗಿದೆ.

ಪಶ್ಚಿಮದಿಕ್ಕು

ಮಾತಂಗ ಪರ್ವತದ ಪಶ್ಚಿಮ ದಿಕ್ಕಿನಲ್ಲಿ ಗುಹೆಯಲ್ಲಿರುವ ಶಿವಲಿಂಗಗಳು ಹಾಗೂ ದೇವಿಯ ಶಿಲ್ಪಗಳು ಇವೆ.

ಶಿವಲಿಂಗ

ದಾರಿಯ ಬದಿಯಲ್ಲಿರುವ ಗುಹೆಯಲ್ಲಿ ಬಂಡೆಯಮೇಲೆ ಎರಡು ಶಿವಲಿಂಗಗಳನ್ನು

ನಿರ್ಮಿಸಲಾಗಿದೆ. ಚತುರಾಶ್ರ ಪೀಠದಲ್ಲಿ ಶಿವಲಿಂಗವಿದೆ ಹಾಗೂ ಇನ್ನೂ ಎರಡು ಶಿವಲಿಂಗಗಳಿದ್ದ ಗುರುತುಗಳಿವೆ. ಶಿವಲಿಂಗದ ನಾಲ್ಕು ಮೂಲೆಗಳಲ್ಲಿ ವೃತ್ತಾಕಾರದ ನಾಲ್ಕು ರಂಧ್ರಗಳಿವೆ. ಈ ರಂಧ್ರಗಳು ವಿಶೇಷ ಪೂಜೆಮಾಡುವ ಸಂದರ್ಭದಲ್ಲಿ ಮಂಟಪ ರಚನೆಗಾಗಿ ಮಾಡಿದವುಗಳಾಗಿವೆ. ಈ ಗುಹೆಯ ಬಳಿಯಲ್ಲಿ ಮಳೆಯ ನೀರನ್ನು ಸಂಗ್ರಹಿಸಲು ವೃತ್ತಾಕಾರದ ನೀರಿನ ಕೊಳಗಳಿವೆ.

ದೇವಿ (ಕಾಳಿ)ಯ ಶಿಲ್ಪಗಳು

ಶಿವಲಿಂಗವಿರುವ ಗುಹೆಯ ಪಶ್ಚಿಮಕ್ಕೆ ಸ್ವಲ್ಪ ಕೆಳಭಾಗದಲ್ಲಿ ಪ್ರಾಕೃತಿಕ ಬಂಡೆಯ ಮೇಲೆ ಎರಡು ದೇವಿಯ ಶಿಲ್ಪಗಳಿವೆ. ದೇವಿಯು ಪೀಠದಮೇಲೆ ಲಲಿತಾಸನದಲ್ಲಿ ಆಸೀನಳಾಗಿದ್ದಾಳೆ. ಪೀಠದ ಕಾಲುಗಳಲ್ಲಿ ಮಾನವ ರುಂಡಗಳ ಶಿಲ್ಪಗಳಿವೆ. ಹಾಗೂ ದೇವಿಯರು ತಮ್ಮ ಬಲಗಾಲಿನ ಪಾದವನ್ನು ರುಂಡದ ಮೇಲೆ ಇಟ್ಟಿರುವರು, ದೇವಿಗೆ ಚತುರ್ಭುಜಗಳಿದ್ದು, ಕೈಗಳಲ್ಲಿ ತ್ರಿಶೂಲ, ಡಮರು, ಖಡ್ಗ ಮತ್ತು ಕಪಾಲ ಪಾತ್ರೆಗಳಿವೆ. ತಲೆಯಮೇಲೆ ಉದ್ದನೆಯ ಕಿರೀಟಗಳಿವೆ. ತ್ರಿನೇತ್ರಗಳು ಕರ್ಣ ಕುಂಡಲಗಳು, ಕಂಠಾಭರಣಗಳು, ವೈಜಯಂತಿ ಮಾಲೆ ಇದೆ. ದೇವಾಲಯದ ಶಿಲ್ಪಗಳಿಗೆ ಪ್ರಭಾವಳಿ ಇದ್ದು, ಲಲಾಟದಲ್ಲಿ ಮಕರವಿದೆ.

ಉತ್ತರದಿಕ್ಕು

ವಿರೂಪಾಕ್ಷ ತೇರುಬೀದಿಯಿಂದ ಮಾತಂಗ ಪರ್ವತಕ್ಕೆ ಹೋಗುವ ದಾರಿಯ ಎಡಬದಿಯಲ್ಲಿ ಎರಡು ಮಂಟಪಗಳಿವೆ. ಇದರಲ್ಲಿ ಒಂದು ಮಂಟಪ ಕಲ್ಲುಕುಟಿಗ ಬಸಮಾಡಿದ ಮಂಟಪವೆಂದು ಶಾಸನವಿದೆ. ಹಾಗೂ ಇನ್ನೊಂದು ಮಂಟಪವು ಗುಹೆಗೆ ಹೊಂದಿಕೊಂಡಿದೆ. ಈ ಗುಹೆಯ ಎಡಭಾಗದಲ್ಲಿ ಚಿಕ್ಕದೊಂದು ಗುಹೆಯಲ್ಲಿ ಬಾವಿ ಇದೆ. ಇಲ್ಲಿರುವ ಶಾಸನದಲ್ಲಿ ಗಂಗಾಧರ ದೇವರ ಪ್ರತಿಷ್ಠ ಎಂದಿದ್ದು, ಇಲ್ಲಿ ಗಂಗಾಧರ ದೇವರನ್ನು ಪ್ರತಿಷ್ಠಾಪಿಸಿದ್ದರೆಂದು ತಿಳಿಯಬಹುದಾಗಿದೆ ಹಾಗೂ ಈ ಬಾವಿಗೆ ಅಕ್ಕಮಹಾದೇವಿಯರ ಬಾವಿ, ಕೆಳಬಾವಿ ಎಂದು ಇಲ್ಲಿರುವ ಶಾಸನ ಉಲ್ಲೇಖಿಸುತ್ತದೆ. ಶಿವಶರಣೆ ಅಕ್ಕಮಹಾದೇವಿಯರು ಈ ಸ್ಥಳದಲ್ಲಿ ವಾಸವಾಗಿದ್ದಿರಬಹುದಾದ ಕುರುವಾಗಿದೆ.

ಎದುರು ಬಸವಣ್ಣನ ಬಳಿಯಿಂದ ಅಚ್ಯುತರಾಯ ದೇವಾಲಯಕ್ಕೆ ಹೋಗುವ ಮಾರ್ಗದ ದಕ್ಷಿಣಕ್ಕೆ ಮಾತಂಗ ಪರ್ವತದಲ್ಲಿ ಗುಹೆ ಇದೆ. ಈ ಗುಹೆಯನ್ನು ತಿಂತಿಣಿ ಕರಣಯ್ಯನ ಮಠವೆಂದು ಇಲ್ಲಿರುವ ಶಾಸನದಲ್ಲಿ ಉಲ್ಲೇಖವಿದೆ. ಚಿಕ್ಕಗೋಡೆಯನ್ನು ನಿರ್ಮಿಸಿ ಗುಹೆಯನ್ನು ಎರಡು ಭಾಗಗಳಾಗಿ ಮಾಡಿರುವರು. ಇದರಲ್ಲಿ ಪೀಠವಿದೆ. ಗುಹೆಯ ಮುಂದಿನ ಗುಂಡಿನ ಮೇಲೆ ಗಣೇಶನ ಶಿಲ್ಪವಿದೆ ಹಾಗೂ ಶಿವಲಿಂಗವಿದ್ದ ಪೀಠಭಾಗವಿದೆ ಹಾಗೂ ಕುದುರೆ ಕಟ್ಟುವ ಕಲ್ಲುಗಳಿವೆ.

ವೀರಭದ್ರ, ಶಿವಲಿಂಗ, ನಂದಿ, ಗಣೇಶ

ಮಾತಂಗ ಪರ್ವತವನ್ನೇರುವ ದಕ್ಷಿಣ ದಿಕ್ಕಿನ ಮಾರ್ಗದಲ್ಲಿ ಪ್ರಥಮವಾಗಿ ಪ್ರಾಕೃತಿಕ ಗುಂಡಿಗೆ ನಿರ್ಮಿಸಲಾಗಿರುವ ಎರಡು ಅಂಕಣದ ಮಂಟಪವಿದೆ. ಈ ಮಂಟಪದ ಒಂದು ಅಂಕಣದಲ್ಲಿನ ಗುಂಡಿನ ಮೇಲೆ ವೀರಭದ್ರ, ದಕ್ಷಬ್ರಹ್ಮ, ಶಿವಲಿಂಗ, ನಂದಿ ಹಾಗೂ ಗಣೇಶನ ಶಿಲ್ಪಪಟ್ಟಿಕೆ ಇದೆ. ಈ ಪಟ್ಟಿಕೆಯ ಕೆಳಭಾಗದಲ್ಲಿ ಭಕ್ತಳೊಬ್ಬಳ ಶಿಲ್ಪ ಹಾಗೂ ಶಾಸನವಿದೆ. ಈ ಶಾಸನ ಉಲ್ಲೇಖಿಸಿದಂತೆ 'ಶ್ರೀ ವೀರಾಯಮ್ಮ, ವೀರಪ, ವೀರಾಳಯಮ್ಮ' ಎಂದಿದೆ. ವೀರಾಳಯಮ್ಮ ಎಂಬ ಭಕ್ತೆ ದೇವತಾ ಶಿಲ್ಪಗಳ ಪಟ್ಟಿಕೆಯನ್ನು ನಿರ್ಮಿಸಿ ಮಂಟಪವನ್ನು ಕಟ್ಟಿಸಿರಬಹುದಾಗಿದೆ. ಮಾತಂಗೇಶ್ವರ ದೇವಾಲಯದಲ್ಲಿಯೂ ವೀರಭದ್ರ, ಮಾತಂಗೇಶ್ವರ, ಗಣೇಶರ ದೇವಾಲಯಗಳಿವೆ. ಇಲ್ಲಿರುವ ದೇವತಾಮೂರ್ತಿಗಳನ್ನು ಇಲ್ಲಿ ನಿರ್ಮಿಸಲಾಗಿದೆ. ಕಾರಣ ಪರ್ವತದ ಮೇಲೆ ಹೋಗಲು ಸಾಧ್ಯವಾಗದವರು ಕೆಳಭಾಗದಲ್ಲಿರುವ ಮಾತಂಗೇಶ್ವರ ದೇವರಿಗೆ ವಂದಿಸುವ ಒಂದು ಸಂಪ್ರದಾಯದ ಪ್ರತೀಕವಾಗಿಯೂ ನಿರ್ಮಾಣ ಮಾಡಲಾಗಿದೆ. ವೀರಾಳಯಮ್ಮನು ಈ ದೇವತಾ ಪಟ್ಟಿಕೆಯ ಕೆಳಭಾಗದಲ್ಲೇ ಸಮಭಂಗದಲ್ಲಿ ಕೈಮುಗಿದು (ಅಂಜಲಿ ಮುದ್ರ) ನಿಂತಿರುವಳು.

ವೀರಭದ್ರ ಮತ್ತು ನಂದಿ

ದಕ್ಷಿಣ ದಿಕ್ಕಿನ ಸೋಪಾನಗಳನ್ನು ಹತ್ತಿ ಮೇಲೆ ಹೋಗುವ ಮಾರ್ಗ ಮಧ್ಯದಲ್ಲಿ ಜೀರ್ಣವಾದ ಮಂಟಪದ ಅಧಿಷ್ಠಾನವಿದೆ. ಇದರ ಸಮೀಪದಲ್ಲಿರುವ ಪ್ರಾಕೃತಿಕ ಗುಹೆಯಲ್ಲಿನ ಗುಂಡಿನ ಮೇಲೆ ವೀರಭದ್ರ ದೇವರ ಶಿಲ್ಪವನ್ನು ನಿರ್ಮಿಸಲಾಗಿದೆ.

ಅಕ್ಕಮಹಾದೇವಿಯರ ಬಾವಿ

ವಿರೂಪಾಕ್ಷ ತೇರುಬೀದಿಯಿಂದ ಮಾತಂಗ ಪರ್ವತಕ್ಕೆ ಹೋಗುವ ದಾರಿ (ಮೆಟ್ಟಿಲುಗಳ ಬಳಿ)ಯಲ್ಲಿ ಪ್ರಾಕೃತಿಕ ಗುಹೆಯಲ್ಲಿ ನೀರಿನ ಬಾವಿಯೊಂದಿದ್ದು ಇಲ್ಲಿರುವ ಶಾಸನ ಉಲ್ಲೇಖಿಸುವಂತೆ "ಅಕ್ಕಮಹಾದೇವಿಯರ ಬಾವಿ ಕೆಳಬಾವಿ, ಗಂಗಾಧರ ದೇವರ ಪ್ರತಿಷ್ಠೆ" ಎಂದಿದೆ. ಈ ಬಾವಿಯಲ್ಲಿ ಎಲ್ಲಾ ಕಾಲದಲ್ಲಿಯೂ ನೀರಿನ ಸಂಗ್ರಹವಿದ್ದು, ತಂಪಾಗಿರುವುದು.[೨೨]

ದಕ್ಷಿಣ ಭಾಗ

ಮಾತಂಗ ಪರ್ವತದ ದಕ್ಷಿಣ ಭಾಗದಲ್ಲಿ ಅರಮನೆಯ ಆವರಣದಿಂದ ದಾರಿ ಇದೆ. ಪರ್ವತವನ್ನೇರಲು ಉತ್ತಮವಾದ ಸೋಪಾನಗಳನ್ನು ನಿರ್ಮಿಸಲಾಗಿದೆ. ಇವು ಇಂದಿಗೂ ಸುಸ್ಥಿತಿಯಲ್ಲಿವೆ. ಪಶ್ಚಿಮ ಮತ್ತು ಪೂರ್ವ ಭಾಗದ ಸೋಪಾನಗಳಿಗಿಂತ ಅತ್ಯುತ್ತಮವಾಗಿದೆ. ಪ್ರವೇಶದ್ವಾರವಿದೆ.

ಮಾತಂಗೇಶ್ವರ ದೇವರ ದಿಡ್ಡಿ

ಮಾತಂಗ ಪರ್ವತದ ದಕ್ಷಿಣ ದಿಕ್ಕಿನಲ್ಲಿ ನೆಲಮಟ್ಟದಲ್ಲಿ ಬಾಗಿಲು (ದಿಡ್ಡಿ) ಇದ್ದು, ಮಾತಂಗೇಶ್ವರ ದೇವರ ದಿಡ್ಡಿ ಎಂದು ಉಲ್ಲೇಖಿಸುವ ಶಾಸನ ಹಾಗೂ ಚಿಕ್ಕದಾದ ಬಾಗಿಲು ಇರುವುದು. ಈ ಪರ್ವತಕ್ಕೆ ಪ್ರತ್ಯೇಕ ಕೋಟೆ ಇದ್ದು, ಪ್ರವೇಶಕ್ಕಾಗಿ ದಿಡ್ಡಿಯನ್ನು ನಿರ್ಮಾಣ ಮಾಡಲಾಗಿದೆ.[೧೯]

ಶಿವಲಿಂಗ ವೀರಭದ್ರ ಹಾಗೂ ನಂದಿ

ಮಾತಂಗ ಪರ್ವತಕ್ಕೆ ಹೋಗುವ ದಾರಿಯಲ್ಲಿ ಕಾಲುವೆಯ ಗುಂಡಿನ ಮೇಲೆ ಶಿವಲಿಂಗವನ್ನು ನಿರ್ಮಿಸಲಾಗಿದೆ. ಈ ಲಿಂಗ ಶ್ರೀ ವಿರೂಪಾಕ್ಷ ಎಂದು ಉಲ್ಲೇಖಿಸುವ ಶಾಸನ ಲಿಂಗದ ಸನಿಹದಲ್ಲಿದೆ. ವೀರಭದ್ರನು ತ್ರಿಭಂಗದಲ್ಲಿ ನಿರ್ಮಿಸಲಾಗಿದೆ. ವೀರಭದ್ರನಿಗೆ ದ್ವಿಭುಜಗಳಿವೆ. ಬಲಗೈಯಲ್ಲಿ ಬಾಗಿದ ಉದ್ದನೆಯ ಖಡ್ಗ ಹಾಗೂ ಎಡಗೈಯಲ್ಲಿ ತ್ರಿಶೂಲ, ಮುಂಗೈನಲ್ಲಿ ನೇತಾಡುವ ಕಪಾಲವಿದೆ. ವಿಶಾಲವಾದ ಮುಖವಿದ್ದು, ಹಣೆಯಲ್ಲಿ ತ್ರಿನೇತ್ರವಿದೆ. ತಲೆಯಮೇಲೆ ಶಿವಲಿಂಗ, ಶಿವಲಿಂಗದ ಬಲಗೈಗಳಲ್ಲಿ ಚಂದ್ರ ಸೂರ್ಯರ ಚಿತ್ರಗಳಿವೆ. ಉದ್ದನೆಯ ಕಿವಿಗಳಿದ್ದು, ಕಿವಿಗಳಲ್ಲಿ ಮುತ್ತಿನಾಭರಣಗಳಿವೆ. ಕೊರಳಲ್ಲಿ ವಿವಿಧ ಬಗೆಯ ರುದ್ರಾಕ್ಷಿ ಮಾಲೆಗಳು, ಕಂಠಾಭರಣಗಳಿವೆ. ಭುಜಗಳಲ್ಲಿ ರುದ್ರಾಕ್ಷಿ ಮಾಲೆಗಳು, ಕೈತೋಳು ಹಾಗೂ ಮುಂಗೈಗಗಳಲ್ಲಿ ರುದ್ರಾಕ್ಷಿ ಮಾಲೆಗಳನ್ನು ಧರಿಸಲಾಗಿದೆ. ಹೃದಯಬಂಧ, ಕಟೀಹಾರಗಳಿವೆ. ಕಟೀಹಾರದಲ್ಲಿ ಕಠಾರಿಯೊಂದನ್ನು ಸಿಕ್ಕಿಸಲಾಗಿದೆ. ದೋತರವನ್ನು ಹುಟ್ಟಿದ್ದು ವೀರಗಚ್ಚೆಯನ್ನು ಹಾಕಲಾಗಿದೆ. ಮುಂಗಾಲುಗಳಲ್ಲಿ ಜೋಡಿ ಕಡಗಗಳಿವೆ. ಪಾದಗಳಲ್ಲಿ (ಆವುಗೆ) ಪಾದರಕ್ಷೆಗಳಿವೆ. ಈ ಶಿಲ್ಪದ ಮಾದರಿಯಲ್ಲಿಯೇ ಮೇಲಿನ ದೇವಾಲಯದಲ್ಲಿರುವ ಮೂಲ ವೀರಭದ್ರ ಹಾಗೂ ಭದ್ರಕಾಳಿಯ ಶಿಲ್ಪಗಳಿವೆ.

ಈ ವೀರಭದ್ರ ಶಿಲ್ಪದ ಎದುರಿಗಿರುವ ಇನ್ನೊಂದು ಗುಂಡಿನ ಮೇಲೆ ಮಲಗಿರುವ ನಂದಿ ಶಿಲ್ಪವಿದೆ. ಬಲಗಾಲನ್ನು ಮುಂದೆಮಾಡಿ ಮಲಗಿರುವ ನಂದಿಯ ಶಿಲ್ಪದ ಕೊರಳಲ್ಲಿ ಗಂಟೆ, ಕೊರಳ ಪಟ್ಟಿಗಳು, ಗಂಟೆಯ ಸರಗಳಿಂದ ಅಲಂಕೃತವಾಗಿವೆ. ಈ ಶಿಲ್ಪದ ಕೆಳಭಾಗದಲ್ಲಿ 'ಯಿರುಪಾಳಕ್ಕ'' ಎಂಬ ಒಂದು ಸಾಲಿನ ಶಾಸನವಿದೆ.

ಯಿರುಪಾಳಕ್ಕ

ವೀರಭದ್ರ ದೇವರ ಶಿಲ್ಪವಿರುವ ಗುಂಡಿನ ಎಡಭಾಗದಲ್ಲಿರುವ ಗುಂಡಿನ ಮೇಲೆ ರೇಖಾಚಿತ್ರದಲ್ಲಿ ನಿರ್ಮಿಸಲಾಗಿರುವ ಸ್ತ್ರೀಯ ಶಿಲ್ಪವಿದೆ. ಇದರ ಬಳಿಯಲ್ಲಿ 'ಶ್ರೀಯಿರು ಪಾಳಕ್ಕ' ಎಂದು ಶಾಸನವಿದೆ. ಈ ರೀತಿಯ ಇನ್ನೊಂದು ಶಾಸನ ಎದುರಿನ ನಂದಿಯ ಶಿಲ್ಪದ ಕೆಳಭಾಗದಲ್ಲಿ ಇದೆ. ಯಿರುಪಾಳಕ್ಕ ಎಂಬ ಭಕ್ತ ಸ್ತ್ರೀಯಳು ಇಲ್ಲಿರುವ ವೀರಭದ್ರ ಮತ್ತು ನಂದಿಯ ಶಿಲ್ಪಗಳನ್ನು ನಿರ್ಮಾಣ ಮಾಡಿರುವಂತಿದೆ. ಈ ಶಿಲ್ಪದಲ್ಲಿ ಸ್ತ್ರೀಯು ಅಂಜಲಿಮುದ್ರದಲ್ಲಿ ನಿಂತಿರುವಳು. ವೀರಭದ್ರ ದೇವರಿಗೆ ಕೈಮುಗಿಯುತ್ತಿರುವಳು.

ನಂದಿ ಶಿಲ್ಪ

ವೀರಭದ್ರನ ಶಿಲ್ಪದ ಬಳಿಯಲ್ಲಿರುವ ಇನ್ನೊಂದು ಗುಂಡಿನ ಮೇಲೆ ನಂದಿಯ ಶಿಲ್ಪವಿದೆ. ಈ ಶಿಲ್ಪವನ್ನು ಮಂಟಪದ ಆಕಾರವಿರುವ ರೇಖಾಚಿತ್ರದ ಒಳಭಾಗದಲ್ಲಿದೆ. ಎರಡೂ ಬದಿಯ ಸ್ತಂಬಗಳ ಮೇಲೆ ಮಕರ ತೋರಣವಿದೆ. ಚಂದ್ರ ಮತ್ತು ಸೂರ್ಯರ ಶಿಲ್ಪಗಳಿವೆ. ಮಲಗಿರುವ ನಂದಿಯ ಶಿಲ್ಪವು ಕೊರಳ ಪಟ್ಟಿಗಳು, ಗಂಟೆಯ ಸರಗಳಿಂದ ಅಲಂಕೃತವಾಗಿದೆ. ನಂದಿಯೂ ಎಡಗಾಲನ್ನು ಮುಂದೆ ಮಾಡಿದೆ, ಬಲ ತೊಡೆಯ ಮೇಲೆ ಶಿವಲಿಂಗದ ಮುದ್ರೆ ಇದೆ. ನಂದಿಯ ಮುಂಭಾಗದಲ್ಲಿ ಭಕ್ತನೊಬ್ಬನ ಶಿಲ್ಪವಿದೆ. ಭಕ್ತನು ಸಮಭಂಗದಲ್ಲಿ ನಿಂತು ಕೈಮುಗಿಯುತ್ತಿದ್ದಾನೆ. ಭಕ್ತನು ತನ್ನ ಮುಂಗಾಲು, ಮುಂಗೈಗಳಲ್ಲಿ ಕಡಗಾಭರಣಗಳನ್ನು ತಲೆಯ ಮೇಲೆ ಶಿವಲಿಂಗವನ್ನು ಹೊತ್ತು ನಿಂತಿರುವನು. ಇದೊಂದು ವಿಶಿಷ್ಟ ರೀತಿಯ ಮಾದರಿಯ ಶಿಲ್ಪ. ಶಿಲ್ಪದ ಮೇಲ್ಭಾಗದ ಎರಡೂ ಬದಿಯಲ್ಲಿ ಚಿಕ್ಕ ರಂಧ್ರಗಳಿದ್ದು, ಪೂಜೆ ಮಾಡುವಾಗ ಪುಷ್ಪಮಾಲೆಯನ್ನು ಧರಿಸುವುದಕ್ಕಿದೆ.

ಜಾಲಂದರ

ವೀರಭದ್ರ ದೇವಾಲಯದ ಬಿತ್ತಿಯಲ್ಲಿ ಚೌಕಾಕಾರದ ಜಾಲಂದರವಿದೆ. ಈ ಮಾದರಿಯ ಜಾಲಂದರಗಳನ್ನು ಹೇಮಕೂಟದಲ್ಲಿರುವ ವಿಜಯನಗರ ಪೂರ್ವದ ಕಾಲದ ದೇವಾಲಯಗಳಲ್ಲಿ ಕಾಣಬಹುದಾಗಿದೆ.

ಕೊಳಗಳು

ಮಾತಂಗ ಪರ್ವತದ ಮೇಲೆ ದೇವಾಲಯದ ಉತ್ತರ ದಿಕ್ಕಿನಲ್ಲಿ ಪ್ರಾಕೃತಿಕ ಬಂಡೆಯ ಮೇಲೆ ಮಳೆಯ ನೀರು ಶೇಖರವಾಗಲು ಅನುಕೂಲವಾಗುವಂತೆ ತಡೆಗೋಡೆಗಳನ್ನು ನಿರ್ಮಿಸಲಾಗಿದೆ. ಈ ನೀರು ದೇವಾಲಯಕ್ಕೆ ನೀರಿನ ಅವಶ್ಯಕತೆಯನ್ನು ಪೂರೈಸುತ್ತಿತ್ತು. ದೇವಾಲಯದ ದಕ್ಷಿಣಭಾಗದಲ್ಲಿಯೂ ಆಯಾತಾಕಾರದ ಕಲ್ಲಿನ ನೀರು ಸಂಗ್ರಹ ತೊಟ್ಟಿಗಳಿವೆ. ಕೆಳಭಾಗದಲ್ಲಿ ಅಕ್ಕಮಹಾದೇವಿಯರ ಬಾವಿಯಲ್ಲಿ ಸದಾಕಾಲವೂ ನೀರಿನ ಸಂಗ್ರಹವಿರುವುದು.

ನಂದಿ ಶಿಲ್ಪಗಳು


ಮಾತಂಗ ಪರ್ವತದಲ್ಲಿ ಸುಮಾರು ೧೨ಕ್ಕಿಂತಲೂ ಹೆಚ್ಚು ನಂದಿ ಶಿಲ್ಪಗಳಿವೆ. ಕೆಲವು ಬಿಡಿಶಿಲ್ಪಗಳು ಇನ್ನೂ ಕೆಲವು ಪ್ರಾಕೃತಿಕ ಬಂಡೆಯ ಮೇಲೆ ನಿರ್ಮಿಸಲಾಗಿದೆ.

ಮಾತಂಗಪರ್ವತದ ಈ ಅಧ್ಯಯನದಿಂದ ತಿಳಿದುಬರುವ ಅಂಶದಿಂದ ಕ್ರಿ.ಶ. ೧೨-೧೩ನೇ ಶತಮಾನದಲ್ಲಿ ಈ ಪ್ರಾಂತವನ್ನು ಮಾತಂಗಬೂಧರವೆಂದು ಕರೆಯಲಾಗುತ್ತಿತ್ತು. ಈ ಅಂಶವನ್ನು ಜೈನಪುರಾಣ ಗ್ರಂಥಗಳು ಹಾಗೂ ಕ್ರಿ.ಶ. ೧೧೯೦ ಚನ್ನರಾಯಪಟ್ಟಣದಲ್ಲಿ

ನಂ. ೧೭೯ರ ಶಾಸನದಲ್ಲಿ ಹೊಯ್ಸಳ ಬಲ್ಲಾಳನು ಮಾತಂಗ ಬೂದರದಲ್ಲಿನ ದೊರವದಿ, ಕುರುಗೋಡು ಸ್ಥಳಗಳ ಮೇಲೆ ಯುದ್ಧ ಮಾಡಿದನೆಂದಿದೆ. ಹಾಗೂ ಕ್ರಿ.ಶ. ೧೧೯೯ರಲ್ಲಿ ಕುರುಗೋಡಿನ ಸಿಂದರ ಸಾಮಂತ ಅಧಿಕಾರಿಗಳು ಮಾದೆಯನಾಯಕ ಲಖ್ಖೆಯ ನಾಯಕರು ಮಾತಂಗ ಪರ್ವತವನ್ನು ಪ್ರತಿಪಾಳಿಸುತ್ತಿದ್ದರೆಂದು ಉಲ್ಲೇಖವನ್ನು ಗಮನಿಸಿದಾಗ ಮಾತಂಗ ಪರ್ವತ ಪೌರಾಣಿಕ, ಧಾರ್ಮಿಕ ಹಾಗೂ ರಾಜಕೀಯ ಇತಿಹಾಸದಲ್ಲಿ ಮಹತ್ತರ ಸ್ಥಾನವನ್ನು ಪಡೆದುದರ ಹಿನ್ನೆಲೆಯನ್ನು ಗಮನಿಸಿದಾಗ ಇದರ ಮಹತ್ವದ ಅರಿವು ಉಂಟಾಗುತ್ತದೆ. ಈ ಪರ್ವತವೂ ಇಂದಿಗೂ ಈ ಪರಿಸರದಲ್ಲಿ ಮಾನ್ಯತೆಯನ್ನು ಪಡೆದಿದೆ. ಪರ್ವತಕ್ಕಿರುವ ಮೂರು ಮಾರ್ಗಗಳಲ್ಲಿ ಮೆಟ್ಟಿಲು (ಸೋಪಾನ)ಗಳನ್ನು ಸಂರಕ್ಷಿಸಿದರೆ ಸಾಮಾನ್ಯ ಪ್ರವಾಸಿಗರು ಈ ಪರ್ವತವನ್ನೇರಿ ಈ ಪರಿಸರದ ಪರ್ವತಮಯ ಹಾಗೂ ದೇವಾಲಯಗಳ ಪಕ್ಷಿನೋಟವನ್ನು ವೀಕ್ಷಿಸಲು ಅನುವು ಮಾಡಿಕೊಟ್ಟಂತಾಗುತ್ತದೆ.




ಮತಂಗೇಶ್ವರ ದೇವಾಲಯದ ಸ್ಥೂಲನಕ್ಷೆ



ಮತಂಗೇಶ್ವರ ದೇವಾಲಯದ ಸೀಳುನೋಟ



ಮತಂಗ ಪರ್ವತ



ವಿರೂಪಾಕ್ಷ ದೇವಾಲಯ ಮತಂಗ ಪರ್ವತದ ಮೇಲಿನಿಂದ ಕಾಣುವ ದೃಶ್ಯ



ವೀರಭದ್ರ ದೇವಾಲಯದ ಶಿಖರ



ದಕ್ಷಿಣ ದ್ವಾರದಲ್ಲಿನ ಗೋಪುರ



ವೀರಭದ್ರ ದೇವಾಲಯದಲ್ಲಿನ ಭದ್ರಕಾಳಿ



ಸ್ಕಂದ ದೇವಾಲಯದ ಬಳಿಯ ಕಾಲಭೈರವ



ಪೂರ್ವದಿಕ್ಕಿನ ಗುಹಮಂಟಪ




ಮಾತಂಗ ಪರ್ವತದ ಪೂರ್ವ ದಿಕ್ಕಿನ ದೇವಿ (ಕಾಳಿ)



ಗಂಗಾಧರ ದೇವರ ಗುಡಿ ಮತ್ತು ಅಕ್ಕಮಹಾದೇವಿ ಬಾವಿ



ಉತ್ತರ ದಿಕ್ಕಿನ ಗುಹೆಯ ಮುಂದಿನ ಗಣೇಶ



ದಕ್ಷಿಣ ದಿಕ್ಕಿನ ಮೆಟ್ಟಿಲುಗಳ ಬಳಿಯ ವೀರಭದ್ರ



ಮತಂಗೇಶ್ವರ ದೇವರ ದಿಡ್ಡಿ



ನಂದಿ ಹಾಗೂ ಭಕ್ತ

ಅಡಿಟಿಪ್ಪಣಿಗಳು

೧. Vijayanagara Progriss of Research ೧೯೮೩-೮೪, No. ೪-೫೫
Vijayanagara Progress of Rerearch ೧೯೮೬-೮೭, No. ೨೦
೨. ವಾಲ್ಮೀಕಿ ರಾಮಾಯಣ ಅರಣ್ಯಕಾಂಡ, ಕಿಷ್ಕಿಂದ ಕಾಂಡ
ರಾ.ಸತ್ಯನಾರಾಯಣ, ೧೯೯೮, 'ಬೃಹದ್ದೇಶಿ', ಪು. ೬, ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬೆನಗಲ್ ಶ್ಯಾಮರಾವ್, ಪಾನ್ಯಂ ಸುಂದರಶಾಸ್ತ್ರಿ, ೧೯೭೭, ಪುರಾಣನಾಮ ಚೂಡಾಮಣಿ, ಪು. ೪೪೪, ೪೬೧-೬೨
೩. ವ್ಯಾಸಭಾರತ ಆರಿಪರ್ವ, ೭೧,೩೧ ಪು. ೩
೪. ಬೃಹದ್ದೇಶಿ, ಪು. ೬
೫. ಅದೇ, ಪು. ೬
೬. ಪೂರ್ವೋಕ್ತ, ಪು. ೯-೧೫
೭. ದೇವರ ಕೊಂಡಾರೆಡ್ಡಿ, ೧೯೯೭, ವಿಜಯನಗರ ಅಧ್ಯಯನ-೨, ಪು. ೧೧೧
೮. ಶ್ರೀಗುರು ಓಂ ಸಿದ್ಧಲಿಂಗೇಶ್ವರ ಸ್ವಾಮಿಗಳು, ೧೯೮೩, ಪಂಪಾ ಮಹಾತ್ಮೆ, ಪು. ೩೭೯
೯. ಕಣ್ಣನ್ ಕೆ.ಎಸ್. ೨೦೦೧, ಅಹೋಬಲನ ವಿರೂಪಾಕ್ಷ ವಸಂತೋತ್ಸವ ಚಂಪು, ಪೀಠಿಕೆ, ಪು.೩೪
೧೦. ದೇವರ ಕೊಂಡಾರೆಡ್ಡಿ, ೧೯೯೭, ವಿಜಯನಗರ ಅಧ್ಯಯನ-೨, ಪು. ೧೧೨
೧೧. John M. Fritz, ೧೯೯೬, Vijayanagara Progriss of Research, ೧೯೮೮-೯೧, P. ೪೩

೧೨. Epigraphia Carnatica, Vol-V. Channarayapattana, No. ೧೭೯

೧೩. Annual Report of South Indian Epigraphy, ೧೮೮೯, No. ೩೧
South Indian Inscriprims, Vo-IV, No.೨೬೦
Inscriptions of Karnataka, Vo-I, ೧೯೯೬, No.೯೭

೧೪. ನರಸಿಂಹ ಡಬ್ಲ್ಯೂ.ಎಸ್, ೧೯೯೬, ವಿಜಯನಗರ ಅಧ್ಯಯನ-೨

೧೫. Vijayanagara Progress of Research ೧೯೮೩-೮೪, No.೪-೫೩
Vijayanagara Progress of Research ೧೯೮೬-೮೭, No.೨೦
C.S.Patil, ೧೯೯೬, Inscriptions of Karnataka Vo-I, No.೨೪-೨೫೫

೧೬. Vijayanagara Progress of Rescarch, ೧೯೮೬-೮೭, No.೨೦

೧೭. Vijayanagara Progress of Rescarch, ೧೯೮೩-೮೪, No.೪೫

೧೮. Vijayanagara Progress of Rescarch, ೧೯೮೩-೮೪, No.೩೭, ೩೮
Inscriptions of Karnataka Vo-I, No.I, ೧೯೯೬, No.೨೪-೨೪೪

೧೯. Vijayanagara Progress of Research ೧೯೭-೮೩, P-೩-೪೦

೨೦. Anila Vergees, ೧೯೯೫, Religious Traditions at Vijayanagara, P.೨೪

೨೧. George Michell, Vasundara Fillozat, ೧೯೮೧
Splendours of the Vijayanagara Empire, P.೮, Marg Publication
Anna L.Dallapilcola, Anila Vergese : ೧೯೯೮, Sculpture at Vijayanagara, P. ೬೫, Philli P.B. Wagoner, ೨೦೦೧ George Michell Vijayanagara Areheteherd Inventory ot in Sacread Centre, P. ೧೦-೧೦೩

❖ ❖

೨೭

ವಿಜಯನಗರ ಕಾಲದ ಚಿತ್ರದುರ್ಗ : ರಾಜಕೀಯ ಅವಲೋಕನ

ಪ್ರೊ. ಬಿ.ರಾಜಶೇಖರಪ್ಪ

ಕರ್ನಾಟಕದ ಮಧ್ಯಭಾಗದಲ್ಲಿ ನೆಲೆಗೊಂಡಿರುವ ಚಿತ್ರದುರ್ಗ ಬೇರೆ ಬೇರೆಯ ಕಾಲಘಟ್ಟಗಳಲ್ಲಿ ಹೇಗೆ ಸಾಗಿ ಬಂದಿತೆಂಬುದನ್ನು ನೋಡುವಾಗ ವಿಜಯನಗರ ಸಾಮ್ರಾಜ್ಯದ ಕಾಲಾವಧಿ ಗಮನ ಸೆಳೆಯುತ್ತದೆ. ಚಿತ್ರದುರ್ಗವು ಕರ್ನಾಟಕದ ಎಲ್ಲ ಪ್ರಮುಖ ರಾಜವಂಶಗಳ ಚಕ್ರವರ್ತಿಗಳ ಅಧೀನರ ಆಳ್ವಿಕೆಯಲ್ಲಿ ಸಾಗಿಬಂದಂತೆ ವಿಜಯನಗರದ ಚಕ್ರವರ್ತಿಗಳ ಅಧೀನರ ಆಳ್ವಿಕೆಯಲ್ಲೂ ಸಾಗಿಬಂದದ್ದನ್ನು ಕಾಣುತ್ತೇವೆ. ಕಲ್ಯಾಣ ಚಾಳುಕ್ಯರ ಮತ್ತು ಹೊಯ್ಸಳರ ಕಾಲದಲ್ಲಿ ಹೇಗೊ ಹಾಗೆ ವಿಜಯನಗರ ಕಾಲದಲ್ಲಿ ಕೂಡ ಇದು ಚಕ್ರವರ್ತಿ ಮನೆತನದವರ, ಹತ್ತಿರದ ಬಂಧುವರ್ಗದವರ ನೇರ ಉಸ್ತುವಾರಿಯಲ್ಲಿ ಸಾಗಿಬಂದದ್ದು ಸಹ ಕಾಣುತ್ತದೆ. ಆಗ ಇದನ್ನು ಬೆಮ್ಮತ್ತನಕಲ್ಲು, ಬೆಮ್ಮತ್ತನ ಕಲ್ಲ ಪಟ್ಟಣ ಎಂದು ಕರೆಯಲಾಗುತ್ತಿತ್ತು. ವಿಜಯನಗರ ಸಾಮ್ರಾಜ್ಯ ಕ್ರಿ.ಶ. ೧೩೩೬ರಲ್ಲಿ ಅಸ್ತಿತ್ವಕ್ಕೆ ಬಂತೆಬುದು ಈಗಾಗಲೇ ಸುವಿದಿತವಷ್ಟೆ. ೧೩೩೮ರಲ್ಲಿ ಇಲ್ಲಿ ಹಿರಿಯ ಬಲ್ಲಪ್ಪ ದಣ್ಣಾಯಕನು ಆಳುತ್ತಿದ್ದುದು ಶಾಸನವೊಂದರಿಂದ ತಿಳಿಯುತ್ತದೆ. ಅದಕ್ಕೆ ಕೆಲವು ವರ್ಷ ಮುಂಚಿನಿಂದಲೂ ಅವನು ಇಲ್ಲಿ ಆಳುತ್ತಿದ್ದಿರಬೇಕು. ೧೩೩೮ರ ಹೊತ್ತಿಗಾಗಲೇ ವಿಜಯನಗರದ ದೊರೆ ೧ನೇ ಹರಿಹರನ ಆಳ್ವಿಕೆ ಪ್ರಾರಂಭವಾಗಿದ್ದರೂ ಹಿರಿಯ ಬಲ್ಲಪ್ಪ

ದಣ್ಣಾಯಕ ಆಗಿನ್ನೂ ೧ನೇ ಹರಿಹರನ ಅಧೀನನಾಗಿದ್ದಂತೆ ಕಂಡುಬರುವುದಿಲ್ಲ. ಅವನು ಹೊಯ್ಸಳ ದೊರೆ ೩ನೇ ಬಲ್ಲಾಳನ (೧೨೯೨-೧೩೪೨) ಕಾಲದಲ್ಲಿ ಚಿತ್ರದುರ್ಗದ ಪ್ರಾಂತಪಾಲಕನಾಗಿ ನೇಮಿಸಲ್ಪಟ್ಟು, ಮುಂದೆ ವಿಜಯನಗರದ ೧ನೇ ಹರಿಹನರ ಕಾಲದಲ್ಲೂ ಹಾಗೆಯೇ ಮುಂದುವರಿದಿರಬೇಕು. ಇವನು ಮೊದಲಿಗೆ ಹೊಸದಾಗಿ ಆರಂಭಗೊಂಡ ವಿಜಯನಗರದ ಅಧೀನನಾಗಿರಲು ಪ್ರಾಯಶಃ ಮನಸ್ಸೊಪ್ಪದೆ ಕೆಲಕಾಲ ತಳ್ಳಿರುವ ಸಾಧ್ಯತೆಯೂ ಇಲ್ಲದಿಲ್ಲ. ೧೩೩೮ರ ತರುವಾಯದಲ್ಲಿ ಇಲ್ಲಿಯ ಪ್ರಾಂತಪಾಲಕರು ಯಾರಾಗಿದ್ದರು ಎಂಬುದನ್ನು ನಿಸ್ಸಂದಿಗ್ಧವಾಗಿ ಹೇಳುವುದು ಕಷ್ಟ.

ಸುಮಾರು ೧೩೪೫ರಿಂದ ಕನಿಷ್ಠ ೧೩೫೭ರವರೆಗೆ ದುರ್ಗದ ಪ್ರಾಂತಪಾಲಕನಾಗಿ ಆಳಿದವನು ಮಲ್ಲಿನಾಥ ಒಡೆಯ. ಇವನು ೧ನೆಯ ಬುಕ್ಕರಾಯನ ಅಧೀನನಾಗಿದ್ದನೆಂದು ಶಾಸನಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಇವನು ಅಳಿಯ ಸಾಯಿನಾಯಕನ ಮಗ. ಸಾಯಿನಾಯಕನು ೧ನೇ ಬುಕ್ಕನ ಅಳಿಯ ಅಥವಾ ಭಾವಮೈದುನ ಇದ್ದಿರಬೇಕು. ಶಾಸನಗಳಲ್ಲಿ ಇವನನ್ನು ಅಳಿಯ ಎಂದು ಸ್ಪಷ್ಟವಾಗಿ ಹೇಳಿದ್ದರೂ ಸಹ ಕೆಲವರು ಅವನು ೧ನೇ ಬುಕ್ಕನ ಮಗ ಎಂದು ಬರೆದಿದ್ದಾರೆ. ಆ ಗ್ರಹಿಕೆ ಅಸಂಗತವೆನಿಸುವುದರಿಂದ ಅದನ್ನು ಕೈಬಿಡಬಹುದಾಗಿದೆ.

ಮಲ್ಲಿನಾಥ ಒಡೆಯನಿಗೆ 'ನಡೆಗೋಂಟೆ ಮಲ್ಲ' ಎಂಬ ಬಿರುದಿದ್ದುದು ತಿಳಿಯುತ್ತದೆ. ಅದು ಅವನ ಶೌರ್ಯಸೂಚಕವಾದ ಬಿರುದು ಎಂಬುದು ಸ್ಪಷ್ಟವಾಗಿದೆ. ಅವನು ಅನೇಕ ಯುದ್ಧಗಳಲ್ಲಿ ಶತ್ರುಗಳು ಕೂಡಾ ಮೆಚ್ಚುವಂತೆ ಶೌರ್ಯ ತೋರಿದ್ದನೆಂದು ತಿಳಿಯುತ್ತದೆ. ಮುಸಲ್ಮಾನರು, ಸೇವುಣರು, ತೆಲುಗರು, ಪಾಂಡ್ಯರು, ಹೊಯ್ಸಳರು ಇವರೆಲ್ಲರ ಸೈನ್ಯಗಳಿಗೆ ಇವನ ಶೌರ್ಯ ತಿಳಿದಿತ್ತಲ್ಲದೆ, ಮುಸಲ್ಮಾನ ದೊರೆಯಾದ ಸುರತಾಳ (ಸುಲತಾನ) ಸಹ ಇವನನ್ನು ಶತ್ರುಪಕ್ಷದ ಧೀರ ಎಂದು ಗೌರವಿಸುತ್ತಿದ್ದ ಎಂದು ಶಾಸನಗಳಲ್ಲಿ ಹೇಳಿದೆ.

ದುರ್ಗದ ಬೆಟ್ಟವ ಮೇಲಿರುವ ಸಿದ್ಧನಾಥ (ಸಂಪಿಗೆ ಸಿದ್ಧೇಶ್ವರ) ದೇವರಿಗೆ ಉಪ್ಪರಿಗೆ (ಗಾಳಿಮಂಟಪ), ಕಲ್ಲಿನವಿಲುಯ್ಯಾಲು (ಉಯ್ಯಾಲೆ ಕಂಬ), ಶಿಖರ ಇವನ್ನಿಲ್ಲಿ ಮಾಡಿಸಿದ್ದಲ್ಲದೆ, ಆ ದೇವರಿಗೆ ಪೂರ್ವದತ್ತಿಯಾಗಿದ್ದ ಚಿಕ್ಕಪುರ ಮತ್ತು ಮುಸುವಡಿಯಪುರ (ಈಗಿನ ಮುಸುಂಡಿಹಾಳು) ಇವುಗಳನ್ನು ಮತ್ತೆ ದೇವರ ಸೇವೆಗೆ ಸಲ್ಲುವಂತೆ ಮಾಡಿದನು. ಇವನು ಎಷ್ಟು ವರ್ಷ ದುರ್ಗವನ್ನು ಆಳಿದ ಮತ್ತು ಇವನ ಕಾಲದ ಇಲ್ಲಿಯ ರಾಜಕೀಯ ಚಟುವಟಿಕೆಗಳೇನು - ಇದಾವುದೂ ತಿಳಿಯದು.

೧೪ನೆಯ ಶತಮಾನದ ಕೊನೆಯ ಭಾಗದಲ್ಲಿ, ಚಿತ್ರದುರ್ಗವನ್ನು ಮಾದರಸ ದಣ್ಣಾಯಕ ಎಂಬುವನು ಪ್ರಾಂತಪಾಲಕನಾಗಿ ಆಳುತ್ತಿದ್ದನೆಂಬ ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತ ಶಾಸನವೊಂದರಿಂದ ತಿಳಿದುಬಂದಿದೆ. ಶಾಸನದಲ್ಲಿ ಕಾಲನಿರ್ದೇಶನವಿಲ್ಲದಿರುವುದರಿಂದ ಅವನು ವಿಜಯನಗರದ ಯಾವ ದೊರೆಯ ಅಧೀನನಾಗಿ ಇಲ್ಲಿ ಆಳುತ್ತಿದ್ದ ಎಂಬುದು ಸ್ಪಷ್ಟವಿಲ್ಲ. ೧ನೆಯ ಬುಕ್ಕರಾಯ (೧೩೫೫-೭೭) ಮತ್ತು ೨ನೆಯ ಹರಿಹರ (೧೩೭೭-೧೪೦೪)

ಇವರ ಕಾಲದಲ್ಲಿ ಮೊದಲಿಗೆ ಮಹಾಪ್ರಧಾನನಾಗಿ, ಆಮೇಲೆ ಬನವಾಸಿಯ ಪ್ರಾಂತಪಾಲಕನಾಗಿ ಮಾಧವಾಮಾತ್ಯ ಮಾದರಸ ಒಡೆಯ ಎಂದು ಮುಂತಾಗಿ ಕರೆಯಲ್ಪಟ್ಟಿರುವವನೇ ಈ ಮಾದರಸ ದಣ್ಣಾಯಕ ಎಂದು ತೋರುತ್ತದೆ. ಇದು ಸರಿಯಾದರೆ, ಇವನು ಆ ಕಾಲದ ತುಂಬ ವರ್ಚಸ್ವಿಯಾದ ರಾಜಕೀಯ ವ್ಯಕ್ತಿ ಎಂದು ಹೇಳಬಹುದು. ಅವನ ಜೀವಿತದ ಕಡೆಯಭಾಗದಲ್ಲಿ ಅವನು ಚಿತ್ರದುರ್ಗದ ಪ್ರಾಂತಪಾಲಕನಾಗಿ ಬಂದಿರಬೇಕು. ಇವನ ಆಳ್ವಿಕೆಯ ಕಾಲಾವಧಿ ಮತ್ತು ಅಂದಿನ ಇಲ್ಲಿಯ ರಾಜಕೀಯ ಘಟನೆಗಳು ಇವುಗಳ ಬಗ್ಗೆ ಏನೂ ತಿಳಿಯದು.

ಸಿದ್ದಾಪುರ ಮತ್ತು ಹಡವನಹಳ್ಳಿ ರಾಜ್ಯಗಳ ಹೆದ್ದಾರಿಯಲ್ಲಿ ಒಂದೆಡೆ ಪರಿಣಾಮಿ ದೇವಯ್ಯ ಎಂಬುವರು ಅರವಟ್ಟಿಗೆಯನ್ನು ನಡೆಸುತ್ತ ಅಲ್ಲಿ ಪ್ರಯಾಣಿಕರಿಗೆ ಅಂಬಲಿಯನ್ನು ಸಿದ್ಧೌಷಧಿಗಳನ್ನೂ ನೀಡುತ್ತಿದ್ದುದನ್ನು ನೋಡಿದ ಮಾದರಸ ದಣ್ಣಾಯಕ ಆ ಧರ್ಮಕಾರ್ಯ ನಿರಂತರವಾಗಿ ನಡೆಯಲಿ ಎಂದು ಆಶಿಸಿ ಒಂದಷ್ಟು ಭೂಮಿಯನ್ನು ನೀಡಿದ ಸಂಗತಿ ಮೇಲೆ ತಿಳಿಸಿದ ಶಾಸನದಲ್ಲಿ ಬರುತ್ತದೆ.

ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತ ಕ್ರಿ.ಶ. ೧೩೯೨ರ ಒಂದು ಶಾಸನದಿಂದ, ಆ ಕಾಲದಲ್ಲಿ ದುರ್ಗದಲ್ಲಿ ಕಂಪಣ್ಣ ಒಡೆಯ ಎಂಬುವನು ಆಳುತ್ತಿದ್ದನೆಂದು ತಿಳಿಯುತ್ತದೆ. ಅವನು ಇಮ್ಮಡಿ ಹರಿಹರರಾಯನ (೧೩೭೭-೧೪೦೪) ಕುಮಾರ ಎಂದು ಶಾಸನದಲ್ಲಿ ಹೇಳಿದೆ. ಇವನು ಯಾವ ವರ್ಷದಿಂದ ಯಾವ ವರ್ಷದ ವರೆಗೆ ದುರ್ಗವನ್ನು ಆಳಿದ ಎಂಬುದಾಗಲಿ, ಅವನ ಕಾಲಾವಧಿಯ ಇಲ್ಲಿಯ ರಾಜಕೀಯ ವಿದ್ಯಮಾನಗಳಾಗಲಿ ತಿಳಿದುಬರುವುದಿಲ್ಲ.

ಕಂಪಣ್ಣ ಒಡೆಯನು ಇಲ್ಲಿ ಆಳುತ್ತಿದ್ದಾಗ ನಡೆದ ಒಂದು ಘಟನೆ ಗಮನ ಸೆಳೆಯುತ್ತದೆ. ಅವನ ಮನೆಯ ಪ್ರಧಾನನಾಗಿದ್ದ ಲಕ್ಷ್ಮೀಧರ ಪಂಡಿತನ ಮಗ ಕಂಪಣ್ಣ ಎಂಬುವನು, ೧೩೯೨ರಲ್ಲಿ, ಕಕ್ಕೆಯ ಹರವಿನ (ಈಗಿನ ಕಕ್ಕೇರು) ಬಳಿ ಜನ್ನಿಗೆಯಹಳ್ಳ ಎಂಬ ಹಳ್ಳವೊಂದನ್ನು ಕಟ್ಟಿ, ಅದರ ದಿಕ್ಕನ್ನು ಒದಲಿಸಿ ಹುಂಕುಂದ (ಈಗಿನ ಭೀಮಸಮುದ್ರ)ದ ಕೆರೆಗೆ ನೀರು ಹರಿದುಬರುವಂತೆ ಮಾಡಿದ ಎಂದು ಮೇಲೆ ತಿಳಿಸಿದ ಶಾಸನದಲ್ಲಿದೆ. ಕೆರೆಯ ಜಲಾಭಾವದ ಸಮಸ್ಯೆಯನ್ನು ನಿವಾರಿಸಲು ದುರ್ಗದ ಅಂದಿನ ಆಡಳಿತಗಾರರು ಎಂಥ ಪರಿಣಾಮಕಾರಿ ಕ್ರಮವನ್ನು ಕೈಕೊಂಡಿದ್ದರೆಂಬುದು ಇಲ್ಲಿ ವ್ಯಕ್ತವಾಗುತ್ತದೆ.

೧೪೧೧ರ ಹೊತ್ತಿಗೆ ದುರ್ಗವನ್ನು ಆಳುತ್ತಿದ್ದವನು ವೀರಮಲ್ಲಣ್ಣ ಒಡೆಯ. ಅವನು ದೊರೆ ೧ನೇ ದೇವರಾಯನ ಮಗ. ಅವನು ೨ನೇ ಬುಕ್ಕರಾಯನ ಮಗ ಎಂದು ಸಂಶೋಧಕರು ಹೇಳಿರುವುದು ಸಮಂಜಸವಲ್ಲ. ಅವನು ತನ್ನ ತಾಯಿ ಮಲ್ಲವ್ವೆಯ ಆತ್ಮಪ್ರೀತ್ಯರ್ಥವಾಗಿ ದುರ್ಗಕ್ಕೆ ಪೂರ್ವದಿಕ್ಕಿನಲ್ಲಿದ್ದ ಕುಂಚಿಗನಹಳ್ಳಿ ಎಂಬ ಗ್ರಾಮವನ್ನು 'ಮಲ್ಲಪುರ' ಎಂದು ಮರುನಾಮಕರಣ ಮಾಡಿ ದುರ್ಗದ ಬೆಟ್ಟದ ಮೇಲಿರುವ ಹಿಡಿಂಬೇಶ್ವರ ದೇವರಿಗೆ ದಾನವಾಗಿ ನೀಡಿದನು; ಇದರ ಜೊತೆಗೆ ದೇವಾಲಯದ ದಕ್ಷಿಣ ದ್ವಾರ ಕಲ್ಲುಗೋಪುರ (ಗಾಳಿಮಂಟಪ)ವನ್ನು ಸಹ ಕಟ್ಟಿಸಿದನು ಎಂದು ಶಾಸನವೊಂದರಿಂದ ತಿಳಿಯುತ್ತದೆ.

ಕುಂಚಿಗನಹಳ್ಳಿಗೆ ಮಲ್ಲಪುರ ಎನ್ನುವ ಹೆಸರುನಿಲ್ಲದೆ ಅದು ಕುಂಚಿಗನಹಾಳು ಆಗಿ ಈಗಲೂ ಇದೆ.

೧ನೇ ದೇವರಾಯನ ಮಕ್ಕಳಲ್ಲಿ ಒಬ್ಬನಾದ ವೀರಮಲ್ಲಣ್ಣ ಇವನು ಕೆಲಕಾಲ ಹೊನ್ನವಾರ (ಹೊನ್ನಾವರ)ದಲ್ಲಿ ಆಳುತ್ತಿದ್ದಂತೆ ತಿಳಿಯುತ್ತದೆ. ಅವನು ಅಲ್ಲಿ ಆಳುತ್ತಿದ್ದುದು ಪ್ರಾಯಶ: ಚಿತ್ರದುರ್ಗಕ್ಕೆ ಬರುವ ಪೂರ್ವದಲ್ಲಿ ಇರಬೇಕು. ೧೪೨೦ರ ಒಂದು ತಾಮ್ರ ಶಾಸನದಲ್ಲಿ ಗುತ್ತಿದುರ್ಗ ಎಂಬುದನ್ನು ಆಳುತ್ತಿದ್ದಂತೆ ಹೇಳಿರುವ ಮಲ್ಲಪ್ಪ ಒಡೆಯರ್ ಇದೇ ವೀರಮಲ್ಲಣ್ಣ ಒಡೆಯನೇ ಇರುವ ಸಾಧ್ಯತೆ ಇದೆ. ಹಾಗಿದ್ದರೆ, ಅವನು ಚಿತ್ರದುರ್ಗದಿಂದ ಗುತ್ತಿದುರ್ಗಕ್ಕೆ ವರ್ಗಾಯಿಸಲ್ಪಟ್ಟಂತೆ ತಿಳಿಯಬೇಕಾಗುತ್ತದೆ. ಇವನು ಎಷ್ಟು ಕಾಲ ದುರ್ಗದಲ್ಲಿದ್ದ ಎನ್ನುವುದೂ ತಿಳಿಯದು. ಆ ಗುತ್ತಿದುರ್ಗ ನಿರ್ದಿಷ್ಟವಾಗಿ ಯಾವುದು ಎಂದು ಇನ್ನೂ ತಿಳಿಯಬೇಕಾಗಿದೆ.

ಮೇಲೆ ಹೇಳಿದ ವೀರಮಲ್ಲಣ್ಣನ ತರುವಾಯ, ಅವನ ಮಗ ಎಂದು ಹೇಳಲಾದ ಗಣಪತಿರಾಯ ದುರ್ಗದಲ್ಲಿ ಹಿಡಿಂಬೇಶ್ವರ ಗುಡಿ ಕಟ್ಟಿಸಿ, ಆ ದೇವರ ಸಲುವಾಗಿ ಮಲ್ಲಾಪುರ ಮತ್ತು ಆಯತೊಳಲು ಎಂಬ ಗ್ರಾಮಗಳನ್ನು ತನ್ನ ತಾಯಿಯ ಹೆಸರಿನಲ್ಲಿ ನೀಡಿದನು ಎಂದು ಬಂದಿರುವ ವಿವರದ, ಅವನು ತಂದೆಯ ಉತ್ತರಾಧಿಕಾರಿಯಾಗಿ ಕೆಲಕಾಲದವರೂ ದುರ್ಗವನ್ನು ಆಳಿದ್ದಿರಬಹುದೆ? ಎಂಬ ಶಂಕೆಯುಂಟಾಗುತ್ತದೆ. ಸೂಕ್ತ ಆಧಾರಗಳು ದೊರೆಯುವವರೆಗೆ ಅವನ ಚಾರಿತ್ರಿಕತೆಯ ಬಗ್ಗೆ ಮತ್ತು ದುರ್ಗದಲ್ಲಿ ಅವನ ಕಾಲಾವಧಿಯ ಘಟನೆಗಳ ಬಗ್ಗೆ ಏನನ್ನೂ ಹೇಳಲಾಗಿರುವಂತಿಲ್ಲ.

ತದನಂತರದಲ್ಲಿ ದುರ್ಗವನ್ನು ಆಳಿದವನು ವಿಜಯರಾಯ. ಇವನು ಕೂಡಾ ದೊರೆ ೧ನೇ ದೇವರಾಯನ ಮಕ್ಕಳಲ್ಲಿ ಒಬ್ಬ. (ಮೇಲೆ ಹೇಳಿದ ವೀರಮಲ್ಲಣ್ಣ ಒಡೆಯ ಮತ್ತು ವಿಜಯರಾಯ ಇವರು ಒಂದೇ ತಾಯಿಯ ಮಕ್ಕಳಲ್ಲ). ಇವನು ತಂದೆಯ ಮರಣಾನಂತರದಲ್ಲಿ, ೧೪೨೨ರಲ್ಲಿ ವಿಜಯನಗರ ಸಾಮ್ರಾಜ್ಯದ ದೊರೆಯಾಗಿ ಕೆಲಕಾಲ ಆಳಿದನೆಂಬುದು ಈಗಾಗಲೇ ತಿಳಿದ ಸಂಗತಿ. ಇವರಿಂದ ಅವನು ೧೪೨೨ರವರೆಗೆ ದುರ್ಗವನ್ನು ಆಳಿದ ಎಂದಾಗುತ್ತದೆ. ಅವನು ದುರ್ಗದಲ್ಲಿ ಆಳ್ವಿಕೆ ನಡೆಸುವ ಮುಂಚೆ ಕೆಲಕಾಲ ಕೋಲಾರ ಜಿಲ್ಲೆಯ ಮುಳುಬಾಗಿಲಿನಲ್ಲಿ ಆಳಿದ್ದಂತೆ ತಿಳಿಯುತ್ತದೆ. ಅವನು ದುರ್ಗದಲ್ಲಿ ಆಳಿದ್ದು ಕೂಡಾ ಅತ್ಯಲ್ಪ ಕಾಲ ಎಂದು ಕಾಣುತ್ತದೆ. ಏಕೆಂದರೆ ೧೪೨೦ರಷ್ಟು ಹೊತ್ತಿಗೆ ವೀರಮಲ್ಲಣ್ಣ ಒಡೆಯನು ಗುತ್ತಿದುರ್ಗಕ್ಕೆ ಪ್ರಾಯಃ ಹೋದಮೇಲೆ ಅವನ ಮಗನೆಂದು ಹೇಳುವ ಗಣಪತಿ ಸ್ವಲ್ಪಕಾಲ ಇಲ್ಲಿಯ ಆಡಳಿತವನ್ನು ನೋಡಿಕೊಂಡಿದ್ದ ಎಂದಾದರೆ, ಆ ತರುವಾಯದಲ್ಲಿ ೧ನೇ ದೇವರಾಯನ ಹಿರಿಯಮಗನೂ, ವೀರಮಲ್ಲಣ್ಣ ಒಡೆಯನಿಗೆ ಅಣ್ಣನೂ ಆದ ವಿಜಯರಾಯ ಮುಳಬಾಗಿಲಿನಿಂದ ದುರ್ಗಕ್ಕೆ ಬಂದು, ೧೪೨೨ರಲ್ಲಿ ಸಾಮ್ರಾಜ್ಯದ ದೊರೆಯಾಗಲು ಇಲ್ಲಿಂದ ವಿಜಯನಗರಕ್ಕೆ ಹೋಗಿದ್ದಿರಬೇಕು ಎಂದು ತರ್ಕಿಸಬೇಕಾಗುತ್ತದೆ. ಅಷ್ಟು ಹೊತ್ತಿಗೆ ಇವನು ಸಾಕಷ್ಟು ಹಿರಿಯ ವಯಸ್ಸಿನವನದ್ದಿರಬೇಕು.

ಇವನ ಶೌರ್ಯ, ದಾನಗುಣ, ರಸಿಕತೆ ಇವನ್ನು ಪ್ರಶಂಸಿಸುವ ಪ್ರಶಸ್ತಿ ಶಾಸನವೊಂದಿದೆ. ಇವನಿಗೆ ಪುಣ್ಯವಾಗಲಿ ಎಂದು ದುರ್ಗದ ಬೆಟ್ಟದ ಮೇಲಿರುವ ಎಕ್ಕನಾಥಿ (ಏಕನಾಥೇಶ್ವರಿ) ದೇವತೆಗೆ, ವಿರುಪಣ್ಣ ಎಂಬುವನು ತೋಟದ ಸ್ಥಳದ ಭೂಮಿಯೊಂದನ್ನು ಕೊಡುಗೆಯಾಗಿ ನೀಡಿದನೆಂದು ಹೇಳುವ ಸುಮಾರು ೧೪೨೭ರ ಶಾಸನವೊಂದು ನನ್ನ ಕಾರ್ಯಕ್ಷೇತ್ರದಲ್ಲಿ ದೊರೆತಿದೆ.

ಈ ವಿಜಯರಾಯ ದುರ್ಗದಲ್ಲಿದ್ದ ಕಾಲದಲ್ಲೆ ಅವನ ತಂದೆಯಾದ ೧ನೇ ದೇವರಾಯ ಕಾರಣಾಂತರದಿಂದ ದುರ್ಗಕ್ಕೆ ಬಂದು, ದುರ್ಗದ ವಾಯವ್ಯಕ್ಕಿರುವ ಚಿಕ್ಕ ಬೆಟ್ಟವೊಂದರಲ್ಲಿ ಬಹುಶ: ಮೃತ್ಯುವಶನಾದಂತೆ, ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತ ಚಿಕ್ಕ ಶಾಸನವೊಂದರಿಂದ ತರ್ಕಿಸಲಾಗಿದೆ. ಅದು ನಿಜವಾದರೆ ಹೊಸದಾಗಿ ದೊರೆತ ಆ ಶಾಸನ ಮತ್ತು ಅದರೊಂದಿಗಿನ ವಾಮನನ್ನು ಹೋಲುವಂತಿರುವ ಪ್ರಾಯ: ೧ನೇ ದೇವರಾಯನದಿರಬಹುದಾದ ಒಂದು ರೇಖಾಚಿತ್ರ ಬಹುಮುಖ್ಯ ಸ್ಮಾರಕವಾಗಿ ಪರಿಗಣಿತವಾಗಬೇಕಾಗುತ್ತದೆ. ದುರ್ದೈವವಶಾತ್ ಆ ಶಾಸನ ಚಿತ್ರ ಇರುವ ಬಂಡೆ ಗ್ರಾನೈಟ್ ಗಣಿಗಾರಿಕೆಯವರಿಂದ ನಾಶವಾಗಿಹೋಗಿದೆ. ವಿಜಯರಾಯನ ಕಾಲದ ಇಲ್ಲಿಯ ರಾಜಕೀಯ ವಿದ್ಯಮಾನಗಳು ತಿಳಿದುಬಂದಿಲ್ಲ.

ವಿಜಯರಾಯನ ತರುವಾಯದಲ್ಲಿ ಈ ಮೇಲೆ ಹೇಳಿದ ವಿರುಪಣ್ಣ ಎಂಬುವನು ದುರ್ಗವನ್ನು ಕೆಲಕಾಲ ಆಳಿರುವಂತೆ ಕಾಣುತ್ತದೆ. ವಿರುಪಣ್ಣ ಎಂಬುದು ವಿರೂಪಾಕ್ಷ ಎಂಬ ಹೆಸರಿನ ಆಡುನುಡಿಯ ರೂಪ. ವಿಜಯನಗರವನ್ನು ಆಳಿದ ದೊರೆಗಳಲ್ಲಿ ವಿರೂಪಾಕ್ಷ ಎಂಬ ಹೆಸರಿನವರು ಇರುವುದರಿಂದ ಇವನು ಕೂಡಾ ರಾಜವಂಶತನಕ್ಕೆ ಸೇರಿದವನೊಬ್ಬನಾಗಿರುವ ಸಾಧ್ಯತೆ ಇದೆ. ಇವನ ಕಾಲಾವಧಿ ಮತ್ತಿತರ ವಿವರಗಳು ತಿಳಿಯವು.

ಆ ತರುವಾಯದಲ್ಲಿ ೧೫೬೫ರವರೆಗೆ ಸುಮಾರು ಒಂದು ಶತಮಾನದಷ್ಟು ಕಾಲ ದುರ್ಗದಲ್ಲಿ ಪ್ರಾಂತಪಾಲಕರಾಗಿ ಯಾರು ಯಾರು ಆಳಿದರು ಎಂಬ ವಿವರವಾವುದೂ ದೊರೆತಿರುವುದಿಲ್ಲ. ಈ ವೇಳೆಗಾಗಲೇ ಚಿತ್ರದುರ್ಗ ಪ್ರಾಂತವನ್ನು 'ರಾಜ್ಯ' ಎಂದು ಕರೆಯುತ್ತಿದ್ದುದರ ಬದಲಿಗೆ, 'ವೇಂಠೆ' ಎಂದು ಕರೆಯುತ್ತಿದ್ದರೆಂದೂ, ಅದರಲ್ಲಿ ನಾಡು 'ಸೀಮೆ' ಎಂಬ ಚಿಕ್ಕ ವಿಭಾಗಗಳನ್ನು ಮಾಡಿಕೊಳ್ಳಲಾಗಿತ್ತೆಂದೂ ತಿಳಿಯುತ್ತದೆ. ಪ್ರಾಂತದ ಮೇಲಿನ ಅಧಿಕಾರವನ್ನು 'ನಾಯಕತನ'. 'ಅಮರನಾಯಕನ' ಎಂದು ಕರೆದು, ಕೆಲವರಿಗೆ ಅವರು ಹೇಗೆ ದೊರೆಗಳಿಗೆ ಅಧೀನರೂ ಸಹಾಯಕರೂ ಆಗಿರಬೇಕೆಂಬ ಬಗ್ಗೆ ಬದ್ಧತೆಯ ನಿಯಮಕ್ಕೆ ಒಳಪಡಿಸಿ, ಅವರ 'ನಾಯಕತನ'ಕ್ಕೆ ಪ್ರಾಂತವನ್ನು ಇನಾಮಾಗಿ ಅಥವಾ 'ಅಮರ ಮಾಗಣಿ(ಗೆ)'ಯಾಗಿ ನೀಡುವ ಪದ್ಧತಿ ಜಾರಿಗೆ ಬಂದುದೂ ಸಹ ತಿಳಿದುಬರುತ್ತದೆ. ಇಂತಹ 'ನಾಯಕ' ಸ್ಥಾನದವರೇ ಮುಂದೆ 'ಪಾಳೆಯಗಾರರು' ಎಂಬ ವಿಶಿಷ್ಟ ಹೆಸರಿನಿಂದ ಚರಿತ್ರಕಾರರಿಂದ ಕರೆಯಲ್ಪಟ್ಟಿದ್ದಾರೆ.

ಸುಮಾರು ೧೫೩೫ ರಿಂದ ೧೫೪೦ರ ಅವಧಿಯಲ್ಲಿ ದೊರೆ ಅಚ್ಯುತರಾಯನಿಂದ ವಿಠಲಪ್ಪನಾಯಕ ಎಂಬುವನು ದುರ್ಗದ ವೇಂಠೆಯನ್ನು ಅಮರಮಾಗಣಿಯಾಗಿ ಅವನ ನಾಯಕತನಕ್ಕೆ ಪಡೆದಿದ್ದನೆಂದು ಕೆಲವು ಶಾಸನಗಳಿಂದ ತಿಳಿಯುತ್ತದೆ. ಅವನು ಹಡಪದ = (ಅಥವಾ ಪಾತಪ್ಪ) ನಾಯಕನ ಮಗ. (ಆ ಹೆಸರು ಪೋತಪ್ಪನಾಯಕ ಎಂದೂ ಇದ್ದಿರಬಹುದು). ೧೫೩೫ರಲ್ಲಿ ವಿಠಲಪ್ಪನಾಯಕನಿಗೆ ಕಾರ್ಯಕರ್ತನಾಗಿದ್ದ ತಿಮ್ಮಪ್ಪನಾಯಕ ಎಂಬುವನು ಚಿತ್ರಹಳ್ಳಿ ನಾಡಿನ ಕುರುಬಗೌಡುಗಳಿಗೆ ವಿಧಿಸಿದ್ದ ಕೆಲವು ತೆರಿಗೆಗಳನ್ನು ರದ್ದುಪಡಿಸಿಕೊಟ್ಟನೆಂದೂ, ೧೫೪೦ರಲ್ಲಿ ಇನ್ನೊಬ್ಬ ಕಾರ್ಯಕರ್ತ (ಮತ್ತು ಅವನ ಮಾವ ಸಹ) ಆಗಿದ್ದ ಕೊಂಡರಾಜಯ್ಯ ಎಂಬುವನು ಗುಂಟನೂರಿನ ನಾಯಿಂದ (ಕ್ಷೌರೀಕ) ಗಂಗೋಜ ಎಂಬುವನಿಗೆ ಸಿದ್ಧಾಯವೆಂಬ ತೆರಿಗೆಯನ್ನು ಬಿಟ್ಟನೆಂದೂ ತಿಳಿಯುತ್ತದೆ. ಈ ನಾಯಕನ ಕಾಲದಲ್ಲಿ ಗುಂಟನೂರಲ್ಲಿ ವಿನಾಯಕ ದೇವರ ಪ್ರತಿಷ್ಠೆಯಾಗಿ ಅದಕ್ಕೆ ಕೆಲವು ದತ್ತಿ ಮಾಡಿದ್ದು ಸಹ ತಿಳಿಯುತ್ತದೆ. ಇವನು ನಿರ್ದಿಷ್ಟವಾಗಿ ಎಲ್ಲಿಂದ ಎಲ್ಲಿಯವರೆಗೆ ಎಷ್ಟು ವರ್ಷ ಆಳಿದ ಎಂಬ ವಿವರ ದೊರೆತಿರುವುದಿಲ್ಲ.

ಇವನ ತರುವಾಯ ನರಸಪ್ಪನಾಯಕ ಎಂಬುವನೂ ಅವನ ತರುವಾಯ ೧೫೪೭ರಲ್ಲಿ ಅವನ ಒಬ್ಬ ಮಗನೂ ಚಿತ್ರದುರ್ಗದ ಆಳ್ವಿಕೆ ನಡೆಸಿದಂತೆ ಕಾಣುತ್ತದೆ. ನರಸಪ್ಪನಾಯಕ ಹೊಳಲಕೆರೆ ಸೀಮೆಗೆ ಸೇರಿದ ನಾಯಿಂದರಿಗೆ ಯಾವುದೋ ತೆರಿಗೆಗಳನ್ನು ಬಿಟ್ಟಂತೆ ಕಾಲ ನಿರ್ದೇಶವಿಲ್ಲದ ಒಂದು ಶಾಸನದಿಂದ ತಿಳಿದರೆ, ನರಸಪ್ಪನಾಯಕನ ಮಗನೊಬ್ಬ (ಶಾಸನದಲ್ಲಿ ಅವನ ಹೆಸರಿನ ಭಾಗ ನಷ್ಟವಾಗಿದೆ) ಆಳ್ವಿಕೆ ನಡೆಸಿದ ಸೂಚನೆ ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತ ಅರ್ಧಭಾಗ ಹಾಳಾಗಿರುವ ಶಾಸನವೊಂದರಿಂದ ವ್ಯಕ್ತವಾಗುತ್ತದೆ. ಇವರ ಕಾಲದ ಹೆಚ್ಚಿನ ಸಂಗತಿಗಳೇನೂ ಲಭ್ಯವಿಲ್ಲ.

ಇವರ ತರುವಾಯದಲ್ಲಿ, ನನ್ನ ಕ್ಷೇತ್ರಕಾರ್ಯದಲ್ಲಿ ದೊರೆತ ಎರಡು ಶಾಸನಗಳ ಪ್ರಕಾರ ೧೫೪೯ರಷ್ಟು ಹೊತ್ತಿಗೆ ಚಿತ್ರದುರ್ಗದ ನಾಯಕತನವನ್ನು ದೊರೆ ಸದಾಶಿವರಾಯನ ಕಾಲದಲ್ಲಿ ಪಡೆದಿದ್ದವನು ಕಾಮಗೇತಿ ವಂಶದ ತಿಮ್ಮಣ್ಣನಾಯಕ. ೧೫೪೯ ರಿಂದ ೧೭೭೯ರವರೆಗೆ ಎರಡು ಶತಮಾನಗಳಿಗೂ ಹೆಚ್ಚುಕಾಲ ಚಿತ್ರದುರ್ಗವನ್ನು ಆಳಿದವರು ಈ ಕಾಮಗೇತಿ ವಂಶದ ನಾಯಕರು. ಈಚಿನ ಕಾಲದ ಚರಿತ್ರ ಬರಹಗಳಲ್ಲಿ ಇವರನ್ನು 'ಚಿತ್ರದುರ್ಗ ಪಾಳೆಯಗಾರರು' ಎಂದೇ ಕರೆಯುತ್ತಬರಲಾಗಿದೆ. ೧೫೪೯ ರಿಂದ ೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯ ಪತನ ಹೊಂದುವ ಅವಧಿಯೊಳಗೆ, ಈ ವಂಶದ ತಿಮ್ಮಣ್ಣನಾಯಕ ಮತ್ತು ಅವನ ಉತ್ತರಾಧಿಕಾರಿಯಾದ ೧ನೇ ಓಬಣ್ಣನಾಯಕ ಅಥವಾ ೧ನೇ ಮದಕೇರಿನಾಯಕ ಇವರು ಬರುತ್ತಾರೆ. ವಿಜಯನಗರ ಸಾಮ್ರಾಜ್ಯದ ಪತನವಾಗುವವರೆಗೆ ಅವರ ಅಧೀನರಾಗಿದ್ದ ಇವರು, ಪತನಾನಂತರ ಸ್ವತಂತ್ರರಾದರು. ಆದರೂ ೧೭ನೆಯ ಶತಮಾನದ ಪೂರ್ವಾರ್ಧದವರೆಗೆ ಈ ವಂಶದವರು ತಮ್ಮನ್ನು ಅಂದಿನ ವಿಜಯನಗರ ಸಾಮ್ರಾಟರೆಂದು ಭಾವಿತವಾದವರ; ಅದರಲ್ಲೂ, ೧ನೆಯ ವೀರವೆಂಕಟಪತಿರಾಯ ಮತ್ತು ೩ನೆಯ

ಶ್ರೀರಂಗರಾಯ ಇವರ ಕಾರ್ಯಕರ್ತರೆಂದು ಶಾಸನಗಳಲ್ಲಿ ವಿಶ್ಲೇಷಿಸಲ್ಪಟ್ಟಿದ್ದಾರೆ. ಅದಕ್ಕೆ ಆಗಿನ ಕಾಲದ ರಾಜಕೀಯ ಪರಿಸ್ಥಿತಿ ಕಾರಣವಿರಬೇಕು.

ತಿಮ್ಮಣ್ಣನಾಯಕ ಹಾಗೂ ೧ನೇ ಮದಕೇರಿ ನಾಯಕನ ಕಾಲದ ರಾಜಕೀಯ ಘಟನೆಗಳ ಬಗ್ಗೆ ಈಗಾಗಲೇ 'ವಿಜಯನಗರ ಅಧ್ಯಯನ ಸಂಪುಟ-೭'ರಲ್ಲಿ ಪ್ರಸ್ತಾಪಿಸಿರುವುದರಿಂದ ಇಲ್ಲಿ ಮತ್ತೆ ಅವನ್ನು ಪುನರಾವರ್ತಿಸುವುದು ಅಗತ್ಯವಿಲ್ಲ ಎನಿಸುತ್ತದೆ. ತಿಮ್ಮಣ್ಣನಾಯಕ ಮತ್ತು ೧ನೇ ಮದಕೇರಿನಾಯಕ ಎಷ್ಟೆಷ್ಟು ಕಾಲ ದುರ್ಗವನ್ನು ಆಳಿದವರು ಎಂಬುದನ್ನು ನಿರ್ದಿಷ್ಟವಾಗಿ ಹೇಳುವುದು ಕಷ್ಟ. ತಿಮ್ಮಣ್ಣನಾಯಕನ ಕಾಲದಲ್ಲಿ ದುರ್ಗದಲ್ಲಿ ಆ ಮೊದಲಿಗೆ ಕಟ್ಟಿದ್ದ ಕೋಟೆಯೊಂದಿಗೆ ಹೊಸದಾದ ಕೋಟೆಯ ಸುತ್ತುಗಳೂ ವಿಸ್ತರಣೆಯೂ ಆದವು. ಮುಂದೆ 'ಏಳುಸುತ್ತಿನ ಕೋಟೆ' ಎಂಬ ಹೆಸರಿಗೆ ಪಾತ್ರವಾಗುವಷ್ಟು ದುರ್ಗ ಬಲಿಷ್ಠವಾಗಲು, ತಿಮ್ಮಣ್ಣನಾಯಕನು ಮಾಡಿಸಿದ ಕೋಟೆಯ ರಚನೆ ಸ್ಫೂರ್ತಿಯುತ ಆರಂಭವನ್ನು ಕಲ್ಪಿಸಿತು.

ಪರಾಮರ್ಶನ ಸಾಮಗ್ರಿ

೧. ಚಂದ್ರವಳ್ಳಿ, (ಸಂ) ಎಂ.ವಿ.ಶ್ರೀನಿವಾಸ್, ಲಕ್ಷ್ಮಣ್ ತೆಲಗಾಗಿ, ಚಿತ್ರದುರ್ಗ, ೧೯೭೬
೨. ಇತಿಹಾಸ ದರ್ಶನ, ಸಂಪುಟ-೧೬, ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು, ೨೦೦೧
೩. ಕರ್ನಾಟಕ ಇತಿಹಾಸ ದರ್ಶನ, (ಸಂ) ಎಂ.ವಿ.ಕೃಷ್ಣರಾವ್, ಎಂ.ಕೇಶವ್ ಭಟ್, ಬೆಂಗಳೂರು
೪. ಎಪಿಗ್ರಾಫಿಯ ಕರ್ನಾಟಕ, ಸಂಪುಟ-೧೧, (ಸಂ) ಬಿ.ಎಲ್.ರೈಸ್, ಬೆಂಗಳೂರು, ೧೯೦೩
೫. ಚಿತ್ರದುರ್ಗದ ಪಾಳೆಯಗಾರರು, ಎಂ.ಎಸ್.ಪುಟ್ಟಣ್ಣ, ಬೆಂಗಳೂರು, ೧೯೨೪
೬. ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, (ಸಂ) ಲಕ್ಷ್ಮಣ್ ತೆಲಗಾವಿ, ಎಂ.ವಿ.ಶ್ರೀನಿವಾಸ, ಚಿತ್ರದುರ್ಗ, ೧೯೭೬
೭. ಸೌತ್ ಇಂಡಿಯನ್ ಇನ್ಸ್ ಕ್ರಿಪ್ಷನ್ಸ್, ಸಂಪುಟ-೯, ಭಾಗ-೧
೮. ಮರೆತು ಹೋಗಿರುವ ಸಾಮ್ರಾಜ್ಯ ವಿಜಯನಗರ, ಮೂಲ: ರಾಬರ್ಟ್ ಸಿವೆಲ್, ಅನು: ಸದಾನಂದ ಕನವಳ್ಳಿ, ಹಂಪಿ
೯. ಮರೆಯಲಾಗದ ಮಹಾ ಸಾಮ್ರಾಜ್ಯ, ಬಿ.ಸೂರ್ಯನಾರಾಯಣರಾವ್, ಹಂಪಿ
೧೦. ದುರ್ಗ ಶೋಧನ, ಬಿ.ರಾಜಶೇಖರಪ್ಪ, ಬೆಂಗಳೂರು, ೨೦೦೧
೧೧. ಇತಿಹಾಸ ಕಥನ, ಬಿ.ರಾಜಶೇಖರಪ್ಪ, ಬೆಂಗಳೂರು, ೨೦೦೧
೧೨. ಕೆರೆ ನೀರಾವರಿ ನಿರ್ವಹಣೆ ಚಾರಿತ್ರಿಕ ಅಧ್ಯಯನ, (ಸಂ) ರಾಜಾರಾಮ ಹೆಗಡೆ

❖ ❖

ಪ್ರಬಂಧ ಮಂಡಿಸಿದವರು

ಡಾ. ದೇವರಕೊಂಡಾರೆಡ್ಡಿ
ಪ್ರವಾಚಕರು, ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಎಫ್.ಟಿ.ಹಳ್ಳಿಕೇರಿ
ಪ್ರವಾಚಕರು, ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಕೆ.ರವೀಂದ್ರನಾಥ
ಹಿರಿಯಶ್ರೇಣಿ ಅಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಜಗದೀಶ
ಸಹಾಯಕ ಕಾರ್ಯಪಾಲಕ ಅಭಿಯಂತರರು
ಕರಾಸಕೈಅನಿನಿ, ಯಾದವಗಿರಿ
ಮೈಸೂರು - ೫೭೦ ೦೨೦

ಜಯದೇವಪ್ಪ ಜೈನ ಕೇರಿ
೮೭ ಶಾಂತಲಾ, ಕುವೆಂಪು ರಸ್ತೆ,
ಶಿವಮೊಗ್ಗ - ೫೭೭ ೨೦೧

ಡಾ. ಸ.ಚಿ.ರಮೇಶ್
ಮುಖ್ಯಸ್ಥರು, ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಟಿ.ಎಂ.ಕೇಶವ
ಸಹಾಯಕ ಸೂಪರಿಂಟೆಂಡಿಂಗ್
ಆರ್ಕಿಯಾಲಜಿಸ್ಟ್, ವಸ್ತುಸಂಗ್ರಹಾಲಯ
ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ
ಕಮಲಾಪುರ

ಡಾ. ಎಸ್.ವೈ.ಸೋಮಶೇಖರ್
ಯೋಜನಾ ಸಹಾಯಕರು
ವಸ್ತುಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಎಂ.ಕೊಟ್ರೇಶ್
ಯೋಜನಾ ಸಹಾಯಕರು
ವಸ್ತುಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ವಿರೂಪಾಕ್ಷಿ ಪೂಜಾರಹಳ್ಳಿ
ಅಧ್ಯಾಪಕರು
ಚರಿತ್ರೆ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಎಂ.ಜಿ.ನಾಗರಾಜ್
'ಅನರ್ಘ್ಯ ಶ್ರೀ ಜಚನಿ ಕೃಪ'
೨೨೧, ೬೮ನೇ ಕ್ರಾಸ್, ೫ನೇ ಬ್ಲಾಕ್
ರಾಜಾಜಿನಗರ,
ಬೆಂಗಳೂರು - ೫೬೦ ೦೧೦

ಡಾ. ಶ್ರೀನಿವಾಸ ಪಾಡಿಗಾರ
ಪ್ರವಾಚಕ ಮತ್ತು ಅಧ್ಯಕ್ಷ
ಪ್ರಾಚೀನ ಭಾರತದ ಇತಿಹಾಸ ಮತ್ತು
ಶಾಸನಶಾಸ್ತ್ರ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ - ೫೮೦ ೦೦೩

ಡಾ. ಹೆಚ್.ಎಂ.ಚಂದ್ರಶೇಖರಶಾಸ್ತ್ರಿ
ಇತಿಹಾಸ ಉಪನ್ಯಾಸಕರು
ವಿಜಯನಗರ ಮಹಾವಿದ್ಯಾಲಯ
ಹೊಸಪೇಟೆ-೫೮೩ ೨೦೧

ಬಾಲಸುಬ್ರಮಣ್ಯ
ಪ್ರವಾಚಕರು, ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಡಿ.ವಿ.ಪರಮಶಿವಮೂರ್ತಿ
ಹಿರಿಯಶ್ರೇಣಿ ಅಧ್ಯಾಪಕರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಎನ್.ಹವಳಯ್ಯ
ಹಿರಿಯ ಅಧ್ಯಾಪಕ
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ವಿಭಾಗ
ಮಾನಸ ಗಂಗೋತ್ರಿ
ಮೈಸೂರು-೬

ಡಾ. ಆರ್.ಗೋಪಾಲ್
ಅಪರ ನಿರ್ದೇಶಕರು
ಪ್ರಾಚ್ಯವಸ್ತು ಮತ್ತು
ಸಂಗ್ರಹಾಯಲಗಳ ನಿರ್ದೇಶನಾಲಯ
ಹೊಸಪೇಟೆ

ರಮೇಶ್ ನಾಯಕ್
ಅಧ್ಯಾಪಕರು, ಪ್ರುಗಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ವಾಸುದೇವ ಬಡಿಗೇರ
ಅಧ್ಯಾಪಕರು, ಪುರಾತತ್ವ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ವಿನೋದ ಪಾಟೀಲ
ಕುಮಾರ ನಗರ, ಅಕ್ಕಿ ಆಲೂರು
ಹಾನಗಲ್ಲು ತಾ, ಹಾವೇರಿ ಜಿಲ್ಲೆ

ಡಾ. ಕೆ.ಎಂ.ಸುರೇಶ್
ನಿರ್ದೇಶಕರು
ವಸ್ತುಸಂಗ್ರಹಾಲಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಡಾ. ಎಚ್.ಆರ್.ರಘುನಾಥ ಭಟ್
ನಿರ್ದೇಶಕರು, ಕನ್ನಡ ಸಂಶೋಧನಾ ಸಂಸ್ಥೆ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ


ಡಾ. ಆರ್.ಎಚ್.ಕುಲಕರ್ಣಿ
ಕಲಾ ಇತಿಹಾಸಕಾರ
೧೦೧೪-೧, ೩ನೇ ಅಡ್ಡರಸ್ತೆ
ಆಶ್ರಮ ರಸ್ತೆ, ಹಿನಕಲ್
ಮೈಸೂರು - ೫೭೦ ೦೧೭

ಡಾ. ರು.ಮ.ಷಡಕ್ಷರಯ್ಯ
ಪ್ರಾಧ್ಯಾಪಕ, ಪ್ರಾಚೀನ ಭಾರತ ಇತಿಹಾಸ
ಮತ್ತು ಶಾಸನ ವಿಜ್ಞಾನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಡಾ. ಕೆ.ಜಿ.ಭಟ್‌ಸೂರಿ
ಮುಖ್ಯಸ್ಥರು
ಶಾಸನಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಟಿ.ಎಂ.ಮಂಜುನಾಥಯ್ಯ
ಪುರಾತತ್ವ ಸಹಾಯಕರು
ಉಪನಿರ್ದೇಶಕರ ಕಛೇರಿ
ಪ್ರಾಚ್ಯವಸ್ತು ಮತ್ತು
ಸಂಗ್ರಹಾಯಲಗಳ ನಿರ್ದೇಶನಾಲಯ
ಕಮಲಾಪುರ

ಪ್ರೊ. ಬಿ.ರಾಜಶೇಖರಪ್ಪ
ಕನ್ನಡ ಪ್ರಾಧ್ಯಾಪಕರು, ಪ್ರಾಂಶುಪಾಲರು
೨ನೇ ಅಡ್ಡರಸ್ತೆ (ಪಶ್ಚಿಮ), ಜೆ.ಸಿ.ಆರ್. ಬಡಾವಣೆ
ಚಿತ್ರದುರ್ಗ



ಐತಿಹಾಸಿಕ ವಿಜಯನಗರ ಸಾಮ್ರಾಜ್ಯದ ಗತ ವೈಭವವನ್ನು ಮರುಕಳಿಸುವಂತೆ ಮಾಡುವ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರವು ಹಂಪಿ ಪುನರುತ್ಥಾನ ಯೋಜನೆಯನ್ನು ಆರಂಭಿಸಿ, ಉತ್ಖನನ, ಸಂರಕ್ಷಣೆ ಮತ್ತು ಸಂಶೋಧನಾತ್ಮಕ ಚಟುವಟಿಕೆಗಳೇ ಮುಂತಾದ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದೆ.

ವಿಜಯನಗರ ಅಧ್ಯಯನ ಸಂಪುಟಗಳು ವಿಜಯನಗರದ ಇತಿಹಾಸ ಮತ್ತು ಸಂಸ್ಕೃತಿಯ ಮೇಲೆ ಹೊಸ ಬೆಳಕನ್ನು ಚೆಲ್ಲುವುದರಲ್ಲಿ ವಿದ್ವಾಂಸರಿಗೆ ಮತ್ತು ಸಾರ್ವಜನಿಕರಿಗೆ ಉತ್ತಮ ಆಕರ ಗ್ರಂಥಗಳಾಗಲಿವೆ.

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ

ಹೊಸಪೇಟೆ